(B)
Accession No. 4807(B)
Date..

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FIFTH DAY

OF THE

FOURTH SESSION

TUESDAY, 3RD MARCH 1964

Vol. IV—No. 5

Karnataka State Archives,
(Departmental Library)
Accession No.......... 4807 (B) 4807 (13)
Date..........

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price: 25 nP

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE SIXTH DAY

OF THE

FOURTH SESSION

WEDNESDAY, 4TH MARCH 1964

Vol. IV—No. 6

BANGALORE :

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price : 25 nP

CONTENTS

	PAGES
Starred Questions and Answers ...	465—481
Questions for answers on the day (but not taken up) ...	482
Motion of Thanks to the Governor for his Address —(Adopted) ...	482—513
Voting of Demands for Grant for Additional and Supplementary Grant for the year 1963-64 (Third Instalment) —(Voted) ...	513—535

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE SEVENTH DAY

OF THE

FOURTH SESSION

THURSDAY, 5TH MARCH 1964

Vol. IV—No. 7

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price: 25 nP

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE EIGHTH DAY

OF THE

FOURTH SESSION

FRIDAY, 6TH MARCH 1964

Vol. IV—No. 8

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS.

1964

Price: 25 nP

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE NINTH DAY

OF THE

FOURTH SESSION

SATURDAY, 7TH MARCH 1964

Vol. IV—No. 9

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price: 25 nP.

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE TENTH DAY

OF THE

FOURTH SESSION

MONDAY, 9TH MARCH 1964

Vol. IV—No. 10

BANGALORE :

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1964

Price: 25 nP.

MYSORE LEGISLATIVE ASSEMBLY

FIFTH DAY.

Tuesday, 3rd March 1964.

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Interest and penal interest charged from the ryots who obtain loans from Government.

*Q.—122. SRI R. N. LAKSHMIPATHI (Gauribidanur).—

Will the Government be pleased to state :—

what is the interest and the penal interest charged from ryots who obtain loans from Government like Takavi, Land Improvements, etc. ?

A.—SRI M. V. KRISHNAPPA (Minister for Revenue).—

Interest is charged at 5 per cent per annum on Takavi and Land Improvement Loans. Penal interest at 9 per cent per annum is levied upon all overdue instalments of interest or principal and interest.

So far as loans for construction of irrigation wells are concerned, the loan is free of interest for the first year from the date of disbursement of the first instalment and carries a concessional rate of interest at 3 per cent from the second year onwards. Penal interest is, however, 9 per cent in respect of overdue instalments of these loans also.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಕಾವಿ ಸಾಲವನ್ನು ಬಹಳ ಮಟ್ಟಿಗೆ ಬಡವರಾಗಿರತಕ್ಕವರೇ ತೆಗೆದುಕೊಳ್ಳುವುದರಿಂದ ಇವರಿಗೆ ಬಡ್ಡಿಯನ್ನು ಶೇಕಡ 5 ರಂತೆ ಹಾಕಿ ಪೀನಲ್ ಬಡ್ಡಿಯನ್ನು ಶೇಕಡ 9 ರಂತೆ ವಿಧಿಸಿರತಕ್ಕದ್ದು ಬಹಳ ಜಾಸ್ತಿಯಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—5 ಪರ್ಸೆಂಟ್ ಬಡ್ಡಿಯೇನೂ ಜಾಸ್ತಿಯಾಗುವುದಿಲ್ಲ. ಕಾಲಕ್ಕೆ ಸರಿಯಾಗಿ ಹಣ ಪಾವತಿ ಮಾಡದೆ ಇರತಕ್ಕವರಿಗೆ 9 ಪರ್ಸೆಂಟ್ ಬಡ್ಡಿ ಹಾಕಲಾಗಿದೆ. ಇಷ್ಟು ಹಾಕಿದ್ದಾಗ್ಯೂ ಈಗ ವಸೂಲಾಗತಕ್ಕ ಬಾಕಿ ಇನ್ನೂ 35 ಕೋಟಿ ನಿಂತಿದೆ. ಆದ್ದರಿಂದ 5 ಪರ್ಸೆಂಟ್ ಬಡ್ಡಿಯೇನೂ ಜಾಸ್ತಿಯಾಗುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಂಥ ಪರ್ಸೆಂಟ್ ಬಡ್ಡಿ ಹಾಕತಕ್ಕ ಸೊಸೈಟಿ ಯಾವುದೂ ಇಲ್ಲ ಎನ್ನುವುದಿರಲಿ, ಮಾರ್ವಾಡಿ ಸಹಿತ ಇಷ್ಟು ಬಡ್ಡಿ ಹಾಕುವುದಿಲ್ಲ ಎಂಬುದು ಗೊತ್ತಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಮಾರ್ವಾಡಿಯ ಹತ್ತಿರ ಸಾಲ ತೆಗೆದುಕೊಂಡ ಹಾಗೆ ಕಾಣುವುದಿಲ್ಲ. ಇಷ್ಟು ಕನ್‌ಸೆಷನ್ ಕೊಟ್ಟಿದ್ದಾಗ್ಯೂ ಸಾಲ ಹಿಂದಿರುಗಿ ಬರುತ್ತಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಬಾವಿ ಪೂರ್ತಿಯಾದ ನಂತರ ಹಣವನ್ನು ವಸೂಲು ಮಾಡುವಂತೆ ಆರ್ಡರ್ ಮಾಡಲು ಸಾಧ್ಯವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಷ್ಟು ಕಡಮೆ ದರದಲ್ಲಿ ಬಹುಶಃ ಇನ್ನಾವ ಸಾಲವನ್ನೂ ಕೊಡುತ್ತಿಲ್ಲವೆಂದು ಕಾಣುತ್ತದೆ. 2500 ರೂಪಾಯಿಗಳನ್ನು ಸಾಲವಾಗಿಯೂ, 500 ರೂಪಾಯಿಗಳನ್ನು ಸಬ್‌ಸಿಡಿಯ ರೂಪದಲ್ಲೂ ಕೊಡಲಾಗುತ್ತಿದೆ. ಇಷ್ಟೇ ಅಲ್ಲದೆ ಮೊದಲನೆಯ ವರ್ಷ ಬಡ್ಡಿ ಇಲ್ಲ. ಇದಕ್ಕಿಂತಲೂ ಇನ್ನೇನು ರಿಯಾಯ್ತಿ ಬೇಕು?

ಶ್ರೀ ಬಿ. ಚನ್ನಬೈರೇಗೌಡ.—ಸರ್ಕಾರದವರು ಕೊಡತಕ್ಕ ಹಣದಲ್ಲಿ ಬಹು ಭಾಗ ನೌಕರರ ಪಾಲಾಗುತ್ತದೆಂಬುದು ಸರ್ಕಾರದವರಿಗೆ ಗೊತ್ತಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೊತ್ತಿಲ್ಲ.

ಶ್ರೀ ಎಸ್. ಎಂ. ಗುರುರೆಡ್ಡಿ.—ನೀರಾವರಿ ಬಾವಿಗಳಿಗೆ ಎರಡನೇ ವರ್ಷದಲ್ಲಿ 3 ಪರ್ಸೆಂಟ್ ಬಡ್ಡಿ ವಿಧಿಸುವಹಾಗೆ ಜಮೀನು ಅಭಿವೃದ್ಧಿ ಸಾಲಕ್ಕೂ 3 ಪರ್ಸೆಂಟ್ ಬಡ್ಡಿ ವಿಧಿಸಲು ಸಾಧ್ಯವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಲ್ಯಾಂಡ್ ರೆವೆನ್ಯೂ ಸಸ್ಪೆಂಡ್ ಮಾಡಿರುವಲ್ಲಿಯೂ ಈ ಪೀನಲ್ ಇಂಟೆರೆಸ್ಟ್ ವಸೂಲ್ಮಾಡುತ್ತಿರುವುದು ಸರಿಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ರೂಲ್ಸ್‌ಗೆ ವಿರೋಧವಾಗಿ ವಸೂಲ್ಮಾಡಿದ್ದರೆ ಅಂಥ ಕೇಸುಗಳಲ್ಲಿ ಕನ್‌ಸೆಷನ್ ಕೊಡಲಾಗುತ್ತದೆ.

Sri GANJI VEERAPPA.—Wherever such scarcity conditions prevail, will Government consider the question of not levying penal interest from such people who are not in a portion to pay even instalments?

ಶ್ರೀ ಎಂ. ವಿ. ಕೃಷ್ಣಪ್ಪ.—ಈ penal interest ಅನ್ನು as a rule ಕೊಡಬೇಕು ಎಂದಿದೆ. But Government has got power to waive penal interest also.

ಶ್ರೀ ಸಿ. ಆರ್. ರಂಗೇಗೌಡ.—ಹಿಂದೆ ಗ್ರೋಮೋರ್ ಫುಡ್ ಲಿಬರಲೈಸ್ಡ್ ಸ್ಕೀಮಿನಲ್ಲಿ 500 ರೂಪಾಯಿಗಳನ್ನು ಬಾವಿಗಳಿಗಾಗಿ ಕೊಟ್ಟಿದ್ದರು. ಆದರೆ ಅಲ್ಲಿ ಬಾವಿ ಆಗದೆ ಅವರು ತೊಂದರೆಯಲ್ಲಿದ್ದರೆ, ಅಂಥ ಸಂದರ್ಭದಲ್ಲಾದರೂ ಕನ್‌ಸೇಷನ್ ಕೊಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಬಾವಿಗಳನ್ನು ತೆಗೆಯಲು 3 ಸಾವಿರ, 2,500 ರೂಪಾಯಿಗಳನ್ನು ಕೊಡಲಾಗುತ್ತಿದೆ. ಆ ಹಿಂದಿನ ತ್ರಿಶಂಕು ಸ್ವರ್ಗದಲ್ಲಿರತಕ್ಕವರಿಗೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮಳೆಯಿಲ್ಲದೆ ಸಾಲ ತೀರಿಸಲು ಸಾಧ್ಯವಾಗದಿದ್ದಾಗ ಪೀನಲ್ ಇಂಟೆರೆಸ್ಟ್ ಬಡ್ಡಿಗಿಂತ ಜಾಸ್ತಿ ಆಗಬಾರದು. ಆದ್ದರಿಂದ ಇದನ್ನು 3 ಪರ್ಸೆಂಟಿಗಿಳಿಸಲು ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥ ಪ್ರಮೇಯ ಕಂಡುಬರುವುದಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಸಾಲ ಕೊಡತಕ್ಕ ಉದ್ದೇಶ ಸಾಧನೆಯಾಗತಕ್ಕ ಕಾಲದಿಂದ ಸಾಲವನ್ನು ವಾಪಸ್ಸು ಪಡೆಯುವಂತೆ ಒಂದು ನಿಬಂಧನೆಯನ್ನು ಮಾಡಲಾಗುತ್ತದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಕೃಷ್ಣ ಶೆಟ್ಟಿ.—ಬಡ್ಡಿ ಕೊಡುವುದಕ್ಕೆ ಕಷ್ಟವಾಗಿರುವಾಗ ಇನ್ನು ಪೀನಲ್ ಇಂಟೆರೆಸ್ಟ್ ಕೊಡಲು ಹೇಗೆ ಸಾಧ್ಯ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿಜ, "ಸಾಲವನ್ನು ಕೊಂಬಾಗ ಹಾಲೋಗರುಂಡಂತೆ—ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ........" ಹಾಗಾಯಿತು.

Number of Deaf and Dumb Girls residing in the Vocational Institute at Mysore.

*Q.—142. Smt. K. S. NAGARATHNAMMA (Gundlupet).—

Will the Government be pleased to state :—

(a) the number of deaf and dumb girls residing in the Vocational Institute, Mysore ;

(b) whether they have made any arrangements to give training in the said Institute to the physically handicapped, so as to enable them to eke out their livelihood ;

(c) whether any other institution has come forward to provide training to the physically handicapped in the State ?

A.—Sri S. R. KANTHI (Minister for Education).—

(a) 19 Deaf girls.

(b) Industrial sections have been opened in the physically handicapped Institutions in order to provide training in crafts.

(c) Three private agencies have come forward to start Institutions for the physically handicapped :—

1 Janapada Seva Trust, Melkote.
2 Mathru Mandali, Temple Road, V. V. Mohalla, Mysore-2.
3 The Academy of General Education, Manipal, South India.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಉತ್ತರದಲ್ಲಿ 19 ಜನ ಮೂಗ ಬಾಲಕಿಯರು ಎಂದು ಹೇಳಿದೆ. ನಾನು ಮೂಗರು ಮತ್ತು ಕಿವುಡರು ಎರಡು ಪಂಗಡದವರ ಬಗ್ಗೆಯೂ ಮಾಹಿತಿಯನ್ನು ಕೇಳಿದ್ದೆನು. ಆದ್ದರಿಂದ ಇಲ್ಲಿ ಕಿವುಡರ ಸಂಖ್ಯೆ ಎಷ್ಟು ?

†ಶ್ರೀ ಎಸ್. ಆರ್. ಕಂಠಿ.—18 ಜನ ಕುರುಡರೂ, 19 ಜನ ಕಿವುಡರೂ ಇದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಪಾಠಶಾಲೆಗೆ ಕೊಡತಕ್ಕ ಸ್ಕಾಲರ್‌ಷಿಪ್‌ಗಳೆಷ್ಟು ?

ಶ್ರೀ ಎಸ್. ಆರ್. ಕಂಠಿ.—ಆ ಮಾಹಿತಿ ಈಗ ನನ್ನಲ್ಲಿಲ್ಲ. ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಪಾಠಶಾಲೆಗೆ ಗ್ರಾಂಟೆಷ್ಟು ಕೊಡಲಾಗಿದೆ ?

ಶ್ರೀ ಎಸ್. ಆರ್. ಕಂಠಿ.—ಆ ಮಾಹಿತಿಕೂಡ ಈಗ ನನ್ನಲ್ಲಿಲ್ಲ.

ಶ್ರೀ ಕೆ. ಎಸ್. ನಾಗರತ್ನಮ್ಮ.—ನಾನು ಮೊನ್ನೆ ಅಲ್ಲಿ ನಡೆದ ಮೀಟಿಂಗಿಗೆ ಹೋಗಿದ್ದೆ. ಅಲ್ಲಿರತಕ್ಕ ಹುಡುಗರೆಲ್ಲಾ ಅನಿಮಲ್ಸ್ ಇದ್ದಹಾಗೆ ಇರುತ್ತಾರೆ. ಅದಕ್ಕೆ ನಾನು ಈ ವಿಚಾರಗಳನ್ನು ಕೇಳಿದೆ. ನನಗೆ ಇನ್‌ಫರ್ಮೇಷನ್ನೇ ಇಲ್ಲದ ಮೇಲೆ ನಾನಿನ್ನು ಪ್ರಶ್ನೆಯೇಕೆ ಕೇಳಬೇಕು ? ಇದನ್ನು ಹೆಲ್ಡ್‌ಓವರ್ ಆದರೂ ಮಾಡಿ.........

ಶ್ರೀ ಎಸ್. ಆರ್. ಕಂಠಿ.—ನೀವು ಬಾಕಿ ಪ್ರಶ್ನೆಗಳನ್ನು ಕೇಳಿ. ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಹೆಲ್ಡೋವರ್ ಮಾಡಿ...........

Mr. SPEAKER.—Are there any other supplementaries ?

Smt. K. S. NAGARATHNAMMA.—There are severals upplementaries.

---

† indicates that the remarks or speeches have not been revised by the members concerned.

Mr. SPEAKER.—Let her kindly put them in writing and pass them on to me by evening today. I will pass them on and have the replies ready. I will hold over the question and I will call it after one week. In one week it must be over and there is no question of extension of time after a week.

Sri S. R. KANTHI.—Yes.

Mr. SPEAKER.—The question is held over.

Gomal Land in Pensamudra Village of Channagiri Taluk.

*Q.—158. Sri T. D. DEVENDRAPPA (Bhadravathi).—

Will the Government be pleased to state :—

(a) the present strength of cattle in Pensamudra Village of Ubrani Hobli, Channagiri Taluk ;

(b) the extent of gomal land retained for grazing of these cattle ;

(c) the extent of gomal land cultivated unauthorisedly in the said village ?

A.—Sri M. V. KRISHNAPPA (Minister for Revenue).—

(a) 377.
(b) 74-27 acres.
(c) 14 acres.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ 377 ರಾಸುಗಳು ಎಂದು ಹೇಳಿದ್ದೀರಿ. 100 ರಾಸುಗಳಿಗೆ 30 ಎಕರೆ ಜಮೀನು ರಿಜರ್ವ್ ಆಗಿರಬೇಕು ಎಂಬುದಾಗಿ ಗೋಮಾಳಕ್ಕೆ ಸಂಬಂಧಪಟ್ಟ ರೂಲ್ಸ್‌ನಲ್ಲಿದೆ. (ಬಿ) ಪ್ರಶ್ನೆಗೆ ಉತ್ತರವಾಗಿ ಕೇವಲ 74 ಎಕರೆ ಚಿಲ್ಲರೆ ಗೋಮಾಳ ಜಮೀನು ಇದೆಯೆಂದು ಹೇಳಿದ್ದೀರಿ. ಇನ್ನು 14 ಎಕರೆಯಷ್ಟು ಎನ್‌ಕ್ರೋಚ್‌ಮೆಂಟ್ ಆಗಿದೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—100 ರಾಸುಗಳಿಗೆ 30 ಎಕರೆ ಜಮೀನು ಇರಬೇಕು ಎಂದು ರೂಲ್ಸ್‌ನಲ್ಲಿದೆ. ಈಗ ರಾಸುಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಆದರೆ ಭೂಮಿಯ ವಿಸ್ತೀರ್ಣವನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ರಾಸುಗಳ ಸಂಖ್ಯೆ ಜಾಸ್ತಿಯಾಗಿ ನಮ್ಮಲ್ಲಿ ಗೋಮಾಳ ಕಡಿಮೆ ಬಿದ್ದಿದೆ. ಆದರೆ ರೈತರಿಂದ ಜಮೀನು ಕಿತ್ತುಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.— (ಸಿ) ಪ್ರಶ್ನೆಗೆ ಉತ್ತರವಾಗಿ 14 ಎಕರೆಗಳು ಎಂದು ಹೇಳಿದ್ದಾರೆ. ಈರೀತಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದರಿಂದ ಅಂತಹವರ ಮೇಲೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಬಿಟ್ಟುಕೊಡಬೇಕೆಂದು ನೋಟೀಸ್ ಕೊಟ್ಟಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—ಎಷ್ಟು ವರ್ಷಗಳಿಂದ ಅಕ್ರಮ ಸಾಗುವಳಿ ಮಾಡುತ್ತಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಂದೆರಡು ವರ್ಷಗಳಿಂದ ಮಾಡುತ್ತಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ದನಗಳಿಗೆ ಬಿಟ್ಟಿರತಕ್ಕ 14 ಎಕರೆ ಗೋಮಾಳ ಭೂಮಿಯನ್ನು ಅನಧಿಕೃತ ಸಾಗುವಳಿ ಮಾಡಿರತಕ್ಕವರಿಗೇನೇ ಬಿಟ್ಟುಕೊಡುವ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೋಮಾಳದ ಜಮೀನು ಬಹಳ ಕಡಿಮೆ ಇದ್ದರೆ ಅದನ್ನು ಬಿಟ್ಟುಕೊಡುವುದಕ್ಕಾಗುವುದಿಲ್ಲ. ಆದ್ದರಿಂದಲೇ ಲ್ಯಾಂಡ್ ರೆವಿನ್ಯೂ ಕೋಡಿನ ಸೆಕ್ಷನ್ 209ರ ಪ್ರಕಾರ ಅವರಿಗೆ ನೋಟೀಸ್ ಕೊಟ್ಟು ಆ ಜಮೀನನ್ನು ಬಿಟ್ಟುಕೊಡಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—74 ಎಕರೆ ಗೋಮಾಳದ ವಿಸ್ತೀರ್ಣದ ಪೈಕಿ 14 ಎಕರೆಗಳನ್ನು ಮಾತ್ರ ಬಡವರು ಕೂಲಿಗಾರರು ಆದರಲ್ಲೂ ನಿಮ್ಮ ಪಂಗಡದವರು ಸಾಗುವಳಿಮಾಡುತ್ತಿದ್ದಾರೆ, ಅದನ್ನು ಅವರಿಗೇ ಬಿಟ್ಟು ಕೊಡುವುದು ಸರಿಯಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—Insufficient holders, landless people ಏನಾದರೂ ಸಾಗುವಳಿ ಮಾಡುತ್ತಿದ್ದರೆ, ಒಂದುವೇಳೆ 6 ವರ್ಷಗಳತನಕ ಅದು ಅವರ ಸ್ವಾಧೀನದಲ್ಲಿಯೇ ಇದ್ದರೆ ಅವರಿಗೇ ಕೊಡಬಹುದು ಎಂಬುದಾಗಿ ಒಂದು ಸರ್ಕ್ಯುಲರ್ ಇದೆ. ಆದರೆ ಅದನ್ನು ಬಡವರು ಮಾಡುತ್ತಾ ಇದ್ದು ಹೆಚ್ಚಿಗೆ ಭೂಮಿ ಇಲ್ಲದಿದ್ದರೆ, ಗೋವಸಾಳ ಕಡಮೆ ಇದ್ದರೂ ಸಾಗುಮಾಡುವುದ ಕ್ಕಾದರೂ ಅದನ್ನು ಬಿಟ್ಟು ಕೊಡಬೇಕಾಗುತ್ತದೆ. ಅದಕ್ಕಾಗಿಯೇ ಅನಧಿಕೃತ ಸಾಗುವಳಿದಾರರಿಗೆ ಜಮೀನು ಬಿಡಬೇಕೆಂದು ನೋಟೀಸ್ ಕೊಟ್ಟಿದೆ.

ಶ್ರೀ ಆರ್. ಎಸ್. ಪಾಟೀಲ್.—ಪ್ರತಿ ಗ್ರಾಮಕ್ಕೂ ಗೋಮಾಳ ಜಮೀನು ಇದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಮಾನ್ಯವಾಗಿ 100 ರಾಸುಗಳಿಗೆ 30 ಎಕರೆ ಗೋಮಾಳ ಇರ ಬೇಕೆಂದು ನಿಯಮ ಇದೆ. ಭೂಮಿಯನ್ನು ಹೊಸದಾಗಿ ಸೃಷ್ಟಿಸುವುದಕ್ಕಾಗುವುದಿಲ್ಲ. ಗೋವುಗಳ ಸಂಖ್ಯೆಯೇನೋ ಏರುತ್ತಾ ಇದೆ. ಆದರಲ್ಲೂ ಈ Cow staughter ಬಂದ್ ಮಾಡಿದ ಮೇಲೆ ಪಶುಗಳ ಸಂಖ್ಯೆ ಯಥೇಚ್ಛವಾಗಿ ಏರುತ್ತಿದೆ ಆದರೆ ಭೂಮಿ ಮಾತ್ರ ಅಷ್ಟೇ ಇರುತ್ತದೆ.

ಶ್ರೀ ಗಾಂಜಿವೀರಪ್ಪ.—ಗೋಮಾಳದ ಜಮೀನನ್ನು ಅನಧಿಕೃತ ಸಾಗುವಳಿದಾರರಿಗೆ ಕೊಡುತ್ತಾ ಹೋದರೆ ಗೋಮಾಳದ ಜಮೀನು ಬಹಳ ಕಡಮೆಯಾಗಿ ಗೋವುಗಳ ರಕ್ಷಣೆಯ ವಿಷಯದಲ್ಲಿ ತೊಂದರೆ ಯಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಒಂದು ಸಮಸ್ಯೆ ಈಗ ದೇಶದ ಮುಂದಿದೆ. ಜನಗಳಿಗೆ ಇಲ್ಲ ದಿದ್ದರೂ ದನಗಳಿಗೆ ಜಮೀನು ಕೊಡಿ ಎಂಬುದಾಗಿ ಕೇಳುತ್ತಾರೆ. ಈಗ ಗೋಮಾಳ ಬಹಳ ಮುಖ್ಯ ವಾದುದು. ಜನಗಳು ಆ ಜಮೀನಿನಲ್ಲಿ ಏನೂ ಬೆಳೆಯುವುದಿಲ್ಲ. ಅನೇಕ ಗ್ರಾಮಗಳಲ್ಲಿ ಅಂತಹ ಜಮೀನು ಸುಮ್ಮನೆ ಬಿದ್ದಿದೆಯೇ ವಿನಾ ಅಲ್ಲಿ ಹುಲ್ಲು ಕೂಡ ಬೆಳೆಯುವುದಿಲ್ಲ. ಅದ್ದರಿಂದ ಅದೇ ಜಮೀನನ್ನು ರೈತರಿಗೆ ಕೊಟ್ಟರೆ ಆದನ್ನು ಉತ್ತು ಐದಾರು ಪಲ್ಲಗಳಷ್ಟು ರಾಗಿ ಬೆಳೆಯುತ್ತಾರೆ. ಆದರ ಜೊತೆಗೆ ಹುಲ್ಲು ಸಹ ಬೆಳೆಸುತ್ತಾರೆ. ಆದರೆ ಗೋಮಾಳವನ್ನು ಹಾಗೆಯೇ ಬಿಟ್ಟರೆ ಏನು ಬೆಳೆಯುವುದಕ್ಕೂ ಆಗುವುದಿಲ್ಲ. ದೇಶದ ಹಿತದೃಷ್ಟಿಯಿಂದ ನೋಡುವುದಾದರೆ ಒಂದುವಿಧದಲ್ಲಿ ಸಾಧ್ಯವಾದಷ್ಟು ಭೂಮಿಯನ್ನು ಕೊಟ್ಟು ರೈತರಿಗೆ ತಂತಮ್ಮ ಹೊಲದಲ್ಲಿ ಮೇವು ಬೆಳೆದುಕೊಳ್ಳಿ ಎಂಬುದಾಗಿ ಪ್ರಚಾರಮಾಡುವುದು ಉತ್ತಮವೆಂದು ನನಗೆ ಕಾಣುತ್ತದೆ.

ಶ್ರೀ ಬಿ. ಚನ್ನಬೈರೇಗೌಡ.—ದನಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಗೋಮಾಳ ಇರ ಬೇಕೇನೋ ಸರಿ ಎಂದು ಒಂದು ಕಡೆ ಹೇಳುತ್ತೀರಿ. ಇನ್ನೊಂದು ಕಡೆ ಗೋಮಾಳದಲ್ಲಿ ಸಾಗು ಮಾಡಕೂಡದು. ಹುಲ್ಲು ಮಾತ್ರ ಬೆಳೆಯಿರಿ ಎಂದು ಹೇಳುತ್ತೀರಿ. ಇದರಲ್ಲಿ ಯಾವುದು ಸರಿ ? ಯಾವುದು ತಪ್ಪು ? ದನಗಳು ಓಡಾಡುವುದಕ್ಕೆ ಸಾಕಷ್ಟು ಜಾಗ ಬೇಡವೇ ? ಗೋ ಸಂಪತ್ತನ್ನು ಹೆಚ್ಚಿಸಿಕೊಳ್ಳು ವುದಕ್ಕೆ ಅವುಗಳ ರಕ್ಷಣೆಗೆ ತಕ್ಕವ್ಯವಸ್ಥೆ ಮಾಡಬೇಡವೇ ? ಅದು ಸರ್ಕಾರದ ನೀತಿಯಲ್ಲವೇ ?

ಶ್ರೀ ಎಂ. ವಿ ಕೃಷ್ಣಪ್ಪ.—ಗೋಸಂಪತ್ತನ್ನು ಹೆಚ್ಚಿಸಬೇಕೆಂಬುದು ಸರ್ಕಾರದ ನೀತಿಯಲ್ಲ ವೆಂದು ನಾನು ಹೇಳಲಿಲ್ಲ. ಗೋಸಂತತಿ ಅಭಿವೃದ್ಧಿ ಪಡಿಸಬೇಕೆಂಬುದೇ ಸರ್ಕಾರದ ನೀತಿಯು ಲ್ಲೊಂದಾಗಿದೆ. ಆದ್ದರಿಂದ ಇರತಕ್ಕ ಗೋವುಗಳಿಗೆ ಹೊಟ್ಟೆತುಂಬ ಮೇವುಹಾಕಿ ಗೋವುಗಳ ಸಂಖ್ಯೆ ಯನ್ನು ಕಡಮೆ ಮಾಡಲು control of breeding ಮಾಡಬೇಕೆಂದೂ ಒಳ್ಳೆಯ ತಳಿ ಅಭಿವೃದ್ಧಿ ಮಾಡಬೇಕೆಂದೂ ಸರ್ಕಾರದ ಉದ್ದೇಶವಾಗಿದೆ. ಯಾವ್ಯಾವ ಗ್ರಾಮಗಳಲ್ಲಿ ಹೆಚ್ಚಿಗೆ ಭೂಮಿ ಇದೆಯೋ ಅಲ್ಲಿ ಮಾತ್ರ ಗೋಮಾಳಕ್ಕೆ ಸ್ವಲ್ಪಮಟ್ಟಿಗೆ ಜಮೀನನ್ನು ಬಿಟ್ಟು ಕೊಡುತ್ತೇವೆ. ಕೆಲವು ಗ್ರಾಮಗಳಲ್ಲಿ ಸಾಕಷ್ಟು ಜಮೀನೇ ಇರುವುದಿಲ್ಲ. ಸಾಮಾನ್ಯವಾಗಿ ದನಗಳು ಇರುವುದು ದೊಡ್ಡ ದೊಡ್ಡ ರೈತರ ಹತ್ತಿರ ಮತ್ತು ಗೌಡರ ಹತ್ತಿರ. ಅವರಿಗೆ ಹೆಚ್ಚು ಜಮೀನು ಇರುತ್ತವೆ. ಅದ್ದ ರಿಂದ ಅಂತಹವರು ಗೋಮಾಳಕ್ಕಾಗಿ ಸ್ವಲ್ಪಮಟ್ಟಿಗೆ ಜಮೀನನ್ನು ಬಿಡಬಹುದು ಸಾಕಷ್ಟುದನಗಳು ಇಲ್ಲದೇ ಇರತಕ್ಕ ಬಡವರಿಗೆ ಅವರಲ್ಲೂ ಜಮೀನು ಸಾಕಷ್ಟು ಇಲ್ಲದಿರತಕ್ಕವರಿಗೆ ಗೋಮಾಳಕ್ಕಾಗಿ ಜಮೀನನ್ನು ಬಿಟ್ಟುಕೊಡುವ ಸಂದರ್ಭದಲ್ಲಿ ಈಗಿರತಕ್ಕ ರೂಲ್ಸನ್ನು relax ಮಾಡಬೇಕು.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಗೋಮಾಳ ಭೂಮಿಯನ್ನು ರೈತರಿಗೆ ಕೊಡುತ್ತೇವೆಂದು ಹೇಳುತ್ತೀರಿ. ಗೋ ಸಂಖ್ಯೆ ಕಡಿಮೆ ಮಾಡಿದರೆ ಹಾಲು ಸಾಕಷ್ಟು ಸಿಕ್ಕುವುದಿಲ್ಲ. ಊರಿನೊಳಗೆ ಗೋಮಾಳ ಜಮೀನು ಇಲ್ಲದಿದ್ದರೆ, ಎಲ್ಲಿ ದನಗಳನ್ನು ಮೇಯಿಸುವುದು ? ಎಲ್ಲಿ ಗೋಮಾಳ ಜಮೀನು ಇಲ್ಲವೋ ಅಲ್ಲಿ ಗೋಮಾಳ ಜಮೀನು ಬೇಡವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರಪಂಚದಲ್ಲಿ ಒಳ್ಳೆ ಹಾಲು ದೊರೆಯುವ ಪ್ರದೇಶಗಳಲ್ಲಿ, to decrease the number of cattle and increase the amount of milk ಎಂದು ತತ್ವವನ್ನನುಸರಿಸುತ್ತಾರೆ. ಅದರಿಂದಾಗಿ ಅವರು ಈ ಕೆಲಸವನ್ನು ಬಹಳ ಯಶಸ್ವಿಯಾಗಿ ಮಾಡುತ್ತಾ ಇದ್ದಾರೆ. ಪಶುಗಳ ಸಂಖ್ಯೆ ಕಡಿಮೆಯಾದಷ್ಟು ಹಾಲು ಉತ್ಪತ್ತಿ ಜಾಸ್ತಿಯಾಗುತ್ತದೆ ಪಶುಗಳ ಹೊಟ್ಟೆಗೆ ತಿಂಡಿಹಾಕದೆ ಅವನ್ನು ಉಪವಾಸವಿಡುವುದಕ್ಕಿಂತ ಇರತಕ್ಕ ಪಶುಗಳಿಂದ ಒಳ್ಳೆ ತಳಿ ಮಾಡಿಕೊಂಡು ಅವಕ್ಕೆ ನೀರು ಹುಲ್ಲು ಜಾಸ್ತಿ ಹಾಕಿದರೆ ದಿವಸಕ್ಕೆ 15 ಸೇರು ಹಾಲನ್ನು ಕೊಡುತ್ತವೆ. ಆದರೆ ಮೇವು, ನೀರು ಕೊಡದೆಯೇ ಬಕೆಟ್ ತುಂಬ ಹಾಲು ಕೊಡಬೇಕೆಂದರೆ ಅವು ಕೊಡುವುದಿಲ್ಲ. ಯಾವ ದೇಶದಲ್ಲಿ ರೂಲ್ಸ್ಅನ್ನು ಅನುಸರಿಸುವುದಿಲ್ಲವೋ ಆ ದೇಶವೇ ಹಾಳಾಗಿ ಹೋಗುತ್ತದೆ.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಕೆಲವು ಗ್ರಾಮಗಳಲ್ಲಿ ಭೂಮಿ ಇಲ್ಲದೇ ಇದ್ದರೂ ಪಶುಪಾಲನೆ ಮಾಡಿಕೊಂಡು ಹಾಲಿನ ಒಂದು ಆದಾಯದ ಮೇಲೆ ಜೀವನ ನಡೆಸುತ್ತಿರುವವರಿಗೆ ಈ ಒಂದು ತತ್ವದಿಂದ ತೊಂದರೆಯಾಗುವುದಿಲ್ಲವೇ? ಅಲ್ಲದೆ ಇತರ ಸಾಕುಪ್ರಾಣಿಗಳು ಎಂದರೆ ಕುರಿ, ಕತ್ತೆ—ಇವುಗಳ ಗೊಬ್ಬರ ಕಡಮೆಯಾಗುತ್ತದೆ ಅಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ಜಾಸ್ತಿ ಜಮೀನು ಇದೆಯೋ ಅಲ್ಲೆಲ್ಲಾ ಗೋಮಾಳಕ್ಕೆ ಬಿಡುತ್ತೇವೆ. ಕೆಲವು ಗ್ರಾಮಗಳಲ್ಲಿ ಜನಗಳಿಗೆ ಜಮೀನು ಇಲ್ಲದಂತಾದಾಗ ಅವರು ಎಲ್ಲಿ ಜಮೀನು ಕೊಡಿ ಎಂದು ಕೇಳುತ್ತಾರೋ ಅಂತಹ ಸ್ಥಳಗಳಲ್ಲಿ ಉದಾರವಾಗಿ ಜಮೀನುಗಳನ್ನು ಕೊಡಬೇಕಾಗುತ್ತದೆ. ಈಗ ಅದೇ ಪರಿಸ್ಥಿತಿ ಇರುವುದು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಉಳುವುದಕ್ಕೆ ಜಮೀನು ಇಲ್ಲದ ರೈತರಿಗೆ ಗೋಮಾಳವಿರಬೇಕೆಂದು ಹೇಳಿದಿರಿ. ಕೆಲವರು ವ್ಯವಸಾಯಕ್ಕೆಂದು ಜಮೀನು ತೆಗೆದುಕೊಂಡು ಬೇರೆಯವರಿಗೆ ಮಾರಿ ದನಗಳಿಗೆ ಮೇಯುವುದಕ್ಕೆ ಗೋಮಾಳವಿಲ್ಲದೆ, ವ್ಯವಸಾಯ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವರು ತಾವು ಬಡವರು ಎಂದು ರಿಯಾಯಿತಿ ದರದಲ್ಲಿ ಜಮೀನುಗಳನ್ನು ತೆಗೆದುಕೊಳ್ಳುತ್ತಾರೆ ಕೆಲವರು ಆ ರೀತಿ ಮಾರಿಕೊಳ್ಳುವುದೂ ಉಂಟು. ಅಂತಹ ಸಂದರ್ಭಗಳು ಸರ್ಕಾರದ ಗಮನಕ್ಕೆ ಬಂದರೆ, ಅವನ್ನು ವಜಾ ಮಾಡಿಸುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಸುಗಳಿಗೆ ಹೊಟ್ಟೆತುಂಬಾ ಮೇವು ಹಾಕಿ ನೀರುಕುಡಿಸದೆ ಅವು ಎಲ್ಲೋ ಹೊರಗಡೆ ಹೋಗಿ ಅಡ್ಡಾಡಿಕೊಂಡು ಮೇವು ತಿಂದು ಬಂದು ಒಂದು ಬಕೆಟ್ ಹಾಲು ಕರೆ ಎಂದು ಹೇಳಿದರೆ ಅವು ಹೇಗೆ ಕರೆಯುತ್ತವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದು ಪೇಟೆಯಲ್ಲಿ ಎಲ್ಲೋ ಎರಡು ಹಸುಗಳನ್ನು ಇಟ್ಟುಕೊಂಡಿರುವವರಿಗೆ ಮಾತ್ರ ಅನ್ವಯವಾಗುತ್ತದೆಯೋ ಅಥವಾ ಹಳ್ಳಿಯಲ್ಲಿ 8-10ಜೊತೆ ಹಸುಗಳನ್ನು ಇಟ್ಟುಕೊಂಡಿರುವವರಿಗೂ ಅನ್ವಯವಾಗುತ್ತದೆಯೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಬ್ಬರಿಗೂ ಅನ್ವಯವಾಗುತ್ತದೆ.

Sri D. PARAMESWARAPPA.—Gomal land that comes under achkat channel area, is being disposed of now. Would you take any measures to reserve them in the interests of the cattle?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ. ಅದು ಚಾನಲ್ ಏರಿಯಾ ಬಂದು ಇರಗೆಬಲ್ ಏರಿಯಾ ಬಂದರೆ It is not possible to reserve any gomal. ಅಲ್ಲಿ ಚಾನಲ್ ತರುವುದಕ್ಕೋಸ್ಕರ ಕೋಟ್ಯಾಂತರ ರೂಪಾಯಿ ಖರ್ಚಾಗಿರುತ್ತದೆ. ಯಾರಾದರೂ ಏನಾದರೂ ಮಾಡಿ ಆ ಜಮೀನನ್ನ ಪಡೆದುಕೊಂಡು ಗದ್ದೆ ಮಾಡುತ್ತಾರೆ. Temptation will be so much that it is imposible to keep it for gomal.

Sri J. P. SARWESH.—Is there any difference in the reservation of gomal lands in wet and dry areas? Is not the same principle of 30 acres per 100 cattle followed?

Sri M. V. KRISHNAPPA.—In the old Mysore parts that is the rule, thirty acres for every 100 cattle. But it does not apply to the Bombay Karnatak area and Hyderabad Karnatak area, because there is very little gomal there. In the Hyderabad area, it is called Gairan land. But I have not come across even 100 cases of such land. The little that was available has been disposed of.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಪೇಟೆಯಲ್ಲಿರತಕ್ಕ ಹಸುಗಳು ಬಹಳ ತುಂಬಾ ಹಾಲುಕೊಡುತ್ತವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆ ಹಸುಗಳ ಹೊಟ್ಟೆಯಲ್ಲಿ ಹುಟ್ಟಿದ ಹೋರಿಗಳು ಒಕ್ಕಲುತನದ ಕೆಲಸಕ್ಕೆ ಬರುವುದಿಲ್ಲ. ಆದರೆ ಹಳ್ಳಿಯಲ್ಲಿರತಕ್ಕ ಹಸುಗಳ ಹೊಟ್ಟೆಯಲ್ಲಿ ಹುಟ್ಟಿದ ಹೋರಿಗಳು ಒಕ್ಕಲುತನದ ಕೆಲಸಕ್ಕೆ ಬರುತ್ತವೆ. ಈ ದೃಷ್ಟಿಯಿಂದ ಹಳ್ಳಿಗಾಡಿನ ಪ್ರದೇಶದಲ್ಲಿ ಗೋಮಾಳವನ್ನು ಇಟ್ಟಿದ್ದರೆ ಆ ಹಸುಗಳನ್ನು ಮೇಯಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಹಳ್ಳಿಗಾಡಿನ ಪ್ರದೇಶದಲ್ಲಿರತಕ್ಕ ಗೋಮಾಳಗಳನ್ನು ಜೋಪಾನಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರು ಹತ್ತಿರದಲ್ಲಿ ಇವೆ. ಬನ್ನಿ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಕ್ರಾಸ್‌ಬ್ರೀಡ್ ಹಸುಗಳಲ್ಲಿ ಹುಟ್ಟಿದ ಹೋರಿಗಳು ಬಹಳ ಹೆವಿಲೋಡನ್ನು ಎಳೆಯುತ್ತವೆ ಮತ್ತು ಬಹಳ ಚೆನ್ನಾಗಿಯೂ ಕೆಲಸ ಮಾಡುತ್ತವೆ. ಮಾನ್ಯ ಸದಸ್ಯರು ತಪ್ಪುಭಾವನೆಯನ್ನು ಕಲ್ಪನೆ ಮಾಡಬಾರದು. ಮಾನ್ಯ ಸದಸ್ಯರು ನನ್ನ ಜೊತೆಯಲ್ಲಿ ಬಂದರೆ ಕ್ರಾಸ್‌ಬ್ರೀಡ್ ಹಸುಗಳಲ್ಲಿ ಹುಟ್ಟಿದ ಹೋರಿಗಳು ಕೆಲಸಮಾಡುವುದನ್ನು ತೋರಿಸುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೆಲವು ಕಡೆ ಗೋಮಾಳವನ್ನು ಸಾಗುವಳಿಗೆ ಕೊಟ್ಟಿದ್ದಾರೆ. ಇದರಿಂದ ದನಕರುಗಳನ್ನು ಮೇಯಿಸುವುದಕ್ಕೆ ತೊಂದರೆಯಾಗಿದೆ. ಗೋಮಾಳದ ಜಮೀನಿನ ವಿಷಯದಲ್ಲಿ ಸರ್ಕಾರದ ಖಚಿತವಾದ ಒಂದು ನೀತಿಯೇನು ? ಅದನ್ನು ಕಾರ್ಯರೂಪಕ್ಕೆ ತರಲು ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿಷಯದಲ್ಲಿ ಸರ್ಕಾರದ ನೀತಿಯೇನೆಂದರೆ ಎಲ್ಲೆಲ್ಲಿ ಬೇಕಾದಷ್ಟು ಸರ್‌ಪ್ಲಸ್‌ಲ್ಯಾಂಡ್ ಇದ್ದರೆ, Gomal is there because, there is enough of land. There are other villages where the number of people has increased and has been increasing, and there is very little land. There, there is so much of pressure for land for cultivation. In such cases, we have to relax the rules and give enough land to people. That is the policy of the Government.

Grant of Land for Cashew Cultivation in Bhadravathi Taluk.

*Q.—159 Sri T. D. DEVENDRAPPA (Bhadravathi).—

Will the Government be pleased to state :—

(a) the number of applications received from Bhadravathi Taluk for grant of lands for cashew cultivation ;

(b) the extent of land given to each one of those applicants ?

A.— Sri M. V. KRISHNAPPA (Minister for Revenue).—

(a) Ten.

(b) Out of ten applicants three applicants have been granted lands as follows :—

(1) 17 acres 38 guntas.
(2) 15 acres 28 guntas.
(3) 25 acres.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾವತಿ ತಾಲ್ಲೂಕಿನಲ್ಲಿ ಗೇರುಬೀಜದ ಸಾಗುವಳಿಗೋಸ್ಕರ ಜನಗಳಿಂದ 10 ಅರ್ಜಿಗಳು ಬಂದಿದ್ದವು, ಅವುಗಳ ಪೈಕಿ 3 ಜನಗಳಿಗೆ ಮಾತ್ರ ಜಮೀನನ್ನು ಕೊಟ್ಟಿದ್ದೇವೆ ಎಂದು ತಿಳಿಸಿದ್ದೀರಿ, ಯಾರು ಯಾರಿಗೆ ಕೊಟ್ಟಿದ್ದೀರಿ ಅವರ ಹೆಸರುಗಳೇನು ?

Mr. SPEAKER.—Let the Minister not disclose the names. Why does the Hon'ble Member want the names and what is the purpose in asking the names ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಆ ಜಮೀನನ್ನು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನಗಳಿಗೆ ಗೇರುಬೀಜದ ವ್ಯವಸಾಯಕ್ಕೆ ಕೊಡಬೇಕೆಂದು ಇದೆ. ಆದರೆ ಟೌನಿನಲ್ಲಿರತಕ್ಕ ವ್ಯಾಪಾರವಾಡತಕ್ಕವರಿಗೆ ಆ ಜಮೀನನ್ನು ಕೊಟ್ಟಿದ್ದಾರೆಂದು ಗೊತ್ತಾಗಿದೆ. ಈ ವಿಷಯದಲ್ಲಿ ನನಗೆ ಸ್ವಲ್ಪ ಅನುಮಾನವಾಗಿದೆ. ಆದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಆ ಬಗ್ಗೆ ಇನ್‌ಫರ್‌ಮೇಷನ್ ಬೇಕಾದರೆ ಕೇಳಬಹುದು, ಆದರೆ ಹೆಸರುಗಳನ್ನು ಕೇಳಕೂಡದು.

ಶ್ರೀ ಎಂ. ವಿ. ಕೃಷ್ಣಪ್ಪ.—ಗೇರುಬೀಜದ ಸಾಗುವಳಿಗೋಸ್ಕರ ಜಮೀನನ್ನು ಆ ಗ್ರಾಮದ ರೈತರಿಗೇ ಕೊಡಬೇಕೆಂದೇನೂ ಇಲ್ಲ. ಕ್ಯಾಷೂನಟ್ಸ್ ಕಲ್ಟಿವೇಷನ್ ರೂಲ್ಸ್ ಪ್ರಕಾರ ಯಾರಿಗೆ ಕ್ಯಾಷೂನಟ್ಸ್ ತೋಟವನ್ನು ಮಾಡುವುದಕ್ಕೆ ಶಕ್ತಿ ಇದೆಯೋ ಅವರಿಗೆ ಕೊಡಬಹುದು ಎಂದು ಅದರಲ್ಲಿ ಅಡಕವಾಗಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಆ ಬಗ್ಗೆ 10 ಅರ್ಜಿಗಳು ಬಂದಿದ್ದರೂ ಕೂಡ 3 ಜನಗಳಿಗೆ ಮಾತ್ರ ಜಮೀನು ಕೊಟ್ಟು ಬಾಕಿಯವರಿಗೆ ಏತಕ್ಕೆ ಕೊಡಲಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಜಮೀನು ಹೆಚ್ಚಿಗೆ ಇಲ್ಲದೆ ಇದ್ದುದರಿಂದ 3 ಜನಗಳಿಗೆ ಮಾತ್ರ ಕೊಟ್ಟಿದೆ. ಮಿಕ್ಕವರಿಗೆ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಗೇರು ಬೀಜವನ್ನು ಬೆಳೆಯುವುದಕ್ಕೆ ಒಬ್ಬರಿಗೆ ಮಿನಿಮಮ್ 25 ಎಕರೆ ಕೊಡಬಹುದು. ಮ್ಯಾಗ್ಸಿಮಮ್ 100 ಎಕರೆ ಜಮೀನನ್ನು ಕೊಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಕ್ಯಾಷ್ಯೂನಟ್ಸ್ ಬೆಳೆಯುವುದಕ್ಕೆ ಕೊಟ್ಟಿರತಕ್ಕ ಜಮೀನಿನಲ್ಲಿ ಬೇರೆ ಬೆಳೆಯನ್ನು ಯಾರಾದರೂ ಬೆಳೆದಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೇರುಬೀಜವನ್ನು ಬೆಳೆಯುವುದಕ್ಕೆ ಕೊಟ್ಟಿರತಕ್ಕ ಜಮೀನಿನಲ್ಲಿ 5 ವರ್ಷಗಳೊಳಗಾಗಿ ಆ ಬೆಳೆಯನ್ನು ಬೆಳೆಯದೇ ಇದ್ದರೆ ಆ ಜಮೀನನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಗೇರುಬೀಜದ ಗಿಡವನ್ನು ಬೆಳಸಬೇಕಾದರೆ 5 ವರ್ಷ ಬೇಕಾಗುತ್ತದೆ ಈ ಮಧ್ಯೆ ಅವರು ಆ ಜಮೀನಿನಲ್ಲಿ ಬೇರೆ ಬೆಳೆಯನ್ನೇನಾದರೂ ಬೆಳೆದುಕೊಂಡರೆ ಅದು ತಪ್ಪಾಗುವುದಿಲ್ಲ. ಆಹಾರದ ಹಿತದೃಷ್ಟಿಯಿಂದ ಅವರು ಹೆಚ್ಚಿಗೆ ಆಹಾರವನ್ನು ಬೆಳೆದಂತಾಗುತ್ತದೆ.

SRI S. RAJGOPAL.—Out of ten applicants, the Government have given lands to three applicants. On what consideration or on what basis they have granted lands to three people ?

SRI M. V. KRISHNAPPA.—In the survey number for which these particular applicants have applied there was not enough of land. In the other cases, there was not enough of land perhaps.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಗೇರುಬೀಜವನ್ನ ಬೆಳೆಯುವುದಕ್ಕೆ ರೈತರಿಗಲ್ಲದೆ ಇತರರಿಗೂ ಜಮೀನನ್ನು ಕೊಡಬಹುದು ಎಂದು ಹೇಳಿದಿರಿ, ಅದನ್ನು ಗೇಣಿಲೀಜಿಗೆ ಕೊಡುವುದಲ್ಲದೆ ದರಕಾಸ್ತು ಮೂಲಕವೂ ಕೊಡುವ ಯೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲು ಲೀಜಿಗೆ ಕೊಡುತ್ತೇವೆ. ಆ ಮೇಲೆ Government have power to confirm the land in the name of the owner if they are satisfied that he has raised a good crop of cashewnut.

ಶ್ರೀ ಎಚ್. ಆರ್. ಕೇಶವಮೂರ್ತಿ.—ಗೇರುಬೀಜದ ಸಾಗುವಳಿ ಮಾಡುವುದಕ್ಕೆ ಒಬ್ಬರಿಗೆ 25 ಎಕರೆ ಜಮೀನನ್ನು ಕೊಡುವುದಕ್ಕೆ ಡೆಪ್ಯುಟಿ ಕಮೀಷನರಿಗೆ ಅಧಿಕಾರ ಇದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಗೇರುಬೀಜದ ಸಾಗುವಳಿಮಾಡುವುದಕ್ಕೆ ಒಬ್ಬರಿಗೆ 25 ಎಕರೆ ಜಮೀನನ್ನು ಜಿಲ್ಲಾಧಿಕಾರಿಗಳು ಕೊಡಬಹುದು ಎಂದು ಹೇಳಿದಿರಿ, ಒಬ್ಬರು ಜಿಲ್ಲಾಧಿಕಾರಿಗಳು ಯಾರೋ ಒಬ್ಬರಿಗೆ ಗೇರುಬೀಜವನ್ನು ಬೆಳೆಯುವುದಕ್ಕೆ 25 ಎಕರೆ ಜಮೀನನ್ನು ಕೊಟ್ಟು ಅದರ ಜೊತೆಗೆ ವ್ಯವಸಾಯಕ್ಕೋಸ್ಕರ 10 ಎಕರೆ ಜಮೀನನ್ನು ಕೊಟ್ಟು he may raise other crops ಎಂದು ಸರ್ಕಾರದ ಒಂದು ಆದೇಶವನ್ನು ಕೊಟ್ಟಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಅವರು ರೂಲ್ಸಿಗೆ ವಿರುದ್ಧವಾಗಿ ಮಾಡಿದ್ದರೆ ಅಂಥವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆ.

1-00 P.M.

ಶ್ರೀ ಬಿ. ಚನ್ನಬೈರೇಗೌಡ.—ಗೇರುಬೀಜದ ವ್ಯವಸಾಯಕ್ಕೆ ಭೂಮಿ ಹೆಚ್ಚಾಗಿದ್ದರೆ ಮಾತ್ರ ಕೊಡತಕ್ಕದ್ದು ಎಂದು ಸರ್ಕ್ಯುಲರ್ ಇದೆ. ಗೋಮಾಳಕ್ಕೆ ಎಷ್ಟು ಬೇಕೋ ಅಷ್ಟನ್ನು ಉಳಿಸಿಕೊಂಡು, ಅದಕ್ಕೆ ತೊಂದರೆಬಾರದ ಹಾಗೆ ನೋಡಿಕೊಂಡು ಹೆಚ್ಚುವರಿ ಜಮೀನಿದ್ದರೆ ಮಾತ್ರ ಗೇರುಬೀಜದ ಬೆಳೆಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯಲ್ಲದೇ ?

ಶ್ರೀ ಎಂ. ವಿ. ಕೃಷ್ಣಪ್ಪ.—Cashewnut ಬೆಳೆಯುವ ಪ್ರದೇಶವಾಗಿದ್ದು, ಅದಕ್ಕೆ ಬೇಕಾದ ಅನುಕೂಲತೆಗಳಿದ್ದು, ಗೋಮಾಳಕ್ಕೆ ಸಾಕಷ್ಟು ಜಮೀನಿದ್ದರೆ, ಆಗ ಮಾತ್ರ ಕೊಡುವುದಕ್ಕೆ ಯೋಚನೆ ಮಾಡಬಹುದು.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಒಂದು ಎಕರೆಗೆ 150 ರೂಪಾಯಿ ಪ್ರಕಾರ ಸಾಲ ಕೊಡುತ್ತೀರಿ. ಇದಕ್ಕೆ ಇತರೆ ಭೂಮಿಯನ್ನೂ ಜಾಮೀನು ಕೊಡಬೇಕಾಗುತ್ತದೆ. ಆದ್ದರಿಂದ ಅವರಿಗೆ ಷುರುವಿನಿಂದಲೇ ಖಾಯಂ ದರಖಾಸ್ತು ಆಗಿ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿಚಾರವನ್ನು ಯೋಚನೆ ಮಾಡಬೇಕು.

Sri D. PARAMESWARAPPA.—If for the same survey number both the landless people and cashewnut planters apply, who will be given priority in the allotment of land ?

Sri M. V KRISHNAPPA.—The landless people will have the priority under the Land Grant Rules.

ಶ್ರೀ ಎಸ್. ಗೋಪಾಲ ಸಾರೆನ್ನ.—ಗೇರುಬೀಜದ ವ್ಯವಸಾಯಕ್ಕೆ ಭೂಮಿ ವಗೈರೆ ಪಡೆದು ಹಾಗೆಯೇ ಇಟ್ಟುಕೊಂಡಿದ್ದಾರೆ. ಅವರು ಏನು ಕೆಲಸಮಾಡಿಲ್ಲ, condition fulfil ಮಾಡಿಲ್ಲ. ಅಂಥವರ ಮೇಲೆ ಏನು ಕ್ರಮತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಕೇಳುತ್ತಿರುವುದು ಯಾವ ತಾಲ್ಲೂಕಿನ ವಿಚಾರ ? ಎಲ್ಲಿ ಆ ರೀತಿ ಆಗಿದೆ. ಇಲ್ಲಿರುವ ಪ್ರಶ್ನೆ ಭದ್ರಾವತಿ ತಾಲ್ಲೂಕಿಗೆ ಸಂಬಂಧಪಟ್ಟಿದೆ.

ಶ್ರೀ ಎಸ್. ಗೋಪಾಲ ಸಾರೆನ್ನ.—ಎಲ್ಲ ಕಡೆಯೂ ಆಗುತ್ತಿದೆ, ಸ್ವಾಮಿ. ಭದ್ರಾವತಿ ತಾಲ್ಲೂಕಿನಲ್ಲಿ ಎಷ್ಟು ಜನರು ಕೃಷಿ ಮಾಡದೆ ಬಂಜರು ಇಟ್ಟುಕೊಂಡಿದ್ದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

Sri M. V. KRISHNAPPA.—In this case there were only 10 applicants for the entire taluk. Out of them three have been granted land recently. We have to give them five years time within which they must raise cashewnut crops. If within these five years they do not raise this crop, then we can take action.

ಶ್ರೀ ಅಂದಾನಯ್ಯ.—ಗೇರುಬೀಜ ಬೆಳೆಯುವುದಕ್ಕೆ ಕೊಟ್ಟ ಜಮೀನಿನಲ್ಲಿ ಗೇರುಬೀಜ ಬೆಳೆಯುವುದಕ್ಕೆ ಲಾಯಖ್ ಇಲ್ಲ ಎಂದು ಬೇರೆ ಫಸಲು ಇಡಲು ಒಬ್ಬ ವ್ಯಕ್ತಿಗೆ ಅವಕಾಶ ಕೊಟ್ಟಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೂಲ್ಸ್‌ನಲ್ಲಿ ಹೇಗಿದೆ, ಆ ಭೂಮಿಯನ್ನು resume ಮಾಡಿಕೊಂಡು ಪುನಃ ದರಖಾಸ್ತು ಮೇರೆ ಕೊಡಬೇಕೇ ಹಾಗೆಯೇ ಬೇರೆ ಫಸಲನ್ನು ಇಡುವುದಕ್ಕೆ ಪರ್ಮಿಷನ್ ಕೊಡಬಹುದೇ ಎಂಬುದನ್ನು ನೋಡಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇಂಥ ಜಮೀನಿನಲ್ಲಿ ನೀರಾವರಿ ಬಾವಿಗಳನ್ನು ಸರ್ಕಾರದ ಅನುಮತಿ ಇಲ್ಲದೆ ತೆಗೆದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ಅನುಮತಿ ಇಲ್ಲದೆ ಬಾವಿಯನ್ನು ತೆಗೆದರೂ ಅದರಿಂದ ನಮಗೇನೂ ನಷ್ಟವಿಲ್ಲ. By all means we will welcome it because it will be an asset to the State.

Sri D. PARAMESWARAPPA.—In Malnad districts there is a large extent of land in the forest area fit for cashewnut cultivation. Will the Government request the Forest Department to release such lands for cashewnut cultivation ?

Sri M. V. KRISHNAPPA.—The Forest Department also are doing cashenut cultivation. If there are small bits of lands where the forest department cannot do it, they can examine releasing such lands. We

(SRI M. V. KRISHNAPPA)

appointed a committee consisting of the Taluk Board Chairman, local Tahsildar, B.D.O. Excise Officer and the Veterinary Officer and these people will sit and see how far they can exchange these lands for cashewnut cultivation. We are awaiting their report and as soon as we receive it we will take action.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಮ್ಮ ತಾಲ್ಲೂಕಿನಲ್ಲಿ ಯಾವ ಗ್ರಾಮದಲ್ಲಿ ಯಾವ ಯಾವ ಸರ್ವೆ ನಂಬರು ಗೇರುಬೀಜದ ಸಾಗುವಳಿಗೆ ಕೊಟ್ಟಿದ್ದಾರೆ ಅವರ ಹೆಸರೇನು ಎಂದು ನಾನು ಪ್ರಶ್ನೆ ಕಳಿಸಿರುವುದು, ಹೆಸರುಗಳನ್ನು ಹೇಳಲ್ಲಿ. ......

Mr. SPEAKER.—It may be that in my office they might have omitted the names because there is a standing instruction that no names should be given.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಯಾವ ಗ್ರಾಮದಲ್ಲಿ ಯಾರಿಗೆ ಕೊಟ್ಟಿದ್ದಾರೆ ಎಂದು ವಿವರವಾಗಿ ಹೆಸರುಗಳನ್ನು ತಿಳಿಸಬೇಕು ಎಂದು ಪ್ರಶ್ನೆ ಕಳಿಸಿರುವುದು ಅಧ್ಯಕ್ಷರು ಹೆಸರು ಹೇಳಬಾರದು ಎಂದರೆ ಯಾರಿಗೆ ಕೊಟ್ಟಿದೆ ಎಂದು ನಮಗೆ ಗೊತ್ತಾಗುವುದಿಲ್ಲ.

ಅಧ್ಯಕ್ಷರು.—ಸಾಮಾನ್ಯವಾಗಿ ವ್ಯಕ್ತಿಗಳ ಹೆಸರನ್ನು ಹೇಳಕೂಡದೆಂದು ಒಂದು ನಿರ್ಧಾರ ಮಾಡಿದೆ. ಆದುದರಿಂದ ಹೆಸರುಗಳನ್ನು ಹೇಳಕೂಡದು. ಯಾವ ಕಾರಣದಿಂದ ಮಾನ್ಯ ಸದಸ್ಯರು ಹೆಸರುಗಳನ್ನು ತಿಳಿಸಬೇಕೆನ್ನುತ್ತಾರೆಂದು ಕೇಳಿದೆ. ಅವಕ್ಕೆ ಊರಿನಲ್ಲಿದ್ದವರಿಗೆ ಕೊಟ್ಟಿದ್ದಾರೆಯೋ ಬೇರೆಯವರಿಗೆ ಕೊಟ್ಟಿದ್ದಾರೆಯೋ ಎಂದು ನನಗೆ ಗೊತ್ತಿಲ್ಲ ಎಂದು ಹೇಳಿದರು. ಸದಸ್ಯರಿಗೆ ಗೊತ್ತಿಲ್ಲದೆ ಇರುವ ಸಂಗತಿಗಳನ್ನು ಪ್ರಶ್ನೋತ್ತರ ಕಾಲದಲ್ಲಿ ಕೇಳುವುದಕ್ಕಾಗುವುದಿಲ್ಲ. ಬೇಕಾದ information ಕೇಳಬಹುದು. ಪ್ರಶ್ನೆಯಲ್ಲಿ ವ್ಯತ್ಯಾಸವಿದ್ದರೆ ನನ್ನನ್ನು ಕೇಳಬೇಕು. ಈ ಸಭೆಯಲ್ಲಿ ಹಾಗೆಲ್ಲ ಹೇಳಕೂಡದು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಹೆಸರನ್ನು ಕೇಳಿದರೆ ಪ್ರಭಾವ ಶಾಲಿಗಳು ಜಮೀನನ್ನು ಪಡೆಯಲು ಪ್ರಭಾವ ಬೀರಿದ್ದಾರೆಯೋ, ಸಾಮಾನ್ಯ ಜನರಿಗೆ ಏನಾದರೂ ಸಿಕ್ಕಿದೆಯೋ, ಯಾವ ಪಕ್ಷಕ್ಕೆ ಸೇರಿದವರಿಗೆ ಸಿಕ್ಕಿದೆ ಎನ್ನುವುದೆಲ್ಲ ಗೊತ್ತಾಗುತ್ತದೆ. ಅದಕ್ಕೆ ಹೆಸರನ್ನು ಕೇಳುತ್ತಾರೆ, ಸ್ವಾಮಿ.

ಅಧ್ಯಕ್ಷರು.—ಪ್ರಭಾವ ಶಾಲಿಗಳೋ ಯಾರಾದರೂ ಇರಲಿ ಹೆಸರು ಹೇಳಬಾರದು. ಈ ಸಭೆಯಲ್ಲಿ ಇರುವವರ ಬಗ್ಗೆ comment ಮಾಡುತ್ತ ಹೋದರೆ ಅವರು ಉತ್ತರ ಕೊಡುವುದಕ್ಕೆ ಸಿದ್ಧರಾಗಿರುತ್ತಾರೆ. ಆದರೆ ಇಲ್ಲಿ ಇಲ್ಲದೆ ಇರುವವರ ವಿಷಯದಲ್ಲಿ ಮಾತನಾಡಿದರೆ ಏನು ಕ್ರಮ ತೆಗೆದುಕೊಳ್ಳುವುದಕ್ಕೂ ಸಾಧ್ಯವಾಗುವುದಿಲ್ಲ. ಆ ಕಾರಣದಿಂದ ಹೆಸರನ್ನು ಎತ್ತುವಾಗ ಎಚ್ಚರಿಕೆಯಿಂದಿರಬೇಕು ಎನ್ನುವುದಕ್ಕೋಸ್ಕರ ಹೆಸರುಗಳನ್ನು ಎತ್ತಕೂಡದು ಎಂದು ಹೇಳುತ್ತೇನೆ.

Extent of Government Land encroached in the State.

*Q.—47. Sri N. NANJE GOWDA (Krishnarajapet).—

Will the Government be pleased to state:—

(a) whether any survey has been conducted to ascertain the extent of Government land encroached in the State;

(b) the action taken by them either to evict or to solve this problem?

A.—Sri M. V. KRISHNAPPA (Minister for Revenue).—

(a) No special survey has been conducted for the purpose but such encroachments are detected in the normal course of inspections and checks by the Officers of the Revenue and the Land Records Departments

(b) Government have issued instructions to all the Revenue Officers that :—(a) encroachments on land under the control of the Revenue Department excluding tank-beds or forests may be confirmed in favour of the persons in possession of the lands concerned continuously for 6 years prior to 1st April 1961, after recovering penal upset price; (b) lands unauthorisedly occupied by a poor person or a person belonging to Scheduled Castes or Scheduled Tribes may be confirmed to him to such extent as would be necessary to enable him to eke out a liking if he had been in its occupation even though unauthorisedly for over two years prior to 1st April 1961; (c) prompt and stringent action should be taken in cases in which fresh encroachments which commenced within six years from 1st April 1961 come to light and that eviction should be enforced in such cases as a rule.

ಶ್ರೀ ಎನ್. ನಂಜೇಗೌಡ.—1961ನೆಯ ಇಸವಿ ಏಪ್ರಿಲ್ ಒಂದನೇ ತಾರೀಖಿಗಿಂತ ಹಿಂದಕ್ಕೆ ಆರು ವರ್ಷ ಅನುಭವದಲ್ಲಿದ್ದರೆ ಆ ಜಮೀನನ್ನು ಅವರಿಗೇ ಖಾಯಂ ಮಾಡುತ್ತೇವೆಂದು ಹೇಳಿದ್ದಾರೆ. ಆರು ವರ್ಷವಾಗಿದೆ ಎನ್ನುವುದಕ್ಕೆ ಏನು ರುಜುವಾತು ಕೊಡಬೇಕು, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಕರಾರು ತಃಖ್ತೆ ಕೊಡುತ್ತಾರೆ. ಅವರಿಗೆ ರಸೀತಿ ಕೊಟ್ಟಿರುತ್ತಾರೆ. ಅದರ ಪ್ರಕಾರ ಗೊತ್ತಾಗುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ಸರಕಾರದವರು 19 7ನೆಯ ಇಸವಿಯಲ್ಲಿ ಹೆಚ್ಚು ಬೆಳೆ ಬೆಳೆಯುವ ಯೋಜನೆಯಲ್ಲಿ ಕೆಲವರಿಗೆ ಐದು-ಆರು ಎಕರೆಗಳನ್ನು ಕೊಟ್ಟರು. ಅವರು ಎನ್‌ಕ್ರೋಚ್ ಮಾಡಿಕೊಂಡಿದ್ದರೆ ಅದನ್ನು ತಪ್ಪಿಸಿ ಬೇರೆಯವರಿಗೆ ಕೊಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೂಲ್ಸ್ ಪ್ರಕಾರ ಮಾಡುತ್ತಾರೆ. ಯಾರಿಗೆ ಇರುವ ಜಮೀನು ಸಾಲದೋ ಜೀವನಕ್ಕೆ, ಯಾರು ಅದನ್ನು ತಾವೇ ವ್ಯವಸಾಯ ಮಾಡುತ್ತಿದ್ದಾರೋ ಅಂಥವರಿಗೆ ಅದನ್ನು ಕೊಡ ಬಹುದು ಬೇರೆಯವರಿಗೆ ಕೊಡಬಾರದು. ಹರಿಜನರು ಮಾಡುತ್ತಿದ್ದರೆ, ಅವರು ಎರಡು ವರ್ಷ ಕಾಲ ಅದನ್ನು ಮಾಡಿದ್ದರೂ ಸಾಕು, ಅವರಿಗೆ ಕೊಡಬೇಕೆಂದು ಹೇಳಿವ್ವಾಗಿದೆ.

ಶ್ರೀ ಬಿ. ಚನ್ನಬೈರೇಗೌಡ.—ಎನ್‌ಕ್ರೋಚ್‌ಮೆಂಟ್ ಆಗಿದೆಯೆಂದು ತಕರಾರು ತಃಖ್ತೆ ಕೊಟ್ಟಿದ್ದರೂ ಅವರಿಗೇ ಆ ಜಮೀನನ್ನು ಕೊಡುತ್ತೇವೆಂದರೆ ಎನ್‌ಕ್ರೋಚಮೇಂಟ್‌ಗಳು ಜಾಸ್ತಿಯಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವರು ಬಡವರು, ಅವರ ಜೀವನಕ್ಕೆ ಜಮೀನು ಸಾಲದ್ದಾಗಿರುತ್ತದೆ, ಅಂಥವರಿಗೆ ಆ ಜಮೀನು ಕೊಡುವುದರಿಂದ ಅವರಿಗೂ ಅನುಕೂಲ ಮತ್ತು ಸರಕಾರಕ್ಕೆ ಕಂದಾಯವೂ ಹೆಚ್ಚುತ್ತದೆ. ಅಲ್ಲದೆ ಆ ಜಮೀನನ್ನು ಅಭಿವೃದ್ಧಿಪಡಿಸುವುದಕ್ಕೂ ಸಹಾಯವಾಗುತ್ತದೆ. ಅದರ ಮೇಲೆ ಸಾಲಗಳನ್ನು ತೆಗೆದುಕೊಂಡು ಹೆಚ್ಚು ಬೆಳೆ ಬೆಳೆದುಕೊಂಡು ಜೀವನಮಾಡಿಕೊಳ್ಳಲು ರೈತನಿಗೆ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಸರಕಾರದವರು ಕೆಲವು ಸಂದರ್ಭಗಳಲ್ಲಿ ಒಳ್ಳೆಯ ಪರಿಣಾಮವಾಗುತ್ತದೆಂದು ಮಾಡಿದ್ದಾರೆ.

ಶ್ರೀ ಎನ್. ನಂಜೇಗೌಡ.—ಕೆಲವು ಸಂದರ್ಭಗಳಲ್ಲಿ ಹತ್ತು ಹದಿನೈದು ವರ್ಷಗಳಾದರೂ ತಾನು ಅರ್ಜಿ ಹಾಕಿಕೊಳ್ಳಬೇಕೆಂದು ಗೊತ್ತಿಲ್ಲದೆ ಅವನ ಅನುಭವದಲ್ಲೇ ಇರುತ್ತದೆ ಆಗೇನು ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ. ಶಾನುಭೋಗರು ಕಂದಾಯವನ್ನು ವಸೂಲು ಮಾಡಿಕೊಂಡು ಸರಕಾರಕ್ಕೆ ಕೊಡದೇಯಿರುವ ಸಂದರ್ಭಗಳೂ ಇರುತ್ತವೆ, ಅದನ್ನು ಆ ರೈತ ತಿಳಿಸದೇಯಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಈ ಬಗ್ಗೆ ಲ್ಯಾಂಡ್ ರೆವಿನ್ಯೂ ರೂಲ್ಸ್‌ನಲ್ಲಿ ಸೂಕ್ತ ಬದಲಾವಣೆ ಮಾಡಿದ್ದೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—1961ನೆಯ ಇಸವಿಯಲ್ಲಿ ಮಾಡಿರುವ ರೂಲ್ಸ್‌ನಲ್ಲಿ ಇದು ಬರುತ್ತದೆ.

ಶ್ರೀ ಬೈರಪ್ಪಾಜಿ.—1961ನೆಯ ಇಸವಿ ಏಪ್ರಿಲ್ ಒಂದನೆಯ ತಾರೀಕಿಗೆ ಮುಂಚೆ ಎರಡು ವರ್ಷ ಅನುಭವ ಮಾಡಿದ್ದರೆ, ಅದು ಗೋಮಾಳವಾಗಿದ್ದರೂ ಆ ಗ್ರಾಮದಲ್ಲಿ ಗೋಮಾಳ ಕಡಮೆಯಿದ್ದರೂ ಆ ಭೂಮಿಯನ್ನು ಅವರಿಗೇ ಕೊಡಿ ಎಂದು ಸರಕಾದವರು ಆದೇಶ ಕೊಟ್ಟಿದ್ದಾರೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ತಾರೀಖಿಗೆ ಹಿಂದೆ ಒಂದೇ ಸಮನಾಗಿ ಆರು ವರ್ಷ ಕಾಲ ಬಡ ರೈತ ಆ ಜಮೀನನ್ನು ಬೇಸಾಯ ಮಾಡುತ್ತಿದ್ದರೆ ಅದನ್ನು ಅವನಿಗೇ ಕೊಡಬೇಕೆಂದು ಮಾಡಿದೆ. ಹರಿಜನರಾದರೆ ಎರಡು ವರ್ಷ ಮಾಡಿದ್ದರೂ ಅವರಿಗೇ ಕೊಡಬೇಕೆಂದಿದೆ.

ಶ್ರೀಮತಿ ಜಿ. ಎಸ್. ಭಾಗೀರಥಮ್ಮ.—ಕೆರೆ ಅಂಗಳವನ್ನು ಒತ್ತುವರಿ ಮಾಡಿಕೊಂಡಿದ್ದಾರೆಂದು ಹೇಳಿದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ಕಡೆ ಕೆರೆ ಅಂಗಳಗಳನ್ನೇ ಅಲ್ಲದೆ ಸ್ಮಶಾನ ಭೂಮಿಯನ್ನು ಕೂಡ ಒತ್ತುವರಿ ಮಾಡಿಕೊಂಡಿದ್ದಾರೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಸಾಕಷ್ಟು ಗೋಮಾಳವಿಲ್ಲವೆಂದು ಗೊತ್ತಿದ್ದರೂ ಆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೆ ಅಂಥವರ ವಿಷಯದಲ್ಲೇನು ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಡವರು ಅದನ್ನು ಬೇಸಾಯ ಮಾಡುತ್ತಿದ್ದರೆ ಅಲ್ಲಿ ಸಾಕಷ್ಟು ಗೋಮಾಳವಿಲ್ಲದಿದ್ದರೂ ಅವರಿಗೆ ಕೊಡಬೇಕೆಂದು ನಿಯಮ ಮಾಡಿ ಕಳುಹಿಸಿದ್ದೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಶ್ರೀಮಂತರು ಅಲ್ಲಿ ಸಾಕಷ್ಟು ಗೋಮಾಳವಿಲ್ಲದಿದ್ದರೂ ಒತ್ತುವರಿ ಮಾಡಿಕೊಂಡರೆ ಆಗೇನು ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥವರಿಗೆ ಕೊಡಬಾರದೆಂದು ಮಾಡಿದ್ದೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಆರು ವರ್ಷ ಮತ್ತು ಎರಡು ವರ್ಷ ಕಾಲ ಅನುಭವಿಸಿದ್ದರೆ ಅವರಿಗೇ ಕೊಡಬೇಕೆಂದು ಹೇಳುತ್ತೀರಿ, ಅದು ಎಂತಹ ಜಮೀನಾದರೂ ಕೊಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗಿಲ್ಲ, ಕೆರೆ ಅಂಗಳದ ಜಮೀನು, ಎಕ್ಸೈಜು ಇಲಾಖೆಗೊಳಪಟ್ಟ ಜಮೀನು, ಫಾರೆಸ್ಟ್ ಜಮೀನು ಮುಂತಾದುವನ್ನು ರೈತ ಆರು ವರ್ಷ ಉತ್ತಿದ್ದರೂ ಕೊಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸರಕಾರದವರು ಹೀಗೆ ಹೇಳಿದುದನ್ನು ಕೇಳಿ ಈ ಹೊತ್ತಿನಿಂದ ಆರು ವರ್ಷ ಒತ್ತರಿಸಿಕೊಂಡ ಜಮೀನನ್ನು ಉತ್ತರೆ ಅದನ್ನು ನಮಗೇ ಕೊಡುತ್ತಾರೆಂದು ಎಲ್ಲರೂ ಹಾಗೆಯೇ ಮಾಡುವುದಕ್ಕೆ ಪ್ರಾರಂಭ ಮಾಡುವುದಿಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇನ್ನು ಮುಂದೆ ಹಾಗೆ ಮಾಡುವವರನ್ನು ಆ ಜಮೀನಿನಿಂದ ಓಡಿಸುತ್ತೇವೆಂದು ರೂಲ್ಸನಲ್ಲಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಎರಡು ವರ್ಷ ಮತ್ತು ಆರು ವರ್ಷಗಳ ನಿಯಮವನ್ನು ಜಾರಿಗೆ ತಂದರೆ ಕ್ರಿಮಿನಲ ಕೇಸುಗಳು ಇನ್ನೂ ಹೆಚ್ಚಾಗುತ್ತವಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಜಮೀನು ಕಡಮೆಯಿದ್ದು ಅವಶ್ಯಕತೆ ಹೆಚ್ಚಾಗಿರುವಾಗ ಹೀಗಾಗುತ್ತದೆ.

Number of Ayurvedic Colleges run and managed by the Private Agencies in the State.

*Q.—61. Sri SANJEEVANATH AIKALA (Suratkal).—

Will the Government be pleased to state :—

(*a*) the number of Ayurvedic Colleges in the State run and managed by the private agencies (Private persons and Institutions) ;

(*b*) the names of such colleges and places of their situation ;

(*c*) the names of Institutions or persons who are managing these colleges ;

(*d*) the amount of grant given to these colleges for the year 1962-63 (separately to each college) ?

A.—Sri K. NAGAPPA ALVA (Minister for Health).—

(*a*) 10.

			Place
(*b*) 1.	Bangalore Ayurvedic College	...	Bangalore
2.	Karnataka Ayurvedic Vidyapeetha		Khasbagh, Belgaum
3.	Ayurveda Mahavidyalaya	...	Bijapur
4.	Shuddha Ayurveda Vidyalaya	...	Hubli
5.	Shuddha Ayurveda Vidyalaya	...	Mysore
6.	Taranatha Ayurveda Vidyapeeth	...	Bellary
7.	College of Indian Medicine	...	Bedkihal, Belgaum District.
8.	Ayurvedic College	...	Bagalkot, Bijapur District.
9.	Ayurvedic College	...	Udipi, South Kanara District.
10.	Shuddha Ayurveda Vidyalaya	...	Gadag, Dharwar District.

(*c*) 1. Bangalore Ayurvedic College, Bangalore is managed by Ayurvedic Prathistana.

2. Karnatak Ayurveda Vidyapeetha, Belgaum is managed by KAVP Society ; Khasbagh, Belgaum.

3. Ayurveda Mahavidyalaya, Bijapur is managed by Ayurveda Vidyalaya Samithi, Bijapur. Sri C. B. Puranik is the Principal.

4. Shuddha Ayurveda Vidyalaya, Hubli is managed by Hubli Ayurveda Seva Samithi. Sri N. Raghavendra Rao is the Principal.

5. Shuddha Ayurveda Vidyalaya, Mysore is managed by the Ayurveda Mahavidalaya Nirvahaka Samithi, Mysore.

6. Taranth Ayurveda Vidyapeetha, Bellary is managed by the Governing Body.

7. College of Indian Medicine, Bedkihal is managed by Gomateshwara Vidyapeetha (Reg.), Bangalore.

8. Ayurvedic College, Udipi is managed by Karnataka Ayurveda Seva Sangha, Udipi (Reg.)

9. Ayurvedic College, Bagalkot is run under auspices of Anandaseva Trust; Kushtagi.

10. Shuddha Ayurveda Vidyalaya, Gadag is managed by a Trust.

(*d*) 1. Bangalore Ayurvedic College, Bangalore.

College Section	...	Rs. 9,850-00
Hospital Section	...	Rs. 4,362-00

(SRI K. NAGAPPA ALVA)

2. Karnataka Ayurveda Vidyapeetha, Belgaum.		
College Section	...	Rs. 27,267-86
Hospital Section	...	Rs. 14,580-03
3. Ayurveda Mahavidyalaya, Bijapur.		
College Section	...	Rs. 9,778-27
Hospital Section	...	Rs. 4,703-12
4. Shudda Ayurveda Vidyalaya, Hubli.		
College Section	...	Rs. 8,477-20
Hospital Section	...	Rs. 1,936-07
5. Shudda Ayurveda Vidyalaya, Mysore.		
College Section	...	Rs. 2,311-00
Hospital Section	...	Rs. 409-09
6. Taranth Ayurveda Vidyapeetha, Bellary.		
College Section	...	Rs. 16,919-95
Hospital Section	..	Rs. 4,092-49
7. College of Indian Medicine, Bedkihal.		
College Section	...	Rs. 6,204-97
Hospital Section	...	Rs. 1,290-00
8. Ayurvedic College, Udipi.		
College Section	...	Rs. 8,394-69
Hospital Section	...	Rs. 1,793-36

9. Ayurvedic College, Bagalkot.
Grant is not sactioned so far as the proposals received from the Institution for 1962-63, are under examination.

10. Shuddha Ayurveda Vidyalaya, Gadag.
Grant for 1962-63 is not sanctioned so far as the proposals received from the institution are under scrutiny.

Sri SANJEEVANATH AIKALA.—What is the criterion adopted for giving assistance to these institutions ?

Sri K. NAGAPPA ALVA.—They have to satisfy certain conditions regarding staff, equipment, building, etc.

Sri R. N. LAKSHMIPATHI—What are the reasons for not sanctioning the grant for the Ayurvedic College, Bagalkot and the Shudha Ayurveda Vidyalaya, Gadag for the last two years ?

Sri K. NAGAPPA ALVA.—They have to send the audited statement of accounts and also satisfy other conditions. They have not satisfied certain conditions. That is why explanation had to be called for and these things are being examined.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಹತ್ತು ಕಾಲೇಜುಗಳಲ್ಲಿ ಶುದ್ಧ ಆಯುರ್ವೇದ ಕಾಲೇಜುಗಳೆಷ್ಟು? ಮಿಶ್ರ ಆಯುರ್ವೇದದ ಕಾಲೇಜುಗಳೆಷ್ಟು?

ಶ್ರೀ ಕೆ. ನಾಗಪ್ಪ ಆಳ್ವ.—ಮಿಶ್ರ ಆಯುರ್ವೇದವೆಂಬ ಶಬ್ದವನ್ನು ನಾನು ಕೇಳಿಲ್ಲ, ಈ ಹತ್ತರಲ್ಲಿ ಮೂರು ಶುದ್ಧ ಆಯುರ್ವೇದ ಎಂದಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಕಾಲೇಜುಗಳಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಮತ್ತು ಅವರು ಯಾವ ಯಾವ ತರಗತಿಗಳಲ್ಲಿ ಓದುತ್ತಿದ್ದಾರೆ ?

ಶ್ರೀ ಕೆ. ನಾಗಪ್ಪ ಆಳ್ವ.—ಈಗ ನನ್ನಲ್ಲಿ ಅಷ್ಟು ವಿವರಗಳಿಲ್ಲ, ಒಂದೊಂದು ಶಾಲೆಗೆ ಎಷ್ಟೆಷ್ಟು ಜನರನ್ನು ಸೇರಿಸಿದ್ದಾರೆಂದು ಹೇಳಬಹುದು.

ಶ್ರೀ ಎ. ಜೆ. ದೊಡ್ಡಮೇಟಿ.—ಎಷ್ಟೆಷ್ಟು ಜನ ಕಲಿಯುತ್ತಿದ್ದಾರೆ ?

Sri K. NAGAPPA ALVA.—

Name of Institution	*Number Studying 1961–62*	*1962–63*
Tarannath Ayurveda Vidyapeeth, Bellary.	33	16
College of Indian Medicine, Belgaum.	33	16
Karnatak Ayurveda Vidyapeeth ...	40	...
Shudda Ayurveda Vidyalaya, Hubli ...	15	
Ayurveda Mahavidyalaya, Bijapur ...	30	
Shuddha Ayurveda Vidyalaya, Mysore.	4	
Bangalore Ayurveda College, Bangalore.	7	
Ayurvedic College, Udipi ...	8	
Ayurvedic College, Kushtagi ...	Nil	
Shuddha Ayurveda Vidyalaya, Gadag.	26	
College of Indian Medicine, Bedkihal.	17	

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಬೆಂಗಳೂರು ಆಯುರ್ವೇದ ಕಾಲೇಜ ಮತ್ತು ಆಸ್ಪತ್ರೆಗೆ ಗ್ರ್ಯಾಂಟ್ ಕೊಟ್ಟಿರತಕ್ಕ ಮೊಬಲಗು ಇಷ್ಟು ಕಡಿಮೆ ಇಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಈ ಕಾಲೇಜಿನಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಕೊಡಲಾಗುತ್ತಿದೆ, ಎಷ್ಟು ಹಣ ಖರ್ಚು ಮಾಡುತ್ತಾರೆ ಎಂಬುದನ್ನು ಸರಿಯಾಗಿ ನೋಡಿ ಕೊಡಲಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಕಾಲೇಜುಗಳಿಗೆ ಕೊಟ್ಟಿರತಕ್ಕ ಹಣ ಒಂದಕ್ಕೆ ಹೆಚ್ಚು ಇನ್ನೊಂದಕ್ಕೆ ಕಡಿಮೆ ಹೀಗೆ ಇರುವುದರಿಂದ ಒಂದು ವ್ಯವಸ್ಥಿತವಾದ ಕ್ರಮಕ್ಕೆ ಅನುಸಾರವಾಗಿ ನಡೆದಂತೆ ಎನಿಸುವುದಿಲ್ಲ. ಆದುದರಿಂದ ಸರಕಾರ ಒಂದು ನಿರ್ದಿಷ್ಟವಾದ ಮೇಲ್ವಿಚಾರಣೆಗೆ ಒಳಪಡಿಸಲು ಆಲೋಚನೆ ಮಾಡುತ್ತದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ನಿರ್ದಿಷ್ಟವಾದ ಮೇಲ್ವಿಚಾರಣೆ ಈಗಾಗಲೇ ಇದೆ. ಆದರೂ ನಿಮ್ಮ ಸೂಚನೆ ತಿಳಿದುಕೊಂಡು ಆ ವಿಷಯದಲ್ಲಿ ಸ್ವಲ್ಪ ಬಿಗುಪಿನ ಕ್ರಮ ತೆಗೆದುಕೊಳ್ಳುತ್ತೇವೆ.

Sri D. PARAMESWARAPPA.—May I know the conditions that have to be fulfilled to be eligible for grants ?

Sri K. NAGAPPA ALVA.—They must have the necessary buildings, staff and equipment.

ಶ್ರೀ ಭೋಜರಾಜ.—ಹೌಸ್ ಸರ್ಜನ್ನುಗಳಿಗೆ ಟ್ರೈನಿಂಗ್ ಕೊಡುವಾಗ್ಗೆ ಮಿಶ್ರ ಆಯುರ್ವೇದ ವಿಷಯದ ಬಗ್ಗೆ ಕೂಡ ಟ್ರೈನಿಂಗ್ ಕೊಡಲಾಗುವುದೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅವರಿಗೆ ಎಲ್ಲ ವಿಷಯಗಳ ಬಗ್ಗೆ ಮಾಡರ್ನ್ ಸಿಸ್ಟಂ ಬಗ್ಗೆ ಕೂಡ ಅನುಭವ ಇರಲಿ ಎಂದು ಈ ಟ್ರೈನಿಂಗ್ ಕೊಡುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಆಯುರ್ವೇದ ಕಾಲೇಜಿನಲ್ಲಿ ನಿಬಂಧನೆ ಪ್ರಕಾರ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಇರಬೇಕು ಎಂದು ಇದೆ ? ಅದಕ್ಕಿಂತ ಕಡಿಮೆ ಸಂಖ್ಯೆ ಎಲ್ಲಿಯಾದರೂ ಇದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಕನಿಷ್ಠ ಸಂಖ್ಯೆ ಇಷ್ಟು ಎಂದು ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಆಯುರ್ವೇದ ಕಾಲೇಜುಗಳಲ್ಲಿ ಉಪಾಧ್ಯಾಯರುಗಳು ವಿದ್ಯಾರ್ಥಿಗಳಿಗೆ ಏನು ಕಲಿಸುತ್ತಾರೆ? ಏನು ವ್ಯವಸ್ಥೆ ಇದೆ? ಬರೀ ಸೊಪ್ಪು ಬೇರು ತಂದು ನೋಡುತ್ತಾರೆಯೆ? ಯಾವ ತರಹ ವ್ಯವಸ್ಥೆ ಇದೆ. ಏನು' ಎಂಬುದು ಅವರಿಗಾದರೂ ಅರ್ಥವಾಗಿದೆಯೇ?

ಶ್ರೀ ಕೆ. ನಾಗಪ್ಪ ಆಳ್ವ.—ವಿದ್ಯಾರ್ಥಿಗಳಿದ್ದಾರೆ, ಉಪಾಧ್ಯಾಯರುಗಳಿದ್ದಾರೆ; ಸರಿಯಾದ ರೀತಿಯಲ್ಲಿ ಕಲಿಸುತ್ತಾರೆ.

ಶ್ರೀ ಎಸ್. ಗೋಪಾಲ ಸಾರೆನ್ನ.—ಮಿಶ್ರ ಕಾಲೇಜುಗಳಲ್ಲಿ ಆಯುರ್ವೇದ ಆಲೋಪಥಿ ತರಬೇತಿ ಕೊಡುತ್ತಾ ಇರುವಾಗ್ಗೆ ಎಕ್ಸಪಿರಿಮೆಂಟ್ ಮಾಡಿ ನೋಡುತ್ತಿದ್ದಾರೆಯೇ?

ಅಧ್ಯಕ್ಷರು.—ಇದು ಈ ಮೂಲ ಪ್ರಶ್ನೆಗೆ ಸಂಬಂಧಪಡುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಕಾಲೇಜುಗಳಲ್ಲಿ ಡಿಗ್ರಿ ಪಡೆದವರಿಗೆ ಸರಕಾರ ಮನ್ನಣೆ ಕೊಟ್ಟು ಸರಕಾರಿ ನವಕರಿಯಲ್ಲಿ ಸೇರಿಸಿಕೊಳ್ಳಲಿಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಈ ವಿಷಯದ ಬಗ್ಗೆ ಒಂದು ಬೋರ್ಡು ರಚನೆ ಮಾಡಲಾಗಿದೆ. ಅವರು ತೀರ್ಮಾನ ತೆಗೆದುಕೊಂಡು ಶಿಫಾರಸು ಮಾಡುತ್ತಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಆಯುರ್ವೇದ ಕಾಲೇಜುಗಳಲ್ಲಿ ಇರತಕ್ಕ ಉಪಾಧ್ಯಾಯರುಗಳು ಹೊಂದಿರಬೇಕಾದ ಡಿಗ್ರೀಸ್ ಏನು? ಎಲ್ಲ ಕಾಲೇಜುಗಳಲ್ಲಿ ಆ ರೀತಿಯಾಗಿ ಉಪಾಧ್ಯಾಯರುಗಳು ಡಿಗ್ರೀಜ್ ಹೊಂದಿದ್ದಾರೆಯೇ?

Mr. SPEAKER.—How does it arise? The question relates to the number of ayurvedic colleges, names of colleges, names of institutions.

Sri P. VENKATAGIRIYAPPA.—Staff is also part of the college.

Mr. SPEAKER.—Has the Minister got the information?

Sri K. NAGAPPA ALVA.—No.

Sri K. S. SURYANARAYANA RAO.—In view of the fact that there are a very few candidates in the colleges in Mysore and Bangalore, will Government examine why it is so and suggest remedial measures to have the full strength for them?

Sri K. NAGAPPA ALVA.—Government have already made arrangements for the inspection of these colleges. Government are getting reports. Government will certainly examine these observations.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಬೆಂಗಳೂರು ಆಯುರ್ವೇದ ಆಸ್ಪತ್ರೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲ ಎಂಬುದನ್ನು ನಾನು ನೋಡಿದ್ದೇನೆ. ಅಲ್ಲಿ ಸರಕಾರ ಹೆಚ್ಚು ಗಮನ ಕೊಡುತ್ತಿಲ್ಲ ಎಂಬುದು ನಿಜವೇ?

ಶ್ರೀ ಕೆ. ನಾಗಪ್ಪ ಆಳ್ವ.—ಅಲ್ಲಿ ಸರಿಯಾಗಿ ಕೆಲಸ ನಡೆಯುತ್ತಿದೆ. ತಾವೂ ಕೂಡ ಈ ಆಸ್ಪತ್ರೆಗೆ ಭೇಟಿ ಕೊಡತಕ್ಕ ಸದಸ್ಯರಾಗಿದ್ದೀರಿ.

Sri A. KRISHNA SHETTY.—On a point of information. Names of institutions or persons who are managing these colleges.....ಎಂದು ಕೇಳಿದ (ಸಿ) ಪ್ರಶ್ನೆಗೆ ಉತ್ತರ ಕೊಡುತ್ತಾ ಬಿಜಾಪುರ ಆಯುರ್ವೇದ ಮಹಾವಿದ್ಯಾಲಯದಲ್ಲಿ ಶ್ರೀ ಸಿ. ಬಿ. ಪುರಾಣಿಕ್ ಎಂಬ ಪ್ರಿನ್ಸಿಪಾಲ್ ಇದ್ದಾರೆಂದು ಹೇಳಿದೆ. ಹೆಸರು ಹೇಳಬಾರದು ಎಂದು ಅಧ್ಯಕ್ಷರ ರೂಲಿಂಗ್ ಇರುವಾಗ್ಗೆ ಈ ಹೆಸರು ಏಕೆ ಹೇಳಲಾಗಿದೆ? ಇದು ಸರಿಯೇ? ಈ ಬಗ್ಗೆ ನಿಮ್ಮ ರೂಲಿಂಗ್ ಕೊಡುತ್ತೀರಾ?

Mr. SPEAKER.— I will answer that point tomorrow.

Terms of Reference of the Committee appointed to go into the Fee Structure of Universities in the State.

*Q.—119. Sri S. M. KRISHNA (Maddur).—

Will the Government be pleased to state :—

(a) what are the terms of reference of the Committee recently appointed to go into the fee structure of Universities in the State;

(b) whether it is a fact that the old Mysore is not represented in the Committee;

(c) if so, whether they intend appointing some one to represent old Mysore ?

A.—Sri S. R. KANTHI (Minister for Education).—

(a) (1) To examine the fee structure and recommend uniform scales of tuition fees and fee concessions for the colleges in the two University areas.

(2) To examine the scales of salaries of the tutorial staff in colleges and recommend changes, if any.

(3) To examine the necessity for uniformity of courses between the Universities to facilitate migration of student from one University to the other and recommend suitable measures, if required, to achieve such uniformity.

(4) To recommend measures for the improvement of educational standards and student discipline; and

(5) Any other matter that may be referred to the Committee by Government.

(b) The Composition of the Committee is not based on regional representation.

(c) Does not arise in view of reply to clause (b).

Sri S. M. KRISHNA.—Has this Committee started its functions ?

† Sri S. R. KANTHI.—Yes, on the 25th of last month they met.

Sri S. M. KRISHNA.—Where is this Committee sitting for collecting evidence ?

Sri S. R. KANTHI.—They met on the 25th at Hyderabad and again they are meeting on the 8th of this month in Madras. I am told that the Committee desire that as many people as want to give evidence may go over there. When I brought this to the notice of the Secretary and said that evidence should be taken also at Bangalore, they have agreed.

Sri S. M. KRISHNA.—Is it not desirable that the Committee should deliberate and take evidence in Bangalore or Mysore or Dharwar ?

Sri S. R. KANTHI.—Of course, it is desirable that they should sit in Bangalore, Mysore and Dharwar. It is not incumbent on the Committee to sit only here. The meeting that took place on the 25th of last month was only a preliminary meeting and the meeting to be held on the 8th also will be a preliminary meeting.

1-30 P.M.

ಶ್ರೀ ಇ. ನಾರಾಯಣಗೌಡ.—ಹಿಂದೆ ವಿದ್ಯಾರ್ಥಿಗಳು ಮುಷ್ಕರ ಮಾಡುತ್ತಾ ಇದ್ದ ಕಾಲದಲ್ಲಿ, ಈ ಸಮಿತಿಯಲ್ಲಿ ವಿದ್ಯಾರ್ಥಿಗಳ ಪರವಾಗಿ ಒಬ್ಬ ವಿದ್ಯಾರ್ಥಿ ಪ್ರತಿನಿಧಿ ಇರಬೇಕು ಎಂದು ಒಂದು ಕಂಡಿಷನ್ ಇಟ್ಟಿದ್ದರು. ಆ ರೀತಿ ವಿದ್ಯಾರ್ಥಿಗಳಿಗೆ ಸಮಿತಿಯಲ್ಲಿ ಸ್ಥಾನ ಕೊಟ್ಟಿದ್ದೀರ?

ಶ್ರೀ ಎಸ್. ಆರ್. ಕಂಠಿ.—ಇಲ್ಲ. ಆ ಪ್ರಕಾರ ಕೊಡುವುದಕ್ಕೆ ಆಗಿಲ್ಲ, ಕೊಟ್ಟಿಲ್ಲ.

Sri S. SIVAPPA.—Is it not a fact that a similar Committee under the Chairmanship of Dr. Laxshmanaswamy Mudaliar was constituted with the Vice-Chancellor of the Mysore University and the Vice-Chancellor of the Karnatak University as Members in 1957-58 under some terms of reference? What happened to the report of that Committee?

Sri S. R. KANTHI.—There was such a Committee under Dr. Lakshmanaswamy Mudaliar but the Terms of Refernce were not issued then.

Sri K. S. SURYANARAYANA RAO.—Is there any proposal to be referred to the Committee in regard the making recommendations as to the inter-change of professors and tutors between the two Universities?

ಶ್ರೀ ಎಸ್. ಆರ್. ಕಂಠಿ.—ಸದ್ಯಕ್ಕೆ ಏನು ಪಾಯಿಂಟುಗಳನ್ನು ನಾವು ರೆಫರ್ ಮಾಡಿದ್ದೇವೆಯೋ ಅವು ಇವೆ. ಹೆಚ್ಚಿನದು ಸದ್ಯಕ್ಕೆ ಏನೂ ಮಾಡಿಲ್ಲ. ಮಾನ್ಯ ಸದಸ್ಯರು ಹೇಳಿದರೆ ಅದನ್ನ ಸರಕಾರದವರು ವಿಚಾರ ಮಾಡುತ್ತಾರೆ.

Mr. SPEAKER.—Question hour is over.

QUESTION FOR ANSWER ON THE DAY

(but not taken up)

Applications received for Admission in the Polytechnic at Krishnarajpet in 1963.

*Q.—48. Sri N. NANJE GOWDA (Krishnarajpet).—

Will the Government be pleased to state:—

(a) the number of applications received for admissions in the Polytechnic, Krishnarajpet in 1963;

(b) out of them the number of applicants admitted;

(c) the sanctioned strength of the above Polytechnic?

A.—Sri S. R. KANTHI (Minister for Education).—

(a) 536.

(b) 132.

(c) 120.

In addition 10 per cent incrase in strength has been allowed for 1963.

Member's Representation

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಒಂದು ವಿಶೇಷ ವಿಷಯವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗಿ ಸುಮಾರು 5-6 ದಿವಸಗಳಾದುವು. ರಾಜ್ಯಪಾಲರ ಭಾಷಣ ಬಹಳ ಮಹತ್ವಪೂರಿತವಾದುದು ; ಅದರಮೇಲೆ ದೇಶದ ನೀತಿಯನ್ನು ಚರ್ಚೆ ಮಾಡುತ್ತಾ ಇರತಕ್ಕಂಥ ಸಮಯದಲ್ಲಿ ಈ ದೇಶದ ಮಾನ್ಯ ಮುಖ್ಯ ಮಂತ್ರಿಗಳು, ಈ ಸಭೆಯಲ್ಲಿ ಪ್ರಾರಂಭದಲ್ಲಿ ಕೂಡ ಗೈರುಹಾಜರಾಗಿದ್ದಾರೆ. ಅವರಿಗೆ ಅನಾರೋಗ್ಯವೋ ಏನೊ ನಮಗೆ ತಿಳಿಯದು. ಆದರೆ ಪತ್ರಿಕೆಗಳ ಮುಖಾಂತರ ನಾವು ನೋಡಿದ್ದೆ ಆದರೆ ಅವರು ಕ್ಯಾಬಿನೆಟ್ಟು ಮೀಟಿಂಗುಗಳಲ್ಲಿ ಹಾಜರಾಗುತ್ತಿದ್ದಾರೆ ಎಂಬ ಅಂಶ ವ್ಯಕ್ತವಾಗುತ್ತದೆ. ಆದ್ದರಿಂದ ಕೆಲವು ಕಾಲವಾದರೂ ಅವರು ಈ ಸಭೆಯಲ್ಲಿ ಹಾಜರು ಇರಬೇಕಾಗಿತ್ತು. ಒಂದು ನಿಮಿಷ ಕೂಡ ಈ ಸಭೆಯಲ್ಲಿ ಹಾಜರಾಗದೆ, ನಮ್ಮ ಈ ಸಭೆಗೆ ಅಲಕ್ಷ್ಯವನ್ನು ತೋರಿಸಿದ್ದಾರೆ. ಅವರು ಅನಾರೋಗ್ಯದ ನಿಮಿತ್ತ ಬರುತ್ತಿಲ್ಲವೊ, ನಡೆದುಕೊಂಡು ಬರಲು ಆಗದೆ ಬರುತ್ತಿಲ್ಲವೊ ಗೊತ್ತಿಲ್ಲ. ಇಲ್ಲಿಗೆ ಬರದೆ ಇರುವುದಕ್ಕೆ ಮಹತ್ತರವಾದ ಕಾರಣವೇನು ಎಂಬ ಬಗ್ಗೆ ಸಭಾಪತಿಯವರು ಸರಕಾರದಿಂದ ಉತ್ತರ ಕೊಡಿಸಬೇಕು.

† ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ಸರ್ವಸಾಧಾರಣವಾಗಿ ಎಲ್ಲರಿಗೂ ಗೊತ್ತಿದೆ ಮುಖ್ಯಮಂತ್ರಿಗಳ ಆರೋಗ್ಯ ಚೆನ್ನಾಗಿಲ್ಲ ಎಂಬುದು ಮೊದಲನೆಯ ದಿವಸ ಗವರ್ನರ ಅಡ್ರೆಸ್ ಇದ್ದಾಗ ಮುಖ್ಯ ಮಂತ್ರಿಗಳು ಇಲ್ಲಿದ್ದರು, ಅದು ಅವರಿಗೂ ಗೊತ್ತಿದೆ. ಆದರೆ ಅವರಿಗೆ ಒಂದು ಮಾತನ್ನು ಮಾತ್ರ ಹೇಳುತ್ತಾ ಇದ್ದೇನೆ. ಮುಖ್ಯ ಮಂತ್ರಿಗಳು ಏನೇ ಇದ್ದರೂ ಇಲ್ಲಿಗೆ ಬರಲಾರದೆ ಇರತಕ್ಕಂಥ ಮನುಷ್ಯರಲ್ಲ. ಬಂದೇ ಬರುತ್ತಿದ್ದರು. ನಾವೇ ಅವರ ಸ್ಥಿತಿಯನ್ನು ನೋಡಿ, ತಾವು ಬರಕೂಡದು, ತಮ್ಮ ಆರೋಗ್ಯ ಚೆನ್ನಾಗಿಲ್ಲವೆಂದು ಹೇಳಿಕೊಂಡಿದ್ದೇವೆ, ಏಕೆಂದರೆ ಬಂದರೆ ಸ್ಥಿತಿ ಕ್ಷೀಣವಾಗಿ ಬಹಳ ಕಷ್ಟವಾಗುವ ಸಂಭವವಿದೆ. ಆದ್ದರಿಂದ ಅಪೋಸಿಷನ್ ಪಾರ್ಟಿ ನಾಯಕರು ಇದನ್ನು ಗಮನಿಸಿ ಇಂಥ ಪ್ರಶ್ನೆಯನ್ನು ಕೇಳದೆ ಇರುವುದು ಹೆಚ್ಚು ಒಳ್ಳೆಯದು ಎಂದು ಕಾಣುತ್ತದೆ. ನಮ್ಮನ್ನು ಕೇಳಿದರೆ ಅದಕ್ಕೆ ಸರಿಯಾದಂಥ ಉತ್ತರ ಪ್ರೈವೇಟಾಗಿ ಕೊಡುತ್ತೇವೆ. ಸರಿಯಾಗಿ ಕಾಣದೆ ಇದ್ದರೆ ಇಂಥ ಪ್ರಶ್ನೆ ಇಲ್ಲಿ ಕೇಳಬಹುದು.

ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಹೇಳಿದ ಉತ್ತರದ ಧೋರಣೆ ನೋಡಿದರೆ, ನಾವು ಕೇಳತಕ್ಕ ಪ್ರಶ್ನೆಯ ಹಕ್ಕನ್ನು ಕೇಳಿದಂತಾಗುತ್ತದೆ. ಪ್ರಧಾನಮಂತ್ರಿ ನೆಹರುವರಿಗೆ ಇವರಿಗಿಂತ ಬೃಹದಾಕಾರವಾದ ಖಾಹಿಲೆ ಇತ್ತು. ಅವರು ಪಾರ್ಲಿಮೆಂಟುಸದನಕ್ಕೆ ಬಂದಾಗ ಅವರಿಗೆ ವಿರೋಧಪಕ್ಷದವರೆ ಕುಳಿತುಕೊಂಡು ಮಾತನಾಡಬೇಕೆಂದು ಮನವಿ ಮಾಡಿಕೊಂಡರು. ಆದರೆ ಕಂಠಿಯವರು ಮುಖ್ಯ ಮಂತ್ರಿಯವರನ್ನು ಇಲ್ಲಿಗೆ ಬರಬೇಡಿ ಎಂದು ಹೇಳಿಬಿಟ್ಟಿದ್ದಾರೆ. ಇದು ಖಂಡಿತ ಈ ಸಭೆಗೆ ಗೌರವ ತರತಕ್ಕ ಮಾತಲ್ಲ.

ಶ್ರೀ ಎಸ್. ಆರ್. ಕಂಠಿ.—ಇದು ವಿವಾದದ ಮಾತು ಅಥವಾ ಪ್ರಶ್ನೆ ಅಲ್ಲ ಡಾಕ್ಟರೂ ಬೇಡ ಎಂದು ಹೇಳಿದ್ದಾರೆ, ನಾವೂ ಬೇಡ ಎಂದು ಹೇಳಿದೆವು. ಅವರಿಗೂ ಗೊತ್ತಿದೆ. ಈ ವಿಚಾರ ಇಲ್ಲಿ ಎತ್ತದೆ ಇದ್ದರೆ ಒಳ್ಳೆಯದಾಗಿ ಕಾಣುತ್ತದೆ.

MR. SPEAKER.—I am getting slips today showing time which will overflow for two days. Yesterday 3 hours were practically wrenched out at my instance for this Debate. I want all the whips to meet together and bring about greater co-ordination. I will allow the Debate to continue till 4 O' clock when the Hon'ble Ministers will be called upon to speak. There will be 15 minutes for Seeking clarifications. Then it will be put to vote, if voting is necessary.

SRI S. SIVAPPA.—The general discussion on the Governor's Address may continue till 6 o' clock and the reply by the Ministers may be made tomorrow.

MR. SPEAKER.—The Hon'ble Member was a Member of the Business Advisory Committee. How can he raise it? I want to oblige members and want to keep them satisfied.

Sri SIDDIAH KASHIMATH (Shirhatti).—Many Members want to participate in the debate. The time may be extended till 6 o' clock.

Mr. SPEAKER.—I will consider it.

MOTION OF THANKS TO THE GOVERNOR FOR HIS ADDRESS

(Debate Continued.)

ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಸಭಾಪತಿಯವರೆ, ನಿನ್ನೆ ದಿವಸ ಡೆಮಾಕ್ರಸಿ ಹೆಸರಿನಲ್ಲಿ ನಮ್ಮ ಸರಕಾರ ನಮ್ಮ ರಾಜ್ಯದ ಒಂದು ಭಾಗದಲ್ಲಿ ಯಾವ ಪ್ರಕಾರ ಪೋಲೀಸು ರಾಜ್ಯ ನಡೆಸುತ್ತಿದೆ ಎಂಬ ಮಾತನ್ನು ತಿಳಿಸಿದೆ. ಆದಕ್ಕೆ ಒಂದು ಉದಾಹರಣೆಕೊಟ್ಟು ನಾಲ್ಕು ಮಾತುಗಳನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಚಿಡೆಗೊಪ್ಪದಲ್ಲಿ ಒಂದು ಪೋಲೀಸು ಅತ್ಯಾಚಾರ ನಡೆಯಿತು. ಎಷ್ಟೋ ಪ್ರಾಣ ಹಾನಿಕರವಾದಂತಹ ತಕ್ಸೀರುಗಳಾದರೂ ಆ ಕೇಸುಗಳು ರಿಜಿಸ್ಟರ್ ಆಗುವುದಿಲ್ಲ. ಅಂತಹ ಉದಾಹರಣೆಗಳು ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟು ಇವೆ. ಈ ವಿಷಯವನ್ನು ಸರಕಾರದವರ ನಜರಿಗೆ ತಂದ ನಂತರ ಅವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡರು ಎಂದರೆ ಒಬ್ಬ ಸಬ್ ಇನ್‌ಸ್ಪೆಕ್ಟರನ್ನು ಟ್ರಾನ್ಸ್‌ಫರ್ ಮಾಡಿ ಸರ್ಕಲ್ ಇನ್‌ಸ್ಪೆಕ್ಟರಾಗಿ ಮಾಡಿದರು. ಇದನ್ನು ಹೇಳುವ ನನ್ನ ಉದ್ದೇಶ ಏನೆಂದರೆ ಈ ಸರಕಾರದವರ ನೀತಿ ಏನಿದೆ ಇವತ್ತಿನ ದಿವಸ ಅದು ತಪ್ಪು ನೀತಿ ಆಗಿದೆ. ಡೆಮಾಕ್ರಸಿ ಹೆಸರಿನಲ್ಲಿ ಡೆವಲಪ್‌ಮೆಂಟ್ ಕಾರ್ಯಗಳನ್ನು ಮಾಡ್ತಾ ಇದ್ದೇನೆ ಎಂದು ಹೇಳುತ್ತಾ ಇದ್ದೀರಿ. ಯಾವ ದೇಶದಲ್ಲಿ ಲಾ ಅಂಡ್ ಆರ್ಡರ್ ಸರಿಯಾಗಿಲ್ಲವೋ, ಯಾವ ದೇಶದಲ್ಲಿ ಮನುಷ್ಯರ ಜೀವಕ್ಕೆ ಸುರಕ್ಷತೆ ಇಲ್ಲವೋ, ಯಾವ ದೇಶದಲ್ಲಿ ಮನುಷ್ಯರ ಮಾನ ಮರ್ಯಾದೆಗಳಿಗೆ ಸುರಕ್ಷತೆ ಇಲ್ಲವೋ ಅಂತಹ ದೇಶದಲ್ಲಿ ಈ ಪ್ರಕಾರ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತೇವೆ ಎಂದು ಹೇಳುವುದಾದರೆ ಅದು ಸುಳ್ಳು ಮಾತಾಗುತ್ತದೆ ಎಂದು ನಾನು ಹೇಳುತ್ತೇನೆ. ಸರಕಾರದ ನೀತಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಾಗಿದೆ ಎಂದು ತಾವು ಹೇಳುತ್ತಿರುವುದು ನಿಜವಾಗಿಯೂ ಸರಿಯಾದ ಮಾತಲ್ಲ ಏಕೆಂದರೆ ಇವತ್ತು ನಾನು ತಮ್ಮ ಮುಂದೆ ಹೇಳುವುದಾದರೆ ನಮ್ಮ ದೇಶದಲ್ಲಿ ಒಂದು ಭಾಗಕ್ಕೂ ಇನ್ನೊಂದು ಭಾಗಕ್ಕೂ ಡಿಸ್ಕ್ರಿಮಿನೇಷನ್ ಮಾಡುತ್ತಾ ಇದ್ದೀರಿ. ಒಂದು ಭಾಗಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಸುರಿಯುತ್ತಾ ಇದ್ದೀರಿ ಮತ್ತೊಂದು ಕಡೆ ಬೆಂಕಿ ಸುರಿಯುತ್ತಾ ಇದ್ದೀರಿ; ಎಂದು ನಾನು ಖಂಡಿತವಾಗಿಯೂ ಹೇಳಬೇಕಾಗಿದೆ. ಏಕೆಂದರೆ ನಾವು ಮೈಸೂರು ಸಂಸ್ಥಾನಕ್ಕೆ ಸೇರಿ 7 ವರ್ಷಗಳಾಗುತ್ತಾ ಬಂತು. ನಮ್ಮ ಭಾಗದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ನೋಡಿದ್ದೇ ಅದರ ಒಂದು ಉದಾಹರಣೆಯನ್ನು ತಮಗೆ ಕೊಡುತ್ತೇನೆ. ಬೀದರ್ ಜಿಲ್ಲೆಯ ವಿಷಯವನ್ನು ಶ್ರೀಮಾನ್ ಕಂಠಿಯವರಿಗೆ ತಿಳಿಸಿದ್ದೇನೆ. ಅವರ ಹತ್ತಿರ ಹೋಗಿ ರೆಪ್ರೆಸೆಂಟೇಷನ್ ಮಾಡಿದ್ದೇನೆ. ನಮ್ಮಲ್ಲಿ ಎಷ್ಟು ಹೈಸ್ಕೂಲುಗಳು ಇವೆ, ನಮ್ಮಲ್ಲಿರತಕ್ಕ 6 ಲಕ್ಷ ಜನಸಂಖ್ಯೆಯಲ್ಲಿ ಎಷ್ಟು ಜನ ಹುಡಗರಿಗೆ ಕಾಲೇಜು ಪ್ರವೇಶ ದೊರಕಿದೆ ಎಂಬುದನ್ನು ತಮಗೆ ತಿಳಿಸಬೇಕಾದರೆ ವರ್ಷಕ್ಕೆ 4 ಅಥವಾ 6 ಜನರಿಗಿಂತ ಹೆಚ್ಚಾಗಿ ಯಾರಿಗೂ ಸಹ ಕಾಲೇಜಿನಲ್ಲಿ ಪ್ರವೇಶ ಸಿಕ್ಕಿಲ್ಲ. ಕಾಶ್ಮೀರದಿಂದ ಬರತಕ್ಕ ಜನರಿಗೆ ಇಲ್ಲಿ ಇರತಕ್ಕ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಸೀಟುಗಳು ಸಿಕ್ಕುತ್ತಿವೆಯೇ ಹೊರತು ನಮ್ಮ ದೇಶದವರಾದ ನಮ್ಮ ಹುಡಗರಿಗೆ ಸೀಟುಗಳು ಸಿಕ್ಕುತ್ತಿಲ್ಲ. ಇಂತಹ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿ ಇದೆ. ಹೈಸ್ಕೂಲುಗಳು ನಮ್ಮ ಭಾಗದಲ್ಲಿ ಇದ್ದರೂ ಉದಾಹರಣೆಗೆ ಭಾಲ್ಕಿಯಲ್ಲಿರತಕ್ಕ ಹೈಸ್ಕೂಲನ್ನು ತೆಗೆದುಕೊಂಡರೆ ಅಲ್ಲಿ ಅಭ್ಯಾಸ ಯಾವರೀತಿ ನಡೆಯುತ್ತಿದೆ ಎಂಬ ಮಾತನ್ನು ತಿಳಿಸಲು ಅಪೇಕ್ಷೆಪಡುತ್ತೇನೆ. ಅಲ್ಲಿನ ರಿಸಲ್ಟ್ ಈ ವರ್ಷ ಮೂರು ಪರ್ಸೆಂಟ್ ಇದೆ, ದಕ್ಷಿಣ ಭಾಗದಲ್ಲಿ ಕೋಟ್ಯಾಂತರ ರೂಪಾಯಿ ಸುರಿಯುತ್ತಾ ಇದ್ದೀರಿ, ಅಲ್ಲಿ ನೋಡಿದರೆ. 70—80 ಭಾಗ ಇದೆ ರಿಜಲ್ಟು ಅದೇ ನಮ್ಮ ಬೀದರ್ ಜಿಲ್ಲೆಯಲ್ಲಿ 4 ಪರ್ಸೆಂಟ್ ಇದೆ, 5 ಪರ್ಸೆಂಟ್ ಇದೆ. ಇದಕ್ಕೆ ಕಾರಣ ಏನೆಂದರೆ ಎಷ್ಟು ಜನ ಉಪಾಧ್ಯಾಯರು ಅಲ್ಲಿ ಇದ್ದಾರೆಯೋ ಅವರೆಲ್ಲರೂ ಎಸ್. ಎಸ್. ಎಲ್.ಸಿ. ಓದಿದವರು ಎಸ್. ಎಸ್. ಎಲ್. ಸಿ. ಪಾಸ್ ಆದವರು ಅಲ್ಲಿ ಯಾರೂ ಸಹ ಗ್ರ್ಯಾಜ್ಯುಯೇಟ್ ಟೀಚರ್ಸ್ ಇಲ್ಲ ಆ ಕಾರಣದಿಂದ ಹುಡಗರು ಪರೀಕ್ಷೆಯಲ್ಲಿ ಫೇಲ್ ಆಗುತ್ತಾ ಇದ್ದಾರೆ. ಈ ಅಂಶವನ್ನು ಶ್ರೀಮಾನ್ ಕಂಠಿಯವರಿಗೆ ತಿಳಿಸಿ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಕ್ಕೆ 4 ಪರ್ಸೆಂಟ್ ಪಾಸ್ ಆಗಿದ್ದಾರೆ ಎಂದು ಹೇಳುತ್ತಾ ಇದ್ದೀರಿ

ಇದು ಬಹಳ ಆಶ್ಚರ್ಯಕರ ಎಂದು ಅವರು ಮೊನ್ನೆ ದಿವಸ ಹೇಳಿದರು ಮತ್ತು ಅಣ್ಣಾರಾಯರು ನಿಮ್ಮ ಕಡೆಯಿಂದ ಬಂದವರು ಅವರೇ ನಿಮ್ಮ ಕಡೆಯಲ್ಲಿ ಆಗಬೇಕಾದ ಸೌಕರ್ಯವನ್ನೆಲ್ಲಾ ಮಾಡಿ ಕೊಟ್ಟಿದ್ದಾರೆ ನನ್ನನ್ನು ಏನು ಕೇಳುತ್ತೀರಿ ಎಂದು ಹೇಳಿದರು. ನಮ್ಮ ಹೈದರಾಬಾದು ಭಾಗಕ್ಕೆ ರೆಪ್ರಸೆಂಟೇಷನ್ ಕೊಟ್ಟು ಇವತ್ತಿನ ದಿವಸ ಯಾರು ಮಿನಿಸ್ಟರು ಆಗಿದ್ದಾರೆಯೋ ಅವರು ನಮ್ಮ ಭಾಗವನ್ನು ಮರೆಯುತ್ತಾ ಇದ್ದಾರೆ. ನಮ್ಮ ಭಾಗಕ್ಕೆ ಹೆಚ್ಚು ಗಮನವನ್ನು ಕೊಡುತ್ತಾ ಇಲ್ಲ. ಆದ್ದರಿಂದ ನಾನು ಹೇಳುವುದು ಇಷ್ಟೆ. ಇವೊತ್ತು ನಾನಾ ಅಭಿವೃದ್ಧಿ ಕಾರ್ಯಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ತಯಾರಾಗಿದ್ದೀರಿ, ಮೈಸೂರು ಸಂಸ್ಥಾನದಲ್ಲಿ ಯಾವ ಭಾಗಗಳು ಹಿಂದುಳಿದಿವೆ; ಯಾವ ಭಾಗಗಳು ನೆಗ್ಲೆಕ್ಟ್ ಆಗಿವೆ ಆ ಭಾಗಗಳಿಗೆ ಹೆಚ್ಚು ಹಣ ಖರ್ಚು ಮಾಡಬೇಕು. ಈಗ ಆ ರೀತಿ ಆಗದೆ ಆ ಭಾಗದ ಜನರನ್ನು ದನಗಳಂತೆ ಕಾಣುತ್ತಾ ಇದ್ದೀರಿ, ಎನ್ನತಕ್ಕ ಆಕ್ಷೇಪಣೆ ಇದೆ.

ಮತ್ತು ರಸ್ತೆಗಳ ವಿಷಯದಲ್ಲಿ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರಿಗೆ ಎಷ್ಟೋ ಸಾರಿ ತಿಳಿಸಿದ್ದೇನೆ. ಅವರು ಭಾಲ್ಕಿಗೆ ಬಂದಿದ್ದಾಗ ಎಷ್ಟು ಜನರು ಅವರನ್ನು ಭೇಟಿ ಆಗಿ ಅಲ್ಲಿನ ವಿಷಯಗಳನ್ನು ಅವರಿಗೆ ಮನವರಿಕೆ ಮಾಡಿ ಕೊಟ್ಟಿದ್ದಾರೆ. ಅಲ್ಲಿ ಅಗತ್ಯವಾಗಿ ಆಗಬೇಕಾದ ರಸ್ತೆಗಳ ವಿಷಯದಲ್ಲಿ, ಎಂದರೆ, ಹಣ ಕಡಿಮೆ ಇದೆ ಹಣ ಯಾವಾಗ ಬರುತ್ತದೆಯೋ ಆಗ ಮಾಡಿಸುತ್ತೇನೆ ಎಂದು ಹೇಳುತ್ತಾರೆ. ಹಣ ಇಲ್ಲ ಎಂದರೆ ಅಲ್ಲಿನ ಜನಗಳ ಕಷ್ಟ ಪರಿಸ್ಥಿತಿ ನಿವಾರಣೆಯಾದಂತಾಗುವುದಿಲ್ಲ. ಇವತ್ತಿನ ದಿವಸ ಆಂಧ್ರ ಪ್ರದೇಶಕ್ಕೆ ಹುಮ್ನಾಬಾದಿನಿಂದ ಹೋಗಬೇಕಾದರೆ ಅಲ್ಲಿ ಒಂದು ರಸ್ತೆ ಆದ ಪಕ್ಷದಲ್ಲಿ 18 ಮೈಲಿ ಪ್ರಯಾಣ ಮಾಡಿ ಆ ಭಾಗವನ್ನು ತಲುಪಬಹುದು. ಈಗ ಆ ಸೌಕರ್ಯ ಇಲ್ಲದೇ 80 ಮೈಲಿ ಸುತ್ತಿಕೊಂಡು ಹೋಗಬೇಕಾಗಿದೆ. ಇದನ್ನು ಲೆಕ್ಕಚಾರ ಹಾಕಿ ನೋಡಿದರೆ ರೋಡ್ ಟ್ರಾನ್ಸ್‌ಪೋರ್ಟ್ ಬಸ್‌ನಲ್ಲಿ ಪ್ರಯಾಣ ಮಾಡುವವರು 18 ಮೈಲಿ ದೂರ ಇರುವ ಪ್ರದೇಶಕ್ಕೆ 80 ಮೈಲಿ ಪ್ರಯಾಣ ಮಾಡಿ 4 ರೂಪಾಯಿಗಳಷ್ಟು ಹಣವನ್ನು ಒಬ್ಬೊಬ್ಬ ಮನುಷ್ಯನೂ ಕೊಡುತ್ತಾ ಇದ್ದಾನೆ. ಈ ಪ್ರಕಾರ ಸುಮಾರು 10 ಲಕ್ಷ ರೂಪಾಯಿ ಪಬ್ಲಿಕ್ ಮನಿ ವೇಸ್ಟ್ ಆಗುತ್ತಾ ಇದೆ. ಇದು ಸರಕಾರದ ಹಣ ಅಲ್ಲ ದೇಶದ ಹಣ ಅಲ್ಲ ಎಂದರೆ ಅದು ಬೇರೆ ಮಾತಾಗುತ್ತದೆ. ಆ ದೃಷ್ಟಿಯಿಂದ ಆ ಮಾರ್ಗವನ್ನು ರಚನೆ ಮಾಡಲು 10 ಅಲ್ಲ 20 ಲಕ್ಷ ರೂಪಾಯಿಗಳಾದರೂ ಪರವಾಗಿಲ್ಲ ಯಾವ ರೀತಿಯ ತೆರಿಗೆಯನ್ನು ಹಾಕಿದರೂ ಕೂಡ ಕೊಡುತ್ತೇವೆ, ಅದನ್ನು ಮಾಡಿಸಿ ಕೊಡಬೇಕೆಂದು ಹೇಳುತ್ತೇನೆ. ಈಗ ಅನೇಕ ರೀತಿಯಲ್ಲಿ ತೆರಿಗೆಗಳನ್ನು ಹಾಕುತ್ತಾ ಇದ್ದೀರಿ; ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ್ ಹಾಕಿದ್ದೀರಿ ಎಷ್ಟೋ ಜನರು ಅದನ್ನು ವಿರೋಧಿಸಿದರೂ ಈಗ ಸದ್ಯಕ್ಕೆ ಮಾತ್ರ ಇದನ್ನು ಹಾಕಿರುವುದು, ಮುಂದೆ ಇದು ಇರುವುದಿಲ್ಲ ಎಂದು ಹೇಳಿ ಭಾಲ್ಕಿನಲ್ಲಿ ಪೂರ್ಣವಾಗಿ ಹಣ ವಸೂಲು ಮಾಡಿದ್ದಾರೆ. ಎಷ್ಟೋ ಜನ ಮಂಗಳ ಸೂತ್ರ ಸಹ ಮಾರಿ ಹಣ ಕೊಟ್ಟಿರುವ ಪ್ರಸಂಗಗಳು ಕೂಡ ಇವೆ. ಇಂತಹ ಅಪಚಾರ ಇವತ್ತು ನಮ್ಮ ಸರಕಾರದ ಕಡೆಯಿಂದ ನಡೆಯುತ್ತಾ ಇದೆ. ಕಾರಂಜಿ ಪ್ರಾಜಕ್ಟಿನ ಬಗ್ಗೆ ಹೇಳಿದ್ದಾರೆ, ಈ ಪ್ರಾಜೆಕ್ಟು ಆಗಬೇಕೆಂಬ ವಿಷಯ ನಮ್ಮ ಹೈದರಾಬಾದು ಪ್ರದೇಶದಲ್ಲಿ 30 ವರ್ಷಗಳಿಂದಲೂ ಇದೆ. ಈಗ ಅದಕ್ಕೆ ಅಂದಾಜು ಆಗಿದೆ ಎಂದು ಕೇಳಿದ್ದೇವೆ. 4—5 ಕೋಟಿ ರೂಪಾಯಿಗಳು ಆಗಬಹುದು, ಅದು ಈ ವರೆಗೂ ಆಗಿಲ್ಲ. ಆಂಧ್ರ ಪ್ರದೇಶದಲ್ಲಿ ಜಹೀರಾಬಾದು ಮತ್ತು ಬೀದರ್ ಪ್ರದೇಶದಲ್ಲಿ ಈ ವರ್ಷ ಅದಕ್ಕೆ ಖರ್ಚು ತೆಗೆದು ಬಿಟ್ಟು ಹಣ ಮಂಜೂರು ಮಾಡಿದ್ದಾರೆ ಕೆಲಸ ನಡೆದಿವೆ ಎಂದು ಕೇಳಿದ್ದೇವೆ. ನಮ್ಮ ಭಾಗದಲ್ಲಿ ಸರ್ವೆಯೂ ಈ ಕೆಲಸ ಆಗುತ್ತದೆ ಎಂದು ತಿಳಿದುಕೊಂಡಿದ್ದರೂ, ಹೋದ ಸಾರಿ ಶ್ರೀಮಾನ್ ನಿಜಲಿಂಗಪ್ಪನವರೂ ಕೂಡ ಬಹಳ ಶೀಘ್ರವಾಗಿ ಇದನ್ನು ಮಾಡಿಸುತ್ತೇವೆ ಎಂದು ಪ್ರಾಮಿಸ್ ಮಾಡಿದ್ದರು. ಅದು ಈಗ ಏನಾಗಿದೆಯೊ ಗೊತ್ತಿಲ್ಲ. ಅಂತೂ ಬೀದರ್ ಜಿಲ್ಲೆಯಲ್ಲಿ ಶಿಕ್ಷಣದ ಕೆಲಸವಾಗಲಿ, ರಸ್ತೆಗಳ ಕೆಲಸವಾಗಲಿ, ನೀರಾವರಿ ಸೌಲಭ್ಯವಾಗಲೀ ಯಾವುದೂ ಸಮರ್ಪಕವಾಗಿ ನಡೆದಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ, ದೇಶದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಆಗುತ್ತಿವೆ ಎಂದು ಹೇಳುವ ಮಾತು ಸುಳ್ಳು ಮಾತು ಅದರಲ್ಲಿ ಸರಕಾರದವರು ವಿಫಲರಾಗಿದ್ದಾರೆ ಎಂದು ನಾನು ಹೇಳ ಬಯಸುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ಮಾತೇನೆಂದರೆ ಇಲ್ಲಿ ಲಾ ಅಂಡ್ ಆರ್ಡರ್ ಯಾವ ರೀತಿ ಇದೆ ಎಂದು ಹೇಳಬೇಕಾದರೆ ಇದನ್ನು ಒಂದು ಪೋಲೀಸ್ ರಾಜ್ಯದಂತೆ ಮಾಡಿದ್ದೀರಿ ಎಂದು ಹೇಳಲೇಬೇಕಾಗಿದೆ. ಇದು ಸರಕಾರದ ಮೇಲೆ ನನ್ನ ಮುಖ್ಯವಾದ ಒಂದು ಆಕ್ಷೇಪ ಇದೆ. ಇವೊತ್ತು ದೇಶದಲ್ಲಿ ಕರಪ್ಷನ್ ವಿಪರೀತವಾಗಿದೆ, ಅದರ ಬಗ್ಗೆ ರಾಜ್ಯಪಾಲರು ಯಾವ ಒಂದು ಮಾತನ್ನೂ ಹೇಳಿಲ್ಲ. ಇವೊತ್ತು ದೇಶದ ಪರಿಸ್ಥಿತಿ ಏನಾಗಿದೆ ಎಂದರೆ ಒಂದು ಕಡೆ ಕರಪ್ಷನ್ ತುಂಬಿ ತುಳುಕಿ ತಾಂಡವನೃತ್ಯ ಮಾಡುತ್ತಿದೆ, ಬ್ಲಾಕ್ ಮಾರ್ಕೆಟ್ ನಡೆಯುತ್ತಾ ಇದೆ ಪೋಲೀಸ್‌ನವರ ದೌರ್ಜನ್ಯ ನಡೆಯುತ್ತಿದೆ, ಪೋಲಿಸಿನ ನಾದರಶಾಹಿ, ಕಾಂಗ್ರೆಸಿನ ತಾನಾ ಶಾಹಿ ಮಧ್ಯದಲ್ಲಿ ಲೋಕದ ಪರಿಸ್ಥಿತಿ ಕೆಟ್ಟಿದೆ, ಇಂತಹ ತುರ್ತು ಪರಿಸ್ಥಿತಿಯ ಕಾಲದಲ್ಲಿ ಎಲ್ಲರೂ ಒಂದಾಗಿ ದೇಶವನ್ನು

(ಶ್ರೀ ಎಸ್. ಭೀಮಣ್ಣ)

ಮುಂದಕ್ಕೆ ತರುವ ಪ್ರಯತ್ನ ಮಾಡಬೇಕು, ಚೈನಾದವರನ್ನು ಹಿಂದಕ್ಕೆ ಓಡಿಸಬೇಕು ; ಹಾಗಿರುವಾಗ ಜನರಲ್ಲಿ ಒಂದು ರೀತಿಯ ಬೇಸರವನ್ನುಂಟು ಮಾಡತಕ್ಕ ಪರಿಸ್ಥಿತಿಯನ್ನು ಕಲ್ಪನೆ ಮಾಡುವುದು ಸರಿಯಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ನಮ್ಮ ಭಾರತದ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮದ ವಿಷಯವಾಗಿ ಎರಡು ಮಾತುಗಳನ್ನು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. ಜನವರಿ 26ನೆಯ ತಾರೀಖು ನಾವು ತೆಗೆದುಕೊಳ್ಳುವ ಪ್ಲೆಡ್ಜ್ ಬಾರಿಯ ನಾಟಕ, ಅದರಿಂದ ಜನರ ಭಾವನೆ ಬದಲಾವಣೆಯಾಗುವುದಿಲ್ಲ ಹಿಂದೆ ರಾಣಾಪ್ರತಾಪ ಚಿತ್ತೂರನ್ನು ತೆಗೆದುಕೊಳ್ಳುವಾಗ ಹುಲ್ಲಿನಮೇಲೆ ಮಲಗುವುದಾಗಿಯೂ ಹಿಡಿದ ಕೆಲಸವಾಗುವವರೆಗೂ ಗಾದಿಯ ಮೇಲೆ ಮಲಗುವುದಿಲ್ಲವೆಂದೂ ಒಂದು ರೀತಿ ಪ್ರತಿಜ್ಞೆಮಾಡಿದ್ದನು. ಅದೇ ಈಗ ಬಾಯಲ್ಲಿ ಹೇಳುವುದೊಂದು ಕೈನಲ್ಲಿ ಮಾಡುವುದೊಂದು ಈ ರೀತಿಯಾಗಿದೆ, ಮಂತ್ರಿಗಳ ಸಂಖ್ಯೆ ಕಡಮೆ ಮಾಡುವುದರ ವಿಚಾರದಲ್ಲಿ ಏನು ಮಾಡುತ್ತಾರೆಂಬುದೇ ಖಾತ್ರಿ ಇಲ್ಲ. ಚೈನಾದವರ ಆಕ್ರಮಣ ಭೀತಿ ಇನ್ನೂ ತಪ್ಪಿಲ್ಲ ಒಂದು ಇಂಚು ಭೂಮಿಯ ಮೇಲೆ ಚೈನಾದವರು ಇರುವವರಿಗೆ ಮಂತ್ರಿಮಂಡಲದ ಎಲ್ಲಾ ಮಂತ್ರಿಗಳು ಗಾದಿಯ ಮೇಲೆ ಮಲಗುವುದಿಲ್ಲ Bunglow ದಲ್ಲಿ ಇರುವುದಿಲ್ಲ ಈ ಪ್ರಕಾರ ಶಪಥ ವಹಿಸಿದರೇ ಬಹು ಜನರಲ್ಲಿದ್ದ ಉತ್ಸಾಹ ಕಾಯಂ ಇರುತ್ತದೆ. ಇಲ್ಲದಿದ್ದರೆ ಇರುವುದಿಲ್ಲ. ಅಬಗ್ಗೆ ಏನು ಮಾಡುತ್ತಾರೋ ತಿಳಿಯದು. ಹೇಗಾದರೂ ಮಾಡಿ ನಮ್ಮ ಭೂಮಿಯಿಂದ ಅವರು ದೂರ ಸರಿಯುವಂತೆ ಮಾಡಬೇಕು. ಇಷ್ಟು ಹೇಳಿ ಅವಕಾಶ ಕೊಟ್ಟ ಸಭಾಧ್ಯಕ್ಷರನ್ನು ವಂದಿಸುತ್ತೇನೆ.

Mr. SPEAKER.—Before I call upon anybody, I want to mention the time taken by some members. Sri Devegowda mentioned that his party did not get adequate representation and time. I would like to tell him that the following members have taken more time than he fixed :—

Sri Gangadhara Namoshi, against 15 minutes allotted, took 27 minutes ;

Sri G. V. Gowda, against 15 minutes allotted, took 24 minutes ;

Sri Madappa Gowda, against 15 minutes, took 17 minutes ;

Sri B. P. Kadam, against 15 minutes allotted, took 27 minutes.

I do not want the members to feel unhappy ; I am only trying to explain how situations arise. Sri C. J. Mukkannappa was given 20 minutes but he actually took 34 minutes.

I am half inclined to accept the suggestion that the debate should go on till the evening and tomorrow the Ministers can reply. But I want the whips of the parties to co-ordinate their efforts and request their respective members to adhere to the time allowed to each one of them Now Smt. Murari Kamalamma will speak.

†Smt. MURARI KAMALAMMA (Hospet).—(*Spoke in Telugu*)

2-00 P.M.

†ಶ್ರೀ ಜಿ. ಮರುಳಪ್ಪ (ಕೊಡಗು).—ಸ್ವಾಮೀ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲೆ ಅನೇಕ ಜನ ಸ್ನೇಹಿತರು ಈಗ್ಗೆ ಮೂರು ನಾಲ್ಕು ದಿನಗಳಿಂದಲೂ ಇಲ್ಲಿ ಮಾತನಾಡಿದ್ದಾರೆ. ಈ ಸಾರಿ ರಾಜ ಪಾಲರು ಕನ್ನಡದಲ್ಲಿ ಭಾಷಣಮಾಡಿದುದನ್ನು ನೋಡಿ ನಮಗೆಲ್ಲ ಸಂತೋಷವಾಯಿತು ಎಂದು ಪ್ರಾಮುಖ್ಯವಾಗಿ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರಿಂದ ಹಿಡಿದು ಎಲ್ಲರೂ ಹೇಳಿದರು. ಅದರಂತೆ ನಾನು ಅದಕ್ಕಾಗಿ ಸಂತೋಷಪಡುತ್ತೇನೆ. ಕನ್ನಡ ರಾಜ್ಯವನ್ನು ಕರ್ಣಾಟಕ ಎಂದು

ಕರೆಯಬೇಕೆಂದು ಕೆಲವರು ಹೇಳುತ್ತಿದ್ದಾರೆ, ಕೆಲವರು ಮೈಸೂರೇ ಇರಬೇಕೆಂದು ಹೇಳುತ್ತಿದ್ದಾರೆ. ಇದು ಹೇಗಾದರೂ ಇರಲಿ. ಇದಂತೂ ಕನ್ನಡ ರಾಜ್ಯ. ನಮ್ಮ ಗವರ್ನರವರೂ ಕನ್ನಡ ರಾಜ್ಯಕ್ಕೆ ಸೇರಿದವರು ಅದರಂತೆ ಕನ್ನಡದಲ್ಲಿ ಭಾಷಣ ಮಾಡಿದರು. ಆದರೆ ನಮ್ಮ ರಾಜ್ಯ ಪಾಲರನ್ನು ಇಲ್ಲಿಂದ ತೆಗೆದು ಮದರಾಸಿಗೆ ರಾಜ್ಯಪಾಲರಾಗಿ ವರ್ಗಾಯಿಸುತ್ತಾರೆಂದು ಇಲ್ಲಿಗೆ ಮದರಾಸಿನಿಂದಲೋ ಅಥವಾ ಬೇರೆ ಕಡೆಯಿಂದಲೋ ಮತ್ತೊಬ್ಬರು ರಾಜ್ಯಪಾಲರಾಗಿ ಬರುತ್ತಾರೆಂದೂ ಅಲ್ಲದೆ ಇಲ್ಲಿರುವ ಪ್ರಜೆಗಳೇ ಕೆಲವರು ಸರಕಾರದ ಮೇಲೆ ಒತ್ತಾಯ ತಂದು ಈ ರಾಜ್ಯಪಾಲರನ್ನು ಹೊರಗಡೆಗೆ ಕಳುಹಿಸುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆಂದೂ ಕೇಳುತ್ತಿದ್ದೇವೆ. ಇವೊತ್ತು ಇಲ್ಲಿಗೆ ಹೊರಗಿನಿಂದ ಬಂದ ರಾಜ್ಯಪಾಲರನ್ನು ಕನ್ನಡದಲ್ಲಿ ಭಾಷಣ ಮಾಡಬೇಕು ಇಲ್ಲದೇ ಇದ್ದರೆ ಪ್ರೊಟೆಸ್ಟು ಮಾಡುತ್ತೇವೆಂದು ಹೇಳಿದರೆ ಅವರಿಗೆ ಕನ್ನಡ ಬಾರದೇ ಇದ್ದರೆ ಆಗ ಅವರು ಯಾವ ಭಾಷೆಯಲ್ಲಿ ಭಾಷಣ ಮಾಡಬೇಕು ? ಇಲ್ಲಿನ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡದೇ ಇದ್ದರೆ ಅದಕ್ಕಾಗಿ ಪ್ರೊಟೆಸ್ಟು ಮಾಡುತ್ತೇವೆಂದು ಹೇಳುವಂತೆ ಮಹಾರಾಷ್ಟ್ರದಿಂದಲೋ ಇಲ್ಲ ಮಲಯಾಳದ ಕಡೆಯಿಂದಲೋ ಬಂದ ರಾಜ್ಯಪಾಲರು ಕನ್ನಡದಲ್ಲಿಯೇ ಭಾಷಣ ಮಾಡಬೇಕು ಎಂದರೆ ಅವರಿಗೆ ಕನ್ನಡವೇ ಬರುವುದಿಲ್ಲ. ಆಗ ಬೇರೆ ಭಾಷೆಯಲ್ಲಿ ಭಾಷಣ ಮಾಡುತ್ತಾರೆ. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಹಾಗೆ ಒಪ್ಪಿಕೊಳ್ಳದೇ ಹೋದರೆ ಅದು ಮಹಾಪರಾಧವಾದಂತಾಗುತ್ತದೆ. ಯಾರಾದರೂ ತಮ್ಮಲ್ಲಿಗೆ ಬಂದು ಈಗಿರುವ ರಾಜ್ಯಪಾಲರನ್ನು ಬೇರೆ ಕಡೆಗೆ ಹೋಗಬೇಕು ಎಂದು ಪ್ರಯತ್ನ ಮಾಡುತ್ತಿದ್ದರೆ ಅದು ಮಹಾ ಪಾಪ ಎಂದು ಹೇಳಬೇಕಾಗುತ್ತದೆ. ಅದೂ ಅಲ್ಲದೆ ಸರಕಾರ ಕೂಡ ಅಂತಹ ಪ್ರಯತ್ನ ಮಾಡುತ್ತದೆ ಎಂಬ ವದಂತಿ ಇದೆ. ಸರಕಾರ ಕೂಡ ಪ್ರಯತ್ನ ಮಾಡಿ ಇವರನ್ನು ಬೇರೆ ಕಡೆಗೆ ಕಳುಹಿಸಕೂಡದು ಎಂದು ಒತ್ತಾಯ ಮಾಡಿ ಇವರನ್ನು ಇಲ್ಲಿಯೆ ಉಳಿಸಿ ಕೊಳ್ಳಲು ಪ್ರಯತ್ನ ಮಾಡಬೇಕೆಂದು ಇಲ್ಲಿ ಹೇಳುತ್ತಿದ್ದೇನೆ.

ಎರಡನೆಯದಾಗಿ ಆಹಾರ ಧಾನ್ಯಗಳ ಬೆಲೆಯ ವಿಚಾರದಲ್ಲಿ ಇಂಡಿಯಾ ಸರಕಾರದವರು ಹಾಗೂ ಮೈಸೂರು ಸರಕಾರದವರು ಯಾವಾಗ ಏನು ಬೇಕಾದರೂ ಸಹಾಯ ಮಾಡುತ್ತೇವೆ, ಈ ವರ್ಷ ಪ್ರೊಡಕ್ಷನ್ನು ಇಷ್ಟು ಜಾಸ್ತಿಯಾಗಿದೆ, ಹೋದ ವರ್ಷಕ್ಕಿಂತ ಈ ವರ್ಷ ಇಂಪೋರ್ಟನ್ನು ಕಡಮೆ ಮಾಡಲಾಗಿದೆ, ಹೆಚ್ಚು ಬೆಳೆ ಬೆಳೆಯಲು ಎಲ್ಲ ಪ್ರಯತ್ನ ಮಾಡುತ್ತಿದ್ದೇವೆ, ನೀವು ಯಾವುದಕ್ಕೂ ಭಯಪಡಲು ಕಾರಣವಿಲ್ಲ, ಹೆದರಬೇಡಿ ಒಂದು ಕಿಲೋ ಧಾನ್ಯಕ್ಕೆ ಎರಡು ರೂಪಾಯಿಗಳಷ್ಟು ಆದರೂ ಚಿಂತೆಯಿಲ್ಲ ಕೊಟ್ಟು ತೆಗೆದುಕೊಳ್ಳಿ. ನಮ್ಮ ಆಹಾರದ ಪರಿಸ್ಥಿತಿ ಬಹಳ ಸೇಫ್ ಆಗಿದೆ ಎಂದು ಬಹಳ ದಿನಗಳಿಂದಲೂ ಹೇಳುತ್ತಲೇ ಬರುತ್ತಿದ್ದಾರೆ. ಈಗ್ಗೆ ಸುಮಾರು 15-16 ವರ್ಷಗಳ ಹಿಂದೆ ಬೆಲೆ ಏನು ಇತ್ತು, ಈಗ ಇರುವ ಬೆಲೆಯೇನು ? ಇದನ್ನು ಯಾರಾದರೂ ಯೋಚನೆ ಮಾಡಿದ್ದಾರೇನು ? ಸುಮ್ಮನೆ ನಾವು ಇಷ್ಟು ಹೆಚ್ಚಿನ ಪ್ರಮಾಣದ ದವಸವನ್ನು ಬೆಳೆದಿದ್ದೇವೆ, ಇಷ್ಟು ಲಕ್ಷ ಎಕರೆಗಳಷ್ಟು ಭೂಮಿಯಲ್ಲಿ ಬೆಳೆ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆಯೇ ಹೊರತ ಇದೇನಾದರೂ ಕಾರ್ಯಗತವಾಗಿದೆಯೇ ಇಲ್ಲವೇ, ಹಾಗಿಲ್ಲದೇ ಹೋದರೆ ಏತಕ್ಕೋಸ್ಕರ ಆಗಲಿಲ್ಲ ? ಇದೇ ರೀತಿಯಾಗಿ ಬೆಲೆ ಏರುತ್ತಿರುವುದನ್ನು ತಡೆಗಟ್ಟಲು ಏನಾದರೂ ಕಾರ್ಯಕ್ರಮ ಕೈಗೊಳ್ಳಬೇಕು ಎನ್ನುವುದಕ್ಕೆ ಯಾರೂ ಯೋಚನೆ ಮಾಡಲಿಲ್ಲ ಎಂದರೆ ಅದು ತಪ್ಪಾಗಲಾರದು. ಮೈನರು ಇರಿಗೇಷನ್ನು ಸ್ಕೀಮಿನ ಬಗ್ಗೆ ಬೇಕಾದಷ್ಟು ಮಾಡಿದ್ದೇವೆ, ಇಷ್ಟು ಪಂಪು ಸೆಟ್ಟುಗಳನ್ನು ಕೊಟ್ಟಿದ್ದೇವೆ, ಇಷ್ಟು ಕೆರೆಗಳನ್ನು ಕಟ್ಟಿಸಿದ್ದೇವೆ ಎಂದು ದೊಡ್ಡದಾಗಿ ಬಾಯಲ್ಲಿ ಹೇಳುತ್ತಿದ್ದಾರೆ, ಅಲ್ಲದೆ ಮುಂದಿನ ವರ್ಷ ನಿಮಗೇನೂ ತೊಂದರೆಯಿರುವುದಿಲ್ಲ ಬೇಕಾದಷ್ಟು ಧಾನ್ಯಗಳು ಬರುತ್ತವೆ ಎನ್ನುವ ಭಾವನೆ ಬರುವಂತೆ ಹೇಳುತ್ತಿದ್ದಾರೆ. ಅವರು ಹೇಳಿದಂತೆ ಈ ಸಾರಿ ಬೆಲೆಗಳನ್ನು ನೋಡಿದರೆ ಹಿಂದಿದ್ದುದಕ್ಕಿಂತ ಶೇಕಡ ಐವತ್ತರಷ್ಟು ಬೆಲೆ ಜಾಸ್ತಿಯಾಗಿರುತ್ತದೆ. ಬರೀ ಭಾಷಣ ಮಾಡುವುದರಿಂದ ಪ್ರೊಡಕ್ಷನ್ನು ಜಾಸ್ತಿ ಬರುವುದಿಲ್ಲ. ಇಷ್ಟು ಪಂಪು ಸೆಟ್ಟುಗಳನ್ನು ಕೊಟ್ಟಿದ್ದೇವೆಂದು ಹೇಳಿದರೆ ಪ್ರೊಡಕ್ಷನ್ ಜಾಸ್ತಿಯಾಗುವುದಿಲ್ಲ. ಸರಕಾರದವರು ಏನೇನು ಸೌಲಭ್ಯಗಳನ್ನು ಒದಗಿಸುತ್ತಿದ್ದಾರೋ ಆ ಸೌಲಭ್ಯಗಳಿಂದ ರೈತನಿಗೆ ಎಷ್ಟುಮಟ್ಟಿಗೆ ಪ್ರಯೋಜನವಾಗಿದೆ ? ಹಾಗೆ ಪ್ರಯೋಜನವಾಗದೇ ಇದ್ದರೆ ಯಾವ ಕಾರಣದಿಂದ ಆಗಲಿಲ್ಲ, ಅವನಿಗಿರತಕ್ಕ ತೊಂದರೆಗಳೇನು ? ಅದನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕು, ಆ ರೀತಿ ಶೀಘ್ರವಾಗಿ ಬಗೆಹರಿಸಲು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ಬಗೆಗೆ ಯಾರೂ ಕುಳಿತುಕೊಂಡು ಯೋಚನೆ ಮಾಡುತ್ತಿಲ್ಲ. ಇವರು ಹೇಳುವುದೆಲ್ಲ ಬರಿ false ಎಂದು ಹೇಳಬೇಕಾಗಿದೆ. ಬೆಲೆಗಳು ಜಾಸ್ತಿಯಾಗುತ್ತಿವೆಯೇ ಹೊರತು ಅದನ್ನು ಕಡಮೆ ಮಾಡುವುದಕ್ಕೆ ಸಾಧ್ಯವೇ ಆಗಿಲ್ಲ. ಇದಕ್ಕೆ ಕಾರಣಗಳೇನು ಎನ್ನುವುದರ ಕಡೆಗೆ ಗಮನ ಕೊಟ್ಟಂತೆ ಕಾಣುತ್ತಿಲ್ಲ. ಅಗ್ರಿಕಲ್ಚರ್ ಇಲಾಖೆಯಲ್ಲಿ ಸುಮಾರು ನೂರಾರು ಜನರಿದ್ದರೂ ಅವರಿಂದ ರೈತರಿಗೇನೂ ಅನುಕೂಲವಾಗುತ್ತಿಲ್ಲ. ಅಲ್ಲಿರುವವರು ರೀ ಆರ್ಗನೈಜು ಆದಮೇಲೆ ಎಲ್ಲ ಕೆಳಗೆ ಹೋಗುತ್ತೇವೆ, ಯಾರು ಮೇಲೆ ಬರುತ್ತಾರೆ, ಯಾರು ರಿಟೈರು ಆಗುತ್ತಾರೆ ಮತ್ತು ಎಷ್ಟು ವರ್ಷ

(ಶ್ರೀ ಜಿ. ಮರುಳಪ್ಪ)

ಗಳ ಕಾಲ ಒಟ್ಟರಿಗೆ ಎಕ್ಸ್‌ಟೆನ್‌ಷನ್ನು ಕೊಡಲಾಗಿದೆ; ಇವೊತ್ತು ಉತ್ತರ ಕರ್ನಾಟಕದಿಂದ ಬಂದವರು ನಾವು, ಹೈದರಾಬಾದು ಕರ್ಣಾಟಕದಿಂದ ಬಂದವರು ನಾವು, ಮದರಾಸು ಹಾಗೂ ಕೊಡಗಿನ ಕಡೆಯಿಂದ ಬಂದವರು ನಾವು, ಇದಕ್ಕೆ ಯಾವ ರೀತಿಯಾದ ಪ್ರಭಾವ ತರಬೇಕು, ಎಂದು ರಾಜಕೀಯ ಮಾಡುತ್ತಿದ್ದಾರೆಯೇ ಹೊರತು ನಾವು ಇವೊತ್ತು ರೈತರ ದುಡ್ಡಿನಿಂದ ಸಂಬಳ ಪಡೆಯುತ್ತಿದ್ದೇವೆ, ಬನ್ನಿ ಇವೊತ್ತು ನಿಮಗೆ ಸಹಾಯ ಮಾಡೋಣ ಎಂದು ಅವರವರ ಜವಾಬುದಾರಿಗಳೇನು ಎನ್ನುವುದನ್ನು ತಿಳಿದುಕೊಂಡು ಯಾರೂ ಇಲ್ಲಿ ಕೆಲಸ ಮಾಡುತ್ತಿಲ್ಲ. ಯಾರು ಕೆಲಸಮಾಡದೆ ಇರುತ್ತಾರೋ ಅಂಥವರಮೇಲೆ ಸರ್ಕಾರದವರಿಗೆ ಕಾರ್ಯಕ್ರಮ ಕೈಗೊಳ್ಳಲು ಅವಕಾಶವೇ ಇಲ್ಲ. ಹೀಗೆ ಯಾವ ಕಾರಣದಿಂದ ನೂರಾರು ದೊಡ್ಡದೊಡ್ಡ ಹುದ್ದೆಗಳು 2 3 ವರ್ಷಗಳಿಂದ ಖಾಲಿ ಬಿದ್ದಿವೆ ಎಂಬುದೇ ನನಗೆ ಗೊತ್ತಾಗುತ್ತಿಲ್ಲ ಸರ್ಕಾರದಲ್ಲಿ ಇಷ್ಟು ಇನ್‌ಎಫಿಷಿಯೆನ್ಸಿಯೇಕೆ ? ಹೀಗಿರುವಾಗ ಹೆಚ್ಚು ಆಹಾರ ಧಾನ್ಯವನ್ನು ಉತ್ಪತ್ತಿಮಾಡುವುದೆಂದರೆ ಹೇಗೆ? ಸುಮ್ಮನೆ ರೈತರಿಗೆ ನೀವು ಹಾಗೆ ಮಾಡಿ, ಹೀಗೆ ಮಾಡಿ ಎಂದರೆ ಆಹಾರಧಾನ್ಯಗಳ ಉತ್ಪತ್ತಿ ಜಾಸ್ತಿಮಾಡಿದಂತಾಯಿತೇ ? ರೈತನಿಗೆ ಹೀಗೆಲ್ಲಾ ಜಬರ್ದಸ್ತಿನಿಂದ ಕಷ್ಟಪಡಬೇಕೆಂದು ಹೇಳುತ್ತಿದ್ದಾರೆ. ಸರ್ಕಾರದವರು ಹೀಗೆ ಹೇಳದಿದ್ದರೂ ರೈತನೇನೋ ಕಷ್ಟಪಡಲೇಪಡಬೇಕು. ಆದರೆ ಸರ್ಕಾರದವರು ಆ ರೈತನಿಗೆ ನೀನು ಹೀಗೆ ಕಷ್ಟಪಡಬೇಕು ಎಂಬುದನ್ನಾದರೂ ಸರಿಯಾಗಿ ಹೇಳುವುದಕ್ಕಾದರೂ ಬರಬೇಡವೇ ? ಏನೇ ಆಗಲೀ ವ್ಯವಸಾಯಗಾರರ ಕಷ್ಟವನ್ನು ಮೊದಲು ಪರಿಹರಿಸಬೇಕೆಂದು ಹೇಳುತ್ತೇನೆ. ಇಷ್ಟೊಂದು ಹುದ್ದೆಗಳನ್ನೇಕೆ ಇವರು ಭರ್ತಿಮಾಡಲಿಲ್ಲ ಎಂದು ಕೇಳುತ್ತೇನೆ! ಈಗಿರತಕ್ಕ ವ್ಯವಸಾಯದ ಮಂತ್ರಿಗಳು ವ್ಯವಸಾಯಗಾರನಮಗ ಇಂಥವರು ಈ ದಿನ ಈ ಸ್ಥಾನಕ್ಕೆ ಬಂದಿರುವುದರಿಂದ ಇನ್ನು ಮುಂದೆ ಈ ಇಲಾಖೆ ಮುಂದುರಿಯಬಹುದೆಂದು ನಾವೆಲ್ಲರೂ ಭಾವಿಸಿದ್ದೆವು. ಆದರೆ ಈ ಜನರು ಈ ಅಧಿಕಾರಸ್ಥಾನಕ್ಕೆ ಬಂದಕೊಡಲೇ ಅವರಿಗೆ ಅದೇನು ರೋಗ ಬರುತ್ತದೆಯೋ ಗೊತ್ತಿಲ್ಲ, ಅವರು ಅಧಿಕಾರಕ್ಕೆ ಬರುವ ಮುನ್ನ ಹಾಗೆಮಾಡಬೇಕು, ಹೀಗೆಮಾಡಬೇಕು ಎಂದೆಲ್ಲಾ ಹೇಳುತ್ತಿದ್ದು ಅಧಿಕಾರಕ್ಕೆ ಬಂದ ಕೂಡಲೇ ಆ ಕುರ್ಚಿಯಮೇಲೆ ಕುಳಿತಕೂಡಲೇ ಅಥವಾ ಆ ಕಾರಿನಲ್ಲಿ ಕುಳಿತಕೂಡಲೇ ಎಲ್ಲಿ ಇವರಿಗೆ ರಾಹು ಹಿಡಿಯುತ್ತದೆಯೋ ತಿಳಿಯದು, ಅವರು ಹೇಳುತ್ತಿದ್ದುದನ್ನೆಲ್ಲಾ ಮರತೇ ಬಿಡುತ್ತಾರೆ. ಆದ್ದರಿಂದ ಈ ಇಲಾಖೆಯಬಗ್ಗೆ ಕೂಡಲೇ ಹೆಚ್ಚಿನ ನಿಗಾ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಮೈನರ್ ಇರಿಗೇಷನ್ ವಿಚಾರಕ್ಕೆ ಬಂದರೆ ಅನೇಕ ಕಡೆಗಳಲ್ಲಿ ಬಹಳ ಕಡಮೆ ಖರ್ಚಿನಿಂದ ರೈತನಿಗೆ ಹೆಚ್ಚಿನ ಅನುಕೂಲ ಸಿಕ್ಕುವಂತೆ ಮಾಡಬಹುದು. ನಮ್ಮ ಕಡೂರು ಜಿಲ್ಲೆಯಲ್ಲಿ 2-3ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ 3,000 ಎಕರೆಗೆ ನೀರುಬರುತ್ತದೆ. ಆದರೆ ಸರ್ಕಾರದವರು ಅನೇಕ ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಕಂಡುಹಿಡಿದಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಅವು ಕಾರ್ಯಗತವಾಗಬೇಕಾದರೆ ನನ್ನ ಮೊಮ್ಮಗನಕಾಲಕ್ಕೂ ಆಗುತ್ತವೆಯೋ ಅದೂ ಇಲ್ಲವೋ ಗೊತ್ತಿಲ್ಲ. ನಾವು ಜಾಗ್ರತೆ ಕೆಲಸ ನಡೆಯಲಿ ಎಂದರೆ ಆ ಅಬ್‌ಜೆಕ್ಷನ್, ಈ ಅಬ್‌ಜೆಕ್ಷನ್ ಟೆಕ್ನಿಕಲ್ ಅಬ್‌ಜೆಕ್ಷನ್ ಹೀಗೆ ಒಂದಲ್ಲಾ ನಾನಾ ತಕರಾರುಗಳನ್ನೊಡ್ಡಿ ಜನರ ಪ್ರಾಣಹೋಗುತ್ತಿದ್ದರೂ ನೀರಿಲ್ಲದೆ ಜನರು ಸಾಯುತ್ತಿದ್ದರೂ ಅವರ ಅಬ್‌ಜೆಕ್ಷನ್ ಮಾತ್ರ ಮುಗಿಯುವಂತಿಲ್ಲ. ಇದು ಸರ್ಕಾರದವರ ದಕ್ಷತೆಯನ್ನು ಎತ್ತಿ ತೋರಿಸುತ್ತಿದೆ. ಉದಾಹರಣೆಗೆ ಹೇಳುವುದಾದರೆ : ಶರಾವತಿ ವಿದ್ಯುಚ್ಛಕ್ತಿಯನ್ನು ಜುಲೈನಲ್ಲಿ ಕೊಡುತ್ತೇವೆಂದು ಹೇಳಿದರು. ಅವರು ಹಾಗೆ ಜುಲೈ ಎಂದು ಹೇಳಿದ್ದರೆ ನಾವು ಅದನ್ನು ಡಿಸೆಂಬರ್ ಎಂದು ಭಾವಿಸಬೇಕು ಎಂದು ಕಾಣುತ್ತದೆ. ಸದ್ಯಕ್ಕೆ 89 ಸಾವಿರ ಕಿ. ವಾ. ಪವರನ್ನು ತಯಾರುಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಈ ಪವರನ್ನು ಹೇಗೆ ಬಳಸಬೇಕು. ಯಾವ ಯಾವ ಮನೆಗಳಿಗೆ ಕೊಡಬೇಕು, ಎಲ್ಲಿ ವ್ಯವಸಾಯಕ್ಕೆ ಕೊಡಬೇಕು, ಹೇಗೆ ಎಂಬುದನ್ನು ಆ ಬೋರ್ಡಿನವರು ಆಲೋಚನೆಮಾಡಿದಂತೆ ಕಾಣುತ್ತಿಲ್ಲ. ಆ ಬೋರ್ಡಿನವರು ಮಾಡತಕ್ಕ ಉದ್ಯೋಗವೇನೆಂಬುದೇ ತಿಳಿಯುತ್ತಿಲ್ಲ. ಅವರ ಈ ಉದಾಶೀನತೆಯಿಂದ ಮುಂದೆ ಇಷ್ಟು ಪವರನ್ನೂ ವೇಸ್ಟ್‌ಮಾಡಬೇಕಾಗಿ ಬರಬಹುದು. ಇಲಾಖೆ ಇಷ್ಟು ಇನ್‌ಎಫಿಷಿಯೆನ್ಸಿಯಿಂದ ಕೆಲಸ ಮಾಡುತ್ತಿದ್ದರೆ ದೇಶದಲ್ಲಿ ಹೆಚ್ಚು ಆಹಾರ ಹೇಗೆ ಉತ್ಪತ್ತಿಯಾಗುತ್ತದೆ ? ನಮ್ಮ ರಾಜ್ಯದವರು ಈಗಲೇ ಇದಕ್ಕೆಲ್ಲಾ ಸರಿಯಾದ ಯೋಜನೆಯನ್ನು ಹಾಕಿಕೊಳ್ಳದೆ ಹೋದರೆ ಮುಂದೆ ಈ ಪವರನ್ನೂ ಮದ್ರಾಸಿನವರೋ ಮಹರಾಷ್ಟ್ರದವರೋ ತೆಗೆದುಕೊಂಡುಹೋಗುತ್ತಾರೆ. ಆಂಧ್ರದವರು ಕೈಹಾಕಿದರೂ ಹಾಕಬಹುದು. ಆದರೆ ಇದಕ್ಕೆಲ್ಲಾ ಅವಕಾಶಕೊಡಬಾರದೆಂದು ಹೇಳುತ್ತೇನೆ. ಸರ್ಕಾರದವರು ಈಗಲೇ ಈ ಬಗ್ಗೆ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಎನ್.ಇ.ಎಸ್. ಇಲಾಖೆಗೆ ಬಂದರೆ—ಇಲ್ಲಿ ಕೆಲಸಕ್ಕಿಂತ ಇರತಕ್ಕ ಜನರೇ ಜಾಸ್ತಿಯಾಗಿದ್ದಾರೆ. ಜನಕ್ಕಿಂತಲೂ ಜೀಪುಗಳೇ ಜಾಸ್ತಿಯಾಗಿರುತ್ತವೆಂದರೂ ತಪ್ಪಿಲ್ಲ. ಈ ಇಲಾಖೆಯವರಿಗೆ ಮಾಡಲು ಕೆಲಸವಿಲ್ಲದಿದ್ದರೂ ಕಪಿಗಳು ಮರೋ ಎನ್ನುವಂತೆ ಯಾವಗಲೂ ಜೀಪಿನಲ್ಲಿ ಓಡಾಡತಕ್ಕದ್ದೇ ಇವರ ಕೆಲಸವಾಗಿದೆ. ಸಾಲದ್ದಕ್ಕೆ ಈ ಇಲಾಖೆ ಇತರ ಅಗ್ರಿಕಲ್ಚರಲ್ ಅಥವಾ ರೆವಿನ್ಯೂ ಅಥವಾ ಪಿ.ಡಬ್ಲ್ಯು.ಡಿ. ಇಂಥ ಇಲಾಖೆಗಳೊಂದಿಗೆ ಹೊಂದಿ ಕೆಲಸಮಾಡುತ್ತಿಲ್ಲ. ಆ ಒಂದು ಕೋಆಪರೇಷನ್ ಇಲ್ಲ ; ಕೋಆರ್ಡಿನೇಷನ್ ಇಲ್ಲ. ಈ ಇಲಾಖೆಯ ಕೆಲಸವನ್ನು ಸರಿಯಾಗಿ ಸ್ಕ್ರೂಟಿನಿಮಾಡಿದ್ದೇ ಅವರೇ ಇದರಲ್ಲಿರತಕ್ಕ ಸಿಬ್ಬಂದಿಯಲ್ಲಿ ಮೂರನೇ ಒಂದು ಭಾಗದಷ್ಟು ಸಿಬ್ಬಂದಿಯನ್ನು ಅಲ್ಲಿಂದ ತಗೆದು ಹಾಕಬಹುದು. ಇಂಥ ಕೋಆರ್ಡಿನೇಷನ್ ಇಲ್ಲದ ಇಲಾಖೆಗಳಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಇದನ್ನು ಕೂಡಲೆ ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು ದೊಡ್ಡ ದೊಡ್ಡ ಪ್ರಾಜೆಕ್ಟುಗಳ ವಿಚಾರಕ್ಕೆ ಬಂದರೆ ಇಲ್ಲೇನಾಗಿದೆ ಎಂದರೆ :—ಅಲ್ಲಿ ಖರ್ಚಾಗತಕ್ಕ ಹಣದಲ್ಲಿ ಮುಕ್ಕಾಲುಪಾಲಿನಷ್ಟು ಹಣವೆಲ್ಲಾ ಅಧಿಕಾರಿಗಳ ವಾಸಕ್ಕೆ ಬಂಗಲೆಗಳಿಗೆ, ಅವರು ತಿರುಗಾಡತಕ್ಕ ರಸ್ತೆಗೆ, ಅವರ ನೀರಿನ ಸರಬರಾಯಿ, ಫ್ಲೆಷ್‌ಜೆಟ್ ಇತ್ಯಾದಿ ಬಾಬುಗಳಿಗೆ ವೆಚ್ಚವಾಗುತ್ತಿದೆ. ಇನ್ನು ಆ ಯೋಜನಗೆ ದುಡ್ಡೆಲ್ಲಿಂದ ಬರಬೇಕು ? ಕೆಲಸ ಮುಗಿದ ನಂತರ ಈ ಬಂಗಲೇ ಇತ್ಯಾದಿಗಳಿಗೆ ವೆಚ್ಚಮಾಡಿದ್ದೆಲ್ಲಾ ವೇಸ್ಟಾಗುತ್ತದೆ. ರೈತನಿಗೆ ಅನುಕೂಲವಾಗತಕ್ಕ ಕೆಲಕಾರ್ಯಗಳು ಪುರೈಸಿದನಂತರ ಬೇಕಾದರೆ ಈ ಅಧಿಕಾರಿಗಳಿಗೆ ಖಾಯಂ ಆಗೇ ಬಿಲ್ಡಿಂಗುಗಳನ್ನು ಕಟ್ಟಿಕೊಡಲಿ ; ನಾನು ಬೇಡ ಎನ್ನುವುದಿಲ್ಲ. ಇವರು 10 ವರ್ಷಗಳ ಒಂದು ಅವಧಿಯಲ್ಲಿ ಇಷ್ಟು ಎಕರೆಗೆ ನೀರನ್ನು ಕೊಡುತ್ತೇವೆಂದರೆ ಆ ಅವಧಿಯೊಳಗೆ ಅಷ್ಟಕ್ಕೆ ನೀರನ್ನು ಒದಗಿಸಲೇಬೇಕು. ಹಾಗೆ ಕೆಲಸನಡದಿದ್ದಲ್ಲಿ ಈ ದಿವಸ ಇಷ್ಟೊಂದು ಕೆಲಸಗಳೇಕೆ ಬಾಕಿ ಉಳಿಯಬೇಕಾಗಿತ್ತು ? ಇನ್ನಾದರೂ ಕೆಲಸಗಳನ್ನು ಬೇಗ ಮುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಪಿ. ಮಸಿಯಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಗೆ ಮಾನ್ಯ ರಾಜ್ಯದ ಆಡಳಿತ ನಡೆದಿರತಕ್ಕ ವಿಧಾನ ಹಾಗೂ ಮುಂದಿನ ಸಾಲಿಗೆ ಸರ್ಕಾರ ಅನುಸರಿಸಿರತಕ್ಕ ಧೋರಣೆ ಇವುಗಳ ಬಗ್ಗೆ ರಾಜ್ಯಪಾಲರು ಕೊಟ್ಟಿರತಕ್ಕ ಸಂದೇಶಕ್ಕೆ ಹೃತ್ಪೂರ್ವಕವಾಗಿ ಅವರನ್ನು ಅಭಿನಂದಿಸುವುದಕ್ಕೋಸ್ಕರ ನಿಂತಿದ್ದೇನೆ. ನನಗೆ ಈಗ ಈ ಸಭೆಯಲ್ಲಿ ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮೊಟ್ಟಮೊದಲನೆಯದಾಗಿ ನಾನು ಸಹಕಾರ ಇಲಾಖೆಯಲ್ಲಿ ಮತ್ತು ಗ್ರಾಮಾಭಿವೃದ್ಧಿ ಇಲಾಖೆಗಳಲ್ಲಿ ಸರ್ಕಾರ ಕೈಗೊಂಡಿರತಕ್ಕ ಕಾರ್ಯ ಚಟುವಟಿಕೆಗಳು, ಅವುಗಳು ನಡೆಯುಸುತ್ತಾ ಇರತಕ್ಕ ಕಾರ್ಯವಿಧಾನಗಳ ಬಗ್ಗೆ ನನ್ನ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತೇನೆ. ನನ್ನ ಸ್ನೇಹಿತರಾದ ಶ್ರೀ ಮಾರ್ಕ ಮರುಳಪ್ಪನವರು, ರಾಷ್ಟ್ರೀಯ ವಿಸ್ತರಣೆ ಯೋಜನೆಯಲ್ಲಿ ಸಾಕಷ್ಟು ತೃಪ್ತಿಕರವಾಗಿ ಕೆಲಸ ನಡೆಯುತ್ತಾ ಇಲ್ಲ ; ಖರ್ಚು ಜಾಸ್ತಿಯಾಗಿದೆ ಎಂದು ಹೇಳಿದ್ದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಅಷ್ಟಾಗಿ ತಯಾರಾಗಿಲ್ಲವೆಂದು ಹೇಳುತ್ತೇನೆ. ಈ ಯೋಜನೆಯ ಬಗ್ಗೆ ವಿವರಣೆ ಮಾಡುವುದು ಅನಾವಶ್ಯಕ. ಈ ಸಲಹೆ ದೇಶದ ಮುಂದೆ ಅನೇಕ ವರ್ಷಗಳಿಂದಲೂ ಇದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಯೋಜನೆ ಜಾರಿಗೆ ಬಂದ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳು, ಕುಡಿಯುವ ನೀರಿನ ಬಾವಿಗಳು, ವಿದ್ಯಾಭ್ಯಾಸದ ಬಗ್ಗೆ ಅನೇಕ ಕೆಲಸಕಾರ್ಯಗಳು ನಡೆದಿವೆ. ಯಾವುದೇ ವಿಷಯವನ್ನು ತೆಗೆದುಕೊಂಡರೂ ಬಹಳಮಟ್ಟಿಗೆ ಎಂದರೆ ಶೇಕಡ 50 ರಷ್ಟು ಅಭಿವೃದ್ಧಿಕಾರ್ಯಗಳು ನಡೆದಿವೆ. ಜನರಲ್ಲಿ ಸಂಸ್ಕೃತಿ ಮತ್ತು ತಿಳಿವಳಿಕೆಯನ್ನು ಉಂಟುಮಾಡುವುದರಲ್ಲಿ ಈ ಯೋಜನಾ ಕಾರ್ಯಗಳು ನಡೆಯುತ್ತಾ ಇವೆ. ಇದು ಖಚಿತವಾದ ವಿಷಯ. ಜನತೆಯಲ್ಲಿ ಒಂದು ರೀತಿಯ ತಿಳುವಳಿಕೆಯನ್ನು ಹುಟ್ಟಿಸುವುದರಲ್ಲಿ ಈ ಯೋಜನೆ ಯಶಸ್ವಿಯಾಗಿದೆ.

ಇನ್ನು ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರಕ್ಕೆ 8 ಲೈಸೆನ್ಸ್‌ಗಳಾಗಬೇಕೆಂದು ಶಿಫಾರಸ್ಸು ಮಾಡಿದ್ದೇವೆಂದು ಹೇಳಿದ್ದಾರೆ. ಇದಕ್ಕೋಸ್ಕರ ನಾನು ಸರ್ಕಾರಕ್ಕೆ ಮತ್ತು ರಾಜ್ಯಪಾಲರಿಗೆ ತುಂಬಾ ಅಭಿನಂದನೆಗಳನ್ನು ಸಲ್ಲಿಸಲು ಇಷ್ಟಪಡುತ್ತೇನೆ.

ಇನ್ನು ಆಹಾರದ ವಿಷಯದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಈ ಮಾನ್ಯ ಸಭೆಯಲ್ಲಿ ಅನೇಕ ಜನ ನಮ್ಮ ಸ್ನೇಹಿತರು ಆಹಾರಧಾನ್ಯಗಳ ಬೆಲೆಗಳು ಗಗನಕ್ಕೇರುತ್ತಿವೆ, ಜನತೆ ಜೀವನ ಮಟ್ಟದ ವೆಚ್ಚ ಬಹಳ ಹೆಚ್ಚಾಗಿದೆ ; ಸರ್ಕಾರ ಬೆಲೆಗಳನ್ನು ಹತೋಟಿಗೆ ತರಬೇಕೆಂದು ಯಾವ ಪ್ರಯತ್ನಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೆ ನಾನು ಬಹಳ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ನನ್ನ ಅನೇಕ ಸ್ನೇಹಿತರು ನಮ್ಮ

(ಶ್ರೀ ಎ. ಮಸಿಯಪ್ಪ):

ರೈತರ ಕಷ್ಟ ಜೀವನವನ್ನು ಅರಿಯದೆಯೇ, ಜಮೀನಿನಲ್ಲಿ ಬರತಕ್ಕ ವರಮಾನ, ಅದನ್ನು ಸಾಗುವಳಿ ಮಾಡುವಾಗ ಆಗತಕ್ಕ ಖರ್ಚು ಇವೆಲ್ಲವನ್ನೂ ಅಂಕಿಅಂಶಗಳಿಂದ ನೋಡಿ ಮಾತನಾಡಿದ ಹಾಗೆ ಕಾಣಲಿಲ್ಲ. ಅವನ ಜೀವನಮಟ್ಟ ಹೇಗಿದೆಯೆಂಬುದನ್ನು ಅಂಕಿ ಅಂಶಗಳನ್ನು ವಿಮರ್ಶೆಮಾಡಲು ಇಷ್ಟಪಡುತ್ತೇನೆ. ಕೆಲವು ಮಾನ್ಯ ಸದಸ್ಯರು ತಮ್ಮ ಜೀವನಮಟ್ಟದ ಸ್ಥಿತಿಯನ್ನು ಮರೆತು, ಇಲ್ಲಿ ಮಾತನಾಡಿದುದು ಪತ್ರಿಕೆಗಳಲ್ಲಿ ಬರಲಿ ಎಂಬ ಆಕಾಂಕ್ಷೆಯಿಂದ ಮಾತನಾಡುತ್ತಿದ್ದರೋ ಏನೋ ಗೊತ್ತಿಲ್ಲ. ಧಾರಣೆವಾಸಿಗಳ ಸಂಬಂಧದಲ್ಲಿ ಬಡ್ಜೆಟ್ ಭಾಷಣದಲ್ಲಿ ಶ್ರೀಮಾರ್ಜತ್ತಿ ಸಾಹೇಬರು ಅಂಕಿಅಂಶಗಳನ್ನು ಕೊಟ್ಟಿದ್ದನ್ನು ಗಣನೆಗೆ ತೆಗೆದುಕೊಂಡರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕೂಲಿಗಾರರ ಜೀವನ ಖರ್ಚು 121 ರಿಂದ 123 ರವರೆಗೆ ಹೋಗಿವೆ. ಎರಡು ಅಂಶ ಹೆಚ್ಚಾಗಿದೆ. ಆದರೆ ಪಟ್ಟಣಗಳಲ್ಲಿರತಕ್ಕ ಕೂಲಿಗಾರರ ಜೀವನದ ಖರ್ಚು 16·3, 12·8, 8·6, 8·2–ಹೀಗೆ ಬೇರೆ ಬೇರೆ ರೀತಿಯಲ್ಲಿ ಹೆಚ್ಚಾಗಿವೆ. ಇದರಿಂದ ಆ ರೀತಿ ಲೆಖ್ಖ ಹಾಕಿ ನೋಡಿದರೆ ಪಟ್ಟಣಗಳಲ್ಲಿರತಕ್ಕ ಕೂಲಿಗಾರರ ಕಷ್ಟ ಅಷ್ಟಾಗಿಲ್ಲವೆಂಬುದು ಕಾಣುತ್ತದೆ. ಹೇಗೆಂದರೆ ಬರೀ ಆಹಾರಧಾನ್ಯಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳಬಾರದು. Cost of living index ಏನು ಎಂಬುದನ್ನು ಮೊದಲು ತಿಳಿದುಕೊಳ್ಳಬೇಕಾಗಿದೆ. ಈ cost of living index ಬರೀ ಆಹಾರಧಾನ್ಯಗಳಿಗೆ ಮಾತ್ರ ಸೇರಿಸಿಲ್ಲ. ಮನುಷ್ಯನ ಜೀವನಕ್ಕಾಗಿ ಏನೇನು ಖರ್ಚಾಗುತ್ತದೆಯೋ ಆ ಎಲ್ಲಾ ಅಂಶಗಳನ್ನು ಲೆಖ್ಖಕ್ಕೆ ತೆಗೆದುಕೊಂಡು ವಿಚಾರಮಾಡಿ, ಎಷ್ಟು ಅಂಶ ಹೆಚ್ಚಾಗಿದೆ, ಎಷ್ಟು ಅಂಶ ಕಡಮೆಯಾಗಿದೆ ಎಂಬುದನ್ನು ಅವರು ಇಲ್ಲಿ ತಿಳಿಸಿಲ್ಲ. ಇನ್ನು ಆಹಾರಪದಾರ್ಥಗಳ retail prices ಬಗ್ಗೆ ಕೊಟ್ಟಿರತಕ್ಕ ಅಂಕಿಅಂಶಗಳನ್ನು ನೋಡಿದರೆ ಆಹಾರವಸ್ತುಗಳ ಧಾರಣೆಯು ಎಷ್ಟರಮಟ್ಟಿಗೆ ವರ್ಷವರ್ಷಕ್ಕೂ ಏರುತ್ತಿದೆ ಎಂಬುದು, ಹಿಂದಿನ ಎರಡು–ಮೂರು ಬಡ್ಜೆಟ್ಟುಗಳ ಅಂಕಿಅಂಶಗಳಿಂದ ಚೆನ್ನಾಗಿ ಗೊತ್ತಾಗುತ್ತದೆ. ಹೀಗೆ ಜೀವನದ ವೆಚ್ಚ ಕೇವಲ ಆಹಾರಧಾನ್ಯಗಳ ಬೆಲೆಗಳ ಏರಿಕೆಯಿಂದ ಮಾತ್ರ ಜಾಸ್ತಿ ಆಗಿದೆ ಎಂದು ಹೇಳುವುದಾದರೆ, ಅದಕ್ಕಿಂತ ತಪ್ಪುವಾದ ಬೇರೆ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಪಟ್ಟಣ ಜೀವನದಲ್ಲಿ ಅನೇಕ ವಿಧವಾದಂಥ ಲಕ್ಷುರೀಸ್ ಐಟಂಗಳ ಧಾರಣೆವಾಸಿಗಳು ಹೆಚ್ಚಾಗಿರುವುದು ಎಲ್ಲರಿಗೂ ಗೊತ್ತಿದೆ. ಅದನ್ನೇನೂ ಪುನಃ ಹೇಳಬೇಕಾಗಿಲ್ಲ. ಈಗ ಆಹಾರಧಾನ್ಯಗಳ ಬೆಲೆ ಎಷ್ಟು ಹೆಚ್ಚಿದೆ, ಇತರೇ ಸಾಮಾನುಗಳ ಉಪಯೋಗ ಎಷ್ಟು ಹೆಚ್ಚಾಗಿದೆ, ಎಷ್ಟರಮಟ್ಟಿಗೆ ಅವುಗಳ ಧಾರಣೆವಾಸಿಗಳು ಹೆಚ್ಚಾಗಿವೆ ಎಂಬುದನ್ನೆಲ್ಲ ವಿವರಿಸಿದ್ದಾರೆ. ಈ ಎರಡು ಹೋಲಿಕೆ ಮಾಡಲಿ. ಯಾವಾವ ಐಟಂಗಳ ಬೆಲೆ ಹೆಚ್ಚಾಗಿದೆ ಎಂದು ಗೊತ್ತಾಗುತ್ತದೆ. ಆಹಾರವಸ್ತುಗಳ ಧಾರಣೆಗಳನ್ನು ಎಷ್ಟರಮಟ್ಟಿಗೆ ಸರ್ಕಾರದವರು ಹತೋಟಿಗೆ ತರುವುದಕ್ಕೆ ಪ್ರಯತ್ನಗಳನ್ನು ಮಾಡಬೇಕು ಎಂಬುದನ್ನು ವಿಮರ್ಶೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಒಂದು ಸಂಪೂರ್ಣವಾದ ಚಿತ್ರವನ್ನು ನಮಗೆ ಕೊಡದೇ ಇರುವುದು ಈಗ ಕಾಣುತ್ತಿದೆ. ಇತ್ತೀಚೆಗೆ ಕೇಂದ್ರದ ಆಹಾರ ಮಂತ್ರಿಗಳಾದ ಸ್ವರ್ಣಸಿಂಗ್ ಅವರು ರೈತರು ಬೆಳೆಯುವ ಧಾನ್ಯಗಳ ಬೆಲೆ ದಿನೇ ದಿನೇ ಹೆಚ್ಚಾಗುತ್ತಿದೆ. ವ್ಯವಸಾಯೋತ್ಪಾದನೆ ಖರ್ಚು ಜಾಸ್ತಿಯಾಗುತ್ತಿದೆ, ಅದರಲ್ಲೂ ವ್ಯವಸಾಯಕ್ಕೆ ಬೇಕಾದ ಸಾಮಗ್ರಿಗಳ ಬೆಲೆ, ಉಪ್ಪು, ಕಬ್ಬಿಣ, ಗೊಬ್ಬರ ಧಾರಣೆಗಳು ವಿಪರೀತ ಜಾಸ್ತಿಯಾಗುತ್ತಿವೆ ಎಂದು ಹೇಳಿದ್ದಾರೆ. ಇಂತಹ ಸಂದರ್ಭದಲ್ಲಿ ಧಾರಣೆವಾಸಿಗಳನ್ನು ಒಂದು ಹತೋಟಿಗೆ ತರಬೇಕಾದರೆ ನ್ಯಾಯವಾಗಿ ಸರ್ವಸಮ್ಮತವಾದ ಒಂದು scientific methodನ್ನು ಈ ವ್ಯವಸಾಯೋದ್ಯಮದಲ್ಲಿ ಅನುಸರಿಸದೇ ಇದ್ದರೆ ವ್ಯವಸಾಯಗಾರರಿಗೆ ತುಂಬಾ ತೊಂದರೆಯಾಗುತ್ತದೆ, ಧಕ್ಕೆಯಾಗುತ್ತದೆ. ಆದರೆ ಈ ಆಹಾರೋತ್ಪಾದನೆಯ ವಿಷಯದಲ್ಲಿ ನಮ್ಮ ರಾಜ್ಯ ಸರ್ಕಾರ ಯಾವ ನೀತಿಯನ್ನು ಅನುಸರಿಸಬೇಕೆಂದಿದ್ದಾರೆ. ಕೇಂದ್ರ ಸರ್ಕಾರದೊಡನೆ ಯಾವ ವಿಧವಾದ ಸಂಧಾನವನ್ನು ನಡೆಸುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಿದ್ದಾರೆ ಎನ್ನತಕ್ಕದನ್ನು ಈ ಸಂದರ್ಭದಲ್ಲಿ ತಿಳಿಸಿದ್ದರೆ ಬಹಳ ಚೆನ್ನಾಗಿತ್ತೆಂದು ನನಗನ್ನಿಸುತ್ತದೆ. ಅವರೇ ಕೊಟ್ಟಿರತಕ್ಕ food ಮತ್ತು non-food production figuresನಲ್ಲಿ ಜಮೀನು ಜಾಸ್ತಿಯಾಗಿದೆಯೇ ಹೊರತು ಉತ್ಪಾದನೆಯೇನೋ ಕಡಮೆಯಾಗಿದೆ. ಎಂಬುದಾಗಿ ತಿಳಿಯಬಹುದು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಂದು ವೇಳೆ ಇವರು ಶಾಸ್ತ್ರೀಯವಾದ ಆಧಾರದ ಧಾರಣೆ ಕೊಡದೇ ಹೋದರೆ ರೈತ ತಾನಾಗಿಯೇ ಆಹಾರವಸ್ತುಗಳಲ್ಲದೇ ಇರತಕ್ಕ ವಸ್ತುಗಳ ಉತ್ಪಾದನೆಗೆ ತೊಡಗುತ್ತಾನೆ. ಆ ರೀತಿ shift ಆಗುವುದರಿಂದ ದೇಶಕ್ಕೆ ಒಂದು ದೊಡ್ಡ ಅಪಾಯವುಂಟಾಗುತ್ತದೆ. ಆ ರೀತಿಯಾಗುವುದಕ್ಕೆ ಮುಂಚೆಯೇ ನಾವು ಎಚ್ಚರಗೊಳ್ಳಬೇಕು ಎಂಬುದಾಗಿ ನಾನು ಹೇಳುತ್ತೇನೆ. ಇನ್ನು ಒಂದೆರಡು ವಿಷಯಗಳನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡುತ್ತೇನೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ನ್ಯಾಷನಲೈಸೇಷನ್ ಪ್ರಶ್ನೆ. ಇದು ದೇಶದ ಬರ್ನಿಂಗ್ ಪ್ರಾಬ್ಲಮ್ ಎಂದು ಹೇಳಬೇಕು. ಏಕೆ ಈ ರೀತಿ ಹೇಳುತ್ತಿದ್ದೇನೆಂದರೆ ಸರ್ಕಾರದವರು ಇದನ್ನು ಸರಿಯಾಗಿ ಲೆಖ್ಖಾಚಾರ ಹಾಕಿ ಮಾಡುತ್ತಿದ್ದಾರೋ ಅಥವಾ ಯಾವ ಒಂದು ಲೆಖ್ಖಾಚಾರ ಇಲ್ಲದೆಯೇ ಮಾಡುತ್ತಿದ್ದಾರೋ ಏನೋ ಎಂದು ನನಗೆ ಕಾಣುತ್ತದೆ. ಇವರು ಈಗ ಮಾಡಿರತಕ್ಕ ರಾಷ್ಟ್ರೀಕರಣವನ್ನು ಸುವ್ಯವಸ್ಥೆಗೆ ತಂದು ಬರತಕ್ಕ ಆದಾಯವೆಲ್ಲವನ್ನೂ ಚೆನ್ನಾಗಿ ಕಾಪಾಡಿಕೊಳ್ಳಬೇಕು. At least 75 per cent of the income ಆದರೂ ದೊರೆಯುವಂತೆಯೂ ಲುಕ್ಸಾನು ಮತ್ತು leakage ಆಗದ ಹಾಗೆಯೂ ಸುವ್ಯವಸ್ಥಿತ ರೀತಿಯಲ್ಲಿ ನ್ಯಾಷನಲೈಸ್ ಮಾಡಬೇಕು. ಮುಂದೆ ಆರ್ಥಿಕ ಪರಿಸ್ಥಿತಿ ಉತ್ತಮವಾದ ಮೇಲೆ ಹೊಸ ಸರ್ವಿಸ್ಸುಗಳ ರಾಷ್ಟ್ರೀಕರಣಕ್ಕೆ ಗಮನ ಕೊಡಬೇಕು ಅನಂತರ ಹೊಸ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಮುಂದುವರಿಸುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

2-30 P.M.

ಇನ್ನು ಕೈಗಾರಿಕೆಗಳ ವಿಷಯಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ದೊಡ್ಡ ಕೈಗಾರಿಕೆಗಳೇನನ್ನು ಸ್ಥಾಪನೆ ಮಾಡುತ್ತಿದ್ದಾರೆಯೋ ಅವು ಚೆನ್ನಾಗಿ ಕೆಲಸಮಾಡುತ್ತಿವೆ. ಅವುಗಳನ್ನು ಒಪ್ಪಿಕೊಳ್ಳಬಹುದು. ಅದಕ್ಕಾಗಿ ಸರ್ಕಾರದವರನ್ನು ಅಭಿನಂದಿಸಬೇಕಾಗಿದೆ. ಆದರೆ ಸಣ್ಣ ಕೈಗಾರಿಕೆಗಳ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಅದು ಏನೆಂದರೆ ಸ್ಮಾಲ್ ಇಂಡಸ್ಟ್ರೀಸ್ ಸರ್ವೀಸ್ ಇನ್‌ಸ್ಟಿಟ್ಯೂಷನ್ ಎಂದು ಮಾಡಿಕೊಂಡು ಎರಡು ವ್ಯಾನುಗಳ ಮುಖಾಂತರ ಮೇಲಿನಿಂದ ಕೆಳಗಿನವರೆಗೂ ಎಲ್ಲಾ ಆಫೀಸರುಗಳು ದೇಶಾದ್ಯಂತ ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಹೋಗಿ ಟೆಕ್ನಿಕಲ್ ನೋಹೋವನ್ನು ತೋರಿಸಿಕೊಡುತ್ತಿದ್ದರು. ಮತ್ತು ಎಲ್ಲಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆ, ಅದನ್ನು ಸ್ಥಾಪನೆ ಮಾಡುವುದಕ್ಕೆ ಯಾವ ಮನುಷ್ಯ ಮುಂದೆ ಬರುತ್ತಾನೆ, ಅವನಿಗೆ ಸರ್ಕಾರದಿಂದ ಏನು ಫೈನಾನ್‌ಷಿಯಲ್ ಅಸಿಸ್ಟೆನ್ಸ್ ಬೇಕು ಎನ್ನತಕ್ಕ ಎಲ್ಲಾ ಅಂಶಗಳನ್ನು ಶೇಖರಣೆ ಮಾಡಿಕೊಂಡು ಅವರಿಂದ ಅಪ್ಲಿಕೇಷನ್‌ಗಳನ್ನು ತೆಗೆದುಕೊಂಡು ರೆಕಾರ್ಡ್ ಕಂಪ್ಲೀಟ್ ಆಗಿ ಬಿಲ್ಡ್ ಅಪ್ ಮಾಡಿಕೊಂಡು ಬರುತ್ತಿದ್ದರು ಅನಂತರ ಕೂಡಲೇ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಿದ್ದರು. ಆದರೆ ಈಗ ರೆಕಾರ್ಡುಗಳನ್ನು ಬಿಲ್ಡ್ ಮಾಡುವುದಕ್ಕೂ ಹೆಚ್ಚು ಕಾಲಬೇಕಾಗುತ್ತದೆ. ಆ ಮೇಲೆ ರೆಕಾರ್ಡ್ ಬಿಲ್ಡ್ ಅಪ್ ಮಾಡಿಕೊಂಡು ಬಂದು 3-4 ವರ್ಷಗಳಾದರೂ ಸಹ ಆ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ ಹಾಗೆ ಕಾಣಲಿಲ್ಲ. ಈ ಬಗ್ಗೆ ಸರ್ಕಾರದವರು ತೀವ್ರವಾಗಿ ಗಮನ ಕೊಡತಕ್ಕದ್ದು ಅವಶ್ಯಕ ಎಂದು ನಾನು ಹೇಳುತ್ತೇನೆ.

ಇನ್ನು ಮೇಜರ್ ಇರಿಗೇಷನ್ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇದು ಬಹಳ ಅವಶ್ಯಕವಾದದ್ದು. ಕೃಷ್ಣಾ ಗೋದಾವರಿಯ ನೀರನ್ನು ಉಪಯೋಗಿಸಿಕೊಳ್ಳತಕ್ಕ ಬಗ್ಗೆ ಸರ್ಕಾರದವರು ಸಾಕಷ್ಟು ಪ್ರಯತ್ನವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಸರ್ಕಾರದವರನ್ನು ನಾನು ಅಭಿನಂದಿಸುತ್ತೇನೆ.

ಆ ಮೇಲೆ ಕಾವೇರಿ ನದಿಯ ನೀರನ್ನು 1974 ನೇ ಇಸವಿಯ ಒಪ್ಪಂದದ ಪ್ರಕಾರ ನಮಗೆ ಬರಬೇಕಾಗಿರುವ ನೀರಿನ ಭಾಗವನ್ನು ಪೂರ್ಣವಾಗಿ 1974 ನೇ ಇಸವಿಯ ಒಳಗಾಗಿ ಉಪಯೋಗ ಮಾಡಿಕೊಳ್ಳದಿದ್ದರೆ ನಮ್ಮ ರಾಜ್ಯದ ಹಕ್ಕು ಹೊರಟು ಹೋಗುತ್ತದೆ. ಆದ್ದರಿಂದ ಆ ನೀರನ್ನು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಯಗಚಿ ನದಿಯಿಂದ ವಾಣಿವಿಲಾಸ ಸಾಗರಕ್ಕೆ ನೀರನ್ನು ತರುವ ಯೋಜನೆ ನಡೆಯುತ್ತಿದೆ. ಅದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರಲು ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ನಮ್ಮ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೀರಭದ್ರಪ್ಪ ಈರಪ್ಪ (ಯಲಬುರ್ಗಿ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆಯಲ್ಲಿ ನಾನು ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಹಾಸ್ವಾಮಿ ಈಗ ದೇಶದಲ್ಲಿ ತುರ್ತು ಪರಿಸ್ಥಿತಿ ಇದೆ ಎನ್ನುವ ಮಾತನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ ಆದರೆ ಇಂಥಾ ಸ್ಥಿತಿಯಲ್ಲಿ ನಮ್ಮ ಸರ್ಕಾರ ಈ ರಾಜ್ಯದಲ್ಲಿ ಆಡಂಬರವನ್ನು ನಡೆಸಿದೆ ದುಂದುಗಾರಿಕೆಯನ್ನು ನಡೆಸಿದೆ. ವಿಶಾಲವಾಗಿರತಕ್ಕ ಮಂತ್ರಿ ಮಂಡಲವನ್ನು ಕಡಿಮೆ ಮಾಡಿದ್ದಾರೆಯೇ? ಈ ವಿಚಾರದಲ್ಲಿ ಈ ಸಭೆಯಲ್ಲಿ ಅನೇಕ ಸಾರಿ ಚರ್ಚೆ ಆಗಿದ್ದರೂ

(ಶ್ರೀ ವೀರಭದ್ರಪ್ಪ ಈರಪ್ಪ)

ಕೂಡ ಸರ್ಕಾರ ತನ್ನದೇ ಆದ ಒಂದು ಧೋರಣೆಗೆ ಅಂಟಿಕೊಂಡು ಅದನ್ನೇ ಮುಂದುವರಿಸಿಕೊಂಡು ಬರುತ್ತಿದೆ. ಈ ರೀತಿ ಸರ್ಕಾರ ತನ್ನ ಧೋರಣೆಯನ್ನು ನಿಶ್ಚಿತವಾಗಿ ಬದಲಾಯಿಸದೇ ಇದ್ದರೆ ಜನತೆಯಲ್ಲಿ ಒಂದು ಅನಿಶ್ಚಿತ ವಾತಾವರಣ ಉಂಟಾಗುತ್ತದೆ. ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರಾಜ್ಯಪಾಲರು ಮಂತ್ರಿಮಂಡಲದ ಬಗ್ಗೆ ತಮ್ಮ ಭಾಷಣದಲ್ಲಿ ನಿರ್ದಿಷ್ಟವಾಗಿ ಯಾವ ಮಾತುಗಳನ್ನೂ ಹೇಳದೇ ಇರುವುದು ವಿಷಾದದ ಸಂಗತಿ. ಈಗಿನ ತುರ್ತು ಪರಿಸ್ಥಿತಿಯಲ್ಲಿ ಈ ರಾಜ್ಯದಲ್ಲಿ ಒಂದು ಪಕ್ಷಾತೀತವಾದ ಸರ್ಕಾರವನ್ನು ರಚನೆ ಮಾಡಬೇಕಾಗಿತ್ತು. ಪಕ್ಷಾತೀತವಾದ ಸರ್ಕಾರವನ್ನು ರಚನೆ ಮಾಡಿದರೆ ಜನತಾರಾಜ್ಯದಲ್ಲಿ ಪ್ರಜಾಪ್ರಭುತ್ವ ತತ್ವಗಳು ಮೂಡುತ್ತವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈಗಿರತಕ್ಕ ಕಾಂಗ್ರೆಸ್ ಸರ್ಕಾರ ಏಕ ಪಕ್ಷೀಯ ಸರ್ಕಾರ. ಸರ್ವಾಧಿಕಾರ ಸರಕಾರ, ಆದ್ದರಿಂದ ನಮ್ಮ ರಾಜ್ಯದಲ್ಲಿ ಪಕ್ಷಾತೀತವಾದ ಒಂದು ಜನತಾ ಸರ್ಕಾರವನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚನೆ ಮಾಡುತ್ತಿದ್ದೇನೆ. ಈಗ ಸಾಧಾರಣವಾಗಿ ನಮಗೆ ಸ್ವಾತಂತ್ರ್ಯ ಬಂದು 16 ವರ್ಷಗಳಾದವು. ಈ 16 ವರ್ಷಗಳಲ್ಲಿ ಸಾರ್ವಜನಿಕ ಮುಖಂಡರುಗಳು ನಮ್ಮ ದೇಶದಲ್ಲಿ ವಿಶೇಷ ವಾಗಿ ಹುಟ್ಟಿಕೊಂಡಿರತಕ್ಕ ಭ್ರಷ್ಟಾಚಾರ ಮತ್ತು ಲಂಚಗುಳಿತನವನ್ನು ನಿರ್ಮೂಲ ಮಾಡುವುದಕ್ಕೆ ಯಾವ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನತಕ್ಕ ವಿಷಯವನ್ನು ನಮ್ಮ ರಾಜ್ಯ ಪಾಲರ ಭಾಷಣದಲ್ಲಿ ಸೂಚನೆ ಮಾಡದೆ ಇರುವುದು ವಿಷಾದದ ಸಂಗತಿಯಾಗಿದೆ. ನಮ್ಮ ದೇಶದಲ್ಲಿರ ತಕ್ಕ ಲಂಚಗುಳಿತನ ಮತ್ತು ಭ್ರಷ್ಟಾಚಾರ ಇವುಗಳನ್ನು ಸಂಪೂರ್ಣವಾಗಿ ನಿರ್ಮೂಲಮಾಡುವುದಕ್ಕೆ ನಮ್ಮ ಸರ್ಕಾರದವರು ತೀವ್ರವಾದ ಪ್ರಯತ್ನವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಸೂಚನೆ ಮಾಡುತ್ತೇನೆ.

ಇನು ನಮ್ಮ ರಾಜ್ಯದಲ್ಲಿ ಅನೇಕ ಜಿಲ್ಲೆಗಳಲ್ಲಿ ಆಗಿಂದಾಗ್ಗೆ ಕ್ಷಾಮದ ಭಯ ತಲೆದೋರುತ್ತದೆ. ಈ ಕ್ಷಾಮದ ಭಯವನ್ನು ಯಾವ ರೀತಿ ನಿವಾರಣೆ ಮಾಡಬೇಕು ಎನ್ನುವುದಕ್ಕೆ ಸರ್ಕಾರದವರು ಶಾಶ್ವತವಾದ ಪ್ರಯತ್ನವನ್ನು ಮಾಡಿದ್ದಾರೆಯೇ? ಆ ವಿಷಯದಲ್ಲಿ ಸರ್ಕಾರ ಅಲಕ್ಷ್ಯ ಮನೋ ಭಾವನೆಯನ್ನು ತಾಳಿದೆ. ರಾಯಚೂರು, ಬಿಜಾಪುರ, ಬಳ್ಳಾರಿ, ಚಿತ್ರದುರ್ಗ, ಕೋಲಾರ, ಈ ಜಿಲ್ಲೆಗಳಲ್ಲಿ ಸಾಧಾರಣವಾಗಿ 4–5 ವರ್ಷಗಳಿಂದ ಸರಿಯಾಗಿ ಮಳೆ ಬೆಳೆಯಾಗದೆ ಬರಗಾಲ ಪೀಡಿತ ಪ್ರದೇಶವಾಗಿದೆ. ಆ ಸ್ಥಳಗಳಲ್ಲಿ ಸರ್ಕಾರದವರು ಪ್ರತಿವರ್ಷವೂ ಹಣವನ್ನು ಖರ್ಚುಮಾಡುತ್ತಿ ದ್ದಾರೆ. ಆದರೆ ಶಾಶ್ವತವಾದ ಒಂದು ಪರಿಹಾರ ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಆದ್ದರಿಂದ ಆ ಪ್ರದೇಶಗಳಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದ ಶಾಶ್ವತವಾದ ಕಾರ್ಯಕ್ರಮವನ್ನು ಹಾಕಿಕೊಂಡು ಅಭಾವ ಪರಿಸ್ಥಿತಿಯನ್ನು ವಿಚಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದೇ ಹೋದರೆ ಆಹಾರದ ಕೊರತೆಯಿಂದ ಜನಗಳು ಜೀವನವನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ;

ಇನ್ನೊಂದು ವಿಷಯವೇನೆಂದರೆ ಕೃಷ್ಣಾನದಿಗೆ ನಾರಾಣಯಪುರ ಅಣೆಕಟ್ಟನ್ನು ಕಟ್ಟಬೇಕೆಂದು ಕೇಂದ್ರ ಸರ್ಕಾರದವರು ನಮ್ಮ ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಈ ಯೋಜನೆ ಯನ್ನು ಯೋಜನಾ ಆಯೋಗದವರೂ ಒಪ್ಪಿಕೊಂಡಿದ್ದಾರೆ. ಆದರೂ ಸರ್ಕಾರದವರು ಆ ವಿಷಯ ದಲ್ಲಿ ಇನ್ನೂ ಮೀನಾ ಮೇಷಾ ನೋಡುತ್ತಿದ್ದಾರೆ. ಯಾವುದನ್ನು ಮಾಡಬೇಕೆಂದು ಕೇಂದ್ರ ಸರ್ಕಾರದವರು ಆದೇಶವನ್ನು ಕೊಟ್ಟಿದ್ದಾರೋ ಅದನ್ನು ಮೊದಲು ಮಾಡಬೇಕು. ಎಂದರೆ ನಾರಾಯಣಪುರದ ಅಣೆಕಟ್ಟನ್ನ ಕಟ್ಟಬೇಕು. ಅನಂತರ ಆಲಮಟ್ಟಿ ಅಣೆಕಟ್ಟನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಆ ಮೇಲೆ ತುಂಗಭದ್ರಾ ಅಣೆಕಟ್ಟನ್ನು ಕಟ್ಟಿದ್ದರಿಂದ ನಮ್ಮ ಭಾಗದಲ್ಲಿ ಸುಮಾರು 37 ಗ್ರಾಮ ಗಳು ಮುಳುಗಡೆಯಾಗಿದೆ. ಸುಮಾರು 20–25 ಸಾವಿರ ಜನಗಳು ನಿರಾಶ್ರಿತರಾಗಿದ್ದಾರೆ. ಅವ ರೆಲ್ಲರಿಗೂ ಪುನರ್ವಸತಿಯನ್ನು ನಿರ್ಮಿಸಿಕೊಡುವುದರಲ್ಲಿ ಸರ್ಕಾರದವರು ನಿರ್ಲಕ್ಷ ಭಾವನೆಯನ್ನು ಹೊಂದಿದ್ದಾರೆ. ಈಗ ಸ್ವಲ್ಪ ದಿವಸಗಳಹಿಂದೆ ಕ್ಯಾಬಿನೆಟ್ ಮಂತ್ರಿಗಳೊಬ್ಬರು ನಮ್ಮ ಭಾಗಕ್ಕೆ ಬಂದಿದ್ದರು. ಈಗ ಜಮೀನು ಮತ್ತು ಮನೆಗಳು ಮುಳುಗಡೆಯಾದ ಪ್ರದೇಶದ ಜನರು ಬಂದು ಮಾನ್ಯ ಮಂತ್ರಿಗಳನ್ನು ತಮಗೆ ಪುನರ್ವಸತಿಯನ್ನು ಕಲ್ಪಿಸಿಕೊಡುವ ವಿಷಯದಲ್ಲಿ ಮತ್ತು ಪರಿ ಹಾರವನ್ನು ಕೊಡುವ ವಿಷಯದಲ್ಲಿ ಕೇಳಿಕೊಂಡರು. ಆಗ ಮಾನ್ಯ ಮಂತ್ರಿಗಳು ಅದನ್ನು ವಿಚಾರ ಮಾಡುತ್ತೇನೆಂದು ಹೇಳಿದರು. ಆದರೆ ಅವರು ಸುಮ್ಮನೆ ಅದನ್ನು ವಿಚಾರಮಾಡುತ್ತೇನೆಂದು ಹೇಳಿದರೇ ಹೊರತು ಜನಗಳು ತುಂಬಾ ನಿರಾಶ್ರಿತರಾಗಿದ್ದಾರೆ ಅವರಿಗೆ ಯಾವ ತರಹ ಪರಿಹಾರ

ವನ್ನು ಕೊಡಬೇಕು ಎನ್ನುವ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಾಣುವುದಿಲ್ಲ. ಈ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಭಾವನೆಯನ್ನು ತಾಳಿದೆ ಎಂದು ನಾನು ಹೇಳಬಯಸುತ್ತೇನೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಆದಷ್ಟು ಜಾಗ್ರತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ರಾಯಚೂರು ಜಿಲ್ಲೆಯಲ್ಲಿರತಕ್ಕ ಕೊಪ್ಪಳ, ಯಲಬುರ್ಗಿ ಮುಂತಾದ ಪ್ರದೇಶ ಯಾವಾಗಲೂ ಬರಗಾಲ ಪೀಡಿತ ಪ್ರದೇಶವಾಗಿರುತ್ತದೆ. ಅದನ್ನು ನಿವಾರಣೆ ಮಾಡಬೇಕಾದರೆ ಗರ್ಭಗುಡಿ ಹತ್ತಿರ ತುಂಗಭದ್ರಾ ನದಿಗೆ ಮೇಲುಗಡೆ ಅಣೆಕಟ್ಟು ಕಟ್ಟಿ ಮೇಲ್ಭಾಗದಿಂದ ಒಂದು ಕಾಲುವೆಯನ್ನು ಮಾಡಿ ಆ ಪ್ರದೇಶದ ಜನಗಳಿಗೆ ನೀರನ್ನು ಒದಗಿಸಿಕೊಟ್ಟರೆ ಅವರಿಗೆ ಕೆಲಮಟ್ಟಿಗೆ ಪರಿಹಾರ ಒದಗೀತು ಎಂದು ಬಲ್ಲವರು ಹೇಳುತ್ತಾರೆ. ಆ ಮೇಲೆ ಮಲಪ್ರಭಾ ನದಿಗೆ ಅಣೆಕಟ್ಟನ್ನು ಕಟ್ಟುವಾಗ ಅದರ ಎತ್ತರವನ್ನು ಸ್ವಲ್ಪ ಎತ್ತರಿಸಿ ಅದರ ಮುಖಾಂತರ ಯಲಬುರ್ಗಿಗೆ ಕೊಪ್ಪಳದ ನೀರನ್ನು ಪೂರೈಸಬಹುದು ಎಂದು ಕೆಲವರ ಅಭಿಪ್ರಾಯ ಇದೆ. ಈ ಬಗ್ಗೆ ಸರ್ಕಾರದವರು ಪ್ರಯತ್ನವನ್ನು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರ ಖಾತೆಯ ವಿಷಯದಲ್ಲಿ ಕೆಲವೊಂದು ಮಾತನ್ನು ಹೇಳಬಯಸುತ್ತೇನೆ. ಹೈದರಾಬಾದ್ ಕರ್ನಾಟಕದ 3 ಜಿಲ್ಲೆಗಳಲ್ಲಿ ಸುಮಾರು ಒಂದು ಸಾವಿರ ಗ್ರೈನ್ ಬ್ಯಾಂಕುಗಳಿವೆ. ಅವುಗಳಲ್ಲಿ ಏನು ಕಾಳುಗಳನ್ನು ತರುತ್ತಾರೆ, ಸಂಗ್ರಹಿಸಿದ ಕಾಳು ಎಲ್ಲಿ ಹೋದವು. ಅದನ್ನು ಯಾರು ಕೊಟ್ಟರು, ಅಲ್ಲಿನ ವ್ಯವಹಾರ ಯಾವರೀತಿ ನಡೆಯುತ್ತದೆ ಎಂಬುದನ್ನು ಸರ್ಕಾರದವರು ಇದುವರೆಗೂ ಪರಿಶೀಲನೆ ನಡೆಸುವುದಕ್ಕೆ ಪ್ರಯತ್ನಪಟ್ಟಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಇನ್ನು ರಾಯಚೂರಿನಲ್ಲಿ ಒಂದು ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪನೆ ಮಾಡಬೇಕೆಂದು ಎರಡು ವರ್ಷಗಳಿಂದಲೂ ಪ್ರಯತ್ನ ನಡೆಯುತ್ತಿದೆ. ಅದರ ಬಗ್ಗೆ ಸುಮಾರು ಐದು ಲಕ್ಷ ರೂಪಾಯಿಗಳ ಷೇರ್ ಅಮೌಂಟನ್ನು ಕೂಡಿಸಿದ್ದಾರೆ. ಆ ಕಾರ್ಯದ ಪ್ರಗತಿ ನಿಲ್ಲುವಂಥಾ ಪರಿಸ್ಥಿತಿ ಬಂದಿದೆ. ಅದನ್ನು ಸರ್ಕಾರದವರು ವಿಚಾರಮಾಡಿ ಅದರ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಹಲವು ಸಹಕಾರಿ ಸಂಘಗಳಲ್ಲಿ ಆ ಹಣ ದುರುಪಯೋಗವಾಗಿದೆಯೆಂದು ಸರ್ಕಾರಕ್ಕೆ ವರದಿ ಮಾಡಿದ್ದಾರೆ.

ಇನ್ನು ಭ್ರಷ್ಟಾಚಾರದ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಕೊಪ್ಪಳದಲ್ಲಿ ನಡೆದ ಒಂದು ಕಣ್ಣಿನ ಶಿಬಿರದಲ್ಲಿ ಹಾಲಿನ ಪುಡಿಯನ್ನು ಒದಗಿಸಿದರು. ಅದಕ್ಕೆ ದುಡ್ಡನ್ನು ಸಂಗ್ರಹ ಮಾಡಿದರು. ಅನೇಕ ಮುನಿಸಿಪಾಲಿಟಿಗಳೂ ತಾಲ್ಲೂಕು ಬೋರ್ಡುಗಳೂ ದುಡ್ಡಿನ ಸಹಾಯ ಮಾಡಿದುವು. ಅದಕ್ಕೆ ಒಂದು ಸಮಿತಿ ರಚಿತವಾಗಿತ್ತು, ಅದರ ಲೆಕ್ಕಪತ್ರ ಏನಾಯಿತು ಎನ್ನುವುದರ ಬಗ್ಗೆ ಇವತ್ತಿನ ತನಕ ಸರ್ಕಾರದವರು ವಿಚಾರ ಮಾಡಿದರೇ ? ಅದರ ಬಗ್ಗೆ ಅರ್ಜಿಯನ್ನು ಕೊಟ್ಟಿದ್ದರೂ ಅದರ ಬಗ್ಗೆ ವಿಚಾರ ಮಾಡುವುದಕ್ಕೆ ಬಹಳ ಆಲಸ್ಯಮಾಡುತ್ತಿದ್ದಾರೆ. ಯಲ್ಬುರ್ಗ, ಕೊಪ್ಪಳ ಮತ್ತು ಗಂಗಾವತಿ ತಾಲ್ಲೂಕುಗಳಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಅನೇಕ ಜನ ಹಣವನ್ನು ವಸೂಲ್ಮಾಡಿ ತಿಂದು ಹಾಕಿದ್ದಾರೆ. ಆ ಬಗ್ಗೆ ಅರ್ಜಿಗಳನ್ನು ಕಳಿಸಿದ್ದೇವೆ. ಆದರೂ ಸರ್ಕಾರದವರು ವಿಚಾರಣೆಯನ್ನು ಮಾಡಲಿಕ್ಕೆ, ಯೋಗ್ಯ ಕ್ರಮ ತೆಗೆದುಕೊಳ್ಳಲಿಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. ಇದರೊಳಗೆ ಯಾವುದೋ ಒಂದು ರಾಜಕೀಯ ಕೈವಾಡವಿದೆ, ಅನೇಕ ಮುಖಂಡರು ಇದರೊಳಗೆ ಸಿಕ್ಕಿಬೀಳುತ್ತಾರೆ ಎಂದು ಸರ್ಕಾರ ಮೀನ ಮೇಷ ನೋಡುತ್ತಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಪೋಲೀಸ್ ಖಾತೆಯವರ ಅಲಕ್ಷ್ಯದಿಂದ ನಮ್ಮ ಭಾಗದಲ್ಲಿ ಹೀನ ಕೃತ್ಯಗಳು ನಡೆಯುತ್ತಿವೆ. ಇತ್ತೀಚೆಗೆ ರಾಯಚೂರು ಜಿಲ್ಲೆಯ ಇಡಪನೂರು ಗ್ರಾಮದಲ್ಲಿ ಸಮುದಾಯ ಕೊಲೆ ನಡೆಯಿತು. ಗಂಗಾವತಿ; ಕೊಪ್ಪಳ, ಯಲಬುರ್ಗಿ ತಾಲ್ಲೂಕುಗಳ ಹಳ್ಳಿಗಳಲ್ಲಿ ಕೂಡಾ ಸಾಮುದಾಯಿಕ ಕೊಲೆಗಳಾಗಿರುವುವು. ಈ ರೀತಿಯ ಅನಾಹುತ ನಡೆಯುವುದಕ್ಕೆ ಅನೇಕ ಸಾರ್ವಜನಿಕ ಮುಖಂಡರು ಕಾರಣ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಸರ್ಕಾರದವರು ಯೋಗ್ಯವಾದ ಪರಿಶೀಲನೆ ನಡೆಸಿ ಅವರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು, ಯಾರ ಪ್ರಭಾವಕ್ಕೂ ಒಳಗಾಗಿ ಅಂಥ ಮುಖಂಡರನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡಿದರೆ ಮುಂದೆ ಆಗತಕ್ಕ ತಪ್ಪಿಗೆ, ಅನಾಹುತಕ್ಕೆ ಸರ್ಕಾರವೇ ಹೊಣೆಯಾಗಬೇಕಾದೀತು. ಹಾಗೆ ಆಗಲಾರದಂತೆ ನೋಡಿಕೊಳ್ಳಬೇಕು.

ಮಹಾಸ್ವಾಮಿ, ಈಗ ಇರತಕ್ಕ ಮಾರ್ಗ್ಗಟ್ಟಿನಲ್ಲಿ ಸರ್ಕಾರ ಮೂರನೆಯ ಮತ್ತು ನಾಲ್ಕನೆಯ ದರ್ಜೆ ನೌಕರದಾರರಿಗೆ ಬಹಳ ಕಡಮೆ ಪಗಾರವನ್ನು ಕೊಡುತ್ತಿದೆ. ಈ ಹೊತ್ತಿನ ಅವರ ಪರಿಸ್ಥಿತಿಯ ಬಗ್ಗೆ ಸರ್ಕಾರ ಬಹಳವಾಗಿ ಯೋಚನೆ ಮಾಡಬೇಕಾಗಿದೆ. ಹರಿಜನರ ಮತ್ತು ಕೂಲಿಕಾರರ ಪರಿಸ್ಥಿತಿಯೂ ನಾಜೂಕಾಗಿದೆ. ಇಂಥವರ ಬಗ್ಗೆ ಸರ್ಕಾರ ಆಲೋಚನೆ ಮಾಡಿ ಸರಿಯಾದ ಪರಿ

(ಶ್ರೀ ವೀರಭದ್ರಪ್ಪ ಈರಪ್ಪ)

ಹಾರವನ್ನು ಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರ ಇದನ್ನು ಮಾಡದೆ ಹೋದರೆ ಬಹಳ ಅನಾಹುತಕ್ಕೆ ಕಾರಣವಾಗಬಹುದು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತ ತಾವು ನನಗೆ ಮಾತ ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

Sri B. R. SUNTHANKAR (Belgaum City).—Sir, this Address, as usual, is insipid and uninspiring. There is nothing in this Address that will enthuse or inspire the Hon'ble Members of this House or the people at large. This is the eighth Address we are having after the reorganisation of States. If one goes through all these Addresses, he will find that all these Addresses are of a similar type. As the Hon'ble Leader of the Opposition described, these Addresses have been only Administrative reports, a sort of catalogue of the activities of the various departments, revealing complascency on the part of the Government about their achievements. They are nothing more than that.

It is a matter of regret that this Government is treating the subject of Governor's Address as a formal affair. As a matter of fact, the Governor's Address in a parliamentary democracy, is a very important document. It is a statement of policy. The Governor's Address should outline the policies and principles that the Government is going to follow in the ensuing year. But if we examine these addresses from this point of view, particularly the present Address, I am compelled to say that these Addresses are a Signal failure. There is no outlining of policies; no bold policy is mentioned; there is no new thinking nor even rethinking of the old problems. Therefore I say that this Address is insipid and uninspiring when the situation in the country is very challenging.

[CHAIRMAN (SMT. NAGARATNAMMA HIREMATH) in the Chair.]

There are so many problems facing the people in the State. I am no referring to the emergency and it is there. But unfortunately this emergency is nowhere reflected in the activities and day today affairs of the Government.

I wish to refer to the glaring problems before the people. There is the problem of poverty, problem of ignorance, problem of low standard of living, problem of growing unemployment, enormous increase in the population, corruption, inefficiency, rising prices, and so many other problems which the people have to face. There is nothing in the Address which will give relief to the people in regard to any of these matters. Is there any answer to these problems? Is there any answer to the glaring problems facing the people of the State? There is tall talk of democratic socialism from the treasury benches. The mover of the Motion of Thanks referred to the Avadi and Bhubaneswar decisions of the Congress. May I ask whether this Address reflects the decision of the Avadi and the spirit of Bhubaneswar? This Address singularly lacks in that and there is nothing in the Address that will ensure a better living and a better los for the common man in the State.

This Address is meticulously silent on one or two vital problems. One of the vital problems is about the people living in the border areas. Sir, we raise this question every year. And there are certainmembers in this House and there are certain Ministers in this House who get irritated whenever we raise the question of border. Sir, there is one particular Minister, Hon'ble Shri B. D. Jatti, who gets not only irritated but loses all his balance and temper. He throws all reason and decency to the winds and asks the M.E.S. members to resign or get out of the State. May I ask, who is he to ask us to get out and resign as members of this House ? We have every right to ask the Finance Minister and his Government to resign for mis-ruling the State and for betraying the Kannadigas in the neighbouring States, for not implementing the assurances they have given to the Kannadigas living in the border States. But he has no right to ask us to resign. It is only our electorate that can direct us to resign We are here on account of the clear verdict and mandate of our electorate and that mandate is to merge the Marathi areas with Maharashtra. That is the clear mandate and we are here for that purpose. As my colleague Sri B. P. Kadam said we are not here as imbeciles to resign for the simple reason that the Minister Sri B. D. Jatti or a Tom, Dick and Harry asks us to resign. We are here to go back to Maharashtra. Whatever Sri Jatti may say, we are going back to Maharashtra. We are bound to go back to Maharashtra.

SRI B. D. JATTI (Finance Minister).—Nobody has objected to their going.

SRI B. R. SUNTHANKAR.—You are asking us to get out. Is this a decent way for a Minister ?

SRI B. D. JATTI.—If you have no desire to stay here, what else can we say ?

SRI B. R. SUNTHANKAR.—In the first Address of the Governor, after reorganisation, there was a specific reference to the Kannada areas in the outlying States. There was a specific reference to Kasargod, Madakasira, South Sholapur and the Hon'ble Chief Minister at that time did assure that he would try to bring all these areas into Mysore. What has he done during the last seven years ? At that time he stated that he was in correspondence with the neighbouring States. What has come out of it ? Is he sincere ? Is he really trying to bring all these areas into Mysore ?

The Kannadigas in the outlying States are pining to come back to Mysore, but this Government is doing nothing. They are simply holding out false assurances and betraying them. On the 24th December 1956, the Chief Minister, Sri Nijalingappa, while replying to the debate on the Motion of Thanks to the Governor for his Address said here.

> "There are areas, small areas no doubt, where the majority of people speak languages different from Kannada and I for one would not hesitate to have those areas included in their respective linguistic States It would be necessary."

(SRI B. R. SUNTHANKAR)

These are the wise words spoken by the Hon'ble Chief Minister, Sri Nijalingappa, on the 24th December 1956 just after the reorganisation of the States But what has he done during the last seven years? More than seven years have passed, but what has he done to fulfil his words, assurances and promises? He has done nothing. He said he would not hesitate, but during the last seven years he has been hesitating and hesitating and faltering Again the Address of 1960 referred to the border problem and boundary adjustment and the Address stated:

> "I am hopeful that with the wise statesmanship which exists in both the States and with the good offices of the Centre the differences will be settled."

But where is the wise statesmanship gone? I must say that the Chief Minister or this Government has failed in wise statesmanship. Then, in the address of 1961 there was a reference to the four-man Border Committee which was appointed to go into this border problem and the Government had stated in that address that his Government was awaiting the deliberations of the committee. Now the deliberations are over. The committe has submitted two separate reports long back. More than a year has elapsed since the report was Submitted. What action has this Government taken on those reports? Now, there can be no excuse of emergency. The gravity and keenness of the emergency is now gone. When there was emergency, ourselves suspended our agitation because the nation was in danger. Now that dang r has receded and that is why we are raking up this question again. The Marathi-speaking people have been agitating for the last eight years to go back to Maharashtra. They have tried all sorts of peaceful agitation; they have fought and won all the elections during the last eight years right from the grampanchayat election to the Assembly election and they have obtained the clear democratic verdict of the people. Is it in keeping with democracy to force a people to stay in this State in spite of the demonstrably expressed wishes to those people? I do not understand the logic or rhyme or reason in forcing a people to stay here in spite of their wishes. Our people are not willing to stay here and I really do not understand what is the good, what is the use, of keeping these people against their wishes in this State?

Then, what is the lot of the Maharashtrians here? As my Hon'ble Colleague Sri Kadam said yesterday, we are treated here as slaves. That is a fact We have to suffer so many hardships, handicaps and disabilities. We are treated here as inferior citizens, we are reduced to the status of second-class citizen-ship here. Is there any chance of the Marathi-speaking people getting employment in this State? If at all there is, very remote chance. I can quote an instance where a land candiddate who applied for admission to the general nursing course in

the Belgaum Hospital was refused admission because she happened to be a Maharashtrian and the pretext was that she was a non-Mysorean. The lady who is a permanent resident of Belgaum is treated as non-Mysorean only because she is a Maharashtrian.

Then, this Government is interfering even in religious matters where the Marathi people are concerned. I may quote here the instance of the Rathotsava at Halsi in Kanapur Taluka of Belgaum District. In the Marathi area there is an ancient historical temple of Bhoovarah Narasimha. That Rathotsava was to be performed on the poornima following Dusserah. The proprietors and trustees of the temple are Marathi speakers and the Marathi people participate in the rathotsava. All of a sudden, on the day of the rathoraava, the police authorities and the Magistrate there proclaimed Section 144 and banned the rathotsava. The image of the God which was placed in the ratha was forced to be removed and taken back to the temple. About 100 to 150 police force surrounded the temple and prevented the people from entering the temple and even to have the darsan of the deity. Why did this happen? Because it was a rathotsava of Maharashtrians. This was done only because the Maharashtrians were concerned. And what was the pretext? The pretext was that there would be a breach of peace. If there was to be a breach of peace, what was the police force meant for? The police must have protected the Marathi people from others who were bound to create disturbance there. But instead of protecting the Marathi people, the police and the authorities did otherwise. They banned the rathotsava and did not allow the Marathi people to perform the rathotsava.

CHAIRMAN.—The Hon'ble Member's time is over. I call upon Sri Mahantswami to speak.

†ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ ಹಿರೇಮಠ (ಷಹಾಪುರ).—ಅಧ್ಯಕ್ಷಿಣಿಯರೆ, ನಮ್ಮ ಮಾನ್ಯ ರಾಜ್ಯಪಾಲರ ಭಾಷಣ ಕನ್ನಡದಲ್ಲಿ ಆದುದನ್ನು ಈ ಕರ್ಣಾಟಕ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರದಿರತಕ್ಕುದಾಗಿದೆ. ಮೊದಲು ಅವರು ಕನ್ನಡದಲ್ಲಿ ಮಾಡಿದ ಭಾಷಣಕ್ಕಾಗಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತ ಆಡಳಿತದಲ್ಲಿರುವ ಕೆಲವು ನ್ಯೂನತೆಗಳನ್ನು ಎತ್ತಿ ತೋರಿಸಲು ಅಪೇಕ್ಷಿಸುತ್ತೇನೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮಳೆ ಬೆಳೆಗಳ ವಿಚಾರವಾಗಿ ಪ್ರಸ್ತಾಪಿಸುತ್ತ ಹಳೆಯ ಮೈಸೂರಿನ ನಾಲ್ಕಾರು ಜಿಲ್ಲೆಗಳ ಬಗ್ಗೆ ಮಾತ್ರ ಪ್ರಸ್ತಾಪಿಸಿದರು. ಕ್ಷಾಮಡಾಮರಗಳಿಗೆ ಈಡಾಗಿರುವಂತಹ ಹೈದರಾಬಾದು ಕರ್ನಾಟಕ ಅಥವಾ ಮುಂಬಯಿ ಕರ್ನಾಟಕದ ವಿಚಾರವನ್ನು ಅವರು ಪ್ರಸ್ತಾಪಿಸಲಿಲ್ಲ.

3-00 P.M.

ಇದು ಬಹಳ ಗಂಭೀರವಾದ ವಿಚಾರ. ಇದು ಹೀಗೆ ಆಗಬಾರದಾಗಿತ್ತು. ಬರುವ ಒಂದು ವರ್ಷದ ಕೆಲಸ ಕಾರ್ಯಗಳ ವಿವರವನ್ನು ರಾಜ್ಯಪಾಲರವರ ಭಾಷಣದಲ್ಲಿ ತಿಳಿಸದೆ ಇರತಕ್ಕದ್ದು ಅತ್ಯಾಶ್ಚರ್ಯವಾದುದು. ಹಾಗೆಯೇ ರಾಜ್ಯಪಾಲರವರ ಭಾಷಣದಲ್ಲಿ ಭಾರೀ ನೀರಾವರಿ ಎಂಬ ತಲೆಬರಹದಲ್ಲಿ ಹೇಳುತ್ತಾ ಭಾರತ ಸರಕಾರದವರು ಮಲಪ್ರಭಾ ಹಾಗು ಮೇಲ್ಮಟ್ಟದ ಕೃಷ್ಣಾ ಯೋಜನೆಗಳನ್ನು ಕೈಕೊಳ್ಳಲು ಅನುಮತಿ ನೀಡಿದ್ದಾರೆ, ಇವುಗಳ ಕೆಲಸವು ಸಹ ಇಷ್ಟರಲ್ಲಿಯೇ ಪ್ರಾರಂಭವಾಗುವುದು ಎಂದು ಅವರ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಇದನ್ನು ಸ್ವಲ್ಪ ಕೂಲಂಕಷವಾಗಿ ವಿವರಿಸಬೇಕಾಗಿತ್ತು. ಏಕೆಂದರೆ ನಮ್ಮ ಭಾಗದಲ್ಲಿಯ ಸದಸ್ಯರು ಕೆಲವರು ಕೃಷ್ಣಾ ಯೋಜನೆ ನಾರಾಯಣಪುರದಲ್ಲಿ ಆಗಬೇಕೆಂದು ಹೇಳುತ್ತಾರೆ. ಕೆಲವರು ಆಲಮಟ್ಟಿ

(ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ ಹಿರೇಮಠ)

ಯೋಗ್ಯ ಸ್ಥಳ ಆಲಮಟ್ಟಿಯಲ್ಲಿಯೇ ಆಗಬೇಕು ಎಂದು ಹೇಳುತ್ತಾರೆ. ಇವೆರಡು ಅಭಿಪ್ರಾಯಗಳ ತಿಕ್ಕಾಟದಲ್ಲಿ ಇದು ವಸಿಷ್ಠ ಮತ್ತು ವಿಶ್ವಾಮಿತ್ರರ ಜಗಳದಲ್ಲಿ ತ್ರಿಶಂಕು ಸ್ವರ್ಗ ನಿರ್ಮಾಣವಾದ ಹಾಗೆ ಇದು ನಮ್ಮ ರಾಜ್ಯಕ್ಕೆ ಆಗಬಾರದು ಎಂದು ನಾನು ಹೇಳುತ್ತೇನೆ. ಕೇಂದ್ರ ಸರಕಾರದ ನೀರಾವರಿ ಮಂತ್ರಿಗಳು ಮೊದಲು ನಾರಾಯಣಪುರದಲ್ಲಿ ಕಟ್ಟೆ ಕಟೋಣ ಆ ಮೇಲೆ ಮುಂದೆ ನೋಡೋಣ ಎಂದು ಹೇಳಬಹುದು. ಆದರೆ ನಮ್ಮ ವಿಜಾಪುರದ ಮಾನ್ಯ ಮಿತ್ರರು ಅನೇಕರು ಕಷ್ಣಾ ನದಿಗೆ ನಾರಾಯಣಪುರದಲ್ಲಿ ಕಟ್ಟೆ ಕಟ್ಟಿದರೆ ಅದರಿಂದ ಆಂಧ್ರ ದೇಶಕ್ಕೆ ಹೆಚ್ಚು ಲಾಭವಾಗುತ್ತದೆ, ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಲಾಭವಾಗುವುದಿಲ್ಲ, ಆದುದರಿಂದ ಮೊದಲು ಆಲಮಟ್ಟಿಯಲ್ಲಿಯೇ ಕಟ್ಟೆ ಕಟ್ಟೋಣ ಎಂದು ಬಹಳ ಒತ್ತಾಯಪಡಿಸುತ್ತಿದ್ದಾರೆ. ಆಲಮಟ್ಟಿಯಲ್ಲಿ ಶೇಖರಣೆಯಾಗುವ ನೀರನ್ನು ಒಂದು ಕೆನಾಲ್ ಮುಖಾಂತರ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಶೋರಾಪುರ, ಶಹಾಪೂರ ದೇವರಗಿವರೆಗೆ ತೆಗೆದುಕೊಂಡು ಹೋಗಿ ನೀರಾವರಿ ಮಾಡಬಹುದು ಎಂದು ಹೇಳುವುದು ಬಹಳ ಆಶ್ಚರ್ಯಕರವಾದುದು. ನಿಜವಾಗಿಯೂ ಆಲಮಟ್ಟಿ ಕಟ್ಟೆಯಿಂದ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ನೀರಾವರಿಯಾಗುತ್ತದೆ, ನಾರಾಯಣಪುರದಲ್ಲಿ ಮಾಡುವುದರಿಂದ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ನೀರಾವರಿಯಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಯೋಜನೆ ಮಾಡಬೇಕಾಗಿತ್ತು. ಇದರ ಒಂದು ನಕಾಶೆ ಕೂಡ ಕಲ್ಪನೆಯಲ್ಲಿ ತೆಗೆದುಕೊಂಡಿಲ್ಲ ಎಂದು ಅನಿಸುತ್ತದೆ. ಆಲಮಟ್ಟಿಯಲ್ಲಿ ಮೊದಲು ಕಟ್ಟೆಯಾಗಬೇಕೆಂದು ಹೇಳುವುದಾದರೆ ಅಲ್ಲಿಂದ 43 ಮೈಲಿವರೆಗೆ ನೀರನ್ನು ಮೇನ್ ಕೆನಾಲ್ ಮೂಲಕ ತೆಗೆದುಕೊಂಡು ಹೋಗಬೇಕಾಗುತ್ತದೆ. ಹೆಡ್ ಕೆನಾಲ್ ಮೂಲಕ ನೀರು ತಂದು ಉಪಯೋಗಿಸಬೇಕಾಗುತ್ತದೆ. ಈ ರೀತಿ ನೀರು ಪಡೆಯಬೇಕು ಎಂದು ಹೇಳುವುದು ಬಹಳ ಆಶ್ಚರ್ಯವಾದುದು. ಈ ರೀತಿ ಹೇಳುವ ಸದಸ್ಯರಿಗೆ ಆಲಮಟ್ಟಿ ಅಥವಾ ನಾರಾಯಣಪುರ ಕಟ್ಟೆ ಕಟ್ಟಿಸುವ ಬಗ್ಗೆ ಸರಿಯಾಗಿ ಅರ್ಥವಾಗಿಲ್ಲ ಎಂದು ಸಂಶಯ ಬರುತ್ತದೆ. ನಾರಾಯಣಪುರದಲ್ಲಿ ಕೆಲಸ ತೆಗೆದುಕೊಳ್ಳಲು ಟೆಕ್ನಿಕಲ್ ಸ್ಯಾಂಕ್ಷನ್ ಕ್ಲಿಯರನ್ಸ್ ಕೂಡ ಈಗಾಗಲೇ ಬಂದಿದೆ. ಹೈದರಾಬಾದ್ ಸದಸ್ಯರು ಸಂಕುಚಿತ ಭಾವನೆಯುಳ್ಳವರಾಗಿದ್ದಾರೆ; ಅವರಿಗೆ ವಿಶಾಲ ಭಾವನೆ ಇಲ್ಲ ಎಂದು ವಿಜಾಪುರ ಜಿಲ್ಲೆಯ ಸದಸ್ಯರು ಹೇಳುವುದು ತಪ್ಪು. ಮೊದಲು ಈ ಯೋಜನೆಯ ಕೆಲಸ ನಾರಾಯಣಪುರದಲ್ಲಿ ಪ್ರಾರಂಭ ಮಾಡಬೇಕು. ಆ ಮೇಲೆ ಸಾಕಷ್ಟು ಒತ್ತಾಯ ತಂದು ಆಲಮಟ್ಟಿಯಲ್ಲಿ ಕಟ್ಟೆ ಕಲಸ ತೆಗೆದುಕೊಳ್ಳಲು ಬೇಕಾಗುವ ಟೆಕ್ನಿಕಲ್ ಸ್ಯಾಂಕ್ಷನ್ ಕೇಂದ್ರ ಸರಕಾರದಿಂದ ಪಡೆಯುವುದಾದರೆ ನಾವೂ ನಮ್ಮ ಶಕ್ತಿ ಉಪಯೋಗಿಸಿ ನಿಮ್ಮ ಪ್ರಯತ್ನದಲ್ಲಿ ಪಾಲುಗಾರರಾಗುತ್ತೇವೆ ಎಂದು ನಾವು ಹೇಳಬಹುದು. ನಮಗೆ ಸಂಕುಚಿತ ಭಾವನೆ ಇದೆ ಎಂದು ಹೇಳತಕ್ಕದ್ದು ನಿರಾಧಾರವಾದುದು. ಇದನ್ನು ಮತ್ತು ಇನ್ನೂ ಕೆಲವು ವಿಷಯಗಳನ್ನು ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು.

ಇನ್ನು ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಪಿ. ಡಬ್ಲ್ಯೂ. ಡಿ. ಯ ಬಗ್ಗೆ ಪ್ರಸ್ತಾಪ ಮಾಡಿ ರಸ್ತೆಗಳ ವಿಚಾರದಲ್ಲಿ ಹೀಗೆ ಹೇಳಿದ್ದಾರೆ. ಯೋಜನೆಯ ಮೇರೆಗೆ ಏರ್ಪಡಿಸಬೇಕಾದ 12,726 ಮೈಲಿಗಳಷ್ಟು ಉದ್ದದ ಸಂಚಾರ ಮಾರ್ಗಗಳ ಪೈಕಿ ಇದುವರೆಗೆ 9,762 ಮೈಲಿಗಳಷ್ಟು ಉದ್ದದ ಸಂಚಾರ ಮಾರ್ಗಗಳ ಕೆಲಸವು ಮುಗಿದಿದೆ; ಹಾಗೆ ಹೀಗೆ ಎಂದು ರಾಜ್ಯಪಾಲರವರ ಮುಖಾಂತರ ಹೇಳಿಸಿದ್ದಾರೆ. ಇದನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾಗಿತ್ತು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಹಳೇ ಮೈಸೂರಿನ ಸದಸ್ಯರನೇಕರು ನಮ್ಮ ಪಿ. ಡಬ್ಲ್ಯೂ. ಡಿ. ಮಂತ್ರಿಗಳ ಬಗ್ಗೆ ಬಹಳ ಟೀಕೆ ಮಾಡುತ್ತಿದ್ದಾರೆ. ಮೈಸೂರು ರಾಜ್ಯದ ಎಲ್ಲ ಹಣವನ್ನೂ ಇವರು ತಮ್ಮ ಪ್ರದೇಶವಾದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಖರ್ಚು ಮಾಡುತ್ತಿದ್ದಾರೆ, ಹಳೇ ಮೈಸೂರಿಗೆ ಏನೂ ಲಾಭವಿಲ್ಲ ಎಂದು ಕೂಗು ಎಬ್ಬಿಸಿ ಗುಲ್ಲು ಎಬ್ಬಿಸಿದ್ದಾರೆ. ಆದರೆ ನಿಜವಾಗಿಯೂ ಪಿ. ಡಬ್ಲ್ಯೂ. ಡಿ. ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ನಮ್ಮ ಹೈದರಾಬಾದ್ ಕರ್ನಾಟಕ ಭಾಗದವರಾದರೂ ಅವರು ಹೈದರಾಬಾದ್ ಕರ್ನಾಟಕ ಪ್ರದೇಶದ ವಿಚಾರದಲ್ಲಿ ಹಾಗೆ ಮಾಡದೆ ಮಲತಾಯಿ ಧೋರಣೆ ತಾಳಿದ್ದಾರೆ ಎಂದೂ ನಮ್ಮ ಪ್ರದೇಶಕ್ಕೆ ಅನ್ಯಾಯ ಮಾಡುತ್ತಿದ್ದಾರೆಂದೂ ನಾನು ಘಂಟಾಘೋಷವಾಗಿ ಹೇಳುತ್ತೇನೆ. ಅಂಕಿ ಅಂಶಗಳನ್ನು ಹೇಳಿದರೆ ಇದು ಸ್ಪಷ್ಟವಾಗುತ್ತದೆ. ಹಳೇ ಮೈಸೂರು ಪ್ರದೇಶದಲ್ಲಿ ಮಂಡ್ಯ ಜಿಲ್ಲೆಯಲ್ಲಿ 91.96 ಪರ್ಸೆಂಟ್ ರೋಡ್ ಮಾಡಿದ್ದಾರೆ. ಆ ಮೇಲೆ ತುಮಕೂರಿನಲ್ಲಿ 20 ಪರ್ಸೆಂಟ್, ಶಿವಮೊಗ್ಗದಲ್ಲಿ 31 ಪರ್ಸೆಂಟ್, ಚಿಕ್ಕಮಗಳೂರು 22 ಪರ್ಸೆಂಟ್ ಹೀಗೆ ಇದ್ದರೆ, ಹೈದರಾಬಾದ್ ಕರ್ನಾಟಕ ಪ್ರದೇಶದ ಬೀದರ ಜಿಲ್ಲೆಯಲ್ಲಿ ಕೇವಲ 9 ಪರ್ಸೆಂಟ್ ಮಾಡಿದ್ದಾರೆ. ರಾಯಚೂರಿನಲ್ಲಿ 9.92, ಗುಲಬುರ್ಗಾದಲ್ಲಿ 10.7 ಪರ್ಸೆಂಟ್ ಇದೆ. ಇದನ್ನು

ಯೋಚನೆ ಮಾಡಿ ನೋಡಿದರೆ ಮಾನ್ಯ ಮಂತ್ರಿಗಳು ನಮ್ಮ ಭಾಗದವರು ಆಗಿದ್ದರೂ ನಿಜವಾಗಿಯೂ ನಮ್ಮ ಪ್ರದೇಶದ ಬಗ್ಗೆ ಮಲತಾಯಿ ಧೋರಣೆ ತಾಳಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದೇ ರೀತಿಯಾಗಿ ನೀರಾವರಿ ಕೆಲಸಗಳನ್ನು ನಮ್ಮ ಭಾಗದಲ್ಲಿ ತಗೆದುಕೊಂಡಿಲ್ಲ. ಮಲಪ್ರಭಾ, ಲೋಯರ್ ಭಿಮಾ, ಅಪ್ಪರ್ ಭಿಮಾ ಮುಂತಾದ ಅನೇಕ ನೀರಾವರಿ ಯೋಜನೆಗಳು ಇದ್ದರೂ ಯಾವ ನೀರಾವರಿ ಯೋಜನೆಯನ್ನೂ ತೆಗೆದುಕೊಂಡಿಲ್ಲ. ನಿಜವಾಗಿಯೂ ನಮ್ಮ ಹೈದರಾಬಾದ್ ಪ್ರದೇಶ ಹಿಂದುಳಿದ ಪ್ರದೇಶವಾಗಿದೆ. ಹಿಂದುಳಿದ ಪ್ರದೇಶಕ್ಕೆ ಹೆಚ್ಚು ಗಮನ ಕೊಡಬೇಕಾಗಿತ್ತು. ಹಳೇ ಮೈಸೂರು ಪ್ರದೇಶಕ್ಕೆ ಸಂಸಮಾನವಾಗುವ ಹಾಗೆ ಮಾಡಲು ಪ್ರಯತ್ನ ಮಾಡಬೇಕಾಗಿತ್ತು. ಚಿಕ್ಕ ನೀರಾವರಿಯಾಗಲಿ, ದೊಡ್ಡ ನೀರಾವರಿಯಾಗಲಿ, ಹೈದರಾಬಾದ್ ಪ್ರದೇಶಕ್ಕೆ ಗಮನ ಕೊಟ್ಟಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಇನ್ನು ರಾಜ್ಯಪಾಲರವರು ವಿದ್ಯುಚ್ಛಕ್ತಿ ಬಗ್ಗೆ ಹೇಳಿದ್ದಾರೆ. ಮೈಸೂರು ರಾಜ್ಯವು, ಮೈಸೂರು, ಕೇರಳ, ಮದ್ರಾಸು ಹಾಗೂ ಆಂಧ್ರ ಇವುಗಳನ್ನೊಳಗೊಂಡ ದಕ್ಷಿಣ ವಿದ್ಯುಜ್ಜಾಲವನ್ನು—ಸದರ್ನ್ ಗ್ರಿಡ್—ಸೇರಿಕೊಂಡಿದೆ ಎಂದು ಹೇಳಿದ್ದಾರೆ. ಇದರಿಂದ ನಮಗೆ ಅಲ್ಪ ಲಾಭವಾಗಬಹುದು. ಶರಾವತಿ ಯೋಜನೆ ಬರುವ ಪೂರ್ವದಲ್ಲಿ ಯಾವದೇ ವಿದ್ಯುಚ್ಛಕ್ತಿ ಜಾಲ ಮಾಡಬೇಕೆಂಬ ಪ್ರಶ್ನೆ ಇರಲಿಲ್ಲ. ಶರಾವತಿ ಯೋಜನೆಯಿಂದ ದೊರೆಯುವ ವಿದ್ಯುತ್ ಅನ್ನು ಸಾಕಷ್ಟು ನಾವು ಮೊದಲು ಪಡೆದುಕೊಳ್ಳತಕ್ಕದ್ದು ಅಗತ್ಯ. ಕೇವಲ 120 ಹಳ್ಳಿಗಳಿಗೆ ವಿದ್ಯುತ್ ಶಕ್ತಿ ಒದಗಿಸಿರುವುದು ಅತ್ಯಂತ ಶೋಚನೀಯವಾದುದು. ರಾಯಚೂರು, ಗುಲಬರ್ಗಾ ಪ್ರದೇಶದಲ್ಲಿ ಕಳೆದ 3 ವರ್ಷಗಳಿಂದ ವಿದ್ಯುತ್‌ಶಕ್ತಿ ಒದಗಿಸಲು ಕೆಲಸ ನಡೆದಿದ್ದರೂ ಈವರೆಗೆ ಪೋಲ್ಸ್ ಹಾಕಿಲ್ಲ, ವೈಯರ್ಸ್ ಇಲ್ಲ, ನನ್ನ ಕ್ಷೇತ್ರದಲ್ಲಿಯಂತೂ ಕಳೆದ ಎರಡು ವರ್ಷಗಳಿಂದ ಏನೇನೂ ಕೆಲಸ ನಡೆದಿಲ್ಲ. ಸರಕಾರದವರು ಒಂದು ಸಬ್‌ಸ್ಟೇಷನ್ ಸರಿಪಡಿಸಿಕೊಂಡು ತುಂಗಭದ್ರಾ ಯೋಜನೆಯಿಂದಲಾದರೂ ವಿದ್ಯುತ್‌ಶಕ್ತಿಯನ್ನು ಪಡೆದು ರಾಯಚೂರು, ಗುಲಬರ್ಗಾ ಬೀದರ್ ಪ್ರದೇಶಕ್ಕೆ ಆದಷ್ಟು ಬೇಗನೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮಾತನಾಡಲು ನನಗೆ ಕೊಟ್ಟಿರುವ ಕಾಲಾವಕಾಶ ಮುಗಿದಿದೆ. ಇನ್ನೂ ಕೆಲವು ಯೋಗ್ಯ ಸಲಹೆಗಳನ್ನು ಹೇಳಬೇಕಾಗಿತ್ತು. ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ ಮತ್ತು ಇಲ್ಲಿಗೆ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಅಧ್ಯಕ್ಷರೇ, ವರ್ಷಕ್ಕೆ ಒಂದು ಸಾರಿ ಈ ರಾಜ್ಯಪಾಲರ ಭಾಷಣದ ಮೇಲೆ ಸರಕಾರದ ರೀತಿ ನೀತಿಗಳ ಬಗ್ಗೆ ಮತ್ತು ಸರಕಾರದ ಧ್ಯೇಯ ಧೋರಣೆಗಳು ಯಾವ ರೀತಿ ಇರಬೇಕೆಂದು ನಿರೀಕ್ಷಿಸುತ್ತೇವೆ ಎನ್ನುವುದರ ಬಗ್ಗೆ ಮಾತನಾಡುವ ಅವಕಾಶ ಸಿಕ್ಕುತ್ತದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ನಾನು ಕೆಲವು ಮಾತುಗಳನ್ನು ಆಡ ಬಯಸುತ್ತೇನೆ.

ರಾಜ್ಯಪಾಲರ ಭಾಷಣವನ್ನು ಮೊದಲಿನಿಂದ ಕೊನೆಯವರೆಗೂ ನೋಡಿದ್ದೇನೆ. ಈ ಭಾಷಣ ಕಳೆದ ವರ್ಷದ ರೀತಿಯಲ್ಲಿಯೇ ಇದೆ, ಕಳೆದ ವರ್ಷದ ರಾಜ್ಯಪಾಲರ ಭಾಷಣದ ಮಾದರಿಯಲ್ಲಿಯೇ ಇದೆ. ಇದರಲ್ಲಿ ಚೈನಾ, ಪಾಕೀಸ್ತಾನದ ದುರಾಕ್ರಮಣ, ನೀರಾವರಿ ಯೋಜನೆಗಳು, ತೃತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣ ಖರ್ಚಾಗಿದೆ, ಆಹಾರ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಪ್ರಯತ್ನ ಪಡುತ್ತಿದ್ದೇವೆಂದು ಹೇಳಿ ಈ ರೀತಿಯಾಗಿ ಒಂದು ಭಾರಿ ಪಟ್ಟಿಯನ್ನೇ ಕೊಟ್ಟಿದ್ದಾರೆ. ಇದನ್ನೆಲ್ಲಾ ನೋಡಿದರೆ ಮದುವೆಯ ಕಾಲದಲ್ಲಿ ಪುರೋಹಿತರು ಸಂಸ್ಕೃತದಲ್ಲಿ ಶ್ಲೋಕ ಹೇಳುತ್ತಾರೆ. ಹಾಗೆ ಬಜೆಟ್ ಅಧಿವೇಶನದಲ್ಲಿ ಇದು ಒಂದು ಪ್ರಸ್ತಾವನೆ, ಪ್ರತಿ ವರ್ಷವೂ ಒಂದೇ ರೀತಿಯ ಭಾಷಣ ನಡೆಯುತ್ತಾ ಇದೆ. ಅದರಲ್ಲಿ ನನಗಾದರೂ ಹೊಸದೇನೂ ಕಾಣುವುದಿಲ್ಲ.

ಯಾರೇ ಒಬ್ಬ ವ್ಯಕ್ತಿಯಾಗಲಿ ಅಥವಾ ಸರಕಾರವಾಗಲಿ ಮುಂದುವರಿಯಬೇಕಾದರೆ ತಾವು ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳಬೇಕು. ನಮ್ಮ ಸರಕಾರ ಅಥವಾ ನಮ್ಮ ಮಂತ್ರಿಗಳು ಯಾವಾಗಲೂ ತಮ್ಮ ಭಾಷಣದಲ್ಲಿಯೇ ಆಗಲಿ, ಯಾವುದೇ ಸಂದರ್ಭದಲ್ಲಿಯಾಗಲಿ, ಆಹಾರ ಪರಿಸ್ಥಿತಿ ಬಗ್ಗೆ ತಪ್ಪು ಮಾಡಿದ್ದೇವೆ ಅಥವಾ ಕೈಗಾರಿಕೆ ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡಿದಾಗ ಬಂದ ಅಡ್ಡಿ ದುರ್ಘಟಗಳು ಇವು ಎಂದು ಒಪ್ಪಿಕೊಂಡಿದ್ದಾರೆಯೇ? ಇಂಥ ತಪ್ಪು ಮಾಡಿದ್ದೇವೆ ಎಂದು ಅವರು ಎಲ್ಲಿಯೂ ಒಪ್ಪಿಕೊಂಡದ್ದನ್ನು ನಾನು ಕೇಳಲೇ ಇಲ್ಲ. ತಪ್ಪು ಮಾಡುವುದು ಮನುಷ್ಯನ ಸ್ವಭಾವ, ಆ ತಪ್ಪನ್ನು ಒಪ್ಪಿ ತಿದ್ದಿಕೊಳ್ಳುವುದು ಮನುಷ್ಯನಿಗೆ ಸ್ವಾಭಾವಿಕ. ಈ ಸರಕಾರದ ವೈಶಿಷ್ಟ್ಯವೆಂದರೆ ಅವರು ತಪ್ಪನ್ನು ಒಪ್ಪಿಕೊಳ್ಳುವುದಿಲ್ಲ. 1951ನೇ ಇಸವಿಯಲ್ಲಿ ಜವಹರಲಾಲ್ ನೆಹರೂರವರು ಹೇಳಿದರು, ಇನ್ನು 5 ವರ್ಷಗಳಲ್ಲಿ ಏನೇ ಆಗಲಿ ಈ ದೇಶವನ್ನು ಆಹಾರ ವಿಷಯದಲ್ಲಿ ಸ್ವಯಂಪೂರ್ಣ ಮಾಡುತ್ತೇವೆ, ಒಂದು ರೂಪಾಯಿ ಆಹಾರವನ್ನು ಬೇರೆ ದೇಶದಿಂದ ತರಲಿಕ್ಕೆ ಸಾಧ್ಯವಿಲ್ಲ. ಅದು ಬಹಳ ಮುಖ್ಯವಾದ ಕಾರ್ಯ ಎಂದು ಅದನ್ನು ಸಾಧಿಸಿಯೇ ಸಾಧಿಸುತ್ತೇವೆಂದು ಹೇಳಿದರು. 1955

(ಶ್ರೀ ಟಿ. ವೆಂಕಟಗಿರಿಯಪ್ಪ)

ಆಯಿತು, 1960 ಆಯಿತು, 3ನೇ ಪಂಚವಾರ್ಷಿಕ ಯೋಜನೆಯನ್ನು ಅರ್ಧ ದಾಟಿದ್ದೂ ಆಯಿತು. ಇವತ್ತಿನವರೆಗೂ ಆಹಾರದ ಸ್ವಯಂಪೂರ್ಣತೆ ಸಾಧಿಸಿದ್ದಾರೆಯೇ? ಇದಕ್ಕೆ ಕಾರಣವೇನು, ಏನು ತಪ್ಪಾಗಿದೆಯೆಂದು ಎನ್ನುವುದನ್ನು ಮಾತ್ರ ಯಾವಾಗಲೂ ಹೇಳುವುದಿಲ್ಲ. ಒಂದು ಸುಳ್ಳನ್ನು ಮುಚ್ಚಿಡಲು ಮತ್ತೊಂದು ಸುಳ್ಳು, ಅದನ್ನು ಬಚ್ಚಿಡುವುದಕ್ಕೆ ಇನ್ನೊಂದು ಸುಳ್ಳು. ಈ ಸುಳ್ಳು ರಾಶಿಯಲ್ಲಿ ನಮ್ಮ ಸರಕಾರ ಮತ್ತು ಅದರ ಮುಖಂಡರು ವಾಸ ಮಾಡುತ್ತಾ ಇದ್ದಾರೆ. ಅವರು ಕೊಡುವ ಆಶ್ವಾಸನೆಗಳಿಗಾಗಲಿ, ಅವರು ದೇಶದ ಮುಂದೆ ಇಡುವ ಒಂದು ಭರವಸೆಗಾಗಲಿ ಏನೊಂದು ಮಹತ್ವ ಕೊಡಬೇಕಾಗಿಲ್ಲ.

ಅವರು ಇಷ್ಟು ವರ್ಷ ಪಂಚವಾರ್ಷಿಕ ಯೋಜನೆಗಳ ಮೂಲಕ ಏನೇನು ಮಾಡುತ್ತೇವೆಂದು ಹೇಳಿದ್ದಾರೆ. ದೇಶದಲ್ಲಿ ಆಹಾರ ಪರಿಸ್ಥಿತಿ ಉತ್ತಮಪಡಿಸುತ್ತೇವೆ, ಸ್ವಯಂಪೂರ್ಣತೆ ಸಾಧಿಸುತ್ತೇವೆ, ನಿರುದ್ಯೋಗ ಸಮಸ್ಯೆ ಪರಿಹಾರ ಮಾಡುತ್ತೇವೆಂದು ಏನೇನು ಹೇಳಿದ್ದರು! ಅದರಲ್ಲಿ ಮೂಲಭೂತವಾದ ಸಮಸ್ಯೆಗಳನ್ನು ಕಿಂಚಿತ್ತಾದರೂ ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ಏಕೆ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳುವುದಿಲ್ಲ. ಇನ್ನೂ ಯೋಜನೆ ಹಾಕುತ್ತಾ ಇದ್ದೇವೆ, ಪ್ರಯತ್ನ ಮಾಡುತ್ತಾ ಇದ್ದೇವೆ ಎಂದು ಹೇಳುತ್ತಾರೆ.

ಇನ್ನೊಂದು ಮುಖ್ಯ ವಿಷಯವೇನೆಂದರೆ ಈ ದಿವಸ ತುರ್ತುಪರಿಸ್ಥಿತಿ ಬಂದಿದೆ. ಈ ತುರ್ತು ಪರಿಸ್ಥಿತಿಯಲ್ಲಿ ಜನ ತ್ಯಾಗಕ್ಕೆ ತಯಾರಾಗಿರಬೇಕು, ನಮ್ಮ ದೇಶಕ್ಕೆ ಪಾಕೀಸ್ತಾನ, ಚೈಣದ ದುರಾಕ್ರಮಣದ ಗಂಡಾಂತರ ಒದಗಿದೆ, ಜನತೆಯು ಏನು ತ್ಯಾಗಕ್ಕೂ ಸಿದ್ಧವಾಗಿರಬೇಕೆಂದು ನಮ್ಮ ಸರಕಾರದ ಮುಖಂಡರು ತಿಳಿಸುತ್ತಾರೆ. ಈ ಒಂದು ತುರ್ತುಪರಿಸ್ಥಿತಿ ಎನ್ನುವುದು ಜನಗಳಿಗೆ ಭಾಷಣ ಮಾಡುವುದಕ್ಕೋಸ್ಕರ ಇರುವುದೋ, ಅಥವಾ ನಿಮ್ಮ ಕಾರ್ಯಕ್ರಮದಲ್ಲಿ ಅಥವಾ ನೀವು ಸರಕಾರ ನಡೆಸುವ ರೀತಿಯಲ್ಲಿ ಅಥವಾ ನೀವು ನಡೆದುಕೊಳ್ಳುವ ರೀತಿಯಲ್ಲಿ, ನಿಮಗೆ ಏನಾದರೂ ತುರ್ತುಪರಿಸ್ಥಿತಿ ದೃಷ್ಟಿಯಲ್ಲಿದೆಯೇ ಎಂದು ಕೇಳುತ್ತೇನೆ. ಈ ದಿವಸ ಮಂತ್ರಿಗಳು ವಾಸ ಮಾಡುವ ವಿಧಾನದಲ್ಲಾಗಲಿ, ಅವರು ಪಡೆಯುವ ಸೌಲಭ್ಯಗಳಲ್ಲಾಗಲಿ ಅಥವಾ ಅವರ ಸಂಬಂಧಿಗಳು ಪಡೆಯುವ ಪರ್ಮಿಟ್, ಲೈಸನ್ಸ್‌ಗಳಲ್ಲಿ ತುರ್ತುಪರಿಸ್ಥಿತಿ ಏಕಾಗುವುದಿಲ್ಲ! ತುರ್ತುಪರಿಸ್ಥಿತಿ ಒಂದು ಸ್ಕೂಲು ಕಟ್ಟಬೇಕಾದರೆ ಬರುತ್ತದೆ. ಈ ತುರ್ತುಪರಿಸ್ಥಿತಿಯಲ್ಲಿ ನಿಮ್ಮ ಊರಿನಲ್ಲಿ ಸ್ಕೂಲು ಕಟ್ಟುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಒಮ್ಮೇಲೆ ಒಂದು ಪಂಚಾಯಿತಿ ಕಮ್ಯೂನಿಟಿ ಹಾಲ್ ಬೇಕೆಂದರೆ, ಎಮರ್ಜನ್ಸಿ, ಆದ್ದರಿಂದ ಸರ್ಕಾರದವರು ನಿಲ್ಲಿಸಿಬಿಟ್ಟಿದ್ದಾರೆಂದು ಹೇಳುತ್ತಾರೆ. ನಾನಾದರೂ ಸರಕಾರವನ್ನು ಕೇಳುತ್ತೇನೆ: ಪ್ರೈಮರಿ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಕ್ಕಿಂತ ನಮ್ಮ ದೇಶದಲ್ಲಿ ಮುಖ್ಯವಾದ ವಿಷಯ ಬೇರೆಯೇನಿದೆ? ಸ್ಕೂಲು ಕಟ್ಟಡಗಳಿಲ್ಲದೆ ಹೇಗೆ ವಿದ್ಯಾಭ್ಯಾಸ ಮುಂದುವರಿಸುತ್ತೀರಿ? ಜನತೆಯಲ್ಲಿ ವಿದ್ಯಾಭ್ಯಾಸ ಹೇಗೆ ಹರಡುತ್ತದೆಂದು ಕೇಳುತ್ತೇನೆ. ಕಮ್ಯೂನಿಟಿ ಡೆವಲಪ್‌ಮೆಂಟ್ ಸ್ಕೀಮುಗಳು ಮತ್ತು ನಾನಾ ಸ್ಕೀಮುಗಳನ್ನು ದೇಶದಲ್ಲಿ ಮಾಡಿ ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡುತ್ತಿರುವಾಗ, ಸ್ಕೂಲು ಕಟ್ಟಲಿಕ್ಕೆ ತುರ್ತು ಪರಿಸ್ಥಿತಿಯಿಂದ ಹಣವಿಲ್ಲವೆಂದರೆ, ನನಗಾದರೂ ನಿಮ್ಮ ಕಾರ್ಯ ವಿಧಾನ, ನಿಮ್ಮ ಯೋಜನೆ, ಅರ್ಥವಾಗುವುದಿಲ್ಲ. ಮಂತ್ರಿಗಳ ಸಂಖ್ಯೆ ಜಾಸ್ತಿಯಾಗಿದೆ, ತುಂಬಾ ಹಣ ಖರ್ಚಾಗುತ್ತಿದೆ. ಅದರ ಸಂಖ್ಯೆಯನ್ನು ಕಡಮೆ ಮಾಡಬೇಕೆಂದು ಕಾಮರಾಜ ಸೂತ್ರ ಪ್ರಚಾರವಾಯಿತು. ಆ ಕಾಮರಾಜ ಸೂತ್ರ ನಮ್ಮ ಮಂತ್ರಿಮಂಡಲಕ್ಕೆ ಅನ್ವಯವಾಗುವುದಿಲ್ಲವೇ ಎಂದು ಕೇಳುತ್ತೇನೆ. ತುರ್ತು ಪರಿಸ್ಥಿತಿಯಿಂದ ಜನಗಳು ತ್ಯಾಗ ಮಾಡಬೇಕಾದರೆ, ತೆರಿಗೆಗಳ ಭಾರ ಹೊರಬೇಕಾದರೆ, ಆ ಭಾರ ನಿಮ್ಮ ಮೇಲೆ ಸ್ವಲ್ಪವಾದರೂ ಬೀಳಬೇಕು. ಮಂತ್ರಿಗಳು ಸಣ್ಣ ಸಣ್ಣ ಮನೆಯಲ್ಲಿ ಇರಲು ತಯಾರಿಲ್ಲ, ನಿಮಗೆ ದೊಡ್ಡ ದೊಡ್ಡ ಮನೆ ಬೇಕು. ಕಾರು ಬೇಕು ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನಿಮಗೆ ಎಷ್ಟು ದೊಡ್ಡ ಮನೆ ಬೇಕು ಈಗಿನ ಮಂತ್ರಿಗಳ ಒಂದೊಂದು ಮನೆಯಲ್ಲಿ ಇಬ್ಬರು ಮಂತ್ರಿಗಳು ಇರುವುದಕ್ಕೆ ಸಾಧ್ಯವಿಲ್ಲವೆ? ಬೆಂಗಳೂರಿನಲ್ಲಿ ಸರಕಾರಿ ಕಟ್ಟಡಗಳ ಸಾಲದೆ ಎಷ್ಟು ಖಾಸಗಿ ಬಂಗಲೆಗಳನ್ನು ತೆಗೆದುಕೊಂಡು ಸಾವಿರಾರು ರೂಪಾಯಿ ಬಾಡಿಗೆ ಕೊಡುತ್ತಾ ಇಲ್ಲವೇ! ಒಂದು ಬಂಗಲೆಯಲ್ಲಿ ನಾಲ್ಕು ಜನ ಮಂತ್ರಿಗಳಿರಬಹುದು. ನೀವೆಲ್ಲರೂ ಹುಟ್ಟಿದಾಗಿನಿಂದ ರಾಜ ಮಹಾರಾಜರುಗಳ ಅರಮನೆಗಳಲ್ಲಿ ಹುಟ್ಟಿ ಬೆಳೆದವರೇ? ಹಿಂದೆ ದೊಡ್ಡ ದೊಡ್ಡ ಮಂತ್ರಿಗಳು ಹಿಂದೆ ಇದ್ದ ಮನೆಗಳನ್ನು ನಾನು ನೋಡಿದ್ದೇನೆ. ಅವರ ಮನೆಗಳಲ್ಲಿ 2-3 ರೂಮುಗಳಿಗೆ ಅಭಾವವಾಗಿತ್ತು. ಇವತ್ತು ಇವರಿಗೆ ದೊಡ್ಡ ದೊಡ್ಡ ಬಂಗಲೆಗಳು, ಮಹಾರಾಜರ ಅರಮನೆಗಳಿಗೆ ಸಮಾನವಾದ ಬಂಗಲೆಗಳು ಬೇಕು. ನೀವು ಇಂಥ ಮನೆಗಳಲ್ಲಿ ವಾಸಮಾಡಿ, ನಿಮ್ಮ T.A. ಮತ್ತು ನಿಮ್ಮ ಸಂಬಳದಲ್ಲಿ ಒಂದು ರೂಪಾಯಿ ಕಡಮೆ ಮಾಡಿಕೊಳ್ಳುವುದಕ್ಕೆ ತಯಾರಿಲ್ಲದೆ, ದೇಶದ ಜನತೆಯನ್ನು

ಉದ್ಧಾರ ಮಾಡುವುದಕ್ಕೆ, ನೌಕರರಿಗೆ ಸಂಬಳ ಕೊಡುವುದಕ್ಕೆ ಸ್ಕೂಲು ಕಟ್ಟಡ ಕಟ್ಟುವುದಕ್ಕೆ ಆಗುವುದಿಲ್ಲ. ತುರ್ತುಪರಿಸ್ಥಿತಿ ಬಂದಿದೆ ಎಂದು ಹೇಳಿದರೆ ಯಾರಾದರೂ ಒಪ್ಪುತ್ತಾರೆಯೇ! ತುರ್ತುಪರಿಸ್ಥಿಯ ಅನುಭವ ನಿಜವಾಗಿ ಜನಗಳಿಗೆ ಮನವರಿಕೆಯಾಗಬೇಕಾದರೆ, ಜನಗಳ ಸಹಕಾರ ಬೇಕಾಗಿದ್ದರೆ ನಿಮ್ಮಲ್ಲಿ ಪರಿವರ್ತನೆಯಾಗಬೇಕು; ನಿಮ್ಮ ಸರಕಾರದ ವಿಧಾನದಲ್ಲಿ ದುಂದುಗಾರಿಕೆ ಕಡಮೆಯಾಗಬೇಕು. ಅದು ನ್ಯಾಯ, ನೀವು ಮಾಡುವ ಖರ್ಚನ್ನು ಕಡಮೆ ಮಾಡಬೇಕೆಂದು ನಾನಾದರೂ ಈ ದಿವಸ ತಿಳಿಸ ಬಯಸುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯ ಎಂದರೆ ಪರಕೀಯರ ಆಕ್ರಮಣದ ಭಯದಿಂದ ಜನರನ್ನು ರಕ್ಷಣೆ ಮಾಡುವುದಕ್ಕೆ ದೇಶದ ಜನ ಯುದ್ಧಕ್ಕೆ ಸೇರಬೇಕೆಂದು ತಿಳಿಸುತ್ತಾ ಇದ್ದಾರೆ ಈ ದಿವಸ ನಮ್ಮ ದೇಶದ ಸ್ವಾತಂತ್ರವನ್ನು ಕಾಪಾಡಿಕೊಳ್ಳಬೇಕು, ಪರಕೀಯರಿಂದ ಈ ದೇಶದ ಆಕ್ರಮಣ ವಾಗದಂತೆ ನೋಡಿಕೊಳ್ಳಬೇಕು ಎನ್ನುವುದು ಸರಿ. ಆದರೆ ನಾವಾದರೂ ಮುಖ್ಯವಾಗಿ ತಿಳಿದು ಕೊಳ್ಳಬೇಕಾದ್ದು ಏನೆಂದರೆ ಸೈನ್ಯದಲ್ಲಿ ಇರುವ ಜನರು ಯಾರು? ಮಂತ್ರಿಗಳ ಮಕ್ಕಳು, ಶ್ರೀಮಂತರ ಮಕ್ಕಳು ಬಂಧುಗಳು ಯಾರೂ ಕೂಡ ಸೈನ್ಯದಲ್ಲಿ ಇಲ್ಲ. ಕೂಲಿಗಾರರು ಮತ್ತು ಬಡ ಜನರ ಮಕ್ಕಳು ಸೈನ್ಯಕ್ಕೆ ಸೇರಿರುತ್ತಾರೆ. ಅಂತಹ ಬಡ ಜನರು ಈ ದೇಶದಲ್ಲಿ ಜೀವನ ಮಾಡು ವುದಕ್ಕೆ ಸಾಧ್ಯವಿಲ್ಲದಂತೆ ಮಾಡಿದರೆ ಅವರ ಮಕ್ಕಳು ಸೈನಿಕರಾಗಿ ಹೋದವರು ಹೇಗೆ ಉತ್ಸಾಹ ದಿಂದ ಯುದ್ಧ ಮಾಡುತ್ತಾರೆ? ದೇಶದಲ್ಲಿ ನಿಜವಾಗಿಯೂ ಸಂತೃಪ್ತಿಯ ವಾತಾವರಣವನ್ನು ಕಲ್ಪಿಸಿ ಸಾಮಾನ್ಯ ಜನರು ಸುಖವಾದ ಜೀವನವನ್ನು ನಡೆಸಲಿಕ್ಕೆ ಸಹಾಯ ಮಾಡದಿದ್ದರೆ ಯೋಧರಿಗೆ ಉತ್ಸಾಹ ಬರಲಿಕ್ಕೆ ಇಲ್ಲ, ಅವರು ನಿಜವಾಗಿಯೂ ನಮ್ಮ ದೇಶವನ್ನು ರಕ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ತಿಳಿಸುತ್ತೇನೆ. ಚೈನಾದವರೊಡನೆ ಯುದ್ಧ ಮಾಡುವುದು ಸಣ್ಣ ವಿಷಯವಲ್ಲ. ಚೈನಾ ದಲ್ಲಿ ಇವತ್ತಿನ ದಿವಸ ಕ್ರಾಂತಿಕಾರಕ ರೈತ ಕಾರ್ಮಿಕ ಸರ್ವಾಧಿಕಾರಿ ಸರಕಾರ ಇದೆ, ಪ್ರತಿಯೊಬ್ಬ ಸಾಮಾನ್ಯ ಪ್ರಜೆಯೂ ಬೆಂಬಲ ಪಡೆದಿರತಕ್ಕ ಸರಕಾರ ಅಲ್ಲಿ ಇದೆ. ಹಾಗಿರುವಾಗ ಇಲ್ಲಿರತಕ್ಕ ಸಾಮಾನ್ಯ ಜನತೆಯ ಸುಖ ಸಂತೋಷದ ಕಡೆಗೆ ಗಮನ ಕೊಡದೇ ಹೋದ ಪಕ್ಷದಲ್ಲಿ ಸೈನ್ಯಕ್ಕೆ ಹೋಗ ತಕ್ಕ ಜನರಿಗೆ ಯಾವ ಉತ್ಸಾಹದಿಂದ ಹೋರಾಟ ಮಾಡುವುದಕ್ಕೆ ಮನಸ್ಸು ಬರುತ್ತದೆ ಎಂದು ಕೇಳು ತ್ತೇನೆ. ಆದ್ದರಿಂದ ಮುಖ್ಯವಾಗಿ ಈ ಯುದ್ಧದ ಪ್ರಯತ್ನ ಸರಿಯಾಗಿ ನಡೆಯಬೇಕಾದರೆ ನಮ್ಮ ದೇಶದ ರಕ್ಷಣೆ ಆಗಬೇಕಾದರೆ ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ದೇಶದಲ್ಲಿ ಬೆಳೆದಿರುವ ಭ್ರಷ್ಟಾಚಾರ ವನ್ನು ನಿರ್ಮೂಲ ಮಾಡಬೇಕು. ಲಂಚಕೋರ ಅಧಿಕಾರಿಗಳನ್ನು ತೆಗೆದು ಹಾಕಿದರೆ ಹೈಕೋರ್ಟು ಅಡ್ಡಿ ಬಂದರೆ ಅದಕ್ಕೆ ಅವಕಾಶವಿಲ್ಲದಂತೆ ಮಾಡಲು ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕು. ಏನು ಕಾರ್ಯಕ್ರಮ ಬೇಕಾದರೂ ಕೂಡ ತೆಗೆದುಕೊಂಡು ರಾಜ್ಯಾಂಗವನ್ನು ಬೇಕಾದರೂ ತಿದ್ದು ಪಡಿ ಮಾಡಿ, ಭ್ರಷ್ಟಾಚಾರವನ್ನು ನಿರ್ಮೂಲ ಮಾಡಿ ಜನತೆ ಮಾದರಿಯಾಗಿ ನಡೆದುಕೊಳ್ಳದಿದ್ದರೆ ದೇಶದ ರಕ್ಷಣಾ ಪ್ರಯತ್ನ ಯಶಸ್ವಿಯಾಗದು ಯಾವುದೇ ಅಭಿವೃದ್ಧಿ ಕಾರ್ಯವೂ ಕೂಡ ಆಗಲಾರದು ಎಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ ಗುರೆಡ್ಡಿ (ಮುದ್ದೇಬಿಹಾಳ್).—26 ನೆಯ ತಾರೀಖು ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ನಿಜವಾಗಿಯೂ ಉತ್ತೇಜನಕಾರಿಯಾದಂತಹ ಮಾತುಗಳನ್ನು ಆಡಿ ನಮ್ಮ ಮೇಲೆ, ಎಂದರೆ ಮಾನ್ಯ ಸದಸ್ಯರಾದ ನಮ್ಮೆಲ್ಲರ ಮೇಲೆ, ಒಂದು ಗುರುತರವಾದ ಜವಾಬ್ದಾರಿಯನ್ನು ಹೊರಿಸಿದ್ದಾರೆ. ಅದನ್ನು ನೆರವೇರಿಸುವಂತಹ ಕಾರ್ಯ ನಮ್ಮ ಮೇಲೆ ಬಿದ್ದಿದೆ. ರಾಜ್ಯಪಾಲರು ಹೇಳಿದಹಾಗೆ ನಮ್ಮಲ್ಲಿ ಭಾವ ಐಕ್ಯತೆ ಮೂಡಿ ಬೆಳಗಿದೆ. ಐಕ್ಯತೆ ಆಗದ ವಿನಾ ನಮ್ಮ ರಾಜ್ಯ ಪ್ರಗತಿ ಹೊಂದುವುದಿಲ್ಲ; ಅದನ್ನು ಮುಂದುವರಿಸಿಕೊಂಡು ಹೋಗುವುದು ಅತಿ ಮಹತ್ವದ ವಿಷಯ ಎಂಬುದನ್ನು ಅವರು ತಮ್ಮ ಭಾಷಣದ ಆಖೈರಿನಲ್ಲಿ ಹೇಳಿದ್ದಾರೆ. ಅದನ್ನು ಮೊದಲನೆಯ ದಾಗಿ ಪ್ರಸ್ತಾಪ ಮಾಡುತ್ತಾ ಇದ್ದೇನೆ. ರಾಜ್ಯ ಇವತ್ತು ಸುಗಮವಾಗಿ ಇರಬೇಕಾದರೆ, ರಾಜ್ಯದ ಪ್ರಗತಿ ಸರ್ವತೋಮುಖವಾಗಿ ಆಗಬೇಕಾದರೆ ನಮ್ಮಲ್ಲಿ ಇದ್ದಂತಹ ಸಣ್ಣ ಮನಸ್ಸು ಏನಿದೆ ಈ ಭಾಗ ಆ ಭಾಗ ಎಂಬ ಪ್ರವೃತ್ತಿ. ಅದನ್ನು ಕೋವಿದರು ಭಾವನೆಯನ್ನು ಹೊಡೆದೋಡಿಸಿ ನಮ್ಮ ರಾಜ್ಯ ಒಂದು ಎಂಬ ಭಾವನೆಯಿಂದ ನಾವು ನಮ್ಮಲ್ಲಿಯ ಭೇದಭಾವನೆಗಳನ್ನು ಮರೆತು ಹೊಂದಿ ಕೊಳ್ಳಬೇಕಾಗಿದೆ. ರಾಜ್ಯಪಾಲರು ಕನ್ನಡದಲ್ಲಿ ಪ್ರಪ್ರಥಮ ಭಾಷಣ ಮಾಡಿ ಕರ್ನಾಟಕ ಇತಿಹಾಸ ದಲ್ಲಿ ಒಂದು ಹೊಸ ಅಧ್ಯಾಯವನ್ನು ಅವರು ಇವತ್ತಿನ ದಿವಸ ಸ್ಥಾಪಿಸಿದ್ದಾರೆ. ಇಂತಹ ಸಮಯ ದಲ್ಲಿ ಆ ಭಾಗ ಈ ಭಾಗ ಎಂಬುದನ್ನು ಮರೆತು ರಾಜ್ಯ, ಒಂದು ಎಂಬ ಭಾವನೆಯನ್ನು ಇಂದು ನಾವೆಲ್ಲರೂ ತಂದುಕೊಳ್ಳಬೇಕಾಗಿದೆ, ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ರಾಜ್ಯಪಾಲರು ರಾಜ್ಯದ ಸರ್ವತೋಮುಖವಾದ ಏಳಿಗೆಗೆ ಒಕ್ಕಲುತನದ ಅಭಿ ವೃದ್ಧಿಗೆ, ಕೈಗಾರಿಕೆಗಳ ಬೆಳವಣಿಗೆಗೆ ಮತ್ತು ವಿದ್ಯುಚ್ಛಕ್ತಿ ಹೆಚ್ಚು ತ್ವರಿತವಾಗಿ ಉತ್ಪಾದನೆಯಾಗಿ ಅದು ಎಲ್ಲಾ ಪ್ರದೇಶಗಳಿಗೂ ದೊರೆಯಬೇಕು ಎನ್ನುವ ಬಗೆಗೆ ಪ್ರಸ್ತಾಪ ಮಾಡಿದ್ದಾರೆ. ಮೈಸೂರ್

(ಶ್ರೀ ಎಸ್. ಎಂ. ಗುರೆಡ್ಡಿ)

ಇರಿಗೇಷನ್ ಮತ್ತು ಮೀಡಿಯಂ ಇರಿಗೇಷನ್ ಮತ್ತು ಮೇಜರ್ ಇರಿಗೇಷನ್ ಎಂದು ವಿಭಾಗ ಮಾಡಿ ಈಗಾಗಲೇ ಸಣ್ಣ ನೀರಾವರಿ ಸಲುವಾಗಿ ಅನೇಕ ಯೋಜನೆಗಳನ್ನು ಮಾಡಿದ್ದಾರೆ ಇನ್ನು ಮುಂದೆಯೂ ಕೂಡ ಅವನ್ನು ಮುಂದುವರಿಸಿಕೊಂಡು ಹೋಗುವುದಾಗಿ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸಾಲಗಳನ್ನು ಕೊಡುವುದಕ್ಕೆ ಉದಾರವಾದ ನಿಯಮಗಳನ್ನು ರಚಿಸಿದ್ದರೂ ಇನ್ನೂ ಒಂದು ವ್ಯಾಪಕವಾದ ದೃಷ್ಟಿ ಅದರಲ್ಲಿ ಬಿದ್ದಿಲ್ಲ. ಇನ್ನೂ ಕೆಲವು ನಿಯಮಗಳು ಕಟುತರವಾಗಿ ಇರುವುದರಿಂದ ಬಡ ಹಿಡುವಳಿದಾರರಿಗೆ ಸಾಲ ಸಿಕ್ಕುತ್ತಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಇನ್ನು ದೊಡ್ಡ ನೀರಾವರಿಯ ಸಲುವಾಗಿ ನಮ್ಮ ರಾಜ್ಯ ಸರಕಾರದವರು 32 ಯೋಜನೆಗಳನ್ನು ನಿರೂಪಿಸಿ ಈಗಾಗಲೇ 25 ಯೋಜನೆಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಅದರ ಪ್ರಗತಿ ಅಷ್ಟು ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ. ಅದಕ್ಕೆ ಮೂಲತಃ ರೊಕ್ಕದ ಅಡಚಣೆ ಇದೆ ಎಂದು ಅನಿಸುತ್ತಾ ಇದೆ. ನಮ್ಮ ರಾಜ್ಯಪಾಲರು ಹೇಳಿದ ಹಾಗೆ ಕೇಂದ್ರ ಸರಕಾರದವರು ನಮ್ಮ ಕೃಷ್ಣಾ ಮೇಲ್ದಂಡೆ ಯೋಜನೆಗೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ ಎಂಬುದನ್ನು ವೇಗವಾಗಿ ಹೇಳಿದ್ದಾರೆ. ಈ ಕೃಷ್ಣಾ ಮೇಲ್ದಂಡೆ ಯೋಜನೆ ಒಂದು ವಾದಗ್ರಸ್ತ ಪ್ರಶ್ನೆ ಆಗಿದೆ. ಇದು ಅಲಮಟ್ಟಿಯಲ್ಲಿ ಆಗಬೇಕೇ, ನಾರಾಯಣಪುರದಲ್ಲಿ ಆಗಬೇಕೇ ಎಂಬ ಕೂಗು ಎದ್ದಿದೆ, ಅದು ಒಂದು ವಾದಗ್ರಸ್ತ ವಿಷಯವಾಗಿ ನಿಂತಿದೆ. ಇಂತಹ ಸಂದರ್ಭದಲ್ಲಿ ರಾಜ್ಯಪಾಲರು ಅಲಮಟ್ಟಿಯಲ್ಲಿ ಮತ್ತು ನಾರಾಯಣಪುರದಲ್ಲಿ ಈ ಎರಡೂ ಯೋಜನೆಗಳನ್ನು ಕೈಕೊಂಡು ಪೂರೈಸುತ್ತೇವೆ ಎಂಬ ನಿರ್ದಿಷ್ಟವಾದ ಧೋರಣೆಯನ್ನು ತೋರಿಸಲಿಲ್ಲ. ಅವರು ಒಂದು ಗೌಪ್ಯವಾದ ರೀತಿಯಲ್ಲಿ ಇದನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗತಕ್ಕ ಬಿಜಾಪುರ, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಇದು ಕಳವಳವನ್ನುಂಟುಮಾಡಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ವಿಷಯದಲ್ಲಿ ನಮ್ಮಲ್ಲಿ ಕೆಲವು ಜನರಲ್ಲಿ ತಪ್ಪು ಕಲ್ಪನೆ ಇದೆ, ಕೇಂದ್ರ ಸರಕಾರದವರು ನಾರಾಯಣಪುರಕ್ಕೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ ಎಂದು ಒಂದು ನಿಲುವು ಇದೆ. ಇನ್ನೊಂದುಕಡೆ ಅಲಮಟ್ಟಿಯಲ್ಲಿ ಆಗಬೇಕು ಅನ್ನುವುದು ಇದೆ. ಈ ಮಧ್ಯದಲ್ಲಿ ನಮ್ಮ ರಾಜ್ಯ ಸರಕಾರದವರು ಯಾವ ನಿರ್ಣಯವನ್ನು ಕೈಕೊಂಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕಾಗಿತ್ತು, ಸ್ಪಷ್ಟಪಡಿಸಿಲ್ಲ. ಈ ಒಂದು ಮಹತ್ವದ ಹೊಣೆಯನ್ನು ಅವರು ಮರೆತಿದ್ದಾರೆ ಎಂದು ಹೇಳುತ್ತೇನೆ. ಇಂತಹ ಬೃಹತ್ ಯೋಜನೆಗಳನ್ನು ಕೈಕೊಳ್ಳುವಾಗ ರೊಕ್ಕದ ಅಡಚಣೆಗಳು ಬರುತ್ತವೆ ಎಂದು ನನಗೆ ಅನಿಸುತ್ತಾ ಇದೆ. ಈ ಯೋಜನೆಗಳನ್ನೆಲ್ಲಾ ಕೇಂದ್ರ ಸರಕಾರದವರಿಗೆ ವಹಿಸಿಕೊಡಬೇಕು. ಇವಕ್ಕೆ ಕೇಂದ್ರ ಸರಕಾರದವರ ಪೂರ್ಣವಾದ ಸಹಕಾರ ಅವಶ್ಯಕ. ಆ ದಿಶೆಯಲ್ಲಿ ಸರ್ಕಾರದವರು ನಮ್ಮ ಕೇಂದ್ರ ಸರಕಾರದವರನ್ನು ಒತ್ತಾಯಪಡಿಸಿ ಈ ಯೋಜನೆಗಳನ್ನು ಅವರಿಗೇ ಒಪ್ಪಿಸಿ ಪೂರ್ಣ ಸಹಾಯವನ್ನು ಅವರಿಂದಲೇ ದೊರಕಿಸಿಕೊಳ್ಳುವುದು ಯೋಗ್ಯ ಎಂದು ನನಗೆ ಅನಿಸುತ್ತಾ ಇದೆ. ಈಗ ನಮ್ಮ ಸರಕಾರದವರು 30-31 ಯೋಜನೆಗಳನ್ನು ಕೈಕೊಳ್ಳುವುದಾಗಿ ಹೇಳಿದ್ದಾರೆ. ಅದರಲ್ಲಿ ಒಂದೂ ಈವರೆಗೂ ಕಾರ್ಯಗತವಾಗಿಲ್ಲ. ಇದಕ್ಕೆ ದುಡ್ಡಿನ ಅಭಾವ ಕಾರಣ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯಪಾಲರು ಒಂದು ಸಂತೋಷದಾಯಕವಾದ ಮಾತನ್ನು ಹೇಳಿದ್ದಾರೆ. ಕೃಷ್ಣಾ ಗೋದಾವರಿ ನೀರಿನ ಸಮಸ್ಯೆ ಎದ್ದಿದೆ ಇದು ಒಂದು ದೊಡ್ಡ ಸಮಸ್ಯೆ ಇದು ಪರಿಹಾರವಾಗಬೇಕಾದರೆ ನಾವು ಕೇಂದ್ರ ಸರಕಾರದವರನ್ನು ಒತ್ತಾಯಪಡಿಸಬೇಕು, ಇದರಲ್ಲಿ ನಮಗೆ ನ್ಯಾಯವಾಗಿ ಸಿಕ್ಕಬೇಕಾದ ಪಾಲು ಸಿಕ್ಕಿಲ್ಲ ಎಂದು ಹೇಳಿದ್ದಾರೆ. ನಿಜವಾಗಿಯೂ ಇದಕ್ಕಾಗಿ ನಾವು ಹೆಮ್ಮೆ ಪಡಬೇಕಾಗಿದೆ. ಈ ದಿಶೆಯಲ್ಲಿ ನಮ್ಮ ರಾಜ್ಯಪಾಲರು ಒಂದು ದಿಟ್ಟತನದ ಹೆಜ್ಜೆಯನ್ನು ಇಟ್ಟು ನಮಗೆ ಬೇಕಾದ ಒಂದು ನೀರಿನ ಪಾಲನ್ನು ದೊರಕಿಸಿಕೊಂಡು ಈ ಅಭಾವ ಪ್ರದೇಶಗಳಿಗೆ ಸೂಕ್ತವಾದ ಪರಿಹಾರವನ್ನು ನೀಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಲಪ್ರಭಾ ಘಟಪ್ರಭಾ ಇವುಗಳೆಲ್ಲಾ ಇವೆ, ಇವುಗಳನ್ನು ಮಾಡುವುಕ್ಕೆ ಯೋಚನೆ ಮಾಡಿದ್ದಾರೆ ಅದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಇನ್ನು ಮಳೆ ಬೆಳೆಗಳ ಸಲುವಾಗಿ ರಾಜ್ಯಪಾಲರು ಕೆಲವೊಂದು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಮಳೆ ಬೆಳೆ ಇಲ್ಲದೆ, ಕೇವಲ ಚಿತ್ರದುರ್ಗ, ತುಮಕೂರು, ಕೋಲಾರು, ಮಂಡ್ಯ, ಮೈಸೂರು ಈ ಭಾಗಗಳಲ್ಲಿ ಅಷ್ಟೇ ಅಭಾವ ತಲೆದೋರಿದೆ ಎಂಬ ಮಾತು ನಿಜವಲ್ಲವೆಂದು ಹೇಳುತ್ತಾ ಇದ್ದೇನೆ.

3-30 P.M.

ಈಗ ಬಿಜಾಪುರ, ಗುಲ್ಬರ್ಗದ ಅರ್ಧಭಾಗ, ರಾಯಚೂರಿನ ಅರ್ಧ ಭಾಗ ಹೀಗೆ ಕೆಲವೊಂದು ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ಜನರು ಹೇಳುತ್ತಿದ್ದಾರೆ. ಆದರೆ ಕೇವಲ 3-4 ಜಿಲ್ಲೆ

ಗಳಲ್ಲಿ ಮಾತ್ರ ಅಭಾವವಿದೆಯೆಂದು ಹೇಳುವುದು ಸರಿಯಲ್ಲ. ನಮ್ಮ ಜಿಲ್ಲೆಯಲ್ಲಿ ಸಕಾಲಕ್ಕೆ ಮಳೆ ಯಾಯಿತು, ಆದರೆ ಪೀಕು ಇರುವಾಗ ಹೆಚ್ಚು ಮಳೆಯಾಗಿ ಪೈರು ಮನೆಗೆ ಬರಲಿಲ್ಲ. ಇದೇ ಪ್ರಕಾರ ಹೆಚ್ಚು ಮಳೆ ಬಂದರೂ ಹವಾಗುಣ ಸರಿಯಾಗಿಲ್ಲದೆ ಧಾರವಾಡದ ಕೆಲವು ಭಾಗಗಳಲ್ಲಿ, ಬಿಜಾಪುರ ಮತ್ತು ರಾಯಚೂರುಗಳಲ್ಲಿ ಹತ್ತಿ ಬೆಳೆ ಸಂಪೂರ್ಣವಾಗಿ ಕೆಟ್ಟಿದೆಯೆಂಬುದನ್ನು ಸರ್ಕಾರ ತಿಳಿಯಬೇಕು. ಇಂಥ ಪರಿಸ್ಥಿತಿಯಲ್ಲಿ ಕೇವಲ 3–4 ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ಹೇಳುವುದು ನಿಜವಲ್ಲ. ಕೂಲಂಕಷವಾಗಿ ಪರಿಶೀಲಿಸಿ ಆ ಭಾಗಗಳಿಂದ ವರದಿ ತರಿಸಿ ಆ ಪ್ರದೇಶದಲ್ಲಿ ಅಭಾವ ಪರಿಸ್ಥಿತಿ ಇದೆಯೇ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು.

ಈಗಾಗಲೆ ಶಿಕ್ಷಣದ ವಿಚಾರವಾಗಿ ನಮ್ಮ ಸದಸ್ಯರನೇಕರು ಅಲ್ಲನಲ್ಲದ ಆರೋಪ ಮಾಡಿದ್ದಾರೆ. ಈಗಾಗಲೇ 6ರಿಂದ 9 ವರ್ಷದವರೆಗಿರುವ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕೊಡುವುದಾಗಿ ಸಾರಿದಮೇಲೆ ಶೇಕಡ 90 ಮಂದಿಗೆ ಪುಕ್ಕಟ್ಟೆ ಶಿಕ್ಷಣ ದೊರಕಿದಂತಾಗಿದೆ. ಕಾಯಿದೆಯ ಪ್ರಕಾರ ಶೇಕಡ 85 ಮಂದಿ ಸೆಕೆಂಡರಿ ಶಿಕ್ಷಣದಲ್ಲಿ ಫ್ರೀಷಿಪ್ ಪಡೆದು ಮುಂದುವರೆಯುತ್ತಿದಾರೆ. ಹೀಗಿರುವಾಗ ನಮ್ಮ ಜವಾಬ್ದಾರಿಯನ್ನರಿಯದ ಶಿಕ್ಷಣದ ವಿಚಾರದಲ್ಲಾಗಲಿ, ಇತರ ವಿಚಾರಗಳಲ್ಲಾಗಲಿ ತಪ್ಪು ಕಲ್ಪನೆ ಮಾಡಿಕೊಂಡು ಸರ್ಕಾರವನ್ನು ದೂಷಿಸುವುದು ಸರಿಯಲ್ಲ. ಯಾವುದೇ ಒಂದು ಯೋಜನೆ ಕಾರ್ಯರೂಪಕ್ಕೆ ಬರುವಾಗ ಅನೇಕ ಅಡಚಣೆಗಳು ಬರುತ್ತವೆ. ಅವೆಲ್ಲವನ್ನೂ ನಿರಿಪಡಿಸಿಕೊಂಡು ಮುಂದುವರೆಯುವುದು ಸರ್ಕಾರದ ಕರ್ತವ್ಯ. ಆದರೆ ನಾವು ನಮ್ಮ ಜವಾಬ್ದಾರಿಯನ್ನು ಮರೆತು ಮಾತನಾಡುವುದು ಸರಿಯಲ್ಲ. ವೈಯಕ್ತಿಕವಾಗಿ ಒಬ್ಬ ಮಂತ್ರಿಗಳನ್ನು ಅಥವಾ ಇತರರನ್ನು ಟೀಕಿಸಿದರೆ ಪ್ರಗತಿ ಸಾಧಿಸಿದಂತಾಗುವುದಿಲ್ಲ.

ಇನ್ನೂ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ಮಿತ್ರರಾದ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಉದ್ವೇಗದಿಂದ ಕೆಲವು ಮಾತುಗಳನ್ನಾಡಿದ್ದಾರೆ. ಆ ಕೆಲಸವನ್ನು ಜೈನಾ ಸಹದ್ದಿನಲ್ಲಿ ಮಾಡಿದ್ದರೆ ಸರಿಹೋಗುತ್ತಿತ್ತು. ಹಿಂದೂಸ್ಥಾನವೆಲ್ಲಾ ಒಂದೇ ಎಂಬ ಭಾವನೆ ಇರುವಾಗ ಅವರು ಎರಡು ರೀತಿಯಲ್ಲಿ ಭಾವಿಸುವುದು ಯೋಗ್ಯವಲ್ಲ. 1956ನೇ ಅಥವಾ 1957ನೆಯ ಇಸವಿಯಲ್ಲಿ ಬಾರ್ಡರ್ ಡಿಸ್ಪ್ಯೂಟ್ ಮುಗಿದುಹೋಯಿತು. ಮತ್ತೆ ಅದನ್ನು ತದಕುವುದು ಸರಿಯಲ್ಲ.

Sri N. O. SAMAJI.—(Marathi)

ಸಭಾಪತಿಯವರು.—ಮರಾಠಿ ಭಾಷೆ ನನಗೆ ಬರುವುದಿಲ್ಲ. ಇಂಗ್ಲೀಷ್‌ನಲ್ಲಿ ಅಥವಾ ಕನ್ನಡದಲ್ಲಿ ಹೇಳಿ.

Sri B. P. KADAM (Karwar).—At the most the Chair can say that somebody must translate it. But it cannot say that he cannot speak in Marathi.

Sri N. O. SAMAJI.—(Marathi)

ಸಭಾಪತಿಯವರು.—ಶ್ರೀ ಗುರೆಡ್ಡಿಯವರು ಯಾವ ವ್ಯಕ್ತಿಯ ವಿಷಯದಲ್ಲೂ ಮಾತನಾಡಲಿಲ್ಲ. ಶ್ರೀ ಸುಂಠಣಕರ್ ಅವರು ಉದ್ರೇಕದಿಂದ ಹೇಳಿದರೆಂದು ಅಷ್ಟುಮಾತ್ರ ಪ್ರಸ್ತಾಪಿಸಿದರು. ಆದುದರಿಂದ ಕ್ರಿಯಾಕ್ಷೇಪವೇನೂ ಇಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ನಾವು ಮಹಾರಾಷ್ಟ್ರ ಅಥವಾ ಮತ್ತೊಂದು ಭಾಗದ ವಿಚಾರವನ್ನು ಹೇಳುವುದು ಯುಕ್ತವಲ್ಲ. ಇಡೀ ಹಿಂದೂಸ್ಥಾನ ಒಂದು ಎಂಬ ಭಾವನೆ ಇರುವಾಗ ಮಹಾರಾಷ್ಟ್ರ ಬೇರೆ, ಮೈಸೂರೇ ಬೇರೆ ಎಂಬ ವಿಚಾರ ಉದ್ಭವಿಸುವುದಿಲ್ಲ. ಮಹಾರಾಷ್ಟ್ರದ ವಿಚಾರದಲ್ಲಿ ಉದ್ವೇಗದಿಂದ ಮಾತನಾಡಬೇಕಾದರೆ ಹಿಮಾಲಯ ತಪ್ಪಲಲ್ಲಿ ಅಥವಾ ಪಾಕಿಸ್ಥಾನದ ಬಾರ್ಡರಿನಲ್ಲಿ ಹೋಗಿ ಮಾಡುವುದು ಯುಕ್ತ ಎಂದು ನಾನು ಭಾವಿಸಿದ್ದೇನೆ. ಆದಕಾರಣ ಭಾವೈಕ್ಯತೆಗೆ ಭಂಗ ಬಾರದಂತೆ ಉದ್ವೇಗದಿಂದ ಭಾಷಣ ಮಾಡುವುದನ್ನು ಆದಷ್ಟು ಬೇಗ ಕಡಮೆಮಾಡಿ ದೇಶದಲ್ಲಿ ಐಕ್ಯತೆ ಉಂಟುಮಾಡಲು ಮತ್ತು ಕೋಮುವಾರು ಭಾವನೆಗೆ ಅವಕಾಶವಿಲ್ಲದಂತೆ ಮಾಡಲು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಗಮನ ಕೊಡುತ್ತಾರೆಂದು ನಂಬಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಅಧ್ಯಕ್ಷಣಿಯವರೇ, ರಾಜ್ಯಪಾಲರು ಕನ್ನಡದಲ್ಲಿ ತಮ್ಮ ವರದಿಯನ್ನು ಸಭೆಗೆ ಒಪ್ಪಿಸಿದ್ದಕ್ಕಾಗಿ ಅನೇಕರು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ನನಗೂ ಆ ರೀತಿ ಸಂತೋಷವಾದರೂ, ಅವರ ವರದಿಯಲ್ಲಿ ವಿಶೇಷ ರೀತಿಯ ವಿಷಯಗಳನ್ನು ಪ್ರಸ್ತಾಪಿಸುತ್ತಾರೆ, ದೇಶದಲ್ಲಿ ರಾಜ್ಯಾಡಳಿತ ಯಾವರೀತಿ ನಡೆಯುತ್ತಿದೆ, ಲೋಪ

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ದೋಷಗಳೇನಿವೆ ಎಂಬುದನ್ನು ಜನರ ಮುಂದೆ ನಿರ್ಭಯವಾಗಿ ಇಡುತ್ತಾರೆಂಬ ಆಶೆಯಿತ್ತು. ಅದಕ್ಕೆ ಮುಖ್ಯ ಕಾರಣ ಕಾಂಗ್ರೆಸ್ ಅಧಿವೇಶನ ಭುವನೇಶ್ವರದಲ್ಲಿ ಸೇರಿದಾಗ ಜನರಿಗೆ ಕಾಂಗ್ರೆಸ್ ಸಂಸ್ಥೆಯಲ್ಲಿ ನಂಬಿಕೆ ಕಡಮೆಯಾಗುತ್ತಿದೆ, ಲಂಚ, ಅನೀತಿ, ಅಧರ್ಮ ಹೆಚ್ಚುತ್ತಿದೆ, ಅದನ್ನು ತಡೆಗಟ್ಟದಿದ್ದರೆ ಜನರಲ್ಲಿ ನಂಬಿಕೆ ಮೂಡುವುದಿಲ್ಲ, ಕ್ರಾಂತಿಕಾರಕ ಬದಲಾವಣೆಯಾಗುವಂತೆ ಮಾಡಬೇಕು, ಅದಕ್ಕೆ ತಕ್ಕ ಧ್ಯೇಯಧೋರಣೆ ಕಾಂಗ್ರೆಸ್ ತಾಳಬೇಕು ಎಂಬ ಅಭಿಪ್ರಾಯ ವ್ಯಕ್ತಪಟ್ಟಿತ್ತು. ಅದನ್ನು ನೋಡಿ ನಮ್ಮ ರಾಜ್ಯಪಾಲರು ಕೂಡ ತಮ್ಮ ಭಾಷಣದಲ್ಲಿ ಆ ಧ್ಯೇಯಗಳನ್ನು ಸಾಧಿಸಲು ಇರುವ ಲೋಪದೋಷಗಳನ್ನು ತೊಡೆದುಹಾಕಲು ಪ್ರಸ್ತಾಪಮಾಡುವರೆಂಬ ಆಶೆಯೇನಿತ್ತು, ಅದು ನಿರಾಶೆಯಾಯಿತು. ಈ ಭಾಷಣ ನೋಡಿ ಆ ಪ್ರಸ್ತಾಪವಿಲ್ಲದಿದ್ದದರಿಂದ ಸಂಕಟವಾಯಿತು. ನಮ್ಮ ದೇಶದ ಜನರಲ್ಲಿ ಈಗ ಸಾಕಷ್ಟು ತಿಳಿವಳಿಕೆಯುಂಟಾಗಿದೆ, ಜನರು ತಮ್ಮ ಕರ್ತವ್ಯವನ್ನರಿತಿದ್ದಾರೆ ಎಂದು ಅನೇಕರು ಹೇಳಿದರು. ಸರ್ಕಾರವೇನು ಮಾಡುತ್ತಿದೆ ಎಂಬುದನ್ನು ತಿಳಿಯಲು ಅವರು ಬಹಳ ಉತ್ಸಾಹ ತೋರಿಸುತ್ತಿದ್ದಾರೆ. ಹಿಂದೆ ಸ್ವರಾಜ್ಯ ಬರುವುದಕ್ಕೆ ಮುಂಚೆ ರಾಮರಾಜ್ಯ ಸ್ಥಾಪಿಸುತ್ತಾರೆ, ನ್ಯಾಯ, ಧರ್ಮ, ಸತ್ಯ ಪರಿಪಾಲನೆ ಮಾಡುತ್ತಾರೆ, ದೇಶಕ್ಕೆ ಕೀರ್ತಿ ಬರುತ್ತದೆ, ಒಳ್ಳೆಯ ತಳಹದಿಯಿಂದ ದೇಶ ಕಟ್ಟುತ್ತಾರೆ, ಮಾರ್ಗದರ್ಶನ ಸರಿಯಾದ ರೀತಿಯಲ್ಲಿ ನಡೆಯುತ್ತದೆ ಎಂಬ ನಂಬಿಕೆ ಇತ್ತು.

ಕಾಂಗ್ರೆಸ್ಸು ಸರಕಾರ ಬಂದು ಹದಿನಾರು ವರ್ಷಗಳಾದರೂ ಜನತೆಗೆ ಆಗುತ್ತಿರುವ ಅನ್ಯಾಯ, ಅಧರ್ಮಗಳನ್ನು ತಪ್ಪಿಸಿ ಸುಧಾರಿಸುವುದಕ್ಕೆ ಪ್ರಯತ್ನ ಮಾಡಲಿಲ್ಲ. ದಾರಿದ್ರ್ಯದ ದೆಸೆಯಿಂದ ಬಡಜನರು ಉಪವಾಸಮಾಡುತ್ತಾ ಎಷ್ಟು ಕಷ್ಟದಿಂದ ಜೀವನ ನಡೆಸುತ್ತಿದ್ದಾರೆ ಎನ್ನುವುದನ್ನು ಸರಕಾರದ ಆಡಳಿತ ಪಕ್ಷದವರು ಗಮನಕ್ಕೆ ತೆಗೆದುಕೊಂಡಂತೆ ಕಾಣುತ್ತಿಲ್ಲ. ಜನತೆಗೆ ಭೂಮಿ ಇಲ್ಲ. ಭೂಮಿ ಇದ್ದರೆ ಅದರಿಂದ ಉತ್ಪತ್ತಿಮಾಡಲು ಸಾಕಷ್ಟು ಸೌಕರ್ಯಗಳನ್ನು ಆಡಳಿತದವರು ಒದಗಿಸಿಕೊಡುತ್ತಿಲ್ಲ. ಇವೊತ್ತಿನ ದಿವಸ ಆಡಳಿತದವರು ಮಾಡಿರುವ ಯಾವ ಒಂದು ಆರ್ಡರೇ ಆಗಲಿ ಅದನ್ನು ಸತ್ಯದಿಂದ, ಧರ್ಮದಿಂದ ಮಾಡಿದ್ದೇವೆ ಎಂದು ಎದೆ ಮುಟ್ಟಿಕೊಂಡು ದೇವರ ಸಾಕ್ಷಿಯಾಗಿ ಹೇಳಿದರೆ ಆಗ ನಾನೂ ಒಪ್ಪುತ್ತೇನೆ. ಉದಾಹರಣೆಯಾಗಿ ಒಂದೇ ವಿಚಾರವನ್ನು ಇಲ್ಲಿ ಹೇಳುತ್ತೇನೆ. ಬೆಂಗಳೂರನ್ನೇ ತೆಗೆದುಕೊಳ್ಳಿ. ಬೆಂಗಳೂರಿನ ಸೈಟುಗಳು ಪ್ಯಾರಸೈಟ್ಸ್ ನಂತೆ ಆಗಿವೆ. ಒಬ್ಬರು ಒಂದು ಸೈಟನ್ನು ತಮ್ಮ ಹೆಸರಿನಲ್ಲಿ ತೆಗೆದುಕೊಳ್ಳುವುದು, ಮಾರನೇ ದಿವಸವೇ ಅದನ್ನು ಬ್ಲಾಕ್‌ನಲ್ಲಿ ಮತ್ತೊಬ್ಬರಿಗೆ ಮಾರಿ ಲಾಭ ಸಂಪಾದನೆ ಮಾಡುವುದು. ಹೀಗೆ ಒಬ್ಬರ ಹೆಸರಿನಲ್ಲಿ ಒಂದು ಸೈಟು, ಅಣ್ಣ ತಮ್ಮಂದಿರ ಹೆಸರಿನಲ್ಲಿ ಒಂದು ಸೈಟು ಎಂದು ಆಡಳಿತ ಪಕ್ಷದಲ್ಲಿರುವವರು ಮತ್ತು ರಾಜಕೀಯದಲ್ಲಿ ಪ್ರಭಾವವುಳ್ಳಂಥವರುಗಳು ಸೈಟ್‌ಗಳನ್ನು ಪಡೆದುಕೊಂಡು ಒಂದಕ್ಕೆರಡರಂತೆ ಮಾರಿಕೊಂಡು ಇದೊಂದು ಲಾಭದಾಯಕವಾದ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಸರಕಾರದವರು ನ್ಯಾಯವಾಗಿ ಹಾಗೂ ನೇರವಾಗಿ ಕೊಡುವ ಸೌಲಭ್ಯಗಳನ್ನುಪಯೋಗಿಸಿಕೊಂಡು ನಾವೂ ಜನತೆಗೆ ಸಹಾಯ ಮಾಡಬೇಕು ಮತ್ತು ಒಳ್ಳೆಯ ಭಾರತೀಯನಾಗಿರಬೇಕು ಎನ್ನುವಂತೆ ನಡೆಯಲು ಹಿಂದೆ ಗಾಂಧೀಜೀಯವರು ಹೇಳುತ್ತಿದ್ದಂತೆ ಸ್ವಲ್ಪ ತ್ಯಾಗವಿರಬೇಕು. ಈಗ ಏನಾಗಿದೆ ಎಂದರೆ ಎಲ್ಲ grabbers ಆಗಿದ್ದಾರೆ. ಎಲ್ಲವೂ ತನಗೇ ಬೇಕು, ಇನ್ನೂ ಹೆಚ್ಚಾಗಿ ಲಾಭ ಪಡೆಯಬೇಕು ಎನ್ನುವ ದುರಾಶೆಗೆ ಈಗಿರುವ ಆಡಳಿತ ಅವಕಾಶ ಮಾಡಿಕೊಡುತ್ತಿದೆ. ಎಲ್ಲ ಸೌಕರ್ಯಗಳೂ ಪಕ್ಷದ ಪ್ರತಿನಿಧಿಗಳಿಗಾಗಿ ಮಾಡಬೇಕು, ತಮಗೇ ಅನುಕೂಲವಾಗಬೇಕು ಎಂದು ಮಾಡುತ್ತಿರುವುದರಿಂದ ಸಾಮಾನ್ಯ ಜನಜೀವನದ ಮಟ್ಟ ಖಂಡಿತ ಮುಂದಕ್ಕೆ ಬರಲು ಸಾಧ್ಯವಿಲ್ಲ. ಇದರಿಂದ ನಮ್ಮ ದೇಶಕ್ಕೆ ನಷ್ಟವೇ ಹೊರತು ಜನತೆಗೆ ಅನುಕೂಲಗಳು ದೊರೆಯುವುದಿಲ್ಲ. ಆಡಳಿತ ಮಾಡುವ ಪಕ್ಷದವರು ತಾವೂ ಉಳಿಯಬೇಕಾದರೆ, ದೇಶದಲ್ಲಿರತಕ್ಕ ಜನತೆಯೂ ಮುಂದಕ್ಕೆ ಬರುವಂತೆ ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿ ಅವರೂ ಸುಖವಾಗಿ ಜೀವನ ನಡೆಸಲು ಸಹಾಯ ಮಾಡಬೇಕು. ಆಗ ಎಲ್ಲರೂ ನಿಮ್ಮ ಹಿಂದೆ ಬರುತ್ತಾರೆ. ಹಾಗೆ ಅನುಕೂಲ ಮಾಡಿಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಸರಕಾರ ಕೊಡಬೇಕು. ಆಗ ನಮ್ಮ ದೇಶವೂ ಮುಂದಕ್ಕೆ ಬರುತ್ತದೆ ಮತ್ತು ಭದ್ರವಾದ ದೇಶವೂ ಆಗುತ್ತದೆ. ನಿಮ್ಮ ಪಕ್ಷವೂ ಭದ್ರವಾಗುತ್ತದೆ. ಹಾಗೆ ನಿಮ್ಮ ಪಕ್ಷದಲ್ಲಿ ಏರ್ಪಾಟುಮಾಡಬಹುದು; ಅಲ್ಲಿ ಯಾರೂ ಪರಕೀಯರು ಇಲ್ಲ. ಆ ರೀತಿ ದೇಶವನ್ನು ಮುಂದಕ್ಕೆ ತರಲು ಸರಿಯಾದ ಹೆಜ್ಜೆಯನ್ನು ಇಡುವುದು ಅವಶ್ಯ. ಮೈಸೂರು ದೇಶದಲ್ಲಿರುವವರೂ ಕೂಡ ಭಾರತೀಯರು. ಅವರು ಚೆನ್ನಾಗಿ ಕೆಲಸ ಮಾಡುವವರು ಎನ್ನುವಂತೆ ರಾಜ್ಯವನ್ನಾಳಬೇಕು ಎಂದು ನಾನು ಸರಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇದರಲ್ಲಿರುವ ಇನ್ನೂ ಕೆಲವು ಲೋಪದೋಷಗಳನ್ನು ಇಲ್ಲಿ ಹೇಳುತ್ತೇನೆ. ನಮ್ಮ ದೇಶದಲ್ಲಿ ಸಹಕಾರ ಸಂಘ

ಗಳು ಅನೇಕವಾಗಿವೆ. ಸಹಕಾರ ಸಂಘಗಳನ್ನು ಸ್ಥಾಪನೆಮಾಡಿ ಅದರಿಂದ ಉತ್ಪನ್ನವಾದ ಪದಾರ್ಥಗಳು ಎಲ್ಲರಿಗೂ ಸಿಕ್ಕುವಂತೆ ಏರ್ಪಾಡು ಮಾಡುವ ಮೂಲಕ ಸಮತಾವಾದದ ಸಮಾಜವನ್ನು ಸ್ಥಾಪಿಸಬೇಕು; Democratic Socialism ಅನ್ನು ದೇಶದಲ್ಲೆಲ್ಲ ತರಬೇಕೆಂದು ನಾಯಕರು ಹೇಳುತ್ತಿದ್ದಾರೆ. ಎಲ್ಲರಿಗೂ ಸೌಕರ್ಯಗಳು ಸಿಕ್ಕಬೇಕಾದರೆ ಸಹಕಾರ ತತ್ವದ ಮೇಲೆ ಸಂಘಗಳನ್ನು ಸ್ಥಾಪಿಸಿ ಸೌಕರ್ಯಗಳನ್ನು ಕೊಡುವುದೇನೋ ಒಳ್ಳೆಯದು. ಆದರೆ ಈಗ ಆಗುತ್ತಿರುವ ಅನ್ಯಾಯಗಳನ್ನು ತಡೆಗಟ್ಟುವುದಕ್ಕೆ ಶಕ್ತಿಯಿಲ್ಲದೆ ಆಡಳಿತ ನಡೆಸಿದರೆ ಏನು ಪ್ರಯೋಜನ? ನಾನು ಒಂದೆರಡು ಸೊಸೈಟಿಗಳ ವಿಚಾರದಲ್ಲಿ ಹಿಂದೆ ಇಲ್ಲಿಯೂ ಹೇಳಿದ್ದೆ ಮತ್ತು ಮಾನ್ಯ ಮಂತ್ರಿಗಳ ಗಮನಕ್ಕೂ ತಂದು ಅಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಿ ಎಂದು ಹೇಳಿದ್ದರೂ ಏನೂ ಪ್ರಯೋಜನವಾಗಲಿಲ್ಲ. ಇಲ್ಲಿ ಹೇಗೆ ನಡೆಯುತ್ತಿದೆ ಎಂದರೆ, ಅವರ ಪಕ್ಷಕ್ಕೆ ಸೇರಿದವರು ಎಂದು ಅವರವರಿಗೇ ಬೆಂಬಲಕೊಡುತ್ತಾರೆ. ಹತ್ತಾರು ಸಂಸ್ಥೆಗಳಲ್ಲಿ ಒಂದು ಪಕ್ಷ ಪಂಗಡಗಳಿರುವುದೇ ನೋಡಿದೋದು. ಆದರೆ ತಮಗೇ ಬೇಕಾದ ಒಂದೇ ಪಕ್ಷಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮಾಡಿದರೆ ಜನತೆಗೆ ಸಹಕಾರ ತತ್ವದಲ್ಲಿರುವ ನಂಬಿಕೆ ಹೋಗುತ್ತದೆ. ಪ್ರಜಾಪ್ರಭುತ್ವದಲ್ಲಿ ದೊಡ್ಡ ಸಂಸ್ಥೆಗಳು ಸಹಕಾರ ತತ್ವದ ಮೇಲೆ ಚೆನ್ನಾಗಿ ನಡೆಯುತ್ತವೆ, ನ್ಯಾಯವಾಗಿ ನಡೆಯುತ್ತವೆ ಎನ್ನುವ ಭಾವನೆ ಜನರಲ್ಲಿ ಬರುವಂತೆ ಮಾಡಿದರೆ ಆಗ ಆಡಳಿತ ಭದ್ರವಾಗಿ ನಿಲ್ಲುತ್ತದೆ. ನಮ್ಮ ತಾಲ್ಲೂಕಿನಲ್ಲಿರುವ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರಾಗಿದ್ದರು. ಎರಡು ವರ್ಷಗಳಿಂದಲೂ ಚೆನ್ನಾಗಿ ಕೆಲಸಮಾಡುತ್ತಿದರು, ಅನುಭವಸ್ಥರು. ಯಾರೋ ಒಬ್ಬರು ಇವರನ್ನು ಇಲ್ಲಿಂದ ವರ್ಗಮಾಡಬೇಕು ಎಂದು ಹೇಳಿದ್ದಕ್ಕೆ ವರ್ಗ ಮಾಡಿಬಿಟ್ಟರು. ಇದಕ್ಕೆ ಯಾರು ಕಾರಣ? ಸಂಸ್ಥೆಯ ಹಿತದೃಷ್ಟಿಯಿಂದ ಸಕ್ಕರೆ ಕಾರ್ಖಾನೆಯಲ್ಲಿ ಈ ರೀತಿ ಮಾಡಿದರೆ ಸಹಕಾರ ತತ್ವ ಚೆನ್ನಾಗಿ ಕೆಲಸ ಮಾಡಿದಂತಾಯಿತೇ? ಸಹಕಾರ ತತ್ವದ ಮೇಲೆ ಸ್ಥಾಪಿಸಿದ ಸಕ್ಕರೆ ಕಾರ್ಖಾನೆಯಲ್ಲಿ ಪ್ರೊಡಕ್ಷನ್ನು ಆರು ವರ್ಷಗಳಿಂದಲೂ ಲಕ್ಷಾಂತರ ರೂಪಾಯಿನಷ್ಟು ನಷ್ಟವಾಗಿದೆ, ಇದರ ಕಡೆ ಸರಕಾರ ಗಮನಕೊಡದೆ ಯಾರೋ ಒಬ್ಬರು ವ್ಯಕ್ತಿಗಳ ಅಥವಾ ಒಂದು ಪಂಗಡದ ಪ್ರಭಾವಕ್ಕೆ ಒಳಗಾದರೆ ಇದು ದೇಶಕ್ಕೆ ವಿದ್ರೋಹ ಮಾಡಿದ ಕೆಲಸವಾಗಲಿಲ್ಲವೇ? ಈ ರೀತಿ ಮಾಡುವುದು ಸಲ್ಲದು. ಯಾರ ಅದೃಷ್ಟ ಯಾರ ಕೈಯಲ್ಲಿದೆಯೋ? ಕಣ್ಣಿಗೆ ಕಾಣುವ ಅನ್ಯಾಯ, ಅಪಚಾರಗಳನ್ನು ತಡೆಗಟ್ಟಿ ನ್ಯಾಯವಾಗಿ ಕೆಲಸಮಾಡಲು ಬೆಂಬಲಕೊಡಿ. ತಾತ್ಕಾಲಿಕವಾದ ಇಂತಹ ಸಂಕುಚಿತ ಭಾವನೆಗಳನ್ನು ಬಿಡಬೇಕು ಎಂದು ನಾನು ಇಲ್ಲಿ ಪ್ರಾರ್ಥನೆ ಮಾಡುತಿದ್ದೇನೆ. ಆಡಳಿತದಲ್ಲಿ ಸಾಮರಸ್ಯ ಹೇಗೆ ಉಂಟುಮಾಡುವುದು ಎಂದರೆ, ಸರಕಾರ ದಕ್ಷತೆಯಿಂದ ಕೆಲಸಮಾಡಲು ಸಹಕರಿಸಬೇಕು. ಯಾವನಾದರೂ ಒಬ್ಬ ರೈತ ಸರಕಾರಕ್ಕೆ ಒಂದು ಅರ್ಜಿ ಕೊಟ್ಟರೆ ವರ್ಷಕಳೆದರೂ ಪ್ರಯೋಜನವಾಗುವುದಿಲ್ಲ. ಅವನು ಒಂದು ಪಂಪುಸೆಟ್ಟು ಬೇಕೆಂದು ಅರ್ಜಿ ಹಾಕಿರುತ್ತಾನೆ. ಈಗೇನೋ ಪಂಪುಸೆಟ್ಟುಗಳನ್ನು ಕೊಡುತ್ತಾರೆಂದು ರೈತ ಅರ್ಜಿಕೊಟ್ಟರೆ ಅವನ ಅರ್ಜಿ ಮಂಜೂರು ಆಗಬೇಕಾದರೆ ಅವನು ನೂರರಿಂದ ಐದುನೂರು ರೂಪಾಯಿಗಳವರೆಗೆ ಖರ್ಚುಮಾಡಬೇಕಾಗಿ ಬರುತ್ತದೆ. ಪಂಪುಸೆಟ್ಟು ಬೇಕಾದರೆ ಎಲ್ಲ ಕಡೆಗಳಲ್ಲೂ ಲಂಚಕೊಡದೆ ಅವು ಸಿಕ್ಕುವುದೇ ಇಲ್ಲ. ಲಂಚ ಎಲ್ಲಿದೆ ಎನ್ನುವುದು ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಆದರೆ ಆಡಳಿತ ಮಾಡುವವರು ಒಪ್ಪಿಕೊಳ್ಳುವುದಿಲ್ಲ. ಆದರೆ ಇದನ್ನು ತಡೆಗಟ್ಟಲು ಸರಿಯಾದ ಮಾರ್ಗವನ್ನು ಕಂಡುಹಿಡಿಯಬೇಕು. ಪ್ರತಿಯೊಬ್ಬರು ಸಹಕಾರ ಕೊಡಬೇಕೆಂದು ಅವರು ಬರೀ ಬಾಯಲ್ಲಿ ಹೇಳುತ್ತಾರೆ. ಕಾರ್ಯತಃ ಸಹಕಾರ ತತ್ವ ಸಫಲವಾಗದೇ ಇರುವುದೇ ಇದಕ್ಕೆ ಮುಖ್ಯ ಕಾರಣ.

ಇನ್ನು Transfer of officials ವಿಚಾರ. ಇತ್ತೀಚೆಗೆ ನಮ್ಮ ತಾಲ್ಲೂಕಿನಲ್ಲಿ ಒಬ್ಬರು ಪೋಲೀಸು ಸಬ್‌ಇನ್‌ಸ್ಪೆಕ್ಟರು ಎರಡೂವರೆ ವರ್ಷಗಳಿಂದ ಇದ್ದು ಚೆನ್ನಾಗಿ ಕೆಲಸ ಮಾಡಿದ್ದರು. ಆದರೂ ಅವರನ್ನು ನಿಯಮದಂತೆ ಏಳು ತಿಂಗಳ ಕೆಳಗೆ ಬೇರೆ ಜಾಗಕ್ಕೆ ವರ್ಗಾಯಿಸಲು ಆರ್ಡರ್ ಆಯಿತು. ಅವರನ್ನು ವರ್ಗಾಯಿಸಿದರೆ ತೊಂದರೆಯಾಗುತ್ತದೆ ಎಂದು ಹೇಳಿ ಆಡಳಿತದಲ್ಲಿ ಪ್ರಭಾವವಿರುವಂತಹವರು ಅವರ ವರ್ಗವನ್ನು ರದ್ದುಮಾಡಿಸಿದರು. ಅನಂತರ ಸರ್ಕಾರ ಈ ಸಬ್‌ಇನ್‌ಸ್ಪೆಕ್ಟರನ್ನು ವರ್ಗ ಮಾಡುವುದಿಲ್ಲ ಎಂದು ಅಭಿಪ್ರಾಯವಿಟ್ಟುಕೊಂಡಿದಿತು. ಆದರೆ ಈಚೆಗೆ ಎರಡು ತಿಂಗಳ ಕೆಳಗೆ ಇದೇ ಸಬ್‌ಇನ್‌ಸ್ಪೆಕ್ಟರನ್ನು ವರ್ಗ ಮಾಡಿ, ಬೇರೆಯವರು ಬಂದು ಛಾರ್ಜ್ ತೆಗೆದುಕೊಂಡು ಇನ್ನೂ ಒಂದು ತಿಂಗಳಾಗಿಲ್ಲ, ಅವರನ್ನು ಪುನಃ ವರ್ಗ ಮಾಡಿ ಹಿಂದೆ ಇದ್ದ ಸಬ್‌ಇನ್‌ಸ್ಪೆಕ್ಟರೇ ಇಲ್ಲಿಗೆ ಇರಬೇಕು ಎಂದು ಇಲ್ಲಿಗೆ ತಂದರು ಹೀಗೆ ಅಧಿಕಾರಿಗಳಲ್ಲಿ ಆಡಳಿತದ ಬಗ್ಗೆ ವ್ಯಾಮೋಹ ಏರ್ಪಡಬೇಕು, ಇಂತಹ ಕೆಲಸಗಳನ್ನು ಮಾಡಬಾರದೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಇಂಡಸ್ಟ್ರೀಸ್ ಇಲಾಖೆ, ಸರ್ಕಾರದಲ್ಲಿ ದೂರು ಕೊಡುವುದೇ ತಪ್ಪೆಂದು ನನಗೆ ಕಾಣಿಸುತ್ತದೆ. ದೂರು ಕೊಟ್ಟರೆ ಅದನ್ನು ಸರಿಯಾಗಿ ತನಿಖೆ ಮಾಡಿ ತಪ್ಪಿತಸ್ಥರು ಯಾರು, ಅರ್ಜಿಕೊಟ್ಟಿರುವುದು ಸರಿಯೋ, ತಪ್ಪೋ ಎನ್ನುವುದನ್ನು ನೋಡದೇ ಹೋದರೆ ಅದರಿಂದೇನೂ ಪ್ರಯೋಜನವಿಲ್ಲ.

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಸಂದರ್ಭದಲ್ಲಿ ಸರ್ಕಾರ ಬೇಕಾದಷ್ಟು ದುಡ್ಡು ಕೊಟ್ಟಿರುವುದರಿಂದಾಗಿ ಕೃತಕವಾದ ಮಹಿಳಾ ಸಮಾಜಗಳು ಹುಟ್ಟುವುದಕ್ಕೆ ಅವಕಾಶವಾಗಿದೆ ಎಂದು ಎರಡು ವರ್ಷಗಳ ಹಿಂದೆ ಅಸೆಂಬ್ಲಿಯಲ್ಲಿ ಪ್ರಶ್ನೆ ಕೇಳಿದಾಗ ಅದರ ಬಗ್ಗೆ ಆಗ ಏನೂ ತಕ್ಕ ಕ್ರಮ ಕೈಗೊಳ್ಳಲಿಲ್ಲ. ಈಗ ಅಲ್ಲೆಲ್ಲ ಸಲಕ ಸಿದ್ಧತೆಗಳನ್ನು ಮಾಡಿಕೊಂಡು ಇದ್ದಾರೆ. ಅಲ್ಲಿಗೆ ತನಿಖೆಗೆ ಹೋದರೆ ಏನೂ ಉಪಯೋಗವಾಗುವುದಿಲ್ಲ. ಈ ರೀತಿ ವಿಳಂಬ ಮಾಡಿದ ಪಕ್ಷದಲ್ಲಿ ಏನೂ ಉಪಯೋಗವಾಗುವುದಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀ ಮಾರ್ಗ ಮಲ್ಲಪ್ಪನವರೇ ಒಂದು ಸಾರಿ ನನ್ನನ್ನು ಕರೆಸಿ, "ನೀವು ಏನೋ ನಾಲ್ಕು ಇಂತಹ ಸಮಾಜಗಳಿವೆ ಎಂದು ಹೇಳಿದಿರಿ. ನಮ್ಮ ಬೆಂಗಳೂರಿನಲ್ಲಿ ಸುಮಾರು ಐವತ್ತು ಇಂತಹ ಸಮಾಜಗಳಿವೆ" ಎಂದು ಹೇಳಿದರು.

Mr. SPEAKER.—I have said that whatever one member says to another in private conversation should not be mentioned on the floor of the House.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅದಕ್ಕೋಸ್ಕರ ಯಾವ ದೂರನ್ನೂ ತನಿಖೆ ಮಾಡುವಲ್ಲಿ ವಿಳಂಬ ಮಾಡಬಾರದು. ಜನತೆಯ ಹಿತದೃಷ್ಟಿಯಿಂದ ಜನತೆಯ ಅನುಕೂಲಕ್ಕಾಗಿ ತಕ್ಕ ಕಾರ್ಯಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕು.

ಇನ್ನು unemployment ಬಗ್ಗೆ ಈ ಅಸೆಂಬ್ಲಿಯಲ್ಲೇ ಅನೇಕ ಸಾರಿ ಹೇಳಿದ್ದೇನೆ. ಇಲ್ಲಿಯವರೆಗೂ S. S. L. C. ಪಾಸಾದವರು ನಿರುದ್ಯೋಗಿಗಳಾಗಿದ್ದರು. ಈಗ Technically qualified ಜನರೂ ಎಂದರೆ ಸಬ್ ಓವರ್‌ಸೀಯರುಗಳು ಡಿಪ್ಲೋಮಾ ಮಾಡಿಕೊಂಡಿರುವವರು, ಮೆಕ್ಯಾನಿಕಲ್ ಇಂಜನೀಯರುಗಳು ನಿರುದ್ಯೋಗಿಗಳಾಗಿದ್ದಾರೆ. Technical hands ಗೆ ಕೆಲಸ ಕೊಡದೇ ಹೋದರೆ ದೇಶದ ಅಭಿವೃದ್ಧಿ ಕೆಲಸಗಳು ಎಷ್ಟು ಮಟ್ಟಿಗೆ ತಾನೇ ನಡೆದಾವು ! ಈ ಕೆರೆಗೆ ಇಷ್ಟು ದುಡ್ಡು, ಈ ಕಟ್ಟೆಗೆ ಇಷ್ಟು ದುಡ್ಡಾಯಿತು ಎಂದು ಬರೀ ಮಾತಿನಲ್ಲಿ ಹೇಳುತ್ತಿದ್ದಾರೆ ಅದಕ್ಕಿಂತಲೂ ಜಾಸ್ತಿ ಏನೂ ಮಾಡುತ್ತಿಲ್ಲ ಎಂದು ತೋರುತ್ತದೆ. ಈ ಹೊತ್ತು ಸಹಸ್ರಾರು ಜನ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಈ ಎಲ್ಲಕ್ಕೂ ಎಲ್ಲೋ ಒಂದು ಕಡೆ ಆಡಳಿತದಲ್ಲಿ ಅವ್ಯವಸ್ಥೆ ಇದ್ದೇ ತೀರಬೇಕು ಎಂದು ಹೇಳುತ್ತೇನೆ. ಈ ರೋಗವನ್ನು ಕಂಡುಹಿಡಿದು ಅದಕ್ಕೆ ತಕ್ಕ ಔಷಧಿಯನ್ನು ಹಾಕಲೇ ಬೇಕು. ಕೇವಲ ಮಂತ್ರಿಯಾಗಿರುವುದಕ್ಕೆ ಅಗತ್ಯವಾದ ಸೌಲಭ್ಯಗಳಿದ್ದರೆ ಸಾಲದು. ಈ ದಿವಸ ಪಂಡಿತ ನೆಹ್ರೂ ಅವರಿಗೇಕೆ ಒಂದು ಬೆಲೆಯಿದೆ ? ಅವರಲ್ಲಿ ಅಂಥ ಒಂದು ನಿಸ್ಪೃಹತೆ ಇರುವುದರಿಂದಲ್ಲವೇ ? ಕಾಮರಾಜ ನಾಡರಿಗೂ ಹಾಗೇ. ಇವರು ತಮ್ಮ ಕರ್ತವ್ಯಗಳನ್ನು ಮನಸಾರೆ ನಿರ್ವಹಿಸುತ್ತಾರೆ. ಅವರಂತೆಯೇ ಎಲ್ಲರೂ ನಿಸ್ಪೃಹತೆಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆಹಾರ ಧಾನ್ಯಗಳ ಬೆಲೆಯಂತೂ ಹೇಳತೀರದಾಗಿದೆ. ದಿನದಿನಕ್ಕೂ ಅಕ್ಕಿ ರಾಗಿಯ ಬೆಲೆ ಏರುತ್ತಲೇ ಇದೆ. ಈ ದಿನ ರೈತನು ಬಹಳ ನಿಕೃಷ್ಟದ ಜೀವನವನ್ನು ಮಾಡುತ್ತಿದ್ದಾನೆ. ಅವನಿಗೆ ರಾಗಿ ಹಿಟ್ಟನ್ನು ಬಿಟ್ಟರೆ ಬೇರೇನೂ ಗತಿಯಿಲ್ಲ. ಸಾಲದ್ದಕ್ಕೆ ರೈತನು ತನ್ನ ಉದ್ಯಮಕ್ಕೆ ಕೊಳ್ಳತಕ್ಕ ವಸ್ತುಗಳ ಬೆಲೆಸಹ ವಿಪರೀತ ಜಾಸ್ತಿಯಾಗಿದೆ. ಅವನಿಗೆ ಬೇಕಾದ ಕಬ್ಬಿಣದ ಗುಳ, ಹಾರೆ, ಪಿಕಾಸಿ, ಬಟ್ಟೆ ಇತ್ಯಾದಿ ವಸ್ತುಗಳ ಬೆಲೆ ವಿಪರೀತವಾಗಿವೆ. ಆತ ಸಾಲಕ್ಕೆ ಅರ್ಜಿ ಹಾಕಿದರೆ ಸಕಾಲಕ್ಕೆ ಸಾಲ ದೊರೆಯುತ್ತಿಲ್ಲ. ದಯವಿಟ್ಟು ತಾವು ಇದನ್ನು ಪರಿಶೀಲನೆ ಮಾಡಬೇಕು. ಈ ದಿವಸ ನಮ್ಮಲ್ಲಿ ಒಂದು ಸಕ್ಕರೆ ಕಂಪೆನಿ ತಯಾರಾಗುತ್ತಿದೆ. ಅಲ್ಲಿ ಜನ ಕೂಲಿಗಾಗಿ ಅಲೆಯುತ್ತಿದ್ದಾರೆ. ಅವರಿಗೆ ಸಿಕ್ಕತಕ್ಕ ಕೂಲಿಯಾದರೂ ಎಷ್ಟು ? ಹೆಣ್ಣಾಳಿಗೆ ದಿನಕ್ಕೆ 8 ಆಣೆ, ಗಂಡಾಳಿಗೆ ದಿನಕ್ಕೆ ಒಂದು ರೂಪಾಯಿ. ಇಷ್ಟರಲ್ಲಿ ಅವರು ಜೀವನ ಮಾಡಬೇಕಾಗಿದೆ. ಹೀಗಾಗಿ ಈ ದಿವಸ ನಮ್ಮ ದೇಶದ ಜನರಲ್ಲಿ 100 ಕ್ಕೆ [illegible]0 ಜನ ಅಧೋಗತಿಯಲ್ಲಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ವ್ಯವಸಾಯಕ್ಕೆ ಹೆಚ್ಚು ಉತ್ತೇಜನವನ್ನು ಇನ್ನಾದರೂ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ).—ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯಪಾಲರು ಪ್ರಪ್ರಥಮವಾಗಿ ಕನ್ನಡದಲ್ಲಿ ಭಾಷಣ ಮಾಡಿದ್ದು ನನಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಅದಕ್ಕಾಗಿ ನಾನು ಅವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಆದರೆ, ಕೆಲವು ಮಹತ್ವದ ವಿಷಯಗಳ ಬಗ್ಗೆ ಸರ್ಕಾರದವರ ಧೋರಣೆ ಏನೆಂಬುದನ್ನು ಅವರು ತಮ್ಮ ಭಾಷಣದಲ್ಲಿ ಉಲ್ಲೇಖಿಸದೆ ಕೈಬಿಟ್ಟಿರುವುದರಿಂದ ಜನರಲ್ಲಿ ಇದು ಬಹಳ ಕಳವಳವನ್ನುಂಟು ಮಾಡಿದೆ,

ಆದುದರಿಂದ ಆ ಬಗ್ಗೆ ನಾನೀಗ ಒಂದೆರಡು ಪ್ರಶ್ನೆಗಳನ್ನು ಇಡಬಯಸುತ್ತೇನೆ. ರಾಜ್ಯದಲ್ಲಿ ಸಮತಾವಾದ ಆಡಳಿತವನ್ನು ಜಾರಿಗೆ ತರುತ್ತೇವೆ, ದೇಶದ ಸಂಪತ್ತನ್ನು ಜನರಿಗೆಲ್ಲರಿಗೂ ಒಂದೇ ರೀತಿಯಲ್ಲಿ ಹಂಚುವಂತೆ ವ್ಯವಸ್ಥೆ ಮಾಡುತ್ತೇವೆ ಎಂದು ಒಂದು ಆಡಳಿತ ಧೋರಣೆಯನ್ನು ತಾಳಿರತಕ್ಕ ಈ ಸರ್ಕಾರ ಈ ದಿವಸ ಏನು ಮಾಡುತ್ತಿದೆ ಎಂಬುದನ್ನು ಹೇಳಲಿಚ್ಛಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಎನ್. ಜಿ. ಓ. ಗಳ ಸಂಬಳದ ಬಗ್ಗೆ ಏನೂ ಹೇಳಿಲ್ಲ. ಇದು ಜನರಲ್ಲಿ ಒಂದು ದೊಡ್ಡ ಕಳಂಕವನ್ನುಂಟು ಮಾಡಿದೆ. ಈ ಹಿಂದೆ ಕಡಮೆ ದರ್ಜೆಯಲ್ಲಿರತಕ್ಕ ಪದವೀಧರ ನೌಕರರ ಸಂಬಳವನ್ನು ಜಾಸ್ತಿ ಮಾಡುತ್ತೇವೆಂದು ಹೇಳಿದ್ದರು. ಆದರೆ ಅದನ್ನು ಇಲ್ಲಿಯವರೆಗೂ ಕಾರ್ಯಗತ ಮಾಡಿಲ್ಲ. ಈ ಕಾರಣದಿಂದ ಅಲ್ಪವೇತನ ಪಡೆಯತಕ್ಕ ಅಧಿಕಾರಿಗಳಿಗೆ ತಮ್ಮ ಸಂಸಾರವನ್ನು ನಿರ್ವಹಿಸುವುದಕ್ಕೆ ಸಾಧ್ಯವಿಲ್ಲ, ಹಾಗೂ ಅವರಲ್ಲಿ ಅತೃಪ್ತಿ ತಾಂಡವಾಡುತ್ತಿದೆ. ಇದರಿಂದ ನಮ್ಮ ಯೋಜನೆಗಳು ಸಫಲವಾಗುವುದಿಲ್ಲ. ಹೀಗೇ ಎಲ್ಲಿಯವರೆಗೂ ನಾವು ಇವರನ್ನು ತೃಪ್ತಿಪಡಿಸುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ನಮ್ಮ ಯೋಜನೆಗಳು ಸಾಂಗವಾಗಿ ನಡೆಯುವುದಿಲ್ಲ; ದೇಶಕ್ಕೂ ಇದರಿಂದ ಒಳ್ಳೆಯದಾಗುವುದಿಲ್ಲ. ಆದುದರಿಂದ ಈ ವಿಚಾರವನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಭಾಷಾವಾರು ರಾಜ್ಯ ನಿರ್ಮಾಣಗಳ ವಿಚಾರಕ್ಕೆ ಬಂದರೆ: ರಾಜ್ಯದಲ್ಲಿರತಕ್ಕ ಬಹುಮಂದಿ ಕನ್ನಡ ಭಾಷೆಯನ್ನೊಳಗೊಂಡ ಕರ್ನಾಟಕ ರಾಜ್ಯವಾಗಬೇಕೆಂದು ಹೇಳುತ್ತಿದ್ದಾರೆ. ಈ ಹಿಂದೆ ನಮ್ಮ ಬಳ್ಳಾರಿ ಜಿಲ್ಲೆ ಸಂಪೂರ್ಣವಾಗಿ ಮದ್ರಾಸ್ ರಾಜ್ಯಕ್ಕೆ ಸೇರಿತ್ತು. ಆದರೆ ಇತ್ತೀಚೆಗೆ ನಮ್ಮ ಜಿಲ್ಲೆಯನ್ನು ವಿಭಜನೆ ಮಾಡಿ ಕೆಲವೊಂದು ಭಾಗವನ್ನು ಮೈಸೂರಿಗೆ ಸೇರಿಸಿದ್ದಾರೆ. ಹಿಂದೆ ಇದೇ ಬಳ್ಳಾರಿ ಜಿಲ್ಲೆಗೆ ಸೇರಿದ್ದ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳು ಕರ್ನಾಟಕಕ್ಕೆ ಸೇರದೆ ಹಾಗೇ ಇನ್ನೂ ಆಂಧ್ರದಲ್ಲೇ ಉಳಿದಿವೆ. ಈ ಹಿಂದೆ ಕನ್ನಡ ಭಾಷೆಯನ್ನಾಡತಕ್ಕ ಜನರಿಂದೊಡಗೂಡಿದ ಒಂದು ಕರ್ನಾಟಕ ರಾಜ್ಯ ಸ್ಥಾಪನೆಯಾಗಬೇಕೆಂದು ಚಳವಳಿ ಹೂಡಿ ಜೈಲಿಗೆ ಹೋಗಿದ್ದಂಥ ಜನ ಆ ಜಿಲ್ಲೆಗಳಲ್ಲಿ ಇಂದೂ ಸಹ ಈ ಮೈಸೂರಿಗೆ ಸೇರಲು ವೇಳೆಯನ್ನು ಕಾಯುತ್ತಿದ್ದಾರೆ. ಅವರು ನಾವೇನು ಮಾಡುತ್ತಿದ್ದೇವೆಂಬುದನ್ನೇ ಕಾದು ನೋಡುತ್ತಿದ್ದಾರೆ. ಅಂಥಾ ಆಶಾವಾದಿಗಳು ಈ ದಿವಸ ಆ ಆಂಧ್ರದಲ್ಲಿರುತ್ತಾರೆ. ಈ ಹಿಂದೆ ಸಭೆಯಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ಆ ಭಾಗಗಳನ್ನು ಮೈಸೂರಿಗೆ ಸೇರಿಸಿಕೊಳ್ಳಲು ಪ್ರಯತ್ನ ಮಾಡುವುದಾಗಿ ಭರವಸೆ ಇತ್ತಿದ್ದರು. ಆದರೆ ಆ ಬಗ್ಗೆ ಇಲ್ಲಿಯವರೆಗೆ ಏನೂ ಆದಂತೆ ಕಂಡುಬರುವುದಿಲ್ಲ. ಈ ವಿಚಾರದಲ್ಲಿ ರಾಜ್ಯಪಾಲರೇನೂ ಹೇಳಿಲ್ಲ. ಈಗಲಾದರೂ ಸರ್ಕಾರದವರು ಕೂಡಲೆ ಈ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳುತ್ತೇನೆ. ಆದರೆ ಈ ವಿಚಾರದಲ್ಲಿ ಒಂದು ಅಡ್ಡಿ ಬರಬಹುದೆಂದು ಹೇಳಬಹುದು. ಅದೇನೆಂದರೆ ನಮ್ಮ ಮಹಾರಾಷ್ಟ್ರದ ಸ್ನೇಹಿತರು ಅವರು ಇವರ ಹಾಗೆ ಮಹಾರಾಷ್ಟ್ರಕ್ಕೆ ಹೋಗುತ್ತೇವೆಂದು ಹೇಳುತ್ತಿರುವುದರಿಂದ ಅವರನ್ನು ಇಲ್ಲಿಂದ ಬಿಟ್ಟುಕೊಡಬೇಕಾಗಿ ಬರುತ್ತದೆಯಲ್ಲ ಎಂದು ಹೇಳಬಹುದು. ಆದರೆ ಈ ವಿಚಾರದಲ್ಲಿ ನನ್ನ ಅಭಿಪ್ರಾಯವೇನಿದೆಯೆಂಬುದನ್ನು ನಾನು ಸ್ಪಷ್ಟಪಡಿಸಬೇಕೆಂದಿದ್ದೇನೆ: ಆದರೆ ಈ ದಿವಸ ನಮ್ಮ ಮಹಾರಾಷ್ಟ್ರದ ಸ್ನೇಹಿತರು ಅವರು ಮಹಾರಾಷ್ಟ್ರಕ್ಕೇ ಹೋಗಬೇಕೆಂದು ಹಟ ಹಿಡಿದಲ್ಲಿ ಸರ್ಕಾರದವರು ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ನಮ್ಮ ಕರ್ಣಾಟಕ ಭಾಗಕ್ಕೆ ಸೇರಬೇಕೆಂದು ಹಟ ಹಿಡಿದಿರತಕ್ಕ ಜನರು ಎಲ್ಲೆಲ್ಲಿದ್ದಾರೋ ಅವರನ್ನು ಕರ್ಣಾಟಕಕ್ಕೆ ಸೇರಿಸಲು ಕೂಡಲೆ ಒಂದು ತೀರ್ಮಾನ ಕೈಗೊಳ್ಳುವುದು ಸೂಕ್ತವೆಂದು ನಾನು ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ಯೋಗ್ಯ ಪರಿಶೀಲನೆ ಮಾಡುವುದು ಒಳ್ಳೆಯದೆಂದು ಕಾಣುತ್ತದೆ.

ಇನ್ನು ರಾಷ್ಟ್ರ ರಕ್ಷಣಾ ವಿಚಾರವನ್ನು ಪ್ರಸ್ತಾಪಿಸುತ್ತಾ ಹಿಂದೆ ಇದ್ದಂಥ ಗಂಡಾಂತರ ಇಂದಿಲ್ಲ ಎಂದು ಹೇಳಿದ್ದಾರೆ. ಆದರೆ ಈ ಹಿಂದೆ ಕೇವಲ ಚೀನದೇಶ ಒಂದರ ಅಪಘಾತ ಮಾತ್ರವಿತ್ತು. ಈಗ ಅದರ ಜೊತೆಗೆ ಪಾಕಿಸ್ತಾನದ ಅಪಘಾತ ಬೇರೆ ಉಂಟಾಗಿದೆ. ಅದಕ್ಕಾಗಿ ಈಗ ದೇಶದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಎನ್. ಸಿ. ಸಿ. ಯೂನಿಟ್ಟುಗಳನ್ನು ತೆಗೆಯುವುದಾಗಿ ಹೇಳಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಆದರೆ ಇದರಲ್ಲಿ ಅತಿ ಮುಖ್ಯವಾದಂಥ ವಿಚಾರವೆಂದರೆ ರಾಷ್ಟ್ರೀಯ ರಕ್ಷಣಾ ನಿಧಿಗೆ ಹಣದ ಅಭಾವ ಜಾಸ್ತಿಯಾಗಿದೆ. ಆದರೆ ಇಲ್ಲಿಯವರೆಗೆ ಈ ರಕ್ಷಣಾ ನಿಧಿಗೆ ಯಾರ್ಯಾರು ಸಹಾಯ ನೀಡಿದ್ದಾರೋ ಅವರಲ್ಲಿ ಬಡವರೇ ಅಧಿಕವಾಗಿದ್ದಾರೆ. ಬಲ್ಲಿದರು ಏನೂ ಕೊಡದೆ ತಪ್ಪಿಸಿಕೊಂಡಿದ್ದಾರೆ. ಅಂಥವರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಕೈಗೊಂಡಿದೆಯೆಂಬುದು ಗೊತ್ತಿಲ್ಲ. ಇದನ್ನು ನೋಡಿದರೆ ಆ ಶ್ರೀಮಂತ ವರ್ಗವನ್ನು ಟ್ಯಾಕರ್ ಮಾಡತಕ್ಕ ಶಕ್ತಿ ಸರ್ಕಾರಕ್ಕಿಲ್ಲ ಎಂದು ಕಾಣುತ್ತಿದೆ. ಸದಾ ಬರಗಾಲಕ್ಕೀಡಾಗುತ್ತಿರುವ ಆ ಬಿಜಾಪುರದಂಥ ಜಿಲ್ಲೆಯಲ್ಲೂ ನಿರ್ಗತಿಕರೂ ಈ ರಕ್ಷಣಾ ನಿಧಿಗೆ ಶಕ್ತಿಮೀರಿ ಸಹಾಯ ಮಾಡಿದ್ದಾರೆ. ಎರಡೆತ್ತಿದ್ದರೆ ಒಂದನ್ನು ಮಾರಿ ಹಣವನ್ನು ಕೊಟ್ಟಿದ್ದಾರೆ. ಅನೇಕ ಬಡ ಸಂಸಾರಗಳು ತಮ್ಮ

(ಶ್ರೀ ಸಿ. ಎಂ. ರೇವಣಸಿದ್ದಯ್ಯ)

ಒಂದು ವರ್ಷದ ಜೀವನವನ್ನೆಲ್ಲಾ ಈ ರಕ್ಷಣಾ ನಿಧಿಗೆ ದಾನ ಮಾಡಿದ್ದಾರೆ. ಹೀಗೆ ಗರೀಬರಾಗಿರತಕ್ಕವರು ಒಂದು ವರ್ಷದ ಸಂಪಾದನೆಯನ್ನು ಕೊಟ್ಟಿದ್ದರೆ ಶಕ್ತಿವಂತರು ಒಂದು ದಿನದ ತಮ್ಮ ಸಂಪಾದನೆಯನ್ನು ಕೊಟ್ಟಿಲ್ಲ. ಈ ಬೆಂಗಳೂರಿನಲ್ಲೇ ಎಷ್ಟೆಷ್ಟು ಜನರು ಶಕ್ತಿ ಇದ್ದಾಗ್ಯೂ ರಕ್ಷಣಾ ನಿಧಿಗೆ ಏನನ್ನೂ ಕೊಡದೆ ಬಚ್ಚಿಟ್ಟುಕೊಂಡು ಸರ್ಕಾರಕ್ಕೆ ದ್ರೋಹಮಾಡಿದ್ದಾರೆಂಬುದನ್ನು ನಾನು ತೋರಿಸ

4 P.M.

ಬಲ್ಲೆ. ಏಕೆಂದರೆ ಮುಂದೆ ಇಂತಹ ಪರಿಸ್ಥಿತಿ ಬಂದು ಕೊನೆಯಲ್ಲಿ ರೈತನಾದವನು ಅದರಲ್ಲೂ ಬಡವರ ತಮ್ಮ ಎತ್ತು, ಎಮ್ಮೆಗಳನ್ನು ಮಾರಿ ಕೊಡಬೇಕಾಗುತ್ತದೆ. ಈ ರೀತಿ ಸರ್ಕಾರದವರು ಅವರನು ಕೇಳುವುದು ಅಕ್ರಮ ಮತ್ತು ಅನ್ಯಾಯವಾಗುತ್ತದೆ. ಆದಕಾರಣ ಸರ್ಕಾರದವರು ನ್ಯಾಯವಾದ ಒಂದು ನಿಲುವೆಯನ್ನು ತೋರಿಸಬೇಕಾದರೆ ಅಡಗಿಸಿಟ್ಟ ದ್ರವ್ಯ ಹಣವನ್ನು ಸಂಗ್ರಹಿಸಿ ಇಡಬೇಕು. ಆ ಹಣ ರಾಷ್ಟ್ರೀಯ ರಕ್ಷಣಾ ನಿಧಿಗೆ ಬರಬೇಕು. ಅದನ್ನು ಮಾಡದೆ ಕಾಡಿಗೆ ಬೆಂಕಿ ಹಚ್ಚಿ ಬಾವಿ ತೋಡಿದರಂತೆ ಎಂಬಂತೆ ಕೆಲಸ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ. ಇವತ್ತು ನಿಜವಾಗಿ ಶ್ರೀಮಂತರಿಂದ ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲ. ಸುಮ್ಮನೆ ಪಾನನಿರೋಧದ ಕಾನೂನು ಇದ್ದರ ಏನಾಗುತ್ತದೆ? ಇದರಿಂದ ಸರ್ಕಾರದವರೇ ರಾಷ್ಟ್ರದ್ರೋಹವನ್ನು ಮಾಡಿದಂತಾಗುತ್ತದೆಂದು ನಾನು ಎಚ್ಚರಿಸುತ್ತೇನೆ. ನಮ್ಮ ರಾಜ್ಯದಲ್ಲಿ ಪಾನನಿರೋಧ ಕಾನೂನು ನಿಜವಾಗಿ ಯಶಸ್ವಿಯಾಗಲಿಲ್ಲ. ಕುಡಿಯದೇ ಇರುವವರೆಲ್ಲರೂ ಸಹ ಕುಡಿಯತೊಡಗಿದ್ದಾರೆ. ಅವರನ್ನು ಕೇಳುವವರೇ ಇಲ್ಲದಂತಾಗಿದೆ. ಪೋಲೀಸ್‌ನವರೇ ಕುಡಿಯುವವರ ಜೊತೆಯಲ್ಲಿ ಸೇರಿಕೊಂಡು ಕುಡಿತವನ್ನು ಪ್ರೋತ್ಸಾಹಿಸುತ್ತಿದ್ದಾರೆ. ಆದ್ದರಿಂದ ಇವತ್ತಿನ ದಿವಸ ಕುಡಿತವನ್ನು ಕೂಡಲೇ ತೆಗೆದುಹಾಕಬೇಕು. ಕಾಂಗ್ರೆಸ್ ಸ್ನೇಹಿತರು ಮತ್ತು ವಿರೋಧ ಪಕ್ಷದ ನಾಯಕರು ಮತ್ತು ಇತರರು ಸಹ ಈ ಕಾನೂನನ್ನು ಕೂಡಲೇ ತೆಗೆದುಹಾಕಬೇಕು. ಈಗ ಹೇಗಿದೆಯೆಂದರೆ ಡೆಲ್ಲಿಯವರು ಹೇಳಿದಂತೆ ಹಳ್ಳಿಯವರು ನಡೆಯುತ್ತಿದ್ದಾರೆ. ಸಾಮಾನ್ಯವಾಗಿ ಹಳ್ಳಿಯಿಂದ ಡೆಲ್ಲಿಗೆ ನಡೆಯಬೇಕಾದ್ದು ಪ್ರಜಾಪ್ರಭುತ್ವ ವಾದಿಯ ತತ್ವ. ಡೆಲ್ಲಿಯಲ್ಲಿ ಯಾರೋ ತೀರ್ಮಾನ ಮಾಡಿದ್ದನ್ನೆಲ್ಲಾ ಪ್ರಜೆಗಳು ಅನುಸರಿಸಬೇಕು ಎಂದು ಹೇಳುತ್ತಾರೆ. ಅದು ಸರಿಯಾದ ವಾದವಲ್ಲ. ಸರ್ಕಾರದವರು ಬೇಕಾದರೆ ಅಂಕಿ ಅಂಶಗಳನ್ನು ತಯಾರುಮಾಡಲಿ, ಅವರಿಗೇ ಗೊತ್ತಾಗುತ್ತದೆ. ಪಾನನಿರೋಧ ಶಾಸನ ಎಷ್ಟು ಮಂದಿ ಬೇಕು ಎಂದು ಹೇಳುತ್ತಾರೆಂಬುದು. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ಪಾನನಿರೋಧ ನೀತಿಯನ್ನು ಕೈಬಿಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ನೀರಾವರಿ ಯೋಜನೆಗಳು ಸಫಲವಾಗಿವೆಯೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಅದರಿಂದ ಬಂದಿರತಕ್ಕ ಉತ್ಪಾದನೆ ನಿರಾಶಾದಾಯಕವಾಗಿದೆಯೆಂದು ಹೇಳಿದರೆ ಅದೇನೂ ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ. ಇಲ್ಲಿ ಒಂದು ನಿದರ್ಶನವನ್ನು ಹೇಳಬೇಕಾದರೆ ತುಂಗಭದ್ರಾ ಯೋಜನೆ. ಕಾರ್ಯ ಆರಂಭವಾಗಿ 10-11 ವರ್ಷಗಳಾಯಿತು. 1953ರಲ್ಲಿ ನೀರು ಶೇಖರಣೆಯಾಯಿತು. ಅದಕ್ಕೆ ಖರ್ಚಾದುದು 108 ಕೋಟಿ ರೂಪಾಯಿಗಳು. ಡೆವಲಪ್ ಆಗಿರುವುದು ಕೇವಲ ಒಂದು-ಒಂದೂವರೆ ಲಕ್ಷ ಎಕರೆ. ಹೆಚ್ಚು ಅಂದರೆ $2\frac{1}{2}$ ಲಕ್ಷ ಎಕರೆಗಳು ಎಂದು ಹೇಳಬಹುದು. ಈಗ 9 ಲಕ್ಷ ಎಕರೆಯಲ್ಲಿ 10 ವರ್ಷಗಳಾದರೂ ಇವತ್ತಿನವರೆಗೂ ಕೇವಲ ಶೇಕಡ 25ರಷ್ಟು ಜಮೀನು ಡೆವಲಪ್ ಆಗದಿದ್ದರೆ ಅಣೆಕಟ್ಟು ಕಟ್ಟಿದ್ದು ಏತಕ್ಕೆ! ಇದಕ್ಕಾಗಿ ಟ್ರಾಕ್ಟರ್ಸ್ ಬೇಕೇ ಬೇಕು, ಇಂಜನಿಯರುಗಳನ್ನು ಕೆಲಸಗಲ್ಲರಿಸಬೇಕು ಎಂದು ಬೇರೆ ಹೇಳುತ್ತಾರೆ. ಇದರಿಂದ ಜನರಿಗೆ ನಿಜವಾಗಿ ಉಪಕಾರವಾಗಿಲ್ಲ. ಸರ್ಕಾರ ಈ ಬಗ್ಗೆ ಯಾವ ತರಹ ಮುತುವರ್ಜಿಯನ್ನೂ ತೆಗೆದುಕೊಂಡಿಲ್ಲ. ನೀರಿನ ಸರಬರಾಜು ಸಹ ಸರಿಯಾಗಿ ನಡೆಯುತ್ತಾ ಇಲ್ಲ. ಟ್ರಾಕ್ಟರು ಮತ್ತು ಬುಲ್‌ಡೋಜರುಗಳಿಗೆ ಸಾಕಷ್ಟು ದ್ರವ್ಯ ಸಹಾಯ ಸರ್ಕಾರದಿಂದ ದೊರೆಯುತ್ತಿಲ್ಲ. ಯೋಜನೆಗಳಿಗನುಸಾರವಾಗಿ ಕೆಲಸ ಕಾರ್ಯಗಳು ನಡೆಯುತ್ತಾ ಇಲ್ಲ. ದೇಶದ ದ್ರವ್ಯ ವ್ಯರ್ಥಾ ಖರ್ಚಾಗುತ್ತಿದೆಯೇ ಹೊರತು ದೇಶಕ್ಕೆ ಸಾಕಷ್ಟು ಉತ್ಪತ್ತಿ ಬರಲಿಲ್ಲವೆಂದು ಹೇಳಿದರೆ ಏನೂ ತಪ್ಪಾಗಲಾರದು.

ಇನ್ನು ಬಳ್ಳಾರಿಯಲ್ಲಿ ನಾರೆ ಕೆಳಗೆ 60 ಸಾವಿರ ಎಕರೆ ಡ್ರೈ-ಕಂ-ವೆಟ್ ಲ್ಯಾಂಡ್ ರೈತರಿಗೆ ಕೊಟ್ಟಿದ್ದಾರೆ. ಅದು ಒಂದು ಹೊಸ ನಮೂನೆಯ ವ್ಯವಸಾಯ. ಅದರಲ್ಲಿ 10 ಸಾವಿರ ಎಕರೆ ಜಮೀನು ಅಭಿವೃದ್ಧಿಯಾಗಲಿಲ್ಲ. ಇದರ ಬಗ್ಗೆ ಎಷ್ಟೋಸಾರಿ ಅಹವಾಲುಗಳನ್ನು ಸರ್ಕಾರಕ್ಕೆ ಕಳು

ಹಿಸಲಾಯಿತು. ಛೀಫ್ ಸೆಕ್ರೆಟರಿ, ಮುಖ್ಯ ಮಂತ್ರಿಗಳ ಮುಂದೆಯೂ ಹೋಗಿ ಈ ವಿಷಯ ಮಂತ್ರಿ ಮಂಡಲದಲ್ಲಿಯೂ ಬಂತು. ಎಷ್ಟೋ ಹೇಳಿಕೊಂಡೆವು, ಇದುವರೆಗೂ ಪರಿಹಾರ ಸಿಕ್ಕಲಿಲ್ಲ. ಎಂಟು ವರ್ಷಗಳ ತರಿಗೆಯನ್ನು ಹಾಕಿದ್ದೇವೆ; ಅವನ್ನೆಲ್ಲಾ ವಸೂಲು ಮಾಡಬೇಕೆಂದಿದ್ದೇವೆ ಎಂಬುದಾಗಿ ಈಗ ಅವರು ಹೇಳುತ್ತಿದ್ದಾರೆ. ಅವರು ಎಲ್ಲಿಂದ ಹಣ ತರಬೇಕು. ನೀರು ಸರಬರಾಜು ತೆಗೆದು ಕೊಂಡವರು ಕೊಡಬೇಕು ಎಂದರೆ ಸರಿ ನೀರು ತೆಗೆದುಕೊಳ್ಳದೆ ಇದ್ದವರೂ ಕೊಡಬೇಕು ಎಂದು ಹೇಳುತ್ತಿದ್ದಾರೆ. ನಿಮ್ಮ ಭೂಮಿಯನ್ನೇ ಸರಿಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಹೀಗಿದ್ದಾರೆ ತೆರಿಗೆಯನ್ನು ವಸೂಲು ಮಾಡುವುದಕ್ಕೆ ಸಾಧ್ಯವೇ? ಪ್ರಜೆಗಳ ಹಿತವನ್ನು ನೋಡಿಕೊಳ್ಳಬೇಕು. ತಾನು ಉಂಡು ಇತರರಿಗೂ ಉಣ್ಣಿಸಿ ರೈತನಾದವನು ಸರ್ಕಾರಕ್ಕೆ ತೆರಿಗೆ ಕೊಡುತ್ತಾನೆ. 8 ವರ್ಷ ಗಳ ನೀರಿನ ತೆರಿಗೆಯನ್ನು ಈಗ ಲೆಕ್ಕ ಹಾಕಿದರೆ ಸುಮಾರು 6-7 ಲಕ್ಷ ರೂಪಾಯಿಗಳಾಗುತ್ತವೆ. ಇವರು ಈ ರೀತಿ ಮಾಡಿದರೆ ಅವರಿಂದ ಒಂದು ಕಾಸು ಕೂಡ ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ಎಷ್ಟೋಸಾರಿ ಕೈಮುಗಿದು ಕೇಳಿಕೊಂಡಿದ್ದೇನೆ, ಜನತೆಯ ಮೇಲೆ ಸರ್ಕಾರಕ್ಕೆ ವಿಶ್ವಾಸ, ಪ್ರೀತಿ, ಮಮತೆ ಇಲ್ಲದೆ ಹೋದರೆ ಜನತೆಯೇ ಮುಂದಿನ ಹೆಜ್ಜೆ ತೆಗೆದುಕೊಳ್ಳಲು ಪ್ರಯತ್ನ ಮಾಡ ಬೇಕಾಗುತ್ತದೆ ಎಂದು. ಈಗಲೇ ಆ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳಿ ಎಂದು ನಾನು ಸರ್ಕಾರಕ್ಕೆ ಹೇಳುತ್ತೇನೆ. ಇಲ್ಲದೆ ಹೋದರೆ ಜನತೆಯಿಂದ ಅಥವಾ ಪ್ರಜೆಗಳಿಂದ ಒಂದು ಕಾಸನ್ನು ಕೂಡ ವಸೂಲು ಮಾಡುವುದಕ್ಕಾಗುವುದಿಲ್ಲವೆಂದು ನಾನು ಎಚ್ಚರಿಸಬಯಸುತ್ತೇನೆ.

ಇನ್ನು ಆಹಾರ ಧಾನ್ಯಗಳ ಬೆಲೆಯಂತೂ ವಿಪರೀತವಾಗಿ ಏರುತ್ತಿದೆ ಎಂದು ಹೇಳಿದ್ದಾರೆ. ಬೇರೆ ಪದಾರ್ಥಗಳ ಬೆಲೆ ಏರುತ್ತಾ ಇಲ್ಲವೇನು? ರೈತನ ಕಷ್ಟ ಯಾರಿಗೆ ಗೊತ್ತಿದೆ ಎಂದು ಕೇಳ ಬೇಕಾಗಿದೆ. ರೈತನು ವ್ಯವಸಾಯಕ್ಕಾಗಿ ಉಪಯೋಗಿಸುವ ಕಬ್ಬಿಣ, ಮರಮುಟ್ಟು, ಗೊಬ್ಬರ, ಎತ್ತುಗಳ ಬೆಲೆ—ಇವೆಲ್ಲವೂ ವಿಶೇಷವಾಗಿ ಏರುತ್ತಿದೆ. ಮನುಷ್ಯ ಧರಿಸತಕ್ಕ ಬಟ್ಟೆಯ ಬೆಲೆಯೂ ಏರಿದೆ. ಕೂಲಿಯಂತೂ ಒಂದು ರೂಪಾಯಿಗೆ ಎರಡು ರೂಪಾಯಿಗಳನ್ನು ಕೊಡುತ್ತಿದ್ದಾರೆ. ಹೀಗೆ ಲೆಕ್ಕವಿಲ್ಲದೆ ಎಲ್ಲ ಪದಾರ್ಥಗಳ ಬೆಲೆಗಳು ಏರುತ್ತಾ ಇದ್ದರೆ ಅದನ್ನು ಆದಷ್ಟುಮಟ್ಟಿಗೆ ಸರ್ಕಾರ ದವರು ಹತೋಟಿಗೆ ತಂದು ಕಡಮೆ ಮಾಡಬೇಕು. ನೆಲ್ಲು ಪಲ್ಲಾ 1ಕ್ಕೆ 40 ರೂಪಾಯಿಗಳಂತೆ ಮಾರಿದರೆ ರೈತರು ಏನು ಉಣ್ಣಬೇಕು? ಜೋಳದ ರೊಟ್ಟಿ ಮತ್ತು ನವಣೆ— ಇಂತಹ ಆಹಾರ ವನ್ನು ಸೇವಿಸಿಕೊಂಡು ರೈತರು ಜೀವನ ನಡೆಸುತ್ತಿದ್ದಾರೆ. ಪುಣ್ಯಾತ್ಮರಾಗಿರುವವರು ಸೇಲ್ಸ್ ಟ್ಯಾಕ್ಸ್, ಇನ್‌ಕಂ-ಟ್ಯಾಕ್ಸ್ ಕೊಡುತ್ತಾ ಅಧಿಕಾರ ಮಾಡತಕ್ಕವರು—ಅಂತಹವರಿಗಾಗಿ ಇವರು ಬೆಳೆಯುತ್ತಾ ಇದ್ದಾರೆಯೇ ಹೊರತು ತಮಗಾಗಿ ಬೆಳೆಯುತ್ತಾ ಇಲ್ಲ ಎಂದು ನನ್ನ ಸ್ನೇಹಿತರಾದ ಶ್ರೀಮಾನ್ ಪಾವಟೆಯವರು ಹೇಳಿದ್ದನ್ನು ನಾನು ಸಮರ್ಥನೆ ಮಾಡುತ್ತೇನೆ. ಹೀಗೆ ಏರುತ್ತಿರುವ ಬೆಲೆಗಳನ್ನು ಕೂಡಲೇ ಸರ್ಕಾರದವರು ತಡೆಗಟ್ಟಬೇಕು. ಅದಕ್ಕೆ ತಕ್ಕ ಕ್ರಮವನ್ನೂ ಸಹ ತೆಗೆದು ಕೊಳ್ಳಬೇಕೆಂದು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಸಭಾಧ್ಯಕ್ಷಣಿಯವರೇ, ರಾಜ್ಯಪಾಲರ ಭಾಷ ಣದ ಮೇಲೆ ಕೃತಜ್ಞತಾ ಪೂರ್ವಕವಾದ ವಂದನೆಗಳ ಪ್ರಸ್ತಾಪವನ್ನು ನನ್ನ ಸ್ನೇಹಿತರಾದ ಶ್ರೀಮಾನ್ ಡಿ. ಎಂ. ಸಿದ್ಧಯ್ಯನವರು ಮಂಡಿಸಿ ಅವರು ಕನ್ನಡದಲ್ಲಿ ಭಾಷಣ ಮಾಡಿದ್ದಕ್ಕಾಗಿ ಬಹಳವಾಗಿ ಅಭಿ ನಂದಿಸಿದರು. ಆದರೆ ಮಾನ್ಯ ಸದಸ್ಯರು ಒಂದು ಆಡಳಿತ ಪಕ್ಷದ ಜನರಲ್ ಸೆಕ್ರೆಟರಿಯಾಗಿ ಬಡ್ಜೆಟ್ ಮಂಡಿಸುವಾಗ ಕನ್ನಡ ಪ್ರತಿಯನ್ನು ಮಂಡಿಸುವುದಕ್ಕೆ ಪ್ರಯತ್ನಮಾಡಲಿಲ್ಲ. ಆ ಒಂದು ಆತ್ಮತೃಪ್ತಿ ಪ್ರತಿಭೆ ಅವರಲ್ಲಿ ಇಲ್ಲವೆಂಬುದನ್ನು ಈ ಸಮಯದಲ್ಲಿ ಹೇಳಲು ಬಯಸುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಸಮಾಜ ಅಭಿವೃದ್ಧಿ ಕ್ಷೇತ್ರಗಳಲ್ಲಿ ವ್ಯವಸಾಯೋತ್ಪಾದನ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದೆ, ಪಂಚಾಯಿತಿ ವ್ಯವಸಾಯೋತ್ಪಾದನಾ ಯೋಜನೆ ಗಳನ್ನು ಸಕಲ ಪಂಚಾಯಿತಿಗಳಲ್ಲೂ ಸಿದ್ಧಪಡಿಸಲಾಗಿದೆಯೆಂದು ಹೇಳಿದ್ದಾರೆ. ಇದೇನು ನಮಗೆ ಅರ್ಥವಾಗಲಿಲ್ಲ. ಪಂಚಾಯಿತಿಯಿಂದ ಪಾರ್ಟಿಗಳನ್ನು ಕಟ್ಟುವುದಕ್ಕೆ ಅವಕಾಶವಾಗಿದೆ. ಇನ್ನು ಆಹಾರ ಜಾಸ್ತಿಯಾಗಿ ಬೆಳೆಯುವುದಕ್ಕೆ ಸಹಾಯ ಮಾಡಿದ್ದೇವೆ. ವ್ಯವಸಾಯದ ಮುಟ್ಟುಗಳನ್ನು ಒದಗಿಸಿಕೊಟ್ಟಿದ್ದೇವೆ. ಗೊಬ್ಬರ ಒದಗಿಸಿದ್ದೇವೆಂದು ಹೇಳಿದ್ದಾರೆಯೇ ಹೊರತು ರೈತರ ಹತ್ತಿರ ಭೂಮಿ ಇದ್ದರೆ ಯಾವ ತರಹ ಅದನ್ನು ಅಭಿವೃದ್ಧಿಪಡಿಸಬೇಕೆಂಬುದನ್ನು ವಿಶದಪಡಿಸಿಲ್ಲವೆಂದು ನಾನು ಹೇಳುತ್ತೇನೆ. ಇನ್ನು ಮಂಡ್ಯಾದಲ್ಲಿ ಪ್ಯಾಕೇಜ್ ಪ್ರೋಗ್ರಾಂ ಅಳವಡಿಸಿದ್ದೇವೆಂದು ಹೇಳುತ್ತಾರೆ. ಇದರಲ್ಲಿ ಒಂದು ಕಡೆ ಸೊಸೈಟಿ, ಒಂದು ಕಡೆ ಬ್ಯಾಂಕ್, ಒಂದು ಕಡೆ ರೆವಿನ್ಯೂ, ಇನ್ನೊಂದು ಕಡೆ ಅಗ್ರಿಕಲ್‌ಚರ್—ಯಾವ ಕಡೆ ಕೈಚಾಚಿದರೂ ಅವನಿಗೆ ಇವೆಲ್ಲಾ ಸುಲಭವಾಗಿ ಸಿಕ್ಕುವುದಿಲ್ಲ. ಇದರಿಂದ ವ್ಯವಸಾಯಾಭಿವೃದ್ಧಿ ಹೇಗಾಗುತ್ತದೆ? ಇದರಲ್ಲಿರತಕ್ಕ ತೊಂದರೆಯನ್ನೆಲ್ಲಾ ಸರ್ಕಾರ ದವರು ಗಮನಿಸಬೇಕು. ಈಗ ಕೆಲವು ಕಡೆಗಳಲ್ಲಿ ಎನ್. ಇ. ಎಸ್. ಅವರಿಗೆ ಈ ಜವಾಬ್ದಾರಿಯನ್ನು

(ಶ್ರೀ ಎನ್. ನಂಜೇಗೌಡ)

ಕೊಟ್ಟಿದ್ದಾರೆ. ಸೊಸೈಟಿಗಳು ಒಂದು ಕಡೆ ಇವೆ. ಪ್ಯಾಕೇಜ್ ಪ್ರೋಗ್ರಾಂ ಪ್ಲಾನ್ ಬೇರೆ ಹೇಳುತ್ತಾರೆ. ಮಾರ್ಚ್ ತಿಂಗಳಲ್ಲಿ ಗ್ರೀನ್ ಮ್ಯಾನ್ಯೂರ್ ಬೆಳೆಯುವುದಕ್ಕೆ 100 ಕೆ. ಜಿ. ಸೂಪರ್ ಫಾಸ್ಫೇಟ್ ಹಾಕಬೇಕು. ಜೂನ್ ತಿಂಗಳಲ್ಲಿ ಮ್ಯಾನ್ಯೂರ್ ಬೇಕು ಎಂದು. ಆದರೆ ವ್ಯವಸಾಯಕ್ಕಾಗಿ ಬೇಕಾಗತಕ್ಕ ಖರ್ಚು ಬೇಕು, ಕಳೆ ತೆಗೆಯುವಾಗ ಬೇರೆ ಖರ್ಚಿಗೆ ಬೇಕು, ಹೀಗೆ ಎಷ್ಟೋ ಖರ್ಚುಗಳಿಗೆ ಹಣ ಬೇಕು. ಆಗಸ್ಟ್–ಸೆಪ್ಟೆಂಬರ್ ತಿಂಗಳುಗಳಲ್ಲಿ ಸಾಲ ಕೊಡುತ್ತಾರೆ. ಹೀಗಾದರೆ ಈ ಹಣ ದುರ್ವಿನಿಯೋಗವಾಗದೆ ಸದ್ವಿನಿಯೋಗ ಹೇಗಾಗುತ್ತದೆ? ಗ್ರೀನ್ ಮ್ಯಾನ್ಯೂರ್ ಬೆಳೆಯುವುದಕ್ಕೆ ಸೊಸೈಟಿಗಳವರು ಸಾಲಕ್ಕೆ ಅಪ್ಲೈ ಮಾಡಿದಾಗ ಕನ್‌ಸೆಷನ್ ಆರ್ಡರನ್ನು ಮಾಡಬೇಕಾದರೆ ಆಗಸ್ಟ್ ತಿಂಗಳಾಗಿರುತ್ತೆ, ಆ ರೀತಿ ಕನ್‌ಸೆಷನ್ ಆರ್ಡರ್ ಬಂದಮೇಲೆ ಸ್ಯಾಂಕ್ಷನ್ ಆಗಿ ಬರುವುದಕ್ಕೆ ಸೆಪ್ಟೆಂಬರ್–ಅಕ್ಟೋಬರ್ ಆಗುತ್ತದೆ. ಸೆಪ್ಟೆಂಬರ್‌ನಲ್ಲಿ ಕೊಟ್ಟ ದುಡ್ಡು ಸುಮ್ಮನೆ ವ್ಯಥ ವಾಗುತ್ತದೆ. ಇದರಿಂದ ಪ್ರಯೋಜನವೇನಾಯಿತು? ಆದ್ದರಿಂದ ದಯವಿಟ್ಟು ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನವರು ಈಗಲೇ ಮುತುವರ್ಜಿ ತೆಗೆದುಕೊಂಡು ಸಾಲಗಾರರಿಗೆ ಬೇಗ ಸಾಲ ದೊರೆಯುವುದಕ್ಕೆ ಸಬ್-ರಿಜಿಸ್ಟ್ರಾರ್ ಅವರ ಆಫೀಸಿನಿಂದ ಕನ್‌ಸೆಷನ್ ಜಾಗ್ರತೆ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಒಂದು ಸರ್ಕಾರೀ ಆಜ್ಞೆಯನ್ನು ಕೂಡಲೇ ಕಳುಹಿಸಬೇಕೆಂದು ಹೇಳುತ್ತೇನೆ. ಮಾರ್ಚ್ ತಿಂಗಳಲ್ಲಿ ಮತ್ತು ಏಪ್ರಿಲ್ ತಿಂಗಳಿನಲ್ಲಿ ಗ್ರೀನ್ ಮ್ಯಾನ್ಯೂರಿಗಾಗಿ ಯಾರು ಅಲ್ಪಾವಧಿ ಸಾಲವನ್ನು ತೆಗೆದುಕೊಂಡಿರುತ್ತಾರೋ ಅಂತಹವರಿಗೆ ಒಂದೇ ಕಂತಿನಲ್ಲಿ ಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಸರಬರಾಯಿ ಮಾಡುವುದಕ್ಕೆ ಜಾಗ್ರತೆ ಅವಕಾಶಮಾಡಲು ಸಂಬಂಧಪಟ್ಟ ಅಧಿಕಾರಿಗೆ ಈ ಬಗ್ಗೆ ಸೂಚನೆಕೊಟ್ಟು ಈ ಅನುಕೂಲಗಳನ್ನು ಅವರಿಗೆ ಕಲ್ಪಿಸಿ ಕೊಡುತ್ತಾರೆಂಬುದಾಗಿ ನಂಬಿ ಈ ಮೂಲಕ ಅವರನ್ನು ಪ್ರಾರ್ಥಿಸುತ್ತೇನೆ.

ಸಕ್ಕರೆ ಕಾರ್ಖಾನೆಗಳ ಸಹಕಾರ ಸಂಘ ಎಂದು ಕೆಲವು ಸಹಕಾರ ಸಂಘಗಳನ್ನು ತೆರೆದಿದ್ದಾರೆ. ಸಕ್ಕರೆ ಕಾರ್ಖಾನೆಯ ವಿಷಯದಲ್ಲಿ 1959-60 61ನೇ ಸಾಲಿನ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ನಾನು ಒಂದು ಪ್ರಶ್ನೆಯನ್ನು ಕೇಳಿ ಎರಡು ವರ್ಷಗಳಾಯಿತು. ಆ ಪ್ರಶ್ನೆಗೆ ಇದುವರೆಗೂ ಉತ್ತರ ಬರಲಿಲ್ಲ. ಇದಕ್ಕೆ ಕಾರಣವೇನು? ಹೀಗೆ ಮಾಡಿದರೆ ಭ್ರಷ್ಟಾಚಾರ ಹೇಗೆ ನಿಲ್ಲುತ್ತದೆ? ಆ ಸಕ್ಕರೆ ಕಾರ್ಖಾನೆಯ ಲೆಕ್ಕಪತ್ರದಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಒಂದು ಪ್ರಶ್ನೆಯನ್ನು ಹಾಕಿದರೆ ಅದಕ್ಕೆ ಇದುವರೆಗೂ ಉತ್ತರ ಬಾರದೆ ಇದ್ದರೆ ಇದರ ಅರ್ಥ ಏನು? ನನಗೆ ತಿಳಿದಮಟ್ಟಿಗೆ ಒಂದು ಸಕ್ಕರೆ ಕಾರ್ಖಾನೆಯಲ್ಲಿ 100 ಗೋಣೀಚೀಲಕ್ಕೆ 247 ರೂಪಾಯಿ ಕೊಟ್ಟು ಕೊಂಡಿದ್ದಾರೆ. ಆಮೇಲೆ ಜೀಪಿನ ರಿಪೇರಿಗೋಸ್ಕರ 30 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಆಡಿಟ್ ವರದಿಯಲ್ಲಿ ಬಂದಿದೆ. ಅದರ ಅಂಕಿ ಅಂಶಗಳನ್ನು ಪರಿಶೀಲಿಸಿ ಆದಕ್ಕೆ ಸಂಬಂಧಪಟ್ಟವರ ಮೇಲೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಈ ಚರ್ಚೆಗೆ ಉತ್ತರ ಕೊಡುವಾಗ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಂಥಾ ಭ್ರಷ್ಟಾಚಾರಗಳನ್ನು ನಡೆಸಿರತಕ್ಕವರ ಮೇಲೆ ಸರ್ಕಾರದವರು ಉಗ್ರವಾದ ಕ್ರಮವನ್ನು ತೆಗೆದುಕೊಳ್ಳದೆ ಇದ್ದರೆ ಸಹಕಾರ ಸಂಘಗಳು ಬೆಳೆಯುವ ಸ್ಥಿತಿ ಹೇಗೆ ಎಂದು ನಾನು ಸರ್ಕಾರಕ್ಕೆ ಮನವರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ನೀರಾವರಿ ಬಾವಿಗಳನ್ನು ತೋಡಿಸುವುದಕ್ಕಾಗಿ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಅದು ನಿಜವಾಗಿಯೂ ಜನಗಳ ಕೈ ಸೇರಿ ಅದರಿಂದ ಜನಗಳಿಗೆ ಪ್ರತಿಫಲ ಬರುತ್ತಿದೆಯೇ ಎಂಬುದನ್ನು ಸರ್ಕಾರದವರು ವಿಮರ್ಶೆ ಮಾಡಿ ನೋಡಬೇಕು. ಬರೀ ನಮ್ಮ ತಾಲ್ಲೂಕು ಒಂದರಲ್ಲಿಯೇ ಸರ್ಕಾರದವರು ಕೊಟ್ಟಿರತಕ್ಕ ಬಾವಿಗಳಲ್ಲಿ 96–97 ಬಾವಿಗಳು ಅರ್ಧಮರ್ಧ ಆಗಿವೆ. ಅವರಿಗೆ ಫಸ್ಟ್ ಇನ್‌ಸ್ಟಾಲ್‌ಮೆಂಟ್, ಸೆಕೆಂಡ್ ಇನ್‌ಸ್ಟಾಲ್‌ಮೆಂಟ್ ಹಣವನ್ನು ಕೊಟ್ಟಿದ್ದಾರೆ. ಉಳಿಕೆಯಾದ ಹಣವನ್ನು ಕೊಟ್ಟಿಲ್ಲ. ಆದ್ದರಿಂದ ಆ ಬಾವಿಗಳ ಕೆಲಸ ಇದುವರೆಗೂ ಮುಗಿದಿಲ್ಲ. ಅದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮವನ್ನು ತೆಗೆದುಕೊಂಡು ಆ ಬಾವಿಗಳ ಕೆಲಸ ಮುಗಿಯುವ ಹಾಗೆ ಉಳಿದ ಇನ್‌ಸ್ಟಾಲ್‌ಮೆಂಟ್ ಹಣವನ್ನು ಕೊಡುವಹಾಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ನನಗೆ ಗೊತ್ತಿರುವ ಹಾಗೆ ಯಾವ ವಿಧವಾದ ಕ್ರಮವನ್ನೂ ತೆಗೆದುಕೊಂಡಿಲ್ಲ. ಸರ್ಕಾರದವರು ಇದುವರೆಗೆ ಆ ಬಗ್ಗೆ ಖರ್ಚು ಮಾಡಿರತಕ್ಕ ಹಣ ಡೆಡ್ ಕ್ಯಾಪಿಟಲ್ ಆಗಿ ಬಿದ್ದಿದೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಆಕಡೆ ಸರ್ಕಾರದವರು ಗಮನ ಕೊಡಬೇಕು. ಆ ರೀತಿ ಬಾವಿಗಳಿಗೆ ಕೊಟ್ಟಂತಹ ಹಣವನ್ನು ಯಾರಾದರೂ ದುರುಪಯೋಗ ಮಾಡಿದ ಪಕ್ಷದಲ್ಲಿ ಅಂಥವರ ಮೇಲೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಜಮೀನಿನ ಹಂಚಿಕೆಯ ವಿಚಾರದಲ್ಲಿ ಹೇಳುವುದಾದರೆ ಜಮೀನು ಇಲ್ಲದೆ ಇರತಕ್ಕ ಬಡವರಿಗೆ ಮತ್ತು ಹರಿಜನರಿಗೆ ಜಮೀನನ್ನು ಕೊಡಬೇಕೆಂಬುದು ಸರ್ಕಾರದವರ ಉದ್ದೇಶ. ಆದರೆ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಅದರ ಫಲ ಸಿಕ್ಕದೆ ಬೇರೆಯವರಿಗೆ ಸಿಕ್ಕುತ್ತಿವೆ. ಅದರಲ್ಲಿ ಏನೇನೋ ಅನ್ಯಾಯಗಳು ನಡೆಯುತ್ತಿದೆ. ಸರ್ಕಾರದವರು ಇದನ್ನೆಲ್ಲಾ ಗಮನವಿಟ್ಟು ನೋಡಬೇಕು. ಯಾವುದಾದರೂ ಒಂದು ಉತ್ಕೃಷ್ಟವಾದ ಜಮೀನು ಇದ್ದರೆ, ಯಾರಾದರೂ ಒಬ್ಬ ಪ್ರಭಾವಶಾಲಿಯಾದ ಮನುಷ್ಯ ಯಾರಾದರೂ ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟಿನ ಒಬ್ಬ ಮನುಷ್ಯನನ್ನು ಕರೆದುಕೊಂಡು ಹೋಗಿ ಅಪ್ಲಿಕೇಷನ್ ಹಾಕಿಸುವುದು ಪ್ರಭಾವ ಬೀರಿ ಜಮೀನನ್ನು ಸ್ಯಾಂಕ್ಷನ್ ಮಾಡಿಸಿಕೊಂಡು ಅದನ್ನು ಫ್ರೀಯಾಗಿ ಕೊಡಬೇಡಿ ಅದಕ್ಕೆ ಕಿಮ್ಮತ್ತು ಹಾಕಿ ಎಂದು ಹೇಳಿ 100 ರೂಪಾಯಿ ಕಿಮ್ಮತ್ತು ಹಾಕಿಸುವುದು. ಈ ರೀತಿ ಮಾಡುತ್ತಾರೆ. ಆಮೇಲೆ ಸ್ವಲ್ಪ ದಿವಸ ಕಳೆದನಂತರ ಆ ಜಮೀನನ್ನು ಎರಡು ಸಾವಿರ, ಮೂರು ಸಾವಿರ ರೂಪಾಯಿಗಳಿಗೆ ಮಾರಿಸುವುದು ಅದರಲ್ಲಿ ಬಂದ ಹಣವನ್ನು ತೆಗೆದುಕೊಳ್ಳುವುದು .ಈ ರೀತಿ ಮಾಡತಕ್ಕ ನೂರಾರು ಕೇಸುಗಳಿವೆ. ಈ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೂ ಸರ್ಕಾರದವರು ಈ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಂಡಂತೆ ಕಾಣಲಿಲ್ಲ. ಈ ರೀತಿ ಮಾಡಿದರೆ ಷೆಡ್ಯೂಲ್ಡ್ ಕ್ಯಾಸ್ಟಿನವರು ಮುಂದೆ ಬರುವುದು ಹೇಗೆ ?

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಹರಿಜನರಿಗೆ ಸರ್ಕಾರದವರು ಕೊಟ್ಟ ಜಮೀನನ್ನು 15 ವರ್ಷಗಳವರೆಗೂ ಪರಭಾರೆ ಮಾಡಬಾರದು ಎಂದು ಕಾನೂನು ಇದೆ.

ಶ್ರೀ ಎನ್. ನಂಜೇಗೌಡ.—ಹರಿಜನರಿಗೆ ಫ್ರೀ ಆಫ್ ಕಾಸ್ಟ್ ಜಮೀನನ್ನು ಕೊಟ್ಟರೆ 15 ವರ್ಷಗಳ ಕಂಡೀಷನ್ ಅಪ್ಲೈ ಆಗುತ್ತದೆ. ಆದ್ದರಿಂದ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಕೊಡತಕ್ಕ ಜಮೀನಿಗೆ ಕಿಮ್ಮತ್ತು ಹಾಕಿ ಅದನ್ನು ಅವರಿಗೆ ಕೊಡುವುದಾದರೆ ಬಡವರಾಗಿರತಕ್ಕವರು ಅದನ್ನು ಮಾರಿಕೊಳ್ಳುತ್ತಾರೆ. ಈ ರೀತಿ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಕೊಡತಕ್ಕ ಜಮೀನು ಪ್ರಭಾವಶಾಲಿಗಳ ಕೈ ಸೇರಿ ಅದು ದುರುಪಯೋಗವಾಗುತ್ತಿದೆ ಎಂದು ನಾನು ಈ ಸಮಯದಲ್ಲಿ ಸರ್ಕಾರದವರ ಗಮನಕ್ಕೆ ತರಲಚ್ಛಿಸುತ್ತೇನೆ.

ಇನ್ನು ರಸ್ತೆ ಸಾರಿಗೆ ಇಲಾಖೆಯ ವಿಷಯದಲ್ಲಿ ಹೇಳುವುದಾದರೆ ಇದು ಒಂದು ಸಮಸ್ಯಾ ಇಲಾಖೆಯೆಂದು ಹೇಳಬಹುದು. ಇದನ್ನು ಹೇಗೆ ಸರಿಪಡಿಸಬೇಕು ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಮೊನ್ನೆ ತಾನೆ ನಾನು ಹೆಗ್ಗಡದೇವನಕೋಟೆಗೆ ಹೋಗಬೇಕೆಂದು 4½ ಗಂಟೆಯ ಬಸ್ಸಿಗೆ ಹೊರಟೆ. ಆ ಬಸ್ಸು 5¾ ಗಂಟೆಗೆ ಹೊರಟು ರಾಯನ ಕೆರೆಯ ಹತ್ತಿರಕ್ಕೆ ಎಂದರೆ 3 ಮೈಲಿ ದೂರ ಹೋಗಿ ಅದಕ್ಕೆ ಬ್ರೇಕ್ ಇಲ್ಲ ಕೆಟ್ಟುಹೋಗಿದೆ ಎಂದು ಡ್ರೈವರು ಆ ಬಸ್ಸನ್ನು ಅಲ್ಲಿ ನಿಲ್ಲಿಸಿದನು. ಆಮೇಲೆ ನಾನು ಆ ಡ್ರೈವರನ್ನು ಕೇಳಿದೆ ಬ್ರೇಕಿಲ್ಲದೆ ಆ ಬಸ್ಸು ಹೊರಡುವಾಗ ಸರ್ಟಿಫೈ ಹೇಗೆ ಮಾಡಿದರು ಎಂದು. ಅದಕ್ಕೆ ಅವನು ಹೇಳಿದ, ಗ್ಯಾರೇಜಿನಲ್ಲಿ ಹೆಚ್ಚು ಮಾತನಾಡಿದರೆ ಬೇರೆ ಡ್ರೈವರನ್ನು ಕರೆಯುತ್ತಾರೆ. ಆಗ ನನ್ನ ಬಾಯಲ್ಲಿ ಮಣ್ಣು ಬೀಳುತ್ತದೆ ಎಂದು. ಅದಕ್ಕೆ ನಾನು ಹೇಳಿದೆ. ಈಗ ನೀನು ಗಾಡಿಯನ್ನು ಇಲ್ಲಿ ನಿಲ್ಲಿಸಿ 50 ಜನಗಳ ಬಾಯಲ್ಲಿ ಮಣ್ಣು ಹಾಕುತ್ತಿದ್ದೀಯೇ, ಗಾಡಿಯಲ್ಲಿ ಏನು ಹೋಗಿದೆ ಏನು ಇಲ್ಲ ಎಂದು ನೋಡದೆ ನಿನಗೆ ಗಾಡಿ ಕೊಡುವವನು ಅದು ಸರಿಯಾಗಿದೆ ಎಂದು ಹೇಗೆ ಸರ್ಟಿಫೈ ಮಾಡಿದ ಎಂದು. ಅದಕ್ಕೆ ಆ ಡ್ರೈವರು ಹೇಳಿದ ಸುಮ್ಮನೆ ಕುಳಿತುಕೊಂಡು ಸರ್ಟಿಫೈ ಮಾಡಿ ಗಾಡಿಯನ್ನು ಕೊಡುತ್ತಾರೆ. ಅದು ಎಲ್ಲಾ ಮಾಮೂಲು ನಡೆದುಕೊಂಡು ಹೋಗುತ್ತದೆ ಎಂದು. ಆಮೇಲೆ ಬ್ರೇಕನ್ನು ಸರಿಮಾಡಿಕೊಂಡು ಹೊರಟ. ಬೀಚನಹಳ್ಳಿಗೆ 6 ಗಂಟೆಗೆ ಹೋಗಬೇಕಾಗಿದ್ದ ಬಸ್ಸು 10¼ ಗಂಟೆಗೆ ಹೆಗ್ಗಡದೇವನ ಕೋಟೆಯಲ್ಲಿ ನಿಂತುಹೋಯಿತು. ಹೀಗಾದರೆ ಪರಿಸ್ಥಿತಿ ಹೇಗೆ ಸುಧಾರಿಸುತ್ತದೆ, ಮತ್ತು ರಸ್ತೆ ಸಾರಿಗೆ ಇಲಾಖೆ ಮುಂದೆ ಬರುವುದು ಹೇಗೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು.

ಇನ್ನು ಬಸ್ಸಿನಲ್ಲಿ ಯಾರಾದರೂ ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದರೆ ಅಂಥಾ ಸಂದರ್ಭದಲ್ಲಿ ಇಂತಿಂಥಾಕಡೆ ಬಸ್ಸಿನಲ್ಲಿ ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದರು ಎಂದು ಒಂದು ಕಂಪ್ಲೇಂಟ್ ಬರೆದು ಕೊಟ್ಟರೆ ಇದು ಸರಿಯಿಲ್ಲ, ನೀವೇ ಕೋರ್ಟಿಗೆ ಬಂದು ಸ್ಟೇಟ್‌ಮೆಂಟ್ ಮಾಡಬೇಕಾಗುತ್ತದೆ ಇಂಥಾ ದಿವಸ ನೀವು ಬನ್ನಿ ಎಂದು ಹೇಳುತ್ತಾರೆ. ಹೀಗಾದರೆ ಚೆಕ್ ಮಾಡುವ ಪರಿಸ್ಥಿತಿ ಎಲ್ಲಿ ಬರುತ್ತದೆ, ಲಂಚರುಷುವತ್ತು ಹೇಗೆ ನಿಲ್ಲುತ್ತದೆ ? ಕಂಪ್ಲೇಂಟಿನಲ್ಲಿ ಇಂತಿಂಥಾ ಕಡೆ ಬಸ್ಸಿಗೆ ಹತ್ತಿದರು, ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದರು ಇಂತಿಂಥಾ ಕಡೆ ಇಳಿದರು ಎಂದು ಬರೆದು ಕೊಟ್ಟಿದ್ದರೂ ಸಹ, ಇದು ಸರಿಯಿಲ್ಲ ನೀವು ಇಂಥಾ ದಿವಸ ಕೋರ್ಟಿಗೆ ಬಂದು ಪಾರ್ಟಿ ಸವಾಲಿಗೆ ಉತ್ತರ ಕೊಡಬೇಕು ಎಂದು ಹೇಳಿದರೆ, ಕಂಪ್ಲೇಂಟ್ ಕೊಟ್ಟವರು 50-60 ಮೈಲಿ ದೂರದಿಂದ ತಮ್ಮ ಕೆಲಸಕಾರ್ಯಗಳನ್ನೆಲ್ಲಾ

(ಶ್ರೀ ಎನ್. ನಂಜೇಗೌಡ)

ಬಿಟ್ಟು ಬಂದು ಸ್ಟೇಟ್‌ಮೆಂಟ್ ಕೊಡುವುದಕ್ಕಾಗುತ್ತದೆಯೇ? ಈ ರೀತಿ ಆದರೆ ರಸ್ತೆ ಸಾರಿಗೆ ಕೆಲಸ ನಡೆಯುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ದಯವಿಟ್ಟು ಇದನ್ನೆಲ್ಲಾ ನೋಡಿ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ರಸ್ತೆ ಸಾರಿಗೆ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಸುವ್ಯವಸ್ಥಿತವಾಗಿ ನಡೆಯುವಂತೆ ಏರ್ಪಾಡು ಮಾಡಬೇಕು. ಸಾಮಾನ್ಯವಾಗಿ ಬಸ್ ಗ್ಯಾರೇಜಿನಿಂದ ಹೊರಡುವಾಗ ಆ ಬಸ್ ಸರಿಯಾಗಿದೆ ಎಂದು ಯಾರಾದರೂ ಒಬ್ಬರು ಸರ್ಟಿಫೈ ಮಾಡಿರುತ್ತಾರೆ. ಆ ಬಸ್ಸು ದಾರಿಯ ಮಧ್ಯದಲ್ಲಿ ಏನಾದರೂ ತೊಂದರೆ ಕೊಟ್ಟರೆ ಅದಕ್ಕೆ ಸಂಬಂಧಪಟ್ಟವರಿಗೆ ಶಿಕ್ಷೆಯನ್ನು ವಿಧಿಸಿದರೆ ಆಗ ಅದು ಸರಿಹೋಗುತ್ತದೆ. ಸರ್ಟಿಫೈ ಮಾಡಿ ಗಾಡಿಯನ್ನು ಕೊಡತಕ್ಕವನಿಗೆ ಭಯ ಇರುತ್ತದೆ. ಆಮೇಲೆ ಅವನು ಸ್ವಲ್ಪ ಇಂಟರೆಸ್ಟಿನಿಂದ ಗಾಡಿಯನ್ನು ಕೊಡುತ್ತಾನೆ. ಈಗ ದಾರಿಯ ಮಧ್ಯದಲ್ಲಿ ಯಾರಾದರೂ ಒಬ್ಬ ಡ್ರೈವರು ಗಾಡಿಯನ್ನು ನಿಲ್ಲಿಸಿದರೆ ಅದಕ್ಕೆ ಕಾರಣ ಏನೆಂದು ಎಕ್ಸ್‌ಪ್ಲನೇಷನ್ ಕಾಲ್‌ಫಾರ್ ಮಾಡಿ ಅವನನ್ನು ಕೇಳದೇ ಇದ್ದರೆ ರಸ್ತೆ ಸಾರಿಗೆಯ ಇಲಾಖೆ ಹೇಗೆ ಮುಂದೆ ಬರುತ್ತದೆ? ಸರ್ಕಾರದವರು ಬಸ್ಸಿನ ಮೇಲೆ ಹಾಕಿರತಕ್ಕ ದುಡ್ಡಿಗೆ ರಿಟರ್ನ್ ಹೇಗೆ ಬರುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಈಗ ರಾಜ್ಯಪಾಲರ ಭಾಷಣದಲ್ಲಿ ಮತ್ತೆ 10 ರೂಟುಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದ್ದಾರೆ.

ಈಗ ಇರುವುದನ್ನು ಸರಿಪಡಿಸದೆ, ಸರಿಯಾದ ಉತ್ಪತ್ತಿಯನ್ನು ಕೊಡುತ್ತದೆಯೇ ಇಲ್ಲವೇ ಎನ್ನುವುದನ್ನು ಗಣನೆಗೆ ತೆಗೆದುಕೊಳ್ಳದೆ ಹೆಚ್ಚು ಮಾರ್ಗಗಳನ್ನು ಸರ್ಕಾರ ತೆಗೆದುಕೊಳ್ಳುತ್ತ ಹೋದರೆ ಅದರಿಂದ ಇನ್ನೂ ನಷ್ಟವಾಗುತ್ತದೆಯೇ ಹೊರತು ಆದಾಯ ಬರುವುದಿಲ್ಲ. ಆದ್ದರಿಂದ ಈಗ ತೆಗೆದುಕೊಂಡಿರುವ ಮಾರ್ಗಗಳಲ್ಲಿ ಸರಿಯಾದ ಪ್ರತಿಫಲ ಬರುತ್ತಿದೆಯೇ ಎಂದು ನೋಡಿ ಆಮೇಲೆ ಇತರ ಮಾರ್ಗಗಳನ್ನೂ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಸಲಹೆ ಕೊಡಲು ಬಯಸುತ್ತೇನೆ.

ಸ್ವಾಮಿ, ಖಾದಿ ಬೋರ್ಡ್ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಮೊನ್ನೆತಾನೆ 44ನೆಯ ಪ್ರಶ್ನೆಗೆ ಉತ್ತರಗಳನ್ನು ಕೊಟ್ಟಿದ್ದಾರೆ. ಅಲ್ಲಿ ಉತ್ತರ ಕೊಟ್ಟಿರುವುದನ್ನು ನೋಡಿದರೆ ಎಂಥವರಿಗಾದರೂ ನಾಚಿಕೆಯಾಗುತ್ತದೆ. ಮಾಲು ಎಷ್ಟು ಉತ್ಪತ್ತಿ ಮಾಡುತ್ತಿದ್ದಾರೆ ಎಂದು ಕೇಳಿದ್ದರೆ ಅದಕ್ಕೆ ಸರ್ಕಾರದಿಂದ ಕೊಡುತ್ತಿರುವ ಸಬ್ಸಿಡಿ ಎಷ್ಟು, ಸಾಲ ಎಷ್ಟು ಎಂಬುದನ್ನು ಮಾತ್ರ ತೋರಿಸಿದ್ದಾರೆ. ಅದಕ್ಕೆ ಕೊಟ್ಟ ಹಣ ಏನಾಗಿದೆ, ಅದರಿಂದ ಉತ್ಪತ್ತಿ ಏನು ಮಾಡುತ್ತಿದ್ದಾರೆ, ಎಂದರೆ ಆಡಿಟ್ ಆಗಿಲ್ಲ, ವರದಿ ಇಲ್ಲ ಎಂಬುದಾಗಿ ಕೊಟ್ಟಿದ್ದಾರೆ. ಅದರ ವಿವರಗಳನ್ನೆಲ್ಲ ಕೊಡದೆ ಹೋದರೆ ಹೇಗೆ? ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಆದಿಜಾಂಬವ ಚರ್ಮ ಕುಶಲ ಕೈಗಾರಿಕೆ ಹೊಸಹೊಳಲು, ಎಂಬುದಾಗಿ ಆ ಪ್ರಶ್ನೆಗೆ ಉತ್ತರವಾಗಿ ಕೊಟ್ಟಿದ್ದಾರೆ. ಅದು ಎಲ್ಲಿದೆ, ಅದನ್ನು ಯಾರು ನಡೆಸುತ್ತಿದ್ದಾರೆ, ಅದಕ್ಕೆ ಎಷ್ಟು ಜನ ಮೆಂಬರುಗಳಿದ್ದಾರೆ ಎನ್ನುವುದೊಂದೂ ಗೊತ್ತಿಲ್ಲ. ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿವೆ ಎಂದು ತೋರಿಸಿರುವ ನಾಲ್ಕೈದು ಸೊಸೈಟಿಗಳಲ್ಲಿ ಒಂದು ಸೊಸೈಟಿಯಾದರೂ ನಡೆಯುತ್ತಿರುವುದನ್ನು ತೋರಿಸಿದರೆ ನಾನು ನನ್ನ ಸ್ಥಾನವನ್ನು ಖಾಲಿ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಸಂಬಂಧಪಟ್ಟವರು ಕೂಡಲೇ ಇದರ ನಿಗಾ ತೆಗೆದುಕೊಳ್ಳಬೇಕು. ಈ ಸೊಸೈಟಿಗಳು ನಡೆಯುತ್ತಿವೆಯೇ ಎನ್ನುವುದಕ್ಕೆ ಯಾರಾದರೂ ಉನ್ನತಾಧಿಕಾರಿಗಳನ್ನು ಕಳಿಸಿ ತನಿಖೆ ಮಾಡಿಸಿ. ನಾನು ಹೇಳುವುದರಲ್ಲಿ ಸತ್ಯವಿಲ್ಲ ಎಂದು ರುಜುವಾತು ಮಾಡಿದರೆ, ನಾನು ಹೇಳುವುದು ಸರಿ ಇಲ್ಲ ಎಂದರೆ ಅವರು ಹೇಳುವ ಶಿಕ್ಷೆಯನ್ನು ಅನುಭವಿಸುವುದಕ್ಕೆ ತಯಾರಿದ್ದೇನೆ.

ಪಾಂಡವಪುರ ತಾಲ್ಲೂಕಿನಲ್ಲಿ ಕುಂಬಾರ ಕುಶಲ ಕೈಗಾರಿಕಾ ಸಹಕಾರ ಸಂಘ, ಕುಂಬಾರ ಕೊಪ್ಪಲ್ ಎಂದು ಕೊಟ್ಟಿದ್ದಾರೆ. ಈ ಸಂಘ ಎಲ್ಲಿದೆ, ಆ ಊರು ಎಲ್ಲದೆ, ಎನ್ನುವುದೇ ಗೊತ್ತಿಲ್ಲ, ತನಿಖೆಗೆ ಅವಕಾಶವಿಲ್ಲ, ಎಂದರೆ ಆ ದುಡ್ಡನ್ನು ಯಾರು ತೆಗೆದುಕೊಂಡರು, ಏನು ಎನ್ನುವುದನ್ನಾದರೂ ವಿಚಾರ ಮಾಡಿದ್ದಾರೆಯೇ? ದಯವಿಟ್ಟು ಕೂಡಲೇ ಸೂಕ್ತ ಕ್ರಮ ತೆಗೆದುಕೊಂಡು ಇಂಥ ಭ್ರಷ್ಟಾಚಾರಗಳನ್ನು ನಿರ್ಮೂಲ ಮಾಡಿದರೆ ಮುಂದೆ ಭ್ರಷ್ಟಾಚಾರಗಳು ಕಡಿಮೆಯಾದಾವು. ಆದರೆ ಸರ್ಕಾರ ಏನು ಕ್ರಮವನ್ನೂ ತೆಗೆದುಕೊಳ್ಳದೆ ಹಾಗೆಯೇ ಬಿಟ್ಟರೆ ಅವರು ಮುಂದಿನ ಪೀಳಿಗೆಗೂ ಇದನ್ನು ಕಲಿಸಿ ಒಬ್ಬರಿಗೆ ನಾಲ್ಕು ತಯಾರು ಮಾಡಿಯಾರು. ಇಂಥ ಭ್ರಷ್ಟಾಚಾರವನ್ನು ತಡೆಗಟ್ಟಬೇಕಾದರೆ ನಿಮ್ಮ ಕೈಗೆ ತಪ್ಪುಮಾಡಿ ಸಿಕ್ಕಿದವರನ್ನು ಶಿಕ್ಷೆಗೆ ಗುರಿಪಡಿಸಿದರೆ ಅದು ತಾನಾಗಿಯೇ ನಿಲ್ಲುತ್ತದೆ ಎಂದು ಹೇಳಿ ಸಭಾಪತಿಯವರು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಸ್ವಾಮಿ, ಅಧ್ಯಕ್ಷರೇ, ನಮ್ಮ ರಾಜ್ಯಪಾಲರು ಈ ನಲ ಕನ್ನಡದಲ್ಲಿ ಭಾಷಣವನ್ನು ಮಾಡಿದ್ದಕ್ಕೆ ನಾನು ಅವರಿಗೆ ವಂದನೆಯನ್ನರ್ಪಿಸುತ್ತೇನೆ.

ಗೃಹರಕ್ಷಣಾ ದಳ ಡೆಪ್ಯುಟಿ ಪೋಲೀಸ್ ಇನ್‌ಸ್ಪೆಕ್ಟರ್ - ಜನರಲ್ ಹುದ್ದೆಯ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಈಚೆಗೆ ನಮ್ಮ ರಾಜ್ಯದಲ್ಲಿ ಇಡಪನೂರು ಗ್ರಾಮದಲ್ಲಿ 20 ಜನರನ್ನು ಜೀವಸಹಿತ ಸುಟ್ಟರು. ಇಷ್ಟು ಅನಾಹುತ ಆಗುವವರೆಗೂ ಅಧಿಕಾರಿಗಳು ಏನು ಮಾಡುತ್ತಿದ್ದರು ಎಂದು ನಾನು ಕೇಳುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಯಾವುದಾದರೂ ಕಂಪ್ಲೇಂಟ್ ವಗೈರೆ ಕೊಟ್ಟರೆ ಮೊದಲೇ ಅದಕ್ಕೆ ತಕ್ಕ ಬಂದೋಬಸ್ತು ಮಾಡುವುದಿಲ್ಲ. ಎಲ್ಲ ಆಗಿಹೋಗಿ ಕೊಲೆ ವಗೈರೆ ಆಗುವವರೆಗೂ ವಿಚಾರಣೆ ಮಾಡುವುದಿಲ್ಲ. ಕೊಲೆ ಆದಮೇಲೆ ಅಧಿಕಾರಿಗಳು ಹೋಗುವುದಕ್ಕೆ ಷುರು ಮಾಡುತ್ತಾರೆ. ಮೊದಲೇ ತಕ್ಕ ಬಂದೋಬಸ್ತು ಮಾಡದೆ ಇರುವುದರಿಂದ ನಮ್ಮ ದೇಶದಲ್ಲಿ ಈ ರೀತಿಯ ಅನ್ಯಾಯ ಆಗುವುದಕ್ಕೆ ಕಾರಣವಾಗಿದೆ. ಸರ್ಕಾರದವರು ಇನ್ನುಮುಂದಾದರೂ ಈ ರೀತಿಯಾಗದಹಾಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಪೋಲೀಸು ಇಲಾಖೆಯವರು ಲಾರಿಗಳ ವಿಚಾರದಲ್ಲಿ ಬೆಂಗಳೂರು ನಗರದಲ್ಲಿ ಬಹಳ ತೊಂದರೆಯನ್ನು ಕೊಡುತ್ತಿದ್ದಾರೆ. ಹೋದ ವರ್ಷ ಈ ವಿಚಾರವಾಗಿ ಬಹಳ ನೋವುಪಟ್ಟು ತೊಂದರೆ ಅನುಭವಿಸಿದ್ದನ್ನು ಹೇಳಿದ್ದೇನೆ. ಆದರೂ ಇದುವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಒಂದು ಲಾರಿಗೆ ಮೂರು ತಿಂಗಳಿಗೆ 750-800 ರೂಪಾಯಿ ಟ್ಯಾಕ್ಸನ್ನು ತೆಗೆದುಕೊಳ್ಳುತ್ತಾರೆ. ಇಷ್ಟು ಹಣವನ್ನು ಕೊಟ್ಟರೂ ಒಂದು ಸಲ ಬೆಂಗಳೂರು ನಗರದೊಳಗೆ ಲಾರಿಯಲ್ಲಿ ಸಾಮಾನುಗಳನ್ನು ತಂದು ಅದನ್ನು ಖಾಲಿಮಾಡಿ ಹೋಗಬೇಕಾದರೆ ಬಹಳ ತೊಂದರೆಪಡುತ್ತಿದ್ದಾರೆ. ಲಾರಿಯಲ್ಲಿ ಇರುವ ಫಸ್ಟ್‌ಏಡ್ ಬಾಕ್ಸ್‌ನಲ್ಲಿ ಯಾವುದಾದರೂ ಸಾಮಾನುಗಳು ಸ್ವಲ್ಪ ಕಡಮೆ ಇದ್ದರೆ ಬೆಳಗ್ಗಿನಿಂದ ಸಾಯಂಕಾಲದವರೆಗೂ ಲಾರಿಯನ್ನು ನಿಲ್ಲಿಸಿಬಿಡುತ್ತಾರೆ. ಒಂದು ದಿವಸಕ್ಕೆ ಸುಮಾರು 10 ರೂಪಾಯಿಗಳ ಟ್ಯಾಕ್ಸ್ ಕೊಡುವಾಗ ಹೀಗೆ ಮಾಡಿದರೆ ಲಾರಿ ಮಾಲೀಕನಿಗೆ ಎಷ್ಟು ತೊಂದರೆಯಾಗುತ್ತದೆ ? ಇಷ್ಟು ಅನ್ಯಾಯ ನಡೆದರೆ ಹೇಗೆ ? ಯಾವುದಾದರೂ ಸಾಮಾನುಗಳು ಕಡಮೆ ಇದ್ದರೆ ಈ ರೀತಿ ಮಾಡು ಎಂದು ಹೇಳಿ ಕಳಿಸಬೇಕಾದ್ದು ಧರ್ಮ. ಬೇಸಿಗೆಯ ಕಾಲದಲ್ಲಿ ಸಹ ವೈಪರ್ ಇಲ್ಲದೆ ಇದ್ದರೆ ಕೇಸು ಹಾಕುತ್ತಾರೆ. ಬಿಸಿಲು ಕಾಲದಲ್ಲಿ ವೈಪರ್ ಇದ್ದು ತಾನೇ ಏನು ಮಾಡಬೇಕು ? ಪೋಲೀಸ್ ಇಲಾಖೆಯಲ್ಲಿ ವಿಚಾರಣೆ ಮಾಡಿದರೆ ಇಂಥ ಕೇಸು ಎಷ್ಟು ಹಾಕಿದ್ದಾರೆ ಎಂದು ತಿಳಿಯುತ್ತದೆ. ಆ ರೀತಿ ಕೇಸುಗಳನ್ನು ಹಾಕಿಲ್ಲ ಎಂದರೆ ನಾನು ಜವಾಬು ಹೇಳುತ್ತೇನೆ. ಇಷ್ಟು ಅನ್ಯಾಯ ಮಾಡುವುದು ಬಹಳ ತಪ್ಪು; ಇಂಥವು ನಡೆಯದಹಾಗೆ ಸಂಬಂಧಪಟ್ಟ ಅಧಿಕಾರಿಗಳು ಸರಿಪಡಿಸಬೇಕು.

ನಮ್ಮ ತಾಲ್ಲೂಕಿನಲ್ಲಿ ಹರಿಜನರ ಗೃಹ ನಿರ್ಮಾಣ ಸಹಕಾರ ಸಂಘವನ್ನು ಮಾಡಲು ತಾಲ್ಲೂಕು ಬೋರ್ಡ್ ಆಫೀಸಿನಲ್ಲಿ ಷೇರು ಹಣವನ್ನು ವಸೂಲ್ಮಾಡಿದ್ದಾರೆ. ಎರಡು ವರ್ಷಗಳಿಂದ ಅದು ಹಾಗೆಯೇ ಇದೆ. ಯಾರೋ ಒಬ್ಬರು ಏನೋ ಒಂದು ಸಂಘವನ್ನು ಮಾಡಿದ್ದಾರೆಂದು ಈ ರೀತಿ ಅನ್ಯಾಯವಾಗುತ್ತದೆ. ನಮ್ಮ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನ ಕೊಟ್ಟು ನಮ್ಮ ತಾಲ್ಲೂಕಿಗೆ ಹರಿಜನರ ಗೃಹ ನಿರ್ಮಾಣ ಸಂಘವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ನೀರಾವರಿ ಬಾವಿಗಳ ವಿಚಾರವಾಗಿ ನಾನು ಹೋದಸಲ ಬಹಳ ವಿನಯದಿಂದ ಪ್ರಾರ್ಥಿಸಿದ್ದೆ. ವಿಮಾನ ಕಾರ್ಖಾನೆ ಮತ್ತು ಟೆಲಿಫೋನ್ ಕಾರ್ಖಾನೆಗಳವರು ಕುಡಿಯುವ ನೀರಿಗಾಗಿ ಅಲ್ಲಲ್ಲಿ ಏಳೆಂಟು ಬೋರ್‌ವೆಲ್ಸ್ ತೆಗೆದಿದ್ದಾರೆ. ಬೇಸಿಗೆಯಲ್ಲಿ ಆ ಭಾಗದ ಗ್ರಾಮದ ಜನರಿಗೆ ಕುಡಿಯುವುದಕ್ಕೆ ನೀರು ಸಿಕ್ಕದಹಾಗೆ ಆಗಿದೆ. ಸರ್ಕಾರದವರು ಈ ಸಲವಾದರೂ ಮನಸ್ಸು ಮಾಡಿ ಎರಡು-ಮೂರು ಬಾವಿಗಳನ್ನು ತೆಗೆಸಿ ನೀರಿನ ಸೌಕರ್ಯ ಮಾಡಿಕೊಡಬೇಕೆಂದು ಹೇಳುತ್ತೇನೆ.

ಸಣ್ಣ ನೀರಾವರಿಯ ವಿಚಾರ. ನಮ್ಮ ತಾಲ್ಲೂಕಿನಲ್ಲಿ ಸಣ್ಣ ನೀರಾವರಿಗೆ ಸಂಬಂಧಪಟ್ಟಂತೆ ಯಾವ ಕೆಲಸವನ್ನೂ ಇದುವರೆಗೂ ಮಾಡಿಲ್ಲ. ನಮ್ಮ ತಾಲ್ಲೂಕು ಏನು ಪಾಪ ಮಾಡಿದೆ ಎಂದು ಕೇಳುತ್ತೇನೆ. ನಮ್ಮ ಹಳ್ಳಿಗಳು ಬೆಂಗಳೂರು ನಗರದ ಹತ್ತಿರ ಇವೆ, ಅಲ್ಲಿನ ರಸ್ತೆಗಳಲ್ಲಿ ರಾತ್ರಿ ಕಾಲದಲ್ಲಿ ಓಡಾಡುವುದಕ್ಕಾಗುವುದಿಲ್ಲ, ಅಂಥ ರಸ್ತೆಗಳು. ಇವುಗಳನ್ನು ಮಂತ್ರಿಗಳು ಸರಿಪಡಿಸಲು ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

4-30 P.M.

ಪೌರಾಡಳಿತದ ವಿಚಾರದಲ್ಲಿರುವ ಕೆಲವು ಲೋಪದೋಷಗಳನ್ನು ಹೇಳಲಿಚ್ಛಿಸುತ್ತೇನೆ. ಬೆಂಗಳೂರಿಗೆ ಎಂಟು ಹತ್ತು ಮೈಲಿ ಸುತ್ತಮುತ್ತಿನ ಪ್ರದೇಶವನ್ನು ಸೇರಿಸಿ ಅಭಿವೃದ್ಧಿ ಮಾಡಲು

(ಶ್ರೀ ಟಿ. ಮುನಿಚಿನ್ನಪ್ಪ)

ಒಂದು ಯೋಜನೆಯನ್ನು ಮಾಡಿದ್ದಾರೆ. ಈ ಬೆಂಗಳೂರು ನಗರದಲ್ಲಿರುವವರಿಗೇ ಕುಡಿಯುವುದಕ್ಕೆ ಸಾಕಷ್ಟು ನೀರಿಲ್ಲ. ಈ ಹತ್ತು ಮೈಲಿಯ ಯೋಜನೆ ಮಾಡಿದಮೇಲೆ ಜನರಿಗೆ ಕುಡಿಯುವ ನೀರಿನ ಅನುಕೂಲವನ್ನು ಹೇಗೆ ಮಾಡುತ್ತಾರೆ ? ಅಲ್ಲದೆ ಇದರ ಸಂಬಂಧವಾಗಿ ಎಕರೆಗೆ ಎರಡು-ಎರಡೂವರೆ ಸಾವಿರ ರೂಪಾಯಿನಂತೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತಾರೆ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಹೆಚ್ಚಾಗಿ ಕೊಟ್ಟಿರಬಹುದು, ಆದರೆ ನಮ್ಮ ದಕ್ಷಿಣ ತಾಲ್ಲೂಕಿನಲ್ಲಿ ಹಾಗೆ ಕೊಟ್ಟಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಎಕರೆಗೆ ಎಂಟು ಹತ್ತು ಸಾವಿರದಂತೆ ಕೊಟ್ಟಿದ್ದಾರೆ.

ಶ್ರೀ ಟಿ. ಮುನಿಚಿನ್ನಪ್ಪ.—ನಮ್ಮ ತಾಲ್ಲೂಕಿನಲ್ಲಿ ಎರಡೂವರೆ ಸಾವಿರದಮೇಲೆ ಕೊಟ್ಟಿಲ್ಲ. ಈಚೆಗೆ ನಾಲ್ಕು ಸಾವಿರಕ್ಕೆ ಹೆಚ್ಚು ಮಾಡಿದ್ದಾರೆಂದು ಕೇಳಿದ್ದೇನೆ. ಟ್ರಸ್ಟ್‌ಬೋರ್ಡಿನವರು ಸೈಟು ಗಳನ್ನು ಮಾಡಿ ಮಾರಿ ಹೆಚ್ಚು ಹಣವನ್ನು ಸಂಪಾದನೆ ಮಾಡುವುದು ರೈತರಿಗೆ ಮಾತ್ರ ಎರಡು ಸಾವಿರದಂತೆ ಕೊಡುವುದು ನ್ಯಾಯವಲ್ಲ. ನಮ್ಮ ತಾಲ್ಲೂಕಿನಲ್ಲಿ ರೈತರ ಕಷ್ಟಸುಖಗಳನ್ನು ಕೇಳುವವರೇ ಇಲ್ಲ. ಟ್ರಸ್ಟ್‌ಬೋರ್ಡಿನಿಂದ ನಮ್ಮ ತಾಲ್ಲೂಕಿನ ರೈತರಿಗೆ ಏನೂ ಉಪಕಾರ ವಾಗುತ್ತಿಲ್ಲ. ಈ ರೀತಿ ಅನ್ಯಾಯವಾಗದಂತೆ ಮಾಡಬೇಕು. ರೈತರನ್ನು ಉದ್ಧಾರ ಮಾಡಬೇಕು. ಎಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಉತ್ತಮವಾದ ರೀತಿಯಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ದೇಶದಲ್ಲಿ ಆಗಬೇಕೆಂದು ಹೇಳು ತ್ತಾರೆ. ಆದರೆ ಒಂದು ಶಾಲೆಯ ಕಟ್ಟಡಕ್ಕೆ ಕೇವಲ ಒಂದು ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳುತ್ತಾರೆ. ಇಷ್ಟಾದರೂ ಹತ್ತು ರೂಪಾಯಿ ಕೂಡ ಕೊಡುವುದಿಲ್ಲ. ಇಷ್ಟು ಅನ್ಯಾಯವಾಗ ಬಾರದು. ಸ್ಕೂಲುಗಳನ್ನು ಕಟ್ಟಿಸಿದ್ದರೆ ಹತ್ತು ವರ್ಷಗಳಾದರೂ ಅವಕ್ಕೆ ಸುಣ್ಣಬಣ್ಣವಿಲ್ಲ. ಸರಕಾರದ ಹಣ ಈ ರೀತಿ ಹಾಳಾಗುತ್ತಿದೆ. ಈ ಬಗ್ಗೆ ನಾನೊಂದು ಪ್ರಶ್ನೆ ಕೇಳಿದ್ದೆ, ಅದಕ್ಕೆ ಇದುವರೆಗೂ ಉತ್ತರ ಬಂದಿಲ್ಲ. ಮುಂದಾದರೂ ಹೀಗೆ ಮಾಡಬಾರದು. ನನಗಿಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†Sri S. RAJAGOPAL (Kolar Gold Fields).—Mr. Speaker, Sir, to the Motion of Thanks to the Governor for this Address, on behalf of the parties we have moved amendments. As several members have congratulated our Governor on his Kannada speech in this Hon'ble House, I will also join them. While congratulating him on that, I want to place before the House one or two facts. The same members who congratulated the Governor because he spoke in Kannada are not in a position to name the State as Karnataka State. It is also their responsibility to see that the State is named as Karnataka State. I would, therefore request those Hon'ble Members to come forward as early as possible and see that the Mysore State is named as Karnataka State.

Also we should not forget one more thing, and that is there is no integration. One thing our Congress people should not forget is that the border issue is agitating the minds of not only the MES people but also of other people coming from other border areas. Not a single member of the Congress party is able to get elected from the border area. For instance, you take the Mangalore Area or the Kolar area or the Madras Area or the Marathi area. Most of the members are elected from the Opposition Party on the border issue alone. So, this is another problem which we have to take serious note of. We must see how best we can solve this border problem and have an integrated Kannada area.

The major problem facing this State is the rising prices. The Governor's Address has failed to say anything about the price increase. The Centre and the States have said and even our Chief Minister has said in the State Development Committee meeting that the middle man is responsible for the rise in prices. The Chief Minister admits it and even our Finance Minister has admitted it in one way or the other while presenting his budget, but the Governor has failed to mention it in his address. The State will come forward and say that it is not our responsibility and that the controlling of prices is the responsibility of the Central Government. The Central Home Minister Nandaji admits that whenever they give one rupee extra to a wage earner, the same night the prices go up and that they are not able to get the benefit of wage increase. Even one of the U. P. Ministers has said that if the traders go on increasing the prices, it will be natural for the poor to loot the shops. This happened recently in one of the villages in Bijapur where the angry customers looted nearly 500 bags of wheat and atta. The angry people looted the shops because foodgrains were not available at controlled prices and they were sold in the blackmarket at high prices. The prices of foodgrains have increased by 30 to 35 per cent and the people's anger has also increased correspondingly. Every man wants bread and no man can live without bread. This simple fact is known to everybody, but unfortunately our rulers, the congress people, do not seem to know this fact at all. The citizens of India have been expecting to get a square meal from the Congress Party. At Avadi they decided to have a socialistic pattern of society.

Socialism, according to me, means meeting the demands of the people for bread, clothing and shelter. Even in Bhubaneswar they gave the same stamp to this socialism. They are saying again and again that they will bring about socialism for the sake of the common man. With all this, the common man is not in a position to get his bread, clothing and shelter easily. For his needs of bread he has to go to the shop and he is not in a position to buy his bread because of its high price. This is the position

Recently the Vice-Chairman of the Planning Commission said that by 1980 he would be able to see that every family got a monthly income of Rs. 108 and he has asked the people to wait for another 16 years and he says that by 1980 he will be able to get the people a monthly income of Rs. 108 per family. We have already waited for 16 years after the achievement of freedom to get this answer to wait for another 16 years more to get a monthly family income of Rs 108. The Finance Minister at the Centre says that the upward trend of prices is going on and there is a pressure to push up prices. Who is exerting this upward pressure? Who is mightier, the common man or the market people in business? Who is mightier, the Government or the businessmen, whether the ruling party or the blackmarketeers? We have to decide who is really mightier in this country. The businessmen are the people who are exploiting the poor people by blackmarketing. How long are the poor citizens of India going to tolerate this and how long are they to wait?

(SRI S. RAJAGOPAL)

A day will come when, as one of the U. P. Ministers said, the citizens of India will assert their rights and demands and they will say that this is not the type of socialism we want from the Congress; this is not the socialism we expected from the Avadi Congress or the Bhubaneswar Congress. We want socialism which will give bread, clothing and shelter to the common man and which will assure a decent pay to the wage-earner. Are this Government going to give us all that? The Congress members will have to be a little vigilant in this matter.

Lastly, coming to land reforms, in the Bhubaneswar Congress most of the people said that they were not able to introduce land reforms in most of the States even though the Government of India gave instructions to the State Governments to see that land reforms were implemented immediately. Unfortunately, our Government here have not been able to implement it and our Revenue Minister has advanced several reasons. The Scheduled Castes people who are downtrodden have no lands and unless they are given lands your socialism has no meaning. You may give them many things, but unless and until you give them lands for cultivation, it is impossible to uplift the Scheduled Caste people in this country.

SRI G. V. GOWDA.—Where is the land available?

SRI S. RAJAGOPAL.—Whatever land is available, let it be divided between the Scheduled Caste people. Unless you give them lands, it is impossible to uplift the Scheduled Caste people in this country and in this State.

With these words I conclude my speech and thank the Chair for giving me this opportunity to speak.

†SRI D. PARAMESWARAPPA (Honnali).—Mr. Speaker, Sir, I think the Address delivered by the Governor is prosaic in style without any material. I, for one, believe that the Governor's Address is an annual statement of the policies of the Government and it is also a review of the achievements of Government. I believe that it should be critical in the sense that should point out the various shortcomings and guide the Government to rectify the shortcomings. That should be the aim of the Address. If we read the Address from this angle, it is devoid of all these things. It appears to me as though it is a catalogue of simple events on the part of the Government. At the very outset the Governor has called the attention of the members of this august House to the national crisis and the national emergency we are facing today. I must congratulate the Governor on having called our attention to this crisis. It is a beacon call to all the members of this House to be united against the enemy during this crisis.

Coming to the various aspects that he has dealt with in his address, I would confine my remarks to agriculture, industries and employment because these three problems which are very important in our life. Agriculture is very essential for the production of food. Industries are very

essential for the prosperity of the Nation. Employment also is very important. The Governor has said that in agriculture some progress has been made by Government because Government have formulated various schemes for the development of agriculture. He has also laid stress on irrigation. I would like to draw the attention of the House to the various schemes of irrigation. I find that we are talking only on theory and putting it into practice. If we analyse the various schemes undertaken by Government it will be seen that most of the irrigation works are at a standstill and there is no progress. Speaking about my constituency I have sent an interpellation this time about the inertia of the Public Works Department and their not taking up many of the budgeted works so far as irrigation is concerned. So, Sir, I would like to submit that if the Government is really very earnest in developing agriculture, it should see that there is no delay in completing the schemes that they declare before the Public or on the floor of this House. Therefore, I would like to draw the attention of the Public Works Minister or the concerned Minister to this point that whatever projects or schemes they have contemplated so far as irrigation is concerned, there should be least delay in completing those schemes, because they are also essential for increasing food production.

Then, Sir, it has been repeatedly urged by the Members on this side that concentration of industries in one place would really affect the economy of the country. In this connection, I would like to point out that various industries are concentrated in one place. We have been advocating the decentralisation of industries so that people in various parts of the State may get employment. In spite of it, the policy of the Government has been to locate industries in one place and concentrate them in one place. The Governor's Address has not made mention of the precise industrial policy of the Government and of decentralisation in order to secure employment to those people who are living in other parts of the State where industries are not yet located.

Sir, it is very surprising that in this Address it is very conspicuous, that there is no mention of corruption, nepotism and redtapism that are pervading the entire administration as well as in politics and social life. If we go to the Department of Co-operation it will be very evident that this sort of corruption prevails in co-operative societies rather than in any other Department. In most of the societies which are meant for assisting the poor raiyats and poor farmers by giving them timely help, we see today that poor people who desire assistance through the co-operative societies are not really getting the assistance. It is the middlemen that are benefited. It is the rich people that are benefited to day by the co-operative movement. Today to my surprise I have seen that most of these co-operative societies are headed by my friends who are of the same feathers as of the opposite side. Sir, in co-operative societies, honesty has become an exception and dishonesty is a general practice. Therefore, in order to make the co-operative movement successful, in order to make it help the poor people, I must say that these dishonest people should be removed from the co-operative movement and the co-operative movement should be

(SRI D. PARAMESWARAPPA)

placed in the hands of honest people. On the other hand, if the Government feels that it is very diffi ult to find out honest people in the country, let them take the responsibility of conducting co-operative societies through officials. I have no objection for that, but we must see that these dishonest people who are managing the co-operative societies should be removed immediate y and proper action should be taken against them. Again it is said that the Sugar Control Order has been enacted in order to see that sugar is distributed properly among the people. But Sir, I regret to say that after this Sugar Control Orders has come into force, it has increased dishonesty rather than honesty. Sir, I have observed so many societies selling sugar in black markets. They enter in the books various names and show that they have taken sugar. They distribute sugar in the name of so many people who do not take sugar at all and collect sugar and sell it in black market. That is what is happening today. If we want to see that sugar is distributed properly and equitably among people, we should see that the sugar control order should be done away with and some other arrangement should be made for the proper distribution of sugar. Then, Sir, with regard to the Education Department, all of us are of the opinoin that Education is most important for the successful working of democracy. After the introduction of compulsory scheme, we see that there are no school buildings in many of the places. I would like to ask one question how to educate the children without school buildings. Should they hold classes in the open air or in a protected building? Therefore it is essential in order to make compulsory education a success, every village which has no school building should be provided at least with a cheap designed building.

SRI B. D. JATTI.—Assuming that we get a rented building, we can provide the best teacher who is nicely trained.

SRI D. PARAMESWARAPPA.—Do not be always under the impression that you get always a rented building. It is your responsibility and not of the people to see that a school building is provided, at least of a cheap design.

SRI B. D. JATTI.—Both things can be thought of. If we can construct buildings at cheap cost, we can agree; if it is possible either for the Government or the villagers to have rented buildings, then importance of the teachers who are training and who can give better training should be considered.

SRI D. PARAMESWARAPPA.—You can do either of these two things. Let there be no delay and no time be wasted in correspondence.

MR. SPEAKER.—All avoidable delays will be avoided.

SRI D. PARAMESWARAPPA.—That is one aspect which I would like to stress and I conclude my speech.

† ಶ್ರೀ ಜಿ. ದೇವಯ್ಯ (ಮಂಡ್ಯ).—ಮೊದಲನೆಯದಾಗಿ ಲೋಕೋಪಯೋಗಿ ಮಂತ್ರಿಗಳು ನಾನು ಹೇಳತಕ್ಕ ವಿಷಯಕ್ಕೆ ಸ್ವಲ್ಪ ಗಮನಕೊಟ್ಟು ಕೇಳಬೇಕೆಂದು ನನ್ನ ಪ್ರಾರ್ಥನೆ. ಏಕೆಂದರೆ ಸರಕಾರದವರು ಅನೇಕ ಕೆಲಸಕಾರ್ಯಗಳನ್ನು ನೆರವೇರಿಸಿ ಇಂತಿಂತಹ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳುವುದು ಉಂಟು. ಆದರೆ ಅದೇ ರೀತಿ ಇಂತಿಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ ಎಂದು ಹೇಳಿರುವ ಕೆಲಸಗಳು ಕಾರ್ಯಗತ ವಾಗಿವೆಯೋ ಇಲ್ಲವೋ ಎಂಬ ಬಗ್ಗೆ ಸರಕಾರದವರು ಜವಾಬು ಕೊಟ್ಟು ರಾಜ್ಯಪಾಲರ ಭಾಷಣದ ಮೂಲಕ ತಿಳಿಸಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು ಎಂದು ಹೇಳುತ್ತೇನೆ.

5-00 P.M.

ಹಾರಂಗಿ ಮತ್ತು ಕಂಬದ ಕಡ ಈ ಎರಡರ ವಿಷಯದಲ್ಲಿ ಮಾತ್ರ ನಾನು ಸ್ವಲ್ಪ ಮಾತನಾಡುತ್ತೇನೆ. ಮಂಡ್ಯಕ್ಕೆ ನೀರು ಬರಬೇಕೆಂಬ ಉದ್ದೇಶದಿಂದ ಅಥವಾ ಯಾವ ಒಂದು ಗುಂಪಿಗೇ ಆಗಲಿ ಸೇರಿ ಮಾತನಾಡುವವನು ನಾನಲ್ಲ. ಕಾಂಗ್ರೆಸ್ ಸಂಸ್ಥೆಯಲ್ಲಿಯೇ ಎರಡು ಗುಂಪುಗಳಾಗಿವೆ. 180 ಅಡಿ ಕಟ್ಟಬೇಕು ಎನ್ನುವುದು ಒಂದು ಗುಂಪು, 120 ಅಡಿ ಕಟ್ಟಬೇಕು ಎನ್ನುವುದು ಇನ್ನೊಂದು ಗುಂಪು ಈ ರೀತಿ ಅವರವರಲ್ಲೇ ವಾದ ಇದೆ. ಸುಮಾರು ಎರಡು ವರ್ಷಗಳ ಹಿಂದೆ ಹಾರಂಗಿ ಕಂಬದ ಕಡ ಅಣೆಕಟ್ಟು ಕೂಡದು ಅವರಿಂದ ಕೃಷ್ಣರಾಜಸಾಗರಕ್ಕೆ ತೊಂದರೆಯಾಗುತ್ತದೆ ಎಂದು ನಾನು ಇದೇ ಸಭೆಯಲ್ಲಿ ಹೇಳಿದ್ದೇನೆ, ಅದನ್ನು ಅವರು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಏಕೆಂದರೆ ಈಗ ಮದರಾಸಿಗೆ ಎಷ್ಟು ನೀರು ಕೊಡಬೇಕು, 180 ಅಡಿ ಕಟ್ಟುವುದರಿಂದ ಎಷ್ಟು ನೀರು ನಿಲ್ಲುತ್ತದೆ, ನಮ್ಮ ಶಿವಸಮುದ್ರಕ್ಕೆ ಸಾಕಾಗುವಷ್ಟು ನೀರು, ಕೃಷ್ಣರಾಜಸಾಗರಕ್ಕೆ ಆಗುವಷ್ಟು ನೀರು ಸ್ಟಾಕ್ ಮಾಡುತ್ತಾರೆಯೇ? 120 ಅಡಿಯಿಂದ ಸ್ಟಾಕ್ ಮಾಡಿದರೆ ಎಷ್ಟು ನೀರು ನಿಲ್ಲುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಹಿಂದಿನಿಂದಲೂ ದಕ್ಷತೆಯಿಂದ ಕೆಲಸ ಮಾಡುವ ಇಂಜನಿಯರುಗಳು ನಮ್ಮ ಮೈಸೂರು ದೇಶದಲ್ಲಿ ಇದ್ದರು, ವಿಶ್ವೇಶ್ವರಯ್ಯನವರ ಕಾಲದಿಂದಲೂ ಕನ್ನಂಬಾಡಿ ಕಟ್ಟೆ ಕಟ್ಟಿದ ಕಾಲದಿಂದಲೂ ಹೆಸರುವಾಸಿಯಾದ ಇಂಜನಿಯರುಗಳು ಇದ್ದರು. ಈಗ ಐದಾರು ವರ್ಷಗಳ ಹಿಂದೆ ಒಬ್ಬ ಚೀಫ್ ಇಂಜನಿಯರು ಕಂಬದ ಕಡ ಹಾರಂಗಿ ಕಟ್ಟುವುದರಿಂದ ನೀರು ಸಾಲುವುದಿಲ್ಲ ಕೃಷ್ಣರಾಜ ಸಾಗರಕ್ಕೆ ತೊಂದರೆಯಾಗುತ್ತದೆ ಎಂದು ಎನ್ನತಕ್ಕ ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂದು ಕೇಳಿದ್ದೇನೆ. ಇದನ್ನೆಲ್ಲಾ ಸರಕಾರದವರು ಒಗ್ಗಟ್ಟಾಗಿ ಕೇಳಬೇಕು. ಓಟಿನ ಆಸೆಗೆ ಅವರಿವರ ಮಾತನ್ನು ಕೇಳಿಕೊಂಡು ಸಾಧ್ಯವಾಗದೇ ಇರತಕ್ಕ ಕೆಲಸ ಗಳನ್ನು ಮಾಡುವುದರಿಂದ ಮುಂದೆ ಅವರು ಜವಾಬ್ದಾರರಾಗುತ್ತಾರೆ ಎಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಏಕೆಂದರೆ ಇದು ಬಹಳ ಮುಖ್ಯವಾದ ವಿಷಯ. ಮಂಡ್ಯ ಷುಗರ್ ಫ್ಯಾಕ್ಟರಿಯಲ್ಲಿ ಎಷ್ಟು ಉತ್ಪನ್ನವಾಗುತ್ತದೆ, ಪಾಂಡವಪುರದಲ್ಲಿ ಎಷ್ಟು ಉತ್ಪನ್ನವಾಗುತ್ತದೆ, ಮತ್ತು ಇನ್ನೂ ಬೇರೆ ಕಡೆಗಳಲ್ಲಿ ನೀರಿನ ಅವಶ್ಯಕತೆ ಎಷ್ಟು ಇದೆ, ಬತ್ತದ ಸಾಗುವಳಿ ಎಷ್ಟು ನಡೆದಿದೆ ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ ನೋಡಬೇಕು. ಹಿಂದೆ ಒಂದು ವರ್ಷ ಕೃಷ್ಣರಾಜ ಸಾಗರದಲ್ಲಿ ನೀರು ಒಣಗಿ ಹೋಗಿ ಇಟ್ಟ ಬೆಳೆ ಎಲ್ಲಾ ಒಣಗಿ ಹೋಯಿತು ಲೆಕ್ಕ ಇದೆ. ಆ ರೀತಿ ಏನಾದರೂ ಆದರೆ ಸರಕಾರದವರಿಗೆ ಬರುವ ಆದಾಯವೆಲ್ಲಾ ಹೊರಟು ಹೋಗುತ್ತದೆ. ಇದನ್ನೆಲ್ಲಾ ಪರ್ಯಾಲೋಚನೆ ಮಾಡಬೇಕೆಂದು ಹೇಳುತ್ತೇನೆ. ಕಂಬದ ಕಡ ಮತ್ತು ಹಾರಂಗಿ ಅಣೆಕಟ್ಟನ್ನು ಕಟ್ಟಿದರೆ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ನಾಲಾ ಅಚ್ಚುಕಟ್ಟಿಗೆ ತೊಂದರೆಯಾಗುತ್ತದೆ. ಕೃಷ್ಣರಾಜ ನಗರ, ಶ್ರೀರಂಗಪಟ್ಟಣ, ನಂಜನಗೂಡು ಈ ಭಾಗಗಳಿಗೆಲ್ಲಾ ತೊಂದರೆಯಾಗುತ್ತದೆ ಇದನ್ನೆಲ್ಲಾ ಪರಿಶೀಲನೆಮಾಡಿ ಇನ್ನೊಬ್ಬರ ಮಾತಿಗೆ ಕಿವಿ ಕೊಡದೆ ತಮ್ಮ ಮುಂದಿನ ಜವಾಬ್ದಾರಿಯನ್ನು ಅರಿತುಕೊಂಡು ಮುಂದೆ ಏನಾದರೂ ಕೋರ್ಟಿಗೆ ಹೋದರೂ ನ್ಯಾಯ ದೊರಕುವ ರೀತಿಯಲ್ಲಿ ಬಹಳ ಜವಾಬ್ದಾರಿಯಿಂದ ತಮ್ಮ ಅಭಿಪ್ರಾಯವನ್ನು ಬರೆಯಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ನಮ್ಮ ಸರಕಾರದವರು ನೀರಾವರಿಗೆ ದುಡ್ಡು ಖರ್ಚು ಮಾಡುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ, ಅನೇಕ ಕಡೆ ಹಣ ಖರ್ಚು ಮಾಡುತ್ತಾ ಇದ್ದಾರೆ, ಸಣ್ಣ ನೀರಾವರಿಗೆ ಖರ್ಚು ಮಾಡುತ್ತಾ ಇದ್ದಾರೆ, ಪಂಪು ಸೆಟ್ಟುಗಳಿಗೆ ಖರ್ಚು ಮಾಡುತ್ತಾ ಇದ್ದಾರೆ. ಸುಮಾರು 7-8 ವರ್ಷಗಳಿಂದ ಎಷ್ಟು ಖರ್ಚು ಮಾಡಿದ್ದಾರೆ ಎಷ್ಟು ಎಕರೆ ನೀರಾವರಿಯಾಗಿದೆ, ಎಂಬುದನ್ನು ತಿಳಿದುಕೊಳ್ಳಲು ಒಂದು ಕಮಿಟಿಯನ್ನು ನೇಮಕ ಮಾಡಿ ಎಂದು ಅನೇಕ ಸಾರಿ ಹೇಳಿದ್ದೇನೆ. ಅದಕ್ಕೆ ಸರಕಾರದವರು ಸುಮ್ಮನೆ ದುಡ್ಡು ಖರ್ಚು ಮಾಡುತ್ತಾ ಇದ್ದೇವೆ ಎಂದು ಹೇಳುತ್ತಾ ಇದ್ದಾರೆಯೇ ಹೊರತು ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ನೀರಾವರಿ

(ಶ್ರೀ ಜಿ. ದೇವಯ್ಯ)

ಯಾಗತಕ್ಕ ಭಾಗದಲ್ಲಿ ಎಲ್ಲಿ ರಾಗಿ ಬೆಳೆಯುತ್ತಾರೆ, ಎಲ್ಲಿ ಬತ್ತ ಬೆಳೆಯುತ್ತಾರೆ ಎಂಬುದನ್ನು ನೋಡುವುದಕ್ಕೆ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರು ಯಾರೂ ಇಲ್ಲವೇ ಇಲ್ಲ ಎಂದು ಹೇಳುತ್ತೇನೆ. ದುಡ್ಡು ಪೋಲು ಆಗಿರುವ ವಿಷಯ ಸರಕಾರದವರ ಗಮನಕ್ಕೆ ಬಂದರೂ ಅದನ್ನು ಗಮನಿಸದೇ ನಾವು ಮೆಜಾರಿಟಿಯಲ್ಲಿ ಇದ್ದೇವೆ ಎಂದು ತಮಗೆ ಯಾವ ರೀತಿ ಬೇಕೋ ಆ ರೀತಿ ಮಾಡುತ್ತಾ ಇದ್ದೀರಿ. ಹತ್ತಿಯವರ ಸರಕಾರದಲ್ಲಿ ಕಂಬದ ಕಡ ಮತ್ತು ಹಾರಂಗಿ ವಿಚಾರವಲ್ಲ ಒಂದು ತೀರ್ಮಾನ ತೆಗೆದುಕೊಂಡರು ಆ ಸರಕಾರ ಹೋಯಿತು ಈ ಸರಕಾರ ಬಂತು ಈಗ ಬೇರೆ ಒಂದು ತರಹ ತೀರ್ಮಾನ ಮಾಡುತ್ತಾ ಇದ್ದೀರಿ, ಹೀಗಾದರೆ ನಮ್ಮಗಳ ಗತಿ ಏನಾಗಬೇಕು ಎಂಬುವನ್ನು ತಾವು ಯೋಚನೆ ಮಾಡಬೇಕು. ಮಂಡ್ಯ ಡಿಸ್ಟ್ರಿಕ್ಟ್ ಮತ್ತು ಇನ್ನೂ ಅನೇಕ ಕಡೆ ಕಾವೇರಿ ನದಿಯಿಂದ ಬರತಕ್ಕ ನೀರು ಬಿಡದೇ ಹೋದರೆ ಕೆಳಮಟ್ಟದಲ್ಲಿರತಕ್ಕವರು ಬದುಕುತ್ತಾರೆಯೋ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕು.

[MR. SPEAKER in the Chair.]

ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಈ ಕಾಂಗ್ರೆಸ್ ಸರಕಾರದವರು ಎಲ್ಲರೂ ಒಂದೇ ಸಮನಾಗಿ ಇರಬೇಕು, ಬಡವರು ಬಲ್ಲಿದರು ಎಂಬ ಭೇದ ಭಾವ ಇಲ್ಲದಂತೆ ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ ಎಂದು ಹೇಳಿದರು, ಅದನ್ನು ಕೇಳಿ ಬಹಳ ಸಂತೋಷವಾಯಿತು. ನಾನು ಈ ಶಾಸನ ಸಭೆಯಲ್ಲಿಯೂ ಹಿಂದಿನ ರೆಪ್ರಸಂಟೇಟೀವ್ ಅಸೆಂಬ್ಲಿಯಲ್ಲಿಯೂ ಬಹಳ ದಿವಸದಿಂದ ಇದ್ದವನಾದುದರಿಂದ ನನಗೆ ಒಂದು ವಿಷಯದಲ್ಲಿ ಸಂಶಯ ಬಂದಿದೆ ಅದೇನೆಂದರೆ, ಕಾಂಗ್ರೆಸ್ ಸಂಸ್ಥೆಯಲ್ಲಿರತಕ್ಕವರೆಲ್ಲಾ ಒಂದು ಗುಂಪು ಆದರೆ ಆ ಒಂದು ಗುಂಪಿನಲ್ಲಿರತಕ್ಕವರಲ್ಲೇ ಕೆಲವರಿಗೆ ಅಧಿಕಾರ ಸ್ಥಾನ ಸಿಕ್ಕುತ್ತದೆ. ಕೆಲವರಿಗೆ ಸಿಕ್ಕುವುದಿಲ್ಲ. ಹೀಗೆ ಅವರಲ್ಲೇ ಬಡವರು ಬಲ್ಲಿದರು ಎಂಬ ಭೇದ ಇರುವಾಗ ಎರಡು ಕೋಟಿ ಜನಸಂಖ್ಯೆ ಇರತಕ್ಕ ಈ ದೇಶದಲ್ಲಿ ಎಲ್ಲರೂ ಒಂದೇ ಸಮಾನವಾದ ಜೀವನ ನಡೆಸುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ ಎಂದು ಈ ಸಮಯದಲ್ಲಿ ಕೇಳುತ್ತೇನೆ. ಎಲ್ಲಿ ಹೋಗಲಿ ನೀವು ದಾಕ್ಷಿಣ್ಯಕ್ಕೆ ಒಳಗಾಗಿ ಎಲ್ಲಿಯವರೆಗೆ ಕೆಲಸ ಮಾಡುತ್ತೀರೋ ಅಲ್ಲಿಯವರೆಗೂ ಜನರಿಗೆ ಸುಖ ಸಿಕ್ಕುವುದಿಲ್ಲ. ಬೇಕಾದರೆ ಬನ್ನಿ ತೋರಿಸುತ್ತೇನೆ. ವಿಶ್ವೇಶ್ವರಯ್ಯ ನಾಲಾ ಕೆಳಗೆ ಯಾರ್ಯಾರಿಗೆ ಜಮೀನು ಸಿಕ್ಕಿದೆ, ಯಾರ್ಯಾರಿಗೆ ಕೊಟ್ಟಿದೀರಿ ಎಂಬುದನ್ನು.

ಪೋಲೀಸ್ ಇಲಾಖೆ ಬಹಳ ಮುಖ್ಯವಾದುದು. ನಮ್ಮ ಆತ್ಮರಕ್ಷಣೆ ಆ ಇಲಾಖೆಯ ಮೂಲಕ ಇವತ್ತಿನ ದಿವಸ ಆಗಬೇಕಾಗಿದೆ. ಯಾರಾದರೂ ಒಂದು ದೂರನ್ನು ಕೊಟ್ಟರೆ ಅದನ್ನು ಸುಮ್ಮನೆ ಒಂದು ಮೂಲೆಗೆ ತೂರಿಸುತ್ತಾರೆ. ಆದೇ ತಮಗೆ ಬೇಕಾದವರು ಯಾರಾದರೂ ದೂರು ಕೊಟ್ಟರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಈ ರೀತಿ ಮಾಡುತ್ತಾ ಹೋದರೆ ಬಡವರಿಗೆ ಅನಾನುಕೂಲವಾಗುತ್ತದೆ ಈ ರೀತಿ ಆಗದಂತೆ ಬಂದೋಬಸ್ತು ಮಾಡಿದರೆ ಅನುಕೂಲ ಇಲ್ಲದೇ ಇದ್ದರೆ ರಾಯಚೂರಿನಲ್ಲಿ ಆದ ಪರಿಸ್ಥಿತಿ ಬರುತ್ತದೆ ಎಂದು ನಾನು ಈ ಸಮಯದಲ್ಲಿ ಹೇಳಬೇಕಾಗುತ್ತದೆ.

ನಮ್ಮನ್ನು ಕೇಳುವವರೇ ಇಲ್ಲ, ಕಾಪಾಡಬೇಕಾದ ಕಾಲ ಬಂದಿದೆ, ಅಧ್ಯಕ್ಷರು ಕಾಪಾಡಬೇಕು.

ಕೈಗಾರಿಕೆ. ಸಕ್ಕರೆ ಕಾರ್ಖಾನೆಗೆ ಸಂಬಧಪಟ್ಟಂತೆ ಟನ್ನಿಗೆ 6 ರೂಪಾಯಿಗಳಂತೆ ಒಂದು ಸೆಸ್ಸನ್ನು ಹಾಕುತ್ತಾರೆ. ಅದರಿಂದ ವರ್ಷಕ್ಕೆ 22 ಲಕ್ಷ ರೂಪಾಯಿಗಳು ಬರಬಹುದು. ಅದನ್ನು ಯಾವ ಬಾಬಿಗೆ ಖರ್ಚು ಮಾಡುತ್ತಾರೆಂಬುದನ್ನು ಹೇಳಬೇಕು. ಮೊದಲು ಅದನ್ನು ವಿದ್ಯಾಭ್ಯಾಸ, ರಸ್ತೆ, ಆಸ್ಪತ್ರೆ ಮುಂತಾದುವುಗಳಿಗಾಗಿ ಖರ್ಚು ಮಾಡುವುದಾಗಿ ಹೇಳುತ್ತಿದ್ದರು. ಆದರೆ ಯಾವ ಬಾಬುಗಳಿಗೂ ಖರ್ಚು ಮಾಡುತ್ತಿಲ್ಲ; ರೆವೆನ್ಯೂ ಬಾಬಿಗೆ ತೆಗೆದುಕೊಳ್ಳುತ್ತಿದ್ದಾರೆ. ಸುಮಾರು 1932 ರಲ್ಲಿ ವಿಶ್ವೇಶ್ವರಯ್ಯ ನಾಲೆ ಬಂತು. ಆ ಲಾಗಾಯ್ತು ವಾಟರ್‌ರೇಟ್ ಮತ್ತು ರೆವೆನ್ಯೂ ಕಂದಾಯ ಒಂದು ರೂಪಾಯಿ ಕೊಡುತ್ತಿದ್ದೇವೆ; ರೆವೆನ್ಯೂ ಕಂದಾಯ ವಜಾ ಮಾಡಬೇಕು, ವಾಟರ್ ರೇಟ್ ಮತ್ತು ಕಾಂಟ್ರಿಬ್ಯೂಷನ್ ಮಾತ್ರ ತೆಗೆದುಕೊಳ್ಳಬೇಕು ಎಂದು ಬಹಳ ದಿವಸಗಳಿಂದ ಕೇಳುತ್ತಿದರೂ ಇಲ್ಲಿಯವರೆಗೂ ವಜಾ ಮಾಡಿಲ್ಲ. ಇದನ್ನು ಪರಿಶೀಲಿಸಿ ಮನ್ನಾ ಮಾಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನಾನು ನನ್ನ ಮಾತನ್ನು ನಿಲ್ಲಿಸುತ್ತೇನೆ.

Mr. SPEAKER.—I think Sri Anna Rao will be able to finish his speech within 10 or 15 minutes. I cannot give him more time than that.

Sri ANNA RAO GANAMUKHI (Afzalpur).—Please give me 20 minutes at least.

Mr. SPEAKER.—It is not possible because there are so many others who want to speak.

Sri ANNA RAO GANAMUKHI.—Then I don't want to speak.

Mr. SPEAKER.—Then he can speak at the time of Budget discussion. The Hon. member must have informed me much earlier if he wanted more time.

Sri ANNA RAO GANAMUKHI.—Those who spoke in the beginning got more time.

Mr. SPEAKER.—I am sorry. The member is having a wrong impression. He has been observing the Debate.

Sri ANNA RAO GANAMUKHI.—I am not going to speak at all.

Mr. SPEAKER.—That does not matter. If he thinks that I am goiving more time to others, it is wrong. He has been seeing that I am not giving more time. I have been giving just 10 or 15 minutes only to each speaker.

Sri ANNA RAO GANAMUKHI.—Then I cannot cover all the subjects. I am sorry.

Mr. SPEAKER.—It is all right. When the whip sends me the names, there must be some agreement about all this. Now Sri G. Rame Gowda will speak.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಯವರೆ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ಅದು ನಮ್ಮಲ್ಲಿ ಯಾವ ಸ್ಫೂರ್ತಿಯನ್ನೂ ಉಂಟುಮಾಡಿಲ್ಲ, ಜನತೆಯಲ್ಲಿ ಯಾವ ಪರಿಣಾಮವನ್ನೂ ಉಂಟುಮಾಡಿಲ್ಲ ಎಂದು ನಾನು ಭಾವಿಸುತ್ತೇನೆ.

ವ್ಯವಸಾಯದ ವಿಷಯದಲ್ಲಿ ಬಹಳ ಸಂತುಷ್ಟಿಯಾಗಿದೆ, ಪಂಚಾಯಿತಿಗಳು, ಅಭಿವೃದ್ಧಿಮಂಡಲಿಗಳು, ಮತ್ತು ರೈತವರ್ಗದಲ್ಲಿ ಹೆಚ್ಚು ಸಂಪರ್ಕ ಬೆಳೆಯಲು, ಅಭಿವೃದ್ಧಿಕ್ರಮಗಳಿಗೆ ಅವಕಾಶವಾಗಲು ಪ್ರಯತ್ನಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ನನ್ನ ಅನುಭವದಲ್ಲಿ ಹೇಳುವುದಾದರೆ ಅದು ಸತ್ಯಕ್ಕೆ ದೂರವಾದ ಮಾತು. ಪಂಚಾಯಿತಿಗಳಲ್ಲಿ ಮಾಡಿರುವ ಯೋಜನೆ ಕಾಗದದ ರೂಪದಲ್ಲಿಯೇ ಹೊರತು ಕಾರ್ಯರೂಪಕ್ಕೆ ಬಂದಿಲ್ಲ. ಇದನ್ನು ಮಂತ್ರಿಗಳಾದವರು ಪ್ರತ್ಯಕ್ಷವಾಗಿ ನೋಡಬೇಕು, ನೋಡಿದರೆ ಅದರ ವಿಷಯ ಗೊತ್ತಾಗುವುದು. ಮಂತ್ರಿಗಳು ತಾಲ್ಲೂಕುಗಳಿಗೆ ಭೇಟಿ ಕೊಟ್ಟಾಗ ಪ್ರವಾಸಿಮಂದಿರಗಳಿಗೆ ಹೋಗದೆ ಪಂಚಾಯಿತಿ ಆಫೀಸುಗಳಿಗೆ ಹೋದರೆ ವಿಚಾರ ಗೊತ್ತಾಗುತ್ತದೆ. ಪ್ರವಾಸಿಮಂದಿರಗಳಿಗೆ ಹೋಗಿ ಮುಖಂಡರನ್ನು ಕರೆಸಿ ವಿಷಯ ಚರ್ಚೆಮಾಡಿದರೆ ಖಂಡಿತ ಸರಿಯಾದ ವಿಷಯ ಗೊತ್ತಾಗುವುದಿಲ್ಲ. ಪಂಚಾಯಿತಿಗಳಿಗೆ ಹೋಗಿ ಅಲ್ಲಿನ ಜನರನ್ನು ಕಂಡರೆ ಪಂಚಾಯಿತಿ ದರ್ಜೆಯಲ್ಲಿ ಎಷ್ಟು ಅಭಿವೃದ್ಧಿಯಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ಪಂಚಾಯ್ತಿಗಳ ಮೇಲೆ ಭಾರ ಹಾಕಿದರೆ ಹಾಗೆಯೇ ಮುಂದುವರಿಸಿದರೆ ಖಂಡಿತವಾಗಿಯೂ ಆಹಾರದ ಉತ್ಪನ್ನ ಅಧಿಕವಾಗುವುದಿಲ್ಲ. ಆದರಿಂದ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುತ್ತದೆ; ನಮ್ಮ ಯೋಜನೆ ಕೂಡ ಸಫಲವಾಗುವುದಿಲ್ಲ ಎಂದು ನಾನು ಅನುಭವದಿಂದ ಹೇಳುತ್ತಿದ್ದೇನೆ. ಈಗ ವ್ಯವಸಾಯದ ಉತ್ಪತ್ತಿಗಾಗಿ ನೀರಾವರಿ ಬಾವಿಗಳನ್ನು ತೆಗೆಯುವುದಕ್ಕೆ, ಕಟ್ಟೆ ಕೆರೆಗಳ ರಿಪೇರಿವಗ್ಗೈರೆಗೆಲ್ಲಾ ಅವಕಾಶಮಾಡಿ ಬಹಳಮಟ್ಟಿಗೆ ನೀರಾವರಿಗೆ ಅನುಕೂಲ ಮಾಡಿರುವುದಾಗಿ ಪ್ರಸ್ತಾಪಿಸಿದ್ದಾರೆ. ಅದರೆ ಹಿಂದಿನವರು ಕಟ್ಟಿರುವ ಹಳೆಯ ಕೆರೆಗಳು ಹೂಳಿನಿಂದ ತುಂಬಿ ನೀರು ಸಾಕಷ್ಟು ನಿಲ್ಲದಂತಿರುವ

(ಶ್ರೀ ಜಿ. ರಾಮೇಗೌಡ)

ವಿಷಯದಲ್ಲೇನು ಮಾಡಿದ್ದೀರಿ ? ಕಳೆದ 10-15 ವರ್ಷಗಳಲ್ಲಿ ಹೊಸ ಕೆರೆಗಳನ್ನು ಮಾಡಿ ನೀರಾವರಿ ಅನುಕೂಲಗಳನ್ನು ಕಲ್ಪಿಸುತ್ತಿದ್ದೇವೆಂದು ಹೇಳುವಾಗ ಹಳೆಯ ಕೆರೆಗಳು ಹೂಳಿನಿಂದ ತುಂಬಿ ಪ್ರಯೋಜನಕ್ಕೆ ಬಾರದಂತಾಗುತ್ತಿವೆ. ಆ ಕಡೆ ನಮ್ಮ ಸರ್ಕಾರದ ಗಮನ ಅಷ್ಟಾಗಿ ಬಿದ್ದಿಲ್ಲ. ಅದುದರಿಂದ ಕೆಲವು ರೈತರಿಗೆ ಯಾವ ಅನುಕೂಲವೂ ಅಗುತ್ತಿಲ್ಲ, ನೀರಾವರಿ ಅಭಿವೃದ್ಧಿಯಾಗುತ್ತಿದ್ದರೂ ಕೂಡ ಅನೇಕ ಗ್ರಾಮಗಳವರಿಗೆ ಕಷ್ಟವಿರುವುದರಿಂದ ಅದರ ಫಲ ಅವರಿಗೆ ಅಷ್ಟಾಗಿ ಸಿಕ್ಕುತ್ತಿಲ್ಲ. ಇದನ್ನು ವಿಷಾದದಿಂದ ತಿಳಿಸಬೇಕಾಗಿದೆ. ವ್ಯವಸಾಯದ ಉತ್ಪನ್ನ ಅಧಿಕವಾಗಿದೆ, ಬೆಲೆ ಏರುತ್ತಿಲ್ಲ ಎಂಬುದು ಕೆಲವರ ಅಭಿಪ್ರಾಯವಾದರೆ ಇನ್ನು ಕೆಲವರ ಅನುಭವ ಬೇರೆ ರೀತಿ ಇದೆ. ವ್ಯವಸಾಯದ ಉತ್ಪನ್ನಕ್ಕೆ ಸರಿಯಾದ ಬೆಲೆ ನಿಕ್ಕಿಜೆ ಇರುವುದರಿಂದ ಬೆಳೆ ಚೆನ್ನಾಗಿ ಆದರೂ ಆದರ ಪ್ರತಿಫಲ ಬೆಳೆದವನಿಗೆ ಸಾಕಷ್ಟು ದೊರೆಯುತ್ತಿಲ್ಲ. ವ್ಯವಸಾಯಗಾರನಿಗೆ ತಾನು ಬೆಳೆದುದಕ್ಕೆ ಸರಿಯಾದ ಬೆಲೆ ದೊರೆಯಲು ಏನು ಮಾಡಿದೆ, ಆ ಕಡೆ ಗಮನ ಕೊಡಲಾಗಿದೆಯೋ ಎಂಬ ವಿಚಾರ ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿಲ್ಲ ಬಹುಶಃ ಸರ್ಕಾರಕ್ಕೆ ಸರಿಯಾದ ವಿವರ ಗೊತ್ತಿಲ್ಲ. ಈ ದಿವಸ ಒಂದು ಕ್ವಿಂಟಾಲ್‌ರಾಗಿ ಬೆಳೆದರೆ ಅದಕ್ಕೆ ಖರ್ಚಾಗುವುದೇನು ಎಂಬುದನ್ನು ಸರ್ಕಾರ ಗಮನಿಸಿಲ್ಲ. ಸೇಕಡ 85 ಮಂದಿ ವ್ಯವಸಾಯದಿಂದ ಜೀವನಮಾಡಿಕೊಂಡು ಬೆಳೆದು ತಂದು ಪಟ್ಟಣಗಳಲ್ಲಿರುವವರಿಗೆ ಹಂಚುವಾಗ ಅವರ ಕಷ್ಟಸುಖವೇನು, ಯಾವ ರೀತಿ ಅವರು ಜೀವನಮಾಡುತ್ತಿದ್ದಾರೆ ಎಂಬುದನ್ನು ಸರ್ಕಾರ ಗಮನಿಸಿಲ್ಲ. ರೈತರ ಮಕ್ಕಳೇ ಆಹಾರ, ಕಂದಾಯ ಮತ್ತು ಇತರ ಖಾತೆಗಳಲ್ಲಿ ಮಂತ್ರಿಗಳಾಗಿರುವುದರಿಂದ ವ್ಯವಸಾಯಕ್ಕೆ ಹೆಚ್ಚು ಗಮನಕೊಡುತ್ತಾರೆಂದು ಮತ್ತು ರೈತರಿಗೆ ಅವರ ಕಾರ್ಯದಲ್ಲಿ ಕಷ್ಟವಾಗದಂತೆ ನೋಡಿಕೊಳ್ಳುತ್ತಾರೆಂದು ನಮಗೆ ಕಾಣುವುದು. ಆದರೆ ಆ ರೀತಿ ಮೊದಲಿದ್ದ ಆಶೆ ನಿರಾಶೆಯಾಗಿದೆ. ಬೆಂಗಳೂರು ಜಿಲ್ಲೆಯಲ್ಲಿ ಒಂದು ಎಕರೆ ರಾಗಿ ಬೆಳೆಯಬೇಕಾದರೆ 434 ರೂಪಾಯಿಗಳು ಖರ್ಚಾಗುತ್ತವೆಂದು ರೆವೆನ್ಯೂ ಮಂತ್ರಿಗಳೇ ಹೇಳಿದ್ದಾರೆ. ಆ ಜಿಲ್ಲೆಯಲ್ಲಿ ಒಂದು ಎಕರೆಗೆ 4 ಅಥವಾ 5 ಪಲ್ಲಗಳಿಗೆ ಹೆಚ್ಚಾಗಿ ಯಾರೂ ಬೆಳೆಯುವುದಿಲ್ಲ. ಹಾಗಿರುವಾಗ ಒಂದು ಪಲ್ಲಕ್ಕೆ ರಾಗಿಗೆ 80 ರೂಪಾಯಿ ಬೆಲೆಯಾಗುವಾಗ 30-35 ರೂಪಾಯಿ ಸಿಕ್ಕುತ್ತಿದೆ; ನೂರು ರೂಪಾಯಿ ಖರ್ಚುಮಾಡಿದರೆ 50 ರೂಪಾಯಿ ಸಿಕ್ಕುವಾಗ ರೈತರಿಗೆಷ್ಟು ನಷ್ಟ ಎಂಬುದನ್ನು ಗಮನಿಸಬೇಕು. ಸರಕಾರ ಎಷ್ಟೇ ಉಪಕಾರ ಮಾಡಿದರೂ ರೈತರಿಗೆಷ್ಟು ನಷ್ಟ ಎಂಬುದನ್ನು ಗಮನಿಸಬೇಕು. ಸರ್ಕಾರ ಎಷ್ಟೇ ಉಪಕಾರ ಮಾಡಿದರೂ ರೈತರಿಗೆ ಖರ್ಚಿನಲ್ಲಿ ಸೇಕಡ 50 ಭಾಗ ಮಾತ್ರ ಬರುತ್ತಿರುವುದರಿಂದ 20 ವರ್ಷಗಳಾದರೂ ಅವರ ಬಡತನ ನೀಗುತ್ತಿಲ್ಲ. ಅದುದರಿಂದ ಅವರ ಖರ್ಚಾದರೂ ಹುಟ್ಟುವಹಾಗೆ ದರ ನಿಗದಿಮಾಡಿಕೊಟ್ಟು ಅವನಿಗೆ ಬಾಧಕವಾಗದಂತೆ ಮಾಡಬೇಕು. ಸಹಕಾರ ಇಲಾಖೆಯಿಂದಲೇನೋ ಕೋಟಿಗಟ್ಟಲೆ ಸಾಲಕೊಡುತ್ತಿದ್ದೀರಿ, ಬೆಂಗಳೂರು ಜಿಲ್ಲೆಗೆ ಸುಮಾರು 56 ಲಕ್ಷ ಕೊಟ್ಟಿದ್ದೀರಿ; ಅದರೆ ಅದರಲ್ಲಿ 28 ಲಕ್ಷ ವಾಪಸುಕೊಡಬಹುದು, ಕಾರಣ ಹೆಚ್ಚು ಬೆಳೆಯಬೇಕೆಂದು ಖರ್ಚು ಮಾಡಿದಮೇಲೆ ಸರಿಯಾದ ಬೆಳೆಯಾಗದಿದ್ದರೆ, ಬೆಲೆ ಸರಿಯಾಗಿ ದೊರೆಯದಿದ್ದರೆ ಸಾಲ ತೀರಿಸುವುದಕ್ಕಾಗುವುದಿಲ್ಲ. ಇನ್ನು 10 ವರ್ಷಗಳಲ್ಲಿ ರೈತರ ಜಮೀನೆಲ್ಲಾ ಸಹಕಾರ ಸಂಘಗಳಿಗೆ ಸೇರುತ್ತವೆ. ಆಗ ರೈತರಿಗೆ ಭೂಮಿಯೇ ಇರುವುದಿಲ್ಲ. ಇದು ನನ್ನ ಅನುಭವದ ಮಾತು.

ಆಮೇಲೆ ಎಲ್ಲೆಲ್ಲೂ ಸಹಕಾರ ಬೇಸಾಯ ಎಂದು ಏರ್ಪಾಡು ಮಾಡಿಕೊಂಡು ನೂರು ರೂಪಾಯಿ ಖರ್ಚು ಮಾಡಿದರೆ ಅದರಿಂದ ಬರುವ ಉತ್ಪನ್ನದಲ್ಲಿ 30 ರೂಪಾಯಿ ನಷ್ಟಬಂದರೆ ಸಹಕಾರ ತತ್ವ ಏನು ಬಂತು ? ವರ್ಷ ವರ್ಷವೂ ಖರ್ಚು ಮಾಡಿ, ಖರ್ಚು ಮಾಡಿದ ಹಣದ ಅರ್ಧದಷ್ಟು ಉತ್ಪನ್ನ ಮಾಡುವ ಬೆಳೆಗಳಿಂದ ಬೆಲೆ ಬಾರದೇ ಹೋದರೆ ಸಹಕಾರ ಸಂಸ್ಥೆಗಳು ಬೆಳೆಯಲು ಸಾಧ್ಯವಿಲ್ಲ. ಉತ್ಪತ್ತಿ ಜಾಸ್ತಿಯಾದರೂ ಬೆಲೆ ಕಡಮೆಯಾದರೆ ಬೆಳೆಯುವ ರೈತನಿಗೇನೂ ಫಲ ಸಿಗುವುದಿಲ್ಲ. ಬೆಳೆಯುವವರಿಗಿಂತ ವ್ಯಾಪಾರ ಮಾಡುವ ಮಧ್ಯವರ್ತಿಗಳಿಗೆ ಅನುಕೂಲವಾಗಿದೆ. ಈಗ ರೂಪಾಯಿಗೆ ಒಂದು ಸೇರು ಅಕ್ಕಿ ಕೂಡ ದೊರೆಯುವುದು ಕಷ್ಟ. ಮಧ್ಯವರ್ತಿಗಳಾಗಿರುವವರು ಬೆಲೆಗಳನ್ನೇರಿಸಿ ಮಾರಾಟ ಮಾಡಿ ಲಾಭ ಪಡೆಯುತ್ತಾರೆ. ಗ್ರಾಹಕರ ಸಂಘಗಳಾದರೂ ವ್ಯಾಪಾರಸ್ಥರಲ್ಲೇ ಹೋಗಿ ದವಸಗಳನ್ನು ತರಬೇಕು. ಆದರೆ ದೇಶದ ಜನಕ್ಕಾಗಿ ಅನುಕೂಲ ಮಾಡಿ ನೂರಾರು ಸೊಸೈಟಿಗಳನ್ನು ಸ್ಥಾಪನೆ ಮಾಡಿದ್ದೇವೆಂದು ಹೇಳಿದರೂ ನೇರವಾಗಿ ರೈತರಲ್ಲೇ ಹೋಗಿ ಯಾವ ಸಹಕಾರ ಸಂಸ್ಥೆಗಳವರೂ ದವಸಗಳನ್ನು ಕೊಂಡುಕೊಳ್ಳುತ್ತಿಲ್ಲ. ರೈತನಿಂದ ಬರುವ ಧಾನ್ಯಗಳನ್ನೆಲ್ಲಾ ಮಧ್ಯದಲ್ಲಿರುವ ವರ್ತಕರು ಕೊಂಡು ಮಾರ್ಕೆಟ್ಟಿನಲ್ಲಿ ಮಾರಿಕೊಂಡು ಧಾರಣೆಗಳನ್ನು ಏರಿಸಿ ಲಾಭದಾಯಕವಾಗಿ ಜೀವನ ಮಾಡುತ್ತಿದ್ದಾರೇ ಹೊರತು ಬೆಳೆದ ರೈತನಿಗೆ ದವಸದ ಬೆಲೆ ಏನೂ ಸಿಕ್ಕುತ್ತಿಲ್ಲ ಎಂದು ನಾನು ಇಲ್ಲಿ ಹೇಳಬೇಕಾಗಿದೆ. ರೈತರೇ ನೇರವಾಗಿ ಸಹಕಾರ ಸಂಸ್ಥೆಗಳಿಗೆ ದವಸ

ಗಳನ್ನು ತಂದುಕೊಡುವಂತಾದರೆ ಆಗ ರೈತನಿಗೆ ಸ್ವಲ್ಪವಾದರೂ ಸಹಾಯವಾಗುತ್ತದೆ. ಈಗೇನೋ ಸಹಕಾರ ಸಂಘಗಳಿಗಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಕೊಡುತ್ತಿದ್ದಾರೆ. ಈ ಸಹಕಾರ ಸಂಘಗಳಲ್ಲಿ ಕೆಲಸ ಮಾಡುವ ಕೆಲವರಿಗೆ ಅವರ ಹೆಸರೂ ಉಳಿಯುತ್ತದೋ ಇಲ್ಲವೋ ಎನ್ನುವ ಸಂಶಯ ಬರುವಂತೆ ತೋರುತ್ತದೆ. ಇದರಲ್ಲಿ ಎಷ್ಟೋ ನ್ಯೂನತೆಗಳಿರುತ್ತವೆ. ಕೆಲವು ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡಿ ಲಾಭವನ್ನು ಪಡೆಯುತ್ತಿವೆ. ಕೆಲವು ನಷ್ಟ ಪಡುತ್ತಿವೆ, ಕೆಲವು ಸಂಸ್ಥೆಗಳು ಕಾನೂನಿಗೆ ವಿರೋಧವಾಗಿ ಷೆಡ್ಯೂಲು ಬ್ಯಾಂಕುಗಳಲ್ಲಿ ಡಿಪಾಜಿಟ್‌ಗಳನ್ನು ಇಟ್ಟು ಲಾಭದಾಯಕವಾಗಿ ವ್ಯವಹಾರ ಮಾಡುತ್ತಿವೆ. ಸಹಕಾರ ಪದ್ಧತಿಯಂತೆ ಸಹಕರಿಸಿ ಕೆಲಸ ಮಾಡುತ್ತಿಲ್ಲ. ಸಹಕಾರ ಸಂಸ್ಥೆಗಳಲ್ಲಿರುವವರೇ ತಮಗೆ ಲಾಭ ಬರುತ್ತದೆಂದು, ಸಹಕಾರತತ್ವವನ್ನು ಬಿಟ್ಟು ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಲು ಷೆಡ್ಯೂಲ್ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸುತ್ತಿದ್ದಾರೆ. ಹೀಗೆ ಕಾನೂನಿಗೆ ವಿರೋಧವಾಗಿ ಕೆಲಸ ಮಾಡುವ ಸಂಸ್ಥೆಗಳಿಗೆ ಸರಕಾರ ತಕ್ಕ ಶಿಕ್ಷೆ ಮಾಡದೇ ಹೋದರೆ ಸಹಕಾರ ಸಂಸ್ಥೆಗಳು ನಾಶವಾಗಿ ಹೋಗುತ್ತವೆ. ಇದನ್ನು ಈಗಲಾದರೂ ಸರಕಾರ ಗಮನಿಸಬೇಕು. ಇನ್ನೂ ಕೆಲವು ಸಂಘ ಸಂಸ್ಥೆಗಳಿವೆ. ನಿಮ್ಮ ದೊಡ್ಡಬಳ್ಳಾಪುರದಲ್ಲಿ ಒಂದು ಸಹಕಾರಿ ಸ್ಪಿನಿಂಗ್‌ಮಿಲ್ ಮಾಡಬೇಕೆಂದು ಈಚೆಗೆ ಸರಕಾರದವರು ಲೈಸೆನ್ಸ್‌ನ್ನು ಕೊಟ್ಟಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಕೊಟ್ಟರು ? ಕೇಂದ್ರ ಸರಕಾರಕ್ಕೆ ಸಲಹೆ ಕೊಟ್ಟು ಕೊಯಮತ್ತೂರಿನ ಒಬ್ಬ ವರ್ತಕರಿಗೆ ಒಂದುಲಕ್ಷದ ಐವತ್ತುಸಾವಿರ ರೂಪಾಯಿಗಳ ಪಗಡಿ ಪಡೆದು ಮಾರಿದ್ದಾರೆಂದು ತಿಳಿದಿದೆ. ಇದು ಲಂಚವೋ ಪಗಡಿಯೋ ಇಲ್ಲವೇ ಕೇಂದ್ರಸರಕಾರಕ್ಕೆ ಆದಾಯವೊ ಏನು ಹೇಳುವುದಕ್ಕೆ ಗೊತ್ತಿಲ್ಲ. ಇದನ್ನೇ ಇಲ್ಲಿ ಪ್ರಾರಂಭ ಮಾಡಲು ಬೇರೆ ಯಾರೂ ಇರಲಿಲ್ಲವೇ ಆದರೆ ಅದನ್ನು ಈಗ ಜಾಯಿಂಟು ಸ್ಟಾಕ್ ಕಂಪನಿಯ ಮಾದರಿಯಲ್ಲಿ ನಡೆಸಬೇಕೆಂದು ಸರಕಾರ ಲೈಸನ್ಸ್ ಕೊಡಲು ಯಾರು ಕಾರಣರು? ಯಾವ ಒಂದು ತತ್ವದ ಮೇಲೆ ಇದನ್ನು ಜಾಯಿಂಟು ಸ್ಟಾಕ್ ಕಂಪನಿಗೆ ವರ್ಗ ಮಾಡಿದರು ? ಈ ತತ್ವವನ್ನು ಸರಕಾರದ ಪಾರ್ಟಿಯವರೇನಾದರೂ ಒಪ್ಪಿ ಮಾಡುತ್ತಿದ್ದಾರೆಯೇ ? ಎನ್ನುವುದನ್ನು ಇಲ್ಲಿ ಕೇಳುತ್ತಿದ್ದೇನೆ. ಮಂತ್ರಿಗಳು ಉತ್ತರ ಕೊಡುವಾಗ ಇದರ ವಿವರಗಳನ್ನು ತಿಳಿಸಲು ಅಪೇಕ್ಷಿಸುತ್ತೇನೆ. ಸಹಕಾರ ಸಂಸ್ಥೆಗಳೆಂದು ಮಾಡಿ ಸೆಂಟ್ರಲ್ ಗವರ್ನಮೆಂಟಿನವರೂ ನೀವೂ ಸೇರಿ ಶಕ್ತಿ ಒಂದುಗೂಡಿಸಿ ಅಭಿವೃದ್ಧಿ ಮಾಡುತ್ತಿದ್ದಾರೆಂದು ನನಗನಿಸುತ್ತಿದೆ. ಹೀಗೆ ಮನಸ್ಸಿಗೆ ಬಂದಂತೆ ಮಾಡಿದರೆ ಸರಕಾರ ಸಹಕಾರ ತತ್ವವನ್ನು ಪರಿಪಾಲನೆ ಮಾಡಿದಂತಾಯಿತೇ? ಇದರ ಪರಿಣಾಮವೇನಾಗುತ್ತದೆ ? ಸರ್ಕಾರ ನೀತಿ, ನಿಯಮಗಳನ್ನೇನಾದರೂ ಸರಿಯಾಗಿ ಅನ್ವಯಪಡಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಇದರಿಂದ ತಿಳಿಯುತ್ತಿದೆ. ಒಬ್ಬ ವ್ಯಕ್ತಿ 1,50,000 ರೂಪಾಯಿಗಳಷ್ಟು ಹಣ ವೆಚ್ಚ ಮಾಡಲು ಯಾವ ಹಣ ಇದು ? ಬ್ಲಾಕ್‌ಮಾರ್ಕೆಟ್ಟು ವ್ಯಾಪಾರ ಮಾಡಿ ತೆಗೆದುಕೊಂಡಿದ್ದೇ ? ಯಾವ ಅಕೌಂಟಿನಿಂದ ತೆಗೆದು ಯಾವ ಅಕೌಂಟಿಗೆ ಕೊಟ್ಟಿದ್ದಾರೆ ? ಕೇಂದ್ರ ಸರಕಾರಕ್ಕೆ ಶಿಫಾರಸು ಬರೆಯುವಾಗ ಯಾವ ಆಧಾರದ ಮೇಲೆ ಈ ಕೋ-ಆಪರೇಟೀವ್ ಸೊಸೈಟಿಗೆ ಲೈಸೆನ್ಸ್ ಕೊಟ್ಟಿದ್ದನ್ನು ಜಾಯಿಂಟು ಸ್ಟಾಕ್ ಕಂಪನಿಗೆ ಎಂದು ಬದಲಾವಣೆ ಮಾಡಿದರು, ಅದರ ವಿವರಗಳನ್ನು ಈ ಸಭೆಗೆ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳುತ್ತೇನೆ. ಕೇಂದ್ರ ಸರಕಾರಕ್ಕೆ ಈ ಸರಕಾರದವರು ಏನೆಂದು ಶಿಫಾರಸು ಬರೆದಿದ್ದರು ? ಜಾಯಿಂಟು ಸ್ಟಾಕು ಕಂಪೆನಿ ಮಾಡಬೇಕೆಂದರೆ ನೀವು ಹೇಳತಕ್ಕ ಸಹಕಾರ ತತ್ವಕ್ಕೆ ಏನು ಉಪಕಾರ ಮಾಡಿದ ಹಾಗಾಯಿತು ? ಇಂತಹುದನ್ನು ನೀವು ಮಾಡಬಾರದು. ಪ್ರತಿಯೊಂದರಲ್ಲೂ ಸಹಕಾರ ತತ್ವವಿರಬೇಕು ಇಲ್ಲದಿದ್ದರೆ ಬದುಕುವುದಿಲ್ಲ ಎನ್ನುವುದು ಇಲ್ಲಿ ನಿಜವಾದಂತಾಯಿತೇ ? ಹೀಗಾದರೆ ಸರಕಾರ ಆಡಳಿತದ ನೀತಿ ಹಾಗೂ ತತ್ವದ ಗತಿ ಏನಾಗುತ್ತದೆ ? ಸಾಧಾರಣವಾಗಿ ತಿಳಿಯದೇ ಇರುವ ಸಹಕಾರ ಸಂಸ್ಥೆಗಳೇನೋ ಗತಿಯಿಲ್ಲದೆ ನಾಶವಾಗುತ್ತವೆ. ಈ ವಿಷಯ ನನಗೆ ಭಯವನ್ನುಂಟುಮಾಡಿದೆ.

ಬೆಂಗಳೂರು ಜಿಲ್ಲೆಯನ್ನು ಅನಾವೃಷ್ಟಿಯ ಜಿಲ್ಲೆಯಾಗಿ ಸೇರಿಸುತ್ತಿಲ್ಲ, ಆದರೆ ಮೈಸೂರು, ಕೋಲಾರ ಹಾಗೂ ಚಿತ್ರದುರ್ಗ ಇವುಗಳನ್ನು ಸೇರಿಸಲಾಗಿದೆ. ಬೆಂಗಳೂರಿನ ಜಿಲ್ಲೆಯನ್ನೇಕೆ ಸೇರಿಸಿಲ್ಲಾ ? ಈ ಪಟ್ಟಣದಲ್ಲಿ ಎಲ್ಲೋ ಸ್ವಲ್ಪ ಮಳೆ ಬಿದ್ದ ಹಾಗೆ ಕಾಣಿಸುತ್ತದೆ ಎಂದು ಇದನ್ನು ಚೆನ್ನಾಗಿ ಮಳೆ ಬೀಳುವ ಪ್ರದೇಶವೆಂದು ಪರಿಗಣಿಸಲಾಗುತ್ತಿದೆ. ಹೊರಗಡೆ ಹೋಗಿ ನೋಡಿದರೆ, ಬೆಂಗಳೂರು ಪಟ್ಟಣ ಹೇಗಾಗಿದೆ ಎಂದರೆ ಕ್ಯಾನ್ಸರು ರೋಗ ಶರೀರದಲ್ಲಿ ಹೇಗೆ ಬೆಳೆಯುತ್ತಿದೆಯೋ ಹಾಗೆ ಈ ಪಟ್ಟಣ ನಿಮ್ಮ ಜಿಲ್ಲೆಯಲ್ಲಿ ಬಹಳ ದೊಡ್ಡದಾಗಿ ಬೆಳೆಯುತ್ತಿದೆ. ಅರ್ಕಾವತಿ ಕೆರೆಕಟ್ಟಿ ಅರ್ಕಾವತಿ ನದಿ ನೀರು ಉಪಯೋಗಿಸಲು ಸರ್ಕಾರ ಯಾವ ಸವಲತ್ತುಗಳನ್ನು ಕೊಡುತ್ತಾ ಇಲ್ಲ. ಹೆಸರಘಟ್ಟ, ತಿಪ್ಪಗೊಂಡನಹಳ್ಳಿ ಕೆರೆಗಳ ನೀರು ಬೆಂಗಳೂರು ಪಟ್ಟಣಕ್ಕೆ ಮಾತ್ರ ಉಪಯೋಗ. ಇದರಿಂದ ಈ ಜಿಲ್ಲೆಯಲ್ಲಿರುವ ರೈತರಿಗೆ ಸಾಕಷ್ಟು ಸೌಕರ್ಯಗಳನ್ನು ಕೊಡುತ್ತಿದ್ದಾರೆಯೇ ಇಲ್ಲವೇ ಎನ್ನುವ ಬಗ್ಗೆ ಸರಕಾರ ಗಮನ ಕೊಡಬೇಕು. ಬೆಂಗಳೂರು ಜಿಲ್ಲೆಯಲ್ಲಿ ಮಳೆ ಬೀಳದೇ ಇದ್ದರೂ ಈ ಜಿಲ್ಲೆಯನ್ನೇ ಸೇರಿಸದೆ ಕೈಬಿಟ್ಟರು. ಬೆಂಗಳೂರು ದೊಡ್ಡ ಪಟ್ಟಣವಾಗಿರುವುದೆಂದು ಇಲಾಖೆಯವರು ಈ ಜಿಲ್ಲೆ

(ಶ್ರೀ ಜಿ. ರಾಮೇಗೌಡ)

ಯನ್ನು ಕೈಬಿಟ್ಟಿರಬೇಕೆಂದು ಕಾಣುತ್ತದೆ. ಈ ಜಿಲ್ಲೆಯಲ್ಲಿರುವ ರೈತರ ಮಟ್ಟ ಚೆನ್ನಾಗಿಲ್ಲ ಎಂದು ಡೆಪ್ಯುಟೀ ಕಮೀಷನರವರಿಗೆ ನಾನೇ ಹೋಗಿ ಹೇಳಿದಾಗ ಅವರೂ ಬೆಂಗಳೂರು ಜಿಲ್ಲೆಯಲ್ಲಿನ ರೈತರ ಸ್ಥಿತಿಗತಿಗಳು ಉತ್ತಮವಾಗಿಲ್ಲ, ಎಂದು ಅನೇಕ ಅಂಕಿ ಅಂಶಗಳನ್ನು ಕೊಟ್ಟು ವಿವರಿಸಿ ಹೇಳಿದ್ದಾರೆ. ಇದು ನಮ್ಮ ಸರಕಾರದ ಗಮನದಲ್ಲಿಲ್ಲ ಎಂದು ತೋರುತ್ತದೆ. ಈಗಲಾದರೂ ಬೆಂಗಳೂರು ಜಿಲ್ಲೆಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಇಲ್ಲಿನ ರೈತರನ್ನು ಮುಂದಕ್ಕೆ ತರುವಂತೆ ಪ್ರಯತ್ನ ಮಾಡಬೇಕು ಅಲ್ಲದೇ ಗ್ರಾಹಕರ ಸಹಕಾರಸಂಘಗಳಿಗೆ ನೇರವಾಗಿ ರೈತರೇ ತಂದು ಮಾರುವಂತಾದರೆ ಆಗ ಅವರು ಬೆಳೆದ ದವಸಕ್ಕೆ ತಕ್ಕ ಬೆಲೆ ಸಿಕ್ಕಬಹುದು, ಇಲ್ಲದಿದ್ದರೆ ಇಲ್ಲಾ.

ಇನ್ನು ರಾಜ್ಯಪಾಲರು ಭಾಷಣದಲ್ಲಿ ನೂರಕ್ಕೆ ತೊಂಬತ್ತು ಜನ ಮಕ್ಕಳು ದೇಶದ ಎಲ್ಲ ಭಾಗ ಗಳಲ್ಲಿಯೂ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ ಎಂದು ಹೇಳಿದ್ದಾರೆ. ಮಾನ್ಯ ವಿದ್ಯಾಮಂತ್ರಿಗಳು ಒಂದು ಸಾರಿ ನನ್ನ ಜೊತೆಯಲ್ಲಿ ಬಂದರೆ ಹಳ್ಳಿಗಳಲ್ಲಿರುವ ರೈತರ ಮಕ್ಕಳು ಎಷ್ಟು ಜನ ಶಾಲೆಗೆ ಹೋಗಿ ವಿದ್ಯೆ ಕಲಿಯುತ್ತಿದ್ದಾರೆ ಎನ್ನುವುದನ್ನು ಪರೀಕ್ಷೆ ಮಾಡಿದರೆ ಇದರ ವಾಸ್ತವಾಂಶ ಅವರಿಗೆ ಚೆನ್ನಾಗಿ ಮನವರಿಕೆಯಾಗುತ್ತದೆ. ನೂರರಲ್ಲಿ ಐವತ್ತು ಜನ ಮಕ್ಕಳು ಹೋಗುವ ಯಾವುದಾದರೂ ಒಂದು ಶಾಲೆ ಇದ್ದರೆ, ಈ ವ್ಯವಸ್ಥೆ ಮಾಡಿರುವ ಸರ್ಕಾರಕ್ಕೆ ನಾನು ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ಎಲ್ಲಿ ಪಾಠಶಾಲೆಗಳಿವೆಯೋ ಅಲ್ಲಿ ಮಕ್ಕಳಿಲ್ಲ. ಎಲ್ಲಿ ಮಕ್ಕಳಿದ್ದು ಶಾಲೆಗಳಿವೆಯೋ ಅಲ್ಲಿಗೆ ಉಪಾಧ್ಯಾಯರುಗಳಿಲ್ಲ. ಕೆಲವುಕಡೆ ಇರುವ ಮಕ್ಕಳನ್ನು ನೋಡಿದರೆ ಅವು ರೈತರ ಮಕ್ಕಳೇ ಎಂದು ಕರೆಯುವುದಕ್ಕೂ ಸಾಧ್ಯವಿಲ್ಲ. ಅದರಲ್ಲೂ ನಮ್ಮ ವಿದ್ಯಾಮಂತ್ರಿಗಳು ಕಂಪಲ್ಸರಿ ಎಜುಕೇಷನ್ನು ಎಂದು ಜಾರಿಗೆ ತಂದು ಅದು ಯಾವ ಮಟ್ಟದಲ್ಲಿದೆ ಎನ್ನುವುದನ್ನು ಅವರೇ ಒಂದು ಸಾರಿ ನನ್ನೊಡನೆ ಬಂದರೆ ತೋರಿಸಿಬಿಡುತ್ತೇನೆ. ಇನ್ನೊಂದು ವಿಚಾರವಿದೆ. ಸ್ಕಾಲರ್‌ಷಿಪ್ ಕಮಿಟಿ ಎಂದು ಮಾಡಿದ್ದಾರೆ. ಅದರಲ್ಲಿ ನಾನೂ ಒಬ್ಬ ಮೆಂಬರಾಗಿದ್ದೆ. ಮೊದಲು ಆರು ರೂಪಾಯಿಗಳನ್ನು ಕೊಡಬೇಕೆಂದು ಆರ್ಡರು ಬಂತು. ಆ ನಂತರ ಒಂದು ಸಾರಿ ಮೂರುರೂಪಾಯಿ ಕೊಡಿ ಎಂದು ಆರ್ಡರು ಬಂತು. ಆನಂತರ ಅದರಂತೆ ಕೊಡೋಣವೆಂದಿದ್ದಾಗ ಪುನಃ ಸರಕಾರದಿಂದ ಈಗಾಗಲೇ ಇದನ್ನು ಕೊಡಬೇಡಿ, ಸ್ವಲ್ಪ ಇರಿ ಎಂದರು. ಆ ನಂತರ ಮೂರು ರೂಪಾಯಿ ಹೆಚ್ಚಿಸಿದರು. ಮೂರು ರೂಪಾಯಿಗಳ ಪುಸ್ತಕಗಳನ್ನು ಹಂಚುತ್ತೇವೆ, ಮೂರು ರೂಪಾಯಿ ಮಾತ್ರ ಕೊಡಿ ಎಂದರು. ಹೀಗೆ ಕೊಡುವವೇಳೆಗೆ ವರ್ಷದಲ್ಲಿ ಒಂಬತ್ತು ತಿಂಗಳುಗಳು ಕಳೆದೇಹೋದುವು. ಹೀಗಾದರೆ ಯಾರಿಗೆ ದುಡ್ಡು ಕೊಡಲು ಸಾಧ್ಯ? ಹೀಗೆ ಸ್ಕಾಲರು ಷಿಪ್ಪುಗಳನ್ನು ಕೊಡಲು ಸರಕಾರ ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಇದರಿಂದ ಜನತೆಗೆ ಅನುಕೂಲ ಮಾಡಿದಂತಾಗುವುದೇ? ಇವನ್ನೆಲ್ಲಾ ಸರಿಯಾಗಿ ಆಲೋಚನೆ ಮಾಡಬೇಕೆಂದು ಸರಕಾರದಲ್ಲಿ ಪ್ರಾರ್ಥಿಸುತ್ತೇನೆ.

5-30 P.M.

† Sri L. B. BIRJE (Khanapur).—[Spoke is Marathi]

Mr. SPEAKER.—Now the Hon'ble Member has tendered me a lot of advice with regard to redeeming the pledge that I am supposed to have given. Where he got information I have not been able to gather. If he wanted to canvass argument in support of the stand which he has been canvassing in regard to the border area in Belgaum, he might say all that he knows. But I do got know whether he knows the position so far as Kasaragod is concerned. It is entirely a different question. I do not want to get into a controversy with the Hon'ble Member. It would have been wise if he had left me out of the argument altogether. I would say it would have been equally wise and perhaps more wise if he had left the Governor also. So far as I can understand, he referred to some assurance given by the Governor. He referred to three persons. One is the assurance given by Governor saying that he is willing to see that Belgnam goes a way. I do not think it relates to that.

Sri B. P. KADAM.—The Chief Minister gave an assurance regarding the Marathi border in his speech.

Mr. SPEAKER.—When we refer to the Governor, we must remember that unlike others, he is the constitutional Head and he cannot take any decision. First of all, it is unwise and wrong to say that the Governor gave an assurance and there is no assurance given in that Address. If there was anything that was mentioned by the Hon'ble Chief Minister Sri Nijalingappa, he will answer it and I am not tackling that aspect at all. But the two other people are under a disability. The Governor cannot come and participate in the debate nor can I get down and try to answer the Member. It would not have been wrong if he had left two of us quietly alone rather than drawing us into the controversy.

Sri L. B. BIRJE.—(In Marathi)

Mr. SPEAKER.—I am not prepared to be dragged into controversy or cross-examination. Kasargod has not figured in this debate. Why bring in Kasargod and try to cloud the issue ?

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಬಹಳ ಜನ ಸರ್ಕಾರದ ಮಂತ್ರಿಗಳು ಇಲ್ಲಿ ಇದ್ದಾರೆ ಎಂದು ಹೇಳುತ್ತಾರೆ. ನಾನು ಕಂಡಹಾಗೆ ಯಾವ ಸರ್ಕಾರವೂ ಮೈಸೂರು ದೇಶದಲ್ಲಿ ಇದ್ದಹಾಗೆ ಕಾಣಲಿಲ್ಲ. ಏತಕ್ಕೆಂದರೆ ರಾಜ್ಯಪಾಲರ ಭಾಷಣ ಓದಿದರೆ ಇಷ್ಟೊಂದು ಕಾಗದ ಪ್ರೈಮರಿ ಸ್ಕೂಲು ವಿದ್ಯಾರ್ಥಿಗಳಿಗೆ ಅವಶ್ಯಕವಾಗಿ ಬೇಕಾದುದು ಅನ್ಯಾಯ ವಾಗಿ ಕಳೆದಂತಾಗಿದೆಯಲ್ಲಾ ಎಂದು ನನಗನ್ನಿಸಿತು. ಅಂತಹ ದೊಡ್ಡವರ ಕೈಲ ಇಂತಹ ನಿರಾಶಾದಾಯಕವಾದ ಪ್ರತಿಯನ್ನು ಕೊಟ್ಟು ಈ ಸರ್ಕಾರದವರು ಅವರಿಂದ ಅದನ್ನು ಓದಿಸ ಬಹುದೇ ಎನ್ನುವುದನ್ನು ನಾವು ಬಹು ಮುಖ್ಯವಾಗಿ ಯೋಚನೆಮಾಡುವ ವಿಷಯವಾಗಿದೆ.

ಏನೇನು ದೇಶದಲ್ಲಿ ಮಾಡಬೇಕು, ಯಾವ್ಯಾವ ಉದ್ದೇಶಗಳನ್ನು ಸಾಧಿಸಬೇಕು, ಆ ಉದ್ದೇಶ ಗಳೆಲ್ಲವೂ ಫಲವಾಗಿವೆಯೋ ಎಂಬುದನ್ನೆಲ್ಲಾ ಹೇಳಬೇಕಾಗಿತ್ತು. ಆದರೆ ಈ ದಿನ ನಾವು ಸಾಧಿ ಸಿದಂತದ್ದು ಏನು, ಬಂದ ಎಡರುತೊಡರುಗಳೇನು, ಮುಂದೆ ದೇಶಾಭಿವೃದ್ಧಿಗಾಗಿ ನಮ್ಮ ಸರ್ಕಾರ ಸರಿಯಾಗಿ ಆಡಳಿತವನ್ನು ನಿರ್ವಹಿಸುತ್ತದೆಯೇ, ಹಿಂದೆ 3-4 ಸಾರಿ ಭಾಷಣ ಮಾಡಿದಾಗ ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದರೋ ಅವೆಲ್ಲವೂ ಈಡೇರಿವೆಯೋ, ಆ ಬಗ್ಗೆ ಇರತಕ್ಕ ತೊಂದರೆಗಳೇನು. ಎನ್ನುವ ವಿಚಾರ ಇಲ್ಲಿ ಇಲ್ಲ. ಇದರಲ್ಲಿ ಹೇಳಿರುವದನ್ನೆಲ್ಲ ನಮ್ಮ ಸರ್ಕಾರದವರು ಆಶಿಸುತ್ತಾರೆ, ಯೋಚಿಸುತ್ತಾರೆ, ಎಂದು ಇದೆಯೇ ಹೊರತು ಇದರಲ್ಲಿ ಯಾವುದಾದರೂ ಒಂದು ನಿಗದಿಯಾದ ಭರವಸೆ ಇದ್ದರೆ, ಅದನ್ನು ಕನ್ನಡ ಪಂಡಿತರ ಪೈಕಿ ಯಾರಾದರೂ ಕಂಡುಹಿಡಿದರೆ ಅವರಿಗೆ ನಿಜವಾಗಿ ಬಹುಮಾನ ಕೊಡಬಹುದು. ಇಂತಹ ಉದ್ದೇಶಗಳು ಸರ್ಕಾರಕ್ಕಿವೆ. ಇಂತಹವುಗಳನ್ನು ಇಷ್ಟೇ ದಿವಸದೊಳಗೆ ಸಾಧಿಸುತ್ತೇವೆ ಎಂದು ಎಲ್ಲಿಯೂ ಹೇಳಲಿಲ್ಲ. ಈಗ ಏನಾಗಿದೆಯೆಂದರೆ ಈ ಸರ್ಕಾರ ಸುಮ್ಮನೆ ಬಣ್ಣ ಕಟ್ಟುವುದಕ್ಕೆ ಹೋಗುತ್ತಿದ್ದಾರೆ. ಅದರಿಂದೇನೂ ಪ್ರಯೋಜನವಿಲ್ಲ. ಇಷ್ಟು ಜನ ಮಂತ್ರಿಗಳ ಮತ್ತು ಅಧಿಕಾರ ಪಕ್ಷದ ಸದಸ್ಯರ ಎದುರಿಗೆ ನಿಂತು ಈ ರೀತಿ ಧೈರ್ಯವಾಗಿ ಹೇಳಬೇಕಾದರೆ ಅವರ ಹೇಳಿಕೆಯಲ್ಲಿ ನಿಜವಾಗಿ ಸತ್ಯಾಂಶವಿದೆಯೇ ಇಲ್ಲವೇ ಎಂಬುದನ್ನು ಮೊದಲು ಅವರು ಯೋಚಿಸಬೇಕು. ಇನ್ನೂ ಆ ಪಕ್ಷದ ಸದಸ್ಯರು ಸುಮಾರು ಶೇ. 90ರಷ್ಟು ಈ ಭಾಷಣದ ಮೇಲೆ ಮಾತನಾಡುತ್ತಾ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡಿದ್ದನ್ನು ಸ್ವಾಗತಿಸುತ್ತೇವೆಂದು ಹೇಳಿದರೇ ಹೊರತು ಅವರು ಹೇಳಿದುದು ಚೆನ್ನಾಗಿದೆ ಅದನ್ನು ಒಪ್ಪುತ್ತೇವೆ ಎಂದು ಯಾರಾದರೂ ಹೇಳಿದ್ದಾರೆಯೇ ? ಪ್ರೊಸೀಡಿಂಗ್ಸ್ ತೆಗೆಸಿ ನೋಡಬಹುದು. ಯಾರೇ ಆಗಲಿ ಮಾತೆತ್ತಿದರೆ ಸಹಕಾರ ತತ್ವ, ಸಹಬಾಳ್ವೆ, ಪಂಚಶೀಲ, ಸಮಾಜವಾದ-ಇತ್ಯಾದಿ ಬಹು ಉದ್ಬುದ್ಧವಾದ ದೊಡ್ಡದೊಡ್ಡ ಮಾತುಗಳನ್ನು ಸೇರಿಸಿಕೊಂಡೇ ಇದುವರೆಗೆ ಅನೇಕ ಸದಸ್ಯರು ಭಾಷಣಮಾಡಿದ್ದಾರೆ. ಎಲ್ಲಾ ಒಂದೇ ರೀತಿ ಇರುವಂತೆ ಕಾಣುತ್ತದೆ. ಬದಲಾವಣೆಯೇನೂ ಇಲ್ಲ. ನಿರುದ್ಯೋಗ ಸಮಸ್ಯೆ ನಿವಾರಣೆ ಯಾಗಿಹೆಯೇ, ಸೋಷಯಲಿಸ್ಟ್ ಕ್ಯಾಟರನ್ ಆಫ್ ಸೊಸೈಟಿ ಎಂದರೇನು. ರಾಷ್ಟ್ರೀಕರಣವೆಂದರೆ ಏನು ಎಂಬುದನ್ನು ಇವರು ತಿಳಿದುಕೊಂಡಿದ್ದಾರೆಯೇ, ಎಂಬುದಾಗಿ ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಏತಕ್ಕಾಗಿ ಇವರಿಗೆ ಒಂದು ಟ್ರೈನಿಂಗ್ ಸ್ಕೂಲುಮಾಡಿ ಮೂರು ತಿಂಗಳು

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಕಾಲ ಚುನಾವಣೆಯಾದನಂತರ ಸೋಷಿಯಲಿಸ್ಟಿಕ್, ಪ್ಯಾಟರ್ನ್ ಆಫ್ ಸೊಸೈಟಿ, ರಾಷ್ಟ್ರೀಕರಣ ಫ್ಯಾಮಿಲಿ ಪ್ಲಾನಿಂಗ್ ಎಂದರೇನು ಎಂದು ಹೇಳಿ ಕೊಡಕೂಡದು ! ಈ ವಿಚಾರಗಳಲ್ಲಿ ಶಿಕ್ಷಣ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿಯಾದರೆ ಇದರಿಂದ ತುಂಬಾ ಅವರಿಗೆ ಒಳ್ಳೆಯದಾಗುತ್ತದೆ, ದೇಶದ ಆಡಳಿತವೂ ಉತ್ತಮವಾಗುತ್ತದೆ, ಇಂಥಾ ವಿಚಾರಗಳು ಏನೂ ಗೊತ್ತಿಲ್ಲದೆ ಸುಮ್ಮನೆ ಇಲ್ಲಿ ಭಾಷಣ ಮಾಡುತ್ತಿದ್ದಾರೆ. ಇದೆಲ್ಲಾ ಸರಿಯಲ್ಲ.

ಸ್ವಾಮಿ, ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳು ಸೆಲೆಕ್ಟಾಗಿ 8 ತಿಂಗಳಾದರೂ ಇವತ್ತಿನ ವರೆಗೂ ಆ ಕಮಿಟಿ ಸದಸ್ಯರು ಒಂದು ಮೀಟಿಂಗನ್ನು ಸಹ ಮಾಡಿದ ಹಾಗೆ ಇಲ್ಲ. ಸೆಕ್ರೆಟರಿಯವರಿಗೆ ಪವರ್ಸ್ ಇಲ್ಲ. ಇವತ್ತಿನವರೆಗೂ ಆ ಕಮಿಟಿ ಫಂಕ್ಷನ್ ಮಾಡುತ್ತಿಲ್ಲ, ಇದಕ್ಕೆ ಕಾರಣರು ಯಾರು ? ಜವಾಬ್ದಾರರು ಯಾರು, ಹಣವೇನಾದರೂ ದುರುಪಯೋಗವಾದರೆ ಯಾರು ಕಾರಣರು ? ಅವರಿಗೆ ಬೇಕಾದಂಥವರಿಗೆ ನಾಮಿನೇಷನ್ ಮಾಡುತ್ತಾರೆ, ನಾಮಿನೇಷನ್ ಮಾಡದೇ ಇರುವವರನ್ನು ಎಲೆಕ್ಟ್ ಮಾಡುತ್ತಾರೆ. ದೇಶದಲ್ಲಿ ಎಲೆಕ್ಟ್ ಆಗುವುದಕ್ಕೆ ಇವರಷ್ಟೇ ಜನರೇ ? ಕಮಿಟಿಯಲ್ಲಿ ಬೇಡ ವಾದವರನ್ನು ಮುಂದಿನ ಚುನಾವಣೆಯಲ್ಲಿ ತರುತ್ತಾರೆ, ಬೇಕು ಎಂದವರನ್ನು ದುಡ್ಡು ಕೊಟ್ಟು ಮುಂದುವರಿಸುತ್ತಾರೆ. ಈ ರೀತಿ ಇವರೇನಾದರೂ ತಪ್ಪು ತಿಳಿದುಕೊಂಡಿದ್ದರೆ ಮುಂದಕ್ಕೆ ಇವರಿಗೆ ಕೈ ಕೊಟ್ಟು ಅವರೇ ನಿಂತುಕೊಳ್ಳುವುದಕ್ಕೆ ಹೋಗುತ್ತಾರೆ, ಅವರಿಗೆ ಇದು ಗೊತ್ತಿಲ್ಲ. ಇಂತಹ ಬುದ್ಧಿಇಲ್ಲದ ಜನರನ್ನು ಯಾವ ಆಸ್ಪತ್ರೆಗೆ ಕಳುಹಿಸಬೇಕೋ ಗೊತ್ತಾಗುವುದಿಲ್ಲ.

Mr. SPEAKER.—The Member should not cast reflection upon other Members.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮಗೆ ಎಷ್ಟರಮಟ್ಟಿಗೆ ಬುದ್ಧಿ ಇದೆ ಎಂಬುದನ್ನು ತಾವೆ ಯೋಚನೆಮಾಡಿ.

Mr. SPEAKER.—I do not like that also.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಬಸ್ ರಾಷ್ಟ್ರೀಕರಣದ ವಿಷಯದಲ್ಲಿ ಸ್ವಲ್ಪ ಆಲೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ. ರಾಷ್ಟ್ರೀಕರಣ ಎಂದರೆ ಏನು ? ಇದರಿಂದ ದೇಶಕ್ಕೆ ಹಣಬರುವುದಿಲ್ಲ. ಜನತೆಗೂ ಸುಖವಿಲ್ಲ. ಆದರೆ ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಅನುಕೂಲವಾಗಿದೆ. ರಾಷ್ಟ್ರೀಕರಣ ಎಂದು ಯಾರೋ ಒಬ್ಬರು ಕಾಂಗ್ರೆಸ್ಸಿನವರಿಗೆ ಟಿಕೇಟ್ ಕೊಟ್ಟಿಲ್ಲ ಎಂದು ಬಸ್ ಲೈನನ್ನು ವಾಪಸ್ಸು ತೆಗೆದುಕೊಳ್ಳು ವುದು. ಇಂಥಾ ರಾಷ್ಟ್ರೀಕರಣ ಮಾಡಿ ಏನು ಪ್ರಯೋಜನ ? ನಮ್ಮ ದೇಶ ಅಭಿವೃದ್ಧಿಯಾಗಬೇಕಾದರೆ ಕೋ-ಆಪರೇಟೀವ್ ಮೂವೆಂಟಿಗೆ ಹೆಚ್ಚಿಗೆ ಪ್ರೋತ್ಸಾಹವನ್ನು ಕೊಡಬೇಕು, ಸಹಕಾರತತ್ವವನ್ನು ಅನುಷ್ಠಾನಕ್ಕೆ ತರಬೇಕು, ಎಲ್ಲರೂ ಸಹಬಾಳ್ವೆಯನ್ನು ಮಾಡಬೇಕೆಂದು ಹೇಳುತ್ತಾರೆ ಮತ್ತು ಸಹ ಕಾರ ಸಪ್ತಾಹವನ್ನು ಆಚರಿಸುತ್ತಿದ್ದಾರೆ. ಆದರೆ ಯಾರಾದರೂ ಒಬ್ಬ ರೈತ ಯಾವುದಾದರೂ ಒಂದು ಸೊಸೈಟಿಗೆ ಸಾಲಕ್ಕೆ ಅರ್ಜಿ ಹಾಕಿ ಆ ಸೊಸೈಟಿಯ ಪ್ರೆಸಿಡೆಂಟರನ್ನು ಕಂಡು ನನಗೆ ದಯವಿಟ್ಟು ಜಾಗ್ರತೆ ಸಾಲವನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿದರೆ ಅವರು ಏನು ಹೇಳುತ್ತಾರೆಂದರೆ ನೋಡುತ್ತೇನೆ, ವಿಚಾರಮಾಡುತ್ತೇನೆ, ಎಂದು ಅದರಲ್ಲಿಯೇ ಕಾಲವನ್ನು ಕಳೆದು ಕೊನೆಗೆ ಏನು ಹೇಳುತ್ತಾರೆಂದರೆ ಈ ಸೊಸೈಟಿಯಲ್ಲಿ 75 ಸಾವಿರ ರೂಪಾಯಿ ಷೇರು ಬಂಡವಾಳವನ್ನು ಹಾಕಿದ್ದರು. ಈಗ ಈ ಸೊಸೈಟಿಯಲ್ಲಿ 15 ಸಾವಿರ ರೂಪಾಯಿಗಳು ಇಲ್ಲ. ಇದನ್ನು ರಿಜಿಸ್ಟ್ರಾರ್ ಅವರು ಇನ್ಸ್ಪೆಕ್ಷನ್ ಮಾಡಬೇಕು, ಆಡಿಟ್ ಆಗಿಲ್ಲ, ಕೌನ್ಸಿಲ್ ಮೆಂಬರ್‌ಗಳೆಲ್ಲಾ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಈ ಸೊಸೈಟಿಗೆ ಮಂತ್ರಿಗಳು ಸ್ಟೇ ಆರ್ಡರ್ ಕೊಟ್ಟಿದ್ದಾರೆ ಆದ್ದರಿಂದ ಈ ಅರ್ಜಿ ಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಇಂಥಾ ಸಹಕಾರತತ್ವವನ್ನು ಪ್ರಚಾರ ಮಾಡಿದರೆ ಏನು ಪ್ರಯೋಜನ ? ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಂತ್ರಿಗಳು ದೇಶದಲ್ಲೆಲ್ಲಾ ಸಂಚಾರಮಾಡಿ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಶಾಸನಸಭೆ ಸೇರಿದಾಗ ದೇಶದ ಎಲ್ಲಾ ಪ್ರತಿನಿಧಿಗಳೂ ತಮ್ಮತಮ್ಮ ಕ್ಷೇತ್ರದಲ್ಲಿರತಕ್ಕ ಕುಂದುಕೊರತೆಗಳು ಅಲ್ಲಿ ಆಗತಕ್ಕ ಅನ್ಯಾಯ ಇವುಗಳನ್ನೆಲ್ಲಾ ಅಧ್ಯಕ್ಷರ ಎದುರಿನಲ್ಲಿ ಸರ್ಕಾರದವರಿಗೆ ಹೇಳಿಕೊಳ್ಳಬೇಕಾಗಿದೆ. ಆದರೆ ನಾವುಗಳೆಲ್ಲಾ ಇಲ್ಲಿ ಬಂದು ಏನು ಹೇಳಿದರೂ ನಡೆಯುವುದು ನಡೆಯುತ್ತಲೇ ಇರುತ್ತದೆ.

ಇನ್ನು ವ್ಯವಸಾಯದ ವಿಷಯದಲ್ಲಿ ಹೇಳುವುದಾದರೆ ರೈತರಿಗೆ ಸರ್ಕಾರದವರು ಗೊಬ್ಬರವನ್ನು ಕೊಡತಕ್ಕ ವಿಚಾರವನ್ನು ಬಹಳ ಚೆನ್ನಾಗಿ ಹೇಳಿದ್ದರು. 470 ರೂಪಾಯಿಗಳನ್ನು ಖರ್ಚುಮಾಡಿ 4 ಪಲ್ಲ ಭತ್ತವನ್ನು ಬೆಳೆದರೆ ಅದರಿಂದ ಏನು ಪ್ರಯೋಜನ ? ನಮ್ಮ ರೈತರಿಗೆ ಒಬ್ಬೊಬ್ಬರಿಗೆ

ತಿಂಗಳು ಒಂದಕ್ಕೆ 75 ರೂಪಾಯಿ ಸಂಬಳ ಕೊಟ್ಟರೆ ಅವರೆಲ್ಲರೂ ಜಮೀನು ಬಿಟ್ಟು ಕೆಲಸಕ್ಕೆ ಬರುವುದಕ್ಕೆ ಸಿದ್ಧರಾಗಿದ್ದಾರೆ. ನಾನು ಬೇಕಾದರೆ ಅವರೆಲ್ಲರನ್ನೂ ಕಳುಹಿಸುತ್ತೇನೆ. ನೀವು ಕಾರ್ಖಾನೆಗಳಲ್ಲಾಗಲೀ ಕಛೇರಿಗಳಲ್ಲಾಗಲೀ ಎಲ್ಲಿ ಬೇಕಾದರೂ ಜವಾನರ ಕೆಲಸವಾಗಲೀ ಅಥವಾ ಬೇರೆ ಯಾವ ಕೆಲಸವಾಗಲೀ ಕೊಡಿ ಅವರು ಬರುವುದಕ್ಕೆ ತಯಾರಾಗಿದ್ದಾರೆ. ಅಪ್ಲಿಕೇಷನ್ ಕಾಲ್‌ಫಾರ್ ಮಾಡಿದರೆ 100ಕ್ಕೆ 90 ಜನ ಅಂಥಾ ಕೆಲಸಗಳಿಗೆ ಅರ್ಜಿ ಹಾಕಿಕೊಂಡು ಬರುವುದಕ್ಕೆ ಸಿದ್ಧವಾಗಿದ್ದಾರೆ. ವ್ಯವಸಾಯದ ಖರ್ಚು, ಇನ್‌ಕಂ ಟ್ಯಾಕ್ಸ್, ಅಗ್ರಿಕಲ್‌ಚರಲ್ ಟ್ಯಾಕ್ಸ್, ವಾಟರ್ ರೇಟ್ ಇತ್ಯಾದಿ ತೆರಿಗೆಗಳನ್ನೆಲ್ಲ ನಮ್ಮ ಜಮೀನಿನಲ್ಲಿ ಬರತಕ್ಕ ಉತ್ಪತ್ತಿಯಲ್ಲಿ ತೆಗೆದುಕೊಂಡು ಅದರಲ್ಲಿ ಏನಾದರೂ ಮಿಕ್ಕರೆ ನಮಗೆ ಕೊಡಿ ಇಲ್ಲದಿದ್ದರೆ ಬೇಡಿ.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ ರಾಜ್ಯಪಾಲರ ಭಾಷಣದಲ್ಲಿ 100ಕ್ಕೆ 90 ಜನ ವಿದ್ಯಾವಂತರಾಗುತ್ತಿದ್ದಾರೆಂದು ಹೇಳಿದ್ದಾರೆ. ನಮ್ಮ ಹಳ್ಳಿಗಾಡಿನಲ್ಲಿ ಏನಾಗುತ್ತಿದೆ ಎಂದರೆ 12 ವರ್ಷ ಆದ ಮೇಲೆ ಹುಡುಗನನ್ನು ಸ್ಕೂಲಿಗೆ ಕಳುಹಿಸುತ್ತಾರೆ. ಅವನು ಇನ್ನೇನು ತಾನೆ ಕಲಿಯುತ್ತಾನೆ? ಹಾಗೂ ಹೀಗೂ ಮಾಡಿ ತನ್ನ ಹೆಸರನ್ನು ಬರೆಯುವಷ್ಟು ಕಲಿತು ಕೊಂಡಿರುತ್ತಾನೆ. ಯಾರಾದರೂ ಯಾವುದಕ್ಕಾದರೂ ಒಂದು ರುಜು ಹಾಕು ಎಂದರೆ ಸಿದ್ದನಂಜಣ್ಣ ಎಂದು ರುಜು ಹಾಕುತ್ತಾನೆ. ಅವನಿಗೆ ಬರುವುದು ಅಷ್ಟೇ. ಅಂಥವನನ್ನು ಒಬ್ಬ ವಿದ್ಯಾವಂತ ಎಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ.

ಕೋ-ಆಪರೇಟೀವ್ ಫಾರ್ಮಿಂಗ್‌ಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತಾರೆ. ಆದರೆ ಮೊನ್ನೆ ಯಾವುದೋ ಒಂದು ಹಳ್ಳಿಯ ಹತ್ತಿರ ಸಣ್ಣ ಪುಟ್ಟ ಡಿಪ್ರೆಸ್ಡ್ ಕ್ಲಾಸಿನ ರೈತರು 43 ಎಕರೆ ಜಮೀನು ಕೊಡಿ ನಾವು ಕೂಡೊಕ್ಕಲು ಸಹಕಾರ ಸಂಘವನ್ನು ಮಾಡುತ್ತೇವೆ ಎಂದು ನಮ್ಮ ಅರಣ್ಯಶಾಖಾ ಸಚಿವರನ್ನು ಕೇಳಿದರೆ ಅವರು ಕೊಡಲಿಲ್ಲ. ಆದರೆ ಬೇರೆ ಇನ್ನೊಬ್ಬರಿಗೆ 500 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಅವರು ಅದರಲ್ಲಿ ಪ್ಲಾಂಟೇಷನ್ ಮಾಡಿದ್ದಾರೆ. ಇಂಥಾ ಸಂದರ್ಭದಲ್ಲಿ ದೇಶದಲ್ಲಿ ಸಹಕಾರ ವ್ಯವಸಾಯವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ರೈತ ಸುಖಪಡುವುದಕ್ಕೆ ಸಾಧ್ಯವಿದೆಯೇ? ಇನ್ನು ಕೆಲವು ಕಡೆ ಸಹಕಾರಿ ವ್ಯವಸಾಯ ಸಂಘ ಎಂದು ಮಾಡಿಕೊಂಡು ಅದಕ್ಕೆ ಒಬ್ಬರು ಪ್ರೆಸಿಡೆಂಟಾಗಿ 15 ಜನ ಮೆಂಬರುಗಳನ್ನು ಮಾಡುತ್ತಾರೆ. ಆಮೇಲೆ ಆ ಮೆಂಬರುಗಳು ಆ ವ್ಯವಸಾಯಕ್ಕೆ ಬರಲಿಲ್ಲ ಎಂದು ಅವರನ್ನ ವಜಾಮಾಡುತ್ತಾರೆ. ಆ ಸಂಘದಲ್ಲಿ ಕೆಲಸ ಮಾಡತಕ್ಕ ಪ್ರೆಸಿಡೆಂಟರ ಹತ್ತಿರ ಒಂದು ಗಾಡಿ ಇರುತ್ತದೆ. ಲೆಕ್ಕದಲ್ಲಿ 470 ರೂಪಾಯಿಗಳನ್ನ ಕೊಟ್ಟು ಒಂದು ಗಾಡಿಯನ್ನು ತೆಗೆದುಕೊಂಡಿದ್ದೇನೆ ಎಂದು ಆ ಸಂಘದ ಹೆಸರಿನಲ್ಲಿ ಖರ್ಚು ಹಾಕುತ್ತಾರೆ. ಸಾಯುವ ಒಂದು ಜೊತೆ ಮುದಿ ಎತ್ತುಗಳನ್ನು ತೆಗೆದುಕೊಂಡು ಎತ್ತುಗಳನ್ನು ಕೊಂಡುಕೊಂಡ ಖರ್ಚು ಎಂದು 630 ರೂಪಾಯಿ ಖರ್ಚು ಹಾಕುತ್ತಾರೆ. ಹಣವೆಲ್ಲಾ ಮನೆಗೆ ಹೋಗುತ್ತದೆ. ಹೀಗಾಗಿ ಸಹಕಾರಿ ವ್ಯವಸಾಯ ಸಂಘವನ್ನು ಉತ್ತಮಪಡಿಸಲಿಲ್ಲ ಎಂದು ಆ ಪ್ರೆಸಿಡೆಂಟರನ್ನು ಬಯ್ಯುತ್ತಾರೆ. ಅವನು ಮನೆಗೆ ಹೋಗುತ್ತಾನೆ. ಇಂಥಾ ವ್ಯವಸಾಯ ಸಹಕಾರಗಳನ್ನು ಮಾಡಬೇಕಾದರೆ ಅವನ ಆಸ್ತಿಯನ್ನು ಸೆಕ್ಯೂರಿಟಿ ತೆಗೆದುಕೊಂಡು ಪ್ರಯೋಗ ಮಾಡಬೇಕು.

6 P.M.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಬಹಳ ಅನ್ಯಾಯನಡೆಯುತ್ತಿದೆ. ಹೈದರಾಬಾದ್, ಕೊಯಮತ್ತೂರು ಮುಂತಾದ ದೊಡ್ಡ ಇಂಟರ್ ಸ್ಟೇಟ್ ಬಸ್ ಲೈನುಗಳನ್ನು ಸ್ಯಾಂಕ್ಷನ್ ಮಾಡಿ ಲೈಸೆನ್ಸ್ ತಗೆದುಕೊಳ್ಳಬೇಕಾದರೆ ಎರಡು ಲಕ್ಷ ಮೂರು ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಇದನ್ನು ಕೇಳುವುದಕ್ಕೆ ಯಾರಿಗಾದರೂ ಅಧಿಕಾರ ಇದೆಯೇ? ಇದರಲ್ಲಿ ಏನಾದರೂ ಅಡ್ಮಿನಿಸ್ಟ್ರೇಷನ್ ಇದೆಯೇ? ನಾವು ಎಷ್ಟು ಹೇಳಿದರೆ ಏನು ಪ್ರಯೋಜನ, ಇಂಥಾ ಅನ್ಯಾಯ ನಡೆಯುತ್ತಾ ಇರುವ ದೇಶವನ್ನು ನಿಮ್ಮ ಕೈಯ್ಯಲ್ಲಿ ಕೊಟ್ಟು ಆಡಳಿತವನ್ನು ನಡೆಸುವುದಾದರೆ ದೇಶ ಉಳಿಯುತ್ತದೆಯೇ? ಇನ್ನುಮೇಲಾದರೂ ದೇಶದ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಬೇಕು ಎನ್ನುವುದಾದರೆ ಬಸ್ ಲೈನುಗಳನ್ನು ಹರಾಜಿನಲ್ಲಿ ಕೊಟ್ಟುಬಿಡಿ.

ಇನ್ನು ಪಾನನಿರೋಧದ ವಿಷಯ. ಈ ದೇಶದ ಪಾನನಿರೋಧ ಯಶಸ್ವಿಯಾಗಬೇಕೆಂದರೆ ಎಲ್ಲಾದರೂ ಸಾಧ್ಯವಿದೆಯೇ? ರಾತ್ರಿಯೆಲ್ಲಾ ಕುಡಿದು ಬೆಳಿಗ್ಗೆ ಎದ್ದು ಯಾರೂ ಕುಡಿಯಬೇಡಿ ಪಾನನಿರೋಧವನ್ನು ಜಾರಿಗೆ ತನ್ನಿ ಎಂದು ಹೇಳಿದರೆ ಅದು ಖಂಡಿತವಾಗಿಯೂ ಯಶಸ್ವಿಯಾಗುವುದಿಲ್ಲ. ಆಂಧ್ರದಲ್ಲಿ ಹಾಗೆ ಮಾಡಿದ್ದಾರೆ, ಕೇರಳದಲ್ಲಿ ಹೀಗೆ ಮಾಡಿದ್ದಾರೆ ಎಂದು ನೀವು ಅವರಿಂದ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಪಾಠವನ್ನು ಕಲಿಯಬೇಡಿ. ನೀವು ಪಾನನಿರೋಧವನ್ನು ರದ್ದುಮಾಡಿ. ನೀವು ಮಾತ್ರ ಬೇರೆಯವರಿಂದ ಪಾಠವನ್ನು ಕಲಿಯುತ್ತೀರಿ. ಆದರೆ ನಿಮ್ಮಿಂದ ಪಾಠವನ್ನು ಯಾರೂ ಕಲಿತುಕೊಂಡು ಹೋಗಲಿಲ್ಲ.

ಲೋಕೋಪಯೋಗಿ ಇಲಾಖೆಯಲ್ಲಿ ಬಹಳ ದುಡ್ಡು ಹೋಗುತ್ತಿದೆ. 'ಎ' ವರ್ಗದ ಕಂಟ್ರಾಕ್ಟರುಗಳು ಎಂದು ಒಂದು ವರ್ಷ ಕಾಲ ಅವರಿಗೆ ಕೊಡುತ್ತಾರೆ. ಒಂದು ವರ್ಷವಾದ ಮೇಲೆ ಮತ್ತೆ ಒಂದು ವರ್ಷ, ಆ ಮೇಲೆ ಇನ್ನೂ ಒಂದು ವರ್ಷ ಹೀಗೆ ಮುಂದುವರಿಸಿಕೊಡು ಹೋಗುತ್ತಾರೆ. ರಸ್ತೆಯನ್ನು ಮಾಡುವಾಗ ಸರಿಯಾದ ಪ್ಲಾನ್ ಮಾಡದೆ ಮೊದಲು ಐದು ಅಡಿ ಅಗಲ ಎಂದು ಮಾಡುತ್ತಾರೆ, ಎರಡು ವರ್ಷಗಳಾದ ಮೇಲೆ ಅದನ್ನು ಕಿತ್ತುಬಿಟ್ಟು 7 ಅಡಿ ಅಗಲ ಮಾಡಿಸುತ್ತಾರೆ, ಮೂರು ವರ್ಷಗಳಾದ ಮೇಲೆ 9 ಅಡಿ ಅಗಲ ಮಾಡಿಸುತ್ತಾರೆ. ಆಗ ಕಂಟ್ರಾಕ್ಟರು ಏನು ಮಾಡುತ್ತಾನೆಂದರೆ ಎಸ್ಟಿಮೇಟು ಬದಲಾವಣೆಯಾಯಿತು, ಆದ್ದರಿಂದ ಸರ್ಕಾರ ನಮಗೆ ದುಡ್ಡು ಕೊಡಬೇಕು ಎಂದು ಆರ್ಬಿಟ್ರೇಷನ್ನಿಗೆ ಅಥವಾ ಹೈಕೋರ್ಟಿಗೆ ಹೋಗುತ್ತಾನೆ. ನೀವು ಮಾಡಿದ್ದು ತಪ್ಪು ಎಂದು ಹೇಳುತ್ತಾನೆ. ಅಗ್ರಿಮೆಂಟನ್ನು ಬರೆಸಿಕೊಳ್ಳಲು ಯಾರೋ ಒಬ್ಬ ಗುಮಾಸ್ತನಿಗೆ ಹೇಳುತ್ತೀರಿ. ಅದಕ್ಕೆ ಏನೋ ಒಂದು ಸೈನ್ ಹಾಕಿರುತ್ತಾರೆ.

Mr. SPEAKER.—The House will now adjourn and meet tomorrow at 12-30 P.M.

The House adjourned at Five Minutes past Six of the Clocq to meet again at Thirty Minutes past Twelve of the Clock on Wednesday, the 4th March 1964.

WD 2468—GPB—900—1-5-1964

MYSORE LEGISLATIVE ASSEMBLY

SIXTH DAY

Wednesday, 4th March 1964

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Starting of a Cem.nt Industry at Honnali.

*Q.—151. SRI D. PARAMESWARAPPA (Honnali).—

Will the Government be pleased to state:—

whether they intend starting a Cement Industry at Honnali as the materials required for the same are readily available there?

A.—SRI K. MALLAPPA (Minister for Industries and Commerce).—No.

SRI D. PARAMESWARAPPA.—Are the Government aware that the materials necessary for the establishment of a cement industry at Honnali are available there?

MR. SPEAKER.—That is what is found in the question itself. They say that for other reasons, it is not possible.

†SRI K. MALLAPPA.—It is not suitable for cement factory. The lime stone deposit contains high percentage of manganese, which is not suitable for cement and the quantity also is very little, inadequate.

SRI D. PARAMESWARAPPA.—Are you aware that most of the lime stone available in Honnali is supplied to Honnali Taluk?

SRI K. MALLAPPA.—It is low grade lime.

SRI D. PARAMESWARAPPA.—Are you aware that clay is available in plenty in Honnali town?

SRI K. MALLAPPA.—The question is about lime stone. I have already said that it is not suitable for manufacture.

†Indicates that the remarks or speeches have not been revised by the member concerned.

Sri A. KRISHNA SHETTY.—May I know whether the Government intend starting a cement factory anywhere in the State this year ?

Sri K. MALLAPPA.—This is an industry reserved for the private sector. One or two licenses have already been given. Other cases have been recommended to the Government of India.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಇಲ್ಲಿ ಸಿಕ್ಕತಕ್ಕ ಸುಣ್ಣಕಲ್ಲನ್ನು ಶರಾವತಿ ಯೋಜನೆ ಪೂರ್ತಿಯಾದಮೇಲೆ ಯಾವ ರೀತಿ ಉಪಯೋಗಿಸಬೇಕೆಂಬ ಬಗ್ಗೆ ಸರ್ಕಾರ ಈಗಲೇ ಯೋಚನೆ ಮಾಡಿದೆಯೇ?

ಶ್ರೀ ಕೆ. ಮಲ್ಲಪ್ಪ.—ಅದು ಕಟ್ಟಡಗಳಿಗೆ ಬಳಿಯುವುದಕ್ಕೆ ಉಪಯೋಗವಾಗುತ್ತದೆ. ಆದರೆ ಸಿಮೆಂಟ್ ಅಂತಹ ಕೈಗಾರಿಕೆಗಳಿಗೆ ಬರುವುದಿಲ್ಲ.

Sri J. P. SARWESH.—What happened to the parties who applied for license for Sedam Taluk in Gulbarga District ?

Mr. SPEAKER.—From Honnali we go to Sedam. That is good ground for putting a fresh question.

ಶ್ರೀ ಸಿದ್ದಯ್ಯ ಕಾಶೀಮಠ್.—ರಾಜ್ಯದಲ್ಲಿ ಈಗಲೇ ಸಿಮೆಂಟ್ ಕೊರತೆ ಹೆಚ್ಚಾಗಿರುವಾಗ ಬೇರೆ ಕಡೆಗಳಿಂದ ಕಚ್ಚಾಪದಾರ್ಥಗಳನ್ನು ಯಥೇಚ್ಛವಾಗಿತರಿಸಿ ಹೊನ್ನಾಳಿಯಲ್ಲಿ ಒಂದು ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಪ್ರಯತ್ನಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಕಚ್ಚಾಪದಾರ್ಥಗಳನ್ನು ಬೇರೆ ಕಡೆಗಳಿಂದ ತರಿಸಿ ಹೊನ್ನಾಳಿಯಲ್ಲಿ ಸಿಮೆಂಟ್ ಕಾರ್ಖಾನೆಯೊಂದನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಖರ್ಚು ಜಾಸ್ತಿಯಾಗುತ್ತದೆ. ಅಲ್ಲಿ ಸಾಕಷ್ಟು ಕಚ್ಚಾ ಪದಾರ್ಥಗಳು ದೊರೆಯುವುದು ದುರ್ಲಭ. ಆದ್ದರಿಂದ ದೂರದ ಪ್ರದೇಶಗಳಿಂದ ಕಚ್ಚಾಪದಾರ್ಥಗಳನ್ನು ತರಿಸಿ ಇಲ್ಲಿ ಆ ಕಾರ್ಖಾನೆಯನ್ನು ತೆಗೆಯುವುದು ಕಷ್ಟ.

It is neither prudent nor is it going to be economical.

Sri G. V. GOWDA.—May I know whether any survey has been conducted in the State and whether the Government has come to know which are the places which are suitable for locating this industry ?

Sri K. MALLAPPA.—Survey has been conducted. Plenty of lime stone deposits are found in Gulbarga, Bijapur, Belgaum and very close of Hosadurga area more than 50 million tons of suitable cement rate lime stones are found.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹೊನ್ನಾಳಿಯಲ್ಲಿ ಸಿಮೆಂಟ್ ಕಾರ್ಖಾನೆಯೊಂದನ್ನು ಪ್ರಾರಂಭಿಸಲು ಬೇಕಾಗುವ ಎಲ್ಲ ಪದಾರ್ಥಗಳು ದೊರೆಯುವ ಕಾರಣ ಖಾಸಗಿಯವರು ಯಾರಾದರೂ ಸಿಮೆಂಟ್ ಕಾರ್ಖಾನೆಯನ್ನು ಅಲ್ಲಿ ನಡೆಸುತ್ತೇವೆಂದು ಮುಂದೆ ಬಂದರೆ ಅಂತಹವರಿಗೆ ಸರ್ಕಾರದವರು ಅನುಮತಿ ಕೊಡುತ್ತಾರೆಯೇ ?

ಅಧ್ಯಕ್ಷರು.—ಹೊನ್ನಾಳಿಯಲ್ಲಿ ಆ ಕಾರ್ಖಾನೆಗೆ ಬೇಕಾಗುವ ಕಚ್ಚಾ ಪದಾರ್ಥಗಳು ಸರಿಯಿಲ್ಲ ಮತ್ತು ಉಪಯೋಗವಾಗುತಕ್ಕದ್ದಲ್ಲವೆಂದು ಮಂತ್ರಿಗಳು ಹೇಳುವಾಗ ಮಾನ್ಯ ಸದಸ್ಯರು ಅದಕ್ಕೆ ಬೇಕಾದ ಪದಾರ್ಥಗಳು ಅಲ್ಲಿ ತುಂಬ ದೊರೆಯುತ್ತವೆಂದರೆ ಹೇಗೆ?

It is a hypothetical question.

Sri D. PARAMESWARAPPA.—Has any research been conducted to state that it is not suitable ?

Sri K. MALLAPPA.—Samples have analysed and they have been found not to be suitable for manufacture of cement.

ಶ್ರೀ ಗಂಗಾಧರ ನಾಮೋಷಿ.—ಹಿಂದೆ ಒಂದು ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಸಿಮೆಂಟ್ ಕೈಗಾರಿಕೆಯನ್ನು ಪಬ್ಲಿಕ್ ಸೆಕ್ಟರ್‌ನಲ್ಲಿ ನಡೆಸುತ್ತೇವೆಂದು ಹೇಳಿ ಈಗ ಖಾಸಗಿಯವರಿಗೆ ಸಿಮೆಂಟ್ ಕಾರ್ಖಾನೆಗಳನ್ನು ನಡೆಸುವುದಕ್ಕೆ ಲೈಸನ್ಸ್ ಕೊಡಲು ಕಾರಣವೇನು ?

Mr. SPEAKER.—It is disallowed.

Survey of Minerals in North Kanara District.

*Q.—179. Sri S. P. PHAYADE (Ankola).—

Will the Govenment be pleased to state :—

(*a*) whether any survey of minerals in North Kanara Distict has been conducted at any time, and if so, who has made the survey ;

(*b*) which are the important minerals that are available there and whether the Government propose to exploit the same ?

A.—Sri K MALLAPPA (Minister for Industries and Commerce).—

(*a*) Mineral survey in selected parts of North Kanara District has been conducted by the Department of Mines and Geology.

(*b*) Iron ore, manganese ore, limestone, kaolin and titaniferous iron ore are the important minerals found to be available in North Kanara District.

Manganese and iron ores near Bisgod, Yellapur Taluk and iron ore near Absarkonda, Honnavar Taluk, are being exploited by the Board of Mineral Development.

ಶ್ರೀ ಎಸ್. ಪಿ. ಫಾಯದೆ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ಸಂಬಂಧಪಟ್ಟ ಇಲಾಖೆಯವರು ನನ್ನ ಜಿಲ್ಲೆಯಲ್ಲಿ ಖನಿಜಗಳ ಬಗ್ಗೆ ಸರ್ವೆ ಕಾರ್ಯವನ್ನು ನಡೆಸಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಎಲ್ಲೋ ಕೆಲವು ಪ್ರದೇಶಗಳಲ್ಲಿ ಖನಿಜಗಳನ್ನು ತೆಗೆದಿರುವುದರಿಂದ ಪೂರ್ತಿ ಜಿಲ್ಲೆಯನ್ನು ಸರ್ವೆ ಮಾಡುವ ವಿಚಾರ ಸರ್ಕಾರಕ್ಕಿಲ್ಲವೇ ?

†ಶ್ರೀ ಕೆ. ಮಲ್ಲಪ್ಪ.—ಈಗ ಆ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಆ ಖನಿಜವೇನೋ ಸಿಕ್ಕುತ್ತದೆ. ಅದನ್ನು ತೆಗೆಯುತ್ತಿದ್ದಾರೆ. ಹೀಗೆಯೇ ಕ್ರಮೇಣವಾಗಿ ಅದರ ಎಕ್ಸ್‌ಪ್ಲಾಯಟೇಷನ್ ಜಿಲ್ಲೆಯನ್ನೆಲ್ಲಾ ಆವರಿಸಿಕೊಳ್ಳಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಕಡೆಯಲ್ಲಿ ಸರ್ವೆಕಾರ್ಯ ನಡೆಯುತ್ತಿದೆ ಎಂದು ಹೇಳುತ್ತಾರೆ. ಇನ್ನೊಂದು ಕಡೆಯಲ್ಲಿ ಇನ್ನೂ ಅಂದಾಜುಗಳೇ ತಯಾರಾಗಿಲ್ಲವೆಂದು ಹೇಳುತ್ತಾರೆ ? ಇದರಲ್ಲಿ ಯಾವುದು ಸರಿ.

ಶ್ರೀ ಕೆ. ಮಲ್ಲಪ್ಪ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಕಬ್ಬಿಣದ ಅದುರು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆಂದು ಉತ್ತರದಲ್ಲಿ ಈಗಾಗಲೇ ಹೇಳಿದೆ. ಇನ್ನು ಕೆಲವು ಪ್ರದೇಶಗಳಲ್ಲಿ ಒಳ್ಳೆಯ ಮ್ಯಾಂಗನೀಸ್ ಸಿಕ್ಕುತ್ತದೆಂದು ವರದಿ ಬಂದಿರುವುದರಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಆ ಖನಿಜಗಳ ಬಗ್ಗೆ ಸರ್ವೆಕಾರ್ಯ ನಡೆಸಿದ್ದಾರೆ.

Sri C. J. MUCKANNAPPA.—You have said in answer to (b) that iron ore, manganese ore, limestone, kaolin and titaniferous iron ore are the important minerals found to be available in North Kanara District. What is the quantity of the four or five minerals which are available there ?

ಶ್ರೀ ಕೆ. ಮಲ್ಲಪ್ಪ.—ಆ ಪ್ರಶ್ನೆಗೆ ಮೊದಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಆರ್. ರಂಗೇಗೌಡ.—(ಬಿ) ಗೆ ಉತ್ತರವಾಗಿ ಹೇಳಿರುವಂತೆ ಬಿಸ್ಗೋಡಿನ ಬಳಿ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದುರು ಶೇಕಡ 35 ರಿಂದ 40 ರಷ್ಟು ಸಿಕ್ಕುತ್ತಿದೆಯಷ್ಟೇ. ಅದು ಬಂದರಿಗೆ ದೂರವಾಗಿದೆ. ಆದರೆ ಅಪ್ಸರಕೊಂಡದ ಬಳಿ ಕಬ್ಬಿಣದ ಅದುರು ಶೇಕಡ 55 ರಿಂದ 60 ರಷ್ಟು ಸಿಕ್ಕುವುದಲ್ಲದೆ ಅದು ಬಂದರಿಗೆ ಬಹಳ ಹತ್ತಿರವಾಗಿದೆ. ಈಗ ಈ ಖನಿಜಗಳ ಉತ್ಪತ್ತಿ ಜಾಸ್ತಿಯಾಗಿದೆಯೆಂದು ಮಿನರಲ್ ಡಿಪಾರ್ಟ್‌ಮೆಂಟಿನವರು ಹೇಳುತ್ತಿರುವಾಗ ಅದನ್ನು ವಿಶೇಷವಾಗಿ ರಫ್ತು ಮಾಡುವುದಕ್ಕಾಗುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ಆ ವಿಷಯದಲ್ಲಿ ಬೇಕಾದಷ್ಟು ಸಲಕರಣೆಗಳನ್ನು ಮತ್ತು ಸಿದ್ಧತೆಗಳನ್ನು ಈಗಾಗಲೇ ಮಾಡಿದ್ದೇವೆ. ಮ್ಯಾಂಗನೀಸ್ ಅದುರು ಮಾನ್ಯ ಸದಸ್ಯರು ಹೇಳಿದಷ್ಟು ದೂರದಲ್ಲಿ ಸಿಕ್ಕುತ್ತದೆಂಬುದನ್ನು ಖಂಡಿತವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇನ್ನೊಂದು ಬಹಳ ಹತ್ತಿರದಲ್ಲಿ ದೊರಕುತ್ತದೆಂದು ಹೇಳಿರತಕ್ಕದು ತಪ್ಪಾಗಲಾರದು. ಯಾವುದೇ ಆಗಲೀ ಅದು ಎಷ್ಟು ಪ್ರಮಾಣದಲ್ಲಿ ಸಿಕ್ಕುತ್ತದೆಂಬುದನ್ನು ಮೊದಲು ನೋಡಬೇಕು. ಒಂದು ವೇಳೆ ಸಾಕಷ್ಟು ಪ್ರಮಾಣದಲ್ಲಿ ದೊರೆಯದೆ ಹೋದರೆ ಮಾಡಿದಂಥ ಕೆಲಸ ವ್ಯರ್ಥವಾಗುತ್ತದೆ. ಆ ಬಗ್ಗೆ ಈಗಾಗಲೇ ತನಿಖೆಯಾಗುತ್ತಿದೆ. ಕಬ್ಬಿಣದ ಅದುರಿಗೆ ಬೇಕಾದಷ್ಟು ಡಿಮ್ಯಾಂಡ್ ಇದೆ. ಆ ಡಿಮ್ಯಾಂಡನ್ನು ಪೂರೈಸದ ಹೊರತು ಏನು ಮಾಡುವುದಕ್ಕೂ ಆಗುವುದಿಲ್ಲ. ಹತ್ತಿರ ಪ್ರದೇಶದಲ್ಲಿ ಯಾವ ಪ್ರಮಾಣದಲ್ಲಿ ಯಾವ ಕ್ವಾಲಿಟಿ ಮತ್ತು ಮಿಶ್ರ ವಸ್ತುಗಳು ಸಿಕ್ಕುತ್ತವೆಂಬುದನ್ನು ತನಿಖೆ ಮಾಡಿ ಒಳ್ಳೆಯ ಕ್ವಾಲಿಟಿ ಸಿಕ್ಕಿದರೆ ಅದನ್ನು ತೆಗೆದುಕೊಳ್ಳಬಹುದು ಸದ್ಯದಲ್ಲಿ ಮ್ಯಾಂಗನೀಸ್‌ಗೆ ಇರತಕ್ಕ ಡಿಮ್ಯಾಂಡ್ ಬಹಳ ಕಡಮೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲಿ ಮ್ಯಾಂಗನೀಸ್ ಅದುರು, ಮತ್ತು ಕಬ್ಬಿಣದ ಅದುರು ಹೇರಳವಾಗಿರುವುದರಿಂದ ಅಲ್ಲಿ ಸರ್ಕಾರದವರು ಒಂದು ಕಬ್ಬಿಣದ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಯೋಚನೆ ಮಾಡುತ್ತಾರೆಯೇ ?

ಅಧ್ಯಕ್ಷರು.—ಕಾರ್ಖಾನೆಗೆ ಬೇಕಾಗುವಷ್ಟು ಅದುರು ಅಲ್ಲಿ ಇಲ್ಲ.

ಶ್ರೀ ಕೆ. ಮಲ್ಲಪ್ಪ.—ಅಪ್ಸರ ಕೊಂಡದ ಹತ್ತಿರ ಸಿಕ್ಕತಕ್ಕಂಥ ಕಬ್ಬಿಣದ ಅದುರು ಏನಿದೆಯೋ ಅದು ಬಹಳ ಕಡಮೆ ದರ್ಜೆಯ ಅದುರು. ಅದು ತೀರ ಪ್ರದೇಶದ ಹತ್ತಿರ ಇರುವುದರಿಂದ ಅದು ಪರದೇಶಕ್ಕೆ ಸಾಗಿಸುವುದಕ್ಕೆ ಅನುಕೂಲವಾದಂತಹ ಅದುರೇ ವಿನಾ ಕಬ್ಬಿಣ ಕಾರ್ಖಾನೆಯನ್ನು ತೆರೆಯುವುದಕ್ಕೆ ಲಾಯಕ್ಕಾದ ಅದುರು ಅಲ್ಲ.

ಶ್ರೀ ಎಸ್. ಪಿ. ಫಾಯದೆ.—ಕಾರವಾರ ಡಿಸ್ಟ್ರಿಕ್ಟಿನಲ್ಲಿ ನಾನಾ ವಿಧವಾದ ಖನಿಜಗಳು ಸಿಕ್ಕುತ್ತಾ ಇರುವುದರಿಂದ ಅದನ್ನು ಉಪಯೋಗ ಮಾಡಿಕೊಂಡು ಯಾವುದಾದರೂ ಒಂದು ಕೈಗಾರಿಕೆ ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಕಾರವಾರದಲ್ಲಿ ಒಂದು ಅಲ್ಯೂಮಿನಿಯಮ್ ಕೈಗಾರಿಕೆಯನ್ನು ತೆರೆಯುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

Laying of a Railway line *via* Kadur-Chickmagalur-Mudigere-Sakaleshpura to link Hassan-Mangalore Railway.

*Q.—190. Smt. B. L. SUBBAMMA (Chickmagalur).—

Will the Government be pleased to state :—

(*a*) whether they have received any representation requesting to lay a Railway line *via* Kadur-Chickmagalur-Mudigere-Sakleshpura so as to link Hassan-Mangalore Railway line ;

(*b*) the steps taken by them in this behalf ?

A.—Sri G. B. SHANKAR RAO (Parliamentary Secretary to the Minister for Public Works).—

(*a*) Yes.

(*b*) It is proposed to consider this matter after the work on the Mangalore-Hassan Railway line starts.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಾಸನ-ಮಂಗಳೂರು ರೈಲು ಮಾರ್ಗಕ್ಕೆ ಸೇರಿಸುವಂತೆ ಕಡೂರು-ಮೂಡಿಗೆರೆ-ಸಕಲೇಶಪುರ ಮಾರ್ಗವಾಗಿ ರೈಲು ಮಾರ್ಗವೊಂದನ್ನು ಏರ್ಪಡಿಸಬೇಕೆಂದು ಕೋರಿ ಮನವಿಯೇನಾದರೂ ಸರ್ಕಾರಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳಿದ್ದೀರಿ, ಅಂಥಾ ಮನವಿಗಳು ಸರ್ಕಾರಕ್ಕೆ ಎಷ್ಟು ವರ್ಷಗಳಿಂದ ಬರುತ್ತಿವೆ ? ಈ ಬಗ್ಗೆ ಸರ್ಕಾರದವರು ಏನಾದರೂ ಕ್ರಮವನ್ನು ಕೈಗೊಂಡಿದ್ದಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—1955ನೇ ಇಸವಿಯಿಂದಲೂ ಸರ್ಕಾರಕ್ಕೆ ಮನವಿಗಳು ಬರುತ್ತಿವೆ. ಹಾಸನ-ಮಂಗಳೂರು ರೈಲ್ವೆ ಲೈನನ್ನು ಹಾಕಿಸಬೇಕೆಂದು ಕೇಳಿದಾಗಿನಿಂದಲೂ ಆ ಲೈನನ್ನೂ ಹಾಕಿಸಿಕೊಡಬೇಕೆಂದು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದೇವೆ. ಮತ್ತು ಆ ಬಗ್ಗೆ ಅವರೊಡನೆ ಆಲೋಚನೆಯನ್ನು ಕೂಡ ಮಾಡಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಆ ಲೈನಿನ ಸರ್ವೆ ಏನಾದರೂ ನಡೆದಿದೆಯೇ ? ಅದರ ವರದಿಯನ್ನೇನಾದರೂ ಕೇಂದ್ರ ಸರ್ಕಾರದಿಂದ ತರಿಸಿಕೊಂಡಿದ್ದೀರಾ ?

ಶ್ರೀ ಜಿ. ಬಿ. ಶಂಕರರಾವ್.—1955ನೇ ಇಸವಿಯಲ್ಲಿಯೇ ಟ್ರಾಫಿಕ್ ಸರ್ವೆ ಆಗಿದೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—(b)ಗೆ ಉತ್ತರವಾಗಿ ಮಂಗಳೂರು-ಹಾಸನ ರೈಲು ಮಾರ್ಗಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಪ್ರಾರಂಭಿಸಿದನಂತರ ಈ ವಿಷಯವನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ, ಮಂಗಳೂರು-ಹಾಸನ ರೈಲು ಮಾರ್ಗ ಪ್ರಾರಂಭವಾಗುವುದಕ್ಕೆ ಮುಂಚೆಯೇ ಚಿಕ್ಕಮಗಳೂರು-ಮೂಡಿಗೆರೆ-ಸಕಲೇಶಪುರ ಲೈನನ್ನು ಪರಿಶೀಲನೆ ಮಾಡುವುದಕ್ಕೆ ಏನು ಅನಾನುಕೂಲ ಇದೆ ?

ಶ್ರೀ ಜಿ. ಬಿ. ಶಂಕರರಾವ್.—ಕೇಂದ್ರ ಸರ್ಕಾರದವರು ಹಾಸನ-ಮಂಗಳೂರು ರೈಲ್ವೆ ಲೈನನ್ನು ಪ್ರಾರಂಭ ಮಾಡುವುದಕ್ಕೇ ಇಷ್ಟು ವರ್ಷಗಳಕಾಲ ಆಯಿತು. ಇನ್ನೊಂದು ರೈಲ್ವೆ ಲೈನನ್ನು ಹೇಳಿದರೆ ಆಗುವುದಿಲ್ಲ ಎಂದು ನಾವು ಅದನ್ನು ಕೇಳಲಿಲ್ಲ.

Sri G. V. GOWDA.—In view of the fact that the Mangalore-Hassan railway line has become a certainty, what is the impediment to consider this proposal ?

Sri G. B. SHANKARA RAO.—It has no doubt become a certainty but this can be taken up only after the Government of India gives sanction to the construction of the line.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮಲೆನಾಡಿನಿಂದ ಬೇರೆ ಪ್ರದೇಶಗಳಿಗೆ ಕಾಫೀ, ಏಲಕ್ಕಿ, ಬತ್ತ, ತೇಗದ ಮರ ಇವುಗಳನ್ನು ಸಾಗಿಸಬೇಕಾಗುತ್ತದೆ. ಸುಮಾರು 100 ಮಿಲಿಯನ್‌ನಷ್ಟು ಕಬ್ಬಿಣದ ಅದುರು ಮಲೆನಾಡಿನಿಂದ ಬೇರೆ ಕಡೆಗೆ ರಫ್ತಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದಲೂ ಹಾಸನ-ಮಂಗಳೂರು ರೈಲು ಮಾರ್ಗಕ್ಕೆ ಸೇರಿಸುವಂತೆ ಕಡೂರು-ಚಿಕ್ಕಮಗಳೂರು-ಮೂಡಿಗೆರೆ-ಸಕಲೇಶಪುರ ಮಾರ್ಗವಾಗಿ ರೈಲು ಮಾರ್ಗವೊಂದನ್ನು ಏರ್ಪಡಿಸುವುದು ಉತ್ತಮವಾಗಿದೆ. ಆದ್ದರಿಂದ ಇದನ್ನು ನಾಲ್ಕನೇಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಅದನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ತೋರಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಚಿಕ್ಕಮಗಳೂರು-ಮೂಡಿಗೆರೆ-ಸಕಲೇಶಪುರದ ರೈಲ್ವೆ ಲೈನಿನ ಸರ್ವೆ ಕಾರ್ಯವನ್ನು ಮಾಡುವಾಗ ಬೇಲೂರು ಮಾರ್ಗವಾಗಿ ರೈಲ್ವೆ ಲೈನನ್ನು ಹಾಕುವ ಸಂಬಂಧದಲ್ಲಿ ಅದನ್ನೂ ಸಹ ಸರ್ವೇ ಮಾಡುವುದಕ್ಕಾಗಿ ಅದರಲ್ಲಿ ಸೇರಿಸುವುದು ಒಳ್ಳೆಯದಲ್ಲವೇ ?

ಶ್ರೀ ಜಿ. ಬಿ. ಶಂಕರರಾವ್.—ಮೊದಲು ಈ ಕೆಲಸ ಆಗಲಿ. ಆಮೇಲೆ ಅದನ್ನು ನೋಡೋಣ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಂಗಳೂರು-ಹಾಸನ ರೈಲ್ವೆ ಲೈನನ್ನು ಹಾಸನದಲ್ಲೇ ನಿಲ್ಲಿಸುವುದಕ್ಕೆ ಬದಲಾಗಿ ಅಲ್ಲಿಂದ ಮುಂದಕ್ಕೆ ತೆಗೆದುಕೊಂಡು ಬಂದು ತಿಪಟೂರಿಗೆ ಸೇರಿಸಿದರೆ ಒಳ್ಳೇಯದಲ್ಲವೇ ?

Mr. SPEAKER.—Has Sri Keshava Murthy consulted the Hon. Member from Tiptur Constituency ? (*Laughter*).

Schemes for the Grant of Land for Building purposes to ex-Servicemen in the State.

*Q.—197. Sri P. F. D'MELLOW (Nominated).—

Will the Government be pleased to state :—

(a) what schemes, if any, exist for the grant of land for building purposes to ex-servicemen in the State;

(b) what land has already been granted for this purpose (District-wise information may be furnished);

(c) what is the agency through which these grants are made;

(d) whether adequate machinery exists for all ex-servicemen in the State to be made aware of these schemes;

(e) whether any class of ex-servicemen is excluded from these schemes and if so, why?

A.—Sri M. V. KRISHNAPPA (Minister for Revenue).—

(a) No special scheme exists for ex-servicemen.

(b) Information regarding the area granted to ex-servicemen is not separately available.

(c) The claims of ex-servicemen are considered by the revenue authorities along with the claims of other applicants.

(d) and (e) Do not arise in view of reply to clause (a).

Sri P. F. D'MELLOW.—Will the Government be pleased to call for and examine any scheme or schemes that are known to exist in other States with a view to determine whether they could be applied here?

Sri M. V. KRISHNAPPA.—There is no need for any separate scheme for grant of land to ex-servicemen. We have already decided to give a certain percentage of reservation out of the surplus land available for ex-servicemen and families of servicemen who are fighting on the borders. Everyday we are granting land to these people.

Sri J. P. SARVESH.—What is the number of applications received from ex-servicemen and how many have been granted lands?

Sri M. V. KRISHNAPPA.—I cannot give the figure off-hand. There are thousands of granting authorities and everyday we are granting lands.

Sri G. V. GOWDA.—The question pertains to grant of land to ex-servicemen for building purposes and not for cultivation. Does the Revenue Minister mean that lands are reserved for ex-servicemen even in respect of building sites?

Sri M. V. KRISHNAPPA.—We are not concerned with the sanction of lands for building purposes but in the lands sanctioned they are at liberty to build houses.

Sri G. V. GOWDA.—I want to know if any preference is given to ex-servicemen in the allotment of sites in Bangalore or Mysore?

Sri M. V. KRISHNAPPA.—We do not have any such scheme.

Total Amount provided for Ore Carrying Road between Banasandra and Hassan

*Q.—285. Sri H. R. KESHAVA MURTHY (Gandasi).—

Will the Government be pleased to state:—

(a) the total amount provided in the estimate for the Ore Carrying road between Banasandra and Hassan towards the cost of acquisition of private land required for road purposes;

(b) the amount spent so far towards payment of compensation;

(c) the extent of private lands acquired for road purposes;

(d) the amount provided for compensation per acre for (1) Dry, (2) Wet and (3) Bagayat lands taken over for road purposes?

A.—Sri G. B. SHANKAR RAO (Parliamentary Secretary to the Minister for Public Works).—

(a) Rs. 74,000

(b) Nil.

(c) Nil so far.

(d) Only lumpsum provision is made in the estimate and the actual rate fixed by the Acquisition Officer will be paid.

Sri H. R. KESHAVA MURTHY.—Answer to (c) is 'nil'. But the Government have fixed the boundary marks. What is the extent required for road purpose?

Sri G. B. SHANKAR RAO.—The actual extent of land required for formation will be known only after the land survey is over.

Sri H. R. KESHAVA MURTHY.—The Government have already fixed the boundary marks.

Sri G. B. SHANKAR RAO.—It is for the revenue Department to get the land surveyed. We have initiated land acquisition proceedings.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಅಕ್ವಿಜಿಷನ್ ಆಫೀಸರು ಇದುವರೆಗೂ ನಿಗದಿ ಮಾಡಿರತಕ್ಕ ದರ ಎಷ್ಟು, ಸ್ವಾಮಿ?

ಶ್ರೀ ಜಿ. ಬಿ. ಶಂಕರ ರಾವ್.—ಇನ್ನೂ ದರವನ್ನು ನಿಗದಿ ಮಾಡಿಲ್ಲ.

Sri H. R. KESHAVA MURTHY.—Government are prohibiting the ryots to grow crops on the lands in respect of which boundary marks have been fixed. Under what authority are the Government prohibiting the ryots?

Sri G. B. SHANKAR RAO.—That has not come to our notice.

ಶ್ರೀ ಎಸ್. ಗೋಪಾಲ ಸಾಲೆನ್ನ.—ಬಡ್ಜೆಟ್ಟಿನಲ್ಲಿ 74 ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ಸರ್ವೆ ಆಗಿ, ಎಸ್ಟಿಮೇಟ್ ಎಲ್ಲ ತಯಾರು ಮಾಡಿ ಹಣವನ್ನು ಕೊಟ್ಟಿದ್ದೀರೊ? ಅಥವಾ ಬಡ್ಜೆಟ್ಟಿನಲ್ಲಿ ಹಾಗೆಯೇ ತೋರಿಸಿದ್ದೀರೋ?

Sri G. B. SHANKAR RAO.—Sir, these are only estimates and actual amount will be known later.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ರಸ್ತೆ ಕೆಲಸ ಮುಗಿಯುತ್ತ ಬಂದಿದೆಯಲ್ಲವೇ, ಸ್ವಾಮಿ?

ಶ್ರೀ ಜಿ. ಬಿ. ಶಂಕರರಾವ್.—ಈ ಕೆಲಸವಾಗಬೇಕಾದರೆ ಇನ್ನೂ ನಾಲ್ಕು ತಿಂಗಳಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರಸ್ತೆ ಕೆಲಸಕ್ಕೆ, ರಸ್ತೆಯನ್ನು ಅಗಲ ಮಾಡುವುದಕ್ಕೆ ಎಷ್ಟು ಜಮೀನು ಅಕ್ವೈರು ಮಾಡಿಕೊಳ್ಳಬೇಕು ಎಂದು ಇವತ್ತಿನವರೆಗಾದರೂ ರವೆನ್ಯೂ ಇಲಾಖೆಗೆ ಬರೆದಿದ್ದೀರಾ, ಸ್ವಾಮಿ?

ಶ್ರೀ ಜಿ. ಬಿ. ಶಂಕರರಾವ್:—ರೆವೆನ್ಯೂ ಇಲಾಖೆಗೆ ಬರೆದಿದ್ದೇವೆ?

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಈ ರಸ್ತೆ ಕೆಲಸ ಮುಗಿಯುತ್ತದೆ ಎಂದು ಹೇಳಿದರು. ಇದು ಮುಗಿಯುತ್ತ ಇರಬೇಕಾದರೆ ಅಕ್ವಿಜಷೆನ್ನಿಗಾಗಿ ಒಪಗಿಸಿರುವ 74,000 ರೂಪಾಯಿಗಳಲ್ಲಿ ಒಂದು ಆಣೆಯನ್ನಾದರೂ ಖರ್ಚು ಮಾಡಿ ಜಮೀನನ್ನು ಅಕ್ವೈರ್ ಮಾಡಿದ್ದೀರಾ?

ಶ್ರೀ ಜಿ. ಬಿ. ಶಂಕರರಾವ್.—ಹೊಸದಾಗಿ ರಸ್ತೆಯನ್ನು ಮಾಡುವ ಪ್ರಶ್ನೆಯಿಲ್ಲ. ಇದ್ದ ರಸ್ತೆಯನ್ನು ಅಗಲ ಮಾಡುತ್ತಿದ್ದೇವೆ. ಈಗ ಕೊನೆಯ ಹಂತದಲ್ಲಿದ್ದೇವೆ. ಕರ್ವ್‌ಗಳನ್ನು ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊನ್ನೆಯ ದಿನ ಲೋಕೋಪಯೋಗಿ ಮಂತ್ರಿಗಳು ಶ್ರೀ ಜಿ ವಿ ಗೌಡರ ಪ್ರಶ್ನೆಗೆ ಉತ್ತರ ಕೊಡುತ್ತ ಇಲಾಖೆಯಲ್ಲಿ ಯಾವ ಯಾವ ರಸ್ತೆಯು ಅಗಲ ಎಷ್ಟಿರಬೇಕು ಎಂಬ ಬಗ್ಗೆ ಒಂದು ಸ್ಟ್ಯಾಂಡರ್ಡ್ ಇದೆ, ಆ ಪ್ರಕಾರ ಮಾಡಬೇಕು ಎಂದು ಹೇಳಿದರು. ಆ ಸ್ಟ್ಯಾಂಡರ್ಡ್ ಪ್ರಕಾರ ಮಾಡಬೇಕಾದರೆ ಎಷ್ಟು ಭೂಮಿ ಬೇಕು ಎನ್ನುವುದು ಸರ್ಕಾರಕ್ಕೆ ಮಾನವರಿಕೆಯಾಗಿದೆಯೇ, ಸ್ವಾಮಿ ?

ಶ್ರೀ ಜಿ. ಬಿ. ಶಂಕರರಾವ್.—24 ಅಡಿಯಿಂದ 32 ಅಡಿಯವರೆಗೆ ಇರಬೇಕು ಎಂದು ಹಾಕಿಕೊಂಡಿದ್ದೇವೆ. The width of the road now as we have taken for formation is 32 feet. This is a road existing already and it is a question of only widening it.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ರೈತರನ್ನು ಹೆದರಿಸಿ, ಬೌಂಡರಿ ಕಲ್ಲುಗಳನ್ನು ಫಿಕ್ಸ್ ಮಾಡಿ ಆ ಏರಿಯಾದಲ್ಲಿರುವ ಜಮೀನಿನಲ್ಲಿ ಕಲ್ಲು ಮಣ್ಣು ಎಲ್ಲ ತೆಗೆದುಕೊಂಡು ರಸ್ತೆಗೆ ಉಪಯೋಗಿಸಿಕೊಂಡು ನಾವು ಏನೂ ಮುಟ್ಟಿಲ್ಲ ಎಂದು ಹೇಳುತ್ತೀರಿ. ಇಂಥ ಉತ್ತರವನ್ನು ಕೊಡುವುದೇ, ಸ್ವಾಮಿ ?

†ಶ್ರೀ ವೀರೇಂದ್ರ ಪಾಟೀಲ್.—(ಲೋಕೋಪಯೋಗಿ ಶಾಖೆಯ ಮಂತ್ರಿಗಳು) ಮಾನ್ಯ ಸದಸ್ಯರು ಹೊಸದಾಗಿ ರಸ್ತೆಯನ್ನು ಮಾಡುತ್ತಿದ್ದೇವೆ, ಅದಕ್ಕೆ ರೈತರ ಭೂಮಿಯನ್ನೆಲ್ಲ ಕಿತ್ತುಕೊಳ್ಳುತ್ತಿದ್ದೇವೆ ಎನ್ನುವಂತ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಆ ರಸ್ತೆಯಲ್ಲಿ ಅದಿರನ್ನು ಸಾಗಿಸಬೇಕು ಎಂದು ಓರ್ ಕ್ಯಾರಿಯಿಂಗ್ ರೋಡ್ ಪ್ರೋಗ್ರಾಂ ಪ್ರಕಾರ ಬಾಣಸಂದ್ರ-ಹಾಸನ ಮಂಗಳೂರು ರಸ್ತೆಯನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದವರು ಅರ್ಧದಷ್ಟು ಸಹಾಯ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಅದರ ಸಲುವಾಗಿ ಮತ್ತು ಅವರು ಹೇಳಿದಂತೆ, ಅವರ ಸ್ಪೆಸಿಫಿಕೇಷನ್ ಪ್ರಕಾರ ಕೆಲಸ ಮಾಡುತ್ತಿದ್ದೇವೆ. ಇದು ಮೇಜರ್ ಡಿಸ್ಟ್ರಿಕ್ಟ್ ರೋಡ್. ಸಾಮಾನ್ಯವಾಗಿ ಏನು ಮಾಡುತ್ತಿದ್ದಾರೆಂದರೆ, ರೋಡ್ ಬೌಂಡರಿ ಇದ್ದರೂ ಜನ ಅಲ್ಲಿರುವ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳುತ್ತಾರೆ. ಒತ್ತುವರಿ ಮಾಡಿಕೊಂಡ ನಂತರ ಬೆಳೆಯನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಮಗೆ ಫಾರ್ಮೇಷನ್ ವಿಡ್ತ್ 24 ಅಡಿ ಇದ್ದುದನ್ನು 32 ಅಡಿ ಮಾಡಬೇಕಾದಾಗ ಹೆಚ್ಚಿನ ಭೂಮಿ ಬೇಕಾಯಿತು. ನಮ್ಮದು ಎಷ್ಟು ರೋಡ್ ಬೌಂಡರಿ ಇದೆಯೋ ಅದನ್ನು ಬಿಟ್ಟುಕೊಡಿ, ಆ ಭೂಮಿಯನ್ನು ಒತ್ತುವರಿ ಮಾಡಕೂಡದು ಎಂದು ಹೇಳಿದರೆ ಅವರು ನಾವೇ ಒತ್ತುವರಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅನೇಕ ಕಡೆ ರೋಡ್ ಬೌಂಡರಿ ಕಲ್ಲುಗಳಿದ್ದರೂ ಅಲ್ಲಿರುವ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಬೆಳೆ ತೆಗೆಯುತ್ತಿದ್ದಾರೆ. ರೋಡ್ ಬೌಂಡರಿ ಏಕೆ ಹಾಕುತ್ತೇವೆ ಎಂದರೆ ಮುಂದೆ ರಸ್ತೆಯನ್ನು ಅಗಲ ಮಾಡಲು ಅನುಕೂಲವಾಗಲಿ ಎಂದು. ಒತ್ತುವರಿ ಮಾಡಿಕೊಂಡಿರುವ ನಮ್ಮ ಭೂಮಿಯನ್ನು ನಮಗೆ ಬಿಟ್ಟುಬಿಡಿ ಎಂದರೆ ಈ ರೀತಿಯ ಪ್ರಶ್ನೆಗಳು ಇಲ್ಲಿ ಬರುತ್ತಿವೆ.

Mr. SPEAKER:—Has any notification been issued under the Land Acquisition Act in this mattter ?

Sri H. R. KESHAVA MURTHY.—No. Sir. Survey numbers have been encroached up on for widening the road.

Mr. SPEAKER.—Will the Hon'ble member kindly tell the Chair if any notification under the Land Acquisition Act has been issued ?

Sri H. R. KESHAVA MURTHY.—There is no notification, Sir. ರೈತರನ್ನು ಹೆದರಿಸಿ ಕಲ್ಲು ಹಾಕಿ ಹೋಗಿದ್ದಾರೆ.

Mr. SPEAKER.—Is he sure that private land is encroached upon ? Would he give me any particulars?

Sri H. R. KESHAVA MURTHY.—I will give the survey numbers, Sir.

Sri C. J. MUCKANNAPPA.—What was the width of that road originally and how much is sought to be widened ?

Sri VEERENDRA PATIL.—Originally the formation width was 24 feet. According to the latest specification, it is going to be 32 feet

Sri G. V. GOWDA.—Is it the opinion of the Government that there is no need to acquire any land for widening this road ?

Mr. SPEAKER.—When it is said that no notification is issued, it means all this is happening on Government land.

Sri G. V. GOWDA.—Then, why should they provide 74,000 rupees? It is provided for acquisition.

Sri VEERENDRA PATIL.—That amount has been provided in order to straighten the curves.

Sri G. V. GOWDA.—It means acquisition, Sir.

Mr. SPEAKER.—I will hold over the question. The Hon'ble Member may kindly give the particulars.

Sri VEERENDRA PATIL.—Sir, whatever information Hon'ble Members want, I am prepared to furnish. I am fully equipped with all the information. If they are not in a position to put specific questions, I cannot help.

Mr. SPEAKER.—Now, the Hon'ble Minister will kindly see question (a) "the total amount provided in the estimate for the Ore Carrying road between Banasandra and Hassan towards the cost of acquisition of private land required for road purposes". The answer is Rs. 74,000. So, this sum of Rs. 74,000 is for the acquisition of private land. That means there is some land which is going to be acquired. There must be a notification for this. I want all this to be clarified.

Sri VEERENDRA PATIL.—We have provided Rs. 74,000 in order to straighten the road where there are curves. We have not yet tackled that. When we tackle that, we appoint the Land Acquisition Officer and after all the proceedings are over and the award is passed, we will pay. But, that has not yet been tackled.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.–ಇಂಥ ಅಸತ್ಯವನ್ನು ತಾವು ನುಡಿಯಬಾರದು.

Mr. SPEAKER.—Sri Keshava Murthy may please note that enthusiasm should not over-run decency.

1-00 P.M.

Sri S. SIVAPPA.—Will the Government be pleased to state whether the road between Hassan and Banasandra has been straightened and broadened and if so, on whose land has it been broadened ? According to the specification, this Hassan-Banasandra road is a wide road ...

Mr. SPEAKER.—Will it not be better to hold over this question ?

Sri VEERENDRA PATIL.—If the Hon'ble Speaker feels that it is to be held-over, I have no objection. So far as the Government side is concerned, I have got full information. But, if the Members are not in a position to put specific questions, we are not to be blamed.

Mr. SPEAKER.—If I do not feel so I would not put that to the House. I felt that there was something which required clarification. If the Hon'ble Minister feels that he has got information on all the points ready, I need not hold-over the question.

Sri S. SIVAPPA.—The Hon'ble Minister was pleased to say that wherever they wanted land for straightening the road, the acquisition proceedings would be instituted. The Hassan-Banasandra road is almost complete. Some lands have been encroached upon. How did he do it without increasing acquisition proceedings?

Sri VEERENDRA PATIL.—Sir, it appears that the Hon'ble the Leader of the Opposition did not follow the reply just now given. This is a ore carrying road that is being made. There is already a road; there is no question of forming a new road. In order to acquire only the land that is required for straightening the curves, a lumpsum provision has been provided. The work has not been taken up. Therefore, we could not initiate the land acquisition proceedings.

Sri C. J. MUCKANNAPPA.—Sir, when you felt that there was some confusion in the question and answer, you expressed that it might be held-over. Again, you have allowed us to put supplementaries after reconsideration. Let it be held-over, because you wanted some information from Sri Keshava Murthy.

Mr. SPEAKER.—I am entitled to revise my opinion. There is nothing in the Rules which prevents the chair......

Sri C. J. MUCKANNAPPA.—It will be convenient to us also if he holds-over the question.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಇದು ಜಿಲ್ಲಾಬೋರ್ಡಿನ ರಸ್ತೆಯಾಗಿದ್ದಾಗ 66 ಅಡಿ ಅಗಲವಿತ್ತು. ಈಗ 120 ಅಡಿ ಆಗಿ ಡ್ರೇನ್ಸ್ ಅಗೆದು ಖಾಸಗಿಯವರ ಭೂಮಿಯನ್ನು ಎನ್‌ಕ್ರೋಚ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲವೆಂದು ಹೇಳಿದ್ದೇನೆ, ಸರಕಾರಿ ಭೂಮಿಯಲ್ಲಿ ಮಾಡಿದ್ದಾರೆ

ಶ್ರೀ ಎಸ್. ಎಂ. ಕೃಷ್ಣ.—ಡ್ರೇನ್ಸ್ ಅಗೆದು ರಸ್ತೆಯನ್ನು 120 ಅಡಿ ಮಾಡಿರುವುದು ಗೊತ್ತಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ. That information is not available.

Sri S. M. KRISHNA.—Sir, how did he say that he had got all the information? That is a relevant piece of information that we would like to have.

Sri S. SIVAPPA.—A relevant question has been put by the Member of the constituency that trenches have been formed on the private lands on both sides and the Government has no information. Then how did he say that he had got all the information?

Sri VEERENDRA PATIL.—I could not follow the supplementary.

Mr. SPEAKER.—Sri Sivappa may kindly repeat it.

ಶ್ರೀ ಎಸ್. ಶಿವಪ್ಪ.—ಆ ಕ್ಷೇತ್ರದ ಸದಸ್ಯರು ಖುದ್ದಾಗಿ ಹೋಗಿ ನೋಡಿ, ಬಂದು ಖಾಸಗಿಯವರ ಭೂಮಿಯನ್ನು ತೆಗೆದುಕೊಂಡಿರುವುದನ್ನು ಸರ್ಕಾರದ ಗಮನಕ್ಕೆ ತಂದರೂ ಸರ್ಕಾರದವರು ತಮಗೆ ಗೊತ್ತಿಲ್ಲವೆಂದು ಹೇಳಿದ್ದಾರೆ. ಇದರಿಂದಲೇ ಗೊತ್ತಾಗುತ್ತದೆ ಅವರ ಫೈಲಿನಲ್ಲಿ ಇದರ ಬಗ್ಗೆ ಸಾಕಷ್ಟು ವಿವರಣೆಗಳಿಲ್ಲವೆಂದು ಇದರಿಂದ ಗೊತ್ತಾಗುವುದಿಲ್ಲವೆ ಸಾಕಷ್ಟು ಸಮಾಚಾರ ಅವರಲ್ಲಿ ಇಲ್ಲವೆಂದು !

Mr. SPEAKER.—That is disallowed.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದಿನ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆ 60 ಅಡಿ ತಾನೆ ಇದ್ದುದು? ಈಗ ಅದನ್ನು 120 ಅಡಿ ಮಾಡಬೇಕಾದರೆ ಅದಕ್ಕೆ ಜಮೀನು ಎಲ್ಲಿಂದ ಬಂತು ?

ಶ್ರೀ ವೀರೇಂದ್ರ ಪಾಟೀಲ್.—ನಮಗೆ ಭೂಮಿ ಬೇಕಾಗಿರುವುದು ಆ ರಸ್ತೆಯ ಕರ್ವ್ಸ್ ಎಂದರೆ ಡೊಂಕುಗಳನ್ನು ಸರಿಮಾಡುವುದಕ್ಕೆ, ಅದಕ್ಕಾಗಿ 74 ಸಾವಿರ ರೂಪಾಯಿ ಇಟ್ಟುಕೊಂಡಿದ್ದೇವೆ. ಪೂರ್ತಿ ರಸ್ತೆಯ ಅಗಲ ಮತ್ತಿತರ ವಿಷಯಗಳ ಬಗ್ಗೆ ಮಾಹಿತಿ ಬೇಕಾದರೆ ಈ ಪ್ರಶ್ನೆಯನ್ನು ಮುಂದೆ ಹಾಕಬಹುದು. ರಸ್ತೆಯ ಬೌಂಡರಿ ಎಷ್ಟು ಇತ್ತು, ಈಗ ಎಷ್ಟಿದೆ ಎಂಬುದನ್ನು ಹೇಳಿದ್ದೇನೆ. ಮಾನ್ಯಸದಸ್ಯರಿಗೆ ಇನ್ನೂ ಹೆಚ್ಚು ಸಮಾಚಾರ ಬೇಕಾದರೆ ಅದನ್ನು ಕೊಡುವುದಕ್ಕೆ ಸಿದ್ಧ.

Mr. SPEAKER.—A copy of the plan may be supplied. Will Sri Keshava Murthy furnish the Survey number of the land which he says have been encroached upon belonging to private parties ?

Sri H. R. KESHAVA MURTHY.—Sir, I want four days' time.

Mr. SPEAKER.—I will grant one week's time to furnish the names, survey numbers, extent of land and names of persons who own them.

Sri S. SIVAPPA.—The Government is in a better position to get information earlier.

Sri H. R. KESHAVA MURTHY.—I am prepared to furnish the information, but the Hon'ble Minister will have to give me the co-operation I need.

Mr. SPEAKER.—I want the co-operation of all the Members.

Statement made by the Hon'ble Chief Minister of Maharashtra regarding transfer of some areas of Mysore State to Maharashtra.

*Q.—320. Sri M. N. NAGHNOOR (Sampagaon-II).—

Will the Government be pleased to state.—

(a) whether they are aware of the repeated statements made by the Hon'ble Chief Minister of Maharashtra regarding the transfer of some areas of Mysore State to Maharashtra ;

(b) whether they intend to make a policy statement in the House about the stand of Mysore Government ?

A.—Sri B. D. JATTI (Minister for Finance) [on behalf of SRI S. NIJALINGAPPA (Chief Minister)].—

(a) No. No such statement has been brought to the notice of the State Government officially.

(b) This does not arise. But the policy of the State Government has been known all along.

Sri M. N. NAGHNOOR.—Will the Government be pleased to re-state the stand of the Mysore State in respect of the borders of the contiguous to the Maharashtra State ?

Sri B. D. JATTI.—Sir, the case of the Government has been placed before this House and before the Council 101 times. Yet, if the Hon'ble Member wants to know the case of Mysore I am prepared to restate it :

The case of the Government of Mysore is that in view of the decision of the Parliament as embodied in the States Reorganisation Act,

(SRI B. D. JATTI)

the *status quo* should be maintained. The time-old demands for the distribution of provinces on a linguistic basis have been ultimately set at rest by the parliament in 1956. These decisions are final and admit of no further changes.

SRI B. P. KADAM.—Does it apply to Kasargod, Madakasira and South Sholapur?

MR. SPEAKER.—This matter has been thrashed out thread-bare and fibre-bare. And then there is the Budget Debate coming in. I do not therefore propose to allow anything this way or that way.

SRI B. P. KADAM.—Supplementaries arise on this question.

MR. SPEAKER.—But they should be allowed by the Speaker. If I allow one, I will have to allow others also.

SRI B. P. KADAM.—These supplementaries are *intra vires*.

MR. SPEAKER.—It may be *intra vires* but every supplementary need necessarily be allowed. Within the short time that is available today for Questions, there is one more Question to be taken up and two questions have been passed over. This matter has been discussed at least thousands times.

SRI S. M. KRISHNA.—Still it has not been solved.

MR. SPEAKER.—Are supplementaries going to solve it? Is it the desire of the House that supplementaries should be allowed on this Question?

HON'BLE MEMBERS.—No.

SRI C. J. MUCKANNAPPA.—Sir, it is your inherent powers to allow a supplementary or not.

MR. SPEAKER.—But still, I wanted to take the sense of the House. In exercising my discretion my safest refuge is the desires of the House. If the desires of the House are expressed, my decision is accordingly shaped. What is my power except that it is a reflection of the will of the House?

SRI S. M. KRISHNA.—Sir, as for the theory that you just now propounded— discretion of the Chair and reflection of the House... etc. Every time when an inconvenient question is put, naturally the House would try to avoid that question; and if the same rule is to be applied to every question, then I am afraid, it will be circumventing......

MR. SPEAKER.—What does the member want me to do?

SRI G. V. GOWDA.—The Speaker's opinion should prevail.

MR. SPEAKER.—I expressed the opinion that this border Question was discussed many times and even yesterday, it was taken up.

I want to hear Sri B. R. Sunthankar.

SRI B. R. SUNTHANKAR.—May I submit, Sir, that a new point has been raised in this question that very recently the Chief Minister of Maharashtra has made certain statements on the floor of the Maharashtra Assembly. This is a new question and we want to have certain clarifications on that point. What are the reactions of this Government on that new point, we want to know, Sir.

Mr. SPEAKER.—The Hon'ble Member will have ample opportunities in the course of the Budget Debate. It can be raised without any difficulty at all.

Sri B. R. SUNTHANKAR.—The Border question cannot be raised dusing the budget discussion, Sir.

Mr. SPEAKER.—What does the member mean ? Then can I take it that this subject will not be raised during the Budget discussion ? I expect no Member to rise the border Question. In that case I will allow ten minutes.

Sri B. P. KADAM.—When the question is on the anvil why should not supplementaries be put, Sir ?

Mr. SPEAKER.—The Members will be bound by it. Sri Sunthankar says that he cannot refer to the border question in the course of Buget discussion. If that is the case, I will permit supplementaries now and finish it.

Sri B. P. KADAM.—What is the stand of the Government on Kasargod, Madakasira, South Sholapur and Akkalkot?

Mr. SPEAKER.—How does it arise ?

Sri B. P. KADAM.—Certainly it arises.

Mr. SPEAKER.—Then I disallow that question.

Sri B. P. KADAM.—You have great animus against us.

Sri M. V. RAMA RAO.—The Hon'ble Member Sri B. P. Kadam said that the Speaker has animus against him.

Sri B. P. KADAM.—I said, 'against Members' who claim Marathi areas to go to Maharashtra.

Mr. SPEAKER.—Will the Hon'ble Member kindly withdraw it ?

Sri B. P. KADAM.—If it is not a fact, I will withdraw it.

Mr. SPEAKER.—He has to make up his mind. If he likes to repeat it, I will have to take action against him.

Sri B. P. KADAM.—If the Hon'ble Speaker says it is not a fact, I will withdraw it.

Mr. SPEAKER.—I do not want any condition. Is the Hon'ble withdrawing it ?

Sri B. P. KADAM.—I did not mean like that, Sir.

Mr. SPEAKER.—I do not want any meanings. Will he withdraw it ?

Sri B. P. KADAM.—If it is like that, I withdraw it.

Mr. SPEAKER.—Let the Hon'ble Member not put any pre-condition. I want to know whether he will withdraw it unconditionally.

Sri B. P. KADAM.—I have already said that if it is not so, I withdraw it.

Mr. SPEAKER.—I do not want 'ifs'. I want him to withdraw it unconditionally without any 'ifs'.

Sri B. P. KADAM.—I have already said, that if it is so I have withdrawn it.

Mr. SPEAKER.—I do not want any condition, I have given him three chances.

Sri B. P. KADAM.—I have said that if it is so, I have withdrawn it unconditionally.

Mr. SPEAKER.—Does Sri Kadam understand English or not?

Sri B. P. KADAM.—I have studied English, Sir.

Mr. SPEAKER.—I do not want any conditional withdrawal. If he attributes animus, let him say so clearly; Let him have the courage to say so?

Sri B. P. KADAM.—I have said that I have withdrawn it. Is it sufficient?

Mr. SPEAKER.—Is he putting a question? What is the meaning of his saying 'is it sufficient' After all, there must be a limit. I am trying to give as much chance as possible......

Sri B. P. KADAM.—I have also got some experience in parliamentary procedure.

Mr. SPEAKER.—Should he sit down and talk? The Hon'ble Member must stand and speak.

Sri B. P. KADAM.—If I stand, I am fired. What am I to do?

Mr. SPEAKER.—What is it that the Hon'ble Member means by that? I want an explanation from the member.

Sri B. P. KADAM.—What explanation am I required to give?

Mr. SPEAKER.—He said that he was fired. He said that, sitting.

Sri B. P. KADAM.—I just inadvertently sat down and uttered a word or two. When I was threatened I uttered a word or two without standing. I casually stated the position.

Mr. SPEAKER.—After repeated warnings for the fourth or fifth time he says that he withdraws and then he makes a remark. Is that the kind of apology to be given to the House? Is that the reply to the House?

Sri B. P. KADAM.—I have got respect for the House and also for the Chair and I also know my responsibilities.

Mr. SPEAKER.—But the way he is behaving, it looks that he is not in the House.

Sri C. J. MUCKANNAPPA.—I quite see the point because it is within your discretion to allow or not to allow supplementaries to be put. But what will be the reactions and repercussions when a particular section of the House is not permitted to put supplementaries. I am not making any sarcastic or any sort of remark against the Chair. I am just bringing it to the notice of the Chair the reaction and the repercussions.

Mr. SPEAKER.—He has said it.

Sri B. R. SUNTHANKAR.—Since we are not allowed to put any supplementaries on the question, we are staging a walk-out.

(Sri B. R. Sunthankar withdrew from the House followed by Sri B. P. Kadam)

Important Forest Produce of North Kanara District.

*Q.—180. SRI S. P. PHAYADE (Ankola).—

Will the Government be pleased to state :—

(*a*) what are the important Forest produce of North Kanara District ;

(*b*) what is the annual income derived from each of those products ;

(*c*) to which place those produce are despatched from the District ?

A.—SRI B. RACHAIAH (Minister for Forests and Fisheries).—

(*a*) Timber, Bamboos, Firewood.

(*b*) *During 1962-63*

		Rs.
Timber	...	2,88,39,165
Bamboos	...	4,8 ,982
Firewood	...	15,09,351

(*c*) In and outside the State.

ಶ್ರೀ ಎಸ್. ಪಿ. ಫಾಯಿದೆ.—ಜಿಲ್ಲೆಯಲ್ಲಿ 84 ಪರ್ಸೆಂಟ್ ಫಾರೆಸ್ಟು ಇದ್ದು ಈ ಸಂಸ್ಥಾನದ ಉತ್ಪನ್ನದಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಈ ಜಿಲ್ಲೆಯಿಂದ ಬರುತ್ತಾ ಇದೆ. ಆದರೆ ಅದಕ್ಕೆ ಸಂಬಂಧಪಟ್ಟ ಡಿವಿಜನಲ್ ಆಫೀಸು ಧಾರವಾಡ ಜಿಲ್ಲೆಯಲ್ಲಿದೆ. ಅದನ್ನು ಈ ಜಿಲ್ಲೆಗೆ ವರ್ಗಾಯಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮೊದಲನೆಯ ಉತ್ತರದಲ್ಲಿ ಇನ್ನೂ ಸ್ವಲ್ಪ ಸೇರಿಸಿಕೊಳ್ಳಬೇಕಾಗಿದೆ. ಮೈನರ್ ಪ್ರಾಡ್ಯೂಸಿನಿಂದ ರೂ. 2,24,357 ಬರುತ್ತಾ ಇದೆ. ಆ ತಿದ್ದುಪಡಿಯಾಗಬೇಕು. ಎರಡನೆಯದು, ಧಾರವಾಡದಲ್ಲಿ ಮೊದಲಿನಿಂದಲೂ 3 ಡಿವಿಜನಲ್ ಆಫೀಸುಗಳಿವೆ. ಆಯಾ ಏರಿಯಾಗೆ, ಶಿಫ್ಟ್ ಮಾಡಬೇಕಾದರೆ ಬಿಲ್ಡಿಂಗ್ಸು ಮತ್ತಿತರ ಸೌಕರ್ಯಗಳನ್ನು ಒದಗಿಸಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಅವರು ಹೇಳಿದಂತಹ ಅವಶ್ಯಕತೆಯನ್ನು ಸರಕಾರ ಒಪ್ಪಿಕೊಂಡಿದೆ.

ಶ್ರೀ ಎಸ್. ಪಿ. ಫಾಯಿದೆ.—ಡಿವಿಜನಲ್ ಆಫೀಸು ಮೊದಲು ನಾರ್ತ್ ಕೆನರದಲ್ಲಿ ಇದ್ದದ್ದು ತಮ್ಮ ಗಮನಕ್ಕೆ ಬಂದಿದ್ದೆಯ ?

ಶ್ರೀ ಬಿ. ರಾಚಯ್ಯ.—ಹಿಂದೆ ಇತ್ತು ಎಂದು ತಿಳಿದುಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—48,7982 ರೂಪಾಯಿ ಬಿದರಿನಿಂದ ಬರುತ್ತದೆ ಎಂದು ಹೇಳಿದ್ದೀರಿ. ದಾಂಡೇಲಿಗೆ ಕೊಟ್ಟಿರತಕ್ಕಂಥ ಬಿದರಿನ ರೇಟು ಜಾಸ್ತಿ ಮಾಡಿದರೆ ಎಷ್ಟು ಹೆಚ್ಚಿಗೆ ರೆವಿನ್ಯು ಬರುತ್ತದೆ ?

ಶ್ರೀ ಬಿ. ರಾಚಯ್ಯ.—ಅದು ಹೈಪಾತೆಟಿಕಲ್ ಪ್ರಶ್ನೆ, ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಮೂರು ಬಾಬುಗಳಿಂದ 3 ಕೋಟಿ ರೂಪಾಯಿ ಉತ್ಪತ್ತಿಯಾಗುತ್ತಿದೆ. ಇದೂ ಅಲ್ಲದ ಇತರ ಬಾಬುಗಳಿಂದ ಎಲ್ಲಾ ಎಷ್ಟು ಉತ್ಪತ್ತಿ ಬರುತ್ತದೆ ?

ಶ್ರೀ ಬಿ. ರಾಚಯ್ಯ.—ಮೈನರ್ ಪ್ರಾಡ್ಯೂಸ್ ಬಾಬಿನಲ್ಲಿ ಈ ವರ್ಷದ ಜನವರಿಯ ವರೆಗೆ 2,24,357 ರೂಪಾಯಿ ಈ ಜಿಲ್ಲೆಯಿಂದ ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನ ಹಿಂದಿನ ಪ್ರಶ್ನೆಗೆ ಉತ್ತರ ಬರಲಿಲ್ಲ. ದಾಂಡೇಲಿ ಪೇಪರ್ ಮಿಲ್ಸಿಗೆ ಬಿದುರು ಮಾರಾಟ ಮಾಡಿರುವುದರಿಂದ ಎಷ್ಟು ಬರುತ್ತದೆ ?

ಶ್ರೀ ಬಿ. ರಾಚಯ್ಯ.—ಒಂದು ಟನ್ ಬಿದಿಗೆ ಒಂದು ರೂ. 25 ನಯೆ ಪೈಸೆ ಬರುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬಿದುರನ್ನು ರಾಜ್ಯದ ಹೊರಗೆ ಒಂದು ಟನ್ನಿಗೆ ಯಾವ ರೇಟಿನಲ್ಲಿ ಸಪ್ಲೈ ಮಾಡುತ್ತಾ ಇದ್ದೀರಿ ?

ಶ್ರೀ ಬಿ. ರಾಚಯ್ಯ.—ಟೆಂಡರ್ ಕರೆಯುತ್ತೇವೆ, ಟೆಂಡರುಗಳ ಮೂಲಕ ಕೊಡುತ್ತಾ ಇದೆ.

SRI G. V. GOWDA.—You have given the income for the year 1962-63. Have you got any idea of the income derived during 1963-64? Is it on increase?

ಶ್ರೀ ಬಿ. ರಾಚಯ್ಯ.—6-3-48 ರಲ್ಲಿ ಟಿಂಬರಿನಲ್ಲಿ ರೂ. 2 62,20,380 ಇತ್ತು. ಆ ಮೇಲೆ

			ರೂ.
	1961-62 ನೆಯ ಸಾಲಿನಲ್ಲಿ		2 79,87,670
	1962-63	,,	2,88,39,165
	1963-64	,,	2,38,53,348
ಹಾಗೆಯೇ ಬಿದುರಿನಲ್ಲಿ ಈ ವರ್ಷ			
	1960-61		3,33,359
	1961-62		3,57,294
	1962-63		4,87,982
1963-64 up to January only			2,77,900
Firewood	1960-61		11,34,803
	1961-62		11,00,357
	1962-63		15,09,351
This year up to January			8,32,605
From minor produce:	1960-61		3,75,485
	1961-62		3,46,943
	1962-63		4,11,949
Up to January			2,24,357

ಶ್ರೀ ಟಿ. ಡಿ. ದೇವೇಂದ್ರಪ್ಪ.—ಟೆಂಡರ್ ಮೂಲಕ ಇದನ್ನು ಕೊಡುತ್ತೀರೆಂದು ಗೊತ್ತಿದೆ. ಆದರೆ, ಬಿದುರನ್ನು ಟನ್ನು ಒಂದಕ್ಕೆ ಯಾವ ರೇಟಿನಲ್ಲಿ ಕೊಡುತ್ತಾ ಇದ್ದೀರ ?

ಶ್ರೀ ಬಿ. ರಾಚಯ್ಯ.—ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ಗೆ ಒಂದು ರೂ. 25 ನಯೆ ಪೈಸೆಗೆ 1 ಟನ್ ಬಿದುರನ್ನು ಕೊಟ್ಟಿದ್ದೇವೆ. ಅದನ್ನು ಅಗ್ರಿಮೆಂಟಿನಂತೆ 25 ಪರ್ಸೆಂಟ್ ಜಾಸ್ತಿ ಮಾಡಿದ್ದೇವೆ. ಈಗ ಹೊಸದಾಗಿ ಸೀಡ್ ಬಂಬನ್ನು ಟನ್ನಿಗೆ 5 ರೂಪಾಯಿಗೆ ಕೊಟ್ಟಿದ್ದೇವೆ. ಭದ್ರಾವತಿ ಪೇಪರ್ ಮಿಲ್ಸ್‌ದರವನ್ನು 10 ರೂಪಾಯಿಗಳ ವರೆಗೆ ರಿವೈಸ್ ಮಾಡಿದ್ದೇವೆ.

Acquisition of Land for Depressed Class Colonies in Bagepalli and Gudibanda Taluks.

*Q.—3. SRI B. SUBBARAYAPPA (Bagepalli).—

Will the Government be pleased to state:—

(a) the number of acquisition cases pertaining to acquisition of land for depressed class colonies started in Bagepalli and Gudibanda Taluks of Kolar District;

(b) out of them the number of cases finalised and the number pending; (Hobli-wise and village-wise information from 1st January 1961 uptil now may please be furnished)?

A.—SRI M. V. KRISHNAPPA (Minister for Revenue).—

(a) 15. Bagepalli Taluk .... 11.
Gudibanda Taluk .... 4.

(b) 8 cases are finalised.
7 cases are pending. The details are furnished in the statement appended.

STATEMENT.

Name of Taluk	Name of Hobli	Details of cases finalised.	Details of pending cases.
		Name of the village	Name of the village
Gudibanda	Somenahalli Hobli.	(1) Beechagana-halli. (2) Bhogenahalli. (3) Thimmaina-halli. (4) Chikkatham-manahalli.	Nil
Bagepalli	Bagepalli Kasaba Hobli.	(5) Bagepalli Kasaba village. (6) Neeragantipalli (7) Narepalli.	(1) Kadiranna-garipalli.
	Gulur Hobli.	(8) Chencha-rayanahalli.	(2) Madalakhane. (3) Saddupalli. (4) Gorthipalli.
	Mittemari Hobli.	Nil	(5) Achaganapalli.
	Chelur Hobli.	Nil	(6) Chelur village. (7) Diguvanettu-kuntepalli.

ಶ್ರೀ ಬಿ. ಸುಬ್ಬರಾಯಪ್ಪ.—ಮದಲಖಾನೆಯ ರಿಕಾರ್ಡ್ಸ್ ಎಷ್ಟು ವರ್ಷಗಳಿಂದ ರಿಕಾರ್ಡ್ಸ್ ನಡೆಯುತ್ತಾ ಇದೆ?

ಶ್ರೀ ಎಂ. ವಿ. ಕೃಷ್ಣಪ್ಪ.—3 ವರ್ಷಗಳಿಂದ ನಡೆಯುತ್ತಾ ಇದೆ. ಮುಕ್ಕಾಲು ಭಾಗ ತೀರ್ಮಾನವಾಗಿದೆ. 7 ಕೇಸುಗಳಲ್ಲಿ 4 ತೀರ್ಮಾನವಾಗಿವೆ. 3 ಕೇಸುಗಳಲ್ಲಿ ಪ್ರಿಲಿಮಿನರಿ ಎನ್‌ಕ್ವಯರಿ ಮಾಡುತ್ತಾ ಇದ್ದಾರೆ.

ಶ್ರೀ ಬಿ. ಸುಬ್ಬರಾಯಪ್ಪ.—ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಪೂರ್ತಿ ಆಗಿದ್ದರೂ ಮುಂದಿನ ಕ್ರಮ ತೆಗೆದುಕೊಳ್ಳದಿರುವ ಕೇಸುಗಳು ತಮ್ಮ ಗಮನಕ್ಕೆ ಬಂದಿವೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ಗಮನಕ್ಕೆ ಬಂದಿಲ್ಲ, ಬಹುಶಃ ಇರಬಹುದು.

Mr. SPEAKER.—Question hour is over.

QUESTION FOR ANSWER ON THE DAY

(but not taken up).

Amount spent for maintaining law and order during the recent Students' Strike in old Mysore area.

* *Q.*—118. Sri S. M. KRISHNA (Maddur).—

Will the Government be pleased to state :—

(*a*) the amount spent for maintaining law and order during the recent students' strike in old Mysore area ;

(*b*) the number of policemen that were deployed on special duty to various Districts in this connection ?

A.—Sri R. M. PATIL (Minister for Home).—

(*a*) Rs. 480-79 nP.

(*b*) 254.

Mr. SPEAKER.—Before I call upon the Hon'ble Minister to start the reply, I want to say that an Hon'ble Member namely Sri B. L. Gowda has made a request that he may be given a chance to speak. That is a solitary request. I have proposed to give him 10 minutes.

MOTION OF THANKS TO THE GOVERNOR FOR HIS ADDRESS.

(*Debate continued*)

ಶ್ರೀ ಬಿ. ಎಲ್. ಗೌಡ.—ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಶ್ರೀಮಾನ್ ಸಿದ್ದಯ್ಯನವರು ತಂದಿರತಕ್ಕಂಥ ವಂದನಾ ನಿರ್ಣಯದ ಮೇಲೆ ಮಾತನಾಡುತ್ತಾ, ಸರಕಾರದವರು ಯಾವ ರೀತಿಯಲ್ಲಿ ತಾವು ರೂಪಿಸಿದಂಥ ನೀತಿಗಳನ್ನು ಅನುಸರಿಸದೆ ಗಾಳಿಗೆ ಬಿಟ್ಟಿದ್ದಾರೆ, ತಾವು ಹಾಕಿದಂಥ ಕೆಲವು ನೀತಿಗಳಿಗೆ ವಿರೋಧವಾಗಿ ಹೇಗೆ ನಡೆದುಕೊಂಡಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

1-30 P.M.

ನಾನು ಕೇವಲ ಸಹಕಾರ ಮತ್ತು ವ್ಯವಸಾಯ ಇಲಾಖೆಗಳ ಬಗ್ಗೆ ಮಾತ್ರ ನನ್ನ ಭಾಷಣವನ್ನು ಮಿತಿಗೊಳಿಸುತ್ತೇನೆ. ಸಹಕಾರ ಇಲಾಖೆ ಬಹಳ ಮಹತ್ವದ ಇಲಾಖೆ. ಅಂತಹ ಒಂದು ಇಲಾಖೆಯಲ್ಲಿ ಅಲ್ಲಿನ ನಿಯಮಗಳ ಉಲ್ಲಂಘನೆಯಿಂದ ಎಷ್ಟೋ ಜನರಿಗೆ ತೊಂದರೆಯಾಗುತ್ತದೆ. ಅದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಹೋದ ಸಾರಿ ಈ ಶಾಸನ ಸಭೆಯಲ್ಲಿ ಮಾನ್ಯ ಮಂತ್ರಿಗಳು ಈ ಸಹಕಾರ ತತ್ವದಲ್ಲಿ ಆಂದೋಳನ ಮಾಡುತ್ತೇನೆ, ಸಹಕಾರಿ ತತ್ವವನ್ನು ಡೀಅಫೀಲಿಯಲೈವೇಷನ್ ಅಥವಾ ಸರಕಾರಿ ಕೈವಾಡ ಕಡಮೆ ಮಾಡುತ್ತೇವೆ ಎಲ್ಲಾ ಸಹಕಾರಿ ಸಂಘಗಳಲ್ಲೂ ಜಿಲ್ಲಾ ಮಟ್ಟದ ಕೆಳಗೆ ಇರತಕ್ಕ ಸಂಘಗಳಿಗೆ ಖಾಸಗಿಯವರನ್ನು ನಾಮಕರಣ ಮಾಡುವುದನ್ನು ಕೈಬಿಡುತ್ತೇವೆ ಎಂದು ಹೇಳಿದರು. ಆದರೆ ಕಾರ್ಯಾಚರಣೆಯಲ್ಲಿ ಅದಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ತಮ್ಮ ಗಮನಕ್ಕೆ ಒಂದು ಉದಾಹರಣೆಯನ್ನು ತರುವುದಾದರೆ ತಾಲ್ಲೂಕು ಮಟ್ಟದ ವ್ಯವಸಾಯ ಉತ್ಪನ್ನದ ಮಾರಾಟ ಸಂಘಗಳಿಗೆ ಜಿಲ್ಲಾ ಕೇಂದ್ರ ಬ್ಯಾಂಕುಗಳಿಗೆ – ಅವರ ತತ್ವಕ್ಕೆ ವಿರುದ್ಧವಾಗಿ ಇನ್ನೂ ಖಾಸಗಿಯವರನ್ನೇ ನಾಮಕರಣ ಮಾಡಿ ಮುಂದುವರಿಸಿಕೊಂಡು ಬರುತ್ತಾ ಇದ್ದಾರೆ. ಇದನ್ನು

ಹೇಗೆ ಮಾಡುತ್ತಾ ಇದ್ದಾರೆ ಎಂದರೆ ಯಾರು ಅವರ ಪಕ್ಷಕ್ಕೆ ಸೇರಿದ್ದಾರೆಯೋ, ಯಾರು ಸಹಕಾರ ಸಂಘಗಳಲ್ಲಿ ಸಹಕಾರ ತತ್ವಕ್ಕೆ ವಿರುದ್ಧವಾಗಿ ನಡೆದುಕೊಂಡು ಬಂದಿದ್ದಾರೆಯೋ ಅಂತಹವರನ್ನೇ ತೆಗೆದುಕೊಂಡಿದ್ದಾರೆ, ನಾಮಕರಣ ಮಾಡಿದ್ದಾರೆ. ಅದರಿಂದ ನಿಜವಾಗಿಯೂ ಸಹಕಾರ ತತ್ವ ಕುಂಠಿತವಾಗುತ್ತದೆಯೇ ಹೊರತು ಪ್ರಗತಿ ಹೊಂದುವುದಿಲ್ಲ. ಈ ನೀತಿಯನ್ನು ಅನುಸರಿಸುವುದು ನಿಜವಾಗಿಯೂ ಲಾಯಕ್ಕಲ್ಲ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಅದೂ ಅಲ್ಲದೆ ಸಹಕಾರ ಇಲಾಖೆಯಲ್ಲಿ ಇನ್ನೂ ಒಂದು ಪಕ್ಷಪಾತ ನಡೆಯುತ್ತಾ ಇದೆ, ಕೆಲವರಿಗೆ ಸಹಕಾರ ಸಂಘಗಳಿಗೆ ಷೇರ್ ಕ್ಯಾಪಿಟಲ್ ಕೊಡುತ್ತಾರೆ ಸರಕಾರದಿಂದ ಸಹಾಯ ಧನ ಕೊಡುತ್ತಾರೆ, ಇನ್ನು ಕೆಲವರಿಗೆ ಅದು ಯಾವುದನ್ನೂ ಕೊಡುವುದಿಲ್ಲ. ಈ ರೀತಿ ಎಲ್ಲಾ ವಿಧದಲ್ಲೂ ಸರಕಾರ ಒಂದು ತಾರತಮ್ಯ ದೃಷ್ಟಿಯಿಂದ ನೋಡುತ್ತಾ ಇದೆ. ಎಲ್ಲಿ ಆಡಳಿತ ಪಕ್ಷದವರು ಸೇರಿದ್ದಾರೆಯೋ ಅಂತಹ ಬ್ಯಾಂಕುಗಳಿಗೆ ಅಂತಹ ಸಹಕಾರ ಸಂಘಗಳಿಗೆ ಬೇಕಾದಷ್ಟು ಷೇರ್ ಕ್ಯಾಪಿಟಲ್ ಕೊಟ್ಟಿದ್ದಾರೆ ಮತ್ತು ಎಲ್ಲಿ ವಿರೋಧ ಪಕ್ಷದವರು ಇದ್ದಾರೋ, ವಿರೋಧ ಪಕ್ಷದವರ ಕೈಯಲ್ಲಿ ಅಧಿಕಾರ ಇವೆಯೋ ಅಂತಹ ಸಹಕಾರ ಸಂಘಗಳಿಗೆ ಸರಕಾರದ ಸಹಾಯ ಧನವನ್ನು ಕೊಡುವುದಕ್ಕೆ ತಿರಸ್ಕಾರ ಮಾಡಿದ್ದಾರೆ. ಇದು ಬಹಳ ವಿಷಾದಕರವಾದ ನೀತಿ. ಸರಕಾರದವರು ಸಹಕಾರ ಸಂಘಗಳ ಆಡಳಿತದಲ್ಲಿ ಕೈಹಾಕುತ್ತ ಇರುವುದನ್ನು ತಪ್ಪಿಸದಿದ್ದರೆ ಖಂಡಿತವಾಗಿಯೂ ನಮ್ಮ ದೇಶದ ಕಲ್ಯಾಣವಾಗುವುದಿಲ್ಲ ನಮ್ಮ ದೇಶಕ್ಕೆ ಒಳ್ಳೆಯದು ಆಗುವುದಿಲ್ಲ ಎಂಬುದನ್ನು ಬಹಳ ವಿಷಾದದಿಂದ ತಮ್ಮ ಗಮನಕ್ಕೆ ತರಬೇಕಾಗಿದೆ. ಇದೇ ರೀತಿಯಲ್ಲಿ ಗೋಡೌನ್ ಎಂದು ಮಾಡಿರುತ್ತಾರೆ ರೈತರು ತಂದ ಫಸಲು ಮಾರಾಟ ಮಾಡಲು ಗೋಡೌನ್‌ಗಳನ್ನು ಮಾಡಿರುತ್ತಾರೆ, ಇಲ್ಲೂ ವಿರೋಧ ಪಕ್ಷದವರು ಇರುವ ಕಡೆ ಷೇರ್ ಕ್ಯಾಪಿಟಲ್ ಇದ್ದರೂ ಗೋಡೌನ್‌ಗಳಿಗೆ ಅವಕಾಶ ಮಾಡಿಕೊಟ್ಟಿಲ್ಲ. ಅದೇ ಅವರವರೇ ಇರುವ ಜಾಗದಲ್ಲಿ ಸೊಸೈಟಿ ಇರಲಿ ಇಲ್ಲದೇ ಇರಲಿ, ಸುಮ್ಮನೆ ಪುಸ್ತಕದಲ್ಲಿ ಇದ್ದರೂ ಕೆಲಸ ಮಾಡುತ್ತಿಲ್ಲ ಎಂದರೂ ಗೋಡೌನ್ ಕೊಟ್ಟಿದ್ದಾರೆ. ಇದರಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಇಂತಹ ನೀತಿಯನ್ನು ಅನುಸರಿಸುವುದಕ್ಕಿಂತ ಈ ಸಹಕಾರ ಇಲಾಖೆಯನ್ನು ಏಕೆ ವಜಾ ಮಾಡಬಾರದು ಎಂದು ಕೇಳುತ್ತೇನೆ.

ರೆಗ್ಯೂಲೇಟೆಡ್ ಮಾರ್ಕೆಟಿಂಗ್ ಸೊಸೈಟಿಗಳು ಇವೆ. ಚಿತ್ರದುರ್ಗ ಜಿಲ್ಲೆಯಲ್ಲಿ ದಾವಣಗೆರೆ, ಚಳ್ಳಕೆರೆ ಮುಂತಾದ ಕಡೆಗಳಲ್ಲಿ ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳಿಗೆ ಚುನಾವಣೆ ನಡೆದು ಒಂದು ವರ್ಷಕ್ಕೆ ಮೇಲ್ಪಟ್ಟು ಆಯಿತು. ಆದರೂ ಈವರೆಗೂ ಅದಕ್ಕೆ ಅಧ್ಯಕ್ಷರ ಚುನಾವಣೆ ಆಗಿಲ್ಲ, ನಾಮಕರಣವಾಗಿಲ್ಲ. ದಾವಣಗೆರೆಯಲ್ಲಿ ಒಬ್ಬರನ್ನು ನಾಮಕರಣ ಮಾಡಿದ್ದರು – ಅವರಿಗೆ ಬೇಕಾದವರನ್ನು – ಅದು ಉನ್ನತ ನ್ಯಾಯಾಲಯಕ್ಕೆ ಹೋಗಿ ಆ ರೀತಿ ಮಾಡಿದ್ದು ಕ್ರಮವಲ್ಲ, ಕಾನೂನು ಬಾಹಿರ ಎಂದು ಹೇಳಿ ತೀರ್ಮಾನವಾಯಿತು. ಇದುವರೆಗೂ ಅಲ್ಲಿಗೆ ಚುನಾವಣೆ ಮಾಡುವುದಕ್ಕೆ ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇದೇ ರೀತಿ ಚಿತ್ರದುರ್ಗ ಮತ್ತು ಚಳ್ಳಕೆರೆ ಮಾರ್ಕೆಟಿಂಗ್ ಸೊಸೈಟಿಗಳಲ್ಲೂ ಸಹ ಚುನಾವಣೆ ಆಗಿ 6 ತಿಂಗಳು ಆಯಿತು, ಅಧ್ಯಕ್ಷರ ಚುನಾವಣೆ ಆಗಬೇಕು, ನಾಮಕರಣ ಆಗಬೇಕು, ಇದುವರೆಗೂ ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಸಹಕಾರ ತತ್ವ ಬಹಳ ಮುಖ್ಯವಾದುದು, ಎಲ್ಲವನ್ನೂ ಸಹಕಾರ ತತ್ವದಿಂದಲೇ ಸಾಧಿಸಬೇಕು ಎಂದು ಹೇಳತಕ್ಕ ಸರಕಾರ ಸಣ್ಣ ಒಂದು ಮಾರ್ಕೆಟಿಂಗ್ ಸೊಸೈಟಿ ಅಧ್ಯಕ್ಷರ ಚುನಾವಣೆ ಅಥವಾ ನಾಮಕರಣ ಮಾಡುವ ವಿಷಯದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳದಿದ್ದರೆ ನಿಜವಾಗಿಯೂ ಈ ಮಂತ್ರಿಗಳಿಗೆ ಸರಕಾರವನ್ನು ನಡೆಸುವ ಶಕ್ತಿ ಸಾಮರ್ಥ್ಯ ಇದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ನಿತ್ಯ ಆಡಳಿತದಲ್ಲೂ ಪಕ್ಷಪಾತ ಮಾಡುತ್ತಾ ಇದ್ದಾರೆ ಎಂದು ಹೇಳುತ್ತೇನೆ, ಯಾವ ರೀತಿ ಎಂದರೆ ಕೆಲವು ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿ ಅವನ್ನು ಸೂಪರ್‌ಸೀಡ್ ಮಾಡಬೇಕೆಂದು ಶಿಫಾರಸು ಮಾಡಿರುತ್ತಾರೆ. ಅಂತಹ ಸಹಕಾರ ಸಂಘಗಳಲ್ಲಿ ಅವರ ಪಾರ್ಟಿಯವರು ಯಾರಾದರೂ ಅಧಿಕಾರದಲ್ಲಿದ್ದರೆ ಅಂತಹ ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡಬಾರದು ಎಂದು ಹೇಳಿ ಸ್ಟೇ ಆರ್ಡರ್ ಕೊಟ್ಟು ಎಲ್ಲಿ ನ್ಯೂನತೆ ಇದೆಯೋ ಎಲ್ಲಿ ಕೆಟ್ಟ ಕೆಲಸ ನಡೆದಿದೆಯೋ ಅಂತಹ ಜಾಗದಲ್ಲೂ ಕೂಡ ಆ ಸಹಕಾರ ಸಂಘಗಳು ಮುಂದುವರಿಯಬೇಕೆಂದು ಹೇಳಿರತಕ್ಕ ನಿದರ್ಶನಗಳು ಇವೆ. ಮಂತ್ರಿಗಳಿಗೆ ಬರೆದಿದ್ದೇನೆ, ಇವತ್ತಿನವರೆಗೂ ಅದರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಎಂಬುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಇಂತಹ ನ್ಯೂನತೆಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಸಹಕಾರ ಇಲಾಖೆ ಏಕೆ ಇರಬೇಕೆಂದು ಪ್ರಶ್ನೆ ಮಾಡುತ್ತೇನೆ.

ಇದೇ ರೀತಿಯಲ್ಲಿ ಪಂಚಾಯ್ತಿ ರಾಜ್ಯ. ಯಾವ ಪಂಚಾಯ್ತಿಯಲ್ಲೂ ಆಡಿಟ್ ನಡೆದಿಲ್ಲ. ಒಬ್ಬ ವಿಲೇಜ್ ಅಕೌಂಟೆಂಟನ್ನು ನೇಮಕ ಮಾಡಿದರೆ ಆತನಿಗೆ ಹತ್ತಾರು ತಿಂಗಳುಗಳಿಂದ ಸಂಬಳ ಬಂದಿಲ್ಲ. ಒಂದು ನೀತಿ ನಿಯಮ ನಿರೂಪಣೆ ಮಾಡಬೇಕಾದರೆ ಮುಂದಾಲೋಚನೆ ಇಲ್ಲದೆ ಏಕೆ ನಿರೂಪಣೆ ಮಾಡುತ್ತಾರೆಯೋ ಅರ್ಥವಾಗುವುದಿಲ್ಲ.

(ಶ್ರೀ ಬಿ. ಎಲ್. ಗೌಡ)

ಇದೇ ರೀತಿಯಲ್ಲಿ ಸಮಾಜ ಕಲ್ಯಾಣದ ಬಗ್ಗೆ ಹೇಳುವುದಾದರೆ ಹಿಂದುಳಿದಿರತಕ್ಕ ವರ್ಗದವರಿಗೆ ರಾಜ್ಯಾಂಗ ದತ್ತವಾಗಿ ರಕ್ಷಣೆ ಕೊಡಬೇಕೆಂದು ಹೇಳಿರುವಾಗಲೂ 17 ಜನ ಸೋಷಿಯಲ್ ವೆಲ್‌ಫೇರ್ ಆಫೀಸರುಗಳನ್ನು ಮನೆಗೆ ಕಳುಹಿಸಿದ್ದಾರೆ. ಅವರು 6-7 ವರ್ಷ ಕೆಲಸ ಮಾಡಿದ್ದರು ಅಂತಹವರನ್ನು ಯಾವ ಕಾರಣವೂ ಇಲ್ಲದೆ ಮನೆಗೆ ಕಳುಹಿಸುವುದಕ್ಕೆ ಬದಲಾಗಿ ಅವರನ್ನು ಅಧಿಕಾರದಲ್ಲೇ ಇಟ್ಟುಕೊಂಡು ಮುಂದುವರಿಸುವುದಕ್ಕೆ ಆಗುತ್ತಾ ಇರಲಿಲ್ಲವೇ? ಇದೆಯೇ ಅವರು ಸಮಾಜದಲ್ಲಿ ಹಿಂದುಳಿದ ಪಂಗಡಗಳಿಗೆ ತೋರಿಸತಕ್ಕ ಔದಾರ್ಯ ಎಂದು ನಾನು ಕೇಳುತ್ತಾ ಇದ್ದೇನೆ. ಹಿಂದಿನ ಮಂತ್ರಿಮಂಡಲದವರು ಮಾಡಿದ್ದರು; ಅದನ್ನು ತೆಗೆದುಹಾಕಬೇಕು ಎಂಬ ಒಂದು ಸೇಡನ್ನು ತೀರಿಸಿಕೊಳ್ಳುವ ದೃಷ್ಟಿಯಿಂದ 17 ಜನರನ್ನು ಮನೆಗೆ ಕಳುಹಿಸಿದ್ದು ಯಾವ ರೀತಿಯಿಂದಲೂ ಸರಿಯಲ್ಲ, ಅದನ್ನು ಸರಿಪಡಿಸುವ ಪ್ರಯತ್ನ ಸರ್ಕಾರದವರು ಮಾಡದೇ ಇದ್ದುದು ವಿಷಾದಕರ. ಹಿಂದುಳಿದ ಪಂಗಡಗಳವರು ಮನೆಗಳನ್ನು ಕಟ್ಟಿಕೊಳ್ಳಲು, ಎತ್ತು ಮುಂತಾದುವುಗಳನ್ನು ಕೊಂಡು ಕೊಳ್ಳಲು ಹಣ ಕೊಡುತ್ತಾ ಇದ್ದಾರೆ, ಇದುವರೆಗೂ ಅವರಿಗೆ ಒಂದು ಕಾಸೂ ಮುಟ್ಟಿಲ್ಲ. ಹರಿಜನರಿಗೆ ಕೋ ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳನ್ನು ಮಾಡಿದ್ದಾರೆ ಅವು ಚಿಂತಾಜನಕ ಸ್ಥಿತಿಯಲ್ಲಿ ಇವೆ. ನನ್ನ ತಾಲ್ಲೂಕಿನಲ್ಲಿ ಎರಡು ಮೂರು ಸೊಸೈಟಿಗಳು ಇವೆ. ಲಕ್ಷಾಂತರ ರೂಪಾಯಿಗಳನ್ನು ಅದರಲ್ಲಿ ಹಾಕಿದ್ದಾರೆ. ಚಾಳೂರು ಮತ್ತು ಸಾಣಿಕೆರೆ ಕಾವಲಿನಲ್ಲಿ ಲಕ್ಷ ರೂಪಾಯಿ ವಿನಿಯೋಗಿಸಿದ್ದಾರೆ, ಅದರಿಂದ ಪ್ರತಿಫಲ ಏನೂ ಬರುತ್ತಿಲ್ಲ ಆ ವಿಷಯವನ್ನು ಈ ಸಭೆಯಲ್ಲೇ ಎರಡು ಮೂರು ಸಾರಿ ಹೇಳಿದ್ದೇನೆ, ಇದುವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ, ಆ ಬಗ್ಗೆ ತನಿಖೆ ಕೂಡ ನಡೆದಿಲ್ಲ. ಈ ರೀತಿ ಹಿಂದುಳಿದ ಪಂಗಡದವರಿಗೆ ಬಹಳ ಅನ್ಯಾಯವಾಗುತ್ತಾ ಇದೆ. ಸರ್ಕಾರದವರು ಹಿಂದುಳಿದ ಪಂಗಡಗಳಿಗೆ ರಾಜ್ಯಾಂಗದತ್ತವಾಗಿ ಕೊಟ್ಟಿರತಕ್ಕ ರಕ್ಷಣೆಗಳನ್ನು ನೆರವೇರಿಸುವುದರಲ್ಲಿ ವಿಮುಖರಾಗಿದ್ದಾರೆ ಎಂದು ಬಹಳ ವಿಷಾದದಿಂದ ತಮ್ಮ ಗಮನಕ್ಕೆ ತರಬೇಕಾಗಿದೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೃಷ್ಣಾ-ಗೋದಾವರಿ ನೀರಿನ ಉಪಯೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮತ್ತು ಕೆಲವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ಆ ರೀತಿ ಹಳೇ ಮೈಸೂರಿನಲ್ಲಿ ಕಾವೇರಿ ನದೀ ನೀರಿನ ಉಪಯೋಗದ ಬಗ್ಗೆ ಅವರು ಹೆಚ್ಚಾಗಿ ಹೇಳಿಲ್ಲ. ಅವರ ಅಡ್ರೆಸ್‌ನಲ್ಲೇ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಇನ್ನೂ ಕೆಲವು ಜಿಲ್ಲೆಗಳಲ್ಲಿ ಬರಗಾಲ ಬಂದಿದೆ ಎಂಬುದನ್ನು ಹೇಳಿದ್ದಾರೆ. ವರ್ಷೇ ವರ್ಷೇ ಇದರ ಹಂಗಾಮಿ ಪರಿಹಾರಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಖಾಯಂ ಪರಿಹಾರ ಕಾರ್ಯ ಮಾಡಲು ಯಗಚಿ ನದಿಯಿಂದ ವಾಣಿವಿಲಾಸ ಸಾಗರಕ್ಕೆ ನೀರನ್ನು ತಿರುಗಿಸಬೇಕೆಂದು ಬಹಳ ದಿವಸದಿಂದ ಒತ್ತಾಯ ಮಾಡುತ್ತಾ ಇದ್ದೇವೆ, ಅದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಆದರ ಬಗ್ಗೆ ರಾಜ್ಯಪಾಲರು ಏನೂ ಪ್ರಸ್ತಾಪ ಮಾಡಿಲ್ಲ. ಇದು ಬಹಳ ವಿಷಾದದ ಸಂಗತಿ. ಹಂಗಾಮಿ ಪರಿಹಾರಕ್ಕೆ ವರ್ಷೇ ವರ್ಷೇ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಬದಲಾಗಿ ಖಾಯಂ ಪರಿಹಾರದ ಆ ಯೋಜನೆಯನ್ನು ಶೀಘ್ರವಾಗಿ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದೇ ರೀತಿ ಸುವರ್ಣಮುಖಿ ನದಿಯಿಂದ ಧರ್ಮಪುರಕ್ಕೆ ನೀರನ್ನು ತೆಗೆದುಕೊಳ್ಳುವ ಯೋಜನೆಯನ್ನು ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಸರ್ಕಾರದವರು ಅನೇಕ ಸಾರಿ ಈ ಜಿಲ್ಲೆಯಲ್ಲಿ ಸಣ್ಣ ಸಣ್ಣ ನೀರಾವರಿ ಬಾವಿಗಳನ್ನು ತೆಗೆಸಿ, ಕೊಡುತ್ತೇವೆ ಎಂದೂ, ಕಾಂಟೂರ್ ಬಂಡಿಂಗ್ ಮಾಡುತ್ತೇವೆ ಎಂದೂ ಅಫಾರಸ್ಟೇಷನ್ ಮಾಡಿಸುತ್ತೇವೆಎಂದೂ ಹೇಳಿಅದಕ್ಕೆ ಅಂದಾಜುಗಳನ್ನೂ ತಯಾರುಮಾಡಿದ್ದರು. ಬರೀ ಅದು ಅಂದಾಜಾಗಿ ಉಳಿದಿದೆಯೇ ಹೊರತು ಇದುವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಹೀಗಾದರೆ ನಿಜವಾಗಿಯೂ ಪದೇಪದೆ ಬರಗಾಲಕ್ಕೆ ತುತ್ತಾಗುತ್ತಿರುವ ಈ ಭಾಗದ ಜನರಿಗೆ ಬಹಳ ತೊಂದರೆಯಾಗುತ್ತದೆ, ಆದ್ದರಿಂದ ಕೂಡಲೇ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರಕಾರದವರನ್ನು ಅಗ್ರಹ ಪೂರ್ವಕವಾಗಿ ಒತ್ತಾಯ ಮಾಡುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ಪ್ರಶ್ನೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಲ್ಪಟ್ಟಿಲ್ಲ. ಅದು ಯಾವುದೆಂದರೆ ಪಾನ ನಿರೋಧ. ಆ ವಿಚಾರವನ್ನು ನನ್ನ ಮಿತ್ರರು ಹೇಳಿದ್ದಾರೆ. ಅದು ವಿಫಲವಾಗಿದೆಯೆಂದು ಕಂಡುಬಂದಿದ್ದರೂ ಆ ಬಗ್ಗೆ ಇನ್ನೂ ಒಂದು ತೀರ್ಮಾನ ತೆಗೆದುಕೊಂಡಿಲ್ಲ. ಅದೊಂದು ನೀತಿಯ ಪ್ರಶ್ನೆ. ರಾಜ್ಯಪಾಲರ ಭಾಷಣದಲ್ಲಿ ನೀತಿಯ ಪ್ರಶ್ನೆ ಸಹ ಪ್ರಸ್ತಾಪಿಸಲ್ಪಡದಿರುವುದು ವಿಷಾದಕರವೆಂದು ಹೇಳಿ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

MR. SPEAKER.—Before I call upon the Hon'ble Minister to commence his reply, I wish to inforn the House that I have received a communication from the Hon'ble Chief Minister. This matter, namely, the Hon'ble Chief Minister's absence from the House and his illness was also mentioned yesterday in the House. The gist of the communication is like this: Doctors who examined the Hon'ble Chief Minister this morning have again advised him to have complete rest at least till Monday next. Therefore the Chief Minister writes:

> "However much I like to participate in the legislative deliberations at least for a couple of hours daily, the medical advice is against it. I hope to be all right by the 9th. You will kindly excuse my absence".

SRI S. SIVAPPA (Sravanabelagola).—Sir, we wish him good health and quick recovery.

MR. SPEAKER.—I hope this is the desire of every Member. I will convey it to the Hon'ble Chief Minister that it is the desire of every Member of the House that he should recover speedily and come back to the House Now the Hon'ble Minister for education will reply to the Debate.

† ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ಸನ್ಮಾನ್ಯ ಸಭಾಪತಿಗಳೇ, ಈಗಿನ ರಾಜ್ಯಪಾಲರ ಭಾಷಣದ ಮೇಲೆ ನಡೆದಂಥ ಚರ್ಚೆಯಲ್ಲಿ ಅನೇಕ ಸದಸ್ಯರು ಶಿಕ್ಷಣ ಖಾತೆಯ ಬಗ್ಗೆ ಶಿಕ್ಷಣದ ಬಗ್ಗೆ ಸೂಚನೆಗಳನ್ನು ಮಾಡಿದ್ದಾರೆ, ಸರ್ಕಾರದಿಂದ ಕ್ಲ್ಯಾರಿಫಿಕೇಷನ್ ಕೇಳಿದ್ದಾರೆ, ಹಾಗೂ ಸರ್ಕಾರದ ಮೇಲೆ ಒಬ್ಬೊಬ್ಬರು ಅಪಾದನೆಯನ್ನೂ ಮಾಡಿದ್ದಾರೆ. ಅದರಲ್ಲಿ ಸರ್ಕಾರದ ಮೇಲೆ ಹಾಗೂ ನನ್ನ ಮೇಲೆ ಮಾಡಿದ ಅಪಾದನೆಯ ವಿಚಾರವಾಗಿ ನಾನು ಏನನ್ನೂ ಹೇಳುವುದಕ್ಕೆ ಬಯಸುವುದಿಲ್ಲ. ಏಕೆಂದರೆ ಅಪಾದನೆ ಎಷ್ಟು ಮಟ್ಟಿಗೆ ಸತ್ಯ ಎಂದು ಸನ್ಮಾನ್ಯ ಸಭಾಪತಿಗಳೇ ಯೋಚನೆ ಮಾಡಬೇಕು

ಮೊದಲನೆಯದಾಗಿ ಮಾನ್ಯ ಸದಸ್ಯರು ಶಿಕ್ಷಣದಲ್ಲಿ ಏಕರೂಪತೆ ತರಲು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಹೇಳಬೇಕಾದರೆ ಹೈಸ್ಕೂಲು ಶಿಕ್ಷಣ ದೇಶದಾದ್ಯಂತ ಏಕರೂಪ ವಾಗಿರುವಂತೆ ಮಾಡಿದ್ದಾರೆ. 1959ರಲ್ಲೇ ಸರ್ಕಾರದವರು 7 ವರ್ಷ ಪ್ರಾಥಮಿಕ ಶಿಕ್ಷಣ ಹಾಗೂ 4 ವರ್ಷ ಸೆಕೆಂಡರಿ ಶಿಕ್ಷಣ ಅಂದರೆ ಹೈಯರ್ ಎಜುಕೇಷನ್ ಇರಬೇಕೆಂದು ಒಪ್ಪಿಕೊಂಡರು. ಆಮೇಲೆ ಅದನ್ನು 1960—61 ರಿಂದ ಕಾರ್ಯರೂಪಕ್ಕೆ ತರಲು ಪ್ರಾರಂಭಿಸಿದ್ದಾರೆ. ಆಗ 8 ನೆಯ ಕ್ಲಾಸ್ ಮಾಡಿ, 61—62ರಲ್ಲಿ 9ನೆಯ ಕ್ಲಾಸ್, 62—63ರಲ್ಲಿ 10ನೆಯ ಕ್ಲಾಸು ಮಾಡಿ ಇಡೀ ರಾಜ್ಯದಲ್ಲಿ ಏಕರೂಪತೆಯ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ನಡೆಸಿದರು. ಏಕರೂಪತೆಯ ಬಗ್ಗೆ ಮತ್ತೊಂದು ಹೆಚ್ಚಿನ ವಿಚಾರವಿದೆ. ಅದು ಯಾವುದೆಂದರೆ 11ನೆಯ ಕ್ಲಾಸು ಮಾಡುವುದು. 4 ವರ್ಷ ಮಾಡುತ್ತೇವೆಂದು 1959ರಲ್ಲೇ ಹೇಳಿರುವಾಗ ಕಾರ್ಯರೂಪಕ್ಕೆ ತರಬೇಕಾದ್ದು ಅವಶ್ಯಕ ವಾಗಿದೆ. ಸಾಧಾರಣವಾಗಿ ಅದನ್ನು 1963-64 ರಲ್ಲೇ ಜಾರಿಗೆ ತರಬಹುದಾಗಿತ್ತು. ಆದರೆ ಕೇಂದ್ರ ಸರ್ಕಾರ ಸ್ವಲ್ಪ ತಡೆಹಿಡಿಯಿರಿ ಎಂದು ಹೇಳಿದ್ದರಿಂದ ಒಂದು ವರ್ಷ ಹಿಂದಕ್ಕೆ ಹಾಕಿದೆ. 1964-65 ರಲ್ಲಿ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಆ ವಿಚಾರದಲ್ಲಿ ಬಹಳ ತೊಂದರೆ ಇರುವುದರಿಂದ ಅದನ್ನು ನಿವಾರಣೆ ಮಾಡಲು ಸರ್ಕಾರ ಪ್ರಯತ್ನ ಮಾಡುತ್ತಿದೆ.

ಯೂನಿವರ್ಸಿಟಿ ವಿದ್ಯಾಭ್ಯಾಸದಲ್ಲೂ ಏಕರೂಪತೆ ಇರಬೇಕೆಂದು 4 ವರ್ಷಗಳಿಂದ ಪ್ರಯತ್ನ ಮಾಡಲಾಗುತ್ತಿದೆ. ಎರಡು ಯೂನಿವರ್ಸಿಟಿಗಳ ವೈಸ್‌ಛಾನ್ಸಲರುಗಳೂ ಮತ್ತು ಸಿಂಡಿಕೇಟಿನವರೂ ಒಪ್ಪಿದ್ದಾರೆ. ಆದರೆ ಮೈಸೂರಿನ ಅಕೆಡೆಮಿಕ್ ಕೌನ್ಸಿಲ್ ಒಪ್ಪಿಲ್ಲ; ಅದರಿಂದ ತಡವಾಗಿದೆ. ಈ ವಿಚಾರವನ್ನು ಪರಿಶೀಲಿಸಿ ವರದಿ ಮಾಡಲು ಹೊಸದಾಗಿ ಲಕ್ಷ್ಮಣಸ್ವಾಮಿ ಮೊದಲಿಯಾರ್ ಸಮಿತಿ ಯನ್ನು ಸಹ ನೇಮಕಮಾಡಿದೆ. ಪ್ರಾಥಮಿಕ ವಿದ್ಯಾಭ್ಯಾಸವು ಯೂನಿಫಾರಂ ಆಗಿರಬೇಕೆಂದು ಮಾನ್ಯ ಸದಸ್ಯರು ಸಲಹೆಮಾಡಿದಂತೆ ಜಾರಿಗೆ ತರಲು ಒಂದು ಬಿಲ್ಲನ್ನು ತರಬೇಕೆಂದಿದ್ದೆವು. ಆದರೆ ಅಷ್ಟರಲ್ಲೇ ಕೊಂಡಜ್ಜಿ ಬಸಪ್ಪ ಕಮಿಟಿಯ ವರದಿಯು ಬಂದುದರಿಂದ ಆ ಕೆಲಸವನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ. ಆ ವರದಿಯನ್ನು ಪರಿಶೀಲಿಸಿ ವಿಕೇಂದ್ರೀಕರಣ ಮಾಡುವ ಬಗ್ಗೆ ಸರ್ಕಾರ

(ಶ್ರೀ ಎಸ್. ಆರ್. ಕಂಠಿ)

ಒಂದು ನಿರ್ಣಯವನ್ನು ಕೈಕೊಳ್ಳುವುದು. ಪ್ರೈಮರಿ ವಿದ್ಯಾಭ್ಯಾಸದಲ್ಲಿ ಏಕರೂಪತೆಯನ್ನು ಸಾಧಿಸಲು ಮೂಲಭೂತವಾದ ಕೆಲವು ತೊಂದರೆಗಳಿವೆ. ಮುಂಬಯಿ ಕರ್ಣಾಟಕದಲ್ಲಿ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡುಗಳು ಅವನ್ನು ನಡೆಸುತ್ತಿದ್ದುವು, ಈಗ ಸರ್ಕಾರ ನಡೆಸುತ್ತಿದೆ. ಕಾನೂನಿನ ಪ್ರಕಾರ ಅವನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ಡಿಸ್ಟ್ರಿಕ್ಟ್ ಬೋರ್ಡುಗಳನ್ನು ದಕ್ಷಿಣ ಕನ್ನಡ ಮತ್ತು ಬಳ್ಳಾರಿಗಳಲ್ಲಿ ತೆಗೆದ ಮೇಲೆ ಸರ್ಕಾರ ಅದರ ಟ್ರಸ್ಟಿಯಾಗಿ ನಡೆಸುತ್ತಿದೆ. ಆದುದರಿಂದ ಬೇರೆ ಬೇರೆ ರೀತಿಯಲ್ಲಿದೆ. ಮತ್ತು ಕ್ವಾಂಟಂ ಆಫ್ ಗ್ರಾಂಟ್ ಕೂಡ ಬೇರೆ ಬೇರೆ ರೀತಿಯಲ್ಲಿದೆ. ದಕ್ಷಿಣ ಕನ್ನಡದಲ್ಲಿ ಮುಂಬಯಿ ಪ್ರಾಂತದಲ್ಲಿ ಸೇಕಡ ನೂರರಷ್ಟು ಗ್ರಾಂಟಿದೆ, ಹೈದರಬಾದು ಪ್ರಾಂತದಲ್ಲಿ ಸೇಕಡ 80 ರಷ್ಟಿದೆ, ಹಳೇ ಮೈಸೂರಿನಲ್ಲಿ ಪ್ರೈವೇಟ್ ಪ್ರೈಮರಿ ಶಾಲೆಗಳಿಗೆ ಸೇಕಡ 75 ರಷ್ಟಿದೆ. ಅದನ್ನೆಲ್ಲಾ ಒಂದೇ ರೀತಿ ಮಾಡಲು ಪ್ರಯತ್ನ ಮಾಡಿ ಈಗ ಒಂದೇ ರೀತಿಯನ್ನು ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರ ತೀರ್ಮಾನಿಸಿದೆ. ಅದು ವಿಳಂಬವಾಗುವುದಕ್ಕೆ ಕಾರಣ ಬೇರೆ ಬೇರೆ ಕಾನೂನುಗಳಿದ್ದು ಅವು ಯಾವರೀತಿ ಅಡ್ಡ ಬರುತ್ತವೆ ಎಂದು ನೋಡಲು ಕಾಲಾವಕಾಶ ಬೇಕಾಗಿತ್ತು. ಕ್ವಾಂಟಂ ಆಫ್ ಗ್ರಾಂಟ್ ಒಂದೇ ರೀತಿಯಲ್ಲಿರಬೇಕೆಂದು ಸರ್ಕಾರ ಈಗ ಒಂದು ನಿರ್ಣಯ ಮಾಡುತ್ತಿದೆ. ಅದಾದರೆ ಸರಿಹೋಗುತ್ತದೆ. ಆದರೆ ಪ್ರಾಥಮಿಕ ಶಾಲೆಗಳನ್ನು ಯಾರು ನಡೆಸಬೇಕು ಮತ್ತು ಹೇಗೆ ನಡೆಸಬೇಕು ಎಂಬ ವಿಚಾರ ಕೊಂಡಜ್ಜಿ ಬಸಪ್ಪ ಸಮಿತಿ ವರದಿಯ ಸಂಬಂಧವಾದ ನಿರ್ಣಯವನ್ನು ಅವಲಂಬಿಸಿರುವುದರಿಂದ ಈಗ ಆ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಸಾಧ್ಯವಿಲ್ಲ. ಸಾಧ್ಯವಿರುವಷ್ಟನ್ನು ಈಗ ಮಾಡಲಾಗಿದೆ. ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಕ್ವಾಂಟಂ ಆಫ್ ಗ್ರಾಂಟ್ ಏಕರೂಪವಾಗಿದೆ. ಕಾಲೇಜುಗಳಿಗೆ ಸಂಬಂಧಪಟ್ಟಂತೆ ಯೂನಿಫಾರಂ ಗ್ರಾಂಟ್ ಇನ್ ಏಡ್ ಕೋಡು ಕೂಡ ಇನ್ನೂ ಹೊರ ಬರಲಿಲ್ಲ. ಇಷ್ಟರಲ್ಲೇ ಬರವುದರಲ್ಲಿದೆ. ಇದು ತಡ ವಾಗಲಿಕ್ಕೆ ಕೆಲವು ಕಾರಣಗಳೂ ಇವೆ. ಇನ್ನೊಂದು ವಾರ ಅಥವಾ ಹದಿನೈದು ದಿನಗಳಲ್ಲಿ ಇದು ಹೊರ ಬರುತ್ತದೆ. ಆಗ ಇದರ ಏಕರೂಪತೆಯೂ ಕೂಡ ಆಗುತ್ತದೆ ಎಂದು ನಾನು ತಿಳಿದು ಕೊಂಡಿದ್ದೇನೆ.

ಇನ್ನು ಮೈಸೂರು ಯೂನಿವರ್ಸಿಟಿ ಮತ್ತು ಕರ್ನಾಟಕದ ಯೂನಿವರ್ಸಿಟಿಗಳ ಬಗ್ಗೆ ಕಾಮನ್ ರೂಲ್ಸ್ ಮಾಡಿ ಏಕೆ ಜಾರಿಗೆ ತರಬಾರದು ಎಂದು ಕೆಲವು ಸದಸ್ಯರುಗಳು ಇಲ್ಲಿ ಹೇಳಿದ್ದಾರೆ. ಈ ಬಗ್ಗೆ ಹೇಳಬೇಕಾದರೆ, ಕರ್ನಾಟಕ ಯೂನಿವರ್ಸಿಟಿ ಆಕ್ಟಿಗೆ ಮತ್ತು ಮೈಸೂರು ಯೂನಿವರ್ಸಿಟಿ ಆಕ್ಟಿಗಳಿಗೆ ಅಮೆಂಡುಮೆಂಟುಗಳನ್ನು ಮಾಡುವುದಕ್ಕಾಗಿ ಸರಕಾರ ಕಮಿಟಿಗಳನ್ನು ನೇಮಕ ಮಾಡಿತ್ತು. ಈ ಎರಡು ಕಮಿಟಿಗಳವರೂ ಸರ್ಕಾರಕ್ಕೆ ಈಗ ರಿಪೋರ್ಟುಗಳನ್ನು ಕೊಟ್ಟಿದ್ದಾರೆ. ಇದಾದ ನಂತರ ನಾನು ಈ ಎರಡು ಯೂನಿವರ್ಸಿಟಿಗಳ ವೈಸ್ ಚಾನ್ಸಲರುಗಳನ್ನೂ ಕರೆಸಿ ಅವರ ಜೊತೆಯಲ್ಲಿ ಮಾತನಾಡಿದ್ದೇನೆ ಮತ್ತು ಅದರಂತೆ ಕೆಲವು ನಿರ್ಣಯಗಳಿಗೂ ಬಂದಿದ್ದೇವೆ. ಕರ್ನಾಟಕ ಯೂನಿವರ್ಸಿಟಿ ಮತ್ತು ಮೈಸೂರು ಯೂನಿವರ್ಸಿಟಿಗಳಲ್ಲಿ ಸಿಂಡಿಕೇಟು, ಸೆನೇಟು ಮತ್ತು ಅಕಾಡೆಮಿಕ್ ಕೌನ್ಸಿಲ್ಲುಗಳಲ್ಲಿ ಒಂದೇ ತರಹದ ಪರ್ಸನಲ್ ಇರುವಂತಹ ಬಾಡಿಗಳನ್ನು ರಚಿಸಬೇಕು ಮತ್ತು ಅವುಗಳ ಅಧಿಕಾರಗಳು ಎರಡೂ ಯೂನಿವರ್ಸಿಟಿಗಳಲ್ಲಿಯೂ ಒಂದೇ ರೀತಿಯಲ್ಲಿರಬೇಕು ಎಂದು.

ಶ್ರೀ ಜಿ. ವಿ. ಗೌಡ (ಪಾಳ್ಯ).—ಎರಡೂ ಯೂನಿವರ್ಸಿಟಿಗಳಿಗಾಗಿ ಒಂದೇ ಸಿಂಗಲ್ ಆಕ್ಟು ಏಕೆ ಮಾಡಬಾರದು ?

ಶ್ರೀ ಎಸ್. ಆರ್. ಕಂಠಿ.—ಎರಡಕ್ಕೂ ಒಂದೇ ಆಕ್ಟು ಏಕೆ ಆಗಬಾರದು ಎನ್ನುವ ವಿಚಾರವೂ ಇತ್ತು. ಈಗ ಕೇಂದ್ರ ಸರ್ಕಾರದಿಂದ ಒಂದು ಮಾಡಲ್ ಆಕ್ಟು ಬರುವುದರಲ್ಲಿದೆ. ಅದು ಬಂದ ಮೇಲೆ ಅದನ್ನು ನೋಡಿಕೊಂಡು ಇಲ್ಲಿಯೂ ಯಾವ ರೀತಿಯಾದ ಆಕ್ಟು ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡೋಣ ಎಂಬ ಯೋಚನೆಯೂ ಇದೆ.

ಇನ್ನು ಶ್ರೀಮಾನ್ ಕೃಷ್ಣರವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಮಂತ್ರಿಗಳು ಕರ್ನಾಟಕ ಯೂನಿವರ್ಸಿಟಿಯ ಕಡೆಗೇ ಹೆಚ್ಚು ಗಮನ ಕೊಡುತ್ತಿದ್ದಾರೆ, ಮತ್ತು ಅವರಿಗೆ ಬಹಳವಾಗಿ ಸಹಾಯ ಮಾಡುತ್ತಾರೆ; ಆದರೆ ಮೈಸೂರು ಯೂನಿವರ್ಸಿಟಿಗೆ ಹಾಗೆ ಮಾಡುತ್ತಿಲ್ಲ ವೆಂದು ಹೇಳಿದರು. ಅವರು ನನ್ನ ನಡತೆಯ ಬಗ್ಗೆ ಯಾವ ಆಧಾರದಿಂದ ಈ ನಿರ್ಣಯಕ್ಕೆ ಬಂದರು ಎನ್ನುವುದನ್ನು ನಾನು ಹೇಳಲಾರೆ. ಆದರೆ ಇದು ಸರಿಯಾದ ಭಾವನೆಯಲ್ಲ ಮತ್ತು ಇದನ್ನು ನಾನು ಸಂಪೂರ್ಣವಾಗಿ ನಿರಾಕರಿಸುತ್ತೇನೆ. ಇದರಲ್ಲಿ ಹೇಳಬೇಕೆಂದರೆ.....

ಶ್ರೀ ಎಸ್. ಶಿವಪ್ಪ.—ಸ್ವಲ್ಪ ಜಾಸ್ತಿ ಇರಬಹುದು. (ನಗು)

ಶ್ರೀ ಎಸ್. ಆರ್. ಕಂಠಿ.—ಸ್ವಲ್ಪ ಎಂದರೆ ಇಲ್ಲ ಎಂದು. (ನಗು)

ಶ್ರೀ ಎಸ್. ಎಂ ಕೃಷ್ಣ (ಮದ್ದೂರು).—ಹಾಗಾದರೆ ನಿಮ್ಮ ಯೂನಿವರ್ಸಿಟಿಯ ಮೇಲೆ ನಿಮಗೇ ಮಮತೆ ಇಲ್ಲ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಕರ್ಣಾಟಕ ಯೂನಿವರ್ಸಿಟಿಯ ಮೇಲೆ ಎಷ್ಟು ಅಭಿಮಾನವಿದೆಯೋ ಅಷ್ಟೇ ಅಭಿಮಾನ ಮೈಸೂರು ಯೂನಿವರ್ಸಿಟಿಯ ವಿಷಯದಲ್ಲಿಯೂ ಇದೆ. ಈಗ ತಾವು ಯೂನಿವರ್ಸಿಟಿ ಗ್ರ್ಯಾಂಟುಗಳ ವಿಚಾರವಾಗಿ ಹೇಳಿದಿರಿ. ಇಲ್ಲಿ ಎರಡು ತರದ ವಿಚಾರಗಳಿವೆ. ಒಂದು ಬ್ಲಾಕು ಗ್ರ್ಯಾಂಟು ಇನ್ನೊಂದು ಡೆವಲಪ್‌ಮೆಂಟು ಗ್ರ್ಯಾಂಟು. ಮೈಸೂರು ಯೂನಿವರ್ಸಿಟಿಗೆ ಬ್ಲಾಕು ಗ್ರ್ಯಾಂಟಾಗಿ 35 ಲಕ್ಷ ರೂಪಾಯಿಗಳಷ್ಟು, ಕರ್ನಾಟಕ ಯೂನಿವರ್ಸಿಟಿಗಾಗಿ 18 ಲಕ್ಷ ಎಂದು ಕೊಡಲಾಗಿದೆ. ಹೀಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಕಾರಣವೇನೆಂದರೆ, ಇದಕ್ಕೆ ಒಂದು ಇತಿಹಾಸವೇ ಇದೆ. ಫೈನಾನ್ಸ್ ಸೆಕ್ರಟೇರಿಯಟ್ಟಿನಲ್ಲಿ ಡೆಪ್ಯೂಟೀ ಫೈನಾನ್ಸ್ ಸೆಕ್ರಟರಿಗಳಾಗಿ ಕೆಲಸ ಮಾಡುತ್ತಿರುವ ಶ್ರೀಮಾನ್ ಭರತ್ ಅವರು ಎರಡೂ ಯೂನಿವರ್ಸಿಟಿಗಳಿಗೆ ಹೋಗಿ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಡನೆ ಕರೆತು ವಿಚಾರ ಮಾಡಿ, ಇದು ಸರಿಯಾಗಿರಬೇಕೇ ಬೇಡವೇ ಮತ್ತು ಇವರಿಗೆ ಎಷ್ಟು ಹಣ ಪೂರೈಸುವುದಕ್ಕೆ ಸಾಧ್ಯ ಎನುವುದನ್ನು ಯೋಚನೆ ಮಾಡಿ ಒಂದು ಸರ್ವಸಮ್ಮತವಾದ ರಿಪೋರ್ಟನ್ನು ಸರ್ಕಾರಕ್ಕೆ ಬರೆದು ಕೊಟ್ಟಿದ್ದಾರೆ. ಆ ರಿಪೋರ್ಟಿನಲ್ಲಿರುವಂತೆಯೇ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆರೀತಿ 35 ಲಕ್ಷ ಮತ್ತು 18 ಲಕ್ಷದಷ್ಟು ಹಣವನ್ನು ಪಡೆಯಲು ಎರಡೂ ಯೂನಿವರ್ಸಿಟಿಗಳವರು ಒಪ್ಪಿಕೊಂಡು ಅದರಂತೆ ಕೆಲಸಗಳನ್ನು ನಡೆಸುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.—ಮೊದಲು ಅವರು ಎಷ್ಟು ಕೇಳಿದ್ದರು ?

ಶ್ರೀ ಎಸ್. ಆರ್. ಕಂಠಿ.—ಮೊದಲಿಗೆ 38 ಲಕ್ಷದಷ್ಟು ಕೊಡಿ ಎಂದು ಕೇಳುತ್ತಿದ್ದರು. ಆದರೆ ಈಚೆಗೆ ಚರ್ಚೆ ನಡೆಸಿದ ಮೇಲೆ ಮೈಸೂರು ಯೂನಿವರ್ಸಿಟಿಯವರು 38 ಲಕ್ಷ ಕೇಳಿದ್ದರೂ, ಅವರು 35 ಲಕ್ಷಕ್ಕೆ ಒಪ್ಪಿದರು ಮತ್ತು ಕರ್ನಾಟಕ ಯೂನಿವರ್ಸಿಟಿಯವರು 22 ಲಕ್ಷದಷ್ಟು ಕೇಳಿದ್ದರೂ 18 ಲಕ್ಷಕ್ಕೆ ಒಪ್ಪಿದರು. ಹೀಗೆ ಶ್ರೀ ಭರತ್‌ರವರೊಡನೆ ಚರ್ಚೆ ಮಾಡಿ ಇಂತಹ ಒಂದು ನಿರ್ಣಯಕ್ಕೆ ಬಂದಂತಾಗಿದೆ. ಇದು ಕೂಡ ನಾನು ಎಜುಕೇಷನ್ನು ಮಿನಿಷ್ಟರಾಗಿ ಬಂದಾಗ ಆದುದಲ್ಲ. ಅದಕ್ಕೆ ಪೂರ್ವದಲ್ಲಿಯೇ ಆಗಿದೆ. ಆದುದರಿಂದ ಇದನ್ನು ನಾನು ಮಾಡಿದ್ದು ಎನ್ನುವ ವಾದ ಸರಿಯಾದುದಲ್ಲ.

SRI C. J. MUCKANNAPPA (Sira).—Is it on the strength of students or is it only discretionary only ?

ಶ್ರೀ ಎಸ್. ಆರ್. ಕಂಠಿ.—ಇದು ಮಾಡಿರುವುದು ಅಲ್ಲಿರುವ ಸ್ಟೂಡೆಂಟರಗಳ ಸಂಖ್ಯೆಯ ಮೇಲೆ ಮಾತ್ರ ಅಲ್ಲ. ಯೂನಿವರ್ಸಿಟಿಯ ಮೂಲಕ ನಡೆಸುವ ಕಾಲೇಜುಗಳು ಬಹಳ ಕಡಮೆ ಇವೆ. ಮೈಸೂರು ಯೂನಿವರ್ಸಿಟಿಯ ಮೂಲಕ ನಡೆಯುವ ಕಾಲೇಜುಗಳು ಮೂರು ಮಾತ್ರ ಇವೆ. ಅದರಂತೆ ಕರ್ನಾಟಕ ಯೂನಿವರ್ಸಿಟಿಯವರ ಮೂಲಕ ನಡೆಯುವ ಕಾಲೇಜುಗಳೂ ಮೂರು ಮಾತ್ರ. ಇದರ ಮೇಲೆ ಅವರ ಎಸ್ಟ್ಯಾಬ್ಲಿಷ್‌ಮೆಂಟು ಖರ್ಚು, ವೈಸ್ ಚಾನ್ಸಲರುಗಳ ಸಂಬಳ ಹಾಗೇ ಮಾನಸ ಗಂಗೋತ್ರಿಯಲ್ಲಿ ನಡೆಸುತ್ತಿರುವ ಪೋಸ್ಟು ಗ್ರ್ಯಾಜುಯೇಟು ಶಿಕ್ಷಣದ ಖರ್ಚು ಇವನ್ನೆಲ್ಲಾ ನೋಡಿ ಮಾಡಬೇಕಾಗುತ್ತದೆ. ಈಗ ಕ್ಷೇತ್ರ ವಿಶಾಲವಾಗಿರುವುದರಿಂದ ಎಷ್ಟು ವಿದ್ಯಾರ್ಥಿಗಳು ಇರುತ್ತಾರೋ ಅದರ ಮೇಲೆ ಹೋಗುತ್ತದೆ. ಇದಲ್ಲದೆ, ಪ್ರತಿಯೊಂದು ಕಾಲೇಜಿಗೂ ಮೇಂಟೆನೆನ್ಸು ಗ್ರ್ಯಾಂಟು ಬೇರೆ ಕೊಡುತ್ತೇವೆ. ಇದನ್ನೆಲ್ಲಾ ತೆಗೆದುಕೊಂಡು ಯೂನಿವರ್ಸಿಟಿಗಳಲ್ಲಿ ಖರ್ಚು ಮಾಡಬೇಕಾಗಿ ಬರುತ್ತದೆ. ಈ ರೀತಿ 35 ಲಕ್ಷ ಮತ್ತು 18 ಲಕ್ಷ ಎಂಬುದು ಕಾರ್ಯ ರೂಪದಲ್ಲಿ ಬಂದು ಈಗಾಗಲೇ ಮೂರು ವರ್ಷಗಳಾದುವು. ಮತ್ತೆ ಡೆವಲಪ್‌ಮೆಂಟು ಗ್ರ್ಯಾಂಟಿನ ಬಗ್ಗೆ ವಿಚಾರ ಮಾಡುತ್ತಾ ಮಾನ್ಯ ಸದಸ್ಯರು ಇಲ್ಲಿ ಒಂದು ತರಹದ ವಾದವನ್ನೆತ್ತಿದ್ದಾರೆ, ಪ್ರತಿಯೊಂದು ಯೂನಿವರ್ಸಿಟಿಗೂ 35 ಲಕ್ಷ ದಷ್ಟು ಡೆವಲಪ್‌ಮೆಂಟು ಗ್ರ್ಯಾಂಟನ್ನು ಕೊಡಬೇಕೆಂದು ಮೂರನೇ ಪ್ಲಾನಿನಲ್ಲೇ ಕೊಡಬೇಕು ಎಂದು 1961 ರಲ್ಲಿಯೇ ಒಂದು ನಿರ್ಣಯವಾಗಿದೆ. ಅದೇ ಪ್ರಕಾರವಾಗಿ ಸರ್ಕಾರದವರು ಈಗ ಕೊಡು ತ್ತಿದ್ದಾರೆ. 35 ಲಕ್ಷ ರೂಪಾಯಿಗಳನ್ನು ಡೆವಲಪ್‌ಮೆಂಟು ಗ್ರ್ಯಾಂಟಾಗಿ ಯಾವ ರೀತಿಯಾಗಿ ಕೊಟ್ಟರು ಮತ್ತು ಯಾವ ವರ್ಷದಲ್ಲಿ ಎನ್ನುವ ವಿವರಗಳು ಈ ರೀತಿ ಇವೆ. 1961–62ನೇ ಸಾಲಿಗಾಗಿ ಎರಡೂ ಯೂನಿವರ್ಸಿಟಿಗಾಗಿ 8 ಲಕ್ಷ ಮತ್ತು 8 ಲಕ್ಷ ಎಂದು ಕೊಡಲಾಗಿದೆ. 1962–63ನೇ ಸಾಲಿನಲ್ಲಿ 12 ಲಕ್ಷ ಮತ್ತು 12 ಲಕ್ಷ ಎಂದು ಎರಡಕ್ಕೂ ಕೊಡಲಾಗಿದೆ. ಆಮೇಲೆ 1963-64ನೇಯ ಸಾಲಿಗಾಗಿ 7·25 ಲಕ್ಷ ಎಂದು ಎರಡಕ್ಕೂ ಕೊಡಲಾಗಿದೆ. ಈ ಯೂನಿವರ್ಸಿಟಿಗೆ ಕೊಡಬೇಕಾಗಿರುವುದು 7·75 ಲಕ್ಷ ದಷ್ಟು ಮಾತ್ರ. ಇದನ್ನು ಇನ್ನು ಎರಡು ವರ್ಷಗಳಲ್ಲಿ ಕೊಡಬೇಕಾಗಿದೆ. ಇದನ್ನು ಕೊಡುವುದಕ್ಕೆ ಸರ್ಕಾರದವರೂ ಒಪ್ಪಿದ್ದಾರೆ. ಇದರಲ್ಲೇನೋ ಮಹಾ ವಿಷಯವಿದೆ ಎನ್ನುವ ಮಾತು ಸಾಧು ವಾದುದಲ್ಲ. ಆಮೇಲೆ ಡೆವಲಪ್‌ಮೆಂಟು ಗ್ರ್ಯಾಂಟುಗಳನ್ನು ಇವೆರಡು ಯೂನಿವರ್ಸಿಟಿಗಳಿಗೂ ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಕೊಡಲಾಗಿದೆ ಎನ್ನುವ ಸ್ಟೇಟುಮೆಂಟು ಇಲ್ಲಿದೆ. ಅದರಂತೆ ಹೇಳುವುದಾದರೆ 1957-58 ನೇ ಸಾಲಿನಲ್ಲಿ ಕರ್ನಾಟಕ ಯೂನಿವರ್ಸಿಟಿಗೆ 5 ಲಕ್ಷ ಮತ್ತು ಮೈಸೂರು

(ಶ್ರೀ ಎಸ್. ಆರ್. ಕಂಠಿ)

ಯೂನಿವರ್ಸಿಟಿಗೆ 1,11,108, 1958-59 ನೇ ಸಾಲಿನಲ್ಲಿ ಕರ್ನಾಟಕ ಯೂನಿವರ್ಸಿಟಿಗೆ 2 ಲಕ್ಷ ಮತ್ತು ಮೈಸೂರು ಯೂನಿವರ್ಸಿಟಿಗೆ 8,30,000, 1959-60ನೇ ಸಾಲಿನಲ್ಲಿ ಕರ್ನಾಟಕ ಯೂನಿವರ್ಸಿಟಿಗೆ10, 5, 900 ಮತ್ತು ಮೈಸೂರು ಯೂನಿವರ್ಸಿಟಿಗೆ 18, 83, 313, 1960-61 ನೇ ಸಾಲಿನಲ್ಲಿಕರ್ನಾಟಕ ಯೂನಿವರ್ಸಿಟಿಗೆ 9 ಲಕ್ಷ ಮತ್ತು ಮೈಸೂರು ಯೂನಿವರ್ಸಿಟಿಗೆ 6,77, 395 ಅನಂತರ1961-62ನೇ ಸಾಲಿಗಾಗಿ ಎರಡು ಯೂನಿವರ್ಸಿಟಿಗಳಿಗೂ8 ಲಕ್ಷ ಮತ್ತು 8 ಲ, 1962-63ನೇ ಸಾಲಿನಲ್ಲಿ 12 ಲಕ್ಷ ಮತ್ತು 12, ಲಕ್ಷ 1963-64 ನೇ ಸಾಲಿನಲ್ಲಿ 7·25 ಲಕ್ಷ ಮತ್ತು 7·25 ಲಕ್ಷಈಪ್ರಕಾರವಾಗಿ ಕೊಡುತ್ತ ಬಂದಿದ್ದೇವೆ. ಯಾವ ರೀತಿಯಾಗಿ ಮೂರನೇ ಪ್ಲಾನಿನಲ್ಲಿ ಹೇಳಲಾಗಿತ್ತೋ ಅದರಂತೆ ನಿರ್ಧಾರ ಮಾಡಿ ಇವರು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ಯಾರ ಕೈವಾಡಇದೆ ಎಂದು ಹೇಳುವ ಮಾತನ್ನು ನಂಬಲಿಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—1961-62 ನೆಯ ಸಾಲಿನಲ್ಲಿ ಮೈಸೂರು ಯೂನಿವರ್ಸಿಟಿಗಾಗಿ 47 ಲಕ್ಷದಷ್ಟು ಕೊಡಬೇಕೆಂದಿತ್ತು, ಇದೇಕೆ ಕಡಮೆ ಯಾಯಿತು ?

ಶ್ರೀ ಎಸ್. ಆರ್. ಕಂಠಿ.—ತಾವು ಹೇಳುವ ಅಂಕಿ ಸಂಖ್ಯೆಗಳು ಈಗ ಇಲ್ಲಿಲ್ಲ. ಬ್ಲಾಕು ಗ್ರ್ಯಾಂಟುಗಳು ಏನು ಎನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ತಾವು ಇಲ್ಲಿ ಹೇಳುವ ರಿಪೋರ್ಟು ನನ್ನಲ್ಲಿಲ್ಲ. ರಿಪೋರ್ಟು ತರಿಸಿ ಹಾಗೇನಾದರೂ ಇದೆಯೇ ಎನ್ನುವುದನ್ನು ನೋಡಿಸುತ್ತೇನೆ. ಇಲ್ಲಿ ನನ್ನಲ್ಲಿರುವ ಪಟ್ಟಿಯಂತೆ 1961-62 ನೆಯ ಸಾಲಿಗಾಗಿ ಮೈಸೂರು ಯೂನಿವರ್ಸಿಟಿಗೆ 35 ಲಕ್ಷದಷ್ಟು ಕೊಡಲಾಗಿದೆ ಎಂದು ಇದೆ. ತಾವು ಹೇಳುವುದನ್ನೂ ನೋಡಿಸುತ್ತೇನೆ.

ಆದರೆ ಅವರೀಗ ಹೇಳಿದ್ದನ್ನು ನಾನು ಮತ್ತೆ ನೋಡಿಸುತ್ತೇನೆ ಆದ್ದರಿಂದ ವಿದ್ಯಾಮಂತ್ರಿಗಳು ಒತ್ತಾಯಮಾಡಿ ಇದನ್ನು ಕಡಮೆ ಮಾಡಿಸಿದ್ದಾರೆಂದು ಹೇಳಿದ್ದು ಅಸತ್ಯವಾದ ಮಾತಾಗಿದೆ. ಅವರಿಗಾದರೂ ಸ್ವಲ್ಪ ಕಡಮೆಯಾಗಿದ್ದು, ಇನ್ನೊಬ್ಬರಿಗೆ ಜಾಸ್ತಿಯಾಗಿರಬಹುದು. ಇಲ್ಲವೇ ಇವರಿಗಾದರೂ ಸ್ವಲ್ಪ ಕಡಮೆ ಯಾಗಿ ಅವರಿಗಾದರೂ ಸ್ವಲ್ಪ ಜಾಸ್ತಿಯಾಗಿರಬಹುದು. ಆದರೆ ಇದನ್ನು ಅಲ್ಲಿಗೆಹೋಗಿ ಸ್ವತಃ ನೋಡಿಕೊಂಡುಬಂದ ನಮ್ಮ ಹಣಕಾಸಿನ ಇಲಾಖೆಯ ಕಾರ್ಯದರ್ಶಿಗಳು ಇದನ್ನು ನಿರ್ಧರಿಸಿರುತ್ತಾರೆ.

2-00 P.M.

Sri S. SIVAPPA.—It was agreed between your Secretary and the University. But actually the Government has given only 35 lakhs.

Sri S. R. KANTHI.—This is the figure that has been agreed to, because subsequently they also saw the Education Secretary, Deputy Secretary and myself. They all agreed to 35 lakhs and Sri Sivappa knows it.

ಇದಾದನಂತರ ಇನ್ನು ಆ ವೈಸ್‌ಛಾನ್ಸಲರ್ ನೇಮಕದ ಬಗ್ಗೆ ತಡಮಾಡಿದ್ದಾರೆಂದು ಹೇಳಿದ್ದಾರೆ. ಈಗತಾನೇ ನನಗೆ ಬಂದ ಸುದ್ದಿಯಪ್ರಕಾರ ಇದೇ ತಿಂಗಳು 15ನೇ ತಾರೀಖಿನೊಳಗಾಗಿ ಶ್ರೀಮಾಲಿಯವರು ಇಲ್ಲಿಗೆ ಒಂದು ವೈಸ್‌ಛಾನ್ಸಲರ್ ಆಗಿ ಛಾರ್ಜನ್ನು ತೆಗೆದುಕೊಳ್ಳುತ್ತಾರೆಂದು ತಿಳಿದು ಬಂದಿದೆ. ಆದರೆ ಇದೇನೂ ಅಂಥ ತಡವಲ್ಲ. ದುರಾದೃಷ್ಟದಿಂದ ಶ್ರೀ ಪಣಿಕ್ಕರ್ ಅವರು ತೀರಿಕೊಂಡದ್ದರಿಂದ ಬೇಗ ವೈಸ್‌ಛಾನ್ಸಲರನ್ನು ನೇಮಕಮಾಡಲು ಆಗಲಿಲ್ಲ. ಆದರೂ 3 ತಿಂಗಳು ಮುಗಿಯುವುದರೊಳಗೇ ಬೇರೊಬ್ಬರನ್ನು ನಾವು ನೇಮಕಮಾಡಿದ್ದೇವೆ. ಆದ್ದರಿಂದ ಇದೇನೂ ಅಷ್ಟು ತಡವಲ್ಲ.

ಇನ್ನು ಈಗ ಎದ್ದಿರತಕ್ಕ ಮತ್ತೊಂದು ವಾದವೇನೆಂದರೆ : ಈ ವೈಸ್‌ಛಾನ್ಸಲರ ಹುದ್ದೆಯನ್ನು ಮೈಸೂರಿನವರೊಬ್ಬರಿಗೇ ಕೊಡಬೇಕೆಂಬುದು. ಆದರೆ ಈ ಹಿಂದೆ ಇದೇ ಸಭೆಯಲ್ಲಿ ವಿರೋಧಪಕ್ಷದ ಸದಸ್ಯರೊಬ್ಬರು ಹೊರಗಿನವರನ್ನೇ ತರಬೇಕೆಂದು ಹೇಳುತ್ತಿದ್ದರು. ಹಾಗೇ ನಾವು ಹೊರಗಿನವರೊಬ್ಬರನ್ನು ತಂದಿದ್ದಾಯಿತು. ಆದರೆ ಅವರು ದುರ್ದೈವದಿಂದ ತೀರಿಕೊಂಡರು. ಅವರಿಲ್ಲಿಗೆ ಬಂದು ಕೇವಲ 5 ತಿಂಗಳು ಮಾತ್ರ ಆಗಿತ್ತು. ಆದರೆ ಈ ಮಧ್ಯೇ ಅಂಥ ಕಾಲಬದಲಾವಣೆಯೇನೂ ಆಗಿಲ್ಲ. ಆದಾಗ್ಯೂ ಈಗ ಇಲ್ಲಿಯವರನ್ನೇ ಮೈಸೂರಿನವರೊಬ್ಬರನ್ನೇ ತರಬೇಕೆಂದು ಹೇಳುತ್ತಿದ್ದಾರೆ.

Sri S. SIVAPPA.—Even then I have said that there should be a Mysorean.

Sri S. M. KRISHNA.—I also said the same thing.

Sri S. R. KANTHI.—He is a diehard-Mysorean.

Sri S. M. KRISHNA.—I am proud of it, because we had certain traditions.

Sri S. R. KANTHI.—He must remember that he is an Indian first and a Mysorean second.

ನೀವು ಹಾಗೇ ಮೈಸೂರಿನವರಾಗಿ ಉಳಿಯಿರಿ, ಭಾರತೀಯರಾಗದ್ದಿದರೂ ಚಿಂತೆಯಿಲ್ಲ. ಈ ಹಿಂದೆ ಶ್ರೀ ಮುಕ್ಕಣ್ಣಪ್ಪನವರೂ ಹೊರಗಿನವರನ್ನೇ ಇಲ್ಲಿಗೆ ವೈಸ್‌ಛಾನ್ಸಲರ್‌ನ್ನಾಗಿ ತರಬೇಕೆಂದು ಹೇಳಿದ್ದರು. ಈಗ ಅದರಂತೆಯೇ ನಾವು ಮಾಡಿದ್ದೇವೆ. ಆದರೆ 1959ರಲ್ಲಿ ಮಾಡತಕ್ಕ ಆ ಮೈಸೂರು ಯೂನಿವರ್ಸಿಟಿಯ ಆಕ್ಟ್‌ನಿದೆ ಅದನ್ನು ತಿದ್ದುಪಡಿಮಾಡಿ ಅದರಲ್ಲಿ ಸರ್ಕಾರದ ಅಧಿಕಾರಿಗಳಿರಬಾರದೆಂದು ಮಾಡಿದರೆ ಈ ತೊಂದರೆಗಳೊಂದೂ ಬರುವುದಿಲ್ಲ. ಇನ್ನು ನಾನು ಇಬ್ಬರ ವೈಸ್‌ಛಾನ್ಸಲರನ್ನೂ ಕರೆಸಿ ಅವರೊಂದಿಗೆ ಚರ್ಚೆಮಾಡಿದ್ದೇನೆ. ಆ ಕಾಲಕ್ಕೆ ಅಲ್ಲಿ ಶ್ರೀ ಬಸಪ್ಪನವರಿದ್ದರು. ಆಗ ಅವರು ಹೇಳಿದರು ಸರ್ಕಾರಕ್ಕೆ ವೈಸ್‌ಛಾನ್ಸಲರನ್ನು ಅಪಾಯಿಂಟ್ ಮಾಡಬೇಕೆಂಬ ಇರಾದೆ ಇದ್ದರೂ ಆದಕ್ಕೆ ಅವರು ಒಪ್ಪುತ್ತಿಲ್ಲ. ನಾಮಕರಣ ಪದ್ಧತಿಯು ಇರಬೇಕೆಂದು ಅವರು ಹೇಳುತ್ತಾರೆ. ಇನ್ನು ಹೊರಗಿನವರು ಬಂದಾಗ್ಗೂ ಅವರು ಕಾಮರಾಜ್ ಪ್ಲಾನಿನಿಂದ ಹೊರಗೆ ಬಂದವರಾಗಿದ್ದಾರೆ. ಆದ್ದರಿಂದ ಅವರನ್ನೇಕೆ ನೇಮಕಮಾಡಬೇಕು ಎಂಬ ಒಂದು ವಾದ ಎದ್ದಿದೆ. ಆದರೆ ಕಾಮರಾಜ್ ಪ್ಲಾನಿನಿಂದ ಹೊರಗೆ ಬಂದರೆ ಅವರು ಬೇರೆ ಯಾವ ಹುದ್ದೆಯನ್ನೂ ಅಂಗೀಕಾರಮಾಡಕೂಡದೆಂದು ಎಲ್ಲಿಯೂ ಹೇಳಿಲ್ಲ.

ಯಾರೇ ಬರಲಿ ಅವರು ದೇಶದ ಕೆಲಸವನ್ನು ಮಾಡುತ್ತಾರೆ. ಆದರೆ ಇಲ್ಲಿ ಕೆಲವು ಮಾನ್ಯ ಸದಸ್ಯರು ವ್ಯಕ್ತಪಡಿಸುತ್ತಿರುವ ಅಭಿಪ್ರಾಯವನ್ನು ನೋಡಿದರೆ ಕಾಮರಾಜ್ ಪ್ಲಾನಿನಿಂದ ಹೊರಗೆ ಬಂದವರಿಗೆ ಬೇಟಿಕೊಟ್ಟು ಅವರನ್ನು ನೇರವಾಗಿ ಸ್ವರ್ಗಕ್ಕೇ ಕಳುಹಿಸಿಬಿಡಬೇಕು ಎಂಬುದಾಗಿದ್ದಂತೆ ಕಂಡುಬರುತ್ತಿದೆ.

ಶ್ರೀ ಎಸ್. ಎಂ. ಕೃಷ್ಣ.—ಈಗ ಅಜೀತಪ್ರಸಾದರನ್ನು ಮಂತ್ರಿಗಳಾಗಿ ಮಾಡಿದಂತೆ ಅವರನ್ನು ಮೈಸೂರಿನ ವಿದ್ಯಾಮಂತ್ರಿಗಳನ್ನಾಗಿ ಏಕೆ ಮಾಡಬಾರದಾಗಿತ್ತು ?

ಶ್ರೀ ಎಸ್. ಆರ್. ಕಂಠಿ.—ಆ ರೀತಿವಾದಮಾಡುವುದು ಸರಿಯಾದ್ದಲ್ಲ. ಈಗ ನೇಮಕವಾಗಿರತಕ್ಕವರು ತಮ್ಮ ಇಡೀ ಜೀವನವನ್ನೇ ಈ ಶಿಕ್ಷಣರಂಗದಲ್ಲಿ ಕಳೆದಿದ್ದಾರೆ. ಅವರು ಎಕ್ಸ್‌ಪರ್ಟ್ ಎಜುಕೇಷನಲಿಸ್ಟ್. ಅವರು ಕಾಮರಾಜ್ ಪ್ಲಾನಿನಿಂದ ಹೊರಗೆ ಬಂದವರೆಂದು ಅವರನ್ನು ಕಡೆಗಾಣಿಸುವುದು ಸರಿಯಲ್ಲ.

ಇನ್ನು ಶ್ರೀ ಜಿ. ವಿ. ಗೌಡರು ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಬಹಳ ಕಡಮೆಯಾಗುತ್ತಿದೆ ಎಂದು ಹೇಳಿದ್ದಾರೆ......

ಶ್ರೀ ಎಸ್. ಶಿವಪ್ಪ.—ಈಗ ಬರತಕ್ಕ ವೈಸ್‌ಛಾನ್ಸಲರಿಗೆ ಸಂಬಳವೆಷ್ಟು ?

ಶ್ರೀ ಎಸ್. ಆರ್. ಕಂಠಿ.—ಹಿಂದಿನವರಿಗೇನು ಸಂಬಳವಿತ್ತೋ, ಮತ್ತು ಅವರಿಗೇನು ಕಂಡೀಷನ್‌ಗಳಿದ್ದವೋ ಅವುಗಳನ್ನೇ ಇವರಿಗೂ ಹಾಕಲಾಗಿದೆ. ಇವರ ಟರ್ಮ್ ಮೂರು ವರ್ಷ.

ಇನ್ನು ಪ್ರಾಥಮಿಕ ಶಾಲೆಗಳ ಹಾಜರಾತಿಯನ್ನು ಪ್ರಶ್ನೆಮಾಡಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಇದಕ್ಕೆ ಸರ್ಕಾರ ಹೆಚ್ಚಿನ ಗಮನ ಕೊಡುತ್ತದೆಂದು ಹೇಳುತ್ತೇನೆ. ಕೆಲವು ಭಾಗಗಳಲ್ಲಿ ಈ ರೀತಿ ಹಾಜರಾತಿ ಕಡಮೆಯಾಗಿದೆ. ಕೆಲವು ದೊಡ್ಡ ಊರುಗಳಲ್ಲೂ ಸ್ಲಂ ಇರತಕ್ಕ ಕಡೆ ಈ ರೀತಿ ಕಡಮೆಯಾಗಿದೆ. ಅದಕ್ಕಾಗಿ ನಾವೀಗ ಇನ್‌ಸ್ಪೆಕ್ಟೊರೇಟನ್ನು ರ್‍ಯಾಷನ್‌ಲೈಜ್‌ಮಾಡಬೇಕೆಂದಿದ್ದೇವೆ.

ಇನ್ನು ಬೆಟರ್‌ಮೆಂಟ್ ಕಮಿಟಿಗಳು ಎಂದು ಏನಿವೆ ಅವುಗಳ ಕಡೆಗೂ, ಪಂಚಾಯಿತಿ ಕಮಿಟಿಗಳು, ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್‌ಗಳು, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗಳು, ಇವುಗಳ ಕಡೆಗೂ ಸ್ವಲ್ಪ ಮಟ್ಟಿಗೆ ಮಾನ್ಯ ಸದಸ್ಯರು ಗಮನ ಕೊಟ್ಟರೆ ಒಳ್ಳೆಯದಾಗುತ್ತದೆ. ಕೆಲವು ಕಡೆಗಳಲ್ಲಿ ಬೆಟರ್‌ಮೆಂಟ್ ಕಮಿಟಿಗಳು ಬಹಳ ಚೆನ್ನಾಗಿ ಕೆಲಸ ಮಾಡಿವೆ. ಇನ್ನು ಶಾಲೆಗೆ ಹೋಗುವ ಮಕ್ಕಳಿಗೆ ವಿದ್ಯೆಗಾಗಿ ವ್ಯವಸ್ಥೆ ಮಾಡುವ ಬಗ್ಗೆ ಆ ಕಮಿಟಿಯವರ ಜೊತೆಯಲ್ಲಿ ಸ್ಥಳೀಯ ಸಂಸ್ಥೆಗಳು ಹಾಗೂ ಈ ಸಭೆಯ ಮಾನ್ಯ ಸದಸ್ಯರುಗಳು ಸ್ವಲ್ಪ ಮಟ್ಟಿಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಹುಡುಗರನ್ನು ಶಾಲೆಗೆ ಬರುವಂತೆ ಮಾಡುವುದಕ್ಕಾಗಿ, ಆಕರ್ಷಕವಾದ ರೀತಿಯಲ್ಲಿ ಶಿಕ್ಷಕರೇ ವ್ಯವಸ್ಥೆ ಮಾಡಬೇಕೆಂದು ಸರಕಾರದವರು ಅವರನ್ನು ಕೇಳಿಕೊಂಡಿದ್ದಾರೆಂಬ ಸಂಗತಿಯನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

(ಶ್ರೀ ಎಸ್.ಆರ್. ಕಂಠಿ)

ಮೂರನೆಯದಾಗಿ, ನಾವು ಈಗ ಶಾಲಾ ಕಟ್ಟಡಗಳನ್ನು ಆಕರ್ಷಕವಾದ ರೀತಿಯಲ್ಲಿ ಇಡದಿದ್ದರೆ ಮಕ್ಕಳಿಗೆ ತಮ್ಮ ಮನೆಗೂ, ಶಾಲೆಗೂ ಏನೂ ವ್ಯತ್ಯಾಸವಿಲ್ಲವೆಂಬ ಭಾವನೆ ಬರುತ್ತದೆ. ಆದ್ದರಿಂದ ಶಾಲಾ ಕಟ್ಟಡಗಳನ್ನು ಆದಷ್ಟು ಚೆನ್ನಾಗಿ ಇಡಬೇಕೆಂದು ಸೂಚನೆಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಆದರೂ ಇದು ಬಹಳ ದೊಡ್ಡದಾದಂಥ ಪ್ರಶ್ನೆ. ಲೆಖ್ಖ ಹಾಕಿದರೆ ಪ್ರಾಥಮಿಕ ಶಾಲಾ ಕಟ್ಟಡಕ್ಕೆ 30 ರಿಂದ 40 ಕೋಟಿ ರೂಪಾಯಿಗಳವರೆಗೂ ಹಣ ಬೇಕಾಗುತ್ತದೆ. ಇದು ಬಹಳ ದೊಡ್ಡದಾದಂಥ ಕೆಲಸ. ಪ್ಲಾನಿನಲ್ಲಿಯೇ ಸುಮಾರು 10 ಲಕ್ಷ ರೂಪಾಯಿಗಳು ಶಾಲೆಗೆ ಬೇಕಾಗುತ್ತವೆ. ಸಾಧಾರಣವಾಗಿ ಒಂದು ಶಾಲಾ ಕೊಠಡಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೂ ಸರ್ಕಾರಕ್ಕೆ 2-2½ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಬಹಳ ದೊಡ್ಡ ಸಮಸ್ಯೆಗಳಲ್ಲಿ ಇದೂ ಒಂದಾಗಿದೆ. ಕೇಂದ್ರ ಸರ್ಕಾರದವರಲ್ಲಿ ಆದಷ್ಟು ಪ್ರಯತ್ನ ಮಾಡಿ ಸ್ವಲ್ಪ ಮಟ್ಟಿಗೆ ಈ ಬಗ್ಗೆ ಸಾಲ ಕೊಡಬೇಕೆಂದು ಅವರಿಗೆ ಹೇಳಿದ್ದೇವೆ. ಮೊದಲನೆ ಕಂತು 25 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಹೆಚ್ಚು ಅಂದರೆ ಸುಮಾರು ಒಂದು ಕೋಟಿ ರೂಪಾಯಿಗಳವರೆಗೂ ಸಾಲ ಕೊಡುತ್ತೇವೆಂದು ಹೇಳಿದ್ದಾರೆ. ಇದೂ ಅಲ್ಲದೆ ಎಷ್ಟು ಸಾಧ್ಯವೋ ಅಷ್ಟು ಹೈಸ್ಕೂಲು ಶಾಲಾ ಕಟ್ಟಡಗಳಿಗೂ ಸಹ ಹಣ ಸಹಾಯ ಒದಗಿಸಿ ಕೊಡುತ್ತೇವೆಂದು ಹೇಳಿದ್ದಾರೆ.

ಇನ್ನೊಂದು ವಿಷಯ. ಈ ಸಭೆಯ ಮಾನ್ಯ ಸದಸ್ಯರೊಬ್ಬರು ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್ ಉಪಾಧ್ಯಾಯರುಗಳಿಗೆ ಈಗಿನ ಪೆನ್ಷನ್ ಸ್ಕೀಂ ಅನ್ವಯವಾಗ ಬೇಕೆ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳಿದ್ದಾರೆ. ಅದು ಮಾತ್ರ ಸಾಧ್ಯವಾಗುವುದಿಲ್ಲ. ಈಗ ಟ್ರಿಬ್ಬಲ್ ಬೆನಿಫಿಟ್ ಸ್ಕೀಂ ಒಂದನ್ನು ಮಾಡಿದ್ದೇವೆ. ಯಾವ ಹೈಸ್ಕೂಲುಗಳೇ ಆಗಲೀ ಅಥವಾ ಟ್ರೈನಿಂಗ್ ಕಾಲೇಜುಗಳಾಗಲೀ ಖಾಸಗಿಯವರಿಂದ ನಡೆಯುತಿದ್ದರೆ ಅವೆಲ್ಲವೂ ಟ್ರಿಬಲ್ ಬೆನಿಫಿಟ್ ಲಾಭ ಪಡೆಯಬೇಕೇ ವಿನಾ ಅವುಗಳಲ್ಲಿನ ಉಪಾಧ್ಯಾಯರಿಗೆ ಪೆನ್ಷನ್ ಸ್ಕೀಂ ಕೊಡುವುದಕ್ಕಾಗುವುದಿಲ್ಲ.

ಇನ್ನು ಕೊಂಡಜ್ಜಿ ಬಸಪ್ಪನವರ ವರದಿಯ ಆಧಾರದ ಮೇಲೆ ಶಿಕ್ಷಣ ವಿಕೇಂದ್ರೀಕರಣವಾಗುತ್ತದೆ. ಆಗ ಒಂದು ಏಕರೂಪತೆ ಮೇಲೆ ಬದಲಾವಣೆ ಮಾಡಬೇಕಾಗಿ ಬರುತ್ತದೆ. ಅಲ್ಲಿಯವರೆಗೆ ಏನು ಮಾಡುವುದಕ್ಕಾಗುವುದಿಲ್ಲ.

ಇನ್ನು ಶ್ರೀಮಾನ್ ಗೋಪಾಲ ಗೌಡರು ಮಾತನಾಡುತ್ತಾ ಕನ್ನಡ ಬೋಧ ಭಾಷೆಯಾಗಬೇಕು ಎಂಬುದಾಗಿ ಒಂದು ಮಾತನ್ನು ಹೇಳಿದರು. ಹೈಸ್ಕೂಲುಗಳಲ್ಲಿ ಈಗಾಗಲೇ ಆ ರೀತಿ ನಡೆಯುತ್ತಾ ಇವೆ. ಕಾಲೇಜುಗಳಲ್ಲಿ ನಡೆಯುತ್ತಾ ಇಲ್ಲ. ಮೈಸೂರಿನಲ್ಲಿರತಕ್ಕ ಕೆಲವು ಕಾಲೇಜುಗಳಲ್ಲಿ ಪಿ. ಯು. ಸಿ.ಯಲ್ಲಿ ಕನ್ನಡ ಬೋಧ ಭಾಷೆಯನ್ನಾಗಿ ಮಾಡಲು ಎಷ್ಟು ಪ್ರಗತಿಯಾಗಬೇಕೋ ಅಷ್ಟು ಆಗಿಲ್ಲ.

ಶ್ರೀ ಎಸ್. ಶಿವಪ್ಪ.—ಎಲ್ಲಿ ಆಗುತ್ತದೆ? ವೈಸ್ ಚಾನ್ಸಲರಿಗೇ ಕನ್ನಡ ಬರುವುದಿಲ್ಲ.

Sri S. R. KANTHI.—He is an Executive officer. You are the persons who can by down the policy. ಈ ವಿಚಾರವಾಗಿ ಯೂನಿವರ್ಸಿಟಿಯವರು ಹೆಜ್ಜೆ ಇಡಬೇಕಾಗಿದೆ. All India policy ಏನಿದೆಯೋ ಅದೇ ರೀತಿ ಯೂನಿವರ್ಸಿಟಿಯಲ್ಲಿ ಬೋಧ ಭಾಷೆ ಪ್ರಾದೇಶಿಕ ಭಾಷೆಯಾಗಬೇಕೆಂಬ ತತ್ವವನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ಇಂಥಾದನ್ನು ಸ್ವಲ್ಪ ಸ್ವಲ್ಪವಾಗಿ ಯೂನಿವರ್ಸಿಟಿಯವರೆ ಮಾಡಬೇಕು.

ಇನ್ನು ಕನ್ನಡ ಎನ್‌ಸೈಕ್ಲೋಪಿಡಿಯ ಕೆಲಸ ಬಹಳ ನಿಧಾನವಾಗಿದೆ ಎಂಬುದಾಗಿ ಒಬ್ಬ ಮಾನ್ಯ ಸದಸ್ಯರು ಹೇಳಿದರು. ಆ ಕೆಲಸ ಈಗಾಗಲೇ ತ್ವರಿತವಾಗಿ ನಡೆಯುತ್ತದೆ. ಮೊದಲನೆಯ ವಾಲ್ಯೂಂ ಈ ವರ್ಷ ಹೊರಕ್ಕೆ ಬರುತ್ತದೆ. ಒಟ್ಟು 12 ವಾಲ್ಯೂಮ್ಸ್ ಆಗಬೇಕು. ಆದಷ್ಟು ಜಾಗ್ರತೆಯಾಗಿ ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಏಕೆಂದರೆ ಕನ್ನಡ ನಿಘಂಟಿಗಿಂತ ಇದರ ಕೆಲಸ ಬಹಳ ಕಾಲ ತೆಗೆದುಕೊಳ್ಳುತ್ತದೆ. ಬಹು ದೊಡ್ಡದಾದಂಥ ಕೆಲಸ. ಅದಕ್ಕಾಗಿ ಸ್ವಲ್ಪ ನಿಧಾನವಾಗಿದೆ.

ಇನ್ನು ಕನ್ನಡ ಟೈಪ್‌ರೈಟರ್ ಉಪಯೋಗದ ವಿಚಾರವಾಗಿ ಶ್ರೀಮಾನ್ ಗೋಪಾಲ ಗೌಡರು ಕೇಳಿದ್ದಾರೆ. ನಮಗೆ ನೂರು ಕನ್ನಡ ಟೈಪ್‌ರೈಟರುಗಳು ಬಂದುವು. ಅವನ್ನೆಲ್ಲಾ ಹಂಚಿದ್ದೇವೆ. ಈಗ ಮತ್ತೆ ನೂರಕ್ಕೆ ಆರ್ಡರ್ ಕೊಟ್ಟಿದ್ದೇವೆ. ಡಿಮ್ಯಾಂಡ್ ನೋಡಿಕೊಂಡು ಇವನ್ನು ಹಂಚಲಾಗುತ್ತದೆ. ಇತ್ತೀಚೆಗೆ ಹೈಸ್ಕೂಲುಗಳಿಗೆ ಬೇಕೆಂದು ಬೇಡಿಕೆಗಳು ಬೇರೆ ಬೇರೆ ಭಾಗಗಳಿಂದ ಬರುತ್ತಲಿವೆ; ಹೆಚ್ಚಾಗುತ್ತಲಿವೆ. ಹೆಚ್ಚು ಹೆಚ್ಚಾಗಿ ಹೈಸ್ಕೂಲುಗಳನ್ನು ಎಲ್ಲಾ ಭಾಗಗಳಲ್ಲಿಯೂ ತೆರೆಯಲು ಬೇಕಾದ ಹಣವನ್ನು ಯಥೇಚ್ಛವಾಗಿ ಹಂಚಬೇಕೆಂಬ ಧೋರಣೆ ಸರ್ಕಾರಕ್ಕೇನೋ ಇದೆ. ಈ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಕೇವಲ 200 ಹೈಸ್ಕೂಲುಗಳನ್ನು ಮಾತ್ರ ತೆರೆಯ

ಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದರೂ ಸುಮಾರು 420 ಹೈಸ್ಕೂಲುಗಳನ್ನು ತೆರೆಯಲು ಅನುಮತಿ ಕೊಟ್ಟಿದ್ದೇವೆ. ಆದ್ದರಿಂದ ನಾವು ಈಗ ಜಾಸ್ತಿಯಾಗಿಯೇ ಕೊಟ್ಟಿದ್ದೇವೆ. ಇನ್ನೂ ಈಗಲೂ ಅದರ ಬಗ್ಗೆ ಬೇಡಿಕೆ ಇದ್ದೇ ಇದೆ. ಅದನ್ನು ಪೂರೈಸಬೇಕಾದರೆ ಯೋಜನೆ ಪ್ರಕಾರ 200 ಹೈಸ್ಕೂಲುಗಳನ್ನು ಪ್ರಾರಂಭಿಸ ಬೇಕೆಂಬ ಟಾರ್ಜೆಟ್ ಏನಿದೆಯೋ ಅದರ ಎರಡು ಮೂರರಷ್ಟು ಆಗುತ್ತದೆ ಜಾಸ್ತಿಯಾದರೂ ಚಿಂತೆಯಿಲ್ಲ. ಇನ್ನು ಮೆಡಿಕಲ್ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಪ್ರಯತ್ನ ಮಾಡುವುದು ಅತ್ಯಾವಶ್ಯಕವೆಂದು ತಿಳಿದು ಈಗಾಗಲೇ ಸರ್ಕಾರದವರು ಆ ಬಗ್ಗೆ ಅನೇಕ ವಿಧವಾಗಿ ಕ್ರಮಗಳನ್ನು ಕೈಕೊಳ್ಳುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ನೀವು ಆರೀತಿ ಸೌಕರ್ಯಗಳನ್ನು ಕೊಡದಿದ್ದರೆ ಸತ್ಯಾಗ್ರಹ ಹೂಡುತ್ತೇವೆ.

ಶ್ರೀ ಎಸ್. ಆರ್. ಕಂಠಿ.—ಅವರು ಸತ್ಯಾಗ್ರಹ ಮಾಡುವುದನ್ನು ನೋಡೋಣ. ಅವರು ಆ ರೀತಿ ಮಾಡುವವರೇ ಅಲ್ಲ. ಅವರೂ ಈಗ ಆ ವಾದ ಬೇಡ.

ಇನ್ನು ಒಂದು ಕೊನೆಯ ಮಾತು. ಶ್ರೀಮಾನ್ ಕೃಷ್ಣ ಅವರು ಬಹಳ ಉತ್ಸಾಹಿಗಳು, ತರುಣರು, ಅವರು ಬ್ಯಾಚುಲರ್ ಎಂಬುದು ನನಗೆ ಗೊತ್ತಾಗಲಿಲ್ಲ. ಆದರೆ ಅವರು ವಿಶಾಲ ಮೈಸೂರು ರಾಜ್ಯದಲ್ಲಿ ಅಸೆಂಬ್ಲಿಯ ಸದಸ್ಯರಾಗಿ ಒಳ್ಳೆಯ ಹೆಸರನ್ನು ಪಡೆದು ಹೆಚ್ಚಿನ ವಿದ್ಯಾವಂತರಾಗಿರುವುದರಿಂದ ಶ್ರೀಮಾನ್ ಗೋಪಾಲಗೌಡರು ಉತ್ತರ ಕರ್ಣಾಟಕದ ಹೆಣ್ಣನ್ನು ಮದುವೆಯಾಗಿರುವ ಹಾಗೆ ಇವರಿಗೂ ಉತ್ತರ ಕರ್ಣಾಟಕ ದವರನ್ನೇನಾದರೂ ಮದುವೆ ಮಾಡಿದರೆ ಆಗ ಎಲ್ಲ ಸರಿಹೋಗುತ್ತದೆಂದು ನಾನು ದೇವರನ್ನು ಪ್ರಾರ್ಥನೆ ಮಾಡುತ್ತೇನೆ...........

Sri C. J. MUCKANNAPPA.—I do not want the Education Minister to become "Nazookaiah".

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರತಿವರ್ಷವೂ ಬಡ್ಜೆಟ್ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ರಾಜ್ಯಪಾಲರು ಎರಡು ಸದನಗಳನ್ನೂ ಉದ್ದೇಶಿಸಿ ಭಾಷಣ ಮಾಡುತ್ತಾರೆ. ಅದರಮೇಲೆ ಮಂಡಿಸಿದಂತಹ ವಂದನಾರ್ಪಣ ಪ್ರಸ್ತಾಪದ ಬಗ್ಗೆ ಕೂಡ ವಿಚಾರಗಳನ್ನು ವ್ಯಕ್ತಪಡಿಸುವಂತೆ ಅವಕಾಶ ಮಾನ್ಯಸದಸ್ಯರಿಗೆ ಸಿಕ್ಕುತ್ತದೆ. ಯಾವಾಗಲೂ ವಿರೋಧಪಕ್ಷದ ಮಾನ್ಯಸದಸ್ಯರು ಯಾವ ರೀತಿಯ ವಿಚಾರಗಳನ್ನು ವ್ಯಕ್ತಮಾಡುತ್ತಾರೆಯೋ ಬಹುಶಃ ಹೆಚ್ಚುಕಡಮೆ ಅದೇ ರೀತಿಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆಂದು ನನಗೆ ಕಾಣಿಸುತ್ತದೆ. ಯಾವುದೂ ಹೊಸವಿಚಾರವನ್ನು ಅವರು ಹೇಳಲಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಕಳೆದ ಒಂದು ವರ್ಷದಲ್ಲಿ ಸರ್ಕಾರದವರು ಸಾಧಿಸಿದ್ದು ಏನು, ಮತ್ತು ಮುಂದೆ ಯಾವ ರೀತಿಯ ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೆ ಎನ್ನುವ ವಿಚಾರಗಳು ಅದರಲ್ಲಿ ಇರುತ್ತವೆ. ಅದನ್ನು ಕೂಲಂಕಷವಾಗಿ ವಿಚಾರಮಾಡಿ ಅದರಲ್ಲಿ ಸಾಧಿಸಿದಂಥಾದ್ದು ಎಷ್ಟರಮಟ್ಟಿಗೆ ಇದೆ, ಎಷ್ಟರಮಟ್ಟಿಗೆ ಸಾಧಿಸಬೇಕಾಗಿತ್ತು ಎನ್ನುವಂಥಾದ್ದನ್ನು ರಚನಾತ್ಮಕ ದೃಷ್ಟಿಯಿಂದ ವಿಚಾರಮಾಡಿ ಯೋಗ್ಯ ಸಲಹೆಗಳನ್ನು ಕೊಡುವಂಥಾ ಜವಾಬ್ದಾರಿ ವಿರೋಧಪಕ್ಷದ ಮಾನ್ಯಸದಸ್ಯರ ಜವಾಬ್ದಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅಂಥವರು ಸಂಪೂರ್ಣವಾಗಿ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವರು ಇದ್ದಾರೆ. ವಿರೋಧಪಕ್ಷದ ಒಬ್ಬ ಮಾನ್ಯಸದಸ್ಯರು ಇಲ್ಲಿ ಇದ್ದ ಅವಕಾಶವನ್ನು ಉಪಯೋಗಿಸಿಕೊಂಡು ಒಂದು ಮಾತನ್ನು ಹೇಳಿದರು. ಅದನ್ನು ಕೇಳಿ ನನಗೆ ಬಹಳ ನೋವಾಯಿತು. ಆ ಮಾನ್ಯಸದಸ್ಯರ ಹೆಸರನ್ನು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅವರು ಹೇಳಿದರು, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ 1947ನೇ ಇಸವಿಯಿಂದ ಅನೇಕ ಕಾಂಗ್ರೆಸ್ ರಾಜ್ಯಗಳನ್ನು ನಾನು ನೋಡಿದ್ದೇನೆ. ಆದರೆ ಈಗ ಹೊಸದಾಗಿ ಚುನಾವಣೆಯಾಗಿ ನಾವೆಲ್ಲರೂ ಇಲ್ಲಿಗೆ ಬಂದಮೇಲೆ ಇವೊತ್ತಿನ ದಿವಸ ಇಲ್ಲಿ ಇರುವಂಥಾ ಕಾಂಗ್ರೆಸ್ ರಾಜ್ಯವನ್ನು ನಾನು ಎಲ್ಲಿಯೂ ನೋಡಲಿಲ್ಲ ಎಂದು. ಎಂದರೆ ಅವರ ಅರ್ಥದಲ್ಲಿ ಇಂಥಾ ಒಂದು ಕನಿಷ್ಟ ಸರ್ಕಾರವನ್ನು ನಾನು ಎಲ್ಲಿಯೂ ನೋಡಲಿಲ್ಲ ಎನ್ನುವ ಧಾಟಿಯಲ್ಲಿ ಅವರು ಹೇಳಿದರು. ಅದನ್ನು ಕೇಳಿ ನನಗೆ ಬಹಳ ನೋವಾಯಿತು. ಆಮೇಲೆ ವಿರೋಧಪಕ್ಷದ ನಾಯಕರು ಹೇಳಿದರು, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಈಗ ಇಲ್ಲಿ ಇರುವಂಥಾ ಸರ್ಕಾರವನ್ನು ನಾನು ಮೊದಲನೆಯ ಸಲ ನೋಡುತ್ತಿದ್ದೇನೆ ಎಂದು. ಜವಾಬ್ದಾರಿಯುತವಾದ ಒಂದು ಸ್ಥಾನದಲ್ಲಿರತಕ್ಕ ಅವರು ಈ ಮಾತನ್ನು ಹೇಳಿದರು. ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಟ್ಟಾರೆ ನಾನು ಹೇಳುವುದು ಪ್ರತಿಯೊಂದು ಸಲ ಏನು ಟೀಕೆಗಳನ್ನು ಮಾಡಿದ್ದಾರೆಯೋ ಬಹುಶಃ ಅದೇ ಟೀಕೆಗಳನ್ನು ಮಾಡಿದ್ದಾರೆ. ಹಿಂದಿನ ಬಡ್ಜೆಟ್ ಅಧಿವೇಶನದ ಅವರ ಭಾಷಣಗಳನ್ನು ತೆಗೆದು

(ಶ್ರೀ ವೀರೇಂದ್ರ ಪಾಟೀಲ್)

ನೋಡಿದರೆ ಅವರು ಆಗ ಮಾಡಿದಂತಹ ಭಾಷಣಕ್ಕೂ ಈ ಭಾಷಣಕ್ಕೂ ಏನೂ ಹೆಚ್ಚುಕಡಮೆ ಆಗುವುದಿಲ್ಲ ಎಂದು ಅನಿಸುತ್ತದೆ. ಈಗ ಒಂದು ವರ್ಷದಿಂದ ನೀವು ಏನೂ ಹೆಚ್ಚು ಸಾಧಿಸಿಲ್ಲ ಎಂದು ಅವರು ಹೇಳಿದರು. ಅದನ್ನು ಹೇಳುವ ಅಧಿಕಾರ ಅವರಿಗೆ ಇದೆ. ಈಗ ಒಂದು ವರ್ಷದಿಂದ ನಾವು ಏನು ಸಾಧಿಸಿದ್ದೇವೆ ಎಂಬುದನ್ನು ನಾನು ಹೇಳುತ್ತೇನೆ. ಪ್ರತಿವರ್ಷವೂ ಹೇಳಿದ್ದೇ ಹೇಳುತ್ತಾರೆ ಎನ್ನುವ ದೋಷಕ್ಕೆ ನಾನು ಒಳಗಾಗದೆ ನಾನು ನನ್ನ ಖಾತೆಗೆ ಸಂಬಂಧಪಟ್ಟ ಕೆಲವು ಮಾತುಗಳನ್ನು ಹೇಳುತ್ತೇನೆ. ಈಗ ಒಂದು ವರ್ಷದಲ್ಲಿ ನಾವು ಯಾವ ಯಾವ ಕಾರ್ಯಗಳನ್ನು ಸಾಧಿಸಿದ್ದೇವೆ ಎನ್ನುವ ವಿಷಯದಲ್ಲಿ ಕೆಲವಾರು ವಿಷಯಗಳನ್ನು ನಾನು ಹೇಳುತ್ತೇನೆ. ಆ ಮೇಲೆ ಬಡ್ಜೆಟ್ಟಿನ ಮೇಲೆ ಚರ್ಚೆಯಾಗುವ ಕಾಲಕ್ಕೆ ಪ್ರತಿಯೊಂದು ಡಿಮ್ಯಾಂಡು ಬಂದಾಗ ಚರ್ಚೆ ಮಾಡುವುದಕ್ಕೆ ಅವಕಾಶವಿರುತ್ತದೆ. ಅಗ ಆ ಬಗ್ಗೆ ಉತ್ತರಕೊಡುವುದಕ್ಕೆ ಅವಕಾಶವಿರುತ್ತದೆ. ಈಗ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಕೃಷ್ಣಾನದಿಯಲ್ಲಿ ನಮಗೆ ಸಾಕಷ್ಟು ನೀರಿನ ಪಾಲು ಸಿಕ್ಕಬೇಕೆಂದು ನಾವು ಅನೇಕ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಈಗ ಒಂದು ವರ್ಷದ ಅವಧಿಯಲ್ಲಿ ಎರಡು ಪ್ರಾಜೆಕ್ಟುಗಳಿಗೆ ಕೇಂದ್ರಸರ್ಕಾರದಿಂದ ಟೆಕ್ನಿಕಲ್ ಕ್ಲಿಯರೆನ್ಸ್ ತಂದಿದ್ದೇವೆ ಎನ್ನುವ ಮಾತನ್ನು ನಾನು ಬಹಳ ಅಭಿಮಾನದಿಂದ ಹೇಳುತ್ತಿದ್ದೇನೆ. ಘಟಪ್ರಭಾ ಪ್ರಾಜೆಕ್ಟಿನ ವಿಷಯ ತಮಗೆ ಗೊತ್ತಿದೆ. ಅದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯುವುದಕ್ಕೋಸ್ಕರ ಕೇಂದ್ರಸರ್ಕಾರದ ಸೆಂಟ್ರಲ್ ವಾಟರ್ ಪವರ್ ಕಮಿಷನ್ನಿಗೆ ನಾವು ಯೋಜನೆ ಕಳುಹಿಸಿ ಎರಡೂವರೆ ವರ್ಷಗಳಾಗಿದ್ದುವು. ಅದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕದೆ ಹಾಗಿಯೇ ಕುಳಿತುಕೊಂಡಿತ್ತು. ಅದರ ಕರೆಸ್‌ಪಾಂಡೆನ್ಸ್ ನಡೆಯುತ್ತಾ ಇತ್ತು. ಅದು ಸ್ಟ್ರೈಟ್‌ಗ್ರಾವಿಟಿ ಡ್ಯಾಂ ಮಾಡಿ ಎಂದು ಒಬ್ಬರು ಹೇಳುತ್ತಿದ್ದರು. ಒಂದು ಸ್ಟ್ರೈಟ್ ಡ್ಯಾಮ್ ಮಾಡಿ ಎಂದು ಒಬ್ಬರು ಹೇಳುತ್ತಿದ್ದರು, ಆ ಡ್ಯಾಮಿನ ಡಿಜೈನ್ ಈ ರೀತಿ ಇರಬೇಕೆಂದು ಒಬ್ಬರು ಹೇಳುತ್ತಿದ್ದರು. ಹೀಗಾಗಿ ಆ ಬಗ್ಗೆ ಈಗ ಎರಡು ವರ್ಷಗಳಿಂದಲೂ ಕರೆಸ್‌ಪಾಂಡೆನ್ಸ್ ನಡೆಯುತ್ತಾ ಇತ್ತು. ಈಗ ಆ ಪ್ರಾಜೆಕ್ಟಿಗೆ ಕ್ಲಿಯರೆನ್ಸ್ ಸಿಕ್ಕಿದೆ. ಆ ಕೆಲಸ ಪ್ರಾರಂಭವಾಗಿದೆ, ಭರದಿಂದ ಆ ಪ್ರಾಜೆಕ್ಟಿನ ಕೆಲಸ ನಡೆಯುತ್ತಿದೆ. ಈ ವರ್ಷ ಸಾಧಿಸಿರುವ ಸಾಧನೆಗಳಲ್ಲಿ ಅದೂ ಒಂದು ಸಾಧನೆ ಎಂದು ನಾನು ಹೇಳುತ್ತೇನೆ.

ಇನ್ನೊಂದು ಅತಿ ಮಹತ್ವದ ಸಾಧನೆಯಾಗಿರುವುದು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ವಿಷಯ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ನಾವು ಹೇಳಿರಲಿಲ್ಲ. ನಮ್ಮ ಸಮಾಧಾನದ ಸಲುವಾಗಿ ಅದನ್ನು ಮೂರನೇ ಪಂಚವಾರ್ಷಿಕಯೋಜನೆಯಲ್ಲಿ ಹಾಕಿಕೊಂಡು ಅದಕ್ಕೆ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು. ಕೃಷ್ಣಾ ಮೇಲ್ದಂಡೆಯ ಯೋಜನೆಯ ಅಂಕಿಅಂಶಗಳನ್ನು ಹೇಳುವುದಕ್ಕೆ ಈಗ ನಾನು ತಯಾರಿಲ್ಲ. ಆದರೆ ಅದು 120 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟ್ ಆಗುತ್ತದೆ. 200 ಟಿ.ಎಂ.ಸಿ.ಎಫ್.ಟಿ. ನೀರನ್ನು ಯುಟಿಲೈಜೇಷನ್ ಮಾಡುವಂತಾ ಒಂದು ಪ್ರಾಜೆಕ್ಟ್ ಆಗಿದೆ. ಇದೂ ಒಂದು ಸಾಧನೆಯನ್ನು ನಾವು ಮಾಡಿದ್ದೇವೆ. ಇವೊತ್ತು ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ. ಆಡಳಿತದಲ್ಲಿ ಲೋಪದೋಷಗಳಿಲ್ಲ ಎಂದು ನಾನು ಹೇಳುತ್ತಾ ಇಲ್ಲ. ಒಂದೆರಡು ಲೋಪದೋಷಗಳು ಇರಬಹುದು. ಈಗ ನಮ್ಮ ದೇಶದಲ್ಲಿ ಏನು ಸಾಧನೆಯಾಗಿದೆ, ಏನು ಸಾಧನೆಯಾಗುತ್ತಿದೆ ಎನ್ನುವ ವಿಚಾರಕ್ಕೆ ಹೋಗೋಣ. 120 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟಿಗೆ ಸೆಂಟ್ರಲ್ ವಾಟರ್ ಪವರ್ ಕಮಿಷನ್ನಿನವರು ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೆ ಅದನ್ನು ಇರಿಗೇಷನ್ ಮಿನಿಸ್ಟ್ರಿಯವರು ನಮಗೆ ಕಳುಹಿಸಿಕೊಟ್ಟಿದ್ದಾರೆ. ಇದರ ಪರಿಣಾಮ ಏನು ಎಂಬುದನ್ನು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಈಗಾಗಲೇ ನಾವು ತೆಗೆದುಕೊಂಡಿರುವ ಪ್ರಾಜೆಕ್ಟುಗಳನ್ನು ಸಂಪೂರ್ಣ ಮಾಡಿಲ್ಲ. ಅವುಗಳನ್ನು ಪೂರ್ತಿಮಾಡುವುದಕ್ಕೆ ನಮಗೆ ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತವೆ. ಹೀಗಿದ್ದರೂ ಕೂಡ ಹೊಸ ಹೊಸ ಪ್ರಾಜೆಕ್ಟುಗಳ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆಯೇ ಎಂದು ಕೇಳುವುದು ಸ್ವಾಭಾವಿಕ. ನಾನು ಹಿಂದೆ ಹೇಳಿದ್ದೇನೆ, ಒಂದು, ಎರಡು ಮತ್ತು ಮೂರನೆಯ ಯೋಜನೆಗಳಲ್ಲಿ ಮೀಡಿಯಂ ಮತ್ತು ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಟೋಟಲ್ 228·69 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿ ಅವುಗಳನ್ನು ಸ್ಟಾರ್ಟ್ ಮಾಡಿದ್ದೇವೆ ಎಂದು. ಒಂದು, ಎರಡು ಮತ್ತು ಮೂರನೆಯ ಯೋಜನೆಗಳಲ್ಲಿ ಅವುಗಳಿಗೆ ಈಗಾಗಲೆ 81·11 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಮೂರು ಯೋಜನೆಗಳಲ್ಲಿ ತೆಗೆದುಕೊಂಡ ಕೆಲಸಗಳು ಮುಗಿಯಬೇಕಾದರೆ 147·58 ಕೋಟಿ ರೂಪಾಯಿಗಳು ಬೇಕಾಗುತ್ತವೆ.

2-30 P.M.

ನಾವು ಈಗ ತೆಗೆದುಕೊಂಡಿರುವ ಪ್ರಾಜೆಕ್ಟ್‌ಗಳನ್ನೆಲ್ಲ ಮುಗಿಸಬೇಕಾದರೆ ಇನ್ನೂ 147 ಕೋಟಿ ರೂಪಾಯಿಗಳು ನಮಗೆ ಬೇಕು. ಅನೇಕ ಮಾನ್ಯ ಸದಸ್ಯರು ಕೃಷ್ಣ ನೀರಿನಲ್ಲಿ ಸರಿಯಾದ ಪಾಲನ್ನು ಪಡೆಯುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ಎಂದು ಕೇಳಿದರು. ನಮಗೆ 600 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ 1974ರ ವರೆಗೂ ಅವಕಾಶವನ್ನು ಕೊಟ್ಟಿದ್ದಾರೆ. ಅವರಲ್ಲಿಗೆ ಹೋದಾಗ ಆ ನೀರನ್ನು ಉಪಯೋಗಿಸುವ ಶಕ್ತಿ ಇದೆಯೋ ಇಲ್ಲವೋ, ಅದಕ್ಕೆ ಬೇಕಾದ ಸೌಲಭ್ಯಗಳು ಇವೆಯೋ ಇಲ್ಲವೋ ಎಂದು ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಆದ್ದರಿಂದ ನಾವು ಕೃಷ್ಣ ನೀರನ್ನು ಕೇಳುವಾಗ ಅದರ ಇನ್ನೊಂದು ಮುಖವನ್ನೂ ಕೂಡ ನೋಡಬೇಕಾಗುತ್ತದೆ. ಈ ಸಭೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಕೂಡ ನಾನು ಹೇಳಿದ್ದೇನೆ, ಹೆಚ್ಚು ನೀರನ್ನು ಬೇಕು ಎಂದು ಕೇಳುತ್ತಿದ್ದೀರೇ ಹೊರತು ನೀರು ಸಿಕ್ಕಿದಲ್ಲಿ ಅದನ್ನು ಉಪಯೋಗ ಮಾಡಬೇಕಾಗಿದ್ದರೆ ದುಡ್ಡು ಎಲ್ಲಿಂದ ತರಬೇಕು ಎನ್ನುವುದಕ್ಕೆ ಯಾವ ತರಹ ರಚನಾತ್ಮಕವಾದ ಸಲಹೆಯನ್ನೂ ಇದುವರೆಗೆ ಯಾರೂ ಮಾಡಿಲ್ಲ ಎಂದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಪಾನ ನಿರೋಧವನ್ನು ರದ್ದು ಮಾಡಿ, ರಸ್ತೆ ಸಾರಿಗೆ, ಸೇಲ್ಸ್‌ಟ್ಯಾಕ್ಸ್ ಮುಂತಾದುವುಗಳಲ್ಲಿ ಸೋರಿ ಹೋಗುತ್ತಿರುವುದನ್ನು ತಡೆಗಟ್ಟಿ ಎಂದು ಹೇಳುತ್ತಿದ್ದೇವೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ಹೇಳಿದ್ದಾರೆ. ಪಂಚವಾರ್ಷಿಕ ಯೋಜನೆಯ ಸ್ಪಿಲ್ ಓವರ್ ಕೆಲಸಗಳನ್ನು ಇಟ್ಟುಕೊಂಡರೂ, ಸುಮಾರು 120 ಕೋಟಿ ರೂಪಾಯಿ ವೆಚ್ಚದ ಅಪ್ಪರ್ ಕೃಷ್ಣ ಯೋಜನೆಗೆ ಕ್ಲಿಯರೆನ್ಸ್ ತಂದಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಪ್ರಾಜೆಕ್ಟನ್ನು ಎಲ್ಲಿ ಕಟ್ಟಬೇಕು, ಅಲಮಟ್ಟಿಯಲ್ಲಿಯೇ ಅಥವಾ ನಾರಾಯಣಪುರದಲ್ಲಿಯೇ ಎನ್ನುವ ವಿಚಾರದಲ್ಲಿ ತಮ್ಮಲ್ಲಿಯೇ ಒಳಜಗಳಗಳಿವೆಯಲ್ಲ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುವಷ್ಟರಲ್ಲಿಯೇ ಮಾನ್ಯ ಸದಸ್ಯರು ಆತುರ ಪಡುತ್ತಾರೆ. ನಮ್ಮಲ್ಲಿ ದುರ್ದೈವದಿಂದ ಏನಾಗಿದೆ ಎಂದರೆ ನಾವೆಲ್ಲ ಪ್ರಾರಂಭಶೂರರು; ಮತ್ತು ಚರ್ಚೆ ಮಾಡುವುದರಲ್ಲಿ, ವಿವಾದವನ್ನು ಹುಟ್ಟಿಸುವುದರಲ್ಲಿ ಶೌರ್ಯತ್ವವನ್ನು, ಶಕ್ತಿಯನ್ನೂ ತೋರಿಸುತ್ತಿದ್ದೇವೆಯೇ ಹೊರತು ನಮಗೆ ದೊರೆಯುವ ನೀರನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕು, ಏನೋ ಪ್ರಯತ್ನಗಳನ್ನು ಮಾಡಿಕೊಂಡು ಕ್ಲಿಯರೆನ್ಸ್ ಪಡೆದ ಮೇಲೆ ಯಾವ ರೀತಿ ಅದರ ಸದುಪಯೋಗ ಮಾಡಿಕೊಳ್ಳಬೇಕು ಎನ್ನುವುದನ್ನು ನೋಡುತ್ತ ಇಲ್ಲ.

ಶ್ರೀ ಎಸ್. ಗೋಪಾಲ ಗೌಡ.—ನಾವು ರಚನಾತ್ಮಕ ಸಲಹೆಗಳನ್ನು ಕೊಟ್ಟಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಸರ್ಕಾರದಲ್ಲಿ ಇದ್ದು ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುವವರು, ರಾಜ್ಯಕ್ಕೆ ಬರುವ ನೀರಿನ ಪಾಲನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗದೆ ಹೋದರೆ ಅದಕ್ಕೆ ಪ್ರತಿಯಾಗಿ ನಮ್ಮ ಮೇಲೆ ಅಪಾದನೆಯನ್ನು ಮಾಡುವುದರಿಂದ ರಾಜ್ಯಕ್ಕೆ ನೀರು ಬರುತ್ತದೆ ಎಂದು ನಾನು ತಿಳಿದುಕೊಳ್ಳುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನದಿ ನೀರಿನಲ್ಲಿ ಪಾಲನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಇಲ್ಲವೇ ಎನ್ನುವ ಪ್ರಶ್ನೆಯ ಮೇಲೆ ಹೋಗುತ್ತ ಇಲ್ಲ. ನಾನು ಹೇಳಿದ್ದು ಇವತ್ತು ಯಾವ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡಿದ್ದೇವೆಯೋ ಅವಷ್ಟನ್ನೂ 1974ರ ಒಳಗಾಗಿ ಪೂರ್ತಿಯಾಗಿ ಬುಕ್‌ಮಾಡಿ ಉಪಯೋಗ ಮಾಡಿಕೊಳ್ಳಲು ಶಕ್ತಿ ಇದೆಯೇ, ಹೆಚ್ಚು ನೀರು ಬೇಕು ಎನ್ನುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು, ಆ ಕ್ರಮಗಳನ್ನು ತೆಗೆದುಕೊಳ್ಳಲು ಎಷ್ಟು ಗಾತ್ರದ ಸಮಸ್ಯೆ ನಮ್ಮ ಮುಂದೆ ಇದೆ ಎಂದು ಹೇಳುತ್ತಿದ್ದೇನೆ. ನಮಗೆ ಬರಬೇಕಾದ ನೀರನ್ನು ಪಡೆಯಲು ಯಾವ ರೀತಿಯ ಪ್ರಯತ್ನಗಳು ನಡೆಯುತ್ತಿವೆ ಎನ್ನುವುದು ತಮಗೆಲ್ಲ ಗೊತ್ತಿದೆ. ನದಿ ನೀರಿನ ಹಂಚಿಕೆಯ ಬಗ್ಗೆ ಕೇಂದ್ರ ಸರ್ಕಾರ ಮಾಡಿರುವುದಕ್ಕೆ ನಮ್ಮ ಒಪ್ಪಿಗೆ ಇಲ್ಲ ಎನ್ನುವ ಮಾತನ್ನು ರಾಜ್ಯಪಾಲರು ಸಹ ಹೇಳಿದ್ದಾರೆ.

ನಾನು ಹೇಳುತ್ತಿರುವ ವಿಚಾರಗಳು ಇಲ್ಲಿರುವ ಮಾನ್ಯ ಸದಸ್ಯರಿಗೆ ಮಾತ್ರ ಗೊತ್ತಾಗಬೇಕು ಎಂದಲ್ಲ. ಇಡೀ ರಾಜ್ಯದಲ್ಲಿ ಪರಿಸ್ಥಿತಿ ಏನಿದೆ, ಸರ್ಕಾರ ಇದನ್ನು ಯಾವ ರೀತಿ ಎದುರಿಸುತ್ತಿದೆ, ಸರ್ಕಾರದ ಯೋಜನೆಗಳೇನಿವೆ, ಈ ವಿಷಯಗಳೆಲ್ಲ ಜನತೆಗೂ ಗೊತ್ತಾಗಬೇಕು. ಇಲ್ಲಿರುವವರು ಪ್ರತ್ಯಕ್ಷವಾಗಿ ತಿಳಿದುಕೊಳ್ಳುತ್ತಾರೆ. ಹೊರಗಿರುವ ಜನರು ಪತ್ರಿಕೆಗಳ ಮೂಲಕ ತಿಳಿಯುವ ಅವಕಾಶವಿದೆ. ಅದಕ್ಕಾಗಿ ಹೇಳುತ್ತಿದ್ದೇನೆ.

(ಶ್ರೀ ವೀರೇಂದ್ರ ಪಾಟೀಲ್)

ಕೃಷ್ಣ ಮೇಲ್ದಂಡೆ ಯೋಜನೆಗೆ ಕ್ಲಿಯರೆನ್ಸ್ ಬಂದ ಮೇಲೆ ಆಲಮಟ್ಟಿಯಲ್ಲಿ ಕಟ್ಟಬೇಕೇ, ನಾರಾಯಣಪುರದಲ್ಲಿ ಕಟ್ಟಬೇಕೇ ಎನ್ನುವುದರ ಬಗ್ಗೆ ವಿವಾದವನ್ನು ಹುಟ್ಟಿಸುವುದರಲ್ಲಿ ನಾವು ನಮ್ಮ ಕಾಲವನ್ನು ಖರ್ಚು ಮಾಡುವುದಕ್ಕೆ ತಯಾರಾಗಿದ್ದೇವೆಯೇ ಹೊರತು, ಕೆಲಸ ಮಾಡೋಣ ದುಡ್ಡು ಖರ್ಚು ಮಾಡೋಣ, ಆದಷ್ಟು ತೀವ್ರ ಕೆಲಸ ಮಾಗಿಸಿ ನೀರನ್ನು ಉಪಯೋಗ ಮಾಡೋಣ ಎನ್ನುವುದರ ಕಡೆ ಏನು ರಚನಾತ್ಮಕ ದೃಷ್ಟಿ ಇರಬೇಕೋ ಅದು ಕಾಣುತ್ತ ಇಲ್ಲ. ಕೆಲವು ಕಡೆ explcitation (ಶೋಷಣೆ) ಕಾಣಿಸುತ್ತಿದೆ. ಕೆಲವರು ಬಿಜಾಪುರಕ್ಕೆ ಹೋಗಿ ಆಲಮಟ್ಟಿಯಲ್ಲಿ ಅಣೆಕಟ್ಟನ್ನು ಕಟ್ಟುವುದಿಲ್ಲ, ಬಿಜಾಪುರಕ್ಕೆ ನೀರು ದೊರೆಯುವುದಿಲ್ಲ, ನೀವೆಲ್ಲ ಸೇರಿ ಒಂದು ಸಮ್ಮೇಳನವನ್ನು ಮಾಡಿ ನಾವೂ ತಜ್ಞರನ್ನು ಕರೆದುಕೊಂಡು ಬರುತ್ತೇವೆಂದು ಹೇಳುತ್ತಾರೆ. ಅದೇ ರೀತಿ ಕೆಲವರು ಗುಲ್ಬರ್ಗಾಕ್ಕೆ ಹೋಗಿ ನಾರಾಯಣಪುರದಲ್ಲಿ ಅಣೆಕಟ್ಟನ್ನು ಕಟ್ಟುವುದಿಲ್ಲ, ಆಲಮಟ್ಟಿಯಲ್ಲಿ ಕಟ್ಟುತ್ತಾರೆ, ಇದರಿಂದ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ನೀರು ಸಿಕ್ಕುವುದಿಲ್ಲ, ನೀವೆಲ್ಲ ಏಕೆ ಸುಮ್ಮನೆ ಕುಳಿತಿದ್ದೀರಿ, ನೀವೂ ಗದ್ದಲವನ್ನು ಎಬ್ಬಿಸಿ, ನಾವು ಭಾಷಣ ಮಾಡುತ್ತೇವೆ ಎಂದು ಹೇಳುತ್ತಾರೆ. ಈ ರೀತಿ ಇವತ್ತು ನಾರಾಯಣಪುರದಲ್ಲಿ ಕಟ್ಟಬೇಕೇ ಅಥವಾ ಆಲಮಟ್ಟಿಯಲ್ಲಿ ಕಟ್ಟಬೇಕೇ ಎನ್ನುವ ವಿಚಾರದಲ್ಲಿ ಅಗಲೆ ಚರ್ಚೆ ಪ್ರಾರಂಭವಾಗಿದೆ. ಈಗಾಗಲೇ ಸರ್ಕಾರದ ಧೋರಣೆ ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಎರಡು ಕಡೆಯೂ ಅಣೆಕಟ್ಟನ್ನು ಕಟ್ಟುತ್ತೇವೆ ಏಕಕಾಲಕ್ಕೆ ಅಡಿಗಲ್ಲನ್ನು ಹಾಕುತ್ತೇವೆ, ಎರಡು ಕಡೆಯೂ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದೇನೆ. ಇನ್ನೂ ಒಮ್ಮೆ ಇವತ್ತಿನ ದಿವಸವೂ ಹೇಳುತ್ತಿದ್ದೇನೆ.

ಶ್ರೀ ಜಿ. ಎನ್. ಪಾಟೀಲ್ (ತಾಳಿಕೋಟೆ).—ನಾರಾಯಣಪುರ ಮತ್ತು ಆಲಮಟ್ಟಿಯಲ್ಲಿ ಎರಡು ಕಡೆಯೂ ಅಣೆಕಟ್ಟನ್ನು ಕಟ್ಟುವುದಾಗಿ ಹೇಳಿದಿರಿ. ಆದರೆ main dam ಎಲ್ಲಿ ಆಗುತ್ತದೆ ಎಂಬುದನ್ನು ಸ್ವಲ್ಪ ವಿವರಿಸಿ ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ನಿಮಗೆ ಹೇಳಬೇಕಾದರೆ main dam subsidiary dam ಎನ್ನುವಂಥ ಪ್ರಶ್ನೆಯೇ ಇಲ್ಲ. ಇವತ್ತು ನಾವು ಹೆಚ್ಚು ನೀರು ಉಪಯೋಗ ಮಾಡುವುದಕ್ಕೆ ಏನೇನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆಯೋ ಅದನ್ನೆಲ್ಲ ತೆಗೆದುಕೊಳ್ಳುತ್ತೇವೆ. ಯಾವ ಅಣೆಕಟ್ಟನ್ನು ಯಾವ ಹಂತದಲ್ಲಿ ಮೊದಲು ನಿಲ್ಲಿಸುತ್ತೇವೆ, ಯಾವ ಹಂತದಲ್ಲಿ ತೆಗೆದುಕೊಳ್ಳುತ್ತೇವೆ ಎನ್ನುವ ವಿವರಗಳೆಲ್ಲ ಇಂಜನಿಯರುಗಳಿಗೆ ಮತ್ತು ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿಗೆ ಬಿಟ್ಟದ್ದು. ಅದರಲ್ಲಿ ಡಾಕ್ಟರ್ ರಾವ್ ಅವರೂ ಸಹ ಇದ್ದಾರೆ. ಮಾನ್ಯ ಸದಸ್ಯರ ಸಂಶಯ ನಿವಾರಣೆಯಾಗಬೇಕು ಎನ್ನುವುದರ ಸಲುವಾಗಿ ಒಂದು ವಿಷಯವನ್ನು ಹೇಳುತ್ತೇನೆ. ಕೇಂದ್ರ ನೀರಾವರಿ ಮಂತ್ರಿಗಳು ಇದೇ ಮಾರ್ಚ್ ತಿಂಗಳು 14 ಮತ್ತು 15 ನೇ ತಾರೀಖು ಆ ಭಾಗದಲ್ಲಿ ಪ್ರವಾಸ ಮಾಡಿಕೊಂಡು ಹೋಗುತ್ತಾರೆ. ಅವರು ಆಲಮಟ್ಟಿ ಮತ್ತು ನಾರಾಯಣಪುರ ಎರಡು ಸ್ಥಳಗಳನ್ನೂ ನೋಡಿಕೊಂಡು ಹೋಗುತ್ತಾರೆ. ಆದಷ್ಟು ಬೇಗ ಹೆಚ್ಚು ನೀರನ್ನು ಉಪಯೋಗ ಮಾಡಿಕೊಳ್ಳಬೇಕು, ಆದಷ್ಟು ತೀವ್ರ ಪ್ರತಿಫಲ ಬರಬೇಕು, ನಮ್ಮ ಭೂಮಿಗೆ ನೀರು ಬರಬೇಕು, ನೀರನ್ನು ಉಪಯೋಗ ಮಾಡಿಕೊಳ್ಳಲು ಯಾವುದು ಆರ್ಥಿಕವಾಗಿ ಹೆಚ್ಚು ಲಾಭ ಕೊಡುತ್ತದೆ, ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಅಂಥ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಬೇಕು ಎನ್ನುವ ವಿಚಾರವನ್ನು ಮಾಡುತ್ತಿದ್ದೇವೆ.

ಬಿಜಾಪುರಕ್ಕೆ ಅನ್ಯಾಯಮಾಡಬೇಕೆಂದು ಸರ್ಕಾರ ಕನಸು ಮನಸಿನಲ್ಲಿಯೂ ಯೋಚಿಸಿಲ್ಲ ಹಾಗೆ ಎಂದು ಮಾನ್ಯಸದಸ್ಯರಿಗೆ ಹೇಳಬಯಸುತ್ತೇನೆ. ಬಿಜಾಪುರದಲ್ಲಿ ಅವರು ಯಾವ ರೀತಿ ದೇಶ ಪ್ರೇಮದಿಂದ ಹಣ, ಚಿನ್ನ ಮುಂತಾದುವನ್ನು ಕೊಟ್ಟರೋ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ವಿಶೇಷವಾಗಿ ಭೂಮಿ ಮುಳುಗಡೆಯಾಗುವುದೂ ಎಲ್ಲ ಬಿಜಾಪುರದ ಭೂಮಿಯೇ.

ಶ್ರೀ ಎಸ್. ಶಿವಪ್ಪ.—ಬಿಜಾಪುರದಿಂದ ಮೂರು ಜನ ಮಂತ್ರಿಗಳಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಬಿಜಾಪುರದಲ್ಲಿ ಆಲಮಟ್ಟಿಯ ಹತ್ತಿರ ಇವತ್ತು ಅಣೆಕಟ್ಟೆಯನ್ನು ಹಾಕಿದರೂ ಸಿಂದಿಗಿ, ಇಂಡಿ ತಾಲ್ಲೂಕುಗಳಲ್ಲಿ ಲಿಫ್ಟ್ ಇರಿಗೇಷನ್‌ನಿಂದ 2-3 ಲಕ್ಷ ಎಕರೆ ಭೂಮಿ ನೀರಾವರಿಗೆ ಬರಬೇಕಾಗಿದೆ. ಕಡಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿ ಅಲ್ಲಿಯ ರೈತರಿಗೆ ಲಿಫ್ಟ್ ಇರಿಗೇಷನ್ನಿನಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಒದಗುವಂತೆ ವ್ಯವಸ್ಥೆ ಮಾಡುವ ಯೋಚನೆ ಸರ್ಕಾರಕ್ಕಿದೆ. ಆದುದರಿಂದ ತಮ್ಮ ಹಿತವನ್ನು ಬಿಟ್ಟುಬಿಡಬೇಕಾದ ವಿಚಾರ ಯಾವುದೂ ಇದರಲ್ಲಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಆಲಮಟ್ಟಿಯಲ್ಲಿ ಕಟ್ಟುತ್ತಾರೆ ಅಥವಾ ನಾರಾಯಣಪುರದಲ್ಲಿ ಕಟ್ಟುತ್ತಾರೆ ಎಂದು ಏನು ವಿವಾದವನ್ನು ಎಬ್ಬಿಸಿದ್ದಾರೆ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಸರ್ಕಾರದ ಮೇಲೆ ವಿಶ್ವಾಸವಿಡಿ. ದೇಶಕ್ಕೆ ಯೋಗ್ಯವಾಗುವಂಥ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇದೇ ರೀತಿ ಹಾರಂಗಿ ಯೋಜನೆಯೂ ಒಂದು ಸಮಸ್ಯೆಯಾಗಿದೆ. ಇದರ ಬಗ್ಗೆ ಅಲ್ಲಲ್ಲಿ ಸಮ್ಮೇಳನಗಳಾಗುತ್ತಿವೆ. ಹಿಂದಿನ ಸರಕಾರ ಮಾಡಿದುದೆಲ್ಲವನ್ನೂ ಈಗ ತಿರುಗು ಮುರುಗು ಮಾಡಿ ಏನೋ ಮತ್ತೊಂದನ್ನು ಈ ಸರಕಾರದವರು ಮಾಡುತ್ತಿದ್ದಾರೆ, ಯಾರದೋ 1,200 ಎಕರೆ ಕಾಫಿ ತೋಟವನ್ನುಳಿಸಲು ಅನುಕೂಲ ಮಾಡುವುದಕ್ಕಾಗಿ ಕೋಟ್ಯಾಂತರ ರೂಪಾಯಿ ಹಾಳು ಮಾಡುತ್ತಿದ್ದಾರೆಂದು ಪ್ರಚಾರ ಮಾಡುತ್ತಿದ್ದಾರೆ. ಹೀಗೆ ವಿವಾದಗಳಲ್ಲಿ ಶಕ್ತಿಯನ್ನು ವಿನಿಯೋಗ ಮಾಡುವುದಕ್ಕೆ ಬದಲು ನದಿಯ ನೀರನ್ನು ಆದಷ್ಟುಮಟ್ಟಿಗೂ ಉಪಯೋಗ ಮಾಡಿಕೊಳ್ಳೋಣ ಎಂಬ ಮನೋಭಾವ ಜನರಿಗಿದ್ದರೆ ಎಷ್ಟೋ ಒಳ್ಳೆಯದು. ಹಾರಂಗಿ ಕಾವೇರಿ ಬೇಸಿನ್‌ನಲ್ಲಿದೆ. ಆದುದರಿಂದ ಕಳವಳ ಮತ್ತು ಆತುರವಿರಬಹುದು. ಅದು ನಮಗೂ ಗೊತ್ತಿದೆ. ಹಾರಂಗಿಯ ಬಗ್ಗೆ ಹಿಂದಿನ ಸರಕಾರ ತೆಗೆದುಕೊಂಡ ನಿರ್ಣಯದಲ್ಲಿ ಸ್ವಲ್ಪವೂ ನಾವು ಬದಲಾವಣೆ ಮಾಡಿಲ್ಲ; ಮಾಡುವುದಿಲ್ಲ. ನಿಜಲಿಂಗಪ್ಪನವರ ಸರಕಾರ ಬರುವುದಕ್ಕೆ ಮುಂಚೆ ಏನು ಯೋಜನೆ ಮಾಡಿತ್ತೋ ಅದರಲ್ಲಿ ಲೇಶವೂ ಬದಲಾವಣೆ ಮಾಡಿಲ್ಲ. ಈಗ ಹೊಸದಾಗಿ ಬದಲಾವಣೆ ಮಾಡಿ ಯೋಜನೆ ಮಾಡಿದ್ದಾರೆ, ಅದರ ಪ್ರಕಾರ ಹೆಚ್ಚು ಹಣ ಖರ್ಚಾಗುತ್ತದೆ, ನೀರಾವರಿ ಕಡಮೆಯಾಗುತ್ತದೆ, ಕೇವಲ ಸಾವಿರಾರು ಎಕರೆ ಕಾಫಿ ತೋಟಕ್ಕಾಗಿ ಕೋಟ್ಯಾಂತರ ರೂಪಾಯಿ ಹೆಚ್ಚು ಖರ್ಚು ಮಾಡುವುದಕ್ಕೆ ಸಿದ್ಧವಾಗಿದ್ದಾರೆ, ಲಕ್ಷಾಂತರ ಎಕರೆಗೆ ನೀರು ಕೊಡುವುದನ್ನು ಕೈಬಿಟ್ಟಿದ್ದಾರೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಇದು ನಿಜವಲ್ಲ. ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮೋಡಿಫೈಡ್ ಹಾರಂಗಿ ಯೋಜನೆಯನ್ನು ವಿಚಾರ ಮಾಡಿ ಅದರ ವರದಿಯನ್ನು ಸೆಂಟ್ರಲ್ ವಾಟರ್ ಮತ್ತು ಪವರ್ ಕಮಿಷನ್‌ಗೆ ಕಳುಹಿಸಿದ್ದೇವೆ ಕೂಡಲೆ ಕೆಲಸವನ್ನು ಪ್ರಾರಂಭ ಮಾಡಬೇಕೆಂದು 15 ಲಕ್ಷ ರೂಪಾಯಿ ಮಂಜೂರು ಮಾಡಿದ್ದೇವೆ. ರಿವೈಸ್ಡ್ ಪ್ಲಾನ್ ಪ್ರಕಾರ ಮೊದಲಿನ ಅಂದಾಜಿಗಿಂತ ಕಡಮೆ ಖರ್ಚಾಗುತ್ತದೆ. ಆದರೂ ಹೆಚ್ಚು ನೀರಾವರಿಯಾಗುತ್ತದೆ. ಇದು ಮುಖ್ಯ ಪ್ರಶ್ನೆಯಾಗಿದೆ.

Sri G. A. THIMMAPPA GOWDA (Arkalgud).—How is it more economical than the original one ?

Mr. SPEAKER.—If we get into details, we will never reach the end of it. These demands, about which questions are being put, not at one place, but at four different places, have been discussed for hours together.

ಶ್ರೀ ವೀರೇಂದ್ರ ಪಾಟೀಲ್.—ನಾನು ಇದರ ಸಲುವಾಗಿ ಹೇಳಿದೆ. ಮೊದಲಿನ ಪ್ರಪೋಸಲಿಗಿಂತ ಮಿತವ್ಯಯದಲ್ಲಿ ಆಗುತ್ತದೆ. ಆ ವಿವರಗಳು ಈಗ ನನ್ನಲ್ಲಿಲ್ಲ. ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್‌ಗೆ ಎಲ್ಲ ಕಾಗದಪತ್ರಗಳೂ ಹೋಗಿವೆ. ಪೂರ್ವ ಸಿದ್ಧತೆಗಳ ಖರ್ಚಿಗಾಗಿ 15 ಲಕ್ಷ ರೂಪಾಯಿ ಮಂಜೂರು ಮಾಡುತ್ತೇವೆ. ಅಷ್ಟೇ ಭೂಮಿ ನೀರಾವರಿಯಾಗುತ್ತದೆ ಆದರೆ ಕಡಮೆ ಖರ್ಚಾಗುತ್ತದೆ. ಎಂದಮೇಲೆ ಯಾರೋ ಕಾಫಿ ತೋಟದವರಿಗೆ ಉಪಕಾರ ಮಾಡುವುದು ಮತ್ತು ಸಾವಿರಾರು ಎಕರೆ ಭೂಮಿಗೆ ನೀರು ಸಿಕ್ಕದೇಯಿರುವ ಹಾಗೆ ಮಾಡುವ ಪ್ರಶ್ನೆಯೇ ಇಲ್ಲ. ಕೂಲಂಕಷವಾಗಿ ವಿಚಾರ ಮಾಡಿ ಸರಕಾರ ಈ ನಿರ್ಣಯಕ್ಕೆ ಬಂದಿದೆ ಎಂದು ಹೇಳುತ್ತಿದ್ದೇನೆ. ಇಷ್ಟು ಹೇಳಿದಮೇಲೆ ಈ ವಿಷಯದಲ್ಲಿ ಅಷ್ಟು ಚರ್ಚೆ ಅಥವಾ ವಿವಾದವಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ.

Sri S. SIVAPPA.—How is the cost cheaper than that of the original proposal ? It is a controversial project..........

Mr. SPEAKER.—I have already said that clarifications will be sought only at the end, if permitted.

ಶ್ರೀ ವೀರೇಂದ್ರ ಪಾಟೀಲ್.—ಈಗ ನಮ್ಮ ಎಲ್ಲ ಪ್ರಯತ್ನಗಳನ್ನೂ ವಿನಿಯೋಗ ಮಾಡಿ ಕಾವೇರಿ ನೀರಿನ ಉಪಯೋಗ ಮಾಡಿಕೊಳ್ಳಬೇಕಾಗಿದೆ. 1924ರ ಒಪ್ಪಂದದ ಪ್ರಕಾರ ಉಪಯೋಗ ಮಾಡಿಕೊಳ್ಳುವುದಕ್ಕೆ ಎಲ್ಲ ಪ್ರಯತ್ನವನ್ನೂ ಮಾಡಬೇಕಾಗಿದೆ. ಕಾವೇರಿ ಬೇಸಿನ್ ಒಪ್ಪಂದದಲ್ಲಿ ಎಷ್ಟೋ ನದಿಗಳು ಬರುತ್ತವೆ. ಆ ನದಿಗಳಿಗೆ ಕಟ್ಟೆ ಹಾಕುವುದಕ್ಕೆ ಪ್ರಾಶ್ಯಸ್ತ್ಯ ಕೊಡಬೇಕಾಗುತ್ತದೆ. ಹೇಮಾವತಿ, ಲಕ್ಷ್ಮಣ ತೀರ್ಥ, ಕಪಿನಿ, ಹೊನ್ನು ಹೊಳೆ, ಸುವರ್ಣಾವತಿ, ಎಗಜಿ-ಬೇಲೂರು ಸೇತುವೆಯವರೆಗೆ ಕಪಿನಿಯ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಸುವರ್ಣಾವತಿಯನ್ನು ಪ್ರಾರಂಭ ಮಾಡಿಲ್ಲ. ಮಾಡುವುದಕ್ಕಾಗಿ ಪ್ಲಾನ್ ಮತ್ತು ಅಂದಾಜನ್ನು ತರಿಸಿದ್ದೇವೆ. ಇದೂ ಕೂಡ ಷೆಡ್ಯೂಲ್ಡ್ ನದಿಯಾಗಿರುವುದರಿಂದ ಇದನ್ನೂ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಇನ್ನೂ ಅಂತಿಮ ಮಂಜೂರಾತಿ ಕೊಟ್ಟಿಲ್ಲ. ಆದರೂ ಜಾಗ್ರತೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಎಗಜಿ

(ಶ್ರೀ ವೀರೇಂದ್ರ ಪಾಟೀಲ್)

ನದಿ ಬೇಲೂರು ಸೇತುವೆಯವರೆ ಷೆಡ್ಯೂಲ್ಡ್ ಗೆನದಿಯಾಗುತ್ತದೆ. ಎಗಜಿಯನ್ನು ಡೈವರ್ಟ್ ಮಾಡಿ ವಾಣಿವಿಲಾಸ ಸಾಗರಕ್ಕೆ ನೀರು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಒಬ್ಬರು ಸೂಪರಿಂಟೆಂಡಿಂಗ್ ಇಂಜಿನಿಯರು ಈ ಕೆಲಸವನ್ನು ನೋಡಿಕೊಳ್ಳಬೇಕೆಂದು ಇದಕ್ಕೆ ಬೇಕಾದ ಸಬ್‌ಡಿವಿಜನ್ ಮಂಜೂರು ಮಾಡಿದ್ದೇವೆ, ಕೆಲಸ ಭರದಿಂದ ಸಾಗುತ್ತಿದೆ. ಅದೆಷ್ಟು ಬೇಗ ತೆಗೆದು ಕೊಳ್ಳಲು ಸಾಧ್ಯವಾಗುತ್ತದೆ. ಕಂಬದಕಡದ ವಿಚಾರದಲ್ಲಿ ಇನ್‌ವೆಸ್ಟಿಗೇಷನ್ ನಡೆದಿದೆ. ಅದರ ಬಗ್ಗೆ ವರದಿ ಬಂದಮೇಲೆ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ನಾವು ಸಾಧಿಸಿರುವ ವಿಷಯಗಳ ಬಗ್ಗೆ ಹೇಳುತ್ತಿದ್ದೇನೆ.

ಮೈನರ್ ನೀರಾವರಿಯ ವಿಚಾರ ಬಂತು. ಮೈನರ್ ನೀರಾವರಿಯಲ್ಲಿ ಬಹುಶಃ ಹಿಂದೂಸ್ಥಾನದ ಬೇರೆ ಯಾವ ರಾಜ್ಯದಲ್ಲಿಯೂ ನಮ್ಮಲ್ಲಿ ಸಾಧಿಸಿರುವಷ್ಟು ಸಾಧಿಸಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಇದನ್ನು ಪ್ಲಾನಿಂಗ್ ಕಮಿಷನ್ ಅವರೂ ಒಪ್ಪಿಕೊಂಡಿದ್ದಾರೆ. ಹೋದ ಸಾರಿ, ತುರ್ತು ಪರಿಸ್ಥಿತಿಯಾದಮೇಲೆ ಸುಮಾರು ಮೂರು ಕೋಟಿ ರೂಪಾಯಿ ಹೆಚ್ಚಿನ ಹಣಸಹಾಯ ಕೊಟ್ಟಿದ್ದೇವೆ. ಮೊನ್ನೆ 250 ಲಕ್ಷ ರೂಪಾಯಿ ಆ್ಯಕ್ಸಿಲರೇಟೆಡ್ ಅಸಿಸ್ಟೆನ್ಸ್ ಸಂಬಂಧವಾಗಿ, ಪ್ಲಾನಿಂಗ್ ಕಮಿಷನ್ನಿನ ಸದಸ್ಯರು ಇಲ್ಲಿ ಬಂದಿದ್ದಾಗ ಚೆನ್ನಾಗಿ ಕೆಲಸ ಮಾಡಿದ್ದೀರಿ, ಸಾಕಷ್ಟು ಹಣಸಹಾಯ ಬರಬಹುದೆಂದೂ, ಇದಕ್ಕೆ ಇನ್ನೂ ಒಂದು ಕೋಟಿ ರೂಪಾಯಿ ಕೊಡುವುದಕ್ಕೆ ಶಿಫಾರಸು ಮಾಡಲಾಗಿದೆಯೆಂದೂ ಹೇಳಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನೀವು ಸಾಕಷ್ಟು ಭರದಿಂದ ಕೆಲಸ ಮಾಡುತ್ತಿಲ್ಲವೆಂದು ಅವರಿಂದ ಆಕ್ಷೇಪಣೆ ಬಂದಿದೆಯೆಂದು ಪತ್ರಿಕೆಗಳಲ್ಲಿ ಬಂದಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಮೇಜರ್ ನೀರಾವರಿಗಳ ಕೆಳಗೆ ಪೊಟೆನ್‌ಷಿಯಲ್ ಇದ್ದರೂ ಪ್ರಾಜೆಕ್ಟ್ ಪ್ರದೇಶದಲ್ಲಿ ಅಭಿವೃದ್ಧಿ ಸಾಕಷ್ಟು ಆಗಿಲ್ಲವೆಂದು ಹೇಳಿದ್ದಾರೆ, ಅದನ್ನು ನಾವೂ ಒಪ್ಪಿಕೊಂಡಿದ್ದೇವೆ. ಇದು ಹೀಗಾಗಿರುವುದು ನಮ್ಮಲ್ಲಿ ಮಾತ್ರವಲ್ಲ. ಎಲ್ಲ ಮೇಜರ್ ಮತ್ತು ಮೀಡಿಯಮ್ ಪ್ರಾಜೆಕ್ಟುಗಳಲ್ಲಿಯೂ ಬರುತ್ತದೆ. ಮೈನರ್‌ನಲ್ಲಿ ಬರುವುದಿಲ್ಲ. ಮೈನರ್ ನೀರಾವರಿಗಳಲ್ಲಿ ರೈತರು ತಾವೇ ಮಾಡಿಕೊಳ್ಳುತ್ತಾರೆ. ಒಂದು ಉದಾಹರಣೆಯನ್ನು ನೀರಾವರಿಯ ಬಗ್ಗೆ ಹೇಳುವುದಾದರೆ, ಐದು ವರ್ಷಗಳಲ್ಲಿ ಎಂಟೂವರೆ ಕೋಟಿ ರೂಪಾಯಿ ಖರ್ಚು ಮಾಡುವ ಯೋಜನೆಯಿದೆ. ಪಬ್ಲಿಕ್ ವರ್ಕ್ಸ್ ಸೆಕ್ಟರಿನಲ್ಲಿ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು, ಹೊಸದಾಗಿ ಕೆರೆಗಳನ್ನು ಕಟ್ಟಿಸುವುದು, ಬಾವಿಗಳನ್ನು ತೋಡಿಸುವುದು, ಪಂಪ್‌ಸೆಟ್‌ಗಳನ್ನು ಒದಗಿಸುವುದು ಇವೆಲ್ಲ ಮೈನರ್ ನೀರಾವರಿ. ಇದರ ಬಗ್ಗೆ ಈಗ ಅಂಕಿಅಂಶಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಪಿ. ಡಬ್ಲ್ಯೂ. ಡಿ. ಇಲಾಖೆಗೆ ಐದು ವರ್ಷಗಳಿಗಾಗಿ ಕೊಟ್ಟಿರತಕ್ಕಂಥ ಹಣವನ್ನು ಮೂರು ವರ್ಷಗಳಲ್ಲಿ ಖರ್ಚು ಮಾಡಿದ್ದೇವೆ. ಕೆಲಸ ಕಾರ್ಯಗಳು ನಡೆದಿವೆ. ಇದು ಫಿಜಿಕಲ್ ಅಚೀವ್‌ಮೆಂಟ್ ಅಲ್ಲವೇ? ಈಗ ಇರತಕ್ಕಂಥ ಅಚ್ಚುಕಟ್ಟು ಅಲ್ಲದೆ 18,266 ಎಕರೆ ಹೆಚ್ಚು ಭೂಮಿಗೆ ನೀರು ಕೊಟ್ಟಿದ್ದೇವೆ. 47,678 ಎಕರೆ ಜಮೀನು ಅಚ್ಚುಕಟ್ಟಿನಲ್ಲಿ ತಂದಿದ್ದೇವೆ. ಈ ದಿಶೆಯಲ್ಲಿ ಬಹಳ ರಭಸದಿಂದ ಕೆಲಸ ನಡೆಯುತ್ತಿದೆ. ವಿರೋಧ ಪಕ್ಷದ ಅನೇಕ ಸದಸ್ಯರೂ ಒಂದು ಮಾತನ್ನು ಹೇಳಿದ್ದಾರೆ. ಮೊದಲು ಕೆಲಸ ನಡೆಯುತ್ತಿದ್ದಿಲ್ಲ. ಈಗ ಕೆಲಸವಾಗುತ್ತಾ ಇದೆ ಎಂದು ಹೇಳಿದ್ದಾರೆ. ಕೆಲಸ ಚುರುಕಾಗಿ ನಡೆಯಲು ಜನರಲ್ಲಿ ಒಂದು ಟೆಂಪೋ ಕ್ರಿಯೇಟ್ ಮಾಡಿದ್ದೇವೆ. ಟ್ಯಾಂಕ್ ರೆಸ್ಟೋರೇಷನ್‌ಗಾಗಿ ಸುಮಾರು 4 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ. 1961-62ರಲ್ಲಿ 261 ಲಕ್ಷ, 1962-63ರಲ್ಲಿ 251 ಲಕ್ಷ, 1963-64ರಲ್ಲಿ 400 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರು ಸ್ವಲ್ಪ ಯೋಚನೆ ಮಾಡಬೇಕು. ಇದು ನಾವು ಸಾಧಿಸಿದ ಸಾಧನೆಯಲ್ಲವೇ? ಬೀದರ್ ಜಿಲ್ಲೆಯಲ್ಲಿಯೂ ಕೆಲಸ ತೆಗೆದುಕೊಂಡಿದ್ದೇವೆ. ಹೋದ ವರ್ಷದ ಬಜೆಟ್ ಮತ್ತು ಈ ವರ್ಷದ ಸಪ್ಲಿಮೆಂಟರಿ ಬಜೆಟ್‌ಗಳನ್ನು ನೋಡಬೇಕು.

ಬೆಂಗಳೂರು ಸಿಟಿ ವಾಟರ್ ಸಪ್ಲೈ ಸ್ಕೀಂನಲ್ಲಿ ಟ್ರಿಪ್ಲಿಕೇಟ್ ಮೇನ್ಸ್ ಹಾಕಿ ಪ್ರತಿ ದಿನ 23 ಮಿಲಿಯನ್ ಗ್ಯಾಲನ್ ನೀರು ಸಪ್ಲೈ ಮಾಡುತ್ತಿದ್ದೇವೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರು ಪೂರೈಸಲು ಪ್ರಯತ್ನ ನಡೆದಿದೆ. ಬೆಂಗಳೂರು ಸಿಟಿ ವಾಟರ್ ಸಪ್ಲೈ ಸ್ಕೀಂ ಪ್ಲಾನಿನಲ್ಲಿಲ್ಲ. ಇನ್‌ವೆಸ್ಟಿಗೇಷನ್ನಿಗೆ 50 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಮೊದಲು ಇದಕ್ಕಾಗಿ ಏನೂ ಇರಲಿಲ್ಲ. 26 ಕೋಟಿ ರೂಪಾಯಿ ವೆಚ್ಚವಾಗುವ ಬೆಂಗಳೂರು ಸಿಟಿ ವಾಟರ್ ಸಪ್ಲೈ ಸ್ಕೀಂ ಮಾಡಿದ್ದೇವೆ. ಈ ಇಂಟಿಗ್ರೇಟೆಡ್ ಸ್ಕೀಂನಿಂದ 66 ಮಿಲಿಯನ್ ಗ್ಯಾಲನ್ ನೀರು ಒದಗಿಸುವುದಲ್ಲದೆ ಇಂಟರ್‌ನಲ್ ಡಿಸ್ಟ್ರಿಬ್ಯೂಷನ್ ಮಾಡಿಕೊಂಡು ನೀರು ಹೋಗುವುದಕ್ಕೆ ಸೀವೇಜ್ ಡಿಸ್ಪೋಜಲ್ ಮಾಡಬೇಕಾಗಿದೆ. ರಾತ್ರಿ ಹಗಲು ದುಡಿದು ನಮ್ಮ ಎಂಜಿನಿಯರುಗಳು ಈ ಯೋಜನೆಯನ್ನು ತಯಾರಾಮ್ಮ

ಡಿದ್ದಾರೆ. ಈ ಸ್ಕೀಂ ರಿಪೋರ್ಟ ಸಹ ತಯಾರು ಮಾಡಿದ್ದಾರೆ. ಕೇಂದ್ರ ಸರಕಾರದ ಒಪ್ಪಿಗೆ ಪಡೆದುಕೊಂಡು ವರ್ಲ್ಡ್ ಬ್ಯಾಂಕಿನಿಂದ ಸಾಲ ಪಡೆಯಲು ವಿಚಾರ ಮಾಡಿದ್ದೇವೆ. ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಔಟ್ ಸೈಡ್ ದಿ ಪ್ಲಾನ್ 26 ಕೋಟಿ ರೂಪಾಯಿ ಪಡೆಯುವ ಪ್ರಯತ್ನ ಯಶಸ್ವಿಯಾಗುವ ಪರಿಸ್ಥಿತಿಗೆ ಬಂದಿರುವುದು ಇದೊಂದು ದೊಡ್ಡ ಅಚೀವ್‌ಮೆಂಟ್ ಆಗಿರುವುದಿಲ್ಲವೇ ಎಂಬುದನ್ನು ತಾವೇ ವಿಚಾರ ಮಾಡಬೇಕು. ಈಗಾಗಲೇ ವರ್ಲ್ಡ್ ಬ್ಯಾಂಕ್ ಟೀಮಿನವರು ಇಲ್ಲಿಗೆ ಬಂದು ನೋಡಿಕೊಂಡು ಹೋಗಿದ್ದಾರೆ; ಇದಲ್ಲದೆ ಮತ್ತೆ ಬರುತ್ತಾರೆ. ಈ ಪ್ರಾಜೆಕ್ಟ್ ರಿಪೋರ್ಟ್ ನೋಡಿ ಅವರು ಬಹಳ ಪ್ರಶಂಸೆ ಮಾಡಿದ್ದಾರೆ. ಈ ಯೋಜನೆಯನ್ನು ಬಹಳ ಬುದ್ಧಿವಂತಿಕೆಯಿಂದ ತಯಾರು ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ಮಾನ್ಯ ಸದಸ್ಯರು ದಯವಿಟ್ಟು ಈ ಅಂಶವನ್ನು ವಿಚಾರ ಮಾಡಿ ನೋಡಬೇಕು. ನಮ್ಮ ಎಂಜಿನಿಯರುಗಳು ಹಗಲು ರಾತ್ರಿ ದುಡಿದು ಪರಿಶ್ರಮ ಪಟ್ಟುದಕ್ಕೆ ಅವರ ಬೆನ್ನು ಚಪ್ಪರಿಸಬೇಕೋ ಬೇಡವೋ ನೀವೇ ವಿಚಾರ ಮಾಡಿ. ಮಂತ್ರಿಗಳ ಬೆನ್ನು ಚಪ್ಪರಿಸುವುದು ನಮಗೆ ಬೇಡ. ಆದರೆ ಇದಕ್ಕಾಗಿ ದುಡಿದಿರುವ ಎಂಜಿನಿಯರುಗಳ ಬೆನ್ನು ಚಪ್ಪರಿಸಬೇಕಾದುದು ಸರಿಯಾದುದು ಎಂದು ಹೇಳುತ್ತೇನೆ. ಏಕೆಂದರೆ ಈ ವಿಷಯವು ಎಷ್ಟೋ ಜನರಿಗೆ ತಿಳಿದಿರಲಿಕ್ಕಿಲ್ಲ. ನಮ್ಮ ದೇಶದಲ್ಲಿ ಸರ್ ಸಿ. ವಿ. ರಾಮನ್‌ರವರಂಥ ದೊಡ್ಡ ಸೈಂಟಿಸ್ಟ್ ಇದ್ದಾರೆ. ರವೀಂದ್ರನಾಥ ಟಾಗೋರರಂಥ ಕವಿ ಇದ್ದಾರೆಂಬ ಮಾತು ಅವರಿಗೆ ನೋಬೆಲ್ ಪ್ರೈಜ್ ಕೊಡುವವರೆಗೆ ಎಷ್ಟೋ ಜನರಿಗೆ ನಮ್ಮ ದೇಶದಲ್ಲಿ ತಿಳಿದು ಬಂದಿರಲಿಕ್ಕಿಲ್ಲ. ಆದುದರಿಂದ ಇಂಥ ಮಹಾ ಕಾರ್ಯ ಸಾಧನೆಯಲ್ಲಿ ದುಡಿಯುವ ನಮ್ಮ ಅಧಿಕಾರಿಗಳನ್ನು ಪ್ರೀತಿ ವಿಶ್ವಾಸಗಳಿಂದ ಪ್ರಶಂಸೆ ಮಾಡಿ ಅವರ ಬೆನ್ನು ಚಪ್ಪರಿಸುವುದು ನಮ್ಮ ಕರ್ತವ್ಯ. ಹಾಗೆ ಮಾಡಲು ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಮಗೆಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ.

ಕಾಲಾವಕಾಶ ಇಲ್ಲದಿರುವುದರಿಂದ ಇನ್ನು ಹೆಚ್ಚಿಗೆ ಹೇಳುವುದಿಲ್ಲ. ಇನ್ನೊಂದು ಅತ್ಯಂತ ಮಹತ್ವದ ವಿಷಯ ಒಂದನ್ನು ಮಾತ್ರ ಪ್ರಸ್ತಾಪ ಮಾಡಿ ಹೇಳಲು ಇಚ್ಛಿಸುತ್ತೇನೆ. ಎಲ್ಲರಿಗೂ ಗೊತ್ತಿರುವ ಹಾಗೆ ಮಂಗಳೂರು ಪೋರ್ಟ್ ಕೆಲಸ ಎಲ್ಲಿ ಮುಳುಗಿ ಹೋಗುತ್ತದೆಯೋ ಎಂಬ ಪರಿಸ್ಥಿತಿ ಬಂದಿತ್ತು. ಹಿಂದೂ ಪತ್ರಿಕೆಯಲ್ಲಿ ಈ ವಿಷಯದ ಬಗ್ಗೆ ರಿಪ್ರೇಜಲ್ ಬಂದ ಮೇಲೆ ಕಳವಳಕ್ಕೆ ಗುರಿಯಾಗಿದ್ದೆವು. ಆ ಪತ್ರಿಕೆಯಲ್ಲಿ ಹೇಳಿರುವುದರಲ್ಲಿ ಕೆಲ ಮಟ್ಟಿಗೆ ಸತ್ಯಾಂಶ ಇದೆ. ಒಂದು ವೇಳೆ ಮಂಗಳೂರು ಪೋರ್ಟ ಆಗದೇ ಹೋದರೆ ನಮ್ಮ ನಾಡಿನ ಭವಿಷ್ಯ ಏನಾಗುತ್ತದೆಯೋ ಎನ್ನುವಂಥ ಪರಿಸ್ಥಿತಿ ಬಂದಿದೆ. 15 ಕೋಟಿ ರೂಪಾಯಿ ಈ ಪ್ರಾಜೆಕ್ಟ್ ಮೇಲೆಯೇ ಹಾಸನ-ಮಂಗಳೂರು ರೈಲ್ವೆ ಮಾರ್ಗ ರಚನೆಯಾಗುವುದು ಅವಲಂಬಿಸಿದೆ. ಮಂಗಳೂರು ಪೋರ್ಟ ಆಗುತ್ತದೆ ಎಂದು ಈ ರೈಲು ಮಾರ್ಗ ಮಾಡಲು ಒಪ್ಪಿಕೊಂಡಿದ್ದಾರೆ. ಈ ಪ್ರಾಜೆಕ್ಟು ಎಲ್ಲಿ ಕೈ ಬಿಟ್ಟು ಹೋಗುತ್ತದೆಯೋ ಎಂಬ ಭಯ ಇನ್ನೂ ಇದೆ. ತಲೆಯ ಮೇಲೆ ಖಡ್ಗ ತೂಗಾಡುತ್ತಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಂಗಳೂರು ಪೋರ್ಟಿಗೆ ಪೂರೈಸಲು ಸಾಕಷ್ಟು ಕಬ್ಬಿಣ ಅದಿರು ಇಲ್ಲ ಎಂಬ ಒಂದು ವಾತಾವರಣವನ್ನು ಉಂಟು ಮಾಡಿದ್ದಾರೆ. ಅದಕ್ಕೆ ನಾವು ದೋಷಾರೋಪಣೆ ಮಾಡುವುದಿಲ್ಲ. ಅದನ್ನು ಯಾರು ಮಾಡಿದ್ದಾರೆ ಎಂಬುದನ್ನು ನಾನು ಹೇಳಲಾರೆ. ಸ್ಟೇಟ್ ಡಿಪಾರ್ಟಮೆಂಟ ಆಫ್ ಮೈನ್ಸ್ ರಿಪೋರ್ಟಿನಲ್ಲಿ ಅಸೆಸ್‌ಮೆಂಟ್ ಮಾಡಿದ ಪ್ರಕಾರ ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ತುಮಕೂರು ಈ ಮೂರು ಜಿಲ್ಲೆಗಳಲ್ಲಿ ದೊರೆಯುವ ಐರನ್ ಓರ್ ಒಂದು ಸಾವಿರ ಮಿಲಿಯನ್ ಟನ್ ಆಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಆದರೆ ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಅವರು ಚಿತ್ರದುರ್ಗ ಒಂದು ಜಿಲ್ಲೆಯಲ್ಲಿ 11·30 ಸಾವಿರ ಟನ್ ದೊರೆಯಬಹುದು ಮತ್ತು ಬಾಬಾ ಬುಡನ್ ಗಿರಿಯಲ್ಲಿ 20 ಮಿಲಿಯನ್ ಓರ್ ದೊರೆಯಬಹುದು ಎಂದು ವರದಿ ಮಾಡಿದ್ದಾರೆ. ಇದನ್ನು ನಾವೂ ನೀವೂ ಕುಳಿತುಕೊಂಡು ವಿಚಾರ ಮಾಡಬೇಕಾಗಿದೆ. ಟ್ರಾಫಿಕ್ ತೋರಿಸಿ, ನಾವು ರೈಲು ಮಾರ್ಗ ಕೊಡಲು ತಯಾರ್ ಇದ್ದೇವೆ ಎಂದು ರೈಲ್ವೆ ಮಂತ್ರಿಗಳು ಉತ್ತರ ಹೇಳಿದ್ದಾರೆ. ಸರಿಯಾದ ಪ್ರಮಾಣದಲ್ಲಿ ಲೋಡ್ ಇದ್ದರೆ ರೈಲು ಮಾರ್ಗ ರಚನೆಗೆ ಅನುಕೂಲವಾಗುತ್ತದೆಂದು ಹೇಳುತ್ತಾರೆ. ಇದಕ್ಕೆ ಏನು ಮಾಡೋಣ? ಸಾಕಷ್ಟು ಪ್ರಮಾಣದಲ್ಲಿ ಕಬ್ಬಿಣ ಅದಿರು ಮಂಗಳೂರು ಪೋರ್ಟಿಗೆ ಪೂರೈಸಲು ಆಗುವುದಿಲ್ಲ ಎಂದು ಅವರು ಹೇಳುವುದನ್ನು ಕೇಳಿ ಎದೆಯಲ್ಲಿ ನಡುಕ ಬರುತ್ತಿದೆ. ಇದಕ್ಕಾಗಿ ಅನೇಕ ಸಲ ನಾವು ದಿಲ್ಲಿಗೆ ಹೋಗಬೇಕಾಯಿತು. ಅವರಿಗೆ ವಿವರ ಕೊಟ್ಟು ತಿಳಿಸಿದ್ದೇವೆ. ಇವತ್ತಿನ ದಿವಸ ನಾನು ಒಂದು ಸಂತೋಷದ ಸುದ್ದಿಯನ್ನು ಹೇಳಲು ಬಯಸುತ್ತೇನೆ. ಈ ಪ್ರಾಜೆಕ್ಟು ಕೈಬಿಟ್ಟು ಹೋಗುತ್ತಿದ್ದುದನ್ನು ಉಳಿಸಿಕೊಂಡು ಬಂದಿದ್ದೇವೆ. ಇದೊಂದು ದೊಡ್ಡ ಸಾಧನೆ ಎಂದು ನಾನು ಹೇಳುತ್ತೇನೆ. ಈ ಯೋಜನೆಗಾಗಿ ಎರಡು ಕೋಟಿ ರೂಪಾಯಿ ಹಣ ಮಂಜೂರಾಗಿ ಕೇಂದ್ರ ಸರಕಾರದಿಂದ ಬಂದಿದೆ. ಈ ವಿಷಯವು ಶ್ರೀ ಐಕಳ ಅವರಿಗೆ ಗೊತ್ತಿದೆ. ನಾನು ಎಲ್ಲ ಪಕ್ಷದ ಸದಸ್ಯರಿಗೂ ವಿನಂತಿ ಮಾಡಿ ಕೇಳಿಕೊಳ್ಳುತ್ತೇನೆ. ಮಂಗಳೂರು ಪೋರ್ಟಿನ ಬಗ್ಗೆ ಎಲ್ಲರೂ

(ಶ್ರೀ. ವೀರೇಂದ್ರ ಪಾಟೀಲ್)

ಪ್ರಯತ್ನ ಮಾಡಬೇಕಾಗಿದೆ. ಮಂಗಳೂರು ಪೋರ್ಟಿಗೆ ಒದಗಿಸಲು ಕಬ್ಬಿಣ ಅದಿರು ಇಲ್ಲ ಎಂಬ ವಾತಾವರಣವನ್ನು ತೆಗೆದು ಹಾಕಬೇಕಾಗಿದೆ. ಈಗಾಗಲೇ ಹಣ ಖರ್ಚು ಮಾಡಿ ಈ ಪೋರ್ಟಿನ ಸಿದ್ಧತೆ ಮಾಡಬೇಕಾಗಿದೆ. ಈಗ ಎಲ್ಲಾ ಕೆಲಸ ನಡೆಯುತ್ತಿದೆ. ಸುಮಾರು 300 ಎಕರೆ ಭೂಮಿ ರಾಜ್ಯ ಸರಕಾರ ಪೋರ್ಟ ಅಥಾರಿಟೀಸ್‌ಗೆ ಕೊಟ್ಟಿದೆ. ಈ ಭೂಮಿಯಲ್ಲಿ ಜಾಲಗೇಣಿ ಟೆನೆಂಟ್ಸ್ ಇದ್ದಾರೆ. ಕಾನೂನಿನ ಪ್ರಕಾರ ಅವರನ್ನು ಬಿಡಿಸಲು ಬರುವುದಿಲ್ಲ, ಕಾಂಪೆನ್‌ಸೇಷನ್ ಕೊಡಲು ಅವಕಾಶವಿಲ್ಲ. ಆದರೂ ಭೂಮಿ ಬೇಕಾಗಿರುವುದರಿಂದ ನಮ್ಮ ಜೇಬಿನಿಂದ 10-15 ಲಕ್ಷ ರೂಪಾಯಿ ಖರ್ಚು ಮಾಡಿಯಾದರೂ ಕೇಂದ್ರ ಸರಕಾರಕ್ಕೆ ಭೂಮಿ ಒದಗಿಸಿ ಕೊಡಬೇಕಾಗಿದೆ. ದುಡ್ಡು ಖರ್ಚು ಮಾಡೋಣ. ಆದರೆ ಮನಸ್ಸಿನಲ್ಲಿ ಉಂಟಾಗಿರುವ ಭಯ ತೆಗೆದು ಹಾಕಬೇಕಾಗಿದೆ. ಆದುದರಿಂದ ಎಕ್ಸ್‌ಗ್ರೇಶಿಯಾ ಹಣ ಕೊಡುವುದಕ್ಕೆ ಒಪ್ಪಿದ್ದೇವೆ. ಒಂದನೇ ತರಗತಿ ಒಂದು ಎಕರೆಗೆ 300 ರೂಪಾಯಿ ಹಾಗೆ ಮೂರು ವರ್ಷದ ಹಣ ಅಡ್ವಾನ್ಸ್ ಕೊಡಬೇಕೆಂದು ಮಾಡಿದೆ. ಎರಡನೇ ತರಗತಿ ಒಂದು ಎಕರೆಗೆ 200 ರೂಪಾಯಿ, ಮೂರನೇ ತರಗತಿಗೆ ಒಂದು ಎಕರೆಗೆ 100 ರೂಪಾಯಿ ಕೊಡುವ ವಿಚಾರ ಮಾಡಿದೆ. ಸುಮಾರು 1,000—1,200 ರೂಪಾಯಿ ಒಂದು ಎಕರೆಗೆ ಅಡ್ವಾನ್ಸ್ ಕೊಟ್ಟು ಬೇರೆ ಕಡೆ ಅವರಿಗೆ ಫ್ರೀ ಸೈಟ್ ಕೊಡುತ್ತೇವೆ. ಕಮ್ಯೂನಿಟಿ ಹಾಲ್, ಸ್ಕೂಲ್ ಬಿಲ್ಡಿಂಗ್ ಕಟ್ಟಿಸಿ ಕೊಡುತ್ತೇವೆಂದೂ ಹೇಳಿದ್ದೇವೆ. ವಾಟರ್ ಸಪ್ಲೈ ವ್ಯವಸ್ಥೆ ಮಾಡಲು ಪ್ರಯತ್ನ ನಡೆದಿದೆ. ಈ ರೀತಿ ಮಾಡಿ ಮಂಗಳೂರು ಪೋರ್ಟ ರಚನೆಯ ಕೆಲಸ ಯಾವ ತರಹದ ಆತಂಕವಿಲ್ಲದೆ ಮುಂದೆ ಹೋಗಬೇಕೆಂದು ಪ್ರಯತ್ನ ನಡೆಸಿದ್ದೇವೆ. ಮತ್ತು ಈ ಮಾರ್ಗದಲ್ಲಿ ಮುಂದೆ ಹೋಗಿದ್ದೇವೆ ಎಂದು ಈ ಸಂದರ್ಭದಲ್ಲಿ ಸಂತೋಷದಿಂದ ಹೇಳುತ್ತೇನೆ. ಮಂಗಳೂರು ಪೋರ್ಟು ಅಭಿವೃದ್ಧಿ ಹೊಂದಿದಂತೆ, ಅದು ವೆಸ್ಟ್‌ಕೋಸ್ಟಿನಲ್ಲಿ ಒಂದು ಅಭಿಮಾನದ ಪೋರ್ಟು ಆಗುತ್ತದೆ. ಒಂದು ಐಡಿಯಲ್ ಪೋರ್ಟು ಆಗುತ್ತದೆ. ಈಗಾಗಲೇ ರೈಲ್ವೆ ಲೈನು ಕೆಲಸ ಪ್ರಾರಂಭವಾಗಿದೆ. ಮೊನ್ನೆ ತಾನೆ ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ದಾಸಪ್ಪನವರು ಬಂದಮೇಲೆ ಪಣಂಬೂರುವರೆಗೆ ಕೆಲಸ ಪ್ರಾರಂಭ ಮಾಡಿದ್ದಾರೆ. ಹಾಸನ-ಮಂಗಳೂರು ರೈಲ್ವೆಯ ಒಂದು ಪೋರ್ಷನ್ನಿಗೆ ಟೆಂಡರ್ ಇನ್‌ವೈಟ್ ಮಾಡಿದ್ದೇವೆ. ಉದ್ಘಾಟನ ಸಮಾರಂಭಗಳು ಆಗಿವೆ. ಇವು ಯಾವುವೂ ನಿಲ್ಲುವ ಹಾಗಿಲ್ಲ. ಒಂದು ವರ್ಷದವರೆಗೆ ಸಾಧಿಸಿದಂತಹ ಮಹತ್ವದ ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಪತಿಗಳಿಗೆ ಧನ್ಯವಾದಗಳನ್ನು ಅರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

3-00 P.M.

†ಶ್ರೀಮತಿ ಯಶೋಧರ ದಾಸಪ್ಪ (ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುತ್ತಾ, ಸಮಾಜ ಕಲ್ಯಾಣ ಶಾಖೆಯ ವಿಚಾರವನ್ನು ತೆಗೆದುಕೊಂಡು ಕೆಲವು ಮಾನ್ಯ ಸದಸ್ಯರುಗಳು ಈ ಮನೆಯಲ್ಲಿ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಅದಕ್ಕೆ ಉತ್ತರ ಕೊಡತಕ್ಕಂಥಾದ್ದು ನನ್ನ ಜವಾಬ್ದಾರಿಯೆಂದು ತಿಳಿದು ನಾಲ್ಕು ಮಾತುಗಳಲ್ಲಿ ವಿಷಯಗಳನ್ನು ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು ಸಮಾಜಕಲ್ಯಾಣ ಇಲಾಖೆಯಲ್ಲಿ ಯಾವ ಕೆಲಸವೂ ನಡೆಯುತ್ತಾ ಇಲ್ಲ, ಹಣ ದುರುಪಯೋಗವಾಗುತ್ತಿದೆ, ಆಫೀಸರುಗಳು ಬಹಳ ಸೋಮಾರಿತನದಿಂದ ಕೆಲಸ ನಡೆಸುತ್ತಿದ್ದಾರೆ, ಶ್ರದ್ಧೆಯಿಂದ ಕೆಲಸ ಮಾಡುತ್ತಾ ಇಲ್ಲ ಎಂದು ಟೀಕೆ ಮಾಡಿದ್ದಾರೆ. ಅಲ್ಲದೆ ಆರ್ಥಿಕ ಉನ್ನತಿಗೋಸ್ಕರವಾಗಿ ಏನು ಕೋಳಿ, ಕುರಿ, ಎತ್ತುಗಳನ್ನು ಕೊಡುತ್ತಾ ಇದ್ದೇವೆಯೋ ಅವುಗಳು ಕೂಡ ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಾ ಇಲ್ಲ, ದುರುಪಯೋಗವಾಗುತ್ತಿದೆ ಎಂದೂ ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ. ಅಲ್ಲದೆ ಕೇಂದ್ರಗಳಲ್ಲಿ ಸರಿಯಾದ ತರಬೇತಿಗೆ ಶಿಕ್ಷಕಿಯರು ಇಲ್ಲದಿರುವುದರಿಂದ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಹೇಳಿದ್ದಾರೆ. ನಾನು ಟೀಕೆ ಮಾಡಿದಂಥ ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ ಸಮಾಜಕಲ್ಯಾಣ ಇಲಾಖೆಯೆಂದರೆ ಅದು ಹರಿಜನ-ಗಿರಿಜನರ ಇಲಾಖೆಯಾಗಿ ನಡೆಯುತ್ತಿದೆಯೆಂದು ದಯೆಯಿಟ್ಟು ಯಾರೂ ತಿಳಿದುಕೊಳ್ಳಬಾರದು. ಅನೇಕ ರೀತಿಯಾದ ಸಂಘಸಂಸ್ಥೆಗಳು, ಶಾಲೆಮಕ್ಕಳು, ಸಣ್ಣಮಕ್ಕಳು, ವೃದ್ಧರು, ಅಂಗವಿಕಲರು-ಇಂಥ ಅನೇಕ ರೀತಿಯ ಜನಗಳು ಸಮಾಜದಲ್ಲಿ ತೊಂದರೆಗೀಡಾಗಿರುವವರು, ಹೆಣ್ಣುಮಕ್ಕಳು ಮತ್ತು ಕಷ್ಟದಲ್ಲಿರುವವರ ಮೇಲ್ವಿಚಾರಣೆಯನ್ನು ನೋಡಿಕೊಂಡು ಅವರಿಗೆ ಬೇಕಾದಂಥ ಅನುಕೂಲತೆಗಳನ್ನು ಕಲ್ಪಿಸಿಕೊಡುವುದು ಸಮಾಜಕಲ್ಯಾಣ ಶಾಖೆಯ ಕೆಲಸ. ಈ ಸಭೆಯಲ್ಲಿ ಟೀಕಿಸಿದ ಮಾನ್ಯ ಸದಸ್ಯರು ಕೇವಲ ಹರಿಜನ-ಗಿರಿಜನರಿಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಹೇಳಿದ್ದರಮೇಲೆ ನಾನು ಹೇಳಬೇಕಾಗಿದೆ.

ಈಗತಾನೆ ಈ ಹೊತ್ತು ಮಾತನಾಡಿದ ಒಬ್ಬ ಸದಸ್ಯರು ಕೂಡ ಹೇಳಿದರು : ಮನೆಗೆ ಕೊಡುತ್ತಿದ್ದ ಹಣವನ್ನು ನಿಲ್ಲಿಸಿಬಿಟ್ಟಿದ್ದಾರೆಂದು. ನನಗೆ ಹಿಂದೆ ಇದ್ದ ಮಂತ್ರಿಗಳ, ಮನೆಗಳಿಗೋಸ್ಕರವಾಗಿ ಕೊಟ್ಟ ಹಣ ಸರಿಯಾಗಿ ಉಪಯೋಗವಾಗುತ್ತಿಲ್ಲದೆ ಇರುವುದರಿಂದ, ಅದನ್ನು ವಿದ್ಯಾಭ್ಯಾಸಕ್ಕೆ ಹೆಚ್ಚಿಗೆ ಉಪಯೋಗಿಸಬೇಕೆಂದು ಹೇಳಿದರು. ಈ ಹಣವನ್ನು ಹಾಸ್ಟಲುಗಳನ್ನು ಕಟ್ಟಿಸುವುದಕ್ಕೆ ಮತ್ತು ವಿದ್ಯಾರ್ಥಿ ವೇತನಗಳನ್ನು ಕೊಡುವುದಕ್ಕೆ ಹೆಚ್ಚಾಗಿ ಉಪಯೋಗಿಸಿದರು. ಈ ಮನೆ ಕಟ್ಟತಕ್ಕಂಥದ್ದನ್ನು ಕೇಂದ್ರ ಸರಕಾರದವರೂ ಕೂಡ ಒಪ್ಪಲಿಲ್ಲ. ಅನೇಕ ಜನರು ಮನೆಗಳಿಗೆ ಹಣ ಕೊಡಬೇಕೆಂದು ಕೇಂದ್ರ ಸರಕಾರವನ್ನು ಕೇಳುತ್ತಿದ್ದಾರೆ. ಆದರೆ ಕೇಂದ್ರ ಹಿಂದೆ ಈ ಪ್ಲಾನಿಗೆ ಕೊಡುತ್ತಿದ್ದ ಸಬ್‌ಸಿಡಿಯನ್ನು ನಿಲ್ಲಿಸಿ, ಮುಂದೂ ಕೊಡುವುದಕ್ಕೆ ಸಾಧ್ಯವಿಲ್ಲ, ಮುಂದಕ್ಕೆ ಕೊಡತಕ್ಕಂಥ ಹಣವನ್ನು ಕೋ-ಆಪರೇಟಿವ್ ಸೊಸೈಟಿಗಳನ್ನು ರಿಜಿಸ್ಟರುಮಾಡಿಕೊಂಡು, ಅವುಗಳ ಮೂಲಕ ಸಾಲ ರೂಪವಾಗಿ ಪಡೆಯಬೇಕೆಂದು ಹೇಳಿದ್ದಾರೆ. ಈ ಹಣ ದುರುಪಯೋಗವಾಗುತ್ತಿದೆ ಎನ್ನುವುದು ಮಾನ್ಯ ಸದಸ್ಯರೆಲ್ಲರ ಗಮನಕ್ಕೆ ಚೆನ್ನಾಗಿ ಬಂದಿದೆ. ಸರಕಾರದ ಗಮನಕ್ಕೂ ಬಂದಿದೆ. ನಾನು ಯಾವುದನ್ನೂ ಮುಚ್ಚುಮರೆ ಇಲ್ಲದೆ ಒಪ್ಪಿಕೊಳ್ಳುತ್ತೇನೆ.

ಇನ್ನು ಎಕನಾಮಿಕ್ ಏಡ್ ಬಗ್ಗೆ ಹೇಳಬೇಕಾದರೆ, ಹೆಣ್ಣುಮಕ್ಕಳಿಗೋಸ್ಕರ ಸುಮಾರು 40 ಟೇಲರಿಂಗ್ ಸೆಂಟರುಗಳನ್ನು ಪ್ರಾರಂಭಿಸಿದ್ದೇವೆ. ಅವರಿಗೆ ಶಿಕ್ಷಣ ಕೊಡುವಾಗ 25 ರೂಪಾಯಿ ಸ್ಟೈಪೆಂಡು ಕೊಡುತ್ತೇವೆ. ಟೈಲರಿಂಗ್ ಶಿಕ್ಷಣ ಕೊಟ್ಟಮೇಲೆ ಅವರ ಉತ್ತರೋತ್ತರ ಜೀವನ ನಡೆಸಿಕೊಳ್ಳಲು ಒಂದು ಮೆಷೀನ್ ಕೊಡುತ್ತೇವೆ. ಬೆಂಗಳೂರಿನಲ್ಲಿ ಒಂದು ಪ್ರೊಡಕ್ಟಿವ್ ಯೂನಿಟ್ ಸೆಂಟರ್ ಎಂದು ಪ್ರಾರಂಭಮಾಡಿ ಶಿಕ್ಷಣ ಕೊಡುತ್ತಿದ್ದೇವೆ; ಅದರಲ್ಲಿ ತರಪೇತಿ ಪಡೆದ ಹೆಣ್ಣು ಮಕ್ಕಳು ಜೀವನೋಪಾಯವನ್ನು ನಡೆಸಿಕೊಂಡು ಹೋಗಿದ್ದಾರೆ. ಮತ್ತು ಇನ್ನೂ ಹೆಚ್ಚಿನ ರೀತಿಯಲ್ಲಿ ಸಂಪಾದನೆ ಮಾಡುವ ಶಕ್ತಿಯನ್ನು ಉತ್ಪಾದನೆ ಮಾಡಿಕೊಂಡಿದ್ದಾರೆ. ಅಂಥ ಸೆಂಟರು ಒಂದನ್ನು ಮಂಗಳೂರಿನಲ್ಲಿಯೂ ತೆಗೆಯುತ್ತಾ ಇದ್ದೇವೆ. ಚನ್ನಪಟ್ಟಣದಲ್ಲಿ ಲ್ಯಾಕರ್‌ವೇರ್‌ನಲ್ಲಿ ಶಿಕ್ಷಣ ಕೊಟ್ಟಿದ್ದೇವೆ. ಒಂದು ಶಿಕ್ಷಣ ಮಂದಿರವನ್ನು ಏರ್ಪಾಡು ಮಾಡಿದ್ದೇವೆ. ಅದರಲ್ಲಿ 40 ಜನ ಹೆಣ್ಣುಮಕ್ಕಳು ಕೆಲಸದಲ್ಲಿ ತಯಾರಾಗುತ್ತಾ ಇದ್ದಾರೆ; ಅವರಿಗೆ ಸ್ಟೈಪೆಂಡನ್ನೂ ಕೊಡುತ್ತಾ ಇದ್ದೇವೆ. ಹೆಣ್ಣುಮಕ್ಕಳಿಗೂ ಪ್ರಿಂಟಿಂಗ್, ಬೈಂಡಿಂಗ್, ಹೆಲ್ತ್ ಇನ್‌ಸ್ಪೆಕ್ಟರ್ಸ್-ಕೋರ್ಸ್ ಮತ್ತು ಟರ್ನರ್, ಕಂಪಾಸಿಟರ್, ಟೈಪ್‌ರೈಟಿಂಗ್, ಸ್ಟೆನೋಗ್ರಫಿ ಮುಂತಾದ ಕಸಬುಗಳಲ್ಲೆಲ್ಲಾ ಸ್ಟೈಪೆಂಡ್ ಕೊಟ್ಟು ಒಳ್ಳೆಯರೀತಿಯ ಟ್ರೇನಿಂಗ್ ಕೊಡುತ್ತಿದ್ದೇವೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅದೂ ಅಲ್ಲದೆ ಅವರಿಗೆ ಕೆಲಸಮಾಡುವುದಕ್ಕೆ ಅವಕಾಶ ಕೊಟ್ಟು, ಶಿಕ್ಷಣ ಕೊಡುವುದಕ್ಕೋಸ್ಕರ ಮೂರನೆಯಪ್ಲಾನಿನಲ್ಲಿ 15.85 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಈಗ ಅನೇಕ ಜನ ಅದರಲ್ಲಿ ತರಪೇತಿ ಪಡೆದಿದ್ದಾರೆ. 1963-64 ರಲ್ಲಿ 1 ಲಕ್ಷ 90 ಸಾವಿರ ರೂಪಾಯಿ ಖರ್ಚಿನಲ್ಲಿ 450 ಜನ ಈ ರೀತಿ ಶಿಕ್ಷಣ ಪಡೆದಿದ್ದಾರೆ. ಅನೇಕ ಸಾವಿರ ಜನ ಈ ಡಿಪ್ಲೋಮ ಮತ್ತು ಡಿಗ್ರಿ ಕೋರ್ಸುಗಳಿಗೋಸ್ಕರ ಶಿಕ್ಷಣ, ತರಪೇತಿ ಪಡೆಯುತ್ತಿದ್ದಾರೆ. ಆದ್ದರಿಂದ ಈಗ ಎರಡು ವರ್ಷಗಳಿಂದ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಈ ಒಂದು ಶೈಕ್ಷಣಿಕ ಪದ್ಧತಿಯ ಮುಖಾಂತರ ತಮ್ಮ ಜೀವನೋಪಾಯವನ್ನು ಚೆನ್ನಾಗಿ ನಡೆಸಿಕೊಂಡು ಹೋಗಿದ್ದಾರೆ ಮತ್ತು ಅದಕ್ಕಾಗಿ ಹೆಚ್ಚು ಹಣವನ್ನೂ ಖರ್ಚು ಮಾಡುತ್ತಾ ಇದ್ದೇವೆ.

ಒಬ್ಬ ಮಾನ್ಯ ಸದಸ್ಯರು ಈ ಇಲಾಖೆಯಲ್ಲಿ ಏನೂ ಕೆಲಸವಾಗುತ್ತಿಲ್ಲವೆಂದು ಹೇಳಿದರು. ಅವರ ಜಿಲ್ಲೆಯಲ್ಲಿ ಎಷ್ಟು ಹಣ ಖರ್ಚಾಗಿದೆ, ಯಾವರೀತಿ ಹಣ ವಿಲೇವಾರಿಯಾಗಿದೆ, ಅವರ ಕಷ್ಟನಷ್ಟಗಳೇನು ಎಂಬುದನ್ನು ದಯೆಯಿಟ್ಟು ತಿಳಿದುಕೊಂಡು ಮಾತನಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಾಸನ ಜಿಲ್ಲೆಯಲ್ಲಿ 2,90,480 ರೂಪಾಯಿಗಳು, 1962-63 ರಲ್ಲಿ ಅಲಾಟ್ ಆಗಿ, 2,28,934 ರೂಪಾಯಿಗಳು ಖರ್ಚಾಗಿದೆ. ಈ ವರ್ಷ 1963-64ರಲ್ಲಿ 2,30,395 ರೂಪಾಯಿ ಅಲಾಟ್ ಆಗಿದೆ. ಎಜುಕೇಷನ್ನಿಗೆ ಹೋದವರ್ಷ 1,21,694 ರೂಪಾಯಿ, ಈಸಲ 61,900 ರೂಪಾಯಿ ಅಲಾಟಾಗಿದೆ. ಎಕನಾಮಿಕ್ ಏಡಿಗೆ ಹೋದವರ್ಷ 73 ಸಾವಿರ ರೂಪಾಯಿ, ಈ ವರ್ಷ 8,900 ರೂಪಾಯಿ ಅಲಾಟಾಗಿದೆ. ಹೆಲ್ತ್ ಮತ್ತು ಹೌಸಿಂಗಿಗೆ ಈ ವರ್ಷ 20 ಸಾವಿರ ರೂಪಾಯಿ, ಹೋದಸಲ 14 ಸಾವಿರ ರೂಪಾಯಿ ಕೊಟ್ಟಿದೆ. ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮುಗಳಿಗೆ ಹೋದಸಲ 40,400 ರೂಪಾಯಿ, ಈ ಸಲ 73 ಸಾವಿರ ರೂಪಾಯಿ ಅಲಾಟಾಗಿದೆ. ವೆಲ್‌ಫೇರ್-ಆಫ್-ಟ್ರೈಬ್ಸ್‌ಗೆ 12 ಸಾವಿರ ರೂಪಾಯಿ, ಇನ್ನಿತರ ಬ್ಯಾಕ್ವರ್ಡ್ ಕ್ಲಾಸುಗಳಿಗೆ 9,900 ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕೋಸ್ಕರ ಕೊಟ್ಟಿದೆ. ಇಷ್ಟು ಖರ್ಚಾಗುತ್ತಾ ಇದೆ. ಮಾನ್ಯ ಸದಸ್ಯರು ಅಲ್ಲಿಗೇ ಹೋಗಿ ಏನು ಆಗುತ್ತಿದೆ, ಹಣ ದುರುಪಯೋಗವಾಗುತ್ತಿದೆಯೆ, ಸದುಪಯೋಗವಾಗುತ್ತಿದೆಯೆ, ಯೋಜನೆಗಳನ್ನು ಕಾರ್ಯಗತಮಾಡುವುದರಲ್ಲಿ ಬೆನಿಫಿಶಿಯರುಗಳಿಂದ ತೊಂದರೆಯಾಗಿದೆಯೆ, ಆಫೀಸರುಗಳಿಂದ ತೊಂದರೆಯಾಗಿದೆಯೆ ಅಥವಾ ಸಾರ್ವಜನಿಕ ಮುಖಂಡರಿಂದ ತೊಂದರೆಯಾಗಿದೆಯೆ ಎಂಬುದನ್ನು

(ಶ್ರೀಮತಿ ಯಶೋಧರ ದಾಸಪ್ಪ)

ವಿಚಾರಮಾಡಿ, ನಿರ್ದಿಷ್ಟವಾದ ಕಂಪ್ಲೇಂಟುಗಳನ್ನು ನಮಗೆ ತಂದುಕೊಟ್ಟರೆ ನಾವು ಸರಿಯಾದಂಥ ಏರ್ಪಾಡುಮಾಡಿ ಬಂದೋಬಸ್ತು ಮಾಡಬಹುದು. ಇಂತಹ ಆಫೀಸರುಗಳಿಂದ ತೊಂದರೆಯಾಗಿದೆ ಎಂದು ಲಿಖಿತ ಮೂಲಕ ತಿಳಿಸಿದರೆ ಅವರನ್ನು ಕರೆಸಿ ವಿಚಾರಣೆ ಮಾಡಿ ಅವರ ಮೇಲೆ ಕ್ರಮ ಜರುಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಸುಮ್ಮನೆ ಬಾಯಲ್ಲಿ ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ. ಸರಕಾರದವರು ಮಾಡುತ್ತಾ ಇರುವುದನ್ನು ಸರಿಯಾಗಿ ಮಾಡುತ್ತಾ ಇಲ್ಲ ಎಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಅಧಿಕಾರಿಗಳಿಂದ ಎಷ್ಟು ತೊಂದರೆಯಾಗುತ್ತಿದೆ, ಸಾರ್ವಜನಕರಿಂದ ಎಷ್ಟು ತೊಂದರೆಯಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಇವ್ಯಾಲ್ಯುಯೇಷನ್ಸ್ ಜನಿನರ್ಸ್‌ನ್ನು ಇಡುತ್ತೇವೆ. ಅವರು ವರದಿ ಮಾಡುತ್ತಾರೆ. ಅದರ ಮೇಲೆ ಎಲ್ಲಿ ಹಣ ದುರುಪಯೋಗವಾಗಿದೆ ಯಾವ ರೀತಿ ಸದುಪಯೋಗವಾಗಬೇಕು ಎಂಬುದನ್ನು ಪರಿಶೀಲನೆ ಮಾಡಿ ತಮ್ಮ ಮುಂದೆ ಇಡ್ಡೇವೆ. ಆ ವರದಿ ತಮ್ಮ ಮುಂದೆ ಬರುತ್ತದೆ. ಒಬ್ಬರು ಸದಸ್ಯರು 17 ಜನ ಆಫೀಸರ್ಸ್ ವಿಷಯದಲ್ಲಿ ಬಹಳ ಸಹಾನುಭೂತಿಯಿಂದ ಮಾತನಾಡಿದರು. ಅವರನ್ನು ಹಿಂದೆ ತೆಗೆದುಕೊಂಡಿದ್ದರು, ತೆಗೆದುಕೊಂಡ ಮೇಲೆ ಅವರನ್ನು ರೆಗ್ಯೂಲರೈಸ್ ಮಾಡುವ ಕಾಲಕ್ಕೆ ಅವರನ್ನು ಕನ್‌ಫರ್ಮ್ ಮಾಡಿದ್ದರೆ ಇಷ್ಟು ತೊಂದರೆಯಾಗುತ್ತಾ ಇರಲಿಲ್ಲ. ಹಾಗೆ ಮಾಡದೇ ಇದ್ದುದರಿಂದ ಪಬ್ಲಿಕ್ ಸರ್ವೀಸ್ ಕಮಿಷನ್ ಅವರು ಒಪ್ಪಿಗೆ ಕೊಡದೇ ಅವರಿಗೆ ಸಂಬಳ ಸಾರಿಗೆ ಕೊಡುವುದಕ್ಕೆ ವಿಪರೀತ ಕಷ್ಟವಾಗಿ ಪರಿಣಮಿಸಿದುದರಿಂದ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡು ಅವರನ್ನು ತೆಗೆದು ಹಾಕಲಾಯಿತು.

ಸಬ್ಸಿಡಿ ನಿಲ್ಲಿಸುವುದಕ್ಕೆ ಕಾರಣವೇನು ಎಂಬುದನ್ನು ಎಷ್ಟು ಸಾರಿ ಹೇಳಿದರೂ ತಮ್ಮ ಗಮನಕ್ಕೆ ಬರುವುದಿಲ್ಲ, ನಾವೇನು ಮಾಡುವುದು ? ಅದನ್ನು ನಿಲ್ಲಿಸಿರುವುದು ನಾವಲ್ಲ. ಅದು ಬೇಕಾಗಿಲ್ಲ ಎಂದು ಹಿಂದೆ ಇದ್ದ ಮಂತ್ರಿಗಳು ತೀರ್ಮಾನ ಮಾಡಿದಮೇಲೆ ಅದನ್ನೇ ನಾವು ಮುಂದುವರಿಸಿಕೊಂಡು ಹೋಗುತ್ತಾ ಇದ್ದೇವೆ. ಸಬ್ಸಿಡಿ ರಿನ್ಯೂ ಮಾಡಬೇಕಾಗಿದ್ದರೆ ನಾಲ್ಕನೇ ಪ್ಲಾನ್‌ನಲ್ಲಿ ಅದು ಬೇಕು ಎಂದು ಹೇಳಿ ಕೇಳಬೇಕು. ಅರ್ಧಮರ್ಧ ಆಗಿರತಕ್ಕ ಮನೆಗಳಿಗೆ 13 ಲಕ್ಷ ರೂಪಾಯಿಗಳನ್ನು ಕೊಟ್ಟು ಪೂರ್ತಿಯಾಗುತ್ತದೆ ಎಂದು ಹೇಳಿದ ಮೇಲೆ ಇನ್ನೂ 13 ಲಕ್ಷ ರೂಪಾಯಿ ಬೇಕು ಎಂದರೆ ಎಲ್ಲಿಂದ ಕೊಡುವುದಕ್ಕೆ ಸಾಧ್ಯವಾಗುತ್ತದೆ ? ತಾವು ಯೋಚನೆ ಮಾಡಬೇಕು. ಇದನ್ನು ನ್ಯಾಯವಾಗಿ ನೋಡಬೇಕು, ಇದರಲ್ಲಿ ಮುಚ್ಚುಮರೆ ಏನೂ ಮಾಡಿಲ್ಲ. ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಟ್ಟು, ಸ್ವತಂತ್ರವಾಗಿ ಉದ್ಯಮಗಳನ್ನು ಅವರು ಪ್ರಾರಂಭಿಸುವುದಕ್ಕೆ ಅವಕಾಶ ಮಾಡಿಕೊಡುತ್ತಾ ಇದ್ದೇವೆ. ವಿದ್ಯಾಭ್ಯಾಸದ ಇಲಾಖೆಯ ವಿಷಯವನ್ನು ಹೇಳುತ್ತಾ ಹೆಣ್ಣುಮಕ್ಕಳಿಗೆ ಕಾಲೇಜು ಹಾಸ್ಟೆಲುಗಳು ಇಲ್ಲ ಎಂದು ಹೇಳಿದರು. 5 ಲಕ್ಷ ರೂಪಾಯಿ ಖರ್ಚುಮಾಡಿ ಎರಡು ಮನೆಗಳನ್ನು ಮಹಾತ್ಮಾ ಗಾಂಧಿ ರೋಡ್‌ನಲ್ಲಿ ತಗೆದುಕೊಂಡು ಅಲ್ಲಿ ಕೆಲವರನ್ನು ಇರಿಸಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ಎಂದು ಕೇಳುತ್ತೇನೆ. ಪ್ರತಿಯೊಂದು ಜಿಲ್ಲೆಯಲ್ಲೂ ಹಾಸ್ಟೆಲ್ ಕಟ್ಟಡ ಇದ್ದು ಮೂರು ಜಿಲ್ಲೆಯಲ್ಲಿ ಇರಲ್ಲಿಲ್ಲ, ಅದಕ್ಕೇ ಅಮಿಲಿಯೋರೇಷನ್ ಫಂಡ್‌ನಿಂದ ಮೂರು ಜಿಲ್ಲೆಯಲ್ಲೂ ಹಾಸ್ಟೆಲ್ ಆಗಬೇಕೆಂದು ನಾಲ್ಕು ಲಕ್ಷ ರೂಪಾಯಿಗಳನ್ನು ಮುಂಜೂರು ಮಾಡಿದ್ದೇವೆ. ಆದ್ದರಿಂದ ವಿದ್ಯಾಭ್ಯಾಸದ ಇಲಾಖೆಯಲ್ಲಾಗಲೀ, ಸಚಿವರಲ್ಲಾಗಲೀ ಯಾವ ರೀತಿಯಲ್ಲೂ ಕರ್ತವ್ಯಲೋಪವಾಗಿಲ್ಲ. ಹಣ ಖರ್ಚಾಗುವುದಕ್ಕೆ ಬಂದೋಬಸ್ತು ಮಾಡಿಕೊಂಡಿದ್ದೇವೆ. ಅದರಲ್ಲಿ ಸಂಶಯ ಬೇಡ ಎಂದು ತಮ್ಮಲ್ಲಿ ಹೇಳಬಯಸುತ್ತೇನೆ.

ಸಮಾಜ ಕಲ್ಯಾಣ ಕೆಲಸ ಎಂದರೆ ಟೀಕೆ ಟಿಪ್ಪಣಿಗಳಿಂದಲೇ ನಡೆಸತಕ್ಕ ಕೆಲಸ. ಎಲ್ಲಾ ಮಾನ್ಯ ಸದಸ್ಯರೂ ಪಾನ ನಿರೋಧವನ್ನು ತೆಗೆದು ಹಾಕಿ ಅದರಿಂದ ದುಡ್ಡು ಹೆಚ್ಚಾಗಿ ಬರುತ್ತದೆ ಎಂದು ಹೇಳಿದರು. ಅದನ್ನು ನಾನು ವಿರೋಧಿಸುತ್ತೇನೆ. ಏಕೆಂದರೆ ಆ ರೀತಿ ದುಡ್ಡು ಸಂಪಾದನೆಮಾಡಿ ಸರಕಾರವನ್ನು ನಡೆಸಬೇಕಾದ ಅಗತ್ಯವಿಲ್ಲ ಎಂದು ಹೇಳುವವರಲ್ಲಿ ನಾನು ಒಬ್ಬಳು. ಕಳ್ಳ ಭಟ್ಟಿ ನಡೆಯುತ್ತದೆ. ಆದ್ದರಿಂದ ಪಾನನಿರೋಧವನ್ನು ತೆಗೆದುಹಾಕಿ ಎಂದು ಹೇಳುವುದಾದರೆ ಕಳ್ಳತನ ನಡೆಯುತ್ತದೆ ಎಂದು ಪೋಲೀಸ್ ಡಿಪಾರ್ಟ್‌ಮೆಂಟ್ ಇದ್ದು ಏನು ಪ್ರಯೋಜನ, ಅದನ್ನು ತೆಗೆದು ಹಾಕಿ ಎಂದು ಹೇಳಿದಂತಾಗುತ್ತದೆ. ಪೋಲೀಸ್ ಇಲಾಖೆ ಇದ್ದೂ ಕಳ್ಳತನ ನಡೆಯುತ್ತದೆ ಅದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ತಪ್ಪಿಸುವ ಎದೆಗಾರಿಕೆ, ಶಕ್ತಿ ಬೇಕು. ಆದ್ದರಿಂದ ಸಮಾಜ ಸುಧಾರಣೆಯ ಕೆಲಸ ಸುಲಭವಲ್ಲ ಎಂದು ಮಾತ್ರ ಹೇಳುತ್ತೇನೆ. ಹರಿಜನರು, ಗಿರಿಜನರು ಉದ್ಧಾರವಾಗಬೇಕಾದರೆ ಅವರು ಹೆಂಡ ಕುಡಿಯುತಕ್ಕ ಸ್ವಭಾವವನ್ನು ಬಿಡಬೇಕು. ಶ್ರೀಮಂತರು ಕುಡಿಯುತ್ತಾರೆ, ಈಗಲೂ ಕುಡಿಯುತ್ತಾರೆ, ಮುಂದೆಯೂ ಕುಡಿಯುತ್ತಾರೆ, ಅವರಿಗೆ ಕಾನೂನಿನ

ಪ್ರಕಾರ ಪರ್ಮಿಟ್ ಅವರ ಜೋಬಿನಲ್ಲಿ ಇರುತ್ತದೆ, ಅವರ ವಿಚಾರ ನಮಗೆ ಬೇಡ, ಆದರೆ ಬಡವರನ್ನು ಏಕೆ ಹಾಳು ಮಾಡುತ್ತೀರಿ ಎಂದು ಹೇಳಿ ಅದನ್ನು ನಾವೆಲ್ಲರೂ ವಿರೋಧಿಸಬೇಕೆಂದು ತಮ್ಮನ್ನು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

SRI B. D. JATTI.—Mr. Speaker, Sir, I do not wish to take much of the time of this august House but I want to clarify some of the points on behalf of myself and on behalf of the Hon. Chief Minister.

Sir, Sriyuts Andanappa Doddameti, Madappa Gowda, Gopala Gowda, Devendrappa remarked that change of name of the State to Karnātaka had not been mentioned in the Governor's Address. Perhaps all the Hon. Members know that unless a resolution is passed in this House and in the Upper House unanimously and sent to Government and unless that is taken up in the Parliament and an amendment is adopted to the provision of the Constitution, it is not possible to make any change in the name of any State which has been accepted in the Act of the Parliament. So, it is not correct to say that this has not found a place in the Address. Unless a definite policy has been accepted and approved by the Government of India and unless it is accepted to make a change in the Constitution, it is no use mentioning it in the Address of the Governor. That is why no mention is made.

Sir, Sri Madappa Gowda mentioned the pay scale of the Central and the State Government servants. It is true that there is a vast difference between the pay scales of our Government servants and those of the Central Government. It is also true that the resources of our State are small as compared to the resources of the Government of India. By that it does not mean that our Government is not serious; and sympathetic towards our employees. We are very serious and sympathetic to help our own Government servants but it all depends on the financial resources. The only method according to me is, we can request the Government of India that whenever they recruit candidates to the Central Government services, instead of directly recruiting they may make it a rule to recruit 5 or 10 per cent of State Government servants by holding a competetive examination, either on the basis of population or on the basis of the area, whatever it is. Then only the State Government servants will have an opportunity of getting better pay scales, better amenities and all that. I have suggested this to the Government of India and they are considering it. To what extent this will be a success is a different matter. In the conferences of the Chief Ministers, in the conferences of the Finance Ministers and in the N.D.C., if this point is stressed as to why our Government servants who are equally competent and who are working for eight hours a day should not be recruited to the Central services, it may yield some results. This is a point for consideration and also a point to be stressed by all of us. If we stress this point in all these meetings, I am sure, the Government of India will have to agree, if not 100 per cent, at least to a certain extent. If some percentage is accepted first, we can try to increase it year by year. That is the only way to get out of this difficulty.

(SRI B. D. JATTI)

Sir, some members made reference to the border difficulty with Maharastra, and our own action for including Kasargodu etc. I do not want to go into the details of this question because the Hon. Speaker did not want me to discuss this point in detail. Sir, this question was discussed on the floor of this House not once or twice but hundreds of times. I want to reply in brief to the point raised by some Hon. Members.

The first point is, as I was replying during the question hour, in view of the States Re-organisation Act, passed by Parliament *the status quo* ought to be maintained. The old demands for the distribution of areas on a linguistic basis have been set at rest by the Parliament in 1956. At that time a number of amendments were moved in the Parliament and all the amendments were withdrawn. So the question was set at rest when the Bill became an Act. But, there is some scope for minor adjustment here and there. This is a question of giving some villages or taking some villages which will be on and *ad hoc* basis and with the consent of the States representatives concerned Without the consent of the States concerned, it would not be possible for us to make any changes in the decision which has been accepted by Parliament, the supreme authority in our country. That is what I wanted to explain regarding the border issue.

Sir, regarding the implementation of official language which was stressed by Sri Gopala Gowda, Government have already moved in the matter, glossary of terms, etc. will be got prepared with the help of Chief Translator and other experts. As all of you know, it is very difficult for us to speak correctly and express our own views precisely in Kannada. It does not mean that we do not love Kannada. It is our mother tongue and we have accepted it as our official language. But, if I am asked to speak while I am delivering a speech on budget, I may fail miserably. So, I did not try to do it when I presented the budget because there are certain terms and terminologies which cannot be used in Kannada. When once we get accustomed to this, it may be possible to speak only in Kannada. If necessary we may speak in English. English has to be learnt in our own interest because when we go to foreign countries, we must be able to express our views and get their assistance.

As for old age pension and D.A. I have said what I wanted to say in my budget speech. According to it Rs. 15 will be given per mensem to those aged 70 years and more who have no means of support, and Rs. 5 as D.A. to those whose pay is Rs. 300 and below. In addition to that, if any Government servant, while in service unfortunately dies, according to the M.C.S.Rs. the widow is entitled to get certain facilities today. The Government of India has made a change. According to that change, if any Government servant dies while in service, his widow is entitled to get pension till she dies. Our Government is considering that proposal. About the expenditure in this behalf, I have roughly

calculated and I will illustrate a case. Suppose 'A' is a Government servant in the Government of India service. If he dies, according to our rules, if the widow is entitled to get Rs. 16,000, according to the Government of India, it will come to Rs. 32,000, if the widow survive till 60 years. Of course, this is a rough calculation. But, this is not a small thing.

Sri SANJEEVANATH AIKALA (Suratkal).—Does it include cases of suicide by Government servants ?

Sri B. D. JATTI.—Sir, details must be worked out and at that time I may invite Sri Aikala to make his suggestions.

Mr. SPEAKER.—Does she become a lesser widow if her husband commits suicide ? Widow is a widow.

(*Laughter*)

Sri H. R. KESHAVA MURTHY.—Where remarriages are allowed, will this apply ?

Sri B. D. JATTI.—This is a policy statement and when the rules are to be framed I will consult all persons who are interested in widows.

(*Laughter*)

Sir, regarding the continuance of the present Governor in our State, it is purely within the purview of the President of India for it is said that he shall be appointed by the President and will hold office during the pleasure of the President. Some Hon. Members said that the Government should be continued and some others said that he should not be continued. If he is continued it will be possible for him to read his speech in Kannada. This time we requested his to read in Kannada and he did so. But, this being a constitutional matter, it is unnecessary for us to discuss. Privately we can discuss and privately we can pursuade some people that this Governor may remain here itself becuase he is a good person. That is a different thing altogether.

Regarding the criticism of our Hon'ble the Leader of the Opposition, Sri Sivappa that the Governor's Address is some what stale, insipid, static and all the exaggerated comments. I can only say that mere words will not make any arguments or produce any desirable effect on matters which take time. Generally, the sppech of the Governor is very short and generally the speech of the Governor makes mention of the important achievements which we have made during the current year and it also contains the Policies which we are likely to pursue for the future year. Here, unfortunately, the address which is read by our Governor is becoming too long. So, unnecessarily we are going into all details. From the next year we hope that the address will be short. Let us have a compromise on the Governor's Address that it should be read and finished within 10 to 15 minutes. That is the general practice followed in well established democratic countries.

(SRI B. D. JATTI)

3-30 P.M.

Sir, I do not want to go into details regarding other subjects because, as we know, we will be discussing the Budget. shortly General discussion on the Budget will take place for 5 days and members will have ample opportunities to discuss all the subjects generally. At that time, I will reply to the general discussion. We have decided in the Business Advisory Committee meeting that we should take up subjects pertaining to each Minister. It will be very easy for the member to criticise and it will enable each Minister to be present throught the day and he will be in a better position to reply. That has been decided by the Business Advisory Committee. To-day, I will have to place before the House Supplementary Grants and that also is to be finished before the close of the day. Without taking much of the time, I thank all the Members of the Opposition and also all the Members of our side for fully co-operating in the discussions on the Governor's Address. Thank you.

Mr. SPEAKER.—Before I proceed further, I have to point out, what might be called a small anomaly, if it is to be called an anomaly. Rule 295 says:

"Subject to the provisions of sub-rule (3) of rule 294 the reply of the mover of the original motion shall in all cases conclude the debate."

Sub-rule (3) of Rule 294 says:

"A member who has moved a motion may speak again by way of reply, and if the motion is moved by a private member, the Minister concerned may, with the permission of the Speaker, speak (whether he has previously spoken in the debate or not, after the mover has replied."

To-day, the motion before the House is the Motion of Thanks to t governor for his Address. Rule 22, says:

"The Chief Minister or any other Minister whether he has previously taken part in the discussion or not, shall, on behalf of the Government have a general right of explaining the position of the Government at the end of the discussion and the Speaker may enquire how much time wil be required for the speech so that he may fix the hour by which the discussion shall conclude."

Under this, the Government has a right of reply. So, I would like to know, whether the mover Sri Siddiah wants to say anything by way of reply.

Sri D. M. SIDDIAH.—Sir, I require about five minutes for my reply.

Sri N. O. SAMAJI (Belgaum-II).—[In Marathi]

Sri B. D. JATTI.—Sir, I have already explained that the Act of Parliament is final. But if both the States' representatives sit together across the Table and come to the conclusion on the basis of give and take, then it can be changed. Otherwise it will not be possible.

Sri L. B. BIRJE (Khanapur).—(Marathi)

† ಶ್ರೀ. ಡಿ. ಎಂ. ಸಿದಯ್ಯ. (ಬಿಳಿಗೆರೆ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಮೇಲೆ ಇಲ್ಲಿ ತಂದಿದ್ದ ವಂದನಾನಿರ್ಣಯದ ಬಗ್ಗೆ ಈ ಸಭೆಯಲ್ಲಿ ನಾಲ್ಕೈದು ದಿವಸಗಳ ಕಾಲ ದೀರ್ಘ ಚರ್ಚೆ ನಡೆಸಿ ಮಾನ್ಯ ಸಭೆಯ ಸದಸ್ಯರುಗಳೆಲ್ಲಾ ಈಗಾಗಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಮತ್ತು ಅದಕ್ಕೆ ಮಾನ್ಯ ಮಂತ್ರಿಗಳು ಸರಕಾರದ ಪರವಾಗಿ ಸಾಕಾದಷ್ಟು ವಿವರಣೆಗಳನ್ನೂ ಸಮರ್ಪಕವಾಗಿ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಲ್ಲಿ ನನ್ನ ಪ್ರಾರ್ಥನೆಯಾದರೂ : ಇಷ್ಟು : ಅದನ್ನು ಒಂದೆರಡು ಮಾತುಗಳಲ್ಲಿ ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಕನ್ನಡ ನಾಡು ಇಂದು ವಿಶಾಲ ಮೈಸೂರುಆಗಿದೆ. ನಾನು ಹಳೆಯ ಮೈಸೂರಿನವನೇ ಆಗಿದ್ದರೂ ಕರ್ನಾಟಕ ಅಥವ ಹೊಸ ಮೈಸೂರು ಆದ ಮೇಲೆ ನಾವೆಲ್ಲರೂಒಂದೇ ಎನ್ನುವ ಭಾವನೆಯನ್ನು ಇಟ್ಟುಕೊಂಡು ಹಿಂದೆ ಏನಾಗುತ್ತೊ ಅದನ್ನೆಲ್ಲಾ ಮರೆತು ಹೊಸ ಪರಿಸ್ಥಿತಿಗೆ ಹೊಂದಿಕೊಂಡು ನಮ್ಮ ರಾಜ್ಯದ ಸರ್ವತೋಮುಖವಾದ ಕೆಲಸಗಳನ್ನು ಮಾಡಲು ಎಲ್ಲರೂ ಸಹಕರಿಸುವುದು ನಮ್ಮ ಪವಿತ್ರ ಕರ್ತವ್ಯ. ಈ ಸಂದರ್ಭದಲ್ಲಿ ನಮ್ಮ ಸಭೆಯಲ್ಲಿರುವ ಮಹಾರಾಷ್ಟ್ರದ ಸದಸ್ಯರುಗಳಲ್ಲಿ ನಾನು ಪಾರ್ಥನೆ ಮಾಡುವುದೇನೆಂದರೆ ಭಾಷಾವಾರು ಪ್ರಾಂತ ರಚನೆಯಾದಮೇಲೆ ನಾವು ಒಂದು ಗೆರೆಯನ್ನು ಹಾಕಿ ಪ್ರಾಂತ ರಚನೆ ಮಾಡುವುದಕ್ಕಾಗುವುದಿಲ್ಲ. ಅದರಲ್ಲಿ ಅನೇಕ ಭಾಷೆ ಮಾತನಾಡುವವರೂ ಬರುತ್ತಾರೆ. ಈಗ ಮಹಾರಾಷ್ಟ್ರ ರಾಜ್ಯವಾದಮೇಲೆ ಅಲ್ಲಿಯೂ ಬೇರೆ ಬೇರೆ ಬಾಷೆಯನ್ನು ಮಾತನಾಡುವ ಜನ ಇರುತ್ತಾರೆ. ಹಾಗೆ ಇಲ್ಲಿಗೆ ಮರಾಠಿ ದೇಶದ ಕೆಲವು ಭಾಗಗಳು ಬಂದಿರಬಹುದು, ಅದು ಅನಿವಾರ್ಯ. ಆದುದರಿಂದ ಈಗ ನೀವೆಲ್ಲರು ಮರಾಠಿ ಕಲಿತವರಾದವರೂ ಕನ್ನಡದ ಜನರೊಂದಿಗೆ ಬೆರೆತು ಬಾಳಿ ಸೌಹಾರ್ದದಿಂದ ಕೆಲಸ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ, ಈ ದೇಶದ ಜನಗಳ ಭಾಷೆ ಎಂದು ಇದ್ದರೂ ಮರಾಠಿ ಭಾಷೆಯವರಾದ ತಾವು ಇಲ್ಲಿಗೆ ಬಂದಿರುವುದರಿಂದ ಇಲ್ಲಿನ ಜನರೊಡನೆ ಹೊಂದಿಕೊಂಡು ಈ ಮಾನ್ಯ ಸಭೆಯ ಸದಸ್ಯರಾಗಿ ಕೆಲಸ ಮಾಡುವುದು ಒಳ್ಳೆಯದು ಎಂದು ನನ್ನ ಆಸೆ.

ಈಗಾಗಲೇ ಮಾನ್ಯಸದಸ್ಯರು ಮಾಡಿದ ಟೀಕೆಗಳಿಗೆ ಸರಕಾರದವರು ಉತ್ತರ ಕೊಟ್ಟಿರುವುದರಿಂದ ಈ ನಿರ್ಣಯವನ್ನು ಸಭೆಯ ಒಪ್ಪಿಗೆಗಾಗಿ ಇಲ್ಲಿ ಮಂಡಿಸುತ್ತಿದ್ದೇನೆ.

Sri L. B. BIRJE (Marathi).—

Sri B. D. JATTI.—Sir, whether the Government has done justice or not depends upon his own opinion According to the opinion of the Government, we have been doing full justice and more justice to the people whose mother tongue is Marathi. If the Hon'ble Member wants to carry a wrong impression, I cannot come in his way, because it is democracy.

Sri B. R. SUNTHANKAR (Belgaum City).—The Hon'ble Finance Minister just now said that the Act of Parliament was final. If it was final, why was the four-man committee appointed to go into the border question ? That is the first question.

Mr. SPEAKER.—All of you have participated in the Debate, and have spoken enough on this matter. I am allowing only clarification for the obvious reason that these members should not go away with the feeling that they have been denied a chance.

Sri B. R. SUNTHANKAR.—Why the four-man committee was appointed and why this Government gave its consent to the appointment of that committee ?

(SRI B. R. SUNTHANKAR)

Then the second question is, at the time of passing the States Reorganisation Act, the Hon'ble Members suggested a number of amendments in respect of the border areas. But they were all rejected. But while replying to the debate, the then Home Minister Pandit Gobind Vallabh Pantji gave an assurance that the border problem would not be scissored out, but would be solved. The border problems were kept open by the Parliament, at least by the Central Government. Under the circumstances, how is it that the Hon'ble Finance Minister says that this question was finally settled in 1956?

SRI B. D. JATTI.—Sir, I will quote the statement made by the Union Home Minister :—

> "The decisions of the Zonal Councils are not binding. They are only of an advisory character. But it will at least have some moral force."

> And again, in respect of the debate it was observed by the Prime Minister "......it is impossible to please everybody...... there are bound to remain some people who do not speak the official language of the State."

*** Panditji has made it clear, this is a matter which is left to the respective States. If they come to the conclusion and if they can bring up a resolution which is accepted by the Zonal Council, then only will the Parliament consider. Otherwise, nobody has any right in the matter.

That was why the Government of Mysore agreed to appoint the four-man committee, according to the agreement which was signed by the Chief Minister of Maharashtra and the Chief Minister of Mysore. I will read it.

This is the Report of the representatives of Mysore and Maharashtra Governments on the border dispute.

SRI C. J. MUCKANNAPPA.—It is not given to us, Sir.

MR. SPEAKER.—Reading portions of the terms of reference does not amount to reading the Report. It is for the Government to supply it or not. It is not for the Chair.

SRI B. D. JATTI.—I am not quoting the report. I am only reading the agreement which was entered into between the Chief Minister of Mysore and the Chief Minister of Maharashtra, because the Hon'ble Member wants to know why this Government agreed to appoint the committee.

MR. SPEAKER.—If the Members so desire, that agreement will have to be placed on the Table.

SRI B. D. JATTI.—This report I can place it, Sir. I can give it to the Members who are interested, Sir.

This is the joint statement of the two Chief Ministers :—

"It is agreed that the Government of Maharashtra and the Government of Mysore will each appoint two representatives. These four representatives will sit and discuss and go in detail into cases put forward by the two Governments regarding the disputed border between the two States and report to the Government as to what extent there is agreement and disagreement about the disputed border, with reasons therefor.

Their report with their opinions will be sent to the two Governments who may then consider the reports and take such steps as they deem fit."

We are not bound down by any report which has been submitted. If we deem it fit, we can accept it. Otherwise, we can reject it out-right.

Sri B. R. SUNTHANKAR.—If the matter was finally decided by the Parliament, why this Committee was appointed? That means this question was kept open.

Sri B. D. JATTI.—The Government of Mysore was never interested in opening it. It is some persons like my esteemed friend Sri Sunthankar who are always interested in making political background about it.

ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ನಮ್ಮ ಭಾಲ್ಕಿ ಪ್ರಾಂತ್ಯದಲ್ಲಿ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕೇವಲ 2 ಪರ್ಸೆಂಟ್ ತೇರ್ಗಡೆಯಾಗಿದ್ದಾರೆ. ಇದನ್ನು ಸರಿಪಡಿಸಲು ಸರ್ಕಾರದವರೇನು ಕ್ರಮಕೈಗೊಂಡಿದ್ದಾರೆ ?

† ಶ್ರೀ ಎಸ್. ಆರ್. ಕಂಠಿ.—ಈಗ ಹೈದ್ರಾಬಾದ್ ಕರ್ಣಾಟಕದಲ್ಲಿ ಒಟ್ಟು 80 ಹೈಸ್ಕೂಲು ಗಳಿವೆ. ಅವುಗಳಲ್ಲಿ 50 ಸರ್ಕಾರಿ ಹೈಸ್ಕೂಲುಗಳಿವೆ. ಇನ್ನು ಕಟ್ಟಡಗಳ ವಿಚಾರಕ್ಕೆ ಬಂದರೆ ಈಗಾ ಗಲೇ 15 ಕಟ್ಟಡಗಳನ್ನು ಕಟ್ಟಿಸಿಕೊಡಲಾಗಿದೆ. ಇನ್ನೂ ಕೆಲವನ್ನು ಕಟ್ಟಿಸಬೇಕೆಂಬ ಅಭಿಪ್ರಾಯ ಸರ್ಕಾರಕ್ಕಿದೆ. ಆದರೆ ಭಾಲ್ಕಿ ಹಿಂದುಳಿದ ಪ್ರದೇಶ. ಅಲ್ಲಿಗೂ ಏನಾದರೂ ಮಾಡಬೇಕೆಂದಿದ್ದೇವೆ. ಇನ್ನು ಸರ್ಕಾರಿ ಹೈಸ್ಕೂಲುಗಳನ್ನು ಎಲ್ಲಿಗೂ ಕೊಡುವುದಿಲ್ಲ. ಜನರೇ ಮುಂದೆ ಬಂದರೆ ಅವರಿಗೆ ಸರ್ಕಾರದವರು ಉತ್ತೇಜನ ಕೊಡುತ್ತಾರೆಂದು ಇಷ್ಟನ್ನು ತಿಳಿಸಬಲ್ಲೆ. ಅಲ್ಲಿ ಕಟ್ಟಿಸಬೇಕಾದ ಒಟ್ಟು ಕಟ್ಟಡಗಳ ಸಂಖ್ಯೆ 51 ಸಾವಿರಕ್ಕೆ ಬರುತ್ತದೆ. ಅವುಗಳ ಪೈಕಿ ಈಗಾಗಲೇ 3-4 ವರ್ಷಗಳಲ್ಲಿ 20-25 ಸಾವಿರ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಇನ್ನೂ ಅಲ್ಲಿಗೆ ಕಟ್ಟಡಗಳನ್ನು ಕಟ್ಟಿಸಿಕೊಡ ಬೇಕೆಂಬ ಅಭಿಪ್ರಾಯ ಸರ್ಕಾರಕ್ಕಿದೆ.

ಶ್ರೀ ಎಸ್. ಬೀಮಣ್ಣ.—2 ಪರ್ಸೆಂಟ್ ರಿಜಲ್ಟ್ ಬಂದಿರುವುದನ್ನು ತಪ್ಪಿಸಲು ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಆ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ, ಕೆಲವು ಸ್ಪೆಷಲ್ ಸ್ಟಾಫ್‌ನು ತೆಗೆದುಕೊಳ್ಳಬೇಕೆಂದಿದ್ದೇವೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಜ್ಯಪಾಲರ ಭಾಷಣದಲ್ಲಿ ಯಾವ ಒಂದು ಪಾಲಿಸಿ ಇಲ್ಲ. ಪ್ರೊಹಿಬಿಷನ್ ವಿಷಯದಲ್ಲಿ ಮೈಸೂರು ರಾಜ್ಯದ ನಿಲುವು ಏನು ಎಂದು ಕೇಳಿದ್ದೆ. ಎಲ್ಲೆಲ್ಲೂ ಸಹ ಕಾರ ಸಂಘಗಳು ಬೆಳೆಯಬೇಕು ಎಂಬುದಾಗಿ ಹೇಳಿದ್ದಾರೆ. ಒಂದು ಉಣ್ಣೆ ಸಹಕಾರ ಸಂಘದಲ್ಲಿ ಲಕ್ಷಾಂತರ ರೂಪಾಯಿಗಳು ದುರುಪಯೋಗವಾಗಿವೆಯೆಂಬುದನ್ನು ತಮ್ಮ ಗಮನಕ್ಕೆ, ನನ್ನ ಭಾಷ ಣದ ಮೂಲಕ ತಂದಿದ್ದೇನೆ. ಇದು ಎರಡನೆಯ ವಿಷಯ. ಪಾಲಿಸಿಯ ವಿಷಯದಲ್ಲಿ ಇವರು ಒಂದು ವೇಳೆ ಡಿವೈಡ್ ಆಗಿದ್ದರೆ, ಸರಕಾರದ ನಿಲುವೇನು? ಫೀಜ್ ಸ್ಟ್ರಕ್ಚರ್ ಸಮಿತಿಯಲ್ಲಿ ಹಳೆಯ ಮೈಸೂರಿಗೆ ಪ್ರಾತಿನಿಧ್ಯವಿಲ್ಲ ಎಂದು ನಾನು ಹೇಳಿದ್ದೆ. ಈ ಮೂರಕ್ಕೂ ಅವರು ಉತ್ತರ ಕೊಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗೆ ಏನಾದರೂ ಇದ್ದರೆ ಕಾಗದ ಬರೆದು ತಿಳಿಸಿರಿ. ಆದರೆ ಸಾಮಾನ್ಯವಾಗಿ ಒಂದು ಗ್ರಾಮದ ಎಲ್ಲ ರಿಸೀಟುಗಳನ್ನು ಶಾನುಭೋಗರಿಗೆ ಕೊಡುತ್ತಾರೆ. ಶ್ಯಾನುಭೋಗ ಪಟೇಲರು ಇಂಡಿವಿಜ್ಯುಯಲ್ ರಿಸೀಟ್ ತೆಗೆದುಕೊಂಡು ಹೋಗಿ ಪ್ರತಿಯೊಬ್ಬರಿಗೆ ಕೊಡುತ್ತಾರೆ. ರಿಸೀಟ್ ಕೊಟ್ಟಿದ್ದರೆ ಏನೂ ತೊಂದರೆ ಇಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ನಮ್ಮ ಊರಿನಲ್ಲಿ ಒಬ್ಬ ಪಟೇಲರು ಆಫೀಸಿನಲ್ಲಿ ರಸೀದಿ ಇರುವಾಗ, ಅನ್‌ಆಥರೈಸ್ಡ್ ರಸೀದಿ ಕೊಟ್ಟಿದ್ದನ್ನು ತಮ್ಮ ಗಮನಕ್ಕೆ ತಂದಾಗ ಏನು ಆಕ್ಷನ್ ತೆಗೆದುಕೊಂಡಿರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೇಶವಮೂರ್ತಿಗಳ ಕೇಸನ್ನು ಹಾಸನ ಜಿಲ್ಲೆಗೆ ಸಂಬಂಧಪಟ್ಟದ್ದು. ಆದ್ದರಿಂದ ಆ ಜಿಲ್ಲೆಗೆ ಸಂಬಂಧಪಟ್ಟದ್ದನ್ನು ಕೇಳಿದರೆ ಉತ್ತರ ಹೇಳಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯಾವ ಖಾಸಗಿ ಮುಖಂಡರು ಹೋದರೂ ಎನ್. ಡಿ. ಎಫ್. ಎಫ್. ಎಸ್. ಮಾಡುತ್ತಾ ಇದ್ದಾರೆ ಎಂದು ಹೇಳುತ್ತಿದ್ದಾರೆ. ಕೇಶವಮೂರ್ತಿಯಂಥ ಅನೇಕಜನ ಮುಖಂಡರು ಸರ್ಕಾರದ ಗಮನಕ್ಕೆ ತಂದರೂ ನಿಗಾ ಕೊಡುತ್ತಿಲ್ಲ. ಸರಕಾರ ಮುಂದೆ ಏನಾದರೂ ನ್ಯಾಯವಾಗಿ ನಡೆದುಕೊಂಡರೆ ಕಲೆಕ್ಷನ್ ಬರುತ್ತದೆ. ಇಲ್ಲದೆ ಅಲ್ಲಲ್ಲಿ ಮುಖಂಡರೇ ತಿಂದು ಹಾಕುವುದಾದರೆ ಕರೆಕ್ಷನ್ ನಿಲ್ಲಿಸುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ದೇಶದ ರಕ್ಷಣಾ ಫಂಡಿಗೆ ಮೈಸೂರಿನಲ್ಲಿ 3ಕೋಟಿ 31 ಲಕ್ಷ ರೂಪಾಯಿ ವಸೂಲಾಗಿದೆ. ಬಹುಶಃ ನಮಗೆ ಬಂದ ಕಂಪ್ಲೇಂಟುಗಳು ಬಹಳ ಕಡಮೆ. ಇನ್ನು ಯಾವುದಾದರೂ ಫಂಡಿಗೆ ಹಣ ವಸೂಲು ಮಾಡಿದ್ದರೆ ನೂರಾರು ದೂರುಗಳು ಬರುತ್ತಿದ್ದುವು. ಜನಗಳು ಬಹಳ ದೇಶಭಕ್ತಿಯಿಂದ ಹಣವನ್ನು ವಸೂಲುಮಾಡುತ್ತಿದ್ದಾರೆ, ರಕ್ಷಣಾನಿಧಿಗೆ. ಡಿಫೆನ್ಸ್ ಕಲೆಕ್ಷನ್ನಿನಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಅಥವಾ ಮಿಸ್‌ಯೂಸ್ ನಡೆದಿಲ್ಲ. ಎಲ್ಲಿಯಾದರೂ ಇಂಡಿವಿಜ್ಯುಯಲ್ ರಸೀತಿ ಕೊಡುವುದಕ್ಕೆ ಬದಲಾಗಿ ಗ್ರಾಮಕ್ಕೆ ಒಟ್ಟಾಗಿ ರಸೀತಿಗಳನ್ನು ಕೊಟ್ಟಿರುತ್ತಾರೆ.

ಶ್ರೀ ಬಿ. ಎಲ್. ಗೌಡ.—ಯಾರು ಹಣ ಕೊಡುತ್ತಾರೆಯೋ ಅವರಿಗೆ ರಸೀತಿಕೊಡಬೇಕಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ಯಾನುಭೋಗ ಪಟೇಲ ವಸೂಲಿ ಮಾಡಿದಾಗ ಅವನಿಗೇ ಕೊಡುತ್ತಾರೆ. ಲಂಪ್‌ಸಮ್ ರಸೀತಿ ಗ್ರಾಮಕ್ಕೆ ಕೊಟ್ಟಾಗ, ಅವರು ವಸೂಲಿಮಾಡಿಕೊಡಬೇಕು, ರಸೀತಿ ಬರೆಸಿ ಕೊಡಬೇಕು.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಕೆಲವು ಹಳ್ಳಿಗಳಲ್ಲಿ ಅಧಿಕಾರಿಗಳು ವೈಯಕ್ತಿಕ ದ್ವೇಷವನ್ನು ಇಟ್ಟುಕೊಂಡು ರೈತರನ್ನು ಹಿಂಸೆಮಾಡಿ ಅವರ ಒಡವೆಗಳನ್ನು ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ? ಇವತ್ತಿನವರೆಗೂ ಅವರು ಕಳೆದುಕೊಂಡಿರುವುದು ಹಿಂದಕ್ಕೆ ಬಂದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಬರೆಯಿರಿ, ಅಂಥ ಸೀರಿಯಸ್ ಕೇಸುಗಳು ಇದ್ದರೆ. ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ದೇಶದ ಹೆಸರಿನಲ್ಲಿ ಅದನ್ನು ಮಾಡಬಾರದು. ಈ ರೀತಿ ಮಾಡಿದ್ದರೆ ಸರಕಾರದ ಗಮನಕ್ಕೆ ತನ್ನಿ. ತಾವು ಬರೆದ ಒಂದು ಅಧಿಕಾರಿಯ ಬಗ್ಗೆ ವಿಚಾರಣೆ ಮಾಡಿದಾಗ, ಹಳೆ ಮೈಸೂರು ರೆವಿನ್ಯು ಇನ್‌ಸ್ಪೆಕ್ಟರು ರಸೀತಿ ಕೊಟ್ಟಿದ್ದರು. ಅದು ಶ್ಯಾನುಭೋಗರ ಹತ್ತಿರ ಇತ್ತು.

School-going Children covered by *CARE* Mid-Day Meal Scheme In The State

*Q.—264. SRI S. RAJAGOPAL (Kolar Gold Fields).—

Will the Government be pleased to state :—

(*a*) the total number of school-going children covered by CARE Mid-day Meal Scheme in the State (District war);

(*b*) The details of the organisation proposed to set up to successfully implement the scheme?

A.—Sri S. R. KANTHI (Minister for Education).—

(*a*) Information is furnished in the appended statement.

(*b*) The scheme is being implemented through School Betterment Committees at village-level, Inspectors of Schools at Taluk level, Educational Officers at District level and Special Officer at Headquaters at Bangalore. Besides, the CARE Crganisation supervises the supply through its field Officers.

STATEMENT

Showing the District-war figures of the number of school children governed by CARE Mid-day Meal Scheme in the State.

Sl. No.	*Name of District*	*No. of children*
1.	Bellary	17,841
2.	Belgaum	41,227
3.	North Kanara (Karwar) ...	18,900
4.	Gulbarga	20,000
5.	Chickmagalaur ...	12,314
6.	Mandya	17,800
7.	Bijapur	38,900
8.	Tumkur	28,600
9.	Kolar	24,243
10.	Dharwar	48,700
11.	Hassan	19,591
12.	Raichur	13,915
13.	Chitradurga	23,150
14.	South Kanara	37,860
15.	Bangalore	36,600
16.	Bidar	6,200
17.	Coorg	7,900
18.	Mysore	30,520
19.	Shimoga	22,600
20.	Bangalore city ...	23,900
		4,90,764

Sri S. RAJAGOPAL.—Sir, where and by whom was this scheme inaugurated in our State ?

† Sri S. R. KANTHI.—The scheme was brought into operation and it was formally inaugurated by the American Ambassador Mr. Chester Bowles.

Sri J. P. SARWESH.—May I know the number of students in the schools which have to be covered by the CARE Mid-day Meal in the State ?

Sri S. R. KANTHI.—By now 4,90,764 children have been covered. But it is not possible to give a reply as to how many are yet to be covered because a large number of children are going to school. About 32 lakhs of children are going to primary school. So, it is not possible to give the number of children not covered. It is the intention of the Government to cover up to 8 lakhs from June onwards.

Sri S. RAJAGOPAL.—Is it a fact that on the day of inauguration at Bangalore a huge quantity of CARE food had been seized by the Police ?

Sri S. R. KANTHI.—I am not aware of it.

ಶ್ರೀ ಬಿ. ಎಲ್. ಗೌಡ.—ಪ್ರತಿಯೊಂದು ಜಿಲ್ಲೆಯಲ್ಲಿ ನೋಡಿದರೆ 17, 20, 38, 41, ಸಾವಿರ ವಿದ್ಯಾರ್ಥಿಗಳನ್ನು ಆರಿಸಿಕೊಂಡಿದ್ದೀರಿ, ಯಾವ ಆಧಾರದ ಮೇಲೆ ಜಿಲ್ಲಾವಾರು ಸಂಖ್ಯೆಯನ್ನು ನಿಗದಿ ಮಾಡಿದ್ದೀರಿ ?

Sri S. R. KANTHI.—There is a basis for that. It depends upon local co-operation. The Government will send the foodstuffs to the Taluk Headquarters and from there the villagers will have to take them to the villages and employ a certain number of persons for cooking and distribution. It all depends upon the co-operation of the Betterment Committee at the village level because it has to find the money.

Sri B. L. GOWDA.—Has it come to the notice of the Government that in Chitradurg District, the D.E.O. has not consulted the Local District Development Council in regard to this ?

Sri S. R. KANTHI.—I am not aware of that, Sir. I am hearing it for the first time.

ಶ್ರೀ ಇ. ನಾರಾಯಣಗೌಡ.—ಈಗ ಹಳ್ಳಿಯ ಲೆವಲ್ಲಿನಲ್ಲಿ ಬೆಟರ್‌ಮೆಂಟ್ ಕಮಿಟಿ ನೇತೃತ್ವದಲ್ಲಿ ಹಂಚಿಕೆಯಾಗುತ್ತದೆಂದು ಹೇಳುತ್ತೀರ. ಈ ಕಮಿಟಿಗಳು ನಾಮಕಾವಾಸ್ತೆ ಕಮಿಟಿಗಳು. ಸ್ಕೂಲು ಮಾಸ್ತರುಗಳಿಗೂ, ಬೆಟರ್‌ಮೆಂಟ್ ಕಮಿಟಿಗೂ ಸಂಬಂಧವಿರುವುದಿಲ್ಲ ಆದ್ದರಿಂದ ಹಾಲುಪುಡಿ, ಬಟರ್ ಟಿನ್ಸ್ ಹೆಚ್ಚಿನ ರೀತಿಯಲ್ಲಿ ಸ್ಮಗಲ್ಲಾಗಿ ಮಾರಾಟವಾಗುತ್ತಿದೆ.

ಶ್ರೀ ಎಸ್. ಆರ್. ಕಂಠಿ.—ಈ ಬೆಟರ್‌ಮೆಂಟು ಕಮಿಟಿಗಳಲ್ಲಿ ಸ್ಕೂಲು ಟೀಚರುಗಳು ಇಲ್ಲ ಎನ್ನುವುದು ಸರಿಯಲ್ಲ, ಇರುತ್ತಾರೆ. ಕೆಲವು ಬೆಟರ್‌ಮೆಂಟು ಕಮಿಟಿಗಳಲ್ಲಿ ರೆಪ್ರಸೆಂಟೇಷನ್ ಅಷ್ಟು ಚೆನ್ನಾಗಿಲ್ಲ. ವಿಚಾರ ಮಾಡಿಸೋಣ. ಅಲ್ಲಿ ಇಲ್ಲಿ ಕೆಲವು ಕಡೆಗಳಲ್ಲಿ ಆಹಾರಧಾನ್ಯ ಪೋಲಾಗುತ್ತಿದೆ ಎಂದು ಸರಕಾರದ ಗಮನಕ್ಕೆ ಬಂದಿದೆ. ಸ್ಟೆಪ್ಸ್ ತೆಗೆದುಕೊಳ್ಳುತ್ತಾ ಇದ್ದೇವೆ.

Sri S. RAJAGOPAL.—The number of students covered by this scheme in Belgaum is 41,227 ; in Dharwar it is 48,700. But in other districts it is very much less like 7,900, 12,314 and so on. May I know on what basis the number of students has been covered ?

Sri S. R. KANTHI.—I have already answered that question. It all depends upon local co-operation which means the financial resources of the local people.

ಶ್ರೀ ಎಸ್. ಗೋಪಾಲ ಗೌಡ.—ಕೇರ್ ಸಂಸ್ಥೆಯವರು ಮೈಸೂರು ರಾಜ್ಯಕ್ಕೆ ಸುಮಾರು ವರ್ಷಕ್ಕೆ ಏನೇನು ವಸ್ತುಗಳನ್ನು ಕಳಿಸುತ್ತಾರೋ ಅವುಗಳನ್ನು ಪಡೆಯುವವರು ವಿದ್ಯಾ ಇಲಾಖೆಯವರೊ ಅಥವಾ ಸೋಷಿಯಲ್ ವೆಲ್‌ಫೇರ್ ಇಲಾಖೆಯವರೊ ?

ಎಸ್. ಆರ್. ಕಂಠಿ.—ಅದನ್ನು ಪಡೆದುಕೊಳ್ಳುವವರು ವಿದ್ಯಾ ಇಲಾಖೆಯವರು. ಮಿಲ್ಕ್ ಪೌಡರನ್ನು ಕೊಡುತ್ತಾ ಇದ್ದಾರೆ, ಕೇರ್ ಸಂಸ್ಥೆಯ ಮೂಲಕ. ಪೌಡರನ್ನು ಮಿಲ್ಕ್ ಮಾಡಿಸಿ ಕೊಡುತ್ತಾ ಇದ್ದೇವೆ.

Sri ANGADI CHANNABASAPPA.—Out of these people in the Betterment Committee, namely, Inspector of Schools, and Education Officers, who is the custodian of butter, oil, milk powder and other foodstuffs ?

Sri S. R. KANTHI.—This is stocked in the custody of the Village Betterment Committee. There is a School Betterment Committee.

Sri SANJEEVANATHA IKALA.—Do the Goverenment intend extending this benefit to Secondary Schools also which come forward to take up this work?

Sri S. R. KANTHI.—For the present, CARE Organisation has not agreed to extend it to High Schools. But they have agreed to extend the scheme to the orphanages, and also to two nursery pilot schemes, one in Anekal and the other in Ramdurg.

ಶ್ರೀ ಬಿ. ಎಲ್. ಗೌಡ.—ಸ್ಥಳೀಯವಾಗಿ ಏನು ಆರ್ಥಿಕ ಸಹಕಾರ ಕೊಡಬೇಕಾಗಿದೆ?

Sri S. R. KANTHI.—Depertment has calculated that local people will have to contribute about 4 naye paise for one meal.

Sri S. RAJAGOPAL.—After the inauguration of the scheme, have the Government received any complaint about the misuse of the foodstuff under this scheme?

Sri S. R. KANTHI.—We have not received complaints of misuse but we have received complaints about some misappropriation.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರತಿ ಮಗುವಿಗೆ ಎಷ್ಟು ಹಾಲು ಕೊಡುತ್ತೀರಿ? ಮತ್ತು ಇನ್ನೂ ಇತರ ಬೇರೆ ಬೇರೆ ಪದಾರ್ಥಗಳನ್ನು ಹಂಚುವುದು ಹೇಗೆ?

ಶ್ರೀ ಎಸ್. ಆರ್. ಕಂಠಿ.—ಅದು ನನಗೆ ತಿಳಿಯದು.

ಶ್ರೀ ಎಸ್. ಎಂ. ಕೃಷ್ಣ.—ಈಗ ಕೆಲವು ತಿಂಗಳುಗಳ ಹಿಂದೆ ಬೆಂಗಳೂರು ನಗರದಲ್ಲಿ ಅಗಾಧವಾದ ಪ್ರಮಾಣದಲ್ಲಿ ಹಾಲಿನ ಪುಡಿಯನ್ನು ಸೆಂಟ್ರಲ್ ಪೋಲೀಸ್ ಇಂಟೆಲಿಜೆನ್ಸ್ ಅವರು ವಶಪಡಿಸಿಕೊಂಡರು ಅದು ಏನಾಗಿದೆ? ಅವು ಎಲ್ಲಿಂದ ಬಂತು, ಹೇಗೆ ಬಂತು ಎಂಬುದನ್ನು ಸರಕಾರದವರು ಕಂಡುಹಿಡಿದಿದ್ದಾರೆಯೇ?

ಶ್ರೀ ಎಸ್. ಆರ್. ಕಂಠಿ.—ಆ ಕೇಸು ಪೋಲೀಸರ ಕಡೆಗೆ ಇದೆ ಅವರು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾ ಇದ್ದಾರೆ.

ಶ್ರೀ ಎಸ್. ಗೋಪಾಲ ಗೌಡ—ಬಹಳ ಹೆಚ್ಚಿನ ಪ್ರಮಾಣದಲ್ಲಿ ಹಾಲಿನಪುಡಿ ದುರುಪಯೋಗವಾಗುತ್ತಾ ಇದೆ, ಮಾರುಕಟ್ಟೆಯಲ್ಲಿ ಇದು ಮಾರಾಟವಾಗುತ್ತಾ ಇದೆ ಎಂದು ಗೊತ್ತಾಗಿ ಕೇರ್ ಸಂಸ್ಥೆಯವರು ಈ ಸೌಕರ್ಯವನ್ನು ಅಥವಾ ಸೌಲಭ್ಯವನ್ನು ಮೈಸೂರು ರಾಜ್ಯಕ್ಕೆ ಒದಗಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ ಅಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಅವರು ಹಾಗೆ ಹೇಳಿಲ್ಲ. ಈಗ ಮಾನ್ಯ ಸದಸ್ಯರು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಅದು ಏನೆಂದರೆ ಹಾಲಿನಪುಡಿ ಬರೀ ಮಿಡ್-ಡೇ ಮೀಲ್ಸ್‌ಗೆ ಬರುತ್ತದೆ ಎಂದು ಅಲ್ಲ. ಸೆವರಲ್ ಸೋರ್ಸ್‌ಸ್‌ನಿಂದ ಬರುತ್ತದೆ. ಅದು ಪೋಲು ಆಯಿತು ಎಂದರೆ ಮಿಡ್-ಡೇ ಮೀಲ್ಸ್‌ಗೆ ಕೊಟ್ಟಿದ್ದರಿಂದಲೇ ಪೋಲು ಆಯಿತು ಎಂದು ಹೇಳುವುದಕ್ಕಾಗುವುದಿಲ್ಲ.

Sri N. O. SAMAJI.—[in Marathi].

ಶ್ರೀ ಎಸ್. ಆರ್. ಕಂಠಿ.—ಕಮಿಟಿಯನ್ನು ಯಾವ ಪದ್ಧತಿಯ ಮೇಲೆ ಮಾಡಿದ್ದೀರಿ ಮತ್ತು ಅದನ್ನು ಯಾವ ರೀತಿಯಿಂದ ನಡೆಸುತ್ತಾ ಇದ್ದಾರೆ ಅದಕ್ಕೆ ಇರತಕ್ಕ ಅಧಿಕಾರ ಏನು ಎಂದು ಅವರು ಕೇಳಿದರು. ಈ ಕಮಿಟಿಗೆ ಇರತಕ್ಕ ಅಧಿಕಾರ ಎಂದರೆ ಬಂದಂಥ ಸಾಮಾನುಗಳನ್ನು ಹಂಚುವಂತಹ ಅಧಿಕಾರ ಅವರಿಗೆ ಇದೆ. ಇದು ಸ್ಪೆಷಲ್ ಕಮಿಟಿ ಅಲ್ಲ, ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಇದೆ, ಅವರೇ ಈ ಕೆಲಸವನ್ನು ಮಾಡುತ್ತಾ ಇದ್ದಾರೆ. ಅವರ ಭಾಗದಲ್ಲೂ ಕೂಡ ಬೆಟರ್‌ಮೆಂಟ್ ಕಮಿಟಿ ಇದೆ.

Sri J. P. SARWESH.—Whether it has come to the notice of the Government that in certain schools, because no staff is provided, teachers themselves are forced to prepare milk and other things?

Sri S. R. KANTHI.—Of course, there have been certain complaints from the parents that much of the time is spent in preparing food. The procedure is being changed now. Municipalities like Gadag, Dharwar and Hubli, have come forward to prepare the foodstuffs at a central place and convey the same to all the schools. That is a good procedure.

I think it is a procedure which can be commended to all the areas. The Panchayat committees can also help in this respect by preparing food-stuffs in one place and transporting the same to the schools in their areas. Other municipalities also can do this. I am told that the Bangalore Corporation is also thinking of taking action on similar lines.

Sri S. RAJAGOPAL.—How many complaints of misappropriation have the Government received and what is the action taken ?

Sri S. R. KANTHI.—Very few complaints have been received. It is not only the Government that is watchful. But it is also the CARE organisation, which has its own headquarters in Bangalore with field officers, which is very active in this respect. They take severe action and bring it to the notice of the Government. CARE organisation is an American organisation. They have no affiliation here. They are ruthless in implementing the mid-day meal scheme in the best interests of the children. We have also passed a legislation in this respect.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಮಧ್ಯಾಹ್ನದ ಊಟವನ್ನು ಶಾಲೆಗಳಿಗೆ ಹೋಗತಕ್ಕ ಹುಡುಗರಿಗೆ ಕೊಡುತ್ತೀರಿ, ಅದನ್ನು ಸರಿಯಾಗಿ ಹಂಚುವುದರಲ್ಲಿ ತ್ರಾಸು ಆಗುತ್ತಾ ಇದೆ. ಆದ್ದರಿಂದ ಇದಕ್ಕೆ ಬದಲಾಗಿ ಬಡ ಚಿಕ್ಕ ಮಕ್ಕಳಿಗೆ ಪಾಟಿ, ಪುಸ್ತಕಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ, ಆ ರೀತಿ ಕೊಡುವ ವಿಚಾರ ಏನಾದರೂ ಇದೆಯೇ ?

ಶ್ರೀ ಎಸ್. ಆರ್. ಕಂಠಿ.— ಇದನ್ನು ಕೇರ್ ಆರ್ಗನೈಜೇಷನ್ ಅವರು ಕೊಡುತ್ತಾರೆ. ಬಿಜಾಪುರಕ್ಕೆ ನಾನು ಹೋದ ಕಾಲಕ್ಕೆ ತಾಲ್ಲೂಕು ಬೋರ್ಡ್‌ನವರೆಲ್ಲರೂ ಬಂದಿದ್ದರೂ, ಟೀಚರ್ಸ್ ಕಾನ್‌ಫರೆನ್ಸ್ ಮಾಡಿದ್ದರು. ಆಗ ಯಾವ ರೀತಿಯಲ್ಲಿ ಹುಬ್ಬಳ್ಳಿ, ಗದಗ್, ಧಾರವಾಡದಲ್ಲಿ ಮಾಡುತ್ತಾ ಇದ್ದಾರೆ. ಅದೇ ರೀತಿ ನೀವು ಮಾಡಿದರೆ ಒಳ್ಳೆಯದು ಎಂದು ಹೇಳಿದೆ. ಅದೇ ರೀತಿ ಮಾಡುತ್ತೇವೆ ಎಂದು ಅವರು ಹೇಳಿದ್ದಾರೆ.

Sri SANJEEVANATH AIKALA.—The CARE has provision to give teaching aids and also nursery schools provisions to any Government if they ask for such aids, in the backward countries if the backward countries ask the CARE organisation, that organisation would provide these materials. I want to know whether this Government have asked for such things.

Mr. SPEAKER.—The member must take care to see whether it is a good supplementary.

(*laughter*)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಪರ್ ಹೆಡ್ ಮಕ್ಕಳಿಗೆ ಎಷ್ಟು ಸಿಕ್ಕುತ್ತದೆ ಎಂದು ಕೇಳಿದ್ದಕ್ಕೆ ಗೊತ್ತಿಲ್ಲ ಎಂದು ಹೇಳಿದರು. ನಾಲ್ಕು ಲಕ್ಷದ 90 ಸಾವಿರದ 764 ಜನ ಹುಡುಗರು ಇದ್ದಾರೆ. What is the quantity of food spent on these children ?

Sri S. R. KANTHI.—The total expenditure to the CARE organisation on account of the mid-day meals is Rs 2.25 crores and to the Government nearly Rs. 20 lakhs.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.— ಮಿಡ್-ಡೇ ಮೀಲ್ಸ್ ನಡೆಸುವುದಕ್ಕೆ ಒಂದು ದಿನಾಚರಣೆಯನ್ನು ತಮ್ಮ ಇಲಾಖೆಯಿಂದ ಮೊನ್ನೆ ದಿವಸ ಮಾಡಿಸಿದ್ದಿರೇನು ?

ಶ್ರೀ ಎಸ್. ಆರ್. ಕಂಠಿ.—ಇದು ಒಂದಕ್ಕೇ ಎಂದು ಅಲ್ಲ, ಇನ್ನೂ ಅನೇಕ ವಿಷಯಗಳು ಇದ್ದುವು.

ಶ್ರೀ ಎಂ. ಎಲ್. ಕೃಷ್ಣಸಿಂಗ್.—ಈ ಹಂಚಿಕೆಯನ್ನು ವಿದ್ಯಾ ಇಲಾಖೆಯಿಂದ ತಪ್ಪಿಸಿ ತಾಲ್ಲೂಕು ಬೋರ್ಡಿಗೆ ಕೊಟ್ಟು ಹಂಚಿಕೆ ಮಾಡಿಸಿದರೆ, ಸರಿಯಾದ ವ್ಯವಸ್ಥೆಯಾಗುವುದಿಲ್ಲವೇ ?

ಅನೇಕ ಮಾನ್ಯ ಸದಸ್ಯರುಗಳು.—ಬೇಡ ಬೇಡ; ಖಂಡಿತ ಆ ರೀತಿ ಮಾಡಿದರೆ ಸರಿಯಾಗುವುದಿಲ್ಲ

ಶ್ರೀ ಭೋಜರಾಜ್.— ಹಾಲಿಗೆ ಸಕ್ಕರೆ ಯಾರು ಕೊಡುತ್ತಾರೆ ?

ಶ್ರೀ ಎಸ್. ಆರ್. ಕಂಠಿ.—ಊರಿನವರು.

ಶ್ರೀ ಇ. ನಾರಾಯಣ ಗೌಡ.—ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಸಿಕ್ಕಲಿಲ್ಲ. ಗ್ರಾಮಾಂತರ ಪ್ರದೇಶಕ್ಕೆ ಒದಗಿಸತಕ್ಕ ಹಾಲಿನ ಪುಡಿ, ಬೆಣ್ಣೆ ಇವುಗಳು ಏನಿದೆ ಇವು ಸ್ಕೂಲ್ ಮಾಸ್ತರುಗಳ ಕಸ್ಟಡಿಯಲ್ಲಿ ಇವೆಯೇ, ಪಂಚಾಯ್ತಿ ಚೇರ್ಮನ್‌ರ ಕಸ್ಟಡಿಯಲ್ಲಿ ಇವೆಯೇ, ಯಾರ ಸ್ವಾಧೀನದಲ್ಲಿ ಇಟ್ಟು ಕೊಳ್ಳುತ್ತಾರೆ? ಮತ್ತು ಅವರು ನ್ಯಾಯವಾಗಿ ವಿನಿಯೋಗ ಮಾಡಿದ್ದಾರೆಯೇ ಇಲ್ಲವೆ ಎಂಬುದನ್ನು ಚೆಕ್ ಮಾಡುವುದಕ್ಕೆ ಯಾವುದಾದರೂ ಒಂದು ಏಜೆನ್ಸಿ ನಿಮ್ಮಲ್ಲಿ ಇದೆಯೆ?

ಶ್ರೀ ಎಸ್. ಆರ್. ಕಂಠಿ.—ಸ್ಕೂಲ್ ಬೆಟರ್‌ಮೆಂಟ್ ಕಮಿಟಿಯವರು ವಶದಲ್ಲಿ ಇರುತ್ತದೆ. ಅವರು ಹೆಡ್ ಮಾಸ್ತರ ಹತ್ತಿರ ಇಟ್ಟಿರಬೇಕಾಗುತ್ತದೆ. ಈ ದೂರುಗಳು ಎಲ್ಲಿ ಹೆಚ್ಚಾಗಿ ಬಂದಿವೆ ಎಂದರೆ ಬೆಂಗಳೂರು ನಗರದ ಸುತ್ತಮುತ್ತಲು ಏಕೆಂದರೆ ಬೆಂಗಳೂರಿನಲ್ಲಿ ಅಂತಹ ವಸ್ತುಗಳಿಗೆ ದೊಡ್ಡ ಒಂದು ಮಾರ್ಕೆಟ್ ಇದೆ. ಬೇರೆ ಕಡೆಯಿಂದ ದೂರ ಬಂದಿರುವುದು ಬಹಳ ಕಡಿಮೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮಿಡ್ ಡೇ ಮೀಲ್ಸ್ ದಿನಾಚರಣೆಯ ದಿವಸ ಗುರು ಶಿಷ್ಯರು ಡಬ್ಬಿ ಹಿಡಿದುಕೊಂಡು ಮನೆ ಮನೆಗೆ ತಿರುಗಬೇಕೆಂದು ಅಪ್ಪಣೆ ಮಾಡಿದ್ದಿರಾ?

ಶ್ರೀ ಎಸ್. ಆರ್. ಕಂಠಿ.—ಗುರು ಶಿಷ್ಯರು ಆ ರೀತಿ ತಿರುಗಿದರೆ ಅದರಲ್ಲಿ ತಪ್ಪೇನೂ ಇಲ್ಲ ಎಂದು ಅನಿಸುತ್ತದೆ; ಏಕೆಂದರೆ ನಾವು ಚಿಕ್ಕವರಾಗಿದ್ದಾಗ ಆ ಕೆಲಸ ಮಾಡಿದ್ದೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಮಿಡ್-ಡೇ ಮೀಲ್ಸ್ ಊಟದ ಹಂಚಿಕೆಯನ್ನು ಮಾಡಲು ಉಪಾಧ್ಯಾಯರು ಮತ್ತು ಉಪಾಧ್ಯಾಯಿನಿಯರು ಮಾತ್ರ ಮಾಡಬೇಕೇ ಅಥವಾ ಬೇರೆ ಯಾರನ್ನಾದರೂ ಇಟ್ಟುಕೊಂಡಿದ್ದೀರಾ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಅವರು ಯಾವ ರೀತಿಯಿಂದ ವ್ಯವಸ್ಥೆ ಮಾಡಿಕೊಳ್ಳ ಬೇಕೋ ಅವರೇ ಮಾಡಿಕೊಳ್ಳಬೇಕು. ದೊಡ್ಡ ದೊಡ್ಡ ಮುನಿಸಿಪಾಲಿಟಿಗಳಲ್ಲಿ ಮತ್ತು ಪಂಚಾಯಿತಿಗಳಲ್ಲಿ ಅವರು ಒಂದು ಸೆಂಟ್ರಲ್ ಸ್ಥಳದಲ್ಲಿ ಹಂಚುವಂತಹ ವ್ಯವಸ್ಥೆ ಮಾಡಬೇಕೆನ್ನುವ ಸೂಚನೆ ಇದೆ. ಆ ರೀತಿ ಮಾಡುತ್ತಾ ಇದ್ದಾರೆ.

ಶ್ರೀ ಎಸ್. ಎಂ. ಕೃಷ್ಣ.—ಬೆಂಗಳೂರು ನಗರದಲ್ಲಿ ಒಬ್ಬ ವರ್ತಕರಿಂದ ಭಾರಿ ಪ್ರಮಾಣದಲ್ಲಿ ಹಾಲಿನ ಪುಡಿಯನ್ನು ವಶಮಾಡಿಕೊಂಡರು ಎಂದು ಹೇಳಿದಿರಿ, ಅದರ ಬಗ್ಗೆ ಯಾವುದಾದರೂ ನ್ಯಾಯ ಸ್ಥಾನದಲ್ಲಿ ಚಾರ್ಜ್‌ಷೀಟು ಹಾಕಿದ್ದೀರಾ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಹಾಕುವವರು ಹೋಂ ಡಿಪಾರ್ಟ್‌ಮೆಂಟ್‌ನವರು, ಪೋಲೀಸ್‌ನವರು ಹಾಕುತ್ತಾರೆ. ಆದರೆ ಒಂದು ಅಂಶವನ್ನು ತಿಳಿದುಕೊಳ್ಳಬೇಕು. ಈ ಊರಿನಲ್ಲಿ ಸಿಕ್ಕಂತಹ ಹಾಲಿನ ಪುಡಿ ಮಿಡ್-ಡೇ ಮೀಲ್ಸ್‌ಗೆ ಕೊಟ್ಟಂತಹ ಹಾಲಿನ ಪುಡಿ ಅಲ್ಲ ಏಕೆಂದರೆ ಯಾವ ಕಾಲಕ್ಕೆ ಆ ಕೇಸು ಸಿಕ್ಕಿತೋ ಆ ಕಾಲಕ್ಕೆ ಮಿಡ್-ಡೇ ಮೀಲ್ಸ್ ಪ್ರಾರಂಭದಲ್ಲಿ ಇತ್ತು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಗುರು ಶಿಷ್ಯರು ಮನೆ ಮನೆಗೆ ಹೋಗುವ ವ್ಯವಸ್ಥೆ ಮಾಡಿದ್ದೀರಿ ಎಂದರೆ ಮುಂದಿನ ಮಕ್ಕಳನ್ನು ಬಿಕ್ಷೆ ಬೇಡುವುದಕ್ಕೆ ಕಳಿಸಬೇಕೆಂಬುದು ಇದರ ಉದ್ದೇಶವೇ?

Mr. SPEAKER.—That question is disallowed.

Sri L. B. BIRJE.—(Marathi).

1-30 P.M.

Sri SPEAKER.—I have disallowed that question. Simply because it is put in Marathi, I cannot allow it.

Sri J. P. SARWESH.—The Social Welfare Department is also running some nursery schools in taluk places and is providing mid-day meals. May I know whether it is provided by the CARE organisation or the Social Welfare Department? If the expendiutre is meant by the Social Welfare Department, why should not the expenditure be transferred to the CARE organisation?

Sri S. R. KANTHI.—There is no question of anything being done by the Social Welfare Department which should be transferred to the CARE organisation. It is an organisation which supplies us materials for mid-day meals. The nursery schools are not given any foodstuffs or milk powder. But they have agreed to supply milk powder to pilot schemes—one in Anekal and the other in Ramadurg.

ಶ್ರೀ ಗಂಗಾಧರ ನಾಮೋಶಿ.— ಅಡಿಗೆಭಟ್ಟರೇ ಹಾಲು ಕುಡಿಯುತ್ತಾರೆಂದು ಸಮಿತಿಯವರಿಗೆ ದೂರು ಬಂದಿದೆ. ಅದಕ್ಕೇನು ಮಾಡುತ್ತೀರಿ?

ಶ್ರೀ ಎಸ್. ಆರ್. ಕಂಠಿ.—ಅಂಥ ದೂರು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಅಂಗಡಿ ಚನ್ನಬಸಪ್ಪ.—ಕೆಲವು ಕಡೆ ಹಾಲಿನ ಪುಡಿಯನ್ನು ಉಳಿಸಿಕೊಳ್ಳಲು ಅದರಿಂದ ತಯಾರಾದ ಹಾಲನ್ನು ಕುಡಿದರೆ ಹೊಟ್ಟೆ ಚಳುಕು ಬರುತ್ತದೆಂದು ಪ್ರಚಾರ ಮಾಡಿರುವುದು ಗಮನಕ್ಕೆ ಬಂದಿದೆಯೆ?

ಶ್ರೀ ಎಸ್. ಆರ್. ಕಂಠಿ.—ಕೆಲವು ಕಡೆ ಆ ರೀತಿ ಪ್ರಚಾರವಿತ್ತು. ಆದರೆ ಅದು ಸುಳ್ಳು. ಹಾಲು ವಾಸನೆ ಇರುತ್ತದೆ ಎಂದು ಕೂಡ ಪ್ರಚಾರವಿತ್ತು, ಅದೂ ಸುಳ್ಳಾಗಿದೆ. ಈಗ ದೊರೆಯುವ ಪುಡಿ ಬಹಳ ಚೆನ್ನಾಗಿದೆ, ಹಾಲುಮಾಡಿ ಸಕ್ಕರೆ ಹಾಕಿ ಕೊಟ್ಟರೆ ಮಕ್ಕಳು ಬಹಳ ಚೆನ್ನಾಗಿದೆ ಎಂದು ಕುಡಿಯುತ್ತಾರೆ.

Mr. SPEAKER.—Questions Hour is over.

QUESTION FOR ANSWER ON THE DAY

(but not taken up)

Estimated amount of Doddabommanahalli Tank Works in Kasaba Hobli, Chintamani Taluk.

**Q.*—95. Sri M. C. ANJANEYA REDDY (Chintamani).—

Will the Government be pleased to state :—

(*a*) the estimated amount of Doddabommanahalli tank works in Kasaba Hobli, Chintamani Taluk and the date on which sanction was accorded to the same ;

(*b*) the date on which the tender was given to the contractor and the quantum of work completed so far ;

(*c*) the work still to be completed together with the date on which the last payment was made to the contractor ;

(*d*) the reasons for not completing the work so far ;

(*e*) whether they are aware of the hardships caused to the atchkatdars of this tank due to their inability to raise crops on account of non-completion of this work ?

A.—Sri ALUR HANUMANTHAPPA (Deputy Minister for Minor Irrigation).—

(*a*) *Estimated cost* — *Date of sanction*

Rs. 29,100 — 21-2-1955.

(*b*) On 14-2-1956. An outlay of Rs. 12,301 has been incurred so far.

(*c*) The works still to be completed are :—Earthwork, turfing, gravel casing black soil of bund, reconstructing sluice and construction of masonry weir. The last payment was made on 28th October 1963.

(*d*) The work was not completed due to dispute between the contractor and the Department regarding rates.

(*e*) It is not actually dislocating the raising of crops.

Message from the Legislative Council.

Mr. SPEAKER.—Now I have to report to the House that a message has been received from the Legislative Council that the Mysore Fire Force Bill 1962, as passed by the Legislative Assembly during the last session and transmitted to the Legislative Council, has been passed by the Legislative Council without any amendments.

We now go to the next item.

THE MYSORE APPROPRIATION BILL, 1964.

(Introduction.)

Sri B. D. JATTI (Minister for Finance).—I beg to introduce:

"The Mysore Appropriation Bill, 1964, which has been published under rule 64 of the Rules of Procedure and Conduct of Business in the Mysore Legislative Assembly."

Mr. SPEAKER.—The Mysore Appropriation Bill, 1964, is introduced.

THE MYSORE APPROPRIATION BILL, 1964

(Motion to consider.)

Sri B. D. JATTI.—I beg to move:

"That the Mysore Appropriation Bill, 1964 be taken in to consideration."

Mr. SPEAKER.—Motion moved:

"That the Mysore Appropriation Bill, 1964 be taken into consideration."

Sri B. D. JATTI.—Yesterday I have tried to explain everything in detail and all the members have approved my explanation and there was not much discussion. Today I think it is not necessary for me to go into details. Some hon'ble members complained that yesterday, I did not reply to one or two points. Now I have got information and I will try to reply to these two points within five minutes.

One is regarding item 1. The amount asked for is evidently over and above Rs. 1 lakh originally provided in the Budget. That was the question put by Sri G. V. Gowda. Then it was asked by some hon'ble members why we have created new heads for certain items. I could not explain that yesterday because I had no time. I shall explain them now.

Page 5—Demand No. 10—Items to 24—II. less Establishment for Special Land Acquisition on behalf of Government of India and other acquiring bodies (with details thereunder):

Sanction for the expenditure has been accorded in G. O. dated 29th November 1963 and advance from the Contingency Fund was sanctioned on 2nd January 1964. Hence the necssity for opening the new head of account as in the margin.

Page 10—Demand No. 17—It 2: Establishment of State Institute of Education:

The establishment of State Institute of Education was sanctioned in G. O. dated 7th December 1963 and an advance from the Contingency Fund was sanctioned on 23rd January 1964 (The entire expenditure is recoverable from Government of India). Hence the need for opening this head of account.

Page 14—Demand No. 23—Item I—Contribution to Price Fluctuation Fund (Paddy): and

Page 26—Demand No. 44—Item 1—Share Capital Contribution to Co-operative Marketing Societies for purchase of paddy:

The scheme has been continued as per G. O dated 31st January 1964 and an advance from the Contingency Fund Rs. 10 lakhs has been sanctioned in G. O. dated 12th February 1964 (Rs. 5 lakhs under each of the Demands No. 23 and 44) and this had to be accounted for under the new heads of account noted in the margin.

Page 22—Demand No. 39—Item 2—11 Grant-in-aid to District Local Boards on account of Forest Revenue:

Item 2—This could not be included in the Budget Estimates for 1963-64 as the sanction thereto during the last year was accorded in G. O. dated 28th March 1963 after the presentation of the Budget. The amount is sanctioned for the current year also in G. O. dated 10th February 1964 and an advance therefor is sanctioned in G. O. dated 24th February 1964. Hence the need for opening this new head of account.

Item 4—Provision in the budget for 1963-64 was under the head styled "Subsidy to the Mysore State Electricity Board on account of concessions for Diesel Power Generation." There being no provision in the Electricity Supply Act empowering the Board to grant subsidy, it has become now necessary to open a new head of account for payment of subsidy direct to the Industries generating their own power according to the amended Act.

There is nothing else to be explained.

"That the Mysore Appropriation Bill, 1964 be taken into consideration."

The motion was adopted.

Mr. SPEAKER.—The question is:

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—The question is:

"That the schedule stand part of the Bill."

The motion was adopted.

The Schedule was added to the Bill.

Mr. SPEAKER.—The question is:

"That clause 1, the Title and the Preamble stand part of the Bill.

The motion was adopted.

Clause 1, the Title and the Preamble were added to the Bill.

Motion to pass.

Sri B. D. JATTI.—I move:

"That the Mysore Appropriation Bill, 1964 be passed."

Mr. SPEAKER.—The question is:

"That the Mysore Appropriation Bill, 1964, be passed."

The motion was adopted.

BUDGET ESTIMATES FOR 1964-65.

(General Discussion)

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಗಳೇ, 1964-65ನೇ ಸಾಲಿನ ಆಯವ್ಯಯದ ಮುಂಗಡ ಪತ್ರವನ್ನು ಇಲ್ಲಿ ನಮ್ಮ ಮುಂದೆ ಮಂಡಿಸಿದ್ದಾರೆ. 1964-65ನೇ ಇಸವಿಯ ಮುಂಗಡ ಪತ್ರ ಯಾವ ತರಹದಲ್ಲಿದೆ ಎನ್ನುವುದನ್ನು ಒಂದೇ ವಾಕ್ಯದಲ್ಲಿ ಹೇಳುವುದಾದರೆ ಶಿಥಿಲವಾದ ರಥಕ್ಕೆ ಮುದಿಯಾದ ಕುದುರೆಗಳನ್ನು ಕಟ್ಟಿಕೊಂಡು ಸಾರಥಿ ಆ ಮುದಿಯಾಗಿರುವ ಕುದುರೆಗಳು ರಥವನ್ನು ಎಳೆಯುವಂತೆ ಅವುಗಳನ್ನು ಹೊಡೆದೂ ಹೊಡೆದೂ ಸುಸ್ತಾಗಿದ್ದಾಗ ಆ ರಥ ಹೇಗೆ ಹೋಗುತ್ತದೋ ಅದೇ ರೀತಿ ನಮ್ಮ ರಾಜ್ಯದ ಆಯವ್ಯಯಪಟ್ಟಿಯನ್ನು ಸಭೆಯ ಮುಂದಿಡುವಾಗ ನಮ್ಮ ಆರ್ಥಿಕ ಸಚಿವರ ಸ್ಥಿತಿ ಆಗಿದೆ ಎಂದು ಹೇಳಬೇಕಾಗಿದೆ. ನಮ್ಮ ಅರ್ಥಿಕ ಸಚಿವರು ಈ ಬಡ್ಜೆಟ್ಟನ್ನು ಮಂಡನೆ ಮಾಡತಕ್ಕ ಕಾಲದಲ್ಲಿ ಬಹಳ ಚಮತ್ಕಾರವಾಗಿ ಅಂಕಿ ಅಂಶಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮೊದಲನೆಯದಾಗಿ ಈ ಬಡ್ಜೆಟ್ಟಿನಲ್ಲಿ ಅಂಕಿ ಅಂಶಗಳನ್ನು ಬಹಳ ಚಮತ್ಕಾರವಾಗಿ ತೋರಿಸಿದ್ದಾರೆ. ಇದರಲ್ಲಿರುವಂತೆ 11106.03 ಎಂದು ರೆವೆನ್ಯೂ ತೋರಿಸಿ ಖರ್ಚನ್ನು 11099.02 ಎಂದು ತೋರಿಸಿ ಏಳು ಲಕ್ಷದಷ್ಟು ಸರ್‌ಪ್ಲಸ್ಸನ್ನು ಎಂದು ತೋರಿಸಿ ಬಡ್ಜೆಟ್ಟಿನಲ್ಲಿ ಕೆಲವು ಪರಿಹಾರಗಳನ್ನು ಒದಗಿಸಿದ್ದಾರೆ. ಮೊದಲನೆಯದಾಗಿ, 70 ವರ್ಷ

ವಯಸ್ಸಾದವರಿಗೆ ವಿರಾಮ ವೇತನವನ್ನು ಕೊಡಬೇಕು ಎಂದು ಇದರಲ್ಲಿ ಹೇಳಿರುವುದು ಶ್ಲಾಘನೀಯ ವಾದುದು. ಈ ಸಾರಿಯ ಬಡ್ಜೆಟ್ಟಿನಲ್ಲಿ ಹೊಸದಾಗಿ ಇದನ್ನು ಸೇರಿಸಿರುವುದಕ್ಕಾಗಿ ನಮ್ಮ ಆರ್ಥಿಕ ಮಂತ್ರಿಗಳಿಗೆ ನಾನು ವಂದಿಸುತ್ತೇನೆ. 70 ವರ್ಷ ವಯಸ್ಸಾದವರಿಗಾಗಿ ಪೆನ್‌ಷನ್ನನು ಕೊಡಲು 20 ಲಕ್ಷ ರೂಪಾಯಿಗಳಷ್ಟು ಹಣವನ್ನು ಇದರಲ್ಲಿ ಒದಗಿಸಿದ್ದಾರೆ. ಅದೇ ರೀತಿ ಸರಕಾರಿ ನೌಕರರ ಡಿ.ಎ.ಯನ್ನು ಹೆಚ್ಚು ಮಾಡುವುದಕ್ಕಾಗಿ 1.25 ಕೋಟಿಯಷ್ಟನ್ನು ಒದಗಿಸಿದ್ದಾರೆ ಮತ್ತು ಪೆನಷನರು ಗಳಿಗೆ ಡಿ.ಎ.ಯನ್ನು ಹೆಚ್ಚಿಸುವುದಕ್ಕಾಗಿ 25 ಲಕ್ಷ ಒದಗಿಸಿದ್ದಾರೆ. ಇವೆಲ್ಲಾ ಒಟ್ಟು ಸುಮಾರು 1.70 ಲಕ್ಷ ರೂಪಾಯಿಗಳಷ್ಟು ಖರ್ಚನ್ನು ಬಡ್ಜೆಟ್ಟಿನಲ್ಲಿ ಸೇರಿಸದೇ ಅದರಿಂದ ಹೊರಗೆ ಇಟ್ಟಿದ್ದಾರೆ. ಸರಕಾರದವರು 1.70 ಲಕ್ಷ ರೂಪಾಯಿಗಳ ಖೋತಾ ಬಡ್ಜೆಟ್ಟು ಎಂದು ಹೇಳದೆ 7 ಲಕ್ಷ ಸರ್‌ಪ್ಲಸ್ಸು ಬಡ್ಜೆಟ್ಟು ಎಂದು ಹೇಳುತ್ತಿದ್ದಾರೆ. ಇದು ನಿಜವಾಗಿಯೂ ಖೋತಾ ಬಡ್ಜೆಟ್ಟು. ನಮ್ಮ ಮುಂದೆ ಈಗ 1.70 ಲಕ್ಷದಷ್ಟು ಖೋತಾ ಬಡ್ಜೆಟನ್ನು ಇಟ್ಟಿದ್ದಾರೆ. ಈ ಬಡ್ಜೆಟ್ಟಿನಲ್ಲಿ ಇನ್ನೂ ಮುಂದೆ ನೋಡುತ್ತಾ ಹೋದರೆ ಇದರಲ್ಲಿ ಆಹಾರ ಪದಾರ್ಥಗಳ ಬೆಲೆಗಳ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಹೋಲಿಸಿ ಕೊಟ್ಟಿದ್ದಾರೆ. ಕೆಲವು ಅಂಕಿ ಅಂಶಗಳ ಮೂಲಕ ಅದು ಸರಿಯಾಗಿಲ್ಲ ಎನ್ನುವುದನ್ನು ನಾನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ದೇಶದಲ್ಲಿ ಹಿಂದೆ ಆದ ಉತ್ಪತ್ತಿ ಮತ್ತು ಈಗ ಆಗಿರುವ ಉತ್ಪತ್ತಿ ಇವನ್ನೆಲ್ಲಾ ಪರಿಶೀಲಿಸಲು 1961-62ನೇಯ ಸಾಲನಲ್ಲಿ ಆದದ್ದು ಹಾಗೂ 1962-63ನೇ ಸಾಲಿನಲ್ಲಿ ಆದದ್ದನ್ನು ಹೋಲಿಸಿ ಇದರಲ್ಲಿ ಇಷ್ಟು ಪರ್ಸೆಂಟೇಜು ಆಹಾರ ಜಾಸ್ತಿ ಮಾಡಿದ್ದಾರೆ ಎಂದು ಇದರಲ್ಲಿ ಹೇಳುತ್ತಿದ್ದಾರೆ. ಆದರೆ ಇದರೊಡನೆ 1960-61ನೇ ಸಾಲಿನದನ್ನೂ ಹೋಲಿಸಿ ನೋಡಿದ್ದರೆ ಇನ್ನೂ ಚೆನ್ನಾಗಿ ತಿಳಿಯುತ್ತಿತ್ತು. ಇಲ್ಲಿ ಅವರು ಕೊಟ್ಟಿರುವಂತೆ 1961-62ನೇ ಸಾಲಿನಲ್ಲಿ ಧಾನ್ಯಗಳು 34, 51, 901 ಟನ್ನುಗಳಿದ್ದದ್ದು 1962-63ನೇ ಸಾಲಿನಲ್ಲಿ 37, 20, 246 ಟನ್ನುಗಳಾದವು ಮತ್ತು ಇದರ ಪರ್ಸೆಂಟೇಜು 7.8 ಎಂದು ಇದೆ. ಆದರೆ 1960-61ನೇ ಸಾಲನಲ್ಲಿ ಇದನ್ನೇ ಹೋಲಿಸಿ ನೋಡಿದರೆ ಆಗ 35,50,000 ಟನ್ನುಗಳಷ್ಟು ಮಾತ್ರ ಆಗಿತ್ತು ಎಂದರೆ ಬಹಳ ಕಡಿಮೆಯಾಗಿತ್ತು. ಆದರೆ ಇಲ್ಲಿ ಆ ವರ್ಷವನ್ನು ಬಿಟ್ಟು ಬರೀ 1961-62 ಹಾಗೂ 1963-64ನೇಯ ಸಾಲನ್ನು ಹೋಲಿಸಿ ನೋಡಿ 7.8 ಎಂದು ಹೇಳಿದ್ದಾರೆ. ಆದರೆ, ಇದು ನಾಲ್ಕು ಪರ್ಸೆಂಟು ಆಗುತ್ತದೆ. ಇದೇ ರೀತಿ 1960-61ನೇ ಸಾಲಿನಲ್ಲಿ ದ್ವಿದಳ ಧಾನ್ಯಗಳು 3 27,117 1962-63ನೇ ಸಾಲಿನಲ್ಲಿ 3,17,168 ಟನ್ನು ಎಂದು ಹೇಳಿದ್ದಾರೆ. ಅದೇ ರೀತಿ ಕಡಲೇಕಾಯಿ 1960-61ರಲ್ಲಿ 4,41,000 ಟನ್ನುಗಳಷ್ಟು ಇದ್ದುದು 1962-63ನೇ ಸಾಲನಲ್ಲಿ 4,28,000 ಟನ್ನು ಮಾತ್ರ ಉತ್ಪತ್ತಿಯಾಗಿರುವುದು ಇದರಲ್ಲಿ ಕಂಡು ಬರುತ್ತದೆ. ಆದರೆ ಇಲ್ಲಿ ಹೇಳಿರುವಂತೆ 1961-62ನೇ ಸಾಲಿಗಿಂತ ಸ್ವಲ್ಪ ಜಾಸ್ತಿಯಾಗಿ ಬೆಳೆದಿದ್ದಾರೆಂದು ಹೇಳುತ್ತಾರೆ. ಆದರೆ 1960-61ನೇ ಸಾಲಿನ ಅಂಕಿ ಸಂಖ್ಯೆಗಳೊಡನೆ ಹೋಲಿಸಿದಲ್ಲಿ ಇದರ ಉತ್ಪತ್ತಿ ಕಡಮೆಯಾಗಿತ್ತು ಎನ್ನುವುದು ಅವರಿಗೇ ತಿಳಿಯುತ್ತಿತ್ತು. ಆದರೆ ಇಲ್ಲಿ ಚಮತ್ಕಾರವಾಗಿ ಹೇಳುತ್ತ ನಿಜವಾದ ಚಿತ್ರವನ್ನು ತೋರಿಸಿಲ್ಲ. ಆದುದರಿಂದ ನಾನು ಹೇಳುವುದು 1960-61ನೇ ಸಾಲಿನ ಹಾಗೂ 1962-63ನೇ ಸಾಲಿನ ಅಂಕೆಗಳನ್ನು ಹೋಲಿಸಿ ನೋಡಿದರೆ ಆಹಾರದ ಉತ್ಪತ್ತಿಯಲ್ಲಿ ಈ ರಾಜ್ಯ ಬಹಳ ಹಿಂದೆ ಬಿದ್ದಿದೆ ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಸಚಿವರ ಗಮನಕ್ಕೆ ಈ ವಿಚಾರವನ್ನು ತರಲಿಚ್ಛಿಸುತ್ತೇನೆ.

ಇದೇ ರೀತಿ ಇಂಡಸ್ಟ್ರೀಸ್ ಬಾಬಿನಲ್ಲಿಯೂ ನೋಡಿದರೆ, ಇದರಲ್ಲಿ ಪ್ರೊಡಕ್ಷನ್ನು ವಿಚಾರವಾಗಿ ಹೇಳಿದ್ದಾರೆ. ಇದರಲ್ಲಿ ಫಾಸ್‌ಫೇಟ್, ಉಕ್ಕು ಮತ್ತು ಸಕ್ಕರೆ, ಕಾಗದ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಕೆಲವು ಅಂಕೆ ಅಂಶಗಳನ್ನು ಕೊಟ್ಟು ಶೇಕಡಾ ಪ್ರಮಾಣದ ವ್ಯತ್ಯಾಸಗಳನ್ನು ಹೇಳಿದ್ದಾರೆ. ಇದರಲ್ಲೂ ಈ ದೇಶಕ್ಕೆ ಮುಖ್ಯವಾದ ಆಹಾರದ ಉತ್ಪತ್ತಿಗೆ ಬೇಕಾದ ಕೆಮಿಕಲ್ ಫರ್ಟಿಲೈಸರ್ಸ್ ಎಷ್ಟು ಮಟ್ಟಿಗೆ ಬೇಕಾಗಿತ್ತೋ ಅಷ್ಟು ಮಟ್ಟಿಗೆ ಉತ್ಪನ್ನ ಮಾಡಿ ಜನಗಳಿಗೆ ಒದಗಿಸುವುದಕ್ಕೆ ಆಗಲಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಕೆಮಿಕಲ್ ಫರ್ಟಿಲೈಸರ್ ಏಕಪ್ರಕಾರವಾಗಿ 1960-61ನೇ ಸಾಲಿನಲ್ಲಿಯೂ, 1962-63ನೇ ಸಾಲಿನಲ್ಲಿಯೂ ಉತ್ಪತ್ತಿಯಾಗಿರುವುದನ್ನು ಹೋಲಿಸಿ ನೋಡಿದ್ದೇ ಆದರೆ ಅದು ಇಳಿಮುಖವಾಗಿರುವುದು ಗೊತ್ತಾಗುತ್ತದೆ. 1960-61ನೇಯ ಸಾಲಿನಲ್ಲಿ 8,135 ಟನ್ನುಗಳಷ್ಟು ಇದ್ದದ್ದು 1962-63ರಲ್ಲಿ 5,830 ಟನ್ನುಗಳಷ್ಟು ಇಳಿದಿದೆ. ಅದೇ ರೀತಿ ಫಾಸ್‌ಫೇಟು 1960-61ನೇ ಸಾಲಿನಲ್ಲಿ ನಾಲ್ಕೂವರೆ ಸಾವಿರ ಟನ್ನುಗಳಷ್ಟು ಇದ್ದದ್ದು 1961-62ನೇ ಸಾಲಿನಲ್ಲಿ 3,000 ಟನ್ನುಗಳಷ್ಟು ಇಳಿದಿದೆ. ಅದೇ ರೀತಿ ಸಲ್‌ಫ್ಯೂರಿಕ್ ಆಸಿಡ್ 9,250 ಟನ್ನುಗಳಿದ್ದುದು 1962-63ರಲ್ಲಿ 5,700 ಟನ್ನುಗಳಷ್ಟು ಇಳಿದಿದೆ. ಆದರೆ ಇಲ್ಲಿ ಕೊಟ್ಟಿರುವ ಉತ್ಪತ್ತಿಗಳನ್ನು ನೋಡಿದರೆ ಅದರಂತೆ ಆಹಾರದ ಉತ್ಪನ್ನಗಳು ನಮ್ಮ ದೇಶದಲ್ಲಿ ಹೆಚ್ಚಿಗೆ ಆಗಿಲ್ಲ ಎನ್ನುವುದು ತಿಳಿದು ಬರುತ್ತದೆ. ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ದೇಶದಲ್ಲಿ ಇನ್ನೂ ಹತ್ತು ಲಕ್ಷ ಟನ್ನುಗಳ ಉತ್ಪನ್ನವನ್ನು ಜಾಸ್ತಿ ಮಾಡಬೇಕೆಂದು ಗುರಿ ಇಟ್ಟುಕೊಂಡಿದ್ದರು. ಆ ರೀತಿ ಹತ್ತು ಲಕ್ಷ ಟನ್ನುಗಳಷ್ಟು ಉತ್ಪನ್ನ ಜಾಸ್ತಿಯಾಗಬೇಕಾಗಿದ್ದರೆ ಅದಕ್ಕಾಗಿ ಈ ದೇಶದಲ್ಲಿ ಆರು ಲಕ್ಷ ಟನ್ನು

(ಶ್ರೀ ಎಸ್. ಶಿವಪ್ಪ)

ಗಳಷ್ಟು ಗೊಬ್ಬರದ ಉತ್ಪನ್ನ ಜಾಸ್ತಿಯಾಗಬೇಕಾಗಿತ್ತು ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇಲ್ಲಿ ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡುತ್ತಿದ್ದೇವೆ ಎಂದು ಉತ್ಪನ್ನಗಳ ಚಿತ್ರವನ್ನು ಕೊಟ್ಟು ಬಹಳ ಜೋರಾಗಿ ಹೇಳುತ್ತಿದ್ದಾರೆ.

ಇದೇ ರೀತಿಯಾಗಿ ನಮ್ಮ ರಾಜ್ಯದಲ್ಲಿ ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್ ಎಂದರೆ ಜೀವನದ ಅಂಕಿ ಅಂಶಗಳು ಯಾವ ರೀತಿ ಇವೆ ಎಂದು ಹೇಳಿರುತ್ತಾರೆ. ಇಂಡಿಯಾ ಸರಕಾರದವರು ಈ ದೇಶದ ಎಲ್ಲ ರಾಜ್ಯಗಳಲ್ಲಿರುವ ಜೀವನದ ಮಟ್ಟ ಹೇಗಿದೆ ಎನ್ನುವುದನ್ನೂ ಈಚೆಗೆ ಪ್ರಕಟಪಡಿಸಿದ್ದಾರೆ. ಅದನ್ನು ಹೋಲಿಸಿ ನೋಡಿದರೆ ನಮ್ಮ ದೇಶದಲ್ಲಿ ಹೆಚ್ಚಿನ ಜೀವನ ಮಟ್ಟ ಇವೆ, ಅದಕ್ಕಿಂತ ಹೆಚ್ಚಾದುದು ಬಹುಶಃ ಬೇರೆ ಯಾವುದೂ ಇಲ್ಲ ಎನ್ನುವುದು ಅದರಿಂದ ಕಂಡು ಬರುತ್ತದೆ. ನಮ್ಮ ದೇಶದ ಸರಾಸರಿ ಜೀವನ ಮಟ್ಟ ಅಲ್ಲಿ ಕೊಟ್ಟಿರುವ ಅಂಕೆ ಅಂಶಗಳ ಪ್ರಕಾರ ಮಾರ್ಚಿ 1963ರ ವರೆಗೆ 154 ಎಂದು ಹೇಳಲಾಗಿದೆ. ದೆಹಲ್ಲಿಯಲ್ಲಿ 130, ಮದರಾಸಿನಲ್ಲಿ 149, ಬೊಂಬಾಯಿಯಲ್ಲಿ 143, ಗುಜರಾತಿನಲ್ಲಿ 135 ಮತ್ತು ಹೈದರಾಬಾದಿನಲ್ಲಿ 133 ಇದೆ ಎಂದು ಆಲ್ ಇಂಡಿಯಾ ಸರಾಸರಿ ಕೊಡಲಾಗಿದೆ. ಅದರಂತೆ ನಮ್ಮ ಬೆಂಗಳೂರಿನಲ್ಲಿ 154 ಎಂದು ಹೇಳಿರುವುದನ್ನು ನೋಡಿದರೆ ನಮ್ಮ ದೇಶದಲ್ಲಿನ ಜೀವನ ಮಟ್ಟ ಸುಮಾರು 20ರಷ್ಟು ಜಾಸ್ತಿಯಾಗಿದೆ ಎನ್ನುವುದು ಇದರಿಂದ ತೋರುತ್ತದೆ. ಈ ಬಗ್ಗೆ ಖಂಡಿತವಾಗಿಯೂ ಎಲ್ಲರೂ ಗಮನಕೊಟ್ಟು ವಿಚಾರ ಮಾಡತಕ್ಕ ಸಮಸ್ಯೆ ಯಾಗಿದೆ.

ಶ್ರೀ ಡಿ. ದೇವರಾಜ್ ಅರಸ್ (ಕಾರ್ಮಿಕ, ವಸತಿ ಮತ್ತು ಸಾರಿಗೆ ಶಾಖೆಗಳ ಮಂತ್ರಿಗಳು).—ತಾವು ಹೇಳುತ್ತಿರುವ ಅಂಕಿ ಅಂಶಗಳನ್ನು ನೋಡಿದರೆ ಅವು ಬೇಸಿಕ್ ಇಯರ್ಸ್‌ಗಳ ಅಂಕೆ ಅಂಶಗಳಲ್ಲಿ ಸ್ವಲ್ಪ ವ್ಯತ್ಯಾಸಗಳು ಬರುತ್ತವೆ. ಹಾಗೆ ನೋಡುವಾಗ ಮೈಸೂರು ದೇಶವೇ ಬೇರೆ ರೀತಿಯಾಗಿ ಬೇಸಿಕ್ ಇಯರಿನಲ್ಲಿ ಬರುತ್ತದೆ.

ಶ್ರೀ ಎಸ್. ಶಿವಪ್ಪ.—ಆಲ್ ಇಂಡಿಯಾ ಅಂಕೆ ಅಂಶಗಳನ್ನು ನೋಡಿಯೇ ನಾನೂ ಇದನ್ನು ಹೇಳುತ್ತಿರುವುದು. ಆದರೆ ಇದರಲ್ಲಿಯೂ ಕೂಡ ಪ್ರತಿ ವ್ಯಕ್ತಿಪರ ಆದಾಯವು 227.3 ಇದ್ದದ್ದು 289.6ರಷ್ಟು ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಆದರೆ ಇದನ್ನು ಸರಿಯಾಗಿ ಲೆಕ್ಕಾಚಾರ ಮಾಡಿ ನೋಡಿದ್ದೇ ಆದರೆ ಇದರಲ್ಲಿ ಅರ್ಧದಷ್ಟು ಕೂಡ ಆಗಿಲ್ಲ. ಮನುಷ್ಯನಿಗೆ ಅರೆಹೊಟ್ಟೆಯಷ್ಟು ಆಹಾರವೂ ಕೂಡ ಸಿಕ್ಕುತ್ತಿಲ್ಲ. ಹಾಗಿದ್ದರೂ ಇದರಲ್ಲಿ ಆದಾಯ 289.6ರಷ್ಟು ಹೆಚ್ಚಾಗಿದೆ ಎಂದು ಹೇಳುತಿದ್ದಾರೆ.

ಈ ಲೆಕ್ಕಾಚಾರಗಳನ್ನೆಲ್ಲಾ ಮಾಡಿ ನೋಡಿದರೆ—ಎಲ್ಲರ ಸರಾಸರಿ ವರಮಾನ ದಿನ ಒಂದಕ್ಕೆ 75 ನ.ಪೈ. ಅಥವಾ 12 ಆಣೆಗಳು. ಆದರೆ ಇದರಲ್ಲಿ ಬೆರೆತಿರತಕ್ಕ ಕೋಟ್ಯಾಧೀಶ್ವರರನ್ನೂ, ಲಕ್ಷಾಧೀಶ್ವರರನ್ನೂ ಮತ್ತು ಸಾವಿರಗಟ್ಟಲೆ ಸಂಬಳ ಪಡೆಯುತಕ್ಕ ಅಧಿಕಾರಿಗಳನ್ನೂ ಬಿಟ್ಟು ಬಿಟ್ಟರೆ ಇನ್ನುಳಿಯತಕ್ಕ ಸಾಮಾನ್ಯ ಜನರ ಒಂದು ದಿನದ ವರಮಾನ 4—5 ಆಣೆಗಿಂತ ಜಾಸ್ತಿ ಇಲ್ಲ. ಇದೇ ದೇಶದಲ್ಲಿರತಕ್ಕ ಎರಡು ಕೋಟಿ 40 ಲಕ್ಷ ಜನ ಸಂಖ್ಯೆಯಲ್ಲಿ ಮಧ್ಯಮವರ್ಗಕ್ಕೆ ಮೇಲ್ಪಟ್ಟ ಜನರ ಸಂಖ್ಯೆ ಒಂದು ಕೋಟಿ ಇದೆಯೆಂದಿಟ್ಟುಕೊಂಡರೂ, ಇನ್ನುಳಿದ ಒಂದೂವರೆ ಕೋಟಿ ಜನರ ಆದಾಯ ದಿನ ಒಂದಕ್ಕೆ 4—5 ಆಣೆಗಳಿಗಿಂತ ಜಾಸ್ತಿ ಇಲ್ಲ. ಈ ವಿಚಾರಗಳೆಲ್ಲ ಸರ್ಕಾರದವರು ಈಗ ನಮಗೆ ಒದಗಿಸಿರತಕ್ಕ ಅಂಕಿ ಅಂಶಗಳಿಂದಲೇ ವ್ಯಕ್ತಪಡುತ್ತವೆ. ಆದರೆ ಇದು ಬಹಳ ದುಃಖಕರವಾದ ವಿಚಾರ. ಪ್ರತಿಯೊಂದು ಸಂಸಾರದ ದಿನ ವೆಚ್ಚಗಳು ಕ್ಷಣ ಕ್ಷಣಕ್ಕೂ ಏರುತ್ತಿರುವಾಗ ಈ 4—5ಆಣೆಗಳ ದಿನ ಸಂಪಾದನೆಯಲ್ಲಿ ಅವರ ಜೀವನ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಊಹಿಸುವುದಕ್ಕೂ ಸಾಧ್ಯವಿಲ್ಲ ದಂತಾಗಿದೆ. ದಿನ ದಿನವೂ ಧಾರಣೆವಾಸಿಗಳು ವಿಷವೇರಿದಂತೆ ಗಗನಕ್ಕೇರುತ್ತಿವೆ, ಇತ್ತ ಜನರ ವರಮಾನ ದಿನ ದಿನಕ್ಕೂ ಇಳಿಮುಖವಾಗುತ್ತಿದೆ. ಇಂಥ ಪರಿಸ್ಥಿತಿ ದೇಶದಲ್ಲಿರುವಾಗ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯಾದರೂ ಹೇಗಿದೆ ಎಂದರೆ ಮುಂದೆ ಬರಲಿರತಕ್ಕ ವರ್ಷದಲ್ಲಿ ನಮ್ಮ ಸರ್ಕಾರ ಕೊಡಬೇಕಾದಂಥ ಒಟ್ಟು ಸಾಲದ ಹೊರೆ ಜಾಸ್ತಿಯಿದೆ ಸುಮಾರು 256 ಕೋಟಿ, 75 ಲಕ್ಷ, ರೂಪಾಯಿಗಳನ್ನು ನಮ್ಮ ಸರ್ಕಾರ ಸಾಲಮಾಡಿದೆ. ಈ ಸಾಲವನ್ನು ನಾವೂ ಮುಂದೆ ಹುಟ್ಟತಕ್ಕ ನಮ್ಮ ಮಕ್ಕಳೂ ತೀರಿಸಬೇಕಾಗಿದೆ. ಈ ಸಾಲದ ಹೊರೆ ತಲೆಯೊಂದಕ್ಕೆ 100–125 ರೂಪಾಯಿ ಗಳಾಗುತ್ತದೆ. ಆದರೆ ಅದಕ್ಕೆ ತಕ್ಕಂತೆ ಆಸ್ತಿಯನ್ನು ಕೂಡ ಮಾಡಿದ್ದೇವೆಂದು ಸರ್ಕಾರದವರು ಹೇಳಬಹುದು. ಆದರೆ ನಾವು ಹಣವನ್ನು ಖರ್ಚುಮಾಡತಕ್ಕ ಬಾಬಿನಲ್ಲಿ ಟಾರ್ಜೆಟ್ಟನ್ನು ಮೀರಿ ಹೋಗಿ ದ್ದೇವೆ. ಆದರೆ ನಮ್ಮ ಖರ್ಚಿಗೆ ತಕ್ಕಹಾಗೆ ಎಷ್ಟು ಸಂಪತ್ತಿರಬೇಕೋ ಅಷ್ಟು ಸಂಪತ್ತು ಈ ದಿವಸ ನಮ್ಮಲ್ಲಿಲ್ಲ. ಈ ದಿವಸ ನಾವು ಸಾಲಮಾಡಿ ತಂದಂಥ 256 ಕೋಟಿ ರೂಪಾಯಿಗಳನ್ನು ಆಸ್ತಿಯ ಮೇಲೆ ಹಾಕಿದ್ದೇವೆ. ಆ ಆಸ್ತಿಯಿಂದ ನಮಗೆ ಬರತಕ್ಕ ಲಾಭವೇನು, ಪ್ರತಿಫಲವೇನು ಎಂಬುದನ್ನು

ನೋಡಿದರೆ ಒಂದಕ್ಕೂ ಇನ್ನೊಂದಕ್ಕೂ ಸಂಬಂಧವೇ ಇಲ್ಲ. ಒಟ್ಟಿನಲ್ಲಿ ನಾವು ಹಾಕಿರತಕ್ಕ ಬಂಡವಾಳಕ್ಕೆ ತಕ್ಕ ಲಾಭ ಬರುತ್ತಿಲ್ಲ. ಈ ಸಾಲಕ್ಕಾಗಿ ನಾವು ಪ್ರತಿ ವರ್ಷವೂ 12–13 ಕೋಟಿ ರೂಪಾಯಿಗಳನ್ನೂ ಮತ್ತು ಅಸಲಿಗಾಗಿ ಸುಮಾರು 10 ಕೋಟಿಯನ್ನು ಕೊಡಬೇಕಾಗಿ ಬರುತ್ತದೆ. ದಿನಂಪ್ರತಿ ತೆರಿಗೆ ಕೊಡತಕ್ಕ ಜನರು ನಮ್ಮ ಸರ್ಕಾರ ಮಾಡಿರತಕ್ಕ ಸಾಲದ ತೀರ್ವೆಗಾಗಿ ಪ್ರತಿ ವರ್ಷವೂ 22—23 ಕೋಟಿ ರೂಪಾಯಿಗಳನ್ನು ತೆರಬೇಕಾಗಿದೆ. ನಮ್ಮ ಸರ್ಕಾರದವರು ಮಾಡಿರತಕ್ಕ ತಪ್ಪಿಗಾಗಿ ಜನರು ಪ್ರತಿವರ್ಷವೂ ಇಷ್ಟು ಹಣವನ್ನು ತೆರಬೇಕಾಗಿದೆ. ಇದಕ್ಕೆ ಜನರು ಎಷ್ಟು ಕಷ್ಟಪಟ್ಟರೂ ತೀರದಾಗಿದೆ. ಇಷ್ಟು ಅಪಾರವಾಗಿ ಸಾಲಮಾಡಿ ತಂದ ಹಣವನ್ನು ಯಾವ ಉದ್ಯಮಗಳಲ್ಲಿ ನಮ್ಮ ಸರ್ಕಾರ ಹಾಕಿದೆಯೋ ಆ ಉದ್ಯಮಗಳಿಂದ ನಮಗೆ ಸಾಕಷ್ಟು ವರಮಾನ ಬರುತ್ತಿಲ್ಲ ಜನಗಳಿಗೇನು ಉಪಕಾರವಾಗದ್ದಿದರೂ ಅವರು ಮಾತ್ರ ತೆರಿಗೆಯನ್ನು ತಪ್ಪದೆ ಕೊಡಲೇಬೇಕಾಗಿದೆ ಹೀಗೆ ಸಾಲದ ಬಂಡವಾಳವನ್ನು ಹಾಕಿ ಕಟ್ಟಿಸಿರತಕ್ಕ ತುಂಗಭದ್ರ ಡ್ಯಾಮಿನಿಂದ ನಮಗೆ ಇಲ್ಲಿಗೆ 10_6 ವರ್ಷಗಳಿಂದ ಒಂದು ಕಾಸೂ ಕೂಡ ಉತ್ಪತ್ತಿ ಇಲ್ಲ. ಆ ಶರಾವತಿಗೆ ಈಗಾಗಲೆ ಒಂದು ಐನೂರೂ ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಅದರಿಂದ ಕೂಡ ಒಂದು ಕಾಸೂ ಆದಾಯ ಬರುತ್ತಿಲ್ಲ. ಸರ್ಕಾರದವರು ಆಗಿಂದಾಗ್ಗೆ ಅದರ ಡಿಜೈನ್ ಇತ್ಯಾದಿಗಳನ್ನು ಬದಲಾವಣೆ ಮಾಡಿದ್ದರಿಂದ ಹಣ ವಿಶೇಷವಾಗಿ ಪೋಲಾಯಿತೆಂಬ ಅಂಶವನ್ನು ಸರ್ಕಾರದವರು ಈಗಾಗಲೇ ಒಪ್ಪಿಕೊಂಡಿದ್ದಾರೆ. ಇದರಿಂದ ದೇಶಕ್ಕೆ ಅನುಕೂಲವಾಗುವ ಬದಲು ಕೆಲವು ಕಂಟ್ರಾಕ್ಟರುಗಳಿಗೆ ಈ ಶರಾವತಿ ಕಾಂಗಾರಿಯಿಂದ ತುಂಬಾ ಅನುಕೂಲವಾಗಿದೆ. ಸರ್ಕಾರದವರ ಒಂದು ಲಂಗುಲಗಾಮಿಲ್ಲದ ಪ್ಲಾನಿನಿಂದ ದೇಶದ ಹಣ ಹೀಗೆ ಪೋಲಾಗುವುದಕ್ಕೆ ಅವಕಾಶವಾಯಿತೆಂದು ಹೇಳಿದರೆ ತಪ್ಪೇನೂ ಇಲ್ಲ. ಹೀಗೆ ಈ ಸರ್ಕಾರ ಯಾವ ಒಂದು ಲಂಗು ಲಗಾಮೂ ಇಲ್ಲದೆ ಹಣವನ್ನು ವೆಚ್ಚಮಾಡಿದ್ದರಿಂದ ಮಾಡಿದ ಸಾಲವನ್ನು ತೀರಿಸಲು ಈಗ ಅವಕಾಶವಿಲ್ಲದಂತಾಗಿದೆ. ಒಟ್ಟಿನಲ್ಲಿ ಶರಾವತಿ ಯೋಜನೆಯನ್ನು ದೇಶದ ಹಿತದೃಷ್ಟಿಯಿಂದ ಮಾಡಲಾಯಿತೋ ಅಥವಾ ಕಂಟ್ರಾಕ್ಟರ ಹಿತದೃಷ್ಟಿಯಿಂದ ಮಾಡಲಾಯಿತೋ ಹೇಳುವುದು ಬಹಳ ಕಷ್ಟವಾಗಿದೆ. ಮುಖ್ಯವಾಗಿ ಈ ಶರಾವತಿ ಯೋಜನೆಯಿಂದ ಕಂಟ್ರಾಕ್ಟರುಗಳು ಶ್ರೀಮಂತರಾಗಿ ಅವರು ಈ ದಿವಸ ಅನೇಕ ಸಂಸಾರಗಳನ್ನು ಸಾಕುತ್ತಿದ್ದಾರೆ ಆ ಸಂಸಾರಗಳಲ್ಲಿ ಕಾಂಗ್ರೆಸ್ಸಿನವರೆಷ್ಟು ಜನರಿದ್ದಾರೋ ಅದು ನನಗೆ ತಿಳಿಯದು. ಅಂತೂ ಈ ದಿವಸ ದೊಡ್ಡ ದೊಡ್ಡ ಜನರನ್ನು ಸಾಕತಕ್ಕ ಶಕ್ತಿ ಈ ಕಂಟ್ರಾಕ್ಟರುಗಳಿಗೆ ಬಂದಿದೆ. ದೇಶದಲ್ಲಿರತಕ್ಕ ಜನರಮೇಲೆ ಸರ್ಕಾರದವರು ಹೇರುತ್ತಿರುವ ತೆರಿಗೆ ಹೊರೆಯ ಸ್ವರೂಪ ಹೇಗಿದೆಯೆಂದರೆ :—ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ತೆರಿಗೆಗಳು 1958-59 ರಿಂದ 1964–65 ರವರೆಗೆ ವಿಷವೇರಿದಂತೆ ಇವು ಏರುತ್ತಿವೆ. 1958–59ರಲ್ಲಿದ್ದ ಪ್ರತ್ಯಕ್ಷ ತೆರಿಗೆಗಳಿಂದ ರಾಜ್ಯ ಸರ್ಕಾರಕ್ಕೆ ಬರುತ್ತಿದ್ದ ವರಮಾನ 12 ಕೋಟಿ 12 ಲಕ್ಷ ರೂಪಾಯಿಗಳಿದ್ದುದು 1964–65ಕ್ಕೆ 18 ಕೋಟಿ 70 ಲಕ್ಷಕ್ಕೇರಿದೆ. ಇದೇ ರೀತಿ ಅಪ್ರತ್ಯಕ್ಷ ತೆರಿಗೇ ಕೂಡ ಏರಿದೆ. 1958–59ರಲ್ಲಿ ಈ ಬಾಬಿನಿಂದ ಬರುತ್ತಿದ್ದ ವರಮಾನ 18 ಕೋಟಿ 25 ಲಕ್ಷ ಇತ್ತು ಈಗ ಅದು 1964-65ಕ್ಕೆ 30 ಕೋಟಿ 15 ಲಕ್ಷಕ್ಕೇರಿದೆ. ಅಂತೂ ಈ ಎರಡು ಬಾಬುಗಳಿಂದಲೂ ಸರ್ಕಾರಕ್ಕೆ ಬರತಕ್ಕ ಒಟ್ಟು ವರಮಾನ 1958-59ರಲ್ಲಿ 30 ಕೋಟಿ 36 ಲಕ್ಷ ಇದ್ದದ್ದು 1964-65ಕ್ಕೆ 55 ಕೋಟಿ 84 ಲಕ್ಷಕ್ಕೆ ಏರಿದೆ. ಇಷ್ಟು ಹಣವೂ ರಾಜ್ಯದಲ್ಲಿರತಕ್ಕ 2 ಕೋಟಿ 40 ಲಕ್ಷ ಜನರಿಂದ ಸರ್ಕಾರಕ್ಕೆ ಪ್ರತಿವರ್ಷವೂ ಸಂದಾಯವಾಗುತ್ತದೆ. ಜನರು ಊಟ ಮಾಡಲೀ ಉಪವಾಸವೇ ಇರಲಿ ಅವರಂತೂ ಸರ್ಕಾರಕ್ಕೆ ಇಷ್ಟು ತೆರಿಗೆಯನ್ನು ತೆರಲೇ ಬೇಕಾಗಿದೆ. ಅಂತೂ ಕಳೆದ ಆರು ವರ್ಷಗಳಲ್ಲಿ ಸರ್ಕಾರದವರು 35 ಕೋಟಿ ಇದ್ದ ತೆರಿಗೆಯನ್ನು 56 ಕೋಟಿಗೇರಿಸಿದ್ದಾರೆ. ಆದರೆ ಮಂತ್ರಿಗಳು ಹೀಗೆ ತೆರಿಗೆಗಳನ್ನು ಹಾಕುವುದು ಬೇಡವೇ ಎಂದು ಕೇಳಬಹುದು. ಸರ್ಕಾರದರವರು ಹೀಗೆ ಯಾವ ಒಂದು ಲಂಗೂ ಲಗಾಮೂ ಇಲ್ಲದಂತೆ ಖರ್ಚುಮಾಡುತ್ತಿರುವುದನ್ನು ನೋಡಿದರೆ ಜನರಿಗೆ ಈ ತೆರಿಗೆಗಳನ್ನು ಕೊಡಬೇಡಿ ಎಂದು ಹೇಳಲೇಬೇಕು ಎಂದು ಅನಿಸುತ್ತಿದೆ. ನನ್ನ ಮನಸ್ಸು ಆ ರೀತಿ ಎಳೆಯುತ್ತಿದೆ. ಆದರೆ ನನಗೂ ಈ ಸಮಾಜವಾದ ಆಡಳಿತದಲ್ಲಿ ನಂಬಿಕೆ ಇದೆ. ಸರ್ಕಾರದವರು ಸಮತಾವಾದ ಸಮಾಜವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ......

ಶ್ರೀ ಬಿ. ಡಿ. ಜತ್ತಿ.—ಆ ರೀತಿ ನೀವೇನಾದರೂ ತೆರಿಗೆಗಳನ್ನು ಕೊಡಬೇಡಿ ಎಂದು ಜನರಿಗೆ ತಿಳಿಸಿದ್ದೇ ಆದರೆ ನಾಳೆ ತಾವು ಇಲ್ಲಿಗೆ ಅಂದರೆ ಇತ್ತ ಕಡೆಗೆ ಬಂದು ಕುಳಿತಾಗ ನಿಮ್ಮ ಹಣೆಯಬರಹ ಏನಾಗುತ್ತದೆಂಬುದನ್ನು ಮರೆಯಬಾರದು.

ಶ್ರೀ ಎಸ್. ಶಿವಪ್ಪ.—ಈ ದಿವಸವಲ್ಲ, ನಾಳೆಯಾದರೂ ರಾಜ್ಯದಲ್ಲಿ ಒಂದು ಒಳ್ಳೇ ಸ್ಥಿತಿ ಬಂದೀತು ಎಂಬ ಅಭಿಪ್ರಾಯದಿಂದಲೂ ಈ ಖರ್ಚನ್ನು ಒಂದು ಒಳ್ಳೇ ರೀತಿಯಲ್ಲಿ ಮುಂದೆ ಮಾಡಿಯಾರು ಎಂಬ ನಂಬಿಕೆಯಿಂದ ಟ್ಯಾಕ್ಸನ್ನು ಕೊಡಲೇಬೇಕೆಂದು ಹೇಳಬೇಕಾಗಿದೆ.

(ಶ್ರೀ ಎಸ್. ಶಿವಪ್ಪ).

ಜನತೆಯ ಮೇಲೆ ಹೇರಬಾರದ ತೆರಿಗೆಯನ್ನು ಹೇರಿ ಅವರಿಂದ ಹಣವನ್ನು ಬಹಳವಾಗಿ ವಸೂಲು ಮಾಡಿ ಏನೇನು ಅನುಕೂಲತೆಗಳನ್ನು ಕಲ್ಪನೆ ಮಾಡಬೇಕೋ ಅಂತಹ ಅನುಕೂಲತೆಗಳು ಅವರಿಗೆ ನಿಜವಾಗಿ ಉಂಟಾಗಿಲ್ಲವೆಂದು ಹೇಳುವುದಕ್ಕಾಗಿ ಆ ಅಂಕಿಅಂಶಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

2-00 P.M.

[MR. DEPUTY SPEAKER in the Chair.]

ಇನ್ನು ಇರ್ರಿಗೇಷನ್ ಪ್ರಾಜೆಕ್ಟ್ಸ್ ವಿಷಯ. ಈಗ ನೀರಾವರಿ ಯೋಜನೆಗಳನ್ನು ಎರಡು ರೀತಿಯಲ್ಲಿ ಮಾಡಿದ್ದಾರೆ. ಒಂದು ಮೈನರ್ ಇರ್ರಿಗೇಷನ್ ಸ್ಕೀಮು, ಇನ್ನೊಂದು ಮೇಜರ್ ಇರ್ರಿಗೇಷನ್ ಸ್ಕೀಮು. ನಾವು ಅನೇಕ ಸಾರಿ ಇಲ್ಲಿ ಹೇಳಿದ್ದೇವೆ. ಇಡೀ ಭಾರತ ದೇಶದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಇರ್ರಿಗೇಷನ್ ಸೌಕರ್ಯಗಳನ್ನು ಹೊಂದಿರುವ ರಾಜ್ಯವೆಂದರೆ ಮೈಸೂರು ರಾಜ್ಯ. ಶೇಕಡ ಏಳರಷ್ಟು ಮಾತ್ರ ನೀರಾವರಿ ಸೌಕರ್ಯವನ್ನು ಹೊಂದಿರತಕ್ಕ ರಾಜ್ಯವಾಗಿದೆ. ಇದು ನಮ್ಮ ರಾಜ್ಯದಲ್ಲಿ ನೀರಾವರಿ ಸೌಕರ್ಯಗಳನ್ನು ಎಷ್ಟು ತೀವ್ರತೆಯಿಂದ ಮಾಡಬೇಕಾಗಿತ್ತೋ ಅಷ್ಟು ತೀವ್ರತೆಯಿಂದ ಮಾಡಲಿಲ್ಲ. ಈ ಸರ್ಕಾರದ ಇಂತಹ ಬೇಜವಾಬ್ದಾರಿ ವರ್ತನೆಗೋಸ್ಕರವೇ ನಾನು ಈ ಸಭೆಯಲ್ಲಿ ಪದೇ ಪದೇ ಹೇಳುತ್ತಿದ್ದೇನೆ. ನೀರಾವರಿ ಸೌಕರ್ಯಕ್ಕೋಸ್ಕರ ಎಷ್ಟು ಹಣ ಖರ್ಚಾಗಿದೆ, ಪ್ರತಿಫಲ ಎಷ್ಟು ದೊರಕಿದೆ ಎಂಬ ಬಗ್ಗೆ ಅಳತೆ ಮಾಡತಕ್ಕ ಒಂದು ಮೆಷಿನ್ ಸಹ ಇಲ್ಲ. ಮೇಜರ್ ಪ್ರಾಜೆಕ್ಟಿಗೋಸ್ಕರ ಕೇಂದ್ರ ಸರ್ಕಾರದವರಲ್ಲಿ ಹೋರಾಟಮಾಡಿ ಹಣವನ್ನು ತಂದಿದ್ದೇವೆಂಬುದಾಗಿ ಧೀರತನದಿಂದ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಹೇಳಿದರು. ಈ ಧೀರತನ ಕೇವಲ ಅಸೆಂಬ್ಲಿ ಸದಸ್ಯರ ಮೇಲಲ್ಲ. ಆಲಮಟ್ಟಿಯಲ್ಲೂ ಮತ್ತು ನಾರಾಯಣಪುರದಲ್ಲೂ ಕಟ್ಟೆಗಳನ್ನು ಕಟ್ಟುತ್ತೇವೆಂದು ಹೇಳಿದ್ದರು. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿ ಅಸ್ತಿಭಾರ ಶಿಲೆಯನ್ನು ಹಾಕಿದ ಮಾತ್ರದಿಂದ ದೇಶಕ್ಕೆ ನೀರು ಬಂತೇ? ದೇಶದಲ್ಲಿ ವ್ಯವಸಾಯ ಉತ್ಪತ್ತಿಯಾಯಿತೇ? ಎಂಬುದಾಗಿ ನಾನು ಕೇಳುತ್ತೇನೆ. ಹತ್ತಾರು ವರ್ಷಗಳಿಂದಲೂ ಅನೇಕ ಪ್ರಾಜೆಕ್ಟುಗಳಿಂದ ಏನು ಪ್ರತಿಫಲ ಬರಬೇಕಾಗಿತ್ತೋ ಅದು ಇದುವರೆಗೂ ದೊರಕಿಲ್ಲ. ಅದರಿಂದ ಹೆಚ್ಚು ಭೂಮಿ ಸಾಗು ಆಗುವುದಕ್ಕೂ ಸಾಧ್ಯವಾಗಿಲ್ಲ. ಅದನ್ನು ಬಹಳ ತೀವ್ರತೆಯಿಂದ ಯೋಚನೆ ಮಾಡಬೇಕು. ಮೇಲಿಂದ ಮೇಲೆ ಹೇಳುತ್ತಾ ಬಂದಿದ್ದೇವೆ. ನೀರಾವರಿ ಸೌಕರ್ಯದ ಬಗ್ಗೆ ಈ ಸರ್ಕಾರ ಮಾಡುತ್ತಿರುವ ಕೆಲವು ಪ್ರಾಜೆಕ್ಟ್ ಕೆಲಸಗಳ ಪ್ರಗತಿಯನ್ನು ನೋಡಿದರೆ ಅದರಿಂದ ನಿಜವಾಗಿಯೂ ನಮಗೆಲ್ಲ ನಿರಾಶೆಯಾಗುತ್ತದೆಂದು ಹೇಳಿದರೆ ಅದೇನು ತಪ್ಪಾಗಲಾರದು ಇದಕ್ಕೆ ಈ ಸರ್ಕಾರದ ಅಭಿಪ್ರಾಯ ಕಾರಣವೋ ಅಥವಾ ಮೇಲ್ವಿಚಾರಣೆ ಇಲ್ಲದಿರುವುದು ಕಾರಣವೋ, ಇದರಲ್ಲಿ ಒಂದು ದೊಡ್ಡ ಲೋಪವಿದೆಯೋ ಏನೋ ಗೊತ್ತಾಗಲಿಲ್ಲ. ರೀಜನಲ್ ಇಂಬ್ಯಾಲೆನ್ಸ್ ಹೋಗಬೇಕು. ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಬಹಳ ಕಷ್ಟಪಟ್ಟು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ಟೆಕ್ನಿಕಲ್ ಸ್ಯಾಂಕ್ಷನ್ ಸಹ ತೆಗೆದುಕೊಂಡು ಬಂದೆ ಎಂಬುದಾಗಿ ಹೇಳಿದರು. ನಾನು ಅದನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ. ಆದರೆ ಅದೇ ರೀತಿಯಲ್ಲಿ ಕಾವೇರಿ, ಹೇಮಾವತಿ, ಹಾರಂಗಿ, ಕಂಬದಕಡ, ಈ ಯೋಜನೆಗಳು ಹತ್ತಾರು ವರ್ಷಗಳ ಹಿಂದಿನಿಂದಲೇ ತಯಾರಾಗಿದ್ದರೂ ಏಕೆ ಕಾರ್ಯಗತವಾಗಿಲ್ಲವೋ ಗೊತ್ತಿಲ್ಲ. ಈಗ ಅವುಗಳ ಅಂದಾಜು ಕೂಡ ತಯಾರಾಗಿವೆ ಎಂದು ಹೇಳುವಾಗ ಇನ್ನೂ ಇದುವರೆಗೂ ಟೆಕ್ನಿಕಲ್ ಸ್ಯಾಂಕ್ಷನ್ ಕೂಡ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಈಗ ಅವುಗಳಲ್ಲಿ ಕೆಲವಕ್ಕೆ ಅಸ್ತಿಭಾರ ಶಿಲೆಯನ್ನು ಹಾಕುತ್ತಿದ್ದೇವೆಂದು ಹೇಳುತ್ತಿದ್ದಾರೆ. ಹೇಮಾವತಿ ಎತ್ತರವನ್ನು ಕಡಮೆ ಮಾಡಿದ್ದಾರೆ. ಇದು 15 ಕೋಟಿ ರೂಪಾಯಿಗಳ ಯೋಜನೆಯಾಗಿದ್ದರೆ, ಇದಕ್ಕೆ ಮಂಜೂರಾಗಿರತಕ್ಕದ್ದು ಕೇವಲ 4 ಕೋಟಿ ರೂಪಾಯಿಗಳ ಯೋಜನೆ ಮಾತ್ರ. ಅದೇ ರೀತಿ ಹಾರಂಗಿಯಲ್ಲಿ ಸಣ್ಣ ಸಣ್ಣ ಯೋಜನೆಗಳನ್ನು ಮಾಡಿ ಅಂದಾಜನ್ನು ಕಡಮೆ ಮಾಡುತ್ತಾ ಇದ್ದಾರೆ. ಒಂದು ಕಡೆ ಒಂದು ಸಣ್ಣ ಯೋಜನೆ ಮಾಡುತ್ತಾ ಇನ್ನೊಂದು ಕಡೆ ಎರಡು ಪ್ರಾಜೆಕ್ಟ್‌ಗಳನ್ನು ಕಟ್ಟುತ್ತೇವೆ, ನೂರು ಕೋಟಿ ರೂಪಾಯಿಗಳಾದರೂ ಪರವಾಇಲ್ಲವೆಂದು ಹೇಳುತ್ತಾರೆ. ಇವರಿಗೆ ರೀಜಿಯನಲ್ ಬ್ಯಾಲೆನ್ಸ್ ಎಂಬುದು ಬೇಡವೇ? ನೂರು ಕೋಟಿ ರೂಪಾಯಿಗಳನ್ನು ಒಂದು ಹೊಳೆಯ ಪಾತ್ರದಲ್ಲಿ ಹಾಕಿದರೆ ಮತ್ತೊಂದು ಪಾತ್ರಕ್ಕೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಸಾಮಾನ್ಯವಾಗಿ ಅಭಿವೃದ್ಧಿ ಕಾರ್ಯಗಳನ್ನು ಮತ್ತು ಸಂಪನ್ಮೂಲಗಳನ್ನು ಹೆಚ್ಚಿಸತಕ್ಕ ವಿಷಯದಲ್ಲಿ ಒಂದು ದೊಡ್ಡ ಕಳಂಕವನ್ನು ತಂದೊಡ್ಡಿದ್ದಾರೆಂದು ನಾನು ಹೇಳುತ್ತೇನೆ. ಇನ್ನು ನಾಲ್ಕನೆಯ

ಯೋಜನೆ ಮಾಡುವ ಕಾಲಕ್ಕೆ ಈ ರೀಜಿಯನಲ್ ಇಂಬ್ಯಾಲೆನ್ಸ್ ಇರಬಾರದು. ಸರ್ವವ್ಯಾಪಕವಾಗಿ ಸಮನ್ವಯವಾಗಿ ಎಲ್ಲಾ ಸಂಪನ್ಮೂಲಗಳನ್ನು ಒಂದೇ ರೀತಿಯಲ್ಲಿ ಹಂಚಿಕೆಮಾಡುವ ಕ್ರಮವನ್ನು ಇವರು ತಮ್ಮ ಯೋಜನೆಯಲ್ಲಿ ಅಳವಡಿಸಬೇಕಾಗುತ್ತದೆ. ಇಲ್ಲದೆ ಹೋದರೆ, ನೀರಾವರಿಯಿಂದ ದೇಶಕ್ಕೆ ಫಲವೇನೂ ಆಗಲಾರದು. ಎಲ್ಲಾ ಕಡೆಗೂ ಒಂದೇ ರೀತಿಯಲ್ಲಿ ಹಣ ಹಂಚಿ ಕೆಲಸಮಾಡಿದಂತಾಗುವುದಿಲ್ಲ. ಇನ್ನೂ ಒಂದೆರಡು ಉದಾಹರಣೆಗಳನ್ನು ಈ ಬಗ್ಗೆ ಕೊಡಬಲ್ಲೆ. ಇದು ಮೇಜರ್ ಇರ್ರಿಗೇಷನ್ ವಿಷಯವಾಯಿತು. ಇನ್ನು ಮೈನರ್ ಇರ್ರಿಗೇಷನ್ ವಿಷಯ. ಈ ಬಗ್ಗೆ ಬಡ್ಜೆಟ್ಟಿನಲ್ಲಿ ಸರಿಯಾದ ಅಂಕಿ ಅಂಶಗಳಿಲ್ಲ. ಒಂದು ಲಕ್ಷ ರೂಪಾಯಿಗಳ ಯೋಜನೆಗಳನ್ನು ಮಾತ್ರ ಇಲ್ಲಿ ಸೇರಿಸಿದ್ದಾರೆ. ಅದಕ್ಕೆ ಕಡಮೆ ಇದ್ದರೆ ಅಂತಹವರಿಗೆ ಲಂಪ್‌ಸಮ್ಮಾಗಿ ಗ್ರ್ಯಾಂಟು ಕೊಡುತ್ತಾರೆ. ಇದಕ್ಕೆ ಸಂಬಂಧಪಟ್ಟ ಹಾಸನ ಡಿವಿಜನ್ನಿಗೆ ಹಾಸನ ಜಿಲ್ಲೆಯ ಅಪೆಂಡಿಕ್ಸ್ ನೋಡಿದೆ. ಅದರಲ್ಲಿ ಮೈನರ್ ಇರ್ರಿಗೇಷನ್‌ಗೆ ಸಂಬಂಧಪಟ್ಟಂತೆ ಒಂದು ಯೋಜನೆಯೂ ಇಲ್ಲ. ಅವರ ಒಂದು ಕಠೋರ ದೃಷ್ಟಿ ನಮ್ಮ ಮೇಲೆ ಬಿದ್ದಿದೆ. ಆದರೆ 175ನೇ ಪುಟವನ್ನು ನೋಡಿದರೆ ಹಾಸನ ಡಿವಿಜನ್‌ಗೆ ಮೈನರ್ ಇರ್ರಿಗೇಷನ್ ಬಾಬಿಗಾಗಿ 1 ಲಕ್ಷ 60 ಸಾವಿರ ರೂಪಾಯಿಗಳ ಖರ್ಚನ್ನೂ ಸೇರಿಸಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಕೆಲವು ಪ್ಲಾನುಗಳ ಅಂದಾಜುಗಳ ವಿವರಗಳು ಪೂರ್ತಿಯಾಗಿ ಬರಲಿಲ್ಲ. ಆ ರೀತಿ ಬಾರದೇ ಇದ್ದುದರಿಂದ There will be objection on the floor of the House that we will be including projects without complete plans and estimate. So we have been making lumpsum provision and then we will give priority to all these things. You need not have any fear about it.

ಶ್ರೀ ಎಸ್. ಶಿವಪ್ಪ.—ಮಾನ್ಯ ಆರ್ಥಿಕ ಸಚಿವರಲ್ಲಿ ಹೇಳುವುದೇನೆಂದರೆ ಇಲ್ಲಿ ಬೇಡಿಕೆಗಳನ್ನು ಚರ್ಚೆಮಾಡುವ ವೇಳೆಗೆ ಆಯಾ ಜಿಲ್ಲೆಗಳಲ್ಲಿ ಆಯಾ ಕ್ಷೇತ್ರದ ಸದಸ್ಯರು ಅವರ ಕ್ಷೇತ್ರಕ್ಕೆ ಗಮನವನ್ನು ಸೆಳೆಯಬೇಕಾಗುತ್ತದೆ. ಆದ್ದರಿಂದ ಇದರೊಳಗೆ ಆಯಾ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ವಿವರವಾದ ಅಂಕಿಅಂಶಗಳನ್ನು ಕೊಟ್ಟರೆ ಉಪಯೋಗವಾಗುತ್ತದೆ ಎಂಬುದಾಗಿ ಸಲಹೆ ಕೊಡಲಿಚ್ಛಿಸುತ್ತೇನೆ. ಇನ್ನು ಕೈಗಾರಿಕೆ ವಿಚಾರವಾಗಿ ಹೇಳುತ್ತಾ ಮೈಸೂರು ಕೈಗಾರಿಕಾ ಕ್ಷೇತ್ರದಲ್ಲಿ ಒಂದಾನೊಂದು ಕಾಲದಲ್ಲಿ ಪ್ರಸಿದ್ಧ ಸ್ಥಾನವನ್ನು ಹೊಂದಿತ್ತು. ನಾನು ಮೊದಲೇ ಹೇಳಿದ ಹಾಗೆ ವ್ಯವಸಾಯ ಕ್ಷೇತ್ರದಲ್ಲಿ ಮತ್ತು ನೀರಾವರಿ ಕ್ಷೇತ್ರದಲ್ಲಿ ಹೆಚ್ಚಿನ ಪ್ರಯೋಜನವನ್ನು ಪಡೆಯುವುದಕ್ಕೆ ಅವಕಾಶವಾಗಲಿಲ್ಲ. ಇದರಿಂದಾಗಿ ಆದಾಯ ಶೇಕಡ 20ಕ್ಕಿಂತ ಜಾಸ್ತಿ ಹೋಗುತ್ತಿಲ್ಲ. ಆದರ ಮೈಸೂರಿನಲ್ಲಿ ಸಂಪನ್ಮೂಲಗಳು ಜಾಸ್ತಿ ಇರುವುದರಿಂದ ಕೈಗಾರಿಕೆಗಳನ್ನು ಅಭಿವೃದ್ಧಿಮಾಡಿ ದೇಶದ ಆರ್ಥಿಕಾಭಿವೃದ್ಧಿ ಮಾಡತಕ್ಕ ಯೋಗ್ಯ ಸಂಪತ್ತು ಮೈಸೂರು ದೇಶಕ್ಕೆ ಇದೆ. ಕೈಗಾರಿಕಾ ಅಭಿವೃದ್ಧಿ ವಿಚಾರದಲ್ಲಿ ಮೈಸೂರು ದೇಶ ಎಷ್ಟು ಮುಂದುವರಿಯಬೇಕೋ ಅಷ್ಟು ಮುಂದುವರಿಯುತ್ತಾ ಇಲ್ಲ. ಸರ್ಕಾರದವರು ಯಾವ್ಯಾವ ಕೈಗಾರಿಕೆಗಳನ್ನು ಯಾವ್ಯಾವ ಕ್ಷೇತ್ರದಲ್ಲಿ ಮುಂದುವರಿಸುತ್ತಿದ್ದಾರೆಂಬ ಬಗ್ಗೆ ಟೆಕ್ನಿಕಲ್ ನೊ—ಹೌ ಕೊಡಬೇಕು.

ಶ್ರೀ ಬಿ. ಡಿ. ಜತ್ತಿ.—ಅದನ್ನೂ ಮೆನ್‌ಷನ್ ಮಾಡಿದ್ದೇವೆ.

ಶ್ರೀ ಎಸ್. ಶಿವಪ್ಪ.—ಅದೇ ರೀತಿಯಲ್ಲಿ ಏನೇನು ಸಾಧನೆ ಮಾಡಲಿಲ್ಲವೆಂಬುದನ್ನು ಸಹ ತಿಳಿಸಿಬೇಕು. ಇನು ಕೈಗಾರಿಕೆ ಮತ್ತು ಅಭಿವೃದ್ಧಿಯ ಬಗ್ಗೆ ಒಂದು ಫಂಡ್ ಮಾಡಿ ಎಲ್ಲರಿಗೂ ಮುಂದೆ ಸಹಾಯಮಾಡುತ್ತೇವೆಂಬುದಾಗಿ ಹೇಳುತ್ತಾರೆ. ಅದು ಸರಿಯಾಗಿ ಕಾರ್ಯಗತವಾಗದೆ ಹಿಂದೆ ಆದ ಹಾಗೆ ಕಾಗದದ ಮೇಲೆಯೇ ಅವರ ಯೋಜನೆ ನಿಲ್ಲಬಾರದು. ಈಗ ಮೈಸೂರಿನಲ್ಲಿ ಕಚ್ಚಾ ಫಿಲಂ ಫ್ಯಾಕ್ಟರಿ ಮತ್ತು ನಂಜನಗೂಡಿನಲ್ಲಿ ಒಂದು ರಯಾನ್ ಸಿಲ್ಕ್ ಫ್ಯಾಕ್ಟರಿ ಮಾಡಬೇಕೆಂದಿದ್ದೀರಿ. ಅದೇನಾಯಿತೋ ಗೊತ್ತಿಲ್ಲ. ಎರಡೂ ಕೂಡ ಒಂದು ನೀಲಗಿರಿ ಗುಡ್ಡಕ್ಕೆ ಹೋಯಿತು, ಇನ್ನೊಂದು ಇನ್ಯಾವುದೋ ಒಂದು ಗುಡ್ಡಕ್ಕೆ ಹೋಯಿತು. ಅವು ಖಂಡಿತವಾಗಿ ಸ್ಥಾಪನೆಯಾಗುವುದಿಲ್ಲವೆಂದು ನಾನು ಕೇಳಿದ್ದೇನೆ. ಇದು ನಿಜವಾಗಿದ್ದ ಪಕ್ಷದಲ್ಲಿ ಇವರು ಕೈಗಾರಿಕೆಗಳಿಗೆ ಸಾಕಷ್ಟು ಉತ್ತೇಜನ ಕೊಡದೆ ಮೈಸೂರಿನ ಪ್ರಕೃತಿ ಸಂಪತ್ತನ್ನು ಉಪಯೋಗಿಸಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮೈಸೂರು ಸುಂದರವಾದ ನಗರ. ಅಲ್ಲಿ ಅನೇಕ ಸೌಲಭ್ಯಗಳಿವೆ. ಅವುಗಳ ಪ್ರಯೋಜನ ಹೊಂದಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆಮಾಡತಕ್ಕ ರೀತಿ ನೀತಿಯಲ್ಲಿ ಸರ್ಕಾರದವರು ಆ ಒಂದು ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಹೇಳಬಯಸುತ್ತೇನೆ.

ಇನ್ನು ಕೈಗಾರಿಕೆಯ ವಿಚಾರವಾಗಿ ಮಾತನಾಡುತ್ತಾ ದೇಶದಲ್ಲಿ ಯಾವನು ನಿಜವಾಗಿ ಕೈಗಾರಿಕೆಯಲ್ಲಿ ತೊಡಗಿದ್ದಾನೋ ಅಂತಹವನಿಗೆ ಸಾಕಷ್ಟು ಸೌಲಭ್ಯ ದೊರಕುತ್ತಾ ಇಲ್ಲ. ಕಾಳಸಂತೆಯಲ್ಲಿ ಕಚ್ಚಾಮಾಲುಗಳನ್ನು ಮಾರಾಟಮಾಡುತ್ತಾ ಯಾರು ಹಣವಿಟ್ಟುಕೊಂಡು ಲೈಸನ್ಸ್ ತೆಗೆದುಕೊಳ್ಳುತ್ತಾರೋ ಅಂತಹವರಿಗೇ ಹೆಚ್ಚಿನ ಉತ್ತೇಜನ ಈ ಸರ್ಕಾರ ಕೊಡುತ್ತಾ ಇದೆ. ಈ ಕಚ್ಚಾ

(ಶ್ರೀ ಎಸ್. ಶಿವಪ್ಪ)

ಮಾಲುಗಳನ್ನು ಕೊಡುವ ಕಾಲದಲ್ಲಿ ಬಹಳ ಅನ್ಯಾಯ ಮೈಸೂರು ರಾಜ್ಯದಲ್ಲಿ ಆಗುತ್ತಾ ಇದೆ. ಅದಕ್ಕೊಂದು ಉದಾಹರಣೆಯನ್ನು ಕೊಡುತ್ತೇನೆ. ನಾನು ಮೊನ್ನೆ ಬೊಂಬಾಯಿಗೆ ಹೋದ ಕಾಲದಲ್ಲಿ ಮೈಸೂರು ದೇಶ ಕೊಟ್ಟಂಥ ಸ್ಟೇನ್‌ಲೆಸ್ ಸ್ಟೀಲನ್ನು ಉಪಯೋಗಿಸಿಕೊಂಡು ಕೈಗಾರಿಕೆ ಮಾಡುತ್ತಿದ್ದೇವೆಂದು ಅವರು ಸಂತೋಷದಿಂದ ಹೇಳಿದರು. ಅದನ್ನು ಕೇಳಿ ನನಗೆ ಬಹಳ ನಾಚಿಕೆಯಾಯಿತು. ನಮ್ಮ ದೇಶದ ಕಚ್ಚಾಮಾಲುಗಳು ಬೊಂಬಾಯಿಗೆ ಹೋಗಿ ಅಲ್ಲಿನ ಕೈಗಾರಿಕೋದ್ಯಮಿಗಳಿಗೆ ಸಿಕ್ಕಿ ಅಲ್ಲಿ ಸಂಪತ್ತು ಜಾಸ್ತಿಯಾಗುತ್ತಾ ಇದೆ. ಇಂಥಾ ವಿಷಯಗಳನ್ನು ಸರ್ಕಾರ ಚೆನ್ನಾಗಿ ಗಮನಿಸಬೇಕು. ಯಾವನು ನೇರವಾಗಿ ಕೈಗಾರಿಕೆಯಲ್ಲಿ ತೊಡಗಿರುತ್ತಾನೋ ಅಂತಹವನಿಗೆ ಕಚ್ಚಾ ಮಾಲುಗಳು ಸುಲಭವಾಗಿ ಸಿಕ್ಕುವ ಹಾಗೆ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದವರ ಆದ್ಯ ಕರ್ತವ್ಯ.

ಇವೊತ್ತು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಈ ಒಂದು ವಿಚಾರದಲ್ಲಿ ಹಿಂದಿನ ಶಾಸನ ಸಭೆಗಳಲ್ಲಿ ಅನೇಕ ಸಲಹೆಗಳನ್ನು ಮಾಡಿದ್ದೇನೆ. ಅದು ಸರಿಯಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಅದಕ್ಕೆ ಒಂದು ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿಯ ಮುಖಾಂತರ ಅದನ್ನು ಹಂಚಿಕೆ ಮಾಡುತ್ತಿದ್ದೇವೆ ಎಂದು ಹೇಳಿದರು. ಆ ಕಮಿಟಿ ಎಷ್ಟರ ಮಟ್ಟಿಗೆ ಕೆಲಸ ಮಾಡಿದೆ ಎನ್ನತಕ್ಕ ವಿಚಾರವನ್ನು ನಾವು ತಿಳಿದುಕೊಳ್ಳುವುದಕ್ಕೆ ನಾನು ಆ ವರದಿಯನ್ನು ನೋಡಿಲ್ಲ. ಆದ್ದರಿಂದ ಆ ವಿಚಾರದಲ್ಲಿ ಸರ್ಕಾರದವರು ಹೆಚ್ಚು ಗಮನವನ್ನು ಕೊಡಬೇಕು. ಕೈಗಾರಿಕೆಗಳ ಅಭಿವೃದ್ಧಿ ಕಾರ್ಯ ಮತ್ತು ಸಣ್ಣ ಸಣ್ಣ ಕೈಗಾರಿಕೆಗಳು ಬೆಳೆಯದೇ ಹೋದರೆ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ಈ ಕೈಗಾರಿಕೆ ದೊಡ್ಡ ದೊಡ್ಡ ಬಂಡವಾಳಶಾಹಿಗಳ ಕೈಗೆ ಸಿಕ್ಕುತ್ತಾ ಬಂದಿದೆ. ನಿಜವಾಗಿ ಕಷ್ಟಪಟ್ಟು ಕೆಲಸಮಾಡುವ ಜನಗಳಿಗೆ ಸೌಲಭ್ಯ ದೊರೆಯುವುದಿಲ್ಲ. ಇನ್‌ಫ್ಲೂಯೆನ್ಸ್ ಇರುವ ಜನಗಳಿಗೆ ಸೌಕರ್ಯಗಳು ದೊರೆಯುತ್ತವೆ. ಶ್ರೀಮಂತರಾಗಿರತಕ್ಕವರೇ ಹೆಚ್ಚು ಶ್ರೀಮಂತರಾಗುತ್ತಿದ್ದಾರೆ ಎನ್ನುವ ಕೂಗು ಎಲ್ಲಾ ಕಡೆಗಳಲ್ಲೂ ಏಳುತ್ತಿದೆ. ಈ ಸಭೆಯ ಮುಖಾಂತರವೂ ಮತ್ತು ಹೊರಗಡೆಯಲ್ಲಿಯೂ ನಾನು ಈ ವಿಷಯವನ್ನು ಕೇಳುತ್ತಿದ್ದೇನೆ. ಈ ದೇಶದಲ್ಲಿ ಜನತೆಗೆ ಒಂದು ನಂಬಿಕೆಯನ್ನು ಉಂಟುಮಾಡತಕ್ಕ ಕಾರ್ಯವನ್ನು ಸರ್ಕಾರದವರು ಮಾಡಬೇಕು. ಇವೊತ್ತಿನ ದಿನ ಗಾಂಧೀ ತತ್ವವನ್ನು ಹೇಳತಕ್ಕ ಜನ ಅಧಿಕಾರದಲ್ಲಿರತಕ್ಕ ಜನ ದೇಶದ ಜನತೆಯ ಮುಂದೆ ತಮ್ಮ ಹೃದಯವನ್ನು ಬಿಚ್ಚಿ ತೋರಿಸಬೇಕಾಗಿದೆ. ಅವರಿಗೆ 1947ನೇ ಇಸವಿಯಿಂದ ಆಚೆಗೆ ಸಂಪತ್ತು ಎಷ್ಟಿತ್ತು, ಆಸ್ತಿಪಾಸ್ತಿಗಳು ಎಷ್ಟಿದ್ದುವು, 1947ನೇ ಇಸವಿಯಿಂದ ಈಚೆಗೆ ಎಂದರೆ 1963ನೇ ಇಸವಿಯಲ್ಲಿ ಅವರಿಗೆ ಸಂಪತ್ತು ಎಷ್ಟು ಇದೆ, ಆಸ್ತಿ ಪಾಸ್ತಿ ಎಷ್ಟು ಇದೆ ಎಂಬುದನ್ನು ಜನತೆಗೆ ಹೇಳಿದರೆ ಆಗ ಜನತೆಗೆ ನಂಬಿಕೆ ಬರುತ್ತದೆ. ಆ ರೀತಿ ಮಾಡಿದರೆ ಮುಂದೆ ಅಧಿಕಾರಕ್ಕೆ ಬರತಕ್ಕವರಿಗೆ ಎಚ್ಚರಿಕೆಯ ಕ್ರಮವಾಗುತ್ತದೆ. ಅದು ಆಗದ ಹೊರತು ದೇಶದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುತ್ತೇವೆಂದರೆ ಅದು ಬರೀ ಬಾಯಿ ಮಾತಾಗುತ್ತದೆ. ಅದು ಕೃತಿಯಾಗುವುದಿಲ್ಲ ಎಂದು ನಾನು ಹೇಳುತ್ತೇನೆ. ಈಗ ಹೈಪವರ್ ವಿಜಿಲೆನ್ಸ್ ಕಮಿಷನ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದು ಯಾವ ರೂಪವನ್ನು ತಾಳುತ್ತದೆ. ಅದಕ್ಕೆ ಕೊಡತಕ್ಕ ಅಧಿಕಾರವ್ಯಾಪ್ತಿ ಏನು, ಅದು ಎಷ್ಟರಮಟ್ಟಿಗೆ ಕೆಲಸವನ್ನು ಮಾಡುತ್ತದೆ ಎಂಬುದು ಗೊತ್ತಿಲ್ಲ. ಆದ್ದರಿಂದ ವಿಜಿಲೆನ್ಸ್ ಕಮಿಷನ್ನಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಅದು ಯಶಸ್ವಿಯಾಗಿ ಕೆಲಸ ಮಾಡಿ ಈ ದೇಶದಲ್ಲಿ ಅನೇಕ ವರ್ಷಗಳಿಂದ ದಿನೇ ದಿನೇ ಬೆಳೆಯುತ್ತಿರುವ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ದೇಶದಲ್ಲಿ ದಿನೇ ದಿನೇ ಲಂಚ ರುಷುವತ್ತು ಜಾಸ್ತಿಯಾಗುತ್ತಿದೆ. ಈ ಒಂದು ವಿಜಿಲೆನ್ಸ್ ಕಮಿಷನ್ ಅನ್ನು ನೇಮಕ ಮಾಡುವುದರಿಂದ ಅವೆಲ್ಲವೂ ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತದೆ.

ಇನ್ನು ಎಲ್ಲಾ ದೇಶಗಳಲ್ಲೂ ಬಹಳಮಟ್ಟಿಗೆ ಇವರು ಬೆನ್ನು ಕಟ್ಟಿಕೊಳ್ಳುವ ವಿಚಾರವೆಂದರೆ ಯೋಜನೆಗಳು. ಮೂರನೇ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದರ ಪ್ರಕಾರ ಇವರು ಏನು ಸಾಧನೆ ಮಾಡಿದ್ದಾರೆ ಎನ್ನತಕ್ಕ ವಿಷಯವನ್ನು ನಮ್ಮ ಮಾನ್ಯ ಅರ್ಥಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಒಟ್ಟು 3ನೇ ಪಂಚವಾರ್ಷಿಕ ಯೋಜನೆಗೆ 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಈಗಾಗಲೆ 3 ವರ್ಷಗಳಲ್ಲಿ 140 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಎಂದರೆ 56 ಪರ್ಸೆಂಟ್ ಹಣವನ್ನು ಈಗಾಗಲೇ 3ನೇ ಪಂಚವಾರ್ಷಿಕ ಯೋಜನೆಗೆ ಖರ್ಚುಮಾಡಿದ್ದಾರೆ. ಇದರಲ್ಲಿ ಕೇಂದ್ರ ಸರ್ಕಾರದಿಂದ 3ನೇ ಪಂಚವಾರ್ಷಿಕ ಯೋಜನೆಗೆ ಬರಬೇಕಾದ್ದಂತಹ ಭಾಗದಲ್ಲಿ ಶೇಕಡ 62 ಭಾಗದಷ್ಟು ಹಣವನ್ನು

ತೆಗೆದುಕೊಂಡಿದ್ದಾರೆ. ಒಂದನೇ ಪಂಚವಾರ್ಷಿಕ ಯೋಜನೆ, ಎರಡನೆ ಪಂಚವಾರ್ಷಿಕ ಯೋಜನೆ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳು ಪೂರೈಸಿದ ನಂತರ ನಮ್ಮ ದೇಶದಲ್ಲಿ ಈ ಯೋಜನೆಗಳ ಮುಖಾಂತರ ಎಷ್ಟು ಪ್ರಗತಿಯಾಗಿದೆ ಎಂಬುದನ್ನು ನೋಡುವುದಕ್ಕೆ ಅಳತೆಯ ಕೋಲು ಪ್ರಾಮುಖ್ಯವಾದ ವಿಚಾರ. ಈ ಯೋಜನೆಗಳಿಂದ ನಮ್ಮ ದೇಶದಲ್ಲಿ ಎಷ್ಟರಮಟ್ಟಿಗೆ ನಿರುದ್ಯೋಗ ನಿವಾರಣೆಯಾಗಿದೆ, ಅನ್ನದ ಅಭಾವ ನಿವಾರಣೆಯಾಗಿದೆ, ವಸತಿಯ ಅಭಾವ ನಿವಾರಣೆಯಾಗಿದೆ ಎಂಬುದು ಅಳತೆ ಮಾಡತಕ್ಕ ಕೋಲು. ಯಾವ ಪ್ರತಿಯೊಂದು ವಿಷಯವನ್ನು ನೋಡಿದರೂ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಿರುದ್ಯೋಗಿಗಳ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಆಹಾರದ ಕೊರತೆ ಜಾಸ್ತಿಯಾಗುತ್ತಿದೆ. ಜೀವನದ ವೆಚ್ಚ ಗಗನಕ್ಕೆ ಏರುತ್ತಿದೆ. ಇದೇ ಈ ಯೋಜನೆಗಳ ಫಲಿತಾಂಶದಿಂದ ನಮಗೆ ದೊರಕಿರತಕ್ಕ ಪ್ರತಿಫಲ. ಆದ್ದರಿಂದ ನಾನು ಮೊದಲೇ ಹೇಳಿದ ಹಾಗೆ ಈ ಯೋಜನೆಗಳಲ್ಲಿ ಒಂದು ಫಂಡಮೆಂಟಲ್ ಮಿಸ್ಟೇಕ್ ಇದೆ. ಅದೇನೆಂದರೆ ಈ ಯೋಜನೆಗಳನ್ನು ಮಾಡತಕ್ಕ ಕಾಲದಲ್ಲಿ ದೇಶದ ಎಲ್ಲಾ ದೃಷ್ಟಿಯನ್ನೂ ಇಟ್ಟುಕೊಳ್ಳದ ಯೋಜನೆಯನ್ನು ಹಾಕಿರತಕ್ಕದ್ದು. ಈ ಯೋಜನೆಗಳಿಂದ ಕಂಟ್ರಾಕ್ಟರುಗಳಿಗೆ ಲಾಭವಾಗಿದೆ. ಶರಾವತಿ ಮತ್ತು ತುಂಗಭದ್ರಾ ಯೋಜನೆಗಳನ್ನು ತಯಾರುಮಾಡುವಾಗ ಇಂಜಿನಿಯರುಗಳು ಅದರಲ್ಲಿ ಒಂದು ಡಿಫೆಕ್ಟ್ ಇಟ್ಟಿರುತ್ತಾರೆ. ಅದು ಏನೆಂದರೆ ಯೋಜನೆಗಳನ್ನು ಎಗ್ಸಿಕ್ಯೂಟ್ ಮಾಡುವಾಗ ಇದು ಮೇಸರಿ ಡ್ಯಾಮ್, ಆಗಬೇಕು, ಇದು ಅರ್ಥನ್ ಡ್ಯಾಮ್ ಆಗಬೇಕೆಂದು ಯೋಜನೆಗಳನ್ನು ಬದಲಾಯಿಸುವುದು. ಹತ್ತು ಕೋಟಿ ರೂಪಾಯಿ ಇದ್ದಂತಹ ಯೋಜನೆಯನ್ನು 20-25-30 ಕೋಟಿ ರೂಪಾಯಿಗಳಿಗೆ ಏರಿಸಿದಂತಹ ನಿದರ್ಶನಗಳನ್ನು ನಾವು ನೋಡಿದ್ದೇವೆ. ಇದು ನಮ್ಮದು ಬಡತನದ ದೇಶ. ನಮ್ಮಲ್ಲಿ ಹಣವಿಲ್ಲ. ಪರದೇಶಗಳಲ್ಲಿ ಭಿಕ್ಷೆಯನ್ನು ಬೇಡಿ ಕೋಟಿ ಕೋಟಿಗಟ್ಟಲೆ ಹಣವನ್ನು ತಂದು ಮತ್ತು ಬಡಜನತೆಯ ಮೇಲೆ ತೆರಿಗೆಯನ್ನು ಹಾಕಿ ಅದರಿಂದ ವಸೂಲು ಮಾಡಿದಂತಹ ಹಣವನ್ನು ಲೆಖ್ಖಾಚಾರವಿಲ್ಲದೆ ಖರ್ಚುಮಾಡಿದರೆ ಯಾವ ಯೋಜನೆ ತಾನೆ ಮುಂದುವರಿಯುತ್ತದೆ. ಆ ರೀತಿ ಮಾಡಿದರೆ ದೇಶದಲ್ಲಿ ಪ್ರಗತಿಯನ್ನು ಸಾಧನೆ ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇವೊತ್ತು ನಮ್ಮ ದೇಶದಲ್ಲಿ ಮೂರು ಯೋಜನೆಗಳು ಆದಾಗ್ಯೂ ಕೂಡ ಏನು ಪ್ರಗತಿಯನ್ನು ಸಾಧಿಸಿದೆ, ಏನು ಉತ್ಪಾದನೆ ನಡೆದಿದೆ! ನಿರುದ್ಯೋಗಿಗಳಾಗಿರತಕ್ಕ ಮಕ್ಕಳಿಗೆ ಕೆಲಸವನ್ನು ಕೊಡತಕ್ಕ ಶಕ್ತಿಯನ್ನು ಹೊಂದಿದ್ದಾರೆಯೇ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗಿದೆ. ಬೃಹದಾಕಾರವಾದ ದೇಶದ ಸಮಸ್ಯೆಗಳನ್ನು ಪರಿಹಾರ ಮಾಡುವುದು ಸರ್ಕಾರದ ಪವಿತ್ರ ಕರ್ತವ್ಯವಲ್ಲವೇ? ಈ ಯೋಜನೆಗಳಿಂದ ಜನಗಳ ಜೀವನದ ಅಂತಸ್ತನ್ನು ಏನಾದರೂ ಹೆಚ್ಚು ಮಾಡಿದ್ದಾರೆಯೇ ಎಂದರೆ ಆ ಕೆಲಸದಲ್ಲಿ ಸರ್ಕಾರದವರು ವಿಫಲರಾಗಿದ್ದಾರೆ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ.

ಇನ್ನು ನಾನು ಹೆಚ್ಚು ಇಲಾಖೆಗಳ ವಿಷಯಕ್ಕೆ ಹೋಗದೆ ಈ ಸರ್ಕಾರದ ಹಣದ ಮುನ್ನೂಚನೆಯ ಪತ್ರದಲ್ಲಿ ತೋರಿಸಿರುವ ಕೆಲವು ಇಲಾಖೆಗಳ ವಿಚಾರವಾಗಿ ಮಾತ್ರ ನಾನು ಮಾತನಾಡುತ್ತೇನೆ. ನಾನು ಮುಖ್ಯವಾಗಿ ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ನಮ್ಮ ದೇಶದ ದುರದೃಷ್ಟವೋ ಏನೋ ಗೊತ್ತಿಲ್ಲ. ಈ ವಿದ್ಯಾ ಇಲಾಖೆಯಲ್ಲಿ ಒಂದು ಸಂದೇಹ ಮತ್ತು ಸಂಶಯ ಬಂದಿದೆ. ಈ ಇಲಾಖೆಯಲ್ಲಿ ಏನೋ ಗಲಿಬಿಲಿ, ಏನೋ ಗಡಿಬಿಡಿ ನಡೆಯುತ್ತಿದೆ ಎಂಬ ಭಾವನೆ ಇದೆ. ಈ ಒಂದು ಅಂಶ ದೇಶದ ಎಲ್ಲಾ ಮೂಲೆಗಳಲ್ಲಿಯೂ ಹರಡಿದೆ. ಯಾವ ಒಂದು ಕ್ಷೇತ್ರದಿಂದ ದೇಶದಲ್ಲಿ ವಿದ್ಯೆ ಬೆಳೆಯಬೇಕೋ ಯಾವ ಒಂದು ಕ್ಷೇತ್ರದಿಂದ ಜ್ಞಾನದ ಚಿಲುಮೆ ಹರಡಬೇಕೋ ಅಂಥಾ ಕ್ಷೇತ್ರದಲ್ಲಿ ಗಡಿಬಿಡಿ ಇದೆ. ಅಂಥಾ ಕ್ಷೇತ್ರದಲ್ಲಿ ಸಂಶಯ ಮತ್ತು ಸಂದೇಹಗಳು ಬೆಳೆದರೆ ಯಾವ ದೇಶ ಹಿಂದುಳಿದ ದೇಶವಾಗಿದೆಯೋ ಅದು ಮುಂದಕ್ಕೆ ಬರುವುದಕ್ಕೆ ಸಾಧ್ಯವೇ ಎಂಬುದನ್ನು ಪರೀಕ್ಷೆ ಮಾಡಬೇಕಾಗಿದೆ. ಅನೇಕ ಸಲಹೆಗಳನ್ನು ವಿದ್ಯಾಭ್ಯಾಸ ಇಲಾಖೆಗೆ ಮಾಡಿದ್ದರೂ ಮಾನ್ಯ ವಿದ್ಯಾ ಮಂತ್ರಿಗಳು ನಾವು ಮಾಡಿದಂತಹ ಸಲಹೆಗಳನ್ನು ಸಂಶಯದಿಂದ ನೋಡುತ್ತಾರೆ. ಇದೇ ಸಭೆಯಲ್ಲಿ ವಿಶ್ವವಿದ್ಯಾನಿಲಯದ ವಿಚಾರದಲ್ಲಿ ಕೆಲವು ಸಲಹೆಗಳನ್ನು ಮಾಡಿದ್ದೇವೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ವೈಸ್-ಛಾನ್ಸಲರನ್ನು ನೇಮಕಮಾಡುವ ವಿಷಯದಲ್ಲಿ ಈ ಸಭೆಯಲ್ಲಿ ಅನೇಕ ಸಾರಿ ಸಲಹೆಗಳನ್ನು ಕೊಟ್ಟಿದ್ದೇವೆ. ನಮ್ಮ ಮೈಸೂರು ದೇಶದಲ್ಲಿ ಶಾಸ್ತ್ರಜ್ಞರು, ಪ್ರತಿಭಾವಂತರು, ವಿಜ್ಞಾನಿಗಳು ಇದ್ದರೂ ಹೊರಗಿನ ಒಬ್ಬರನ್ನು ನಮ್ಮ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವೈಸ್-ಛಾನ್ಸಲರ್ ಆಗಿ ನೇಮಕಮಾಡಿದ್ದಾರೆ. ನಾವು ಹೇಳಿದಂತೆ ಮಾಡಬಾರದು ಎಂದು ನಮ್ಮ ವಿಶ್ವವಿದ್ಯಾನಿಲಯಕ್ಕೆ ಬೇರೊಬ್ಬರನ್ನು ವೈಸ್-ಛಾನ್ಸಲರಾಗಿ ತಂದಿದ್ದಾರೆ. ಚಂಡಿ ಕಥೆಯಲ್ಲಿ ಹೇಳಿದಂತೆ, ಇವರು ಹೇಳಿದಂತೆ ಮಾಡಬಾರದು ಎನ್ನುವಂಥಾ ಮನಸ್ಸು ಇವರಿಗೆ ಬೆಳೆದು ಬಂದಿದೆ. ಚಂಡಿ ಕಥೆಯು ತಮಗೆಲ್ಲರಿಗೂ ಗೊತ್ತಿರಬಹುದು.

(ಶ್ರೀ ಎಸ್. ಶಿವಪ್ಪ)

ಚಂಡಿ ಕಥೆಯನ್ನು ವಿದ್ಯಾಮಂತ್ರಿಗಳಿಗೆ ಓದಿ ಹೇಳಬೇಕೆಂದು ಜೈಮಿನಿ ಭಾರತದ ಪುಸ್ತಕವನ್ನು ನಾನು ತಂದಿದ್ದೆ. ಅವರು ಹೊರಟು ಹೋದರು. ಉದ್ದಾಲಕನೆಂಬ ಋಷಿಗೆ ಚಂಡಿ ಎಂಬ ಹೆಂಡತಿ ಇದ್ದಳು. ಆತನು ಏನು ಹೇಳಿದರೆ ಅದಕ್ಕೆ ಪ್ರತಿಯಾಗಿ ಆಕೆ ಹೇಳುತ್ತಿದ್ದಳು ಮತ್ತು ಹಾಗೆ ಮಾಡುತ್ತಿದ್ದಳು. ಯಾರೋ ಅತಿಥಿಗಳು ಅವರಲ್ಲಿಗೆ ಬರುವವರಿದ್ದರು. ಅವರನ್ನು ಸತ್ಕರಿಸಬೇಕಾಗಿತ್ತು. ಆದರೆ ಹೆಂಡತಿ ತಾನು ಹೇಳಿದಂತೆ ಮಾಡುತ್ತಿರಲಿಲ್ಲ. ಅದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡಿ ನಾಳೆ ನಮ್ಮ ಮನೆಗೆ ಯಾರೂ ಬರುವುದಿಲ್ಲ, ನೀನು ಅಡಿಗೆ ಮಾಡಬೇಡ, ಎಂದು ಹೇಳಿದ. ಅದಕ್ಕೆ ಆತನ ಹೆಂಡತಿಯು ನಾನು ಅಡಿಗೆ ಮಾಡಿಯೇ ಮಾಡುತ್ತೇನೆ, ಯಾರನ್ನಾದರೂ ಕರೆದುಕೊಂಡು ಬರಬೇಕು ಎಂದು ಹೇಳಿದಳು. ಮರುದಿನ ಅತಿಥಿಗಳು ಬಂದರು, ಊಟ ಆಯಿತು. ಅತಿಥಿಗಳು ಹೊರಟು ಹೋದರು. ಇನ್ನೊಂದು ದಿನ ಶ್ರಾದ್ಧ ಮಾಡಬೇಕಾಯಿತು. ಆಗಲೂ ಆತ ನಾನು ನಾಳೆಯ ದಿನ ನಮ್ಮ ತಂದೆಯ ಶ್ರಾದ್ಧವನ್ನು ಮಾಡುವುದಿಲ್ಲ ಮುಂತಾಗಿ ಹೇಳಲು ಹೆಂಡತಿಯಾದವಳು ನೀವು ಶ್ರಾದ್ಧವನ್ನು ಮಾಡಲೇಬೇಕು ಎಂದು ಹಠ ಹಿಡಿದಳು. ಋಷಿಗಳು ಶ್ರಾದ್ಧವನ್ನು ಮಾಡಿದರು. ಶ್ರಾದ್ಧ ನೆರವೇರಿತಲ್ಲ ಎನ್ನುವ ಸಂತೋಷದಲ್ಲಿ ಪಿಂಡವನ್ನು ಹೊಳೆಗೆ ಹಾಕಬೇಕು ಎಂಬುದಾಗಿ ಹೆಂಡತಿಗೆ ಹೇಳಿದರು. ಆಕೆ ಅದನ್ನು ಬೀದಿಗೆ ಹಾಕಿದಳು. ಅದರಿಂದ ಋಷಿಗೆ ಕೋಪ ಬಂತು. ಆತನು ಕೊಟ್ಟ ಶಾಪದ ಪರಿಣಾಮವಾಗಿ ಆಕೆ ಶಿಲೆಯಾದಳು. ಈ ರೀತಿಯಾಗಿ ಚಂಡಿ ಕಥೆಯಂತೆ ಹಟಮಾರಿತನದಿಂದ ಜನತೆಯ ಶಾಪಕ್ಕೆ, ಪ್ರಕೋಪಕ್ಕೆ ಒಳಗಾಗಬೇಡಿ. ಜನತೆಯ ಅಭಿಪ್ರಾಯಕ್ಕೆ ತಾವು ತಲೆಬಾಗಲೇ ಬೇಕು. ಮೈಸೂರು ಜನತೆ ಏನು ಅಭಿಪ್ರಾಯವನ್ನು ತನ್ನ ಪ್ರತಿನಿಧಿಗಳ ಮುಖಾಂತರ ತಮ್ಮಲ್ಲಿ ಹೇಳುತ್ತಾರೆಯೋ ಅದರಂತೆ ನಡೆಯಿರಿ. ಈ ರೀತಿಯ ಉದ್ಧಟತನ ಸಲ್ಲದು. ಪ್ರಜಾಪ್ರಭುತ್ವದಲ್ಲಿ ಇದು ಖಂಡಿತ ಸಲ್ಲದು ಎಂದು ಪದೇ ಪದೇ ವಿದ್ಯಾಮಂತ್ರಿಗಳಿಗೆ ಹೇಳುತ್ತಿದ್ದೇವೆ ಇವತ್ತು ಕೂಡ ಸವಿನಯದಿಂದ ಹೇಳುತ್ತೇನೆ; ತಾವು ದಯವಿಟ್ಟು ಈ ಶಾಸನ ಸಭೆಯ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಡಬೇಕು ಎಂದು.

ವಿದ್ಯಾಭ್ಯಾಸದಲ್ಲಿ ಬಹಳ ವಿವಾದಕ್ಕೆ ಒಳಗಾಗಿರುವ ವಿಷಯವೆಂದರೆ ಸೆಕಂಡರಿ ಎಜುಕೇಷನ್ ರಿಫಾರ್ಮೇಷನ್. 11 ಮತ್ತು 12ನೇ ಸ್ಟಾಂಡರ್ಡ್ ಎಂದು ಏನು ಹೇಳುತ್ತಾರೆ ಅದು ಹೈಸ್ಕೂಲಿನಲ್ಲಿರಬೇಕೇ ಅಥವಾ ಕಾಲೇಜಿನಲ್ಲಿರಬೇಕೇ ಎನ್ನುವ ವಿಚಾರ. ಅದರ ಬಗ್ಗೆ ನಮ್ಮ ವಿದ್ಯಾ ಮಂತ್ರಿಗಳು ಒಂದು ವಿಚಾರವನ್ನು ಹೇಳಿಬಿಟ್ಟಿದ್ದಾರೆ. ಏನೆಂದರೆ 11ನೇ ಸ್ಟಾಂಡರ್ಡ್ ಹೈಸ್ಕೂಲಿನಲ್ಲಿರಬೇಕು, 12ನೇ ಸ್ಟಾಂಡರ್ಡ್ ಕಾಲೇಜಿನಲ್ಲಿ ಈಗಿನ ಪಿ. ಯು. ಸಿ. ಹಾಗೆ ಇರಬೇಕು ಎಂದು. ಯು. ಜಿ. ಸಿ. ಅವರು ಹೇಳಿರುವ ಪ್ರಕಾರ ಇವು ಈಗಿನ ಪಿ. ಯು. ಸಿ. ನಂತೆ ಆಗುತ್ತವೆ ಎಂದು. ಎಂದರೆ ಹಿಂದಿನ ಇಂಟರ್‌ಮೀಡಿಯೆಟ್ ತರಗತಿಗಳಿದ್ದ ಹಾಗೆ. ನಮ್ಮ ವಿದ್ಯಾ ಮಂತ್ರಿಗಳು ಹೇಳಿರುವ ಪ್ರಕಾರ ಜೂನಿಯರ್ ಇಂಟರ್‌ಮೀಡಿಯೆಟ್ ಹೈಸ್ಕೂಲಿನಲ್ಲಿಯೂ, ಸೀನಿಯರ್ ಇಂಟರ್‌ಮೀಡಿಯೆಟ್ ವಿಶ್ವವಿದ್ಯಾನಿಲಯದ ಅಧೀನದಲ್ಲಿಯೂ ಇರಬೇಕು ಎಂದು ಅದನ್ನು ಭಾಗ ಮಾಡತಕ್ಕ ನೀತಿಯನ್ನು ಹೇಳುತ್ತಾರೆ. ವಿಶ್ವವಿದ್ಯಾನಿಲಯದವರು ಹೇಳಿದ್ದಾರೆ, ಇದು ಒಂದೇ ಕೋರ್ಸ್ ಆಗಿರುವುದರಿಂದ ಅವೆರಡು ಸ್ಟಾಂಡರ್ಡ್‌ಗಳೂ ವಿಶ್ವವಿದ್ಯಾನಿಲಯದಲ್ಲಿಯೇ ಇರಬೇಕು ಎಂದು ಕಟ್ಟುನಿಟ್ಟಾಗಿ ಹೇಳಿದ್ದಾರೆ. ವಿದ್ಯಾಮಂತ್ರಿಗಳು ಹೇಳುತ್ತಿರುವಂತೆ 11ನೇ ಸ್ಟಾಂಡರ್ಡ್ ಹೈಸ್ಕೂಲಿಗೆ ಸೇರಿದರೆ ವಿಶ್ವವಿದ್ಯಾನಿಲಯದಲ್ಲಿ ಆಗತಕ್ಕ ವಿದ್ಯಾಭ್ಯಾಸವನ್ನು ಹೈಸ್ಕೂಲಿನ ದರ್ಜೆಗೆ ಇಳಿಸಿದಂತಾಗುತ್ತದೆ. ಇದರಿಂದ ಬಹಳ ಕೆಟ್ಟ ಪರಿಣಾಮ ವಿದ್ಯಾರ್ಥಿಗಳ ಮೇಲೆ ಆಗುತ್ತದೆ. 11ನೇ ಸ್ಟಾಂಡರ್ಡ್‌ನ್ನು ಹೈಸ್ಕೂಲಿಗೆ ಸೇರಿಸುವುದು ಸರಿಯಲ್ಲ, ವಿದ್ಯಾಭ್ಯಾಸದ ನೀತಿಯಲ್ಲ, ಕ್ರಮವಲ್ಲ ಎಂದು ಅಕಾಡೆಮಿಕ್ ಕೌನ್ಸಿಲ್‌ನವರು ಸಾರಿ ಸಾರಿ ಹೇಳಿದರೂ ಕೂಡ ಹಟಮಾರಿತನದಿಂದ ಮಾಡಿಯೇ ಮಾಡುತ್ತೇವೆ ಎಂದು ವಿದ್ಯಾಮಂತ್ರಿಗಳು ಹೇಳತಕ್ಕದ್ದು ದೇಶಕ್ಕೆ ಬಹಳ ಕೆಟ್ಟದ್ದು; ಈ ಪ್ರಯೋಗವನ್ನು ಮುಂದಿನ ಪೀಳಿಗೆಯ ಮೇಲೆ ತಮ್ಮ ಹಟಮಾರಿತನದಿಂದ ಮಾಡಬೇಡಿ ಎಂದು ಅವರಿಗೆ ಹೇಳುತ್ತೇನೆ. 11 ಮತ್ತು 12ನೇ ಸ್ಟಾಂಡರ್ಡ್ ನಡೆಸಲು ಬೇಕಾದರೆ ಅದಕ್ಕಾಗಿಯೇ ಜೂನಿಯರ್ ಕಾಲೇಜುಗಳನ್ನು ಮಾಡಿ, ಪ್ರತ್ಯೇಕವಾದ ಪಠ್ಯ ಕ್ರಮಗಳನ್ನು ಮಾಡಿ ಅವುಗಳನ್ನು ವಿಶ್ವವಿದ್ಯಾನಿಲಯದ ಮೇಲ್ವಿಚಾರಣೆಗೆ ಬಿಟ್ಟುಕೊಟ್ಟು ಒಂದು ಸಂಪ್ರದಾಯವನ್ನು ಹಾಕುವುದಕ್ಕೆ ಪ್ರಯತ್ನಪಡಬೇಕು. ತಜ್ಞರು ಏನು ಹೇಳಿದ್ದಾರೆ ಆ ಅಭಿಪ್ರಾಯಕ್ಕೆ ವಿರೋಧವಾಗಿ ಹೋಗತಕ್ಕ ನೀತಿಯನ್ನು ವಿದ್ಯಾಮಂತ್ರಿಗಳು ಅನುಸರಿಸಬಾರದೆಂದು ಹೇಳುತ್ತೇನೆ. ಹಾಗೇನಾದರೂ ಮಾಡಿದರೆ ವಿದ್ಯಾಭ್ಯಾಸಕ್ಕೆ ಕೊಡಲಿ ಪೆಟ್ಟು ಹಾಕಿದ ಹಾಗೆ ಆಗುತ್ತದೆಂದು ಹೇಳಬೇಕಾಗಿದೆ.

ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿ ಲೆಕ್ಚರರುಗಳು ಮತ್ತು ಟೀಚರುಗಳು ಇದ್ದಾರೆ; ಅವರನ್ನು ಆಯಾ ಹುದ್ದೆಗಳಲ್ಲಿ ಖಾಯಂ ಮಾಡಬೇಕೆಂದು ಹೇಳಿದಾಗ, ಅವರು ಪ್ರಪ್ರಥಮವಾಗಿ ನಮ

Sir, I hope that my remarks on this matter should suffice to dispose of any unfortunate impression that may exist that when I come to plead the case of the Anglo-Indian schools that I seek some special concession or privilege for my community as such. I certainly am not, or when speaking of children of the under-privileged classes, who are today, for historical and other reasons, attending these schools. As I mentioned, these schools cater for all communities, and if these schools, as I am aware and the Hon'ble Minister for Education and Government, no doubt, are aware, also privide for poor children of like economic

status found in Government schools, I ask Government to be kind enough to extend to them the same concessions that they give to others, so that these children may also be allowed the privilege of free education.

Sir, while speaking on the subject of educational standards, I should like to congratulate the Government on the establishment on their part, and in bringing to Bangalore the establishment and location of the Regional Institute of English. Mr. Speaker, Sir, with the enactment of the Mysore Official Languages Bill last year, and the acceptance of Kannada as our official language of the State, the time has surely come to put aside controversy based on emotional approach to the larger issues which are linked with the question of the medium of instruction in the sphere of higher education, research and technological studies.

We are fortunate indeed in having the present Education Minister of the Central Government coming forward to emphasis the need for strengthening our secondary educational set up throughout the country. The other day, I had occasion to read the views expressed by the Dean of the Mysore Medical College. He is of course fully correct, when he discribed medical education, as a highly specialised course of studies, and cautioned that only students with a really good foundation in English should be selected for such education. Mr. Speaker, Sir, my request is that the State do take full advantage of the facilities available at the Regional Institute of English and ensure that as many teachers as possible from our schools and colleges are deputed to this Institute so as to benefit from the training given there.

While on the subject I should also like to refer to the statement of the Hon'ble Sri Nanda, the Union Home Minister in reply to certain questions in the Lok Sabha yesterday on the subject of introducing Hindi as the Medium of Examinations conducted by the Uuion Public Service Commission. I am glad that better counsels are to be sought in the shape of consultations with Chief Ministers of non-Hindi speaking States before a final decision is made. But, Sir, what is of particular significance to us in this State is the information given by the Home Minister Nanda that the question of holding the U. P. S. C. Examinations in the regional languages had been considered and found not possible. This to my mind, calls for more than passing thought on our part and demands from us the putting aside of all thoughts. But the commonsense approach to the question of the position that English should continue to occupy in our language set up in the field of education in the State unless we are to some day find our children consicuous by their absence in the country's public services, in the Central Government and in the Defence Services of the country or in the Parliament itself. We certainly owe them a better fate than that.

4-10 P.M.

Mr. Speaker, I believe that once we recognise our duty to the younger generation we must provide the very best that we can so as

(SRI P. F. D'MELLOW)

to make them not merely better students but more proficient for the future.

In the forthcoming conference between the Union Home Minister and States' Chief Ministers which has been called at New Delhi shortly to consider the proper implications of the language policy envisaged in the Central Official Languages Act, a leading Daily remarked and I quote:

> "The best solution for the present would be to keep English as the sole medium for the UPSC examinations and provide for the optional use of Hindi after a period say ten years, by which time facilities for the study of Hindi throughout the country may have expanded adequately. The fact must be faced that Hindi is yet to establish itself as an effective medium for official and other purposes even in the Hindi speaking States."

I feel that we are fortunately indeed that we shall have a statesman of the calibre of our Chief Minister Sri Nijalingappa at the forthcoming conference at New Delhi for an issue of this nature will demand all the foresight and forward thinking that can be summoned if firm policies on the correct implications of the Official Languages Act are to result. The issue is not whether we should resort to more use of Kannada or English in the legislatures but whether we are to provide our children with all the advantages that go with opening wide the windows of the world for their adventure.

Mr. Speaker, Sir, it only remains for me to offer my small bouquet to our Hon'ble Finance Minister for the spirit of robust optimism and quiet confidence that he has injected into his budget speech. Such confidence can only steam from the realisation that whatever the situation today, it is bound to be transformed no sooner our heavy investment on power and irrigation projects being to yield anticipated results. I believe that the Hon'ble Finance Minister has done a great service in not merely emphasising that but in giving us the confidence. Thank you.

† SRI M. SRINIVASA NAYAK (Mangalore-I).—Mr. Speaker, I rise to welcome and support the budget presented to this august House by the Hon'ble Minister for Finance for the year 1964-65. The budget as is given to us is full of hopes of having a fully developed State within the next one or two years. With the brilliant mind and abilities at his command he has given us a very good budget and it has given us hopes of great developments in this State. The budget contains many highlights. He has given us a surplus budget on the revenue side by nearly seven lakhs. With regard to developments he has given us many hopes that all the development schemes which are on hand will be implemented by getting aid from the Centre. He has given us a picture of what we have been able to complete in the last five years. The part II of the Budget speech instil in us great hopes for the future. Any person who has read or who has looked into the budget will be able to know that

the Government of Mysore has really done a lot of work for the benefit of the common man. I should say that the budget that has been placed before us has been welcomed by the common man and it has given a lot of hopes of development in the State in the coming years.

The Public Works Department and some of the other Departments have already spent during the last three years of the Plan period, the provision that had been made for the Third Plan period. That shows the Government as well as the department concerned have worked so well that they have been able to spend the money set apart for them. I should like to say on this occasion that the P.W.D. Minister as well as his staff have really done wonderful work because what had been provided for the Third Plan—Rs. 9 crores—have already been spent within the three years and they look forward for more money in the coming two years. That shows a bright future. The Hon'ble Minister for Public Works stated in his speech that the Central Government has been pursuaded to give clearance for taking up the Upper Krishna project. That shows the confidence he has in the ability of the Government of Mysore in carrying on the Upper Krishna Project. It is a very ambitious scheme and the Central Government has come to the aid of the Mysore in giving a technical sanction and work will be taken and it will give a great relief to the people of Mysore. The Mangalore harbour is another feather in the cap of Mysore. The Mysore Government has taken timely action to see that all barriers that stood in the way of having the port sanctioned by the Central Government are cleared and even the work has been going on in full speed. The Hon'ble Minister has to be congratulated for the timely action he has taken wherever necessary by coming to Mangalore more than once, in trying to meet the people and giving satisfaction to the aspirations of the people and thereby getting a lot of co-operation from them. The Government has gone a step forward in establishing a colony for the people who have been displaced. A community hall is going to be built for the people who have been displaced and beautiful sites and lands have been given to them. I may say that this step taken by the Government in trying to give amenities to the people who have been displaced from their homes while acquiring the land, is commandable.

Sri SANJEEVANATH AIKALA (Suratkal).—In all projects similar concessions have been given.

Sri M. SRINIVASA NAYAK.—I think the Hon'ble member is speaking for himself. I am speaking for the people of the District. I have talked to them and I had occasion to discuss the matter of development of port. They are getting immense assistance. The Government have come to the rescue of these persons who have been displaced. They have been given free lands and many other relief. The sites given to them are not in any way inferior to the place in which they had been living so far. The Mangalore Port is going to be one of the deepest ports in India. That is another feature which the Mysore Government can be justly proud of. We can expect many big industries to be attracted round the

(SRI M. SRINIVASA NAYAK)

port and can also expect to get an oil refinary without asking for it because it requires a deep port. With the development of this port, the face of South Kanara district will be changed. Though the Mysore Government has been doing its best for the development of fisheries, Sri Rachiah, the Minister for Fisheries, after over this portfolio has done really good work during the last two years. We have manufactured 18 mechanised boats. My friend Sri Madhwaraj who hails from the Udipi constituency, who is a born fisherman and an authority on fishery and who has gone abroad to Norway, Sweden and Japan and brought first-hand information about fisheries has made a brilliant speech with regard to the development of fisheries in the South Kanara District.

The Government of Mysore has made some provision in the last budget for the development of Malpe and Coondapur as fishing harbours. The Yugoslav Government has promised an aid of Rs. 114 lakhs. I do not see any progress that has been made by the Department in preparing estimates or to have a survey of the work that has been taken up. It is necessary that Government should whip up the department concerned to see that real progress is made to develop Malpe and Coondapur as fishing harbours.

SRI B. D. JATTI.—Originally we were only getting it done in Poona. Now, we have started it at Krishnarajasagar dam.

SRI M. SRINIVASA NAYAK.—I wish to tell the Hon'ble Minister that immediate action should be taken to see that preliminary work connected with the development of Malpe and Coondapur as fishing harbours is taken up immediately. Otherwise, the aid promised by the Yugoslov Government may lapse for the fault of ours. The Hon'ble Minister Rachiah was present when the modern fish-processing centre was opened at Mangalore. He was good enough to tell us that he was going to upgrade the institution into a technological institution and also provide for the teaching of the bifurcated course of fisheries in the high schools that are run by the Fisheries Department in South Kanara. I would request the Hon'ble Minister to provide fish sauce in the lobbies here.

MR. SPEAKER.—The Hon'ble Minister may bring some samples and show them to the members.

SRI M. SRINIVASA NAYAK.—Mangalore is known for its fish. All Hon'ble Members who have come to Mangalore must have tasted it. The Hon'ble Minister may open a fish stall here and make available to the members fish prawns and other allied foodstuffs that may be available at that centre.

The Fish processing Centre is taking 30 students at a time *i.e.*, 60 students per year. This can be increased. At least 100 students can be taken up because there is so much demand. It is said that a certificate from a member of the legislature is necessary before the

application is considered. If Sri Madwaraj is not available, they run up to me because I am near. I have recommended many good cases. They came back and told me that there was not enough provision to take them. I would request the Government and the Minister to see that provision increased so that the fishermen community which is a backward community and whose number 2 lakhs may be provided with an opportunity to have a decent living.

Coming to agriculture, our district has been selected for intensive rice cultivation. For that purpose we are told that they would provide us with electricity for running the pump sets in the district. But so far out of 600 and odd villages only 178 have been electrified. Though there is provision for putting up 10,000 pumps in one year, due to non-availability of electricity, only 2,000 and odd pumps are available. This has delayed the progress of the Grow More Food Campaign. So, I would request the Government to take immediate action to electrify all the other villages so that the ryots can make the best use of the pump sets made available by the Government and other agencies.

There are 22 rivers which provide sweet water, and there are some tributaries which run to a thousand. When you, Sir, were a Minister this Government had prepared some lift irrigation schemes. So far, they have not been implemented. unless they are implemented there would not be any impetus for raising foodcrops in South Kanara. In the budget no provision has been made for them in my district. At Tumbe, Bantwal and other coastal places where we can have lift irrigation, it cannot be taken up as there is no provision made in the budget. I would request the Government through you, Sir, to make provision for it in the budget.

Then, Sir, the salt water dams which are necessary to save the crops from destruction have been requested by the people of this district but they have not been taken up and no provision has been made for it.

Estimates have been prepared for 154 small anecuts to be put up across the rivers but so far no work has been taken up; nor has adequate provision been made in the budget for this purpose this year. Unless immediate action is taken to see that the agriculturists are given an opportunity to have the benefit of the minor irrigation schemes, the intensive rice cultivation scheme may not come to fruition this year.

With regard to animal husbandry, I should say that though we have got 6,000 and odd villages, there are only 20 animal husbandry centres where livestock can get medical aid. It should be increased and there should be at least one or two centres for each taluk. Otherwise they will have to walk a distance of 18 to 20 miles. I request Government to see that ample provision is made for providing each taluk with one or two animal husbandry centres where the poor people can get medical aid for their livestock.

We are now developing our inland fisheries, but the catches that are got have to be taken to the entire Mysore State. I would suggest that Government may kindly consider having a few insulated vans in which

(SRI M. SRINIVASA NAYAK)

they can carry fish from Mangalore. At every distance of 100 miles there should be a cold storage plant so that raw fish can be stored and made available to the people. I would suggest to the Minister for fisheries that he may take up this. For the return journey of these vans they can carry vegetables from Coorg, Mysore and other places and they can earn some money. Mangalore is lacking in vegetables. We had requested Government to give us a vegetable farm, but in this budget we do not find any provision for acquisition of land for a vegetable farm. We have got to get our vegetables from Bangalore and other places and so the cost of living in Mangalore is very high on that account. We cannot get any fresh vegetables of our choice. I would request Government to make some provision for acquisition of land for a vegetable farm in South Kanara.

We are developing horticulture in Mangalore. We are thinking of growing fruit trees in the gardens, but there is no provision to give the required plants. The Horticultural Department should have a horticultural farm or garden in Mangalore so that they may provide such seedlings and plants to the people to grow their own vegetables.

Mr. SPEAKER.—I thought that there was a Horticultural Society in South Kanara.

Sri M. SRINIVASA NAIK.—The Horticultural Department has to provide the necessary land for this purpose. We would appeal to the Government to acquire some land so that it could be kept as open land for all time to come for the growing city of Mangalore. There is some land available on the top of a particular hill which could be very well developed into a horticultural garden. I request Government that they may kindly make some provision for the acquisition of such land for developing the same into a garden.

†ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಗಳೇ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ದೇಶ ಅಭಿವೃದ್ಧಿ ಪಡಿಸಲು ಸರಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಪಂಚವಾರ್ಷಿಕ ಯೋಜನೆ ಹಾಕಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಈಗಾಗಲೇ ಎರಡು ಪಂಚವಾರ್ಷಿಕ ಯೋಜನೆಗಳು ಮುಗಿದು ಮೂರನೇ ಪಂಚವಾರ್ಷಿಕ ಯೋಜನೆಯ ಮೂರನೇ ವರ್ಷದ ಹಂತದಲ್ಲಿ ನಾವು ಇದ್ದೇವೆ. ಇಷ್ಟು ಕೋಟಿ ರೂಪಾಯಿ ಖರ್ಚು ಮಾಡಿ ಈ ಯೋಜನೆ ಫಲ ಯಾರಿಗೆ ದೊರೆಯುತ್ತದೆ ಎಂಬುದನ್ನು ವಿಚಾರ ಮಾಡಿ ನೋಡಿದರೆ ಶ್ರೀಮಂತರು, ದೊಡ್ಡ ದೊಡ್ಡ ಬ್ಯಾಂಕರ್ಸ್, ಏಜೆಂಟ್ಸ್ ಅಂಥವರಿಗೆ ಮಾತ್ರ ಈ ಯೋಜನೆಗಳ ಫಲ ದೊರೆಯುತ್ತಿದೆ. ಹಳ್ಳಿಗಾಡಿನ ಬಡ ಜನರಿಗೆ ಇದರ ಫಲ ದೊರೆತಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು 16 ವರ್ಷಗಳಾದರೂ ಆಹಾರದ ಸಮಸ್ಯೆ ಪರಿಹಾರವಾಗಿಲ್ಲ, ಆಹಾರದ ಕೊರತೆ ಪರಿಹಾರವಾಗಿಲ್ಲ. ಸಾಮಾನ್ಯವಾಗಿ ಜನರ ಸಾಲ ದಿನೇ ದಿನೇ ಜಾಸ್ತಿಯಾಗುತ್ತಿದೆ. ಜೀವನ ಮಟ್ಟ ಅದೇ ಮಟ್ಟದಲ್ಲಿದೆ. ಹಳ್ಳಿಯ ಜನರ ಜೀವನ ಮಟ್ಟದಲ್ಲಿ ಅನುಕೂಲತೆ ಕಾಣಬರುತ್ತಿಲ್ಲ. ಇದಕ್ಕೆ ಏನು ಕಾರಣ? ಯೋಜನೆ ತಯಾರ್ಮಾಡಿದ ಜನರಿಗೆ ಸಾಮಾನ್ಯ ಜನರ ಕಷ್ಟ ಸುಖ, ಹಳ್ಳಿ ಜೀವನದ ಮಟ್ಟ ಏನಿದೆ ಎಂಬುದು ಗೊತ್ತಿಲ್ಲ ಎಂದು ಕಾಣುತ್ತದೆ. ಇದನ್ನು ಈಗಲೇ ಸರಕಾರ ಸರಿಪಡಿಸಿಕೊಂಡು ಹಳ್ಳಿ ಮಟ್ಟದಲ್ಲಿರತಕ್ಕಂಥ ಜನರಿಗೆ ಈ ಯೋಜನೆಯ ಪ್ರತಿಫಲ ದೊರೆಯುವಂತೆ ಮಾಡಬೇಕು ಎಂದು ನಾನು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಸಮಾಜವಾದೀ ಸಮಾಜ ಕಟ್ಟುತ್ತೇವೆ, ರಾಮ ರಾಜ್ಯ ಸ್ಥಾಪನೆ ಮಾಡುತ್ತೇವೆ, ಜಾತ್ಯತೀತ ರಾಷ್ಟ್ರ ನಿರ್ಮಾಣ ಮಾಡುತ್ತೇವೆ ಎಂದು ಸರಕಾರದವರು ದೊಡ್ಡ ದೊಡ್ಡ ಭಾಷಣ ಮಾಡುತ್ತಾರೆ. ಎಲ್ಲಿದೆ ಈ ರಾಮರಾಜ್ಯ? ಸಮಾಜವಾದೀ ಸಮಾಜ ಎಲ್ಲಿ ಇದೆ? ಜಾತ್ಯತೀತ ರಾಷ್ಟ್ರ ಎಲ್ಲಿ ಇದೆ? ಒಂದು ಉದಾಹರಣೆಯನ್ನು ಹೇಳುತ್ತೇನೆ. ಎಲ್ಲಿ ಶಾಸನ ತಯಾರಾಗುತ್ತದೆಯೋ, ಎಲ್ಲಿ ಕಾನೂನು ರಚನೆಯಾಗುತ್ತದೆಯೋ ಅಲ್ಲಿಯೇ ಹೆಚ್ಚಾಗಿ ಜಾತೀಯತೆ ಬೆಳೆದು ಹೋಗುತ್ತಿದೆ. ನಮ್ಮ ಮಂತ್ರಿಗಳು ಪರ್ಸನಲ್ ಸ್ಟ್ಯಾಫ್ ಇಟ್ಟುಕೊಂಡಿರುವುದನ್ನು ನೋಡಿದರೆ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಬ್ರಾಹ್ಮಣ ಮಂತ್ರಿಯು ಹತ್ತಿರ ಅವರ ಸ್ಟಾಫಿನಲ್ಲಿ ಬ್ರಾಹ್ಮಣರೇ ಇದ್ದಾರೆ, ಒಕ್ಕಲಿಗ ಮಂತ್ರಿಯು ಪರ್ಸನಲ್ ಸ್ಟಾಫ್ ಒಕ್ಕಲಿಗರೇ ಇದ್ದಾರೆ, ಹರಿಜನ ಮಂತ್ರಿಯು ಪರ್ಸನಲ್ ಸ್ಟಾಫ್ ಹರಿಜನರೇ ಆಗಿದ್ದಾರೆ. ಜಾತೀಯತೆಗೆ ಇಲ್ಲಿ ಪ್ರೋತ್ಸಾಹ ಇದೆ. ಜಾತೀಯತೆಗೆ ಈ ರೀತಿ ಪ್ರೋತ್ಸಾಹ ಕೊಡುತ್ತಿರುವಾಗ್ಗೆ ರಾಮರಾಜ್ಯ ಯಾವಾಗ ಸ್ಥಾಪನೆ ಮಾಡುವುದು? ಈ ದೋಷ ಮೊದಲು ನಿವಾರಣೆಯಾಗಬೇಕು. ಕಾನೂನು ರಚನೆ ಮಾಡುವವರು ರಾಜ್ಯಭಾರ ಮಾಡತಕ್ಕಂಥವರು ಜಾತೀಯತೆ ಭಾವನೆ ಇಟ್ಟುಕೊಳ್ಳದೆ ದೇಶಕ್ಕೆ ಮಾರ್ಗದರ್ಶನ ಮಾಡಬೇಕು. ಎಲ್ಲರಿಗೂ ಮಾದರಿಯಾಗುವಂತೆ ನಡೆದುಕೊಳ್ಳಬೇಕು. ಜಾತೀಯತೆ ಭಾವನೆ ಇಲ್ಲದೆ ಜೀವನ ಮಾಡಬೇಕು. ಆದರೆ ಅವರಲ್ಲಿಯೇ ಇದು ಮಾಯವಾಗಿದೆ. ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಶಿವಪ್ಪನವರು ಹೇಳಿದ ಹಾಗೆ ಇವತ್ತಿನ ದಿವಸ ಸರಕಾರ ನಡೆಸತಕ್ಕಂಥ ಅಧಿಕಾರಿ ವರ್ಗ ಮಹಾರಾಜರು ಹೋದರೂ ಕೂಡ ಮಹಾ ಸ್ವಾಮಿಗಳಾಗಿ ಅಧಿಕಾರ ನಡೆಸುತ್ತಿದ್ದಾರೆ. ಎಮರ್ಜನ್ಸಿಯ ಹೆಸರಿನಲ್ಲಿ ಸಹಸ್ರಾರು ರೂಪಾಯಿ ಖರ್ಚು ಮಾಡುತ್ತಿದ್ದಾರೆ. ರಾಜ ಮಹಾರಾಜರಂತೆ ಜೀವನ ನಡೆಸುತ್ತಿದ್ದಾರೆ. ಈ ರೀತಿ ಮಾಡುವುದನ್ನು ಬಿಟ್ಟುಕೊಟ್ಟು ಜನತೆಗೆ ಮಾರ್ಗದರ್ಶನ ಮಾಡಬೇಕು. ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದು ಸಲ ಸೆಲೆಕ್ಟ್ ಕಮಿಟಿ ಮೀಟಿಂಗ್ ಕರೆದಾಗ್ಗೆ ಎಲ್ಲ ಸದಸ್ಯರು ಬಂದು ಕುಳಿತುಕೊಂಡರೂ ಮಾನ್ಯ ಮಂತ್ರಿಗಳು ಬರಲಿಲ್ಲ. ಮೀಟಿಂಗ್ ಅಡ್ಜರ್ನ್ ಮಾಡಿ ಎಂದು ಹೇಳಿ ಕಳಿಸಿದರು. ಸಹಸ್ರಾರು ರೂಪಾಯಿ ಖರ್ಚು ಮಾಡಿ ಮೀಟಿಂಗ್ ಕರೆಸಿದಾಗ್ಗೆ ಮಂತ್ರಿಗಳು ಬಾರದೇ ಇದ್ದರೆ ಏನು ಪ್ರಯೋಜನ? ಅಂದು ಸದಸ್ಯರು ಹಣ ತೆಗೆದುಕೊಂಡು ಹೋದರು. ಎಮರ್ಜನ್ಸಿ ಎಂದು ಹೇಳುತ್ತಿದ್ದರೂ ಸರಕಾರ ಕಣ್ಣು ಮುಚ್ಚಿಕೊಂಡು ಹಣ ಖರ್ಚು ಮಾಡುತ್ತಿದೆ. ನಮಗೆ ಕೊಟ್ಟಿರುವ ಡೆಸ್ಕ್ ಡೈರಿಗೆ ಮಾತ್ರ ಎಮರ್ಜನ್ಸಿ ಬಂದಿದೆ. ಡೆಸ್ಕ್ ಡೈರಿ ಚಿಕ್ಕದಾಗಿದೆ. ಏನಾದರೂ ಬರೆದುಕೊಳ್ಳೋಣ ಎಂದರೆ ಅದರಲ್ಲಿ ಅವಕಾಶವಿಲ್ಲ. ಈ ರೀತಿ ಮಾಡುತ್ತಿದ್ದಾರೆ. ನಿಜವಾಗಿಯೂ ತುರ್ತು ಪರಿಸ್ಥಿತಿಯ ಚಿಹ್ನೆ ನಮ್ಮ ದೇಶದಲ್ಲಿ ಇಂಥಾದ್ದರಲ್ಲಿ ಅಷ್ಟೇ ಕಾಣಬರುತ್ತಿದೆ.

ಸ್ವಾಮಿ, ಈ ವಿದ್ಯಾ ಇಲಾಖೆಯನ್ನು ನೋಡಿದರೆ ನಿಜವಾಗಿಯೂ ಬಹಳ ವಿಷಾದವಾಗುತ್ತದೆ. ದೇಶ ಕಟ್ಟುವುದಕ್ಕೆ ನಾಯಕರನ್ನು ತಯಾರು ಮಾಡತಕ್ಕಂಥ ವಿದ್ಯಾ ಸಂಸ್ಥೆಯಲ್ಲಿ ಇಂದು ಅನಾಯಕತ್ವ ಇದೆ. ಕನ್ನಡ ಮಾತನಾಡತಕ್ಕಂಥ ಎಲ್ಲ ಜನಗಳನ್ನು ಒಂದುಗೂಡಿಸಿ ಕನ್ನಡ ರಾಜ್ಯ ಮಾಡಿದ್ದಾಯಿತು. ಇದನ್ನು ಮಾಡಿದ ಮೇಲೆ ನಮ್ಮ ವಿದ್ಯಾ ಮಂತ್ರಿಗಳು ಅಧಿಕಾರ ವಹಿಸಿಕೊಂಡನಂತರ ನಿಜವಾಗಿಯೂ ವಿದ್ಯಾ ಇಲಾಖೆಯಲ್ಲಿ ಕಾರ್ಯ ಸಾಧನೆಯಾಗದೆ ಭಿನ್ನಾಭಿಪ್ರಾಯ ಉಂಟಾಗಿದೆ.

4-30 P.M.

ಇವತ್ತು ಕರ್ಣಾಟಕ ಯೂನಿವರ್ಸಿಟಿ ಮತ್ತು ಮೈಸೂರು ಯೂನಿವರ್ಸಿಟಿ ಎಂಬತಕ್ಕಂಥ ಹೆಸರಿಟ್ಟುಕೊಂಡು ಅಲ್ಲಿ ಒಂದು ಸ್ಕೇಲು, ಇಲ್ಲಿ ಒಂದು ಸ್ಕೇಲು, ಅಲ್ಲಿ ಒಂದು ತರಹ ಫೀಸು, ಇಲ್ಲಿ ಒಂದು ತರಹ ಫೀಸು, ಟೆಕ್ನಿಕಲ್ ಕಾಲೇಜುಗಳಿಗೆ ಸೀಟು ಕೊಡುವಾಗ ಅಲ್ಲಿ ಒಂದು ತರಹ ಪ್ರಿನ್ಸಿಪಲ್, ಇಲ್ಲಿ ಒಂದು ತರಹ ಪ್ರಿನ್ಸಿಪಲ್, ಈ ರೀತಿ ಅನೇಕ ತರಹ ಭಿನ್ನಾಭಿಪ್ರಾಯಗಳನ್ನು ವಿದ್ಯಾ ಮಂತ್ರಿಗಳು ತಂದೊಡ್ಡಿದ್ದಾರೆ. ಆರುನೂರುಜನ ಟ್ಯೂಟರುಗಳು, ಡೆಮಾನ್‌ಸ್ಟ್ರೇಟರುಗಳು ಇದ್ದರೆ, ನಾನ್ನೂರು ಜನ ಪರ್ಮನೆಂಟ್ ಆಗಿಲ್ಲ. ಅವರನ್ನು ಕನ್‌ಫರ್ಮ್ ಮಾಡಿಲ್ಲ. ಅವರು ಹಂಗಾಮಿಯಾಗಿ ಕೆಲಸ ಮಾಡುತ್ತಾ ಇದ್ದಾರೆ. ಅವರಲ್ಲಿ ಕೆಲವರನ್ನು ತೆಗೆದು ಹಾಕಬೇಕೆಂದು ಒಂದು ಆಜ್ಞೆಯನ್ನು ಸಹ ಮಾಡಿದರು. ಆದರೆ ಹೈಕೋರ್ಟಿನಲ್ಲಿ ಅವರಿಗೆ ರಕ್ಷಣೆ ದೊರಕಿದೆ, ಅದನ್ನು ಜಾರಿಗೆ ತರಬೇಕು; ಎಷ್ಟು ಒತ್ತಾಯ ಮಾಡಿ ಹಿಂದೆ ಮುಂದೆ ನೋಡುತ್ತಿದ್ದಾರೆ ಸರಕಾರದವರು. ಹೈಕೋರ್ಟಿನ ಜಡ್ಜ್‌ಮೆಂಟಿನ ಬಗ್ಗೆ ಯೋಚನೆ ಮಾಡುವುದಾದರೆ ವಿದ್ಯಾ ಮಂತ್ರಿಗಳು ತಮ್ಮ ಖಾತೆಗೆ ರಾಜಿನಾಮೆ ಕೊಟ್ಟು ಮನೆಗೆ ಹೋಗಬೇಕು. ಮಂತ್ರಿಗಳು ರಾಜಿನಾಮೆ ಕೊಟ್ಟ ಅನೇಕ ನಿದರ್ಶನಗಳಿವೆ. ಇಂಗ್ಲೆಂಡಿನಲ್ಲಿ ಯುದ್ಧ ಮಂತ್ರಿಗಳಾಗಿದ್ದ ಜಾನ್‌ಪ್ರೊಫ್ಯೂಮೋರವರು ಕೀಲರ್ ಪ್ರಕರಣ ಬಂದ ಮೇಲೆ ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರು. ಇಂಥ ಸತ್‌ಸಂಪ್ರದಾಯಗಳು ಹೊರ ದೇಶಗಳಲ್ಲಿರುವಾಗ, ನಮ್ಮ ಮೈಸೂರು ರಾಜ್ಯದಲ್ಲಿ ಮಂತ್ರಿಗಳು ತಪ್ಪು ಮಾಡುತ್ತಿದ್ದಾಗ ಶಾಸನ ಸಭೆ

(ಶ್ರೀ ಅಂದಾನಯ್ಯ) [illegible]

ಯಲ್ಲಿ ರಾಜಿನಾಮೆ ಕೊಟ್ಟು ಮನೆಗೆ ಹೋಗಿ ಎಂದು ಹೇಳಿದರೂ, ಅವರು ಹೋಗುವುದಿಲ್ಲ. ಅವರು ಮೊಂಡು ಬಿದ್ದುಬಿಟ್ಟಿದ್ದಾರೆ. ನಮ್ಮ ಸ್ನೇಹಿತರು ಹೇಳಿದರು ಅವರು ಮೂರನ್ನೂ ಬಿಟ್ಟವರು ಎಂದು. ನಿಜವಾಗಿ ಮೂರು ಬಿಟ್ಟವರಿಗೆ, ಗಾಳಿ ಏನು ? ಚಳಿ ಏನು ? ಹೀಗೆ ಸರಕಾರ ನಿಜವಾಗಿ ದೇಶದಲ್ಲಿ ಜನತೆಯ ಒಂದು ಹಿತ ದೃಷ್ಟಿಯಿಂದ, ಒಂದು ಒಳ್ಳೆಯ ಕಾರ್ಯವನ್ನು ಮಾಡುವ ದೃಷ್ಟಿಯಿಂದ ಕೆಲಸ ಮಾಡುತ್ತಾ ಇಲ್ಲ ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಷಯ. ಈ ರೋಡ್ ಟ್ರಾನ್ಸ್‌ಪೋರ್ಟ್ ಖಾತೆಯನ್ನು ವಹಿಸಿಕೊಂಡಂಥ ಶ್ರೀ ದೇವರಾಜ ಅರಸರವರು ಬಂದ ಮೇಲೆ ಈ ಇಲಾಖೆಯಲ್ಲಿರತಕ್ಕಂಥ ತೊಡಕು ಗಳನ್ನು ಸರಿಪಡಿಸುತ್ತಾರೆ, ಇಲ್ಲಿ ಪೋಲಾಗಿಹೋಗತಕ್ಕಂಥ ಹಣವನ್ನು ನಿಲ್ಲಿಸುತ್ತಾರೆ ಎಂದು ನಮಗೆ ನಂಬಿಕೆ ಇತ್ತು. ಆದರೆ ಅಷ್ಟು ಚುರುಕಾಗಿ ಕೆಲಸ ನಡೆಯುತ್ತಾ ಇಲ್ಲ. ಅರಸರವರು ಹುರುಪು ಮನಸ್ಸಿನಿಂದ ಕೂಡಿದವರೂ ಈ ಕೊಳಕನ್ನು ಸರಿಪಡಿಸಬೇಕು ಅನ್ನುವ ಮನಸ್ಸಿದೆ ಅವರಿಗೆ. ಆದರೆ ಈ ಇಲಾಖೆಯ ಮುಖ್ಯಾಧಿಕಾರಿಗಳ ತಪ್ಪೋ ಏನೋ, ಡಿಪಾರ್ಟ್‌ಮೆಂಟಿನಲ್ಲಿ ಇನ್ನೂ ಲೂಪ್ ಹೋಲುಗಳು ಇದ್ದೇ ಇವೆ. ಅದನ್ನು ಸರಿಪಡಿಸಬೇಕೆಂದು ರೋಡ್ ಟ್ರಾನ್ಸ್‌ಪೋರ್ಟ್ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಕೆಲವು ಮಟ್ಟಿಗೆ ಸರಿಹೊಂದಿದೆ.

ಶ್ರೀ ಅಂದಾನಯ್ಯ.—ಸರಕಾರಿ ಬಸ್ಸುಗಳಲ್ಲಿ ಪ್ರಯಾಣ ಮಾಡುವಂಥ ನಮಗೆ ಸ್ವಂತ ಅನು ಭವವಿದೆ. ಎಷ್ಟೋ ಡ್ರೈವರುಗಳು ಇಂಜನ್ನು ಹೀಟ್ ಆದಾಗ ನೀರುಹಾಕುವುದಕ್ಕೆ ತೊಂದರೆಪಟ್ಟ ದೃಶ್ಯ ನೋಡಿದ್ದೇವೆ. ನೀರು ಹಾಕಿಕೊಳ್ಳುವುದಕ್ಕೆ ಸಲಕರಣೆ ಸಿಕ್ಕುವುದಿಲ್ಲ. ಬಸ್ಸು ನಿಲ್ಲಿಸಿ ಹೋಟೆಲಿಗೆ ಹೋಗಿ, ಕೈಕಾಲು ಕಟ್ಟಿ ಒಂದು ಬಿಂದಿಗೆ ನೀರು ತಂದು ಹಾಕಿದ ಪರಿಸ್ಥಿತಿ ಇದೆ. ಇಂಥ ದುರವಸ್ಥೆ ಇಲಾಖೆಯಲ್ಲಿ ನಡೆಯುತ್ತಾ ಇದೆ. ಇದನ್ನು ಸರಿಪಡಿಸಬೇಕು ಬಸ್ಸುಗಳಲ್ಲಿ ಡಬಲ್ ಸೀಟುಗಳನ್ನು ಮಾಡಿದ್ದಾರೆ. ಅದರಲ್ಲಿ ಒಬ್ಬರು ಕುಳಿತುಕೊಳ್ಳಬಹುದು, ಇನ್ನೊಬ್ಬರು ಅರ್ಧ ಕುಳಿತುಕೊಳ್ಳಬೇಕು. ಇದನ್ನು ಸರಿಪಡಿಸಬೇಕು ಎಂದು ಸಂಬಂಧಪಟ್ಟ ಖಾತೆ ಮಂತ್ರಿಗಳಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ.

ಇಂಡಸ್ಟ್ರೀಸ್ ವಿಚಾರವನ್ನು ಹೇಳಬೇಕಾಗಿದೆ. ನಮ್ಮ ದೇಶ ವ್ಯವಸಾಯಗಾರರ ದೇಶ. 100ಕ್ಕೆ 80 ರಷ್ಟು ಜನ ಕೃಷಿಯಿಂದ ಜೀವನ ಮಾಡುತ್ತಾ ಇದ್ದಾರೆ. ದೇಶದಲ್ಲಿರತಕ್ಕಂಥ ಎಲ್ಲಾ ಜಮೀನನ್ನು ಹಂಚಿದರೂ, ತಲೆಗೆ ಒಂದು ಎಕರೆ ಸಹ ಸಿಕ್ಕುವುದಿಲ್ಲ. ಇಂಥ ಪರಿಸ್ಥಿತಿ ದೇಶದಲ್ಲಿರು ವಾಗ ಒಂದು ಕೈಗಾರಿಕೆಗೆ ಕಾರ್ಖಾನೆಗಳನ್ನು ತೆಗೆಯುವಾಗ, ಹಳ್ಳಿಗಳಲ್ಲಿ ವ್ಯವಸಾಯಗಾರರಿಗೆ ಹೊಂದಿಕೊಂಡು ಹೋಗುವಂಥ ಸಣ್ಣಸಣ್ಣ ಕೈಗಾರಿಕೆಗಳನ್ನು ತೆರೆಯಬೇಕು. ರೈತ ಒಂದೆರಡು ಎಕರೆ ಜಮೀನನ್ನೇ ನಂಬಿಕೊಂಡು ಜೀವನ ನಡೆಸುವುದು ಕಷ್ಟವಾಗುತ್ತದೆ ; ಅವನ ಮಕ್ಕಳಿಗೆ ವಿದ್ಯಾಭ್ಯಾಸವಾಗಬೇಕು, ಮದುವೆ ಮುಂಜಿ ಮಾಡಬೇಕು. ಇದಕ್ಕೆಲ್ಲಾ ಜಮೀನಿನಿಂದ ಸಾಲ ತೀರಿಸುವ ಬಡ್ಡಿ ಏಳುವುದಿಲ್ಲ. ಈ ಎಲ್ಲಾ ಖರ್ಚುಗಳನ್ನು ನೀಗಿಸಬೇಕಾದರೆ, ನಿಜವಾಗಿ ಕೈಗಾರಿ ಕೆಯ ಅಗತ್ಯ ಬಹಳವಿದೆ. ದೊಡ್ಡ ದೊಡ್ಡ ಕೈಗಾರಿಕೆ ಕೇಂದ್ರಗಳನ್ನು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸ್ಥಾಪನೆ ಮಾಡುವುದರ ಬದಲು ಹಳ್ಳಿಗಳಲ್ಲಿ ರೈತನಿಗೆ, ಕೃಷಿಗಾರನಿಗೆ, ಹೊಂದಿಕೊಂಡು ಹೋಗು ವಂಥ ಸಣ್ಣ ಸಣ್ಣ ಕೈಗಾರಿಕೆಗಳನ್ನು ತೆಗೆಯಬೇಕೆಂದು ನಾನು ಸರಕಾರದಲ್ಲಿ ಮನವಿಮಾಡಿಕೊಳ್ಳು ತ್ತೇನೆ.

ಈ ಕಮ್ಯೂನಿಟಿ ಡೆವಲಪ್ ಸ್ಕೀಮುಗಳನ್ನು ಯಾರು ಜಾರಿಗೆ ತಂದರೋ, ನಿಜವಾಗಿ ಆಶ್ಚರ್ಯ ವಾಗುತ್ತದೆ. ಇದರಿಂದ ಏನಾದರೂ ಕಿಂಚಿತ್ ಅನುಕೂಲವಾಗಿದೆಯೇ ? ಕೇಂದ್ರದಲ್ಲಿ ನೆಹರೂರವ ರನ್ನು ಹೊಗಳಿಕೊಂಡು ಅವರ ಶಹಬಾಸ್‌ಗಿರಿ ಪಡೆಯುವ ಉದ್ದೇಶವುಳ್ಳಂಥ ಜನರು ಈ ಸ್ಕೀಮು ಗಳನ್ನು ಮಂಜೂರು ಮಾಡಿದರು. ಈ ಕಮ್ಯೂನಿಟಿ ಡೆವಲಪ್‌ಮೆಂಟ್ ಸ್ಕೀಮಿನಿಂದ ಕಿಂಚಿತ್ ಸಹಾಯವೂ ಆಗಿಲ್ಲವೆಂದು ಹೇಳುತ್ತೇನೆ. ಇವತ್ತು ಅಧಿಕಾರಿಗಳು ಜೀಪಿನಲ್ಲಿ ಓಡಾಡಿಕೊಂಡು ಊರಿಂದೂರಿಗೆ ತಿರುಗಾಡುತ್ತಿದ್ದಾರೆಯೇ ವಿನಾ ಏನೊಂದು ಅನುಕೂಲವನ್ನು ರೈತರಿಗೆ ಮಾಡಿ ಕೊಡಬೇಕು ಎಂಬ ಉದ್ದೇಶ ಯಾವ ಅಧಿಕಾರಿಗೂ ಇಲ್ಲ. ಹಣ ಅಧಿಕಾರಿಗಳಿಗೆ ಕೊಡತಕ್ಕಂಥ ಸಂಬಳಕ್ಕೆ ಖರ್ಚಾಗುತ್ತಿದೆಯೇ ಹೊರತು ರೈತರಿಗೆ ಕಿಂಚಿತ್ತೂ ಅನುಕೂಲವಾಗುತ್ತಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತಾ ಇದ್ದೇನೆ.

ಕಮ್ಯೂನಿಟಿ ಡೆವಲಪ್‌ಮೆಂಟ್ ಇಲಾಖೆಯವರು ಮಾಡತಕ್ಕಂಥ ಕೆಲಸ ಏನಿದೆ, ಅದನ್ನು ಬೇರೆ ಇಲಾಖೆಗಳಿಗೆ ವಹಿಸುವುದು ಒಳ್ಳೆಯದು. ನೀರಾವರಿ ಬಾವಿಗಳಿಗೆ ಸಂಬಂಧಪಟ್ಟ ಕೆಲಸವನ್ನು

ತಹಸೀಲ್‌ದಾರರಿಗೆ, ಪಿ. ಡಬ್ಲ್ಯು. ಡಿಗೆ ಸಂಬಂಧ ಪಟ್ಟ ಕೆಲಸವನ್ನು ಪಿ. ಡಬ್ಲ್ಯು. ಡಿ. ಇಲಾಖೆಗೆ, ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಕೆಲಸವನ್ನು ವ್ಯವಸಾಯ ಇಲಾಖೆಗೆ ವಹಿಸಿ, ಎನ್. ಇ. ಎಸ್. ತೆಗೆದುಹಾಕುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಇವತ್ತು ಬಿ. ಡಿ ಒಗೆ ಕೊಟ್ಟಿರುವ ಜೀಪುಗಳನ್ನು ತಹ ಸೀಲ್‌ದಾರರಿಗೇ ಕೊಟ್ಟು ಅವರಿಗೇ ಕೆಲಸ ವಹಿಸಿದರೆ ನಿಜವಾಗಿ ಒಳ್ಳೆಯ ರೀತಿ ಯಲ್ಲಿ ಕೆಲಸ ನಡೆಯುತ್ತದೆಂದು ನಾನು ಅಭಿಪ್ರಾಯಪಡುತ್ತೇನೆ.

ಕೊನೆಯದಾಗಿ ವ್ಯವಸಾಯ. ದೇಶದಲ್ಲಿ 100ಕ್ಕೆ 80 ಜನ ಇವತ್ತು ವ್ಯವಸಾಯವನ್ನೇ ನೆಚ್ಚಿ ಕೊಂಡು ಕೆಲಸ ಮಾಡುತ್ತಾ ಇದ್ದಾರೆ. ಇಂಥ ಪರಿಸ್ಥಿತಿಯಲ್ಲಿ ದೇಶದಲ್ಲಿ ಆಹಾರದ ಕೊರತೆನೀಗಿಲ್ಲ, ನಮ್ಮ ಸರ್ಕಾರದವರು ವ್ಯವಸಾಯ ಇಲಾಖೆಗೆ ಏನು ಹೆಚ್ಚಿನ ಒಂದು ಹಣವನ್ನು ಖರ್ಚು ಮಾಡುತ್ತಾ ಇದ್ದಾರೋ ಅದರಿಂದ ರೈತನ ಒಂದು ಮಟ್ಟ ಜಾಸ್ತಿಯಾಗುತ್ತದೆ ಮತ್ತು ದೇಶದಲ್ಲಿ ಆಹಾರದ ಅಭಾವ ನೀಗುತ್ತದೆ ಎಂದು ಭಾಷಣದಲ್ಲಿ ಹೇಳುತ್ತಾರೆ. ಆದರೆ ಇವತ್ತು ರೈತನಿಗೆ ಯಾವ ಸೌಲಭ್ಯವೂ ದೊರಕುತ್ತಾ ಇಲ್ಲ; ಬಿತ್ತನೆ ಬೀಜ ಕಾಲ ಕಾಲಕ್ಕೆ ಸಿಕ್ಕುತ್ತಾ ಇಲ್ಲ. ಗೊಬ್ಬರ ಕಾಲ ಕಾಲಕ್ಕೆ ಸರಿ ಯಾಗಿ ಸಿಕ್ಕುತ್ತಾ ಇಲ್ಲ. ಬೆಳೆಗಳಿಗೆ ಬದ್ದಂಥ ಕೀಟಗಳನ್ನು ನಾಶಮಾಡುವುದಕ್ಕೆ ಸರಿಯಾದ ಔಷಧಿ ಸಿಕ್ಕುತ್ತಾ ಇಲ್ಲ. ವ್ಯವಸಾಯ ಇಲಾಖೆಯವರು ಕೊಟ್ಟಂಥ ಪೌಡರನ್ನು ಎರಚಿದರೆ ಹುಳುಗಳೊಂದೂ ಸಾಯಲಿಲ್ಲ. ಸೀಮೆ ಎಣ್ಣೆಯನ್ನು ಚುಮುಕಿಸಿದ ಮೇಲೆ ಹುಳುಗಳು ಸತ್ತು ಹೋದವು. ಹೀಗೆ ಇಲಾಖೆ ಯವರ ಕೈಯಲ್ಲಿರುವ ಔಷಧ, ಮಾಡತಕ್ಕಂಥ ಕೆಲಸವನ್ನು ನೋಡಿದರೆ ಬಹಳ ಆಶ್ಚರ್ಯಕರವಾಗಿ ಕಾಣಿಸುತ್ತದೆ. ಅದನ್ನು ನೋಡಿದರೆ ದೇಶದಲ್ಲಿ ವ್ಯವಸಾಯಗಾರನಿಗೆ ಈ ಇಲಾಖೆಯಿಂದ ಯಾವ ಸೌಲಭ್ಯವೂ ದೊರಕುತ್ತಾ ಇಲ್ಲವೆಂದು ಹೇಳಬಹುದು.

ಸರ್ಕಾರದವರು ಇತ್ತೀಚೆಗೆ ಪಂಪ್ ಸೆಟ್ಟುಗಳನ್ನು ಸಪ್ಲೈ ಮಾಡುವ ಒಂದು ಸ್ಕೀಮು ಮಾಡಿ ದ್ದಾರೆ. ನಿಜವಾಗಿ ಒಳ್ಳೆಯ ಸ್ಕೀಮು ಅದು. ದೇಶದಾದ್ಯಂತ ಪಂಪ್ ಸೆಟ್ಟುಗಳನ್ನು ಕೊಡಿಸಿ ಎಂದು ಬೇಕಾದಷ್ಟು ಅರ್ಜಿಗಳು ಬರುತ್ತಿವೆ, ನೂರಾರು ಅರ್ಜಿಗಳು ಬಂದಿವೆ. ಮೊದಲು ಸರ್ಕಾರ ಈ ಕೆಲಸವನ್ನು ಕೈಗೊಳ್ಳಬೇಕು. ರೈತ ಪಂಪು ಸೆಟ್ಟು ತೆಗೆದುಕೊಂಡು ಅದರ ಉಪಯೋಗವನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆ. ರೈತನಿಗೆ ಸೊಸೈಟಿಗಳ ಮೂಲಕ ಸಾಲಗಳನ್ನು ಕೊಡ ಬೇಕೆಂಬ ಏನೊಂದು ಏರ್ಪಾಡಿದೆಯೋ, ಅದರಿಂದ ಏನೊಂದು ಪ್ರಯೋಜನವಾಗಿಲ್ಲ. ಪಂಪ್ ಸೆಟ್ಟುಗಳನ್ನು ಸರ್ಕಾರ ನೇರವಾಗಿ ರೈತನಿಗೆ ಕೊಡುವುದರಿಂದ ಪಂಪ್ ಸೆಟ್ಟನ್ನು ಉಪಯೋಗಿಸಿ, ಅದರ ಪ್ರತಿಫಲವನ್ನು ಪಡೆಯುವುದಕ್ಕೆ ಆಗುತ್ತದೆ. ಈ ಒಂದು ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಂಪ್ ಸೆಟ್ಟುಗಳನ್ನು ರೈತನಿಗೆ ಸಪ್ಲೈ ಮಾಡಬೇಕು ಎಂದು ಬಿನ್ನಹ ಮಾಡಿಕೊಳ್ಳುತ್ತೇವೆ.

ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನು ಮುಗಿಸುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಾರ್ಡೋಲ್).—ಮಾನ್ಯ ಸಭಾಪತಿಗಳೆ, 19 4- 5 ನೆಯ ಸಾಲಿನ ಆಯವ್ಯಯ ಅಂದಾಜಿನ ಪತ್ರಿಕೆಯನ್ನು ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಹೇಳುತ್ತೇನೆ.

ನಮ್ಮ ಬಿಜಾಪುರ ಜಿಲ್ಲೆ ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗಿದ್ದರೂ ಸಹ ಈ ಬಜೆಟ್ಟನ್ನು ತೆಗೆದು ನೋಡಿದರೆ ನಮ್ಮ ಜಿಲ್ಲೆಗೆ ಚಿಕ್ಕ ನೀರಾವರಿ ಯೋಜನೆಗಾಗಲಿ, ಯಾವುದೇ ಒಂದು ದೊಡ್ಡ ನೀರಾವರಿ ಕಾಂಗಾರಿಗಾಗಲಿ ಹಣ ಹಾಕದಿರುವುದಕ್ಕಾಗಿ ನಾನು ನಿಜವಾಗಿ ಬಹಳ ವಿಷಾದ ಪಡುತ್ತೇನೆ. ನಮ್ಮ ಜಿಲ್ಲೆ ಬರಗಾಲ ಜಿಲ್ಲೆಯಾಗಿದ್ದರೂ ದೇಶದ ಹೊಣೆಯನ್ನು ಅರಿತು ಇವತ್ತು ನಮ್ಮ ಮುಖ್ಯ ಮಂತ್ರಿಗಳ ತುಲಾಭಾರವನ್ನೂ ಮತ್ತು ಪ್ರೈಮ್ ಮಿನಿಸ್ಟರ ಮಗಳಾದ ಶ್ರೀಮತಿ ಇಂದಿರ ಗಾಂಧಿಯವರ ತೂಕದಷ್ಟು ಬಂಗಾರವನ್ನು ನಮ್ಮ ಜಿಲ್ಲೆಯವರು ಕೊಟ್ಟರು. ಕೊಟ್ಟದ್ದರ ಪ್ರತಿಫಲಕ್ಕೆ ಮಾನ್ಯ ಸದಸ್ಯರಾದ ಕಡಿದಾಳ್ ಮಂಜಪ್ಪನವರು ಅದನ್ನು ''ಬಂಗಾರದ ಜಿಲ್ಲೆ'' ಎಂದು ಹೇಳುತ್ತಾರೆ. ದೇಶಕ್ಕೆ ಆಪತ್ತು ಬಂದಾಗ, ಪ್ರಪಂಚದಲ್ಲಿ ಅಡ್ಡಿ ಆತಂಕ ಬಂದಾಗ, ಏನಾದರೂ ಒಂದಿಷ್ಟು ಆಸ್ತಿ ಪಾಸ್ತಿಯನ್ನು ಉಪಜೀವನಕ್ಕಾಗಿ ಇಟ್ಟುಕೊಂಡಿದ್ದಂಥ ಬಂಗಾರವನ್ನು ಶ್ರೀಮಂತರಲ್ಲಿ ಅಡವಿಟ್ಟು ತಮ್ಮ ಕಷ್ಟಗಳನ್ನು ದೂರುಮಾಡಿಕೊಳ್ಳುವಂಥಾ ಬಂಗಾರವನ್ನು, ದೇಶ ಕ್ಕಾಗಿ, ದೇಶದ ಮೇಲೆ ಬಂದಂಥ ಗಂಡಾಂತರ ನಿವಾರಣೆಗಾಗಿ ಕೊಟ್ಟಿದ್ದಾರೆ, 'ನಮ್ಮ ಜಿಲ್ಲೆಯನು ''ಬಂಗಾರ ಜಿಲ್ಲೆ''ಯೆಂದು ಹೇಳಿಕೊಂಡರೆ ಅದು ತಪ್ಪಾದೀತು ಎಂದು ಹೇಳುತ್ತೇನೆ'.

ಅಭಿವೃದ್ಧಿ ದೃಷ್ಟಿಯಿಂದ ನಮ್ಮ ಜಿಲ್ಲೆಗೆ ಎಷ್ಟು ಪ್ರಾತಿನಿಧ್ಯ ಕೊಡಬೇಕಾಗಿತ್ತೋ ಅದನ್ನು ಕೊಡದೇ ಇರುವುದಕ್ಕೆ ವಿಷಾದ ಪಡುತ್ತೇನೆ.

ಆಲಮಟ್ಟಿ ಮತ್ತು ನಾರಾಯಣಪುರದ, ಅಪ್ಪರ್ ಕೃಷ್ಣಾ ಅಣೆಕಟ್ಟು ಯೋಜನೆಯನ್ನು ತೆಗೆದು ಕೊಳ್ಳುವ ವಿಷಯ ನಮ್ಮ ಜಿಲ್ಲೆಯಲ್ಲಿ ಎಲ್ಲರೂ ಒಂದು ವಿಚಾರ ಮಾಡುವಂತಹ ಪ್ರಸಂಗವಾಗಿದೆ.

(ಶ್ರೀ ಜೆ. ಎಲ್. ಕಬಾಡಿ)

ಆಲಮಟ್ಟಿಯಲ್ಲಿ ಆಗಲೇ ಬೇಕೆಂದು ವಿಜಾಪುರದ ಜನರು ಒತ್ತಾಯ ಪಡಿಸುತ್ತಾ ಇದ್ದಾರೆ ಮತ್ತು ನಾರಾಯಣಪುರದಲ್ಲೂ ಇದರೊಡನೆ ಆಗಬೇಕೆಂದು ಹೇಳುತ್ತಾ ಇದ್ದಾರೆ. ಆಲಮಟ್ಟಿಯಲ್ಲಿ ಬರಿ ತಳಹದಿ ಕಲ್ಲನ್ನು ಹಾಕಿ, ಮೊದಲು ನಾರಾಯಣಪುರದ ಯೋಜನೆಯನ್ನು ತೆಗೆದುಕೊಂಡು ದೊಡ್ಡ ಯೋಜನೆ ಮಾಡಿ ಆಲಮಟ್ಟಿಯಲ್ಲಿ ಚಿಕ್ಕ ಯೋಜನೆಯನ್ನು ಮಾಡಿದ್ದೇ ಆದರೆ ನಮ್ಮ ಜಿಲ್ಲೆಯ ಭೂಮಿಗೆ ನೀರು ಸಿಕ್ಕಲಿಕ್ಕಿಲ್ಲ ಎಂಬ ಶಂಕೆ ನಮ್ಮಲ್ಲಿ ಇದೆ.

ಶ್ರೀ ಬಿ. ಡಿ. ಜತ್ತಿ.—ಇವ್ಯಾಜಿನೇಷನ್.

ಶ್ರೀ ಜಿ. ಎಲ್. ಕಬಾಡಿ.—ಅದಕ್ಕೇ ಈ ಯೋಜನೆಯನ್ನು ಕೈಬಿಡುವುದಿಲ್ಲ; ಮಾಡಿಯೇ ತೀರುತ್ತೇನೆ ಎಂದು ಲೋಕೋಪಯೋಗಿ ಮಂತ್ರಿಗಳಾದ ವೀರೇಂದ್ರ ಪಾಟೀಲ್ ಅವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳೂ ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ ಈ ಯೋಜನೆ ಆಗಿಯೇ ಆಗುತ್ತದೆ ಎಂದು ನಾವು ತಿಳಿದುಕೊಂಡಿದ್ದೇವೆ. ಈಗ ನಾರಾಯಣಪುರದಲ್ಲಿ ಕಟ್ಟುವುದರಿಂದ ಜನತೆಗೆ ಏನು ತೊಂದರೆ ಮತ್ತು ಜನತೆಗೆ ಲುಕ್ಸಾನು ಹೇಗೆ ಆದೀತು ಎಂಬುದನ್ನು ನಾವು ವಿಚಾರಮಾಡಿದರೆ ದೋಣ್ ರಿವರ್ ಮತ್ತು ಯಮನಾರಪ್ಪನ ಹಳ್ಳ ಎರಡು ಕೂಡಿ ಅದು ಉಪ್ಪು ನೀರಿನ ಹೊಳೆಯಾಗಿ ನಾರಾಯಣಪುರದ ಹತ್ತಿರ ಕೂಡುವುದರಿಂದ ಅಲ್ಲಿ ಆಣೆ ಕಟ್ಟಿದರೆ ಆ ಪ್ರದೇಶದಲ್ಲಿ ಉಪ್ಪು ಸಂಗ್ರಹವಾಗಿ ಅಲ್ಲಿರತಕ್ಕ ಜಮೀನೆಲ್ಲಾ ಸವಳು ಭೂಮಿ ಆದೀತು ಎಂದು ತಿಳಿದುಕೊಳ್ಳುವಂತಹ ಸಂಗತಿ ಇದೆ.

Sri B. D. JATTI.—For the information of the Hon'ble Member I may state that experiments are being tried by the Agricultural Department to find out whether the DON river water can be used for agriculture. They say, by research, that it is good and it can be made useful. So, he need not be afraid it.

ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಅರ್ಥ ಮಂತ್ರಿಗಳು ತಿಳಿವಳಿಕೆ ಕೊಟ್ಟದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಈ ದೋಣ್ ರಿವರ್ ಮೇಲಿನ ಭಾಗದಲ್ಲಿ ಯಾವ ಯಾವ ಭಾಗದಲ್ಲಿ ಅದು ಹಾದು ಹೋಗುತ್ತದೆಯೋ ಅಲ್ಲಿ ಸವಳು ಭೂಮಿ ಆಗುತ್ತಾ ಇದೆ. ಅದು ನಾಳೆ ನಾರಾಯಣಪುರದ ಹತ್ತಿರ ಕೂಡುವುದರಿಂದ ಅಲ್ಲೂ ಸವಳು ಭೂಮಿ ಆದೀತು ಎಂಬ ಶಂಕೆ ಬಹಳ ಜನರಲ್ಲಿ ಇದೆ. ಅದನ್ನು ಮಾನ್ಯ ಮಂತ್ರಿಗಳು ಕ್ಲಿಯರ್ ಮಾಡುವುದು ಉಚಿತ. ಆಲಮಟ್ಟಿಯ ವಿಚಾರವನ್ನು ತೆಗೆದುಕೊಂಡರೆ ನಮ್ಮ ಜಿಲ್ಲೆಯಲ್ಲಿ ಕನಿಷ್ಠ 3 ಲಕ್ಷ ಎಕರೆ ಭೂಮಿ ನೀರು ಉಣ್ಣುತ್ತದೆ, ಮತ್ತು ಗುಲ್ಬರ್ಗದಲ್ಲಿ 3 ಲಕ್ಷ ಎಕರೆ ಭೂಮಿ ನೀರು ಉಣ್ಣುತ್ತದೆ. ಹೀಗೆ 6 ಲಕ್ಷ ಎಕರೆ ಭೂಮಿಗೆ ಆಲಮಟ್ಟಿಯಿಂದ ನೀರು ದೊರೆಯುವುದರಿಂದ ಆಲಮಟ್ಟಿ ಯೋಜನೆಯನ್ನು ಚಿಕ್ಕದಾದ ಯೋಜನೆಯನ್ನಾಗಿ ಮಾಡುವುದರಿಂದ ಬಹಳ ಲುಕ್ಸಾನದಂತಾಗುತ್ತದೆ. ನಮ್ಮ ಜಿಲ್ಲೆಗೆ ಸಿಕ್ಕತಕ್ಕ ಲಾಭ ಸಿಕ್ಕಲಿಕ್ಕಿಲ್ಲ. ಆ ವಿವರವನ್ನು ಮಾನ್ಯ ಮಂತ್ರಿಗಳು ತಿಳಿದುಕೊಂಡು ನಮಗೆ ತಿಳಿಸಬೇಕಾಗಿ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲ ಹೆಚ್ಚು ನೀರು ನಿಲ್ಲುವುದಾದರೆ ಅಲ್ಲಿ 30 ಲಕ್ಷ ಕಿಲೋವಾಟ್ ಪವರ್ ಕೂಡ ಉತ್ಪನ್ನವಾಗುತ್ತದೆ ಎಂದು ನಮಗೆ ತಿಳಿದು ಬಂದಿದೆ.

ಇನ್ನು ನಮ್ಮ ರಾಜ್ಯದಲ್ಲಿ ಸುಪ್ರೀಂಕೋರ್ಟ್ ನಿರ್ಣಯದಂತೆ ಷೆಡ್ಯೂಲ್‌ಕ್ಯಾಸ್ಟ್ ಸರ್ವೀಸ್ ದಾರರಿಗೆ ಪ್ರೊಮೋಷನ್ ವೇಕೆನ್ಸಿ ಬಂದಾಗ ಪರ್ಸೆಂಟೇಜ್ ಮೇಲೆ ಅವರಿಗೆ ಪ್ರಮೋಷನ್ ಕೊಡಬೇಕೆಂದು ಮೇಲಿಂದ ಮೇಲೆ ಸರಕಾರದವರನ್ನು ಒತ್ತಾಯಪಡಿಸುತ್ತಾ ಇದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರಕಾರದ ಆದೇಶ ಬರುವವರೆಗೂ ಏನೂ ಮಾಡಲಿಕ್ಕೆ ಆಗುವುದಿಲ್ಲ, ಅವರು ಆದೇಶ ಕೊಡುತ್ತಾ ಇದ್ದಾರೆ, ಅದು ಬಂದ ತಕ್ಷಣ ಅದನ್ನು ಜಾರಿಗೆ ಕೊಡುತ್ತೇವೆ ಎಂದು ಹೇಳಿದ್ದರು. ಕೇಂದ್ರ ಸರಕಾರದಿಂದ ಈಗಾಗಲೇ ಒಂದು ಆದೇಶ ಬಂದಿದೆ, ಅದು ಬಂದು ಎರಡು ತಿಂಗಳು ಆಯಿತು, ಆದರೆ ಅದನ್ನು ಕಾರ್ಯಗತ ಮಾಡದೇ ಇರುವುದರಿಂದ ನಿಜವಾಗಿಯೂ ನಮಗೆ ಬಹಳ ವಿಷಾದವಾಗಿದೆ. ಈ ವಿಷಯ ನಮ್ಮ ಸ್ಟೇಟ್ ಷೆಡ್ಯೂಲ್ ಕ್ಯಾಸ್ಟ್ ಅಡ್ವೈಸರಿ ಸಬ್ ಕಮಿಟಿಯಲ್ಲಿ ಬಂದಾಗ ಅದಕ್ಕೆ ಸಂಬಂಧಿಸಿದಂತಹ ಸಿಬ್ಬಂದಿಯವರು ಸೆಂಟ್ರಲ್ ಗವರ್ನಮೆಂಟಿನಿಂದ ಈ ಆದೇಶ ಬಂದಿದೆ; ಅದನ್ನು ಹೈಲೆವಲ್‌ನಲ್ಲಿ ತೀರ್ಮಾನ ಮಾಡಬೇಕಾಗಿರುವುದರಿಂದ—ಅವರು ಯಾವುದೂ ಒಂದು ನಿರ್ಣಯವನ್ನು ತೆಗೆದುಕೊಳ್ಳದೇ ಇರುವುದರಿಂದ—ಅದನ್ನು ಕಾರ್ಯಗತ

ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ನಮ್ಮ ಉಪಮಂತ್ರಿಗಳಾದ ಮಾನ್ಯ ಮಲ್ಲಿಕಾರ್ಜುನ ಸ್ವಾಮಿಗಳವರು ಅದಕ್ಕೆ ಚೇರ್ಮನ್ ಆಗಿದ್ದರು. ಅವರ ಮುಂದೆಯೂ ಈ ಸಂಗತಿ ಬಂದಿತ್ತು. ಅದಕ್ಕೆ ಈ ಮಾತನ್ನು ಹೇಳಬೇಕಾಗಿದೆ. ಪ್ರಮೋಷನಲ್ ವೇಕೆನ್ಸಿಯ ಬಗ್ಗೆ ಇಷ್ಟು ತಡಮಾಡಬೇಕಾದ ಕಾರಣವೇ ಇರಲಿಲ್ಲ. ಹಿಂದುಳಿದವರ ಹಕ್ಕು ಬಾಧ್ಯತೆಗಳನ್ನು ಕಾಪಾಡುತ್ತೇವೆ ಎಂದು ಹೇಳಿ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಯಾವಾಗ ನಮ್ಮ ಸರಕಾರದವರು ಇಚ್ಛೆ ಮಾಡಿದ್ದಾರೆಯೋ ಆಗ ಕಾರ್ಯರೂಪದಲ್ಲಿ ತರಲು ಏಕೆ ನಿಧಾನ ಮಾಡುತ್ತಾಇದ್ದಾರೆ ಎಂಬ ಮಾತು ನಮ್ಮನ್ನು ಬಹಳ ವಿಚಾರಕ್ಕೆ ಈಡು ಮಾಡಿದೆ. ಪ್ರಮೋಷನಲ್ ವೇಕೆನ್ಸಿಗಾಗಿ ಸರಕಾರಿ ಹುಕುಮನ್ನು ಹೊರಡಿಸಿದೆ ಕ್ಯಾರಿಫಾರ್ವರ್ಡ್ ಬಿಸಿನೆಸ್‌ನ ಸಂಬಂಧ ಸುಪ್ರೀಂಕೋರ್ಟ್ ಆರ್ಡರ್ ಆದ ತಕ್ಷಣ ನೀವು ಕಾರ್ಯದಲ್ಲಿ ತಂದಿದ್ದೀರಿ ಪ್ರಮೋಷನಲ್ ವೇಕೆನ್ಸಿಯಲ್ಲಿ ಅವರಿಗೆ ಯೋಗ್ಯಸ್ಥಾನವನ್ನು ಕೊಡಬೇಕಾಗುತ್ತದೆ ಎಂದು ಸಂಬಂಧಿಸಿದ ಅಧಿಕಾರಿಗಳೇ ವಿಚಾರಿಸ ತೊಡಗಿದಾರೆ—ಏಕೆ ತಡವಾಯಿತು ಎಂಬುದನ್ನು ಸ್ವಲ್ಪ ಕೂಲಂಕಷವಾಗಿ ಹೇಳಬೇಕೆಂದು ನನಗೆ ಅನಿಸುತ್ತದೆ.

ಇನ್ನು ಡಿಪಾರ್ಟ್‌ಮೆಂಟುಗಳಲ್ಲಿ ಈ ಸೀನಿಯಾರಿಟಿ ಪ್ರಶ್ನೆ ಬಹಳ ಗಂಭೀರವಾದ ಪ್ರಶ್ನೆಯಾಗಿ ಕುಳಿತಿದೆ. ಇದರಲ್ಲಿ ನನಗೆ ತಿಳಿದ ಮಟ್ಟಿಗೆ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಲ್ಲಿ ಅಗ್ರಿಕಲ್ಚರಲ್ ಮಿನಿಸ್ಟರರು ಇವತ್ತು, ನಾಳೆ ಅಥವಾ ಇನ್ನು ಎಂಟು ದಿವಸದಲ್ಲಿ ಆ ಲಿಸ್ಟನ್ನು ಹೊರಪಡಿಸುತ್ತೇವೆ, ಪ್ರಮೋಷನ್ ಕೊಡಿಸುತ್ತೇವೆ ಎಂದು ಹೇಳಿಕೊಂಡು ಬಂದು ಇಲ್ಲಿಯವರೆಗೂ 7 ವರ್ಷ ಆಯಿತು, ಇನ್ನೂ ಏನನ್ನೂ ಮಾಡಿಲ್ಲ. ಬೊಂಬಾಯಿನಲ್ಲಿ ಯಾರು ಅಗ್ರಿಕಲ್ಚರಲ್ ಗ್ರ್ಯಾಜ್ಯುಯೇಟ್ಸ್ ಇದ್ದರೋ ಅವರನ್ನು ಮಾತ್ರ ಸೆಕೆಂಡ್ ಗ್ರೇಡ್ ಆಫೀಸರ್ಸ್ ಎಂದು ಕರೆಯುತ್ತಾ ಇದ್ದರು. 8-10 ವರ್ಷ ಸರ್ವೀಸ್ ಆದನಂತರ ಮೆರಿಟ್ ಪ್ರಕಾರ ಅವರನ್ನು ಫಸ್ಟ್‌ಗ್ರೇಡ್ ಆಫೀಸರ್ಸ್ ಎಂದು ಟ್ರೀಟ್ ಮಾಡುತ್ತಾ ಇದ್ದರು. ಇಲ್ಲಿ ಮೈಸೂರಿನಲ್ಲಿ ಯಾರು ಗ್ರ್ಯಾಜ್ಯುಯೇಟ್ ಆಗಿ ಹೊಸದಾಗಿ ನೌಕರಿಗೆ ಸೇರುತ್ತಾರೋ ಅವರನ್ನು ಫಸ್ಟ್‌ಗ್ರೇಡ್ ಆಫೀಸರ್ ಎಂದು ಹೇಳುತ್ತಾರೆ. ಲೈಸೆನ್ಸಿಯೇಟ್ ಇನ್ ಅಗ್ರಿಕಲ್ಚರ್ ಎಂದು ಡಿಪ್ಲೋಮಾ ಮಾಡಿದವರನ್ನು ಸೆಕೆಂಡ್ ಗ್ರೇಡ್ ಇನ್ಸ್‌ಪೆಕ್ಟರ್ಸ್ ಎಂದು ಕರೆಯುತ್ತಾ ಇದ್ದರು, ರೀ ಆರ್ಗನೈಸೇಷನ್ ಆದ ಮೇಲೆ ಅವರನ್ನು ಫಸ್ಟ್‌ಗ್ರೇಡ್ ಆಫೀಸರ್ಸ್ ಎಂದು ಕರೆಯುತ್ತಾ ಇದ್ದಾರೆ. ಅಲ್ಲಿ 15–20 ವರ್ಷ ಸರ್ವೀಸ್ ಮಾಡಿದವರನ್ನೂ ಇಲ್ಲಿ ಕೇವಲ ಎರಡು ವರ್ಷ ಸರ್ವೀಸ್ ಮಾಡಿದವರನ್ನೂ ಒಂದೇ ರೀತಿಯಾಗಿ ಈಕ್ವೇಟ್ ಮಾಡಬೇಕೆಂಬ ವಿಚಾರ ಇದೆ ಎಂದು ತಿಳಿದು ಬಂದಿದೆ. ಆ ರೀತಿ ಮಾಡಿದರೆ ಅನ್ಯಾಯ ಮಾಡಿದಂತಾಗುತ್ತದೆ, ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಹೊಸ ಮೈಸೂರು ಹಳೇ ಮೈಸೂರು ಎಂಬ ಭಾವನೆಯನ್ನು ತಾಳದೆ ಎಲ್ಲರಿಗೂ ಸರಿಯಾಗಿ ನ್ಯಾಯವನ್ನು ದೊರಕಿಸಿ ಕೊಡಬೇಕು, ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು, ಇದು ಮಾನ್ಯ ಮಂತ್ರಿಗಳ ಆದ್ಯ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅಗ್ರಿಕಲ್ಚರಲ್ ಡಿಪಾರ್ಟಮೆಂಟಿನಲ್ಲಿ ಒಂದು ಆರ್ಡರ್ ಹೊರಡಿಸಿದ್ದಾರೆ. ಅದೇನೆಂದರೆ ಸೆಕೆಂಡ್ ಗ್ರೇಡ್ ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರುಗಳನ್ನೂ, ಅಗ್ರಿಕಲ್ಚರಲ್ ಗ್ರ್ಯಾಜ್ಯುಯೇಟುಗಳನ್ನೂ ಒಂದೇ ರೀತಿಯಾಗಿ ಈಕ್ವೇಟ್ ಮಾಡಬೇಕೆಂದು ಮಾಡಿದ್ದಾರೆ. ಇದರಿಂದ ಎಂತಹ ಅನ್ಯಾಯವಾಗುತ್ತದೆ ಎಂಬುದನ್ನು ಲೆಕ್ಕಾಚಾರ ಹಾಕಿ ನೋಡಿದ್ದೇ ಆದರೆ 15-20 ವರ್ಷ ಸರ್ವೀಸ್ ಮಾಡಿದ ಒಬ್ಬ ಗ್ರ್ಯಾಜ್ಯುಯೇಟ್ ಫಸ್ಟ್‌ಗ್ರೇಡ್ ಆಫೀಸರ್ ಆದವನನ್ನೂ ಎರಡು ಮೂರು ವರ್ಷ ಸರ್ವೀಸ್ ಮಾಡಿದ ಒಬ್ಬ ಡಿಪ್ಲೊಮಾ ಹೋಲ್ಡರನನ್ನೂ ಒಂದೇ ರೀತಿಯಾಗಿ ಈಕ್ವೇಟ್ ಮಾಡುತ್ತಾ ಇದ್ದಾರೆ.

ಈಗ ಎಂ.ಎಸ್.ಆರ್.ಟಿ.ಸಿ.ಯಲ್ಲಿ ನಡೆದಿರುವ ವಿಷಯಗಳನ್ನು ಹೇಳುತ್ತೇನೆ. ಬಿ.ಟಿ.ಎಸ್.ನಲ್ಲಿ ಇದುವರೆಗೆ ಲಾಭ ಬಾರದಿರುವುದರಿಂದ ಯಾರಾದರೂ ಮುಂದೆ ಬಂದರೆ ಅವರಿಗೆ ಅದನ್ನು ವಹಿಸಲು ಸಿದ್ಧರಾಗಿರುವುದಾಗಿ ಮಂತ್ರಿಗಳು ಹೇಳಿದ್ದಾರೆ. ಏಕೆಂದರೆ ಅಲ್ಲಿ ಆಗುವ ನಷ್ಟ, ಅಕ್ರಮಗಳನ್ನು ನೋಡಿ ಅವರಿಗೆ ಬೇಜಾರಾಗಿದೆ. ಇದನ್ನು ನೋಡಿದರೆ ಇದು ನಿಜವಾಗಿಯೂ ಬಹಳ ಹಾಸ್ಯಾಸ್ಪದವಾದ ಸಂಗತಿ ಎಂದು ಅನ್ನಿಸುತ್ತದೆ.

ಶ್ರೀ ಬಿ. ಡಿ. ಜತ್ತಿ.—ಅವರು ದಯೆಯಿಟ್ಟು ತಿದ್ದಿಕೊಳ್ಳಬೇಕು. ಹಾಗೆ ಅವರು ಹೇಳಲಿಲ್ಲ. ಅಂಥ ಪ್ರಸಂಗ ಬಂದರೆ ವಿಚಾರಮಾಡುತ್ತೇವೆಂದು ಹೇಳಿದರು.

ಶ್ರೀ ಜೆ. ಎಲ್. ಕಬಾಡಿ.—ರಸ್ತೆ ಸಾರಿಗೆ ರಾಷ್ಟ್ರೀಕರಣ ಮಾಡುತ್ತಿರುವಾಗ ಅಷ್ಟು ಕೂಡ ಹೇಳುವುದು ಉಚಿತವಲ್ಲವೆಂದು ನನಗೆ ಕಾಣುತ್ತದೆ. ರಸ್ತೆ ಸಾರಿಗೆ ರಾಷ್ಟ್ರೀಕರಣ ಮಾಡಬೇಕೆಂಬ ಧೋರಣೆ ಇರುವಾಗ ನಮ್ಮ ರಾಜ್ಯದಲ್ಲಿ ಚಿಂತಾಮಣಿ, ಕೋಲಾರ, ಆನೆಕಲ್ಲು ಮುಂತಾದ ಕಡೆ ಎಷ್ಟು ನಷ್ಟವಾಗುತ್ತಿದೆ ಎಂಬುದನ್ನು ನೋಡಬೇಕು. ಅಲ್ಲಿ ಮೈಲಿಗೆ 30 ನಯೇಪೈಸೆ ಲಾಭ ಸಿಕ್ಕುತ್ತಿದೆ, ಕನಿಷ್ಠಪಕ್ಷ ಎರಡು ರೂಪಾಯಿಗಳಾದರೂ ಸಿಕ್ಕಬೇಕಾಗಿತ್ತು. ಅಲ್ಲಿ ಪ್ರೈವೇಟ್ ಆಪರೇಟರ್ಸ್

(ಶ್ರೀ ಜಿ. ಎಲ್. ಕಬಾಡಿ)

ಪ್ರೈವೇಟ್ ಇರುವುದರಿಂದ ರಾಷ್ಟ್ರೀಕರಣ ಮಾಡುವಾಗ ಏನು ಕಾರ್ಯಕ್ರಮವನ್ನು ಕೈಕೊಳ್ಳ ಬೇಕಾಗಿತ್ತು ಎಂಬುದನ್ನು ಕೂಡ ಸರ್ಕಾರ ಯೋಚನೆಮಾಡಿಲ್ಲ. ಕೆಲವು ದಿನಗಳ ಹಿಂದೆ ನಾನು ದಸರಾ ಎಗ್ಜಿಬಿಷನ್ ಕಮಿಟಿ ಮೀಟಿಂಗಿಗಾಗಿ ಮೈಸೂರಿಗೆ ಹೋದಾಗ ಮೈಸೂರು-ಬೆಂಗಳೂರು ರಸ್ತೆಯಲ್ಲಿ ಓಡಾಡುವ ಬಸ್ಸುಗಳನ್ನು ನೋಡಿದಾಗ ಜನರು ಹೆಚ್ಚಾಗಿ ಪ್ರೈವೇಟ್ ಬಸ್ಸುಗಳಿಗೇ ಹೋಗುತ್ತಿದ್ದುದು ಕಂಡುಬಂತು. ಕಾರಣ ಖಾಸಗಿ ಬಸ್ಸುಗಳಲ್ಲಿ ಛಾರ್ಜು 3ರೂ–20 ನ.ಪೈ. ಇರುವಾಗ ಕಾರ್ಪೊರೇಷನ ಬಸ್ಸುಗಳಲ್ಲಿ 4ರೂ.–20 ನ.ಪೈ. ಇದೇ ರೀತಿ ಸರ್ಕಾರಿ ಬಸ್ಸುಗಳಲ್ಲಿ ದರ ಹೆಚ್ಚಾಗಿರುವುದೂ ನಷ್ಟವಾಗಲು ಒಂದು ಕಾರಣ. ಅಲ್ಲದೆ ಕಾರ್ಪೊರೇಷನ್ನಿನಲ್ಲಿ ದಕ್ಷರಾದ ಜನರಿಲ್ಲ ಎಂದು ತೋರುತ್ತದೆ. ಏಕೆಂದರೆ ಕೇವಲ ರಿಟೈರ್ ಆದ ಜನರಿಗೆ ಬಡ್ತಿ ಕೊಡುತ್ತಿದ್ದಾರೆ, ಟೆಕ್ನಿಕಲ್ ಪರ್ಸನ್ಸ್ ಇಲ್ಲವೆಂದು ಕಾಣುತ್ತದೆ. ಮತ್ತೊಂದು ಛಾಸಿಸ್ ಖರೀದಿ ಮಾಡುವಾಗ ನೇರವಾಗಿ ಮಾಡಿದರೆ ಒಂದೂವರೆ ಲಕ್ಷ ರೂಪಾಯಿ ಉಳಿತಾಯ ಮಾಡಬಹುದಾಗಿತ್ತು. ಆ ಕೆಲಸವನ್ನು ಇನ್ ಡೈರೆಕ್ಟಾಗಿ ಖರೀದಿ ಮಾಡುವುದರಿಂದ ನಷ್ಟವಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದ್ದರು. ಆದರೆ ಕೋರ್ಟಿನಲ್ಲಿ ನಿಲ್ಲಲಿಲ್ಲ. ಆದರೆ ಅಲ್ಲಿ ಸದ್ಯ ಹೊಸದಾಗಿ ಕಟ್ಟಡಗಳನ್ನು ಇನ್ನೂ ಕಟ್ಟಿಸುತ್ತಾ ಇದ್ದಾರೆ. ಅಲ್ಲಿ ಮೋಟಾರನ್ನು ನಡೆಸದೇ ಇರುವಾಗ ಅದಕ್ಕೇಕೆ ಕಾರ್ಯಕ್ರಮ ಕೈಕೊಂಡು ನಷ್ಟಮಾಡಿಕೊಳ್ಳಬೇಕು ? ಅಲ್ಲಿ ರಾಷ್ಟ್ರೀಕರಣ ಮಾಡುವಾಗ ಕೇವಲ ರಸ್ತೆ ಯೋಜನೆ ಕೈಗೊಂಡಿದ್ದರೆ ಯಾವ ತೊಂದರೆಯೂ ಬರುತ್ತಿರಲಿಲ್ಲ. ರಸ್ತೆ ಯೋಜನೆ ಕೈಗೊಳ್ಳಬೇಕಾಗಿತ್ತು, ಡಿವಿಜನ್ ಯೋಜನೆ ಮತ್ತು ಜಿಲ್ಲಾ ಯೋಜನೆ ಕೈಗೊಂಡಿದ್ದು ತಪ್ಪು ಎಂದು ಹೈಕೋರ್ಟು ಮತ್ತು ಸುಪ್ರೀಂ ಕೋರ್ಟುಗಳಲ್ಲಿ ತೀರ್ಮಾನವಾಗಿದೆ. ಹಾಸನದಲ್ಲಿ ಈ ಯೋಜನೆಯನ್ನು ಕೈಕೊಂಡಾಗ ಅಲ್ಲಿ ತೊಂದರೆಯಾಗಲಿಲ್ಲ. ಹಾಗೆ ಬಳ್ಳಾರಿಯಲ್ಲೂ ಏಕೆ ಮಾಡಲಿಲ್ಲ? ಎಂ.ಎಸ್.ಆರ್.ಟಿ.ಸಿ.ಯಲ್ಲಿರುವ ಅಧಿಕಾರಿಗಳು ಕೇವಲ-ಪಕ್ಷಪಾತದಿಂದ ಮತ್ತು ರೀಜನಲ್ ಫೀಲಿಂಗಿನಿಂದ ನಡೆಯುತ್ತಿರುವುದರಿಂದ ಅಲ್ಲಿನ ಆಡಳಿತ ಕುಂಠಿತವಾಗಿದೆ ಎಂದು ಹೇಳಬಹುದು. ಗುಲ್ಬರ್ಗ, ಬಿಜಾಪುರ ಮತ್ತು ಬೆಂಗಳೂರು ಡಿವಿಜನ್‌ನಲ್ಲಿ ಒಬ್ಬ ನೌಕರ ಸಸ್ಪೆಂಡಾಗಿ ಎರಡು ವರ್ಷಗಳಾಗಿದ್ದರೂ ಆ ಕೇಸು ಇನ್ನೂ ತೀರ್ಮಾನವಾಗಿಲ್ಲ. ಇದರಿಂದ ಎಷ್ಟು ಅಪಾಯವಾಗುತ್ತದೆ ಎಂಬುದನ್ನು ಗಮನಿಸಬೇಕು. ಸ್ಟೋರ್ಸ್ಸನ್ನು ಯಾವ ರೀತಿ ಇಡಬೇಕೋ ಆ ರೀತಿ ಇಟ್ಟಿಲ್ಲ. ಕಳ್ಳತನ ಬೇರೆ ಆಗಾಗ್ಗೆ ಆಗುತ್ತಿದೆ. ಉತ್ಪತ್ತಿಯಾಗುವ ಡಿವಿಜನ್ನುಗಳಲ್ಲಿರುವ ಕಾರ್ಮಿಕರಿಗೆ ಹೆಚ್ಚು ಸೌಲತ್ತು ಕೊಡಬೇಕು ಎಂದು ಕೇಳಿದರೆ ನಷ್ಟವಾಗಿದೆ, ಕೇವಲ 4-5 ಪರ್ಸೆಂಟ್ ಉತ್ಪತ್ತಿ ಇದೆ, ಒಪ್ಪಂದದ ಪ್ರಕಾರ 7 ಮತ್ತು 9 ಪರಸೆಂಟಿಗೆ ಮುಟ್ಟಿಲ್ಲ, ಆದುದರಿಂದ ಬೋನಸ್ ಇಲ್ಲ ಎಂದು ಹೇಳುತ್ತಾರೆ. ಇದರಿಂದ ಅನ್ಯಾಯವಾಗಿದೆ, ಪೇಸ್ಕೇಲ್ಸ್ ಮತ್ತು ಸರ್ವಿಸ್ಸಿನಲ್ಲೂ ಅನ್ಯಾಯವಾಗಿದೆ. ಪೇಸ್ಕೇಲ್ ರಿವಿಷನ್ ಮಾಡುವಾಗ ಕಾರ್ಮಿಕರ ಒಡಂಬಡಿಕೆ ಕಾರ್ಪೊರೇಷನ್ ಮುರಿದಿದೆ. ಹಾಗೆ ಮಾಡಿದಾಗ ಮತ್ತೊಂದು ಬೇಡಿಕೆಯನ್ನು ಫೆಡರೇಷನ್ನಿನಿಂದ ಮಂಡಿಸುವುದಿದೆ. ಆ ಬೇಡಿಕೆಗೆ ಮಾನ್ಯತೆ ಕೊಡದೆ ಕಾರ್ಪೊರೇಷನಿನ ಛೇರ್ಮನ್ನರು ಅನ್ಯಾಯ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಜೀವನಸೂಚಿ ವೆಚ್ಚದ ಅಂಕಿ ಕೂಡ ಜಾಸ್ತಿಯಾಗಿದೆ. 40 ರೂಪಾಯಿ ಬೆಲೆ ಬಾಳುತ್ತಿದ್ದುದು 70 ರೂಪಾಯಾಗಿದೆ. ಈ ಎಲ್ಲಾ ರೀತಿಯಿಂದ ನೋಡಿದರೆ ಕಾರ್ಮಿಕರಿಗಾಗುವ ಅನ್ಯಾಯವನ್ನು ಸರಿಪಡಿಸಿಲ್ಲವೆಂಬುದು ಕಂಡುಬರುತ್ತದೆ. ಕ್ಯಾಷಿಯರ್ ಮಾಡುವ ಹಣದ ಪೋಲು ಮುಂತಾದುಗಳ ಬಗ್ಗೆ ಕ್ರಮ ತೆಗೆದುಕೊಳ್ಳದೆ ಟಿಕೆಟ್ ಪಂಚ್ ಮಾಡುವುದನ್ನು ಬಿಟ್ಟು ಕಾರ್ಮಿಕರನ್ನು ಮನೆಗೆ ಕಳುಹಿಸುತ್ತಿದ್ದಾರೆ. ಆದರೆ ಬೆಂಗಳೂರು-ಮೈಸೂರುಗಳಲ್ಲಿರುವವರಿಗೆ ಅನ್ಯಾಯವಾಗಿಲ್ಲ, ಅವರು ಹೇಗೋ ಉಳಿದುಕೊಂಡಿದ್ದಾರೆ. ಟ್ರಾನ್ಸ್‌ಪೋರ್ಟ್‌ಗೆ ಸಂಬಂಧಪಟ್ಟ ಮಿನಿಮಂ ವೇಜಸ್ ಆಕ್ಟ್, ಪೇಮೆಂಟ್ ಆಫ್ ವೇಜಸ್ ಆಕ್ಟ್, ಮತ್ತು ಟ್ರಾನ್ಸ್‌ಪೋರ್ಟ್ ಕೆಲಸಗಾರರ ಆಕ್ಟ್‌ಗಳನ್ನು ಯಾವ ರೀತಿ ಜಾರಿಗೆ ತರಬೇಕೋ ಆ ರೀತಿ ತರದೆ ಇರುವುದರಿಂದ ಅನ್ಯಾಯವಾಗುತ್ತಿದೆ. ಈ ಬಗ್ಗೆ ಬಹಳ ದಿವಸಗಳಿಂದ ಒತ್ತಾಯ ಮಾಡುತ್ತಿದ್ದೇವೆ. ಮಾನ್ಯ ಲೇಬರ್ ಮಂತ್ರಿಗಳಲ್ಲಿ ಒತ್ತಾಯ ಮಾಡಿದ್ದೇವೆ. ಹಾಗೆ ಮಾಡಿದರೂ ಅನ್ಯಾಯವಾಗುತ್ತಿದೆ. ಇದನ್ನು ತಪ್ಪಿಸಬೇಕಾದರೆ ಮಂತ್ರಿಗಳು ಛೇರ್ಮನ್ ಆಗಿರುವುದಕ್ಕೆ ಬದಲಾಗಿ ನಾನ್-ಅಫಿಷಿಯಲ್ ಛೇರ್ಮನ್ ಮಾಡುವುದು ಒಳ್ಳೆಯದು ಎಂದು ಸೂಚಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಸ್ವಾಮಿ, ಅಧ್ಯಕ್ಷರೇ, 1964–65ನೆಯ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ನಮ್ಮ ರಾಜ್ಯದ ಆರ್ಥಿಕ ಮಂತ್ರಿಗಳು ಬಹಳ ಕುತಂತ್ರ ನಡೆಸಿ ಸಭೆಯ ಮುಂದೆ ಇಟ್ಟಿದ್ದಾರೆ. ನನಗೆ ಈ ಪಟ್ಟಿಯನ್ನು ನೋಡುವಾಗ ಚಂದ್ರಗುಪ್ತನ ಕಾಲದಲ್ಲಿದ್ದ ಚಾಣಕ್ಯನ ನೆನಪಾಯಿತು. ಜತ್ತಿಯವರು ನಿಜಲಿಂಗಪ್ಪನವರ ಕಾಲದ ಚಾಣಕ್ಯರಾಗಿ ಜನರಿಗೆ

ಮತ್ತು ಮಾನ್ಯ ಸಭೆಗೆ ಬೇಕಾದ ಅಂಕಿಅಂಶ ಬಿಚ್ಚಿಟ್ಟು 7 ಲಕ್ಷ ರೂಪಾಯಿಗಳ ಹೆಚ್ಚುವರಿ ಆಯವ್ಯಯ ಪಟ್ಟಿಯನ್ನು ಸಭೆಯಮುಂದೆ ಇಟ್ಟಿದ್ದಾರೆ. ಇದು ಬಂಡವಾಳವಿಲ್ಲದ ಜತ್ತಿಯವರ ಬಡಾಯಿ ಎಂದು, ಎಲ್ಲಿ ನೋಡಿದರೂ ಏನೂ ಬಂಡವಾಳವಿಲ್ಲವೆಂದೂ ನಾನು ಹೇಳಬಯಸುತ್ತೇನೆ.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ದೇಶಕ್ಕೆ 250 ಕೋಟಿ ರೂಪಾಯಿಗಳನ್ನು ಗೊತ್ತುಮಾಡಿ, ಅದರಲ್ಲಿ ನಮ್ಮ ಪಾಲಿಗೆ 110 ಕೋಟಿ ಒದಗಿಸಿಕೊಳ್ಳಲು ಬಿಟ್ಟಿದ್ದರಲ್ಲಿ ಆಗಲೇ ಸಾಧಾರಣವಾಗಿ 50 ಕೋಟಿ ರೂಪಾಯಿಗಳ ಕೊರತೆ ಇದೆಯೆಂದು ಅಂದಾಜು ಪಟ್ಟಿಯಲ್ಲಿ ತೋರಿಸಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ತಾವು ಇಲ್ಲಿ ಎಲ್ಲ ವಿಚಾರಗಳನ್ನೂ ಸರಿಯಾಗಿ ತಿಳಿದುಕೊಂಡೇ ಹೇಳುತ್ತಿದ್ದೀರೆಂದು ಭಾವಿಸೋಣ ಮತ್ತು ತಾವು ಎಲ್ಲವನ್ನೂ ಚೆನ್ನಾಗಿ ಹೇಳುತ್ತಿದ್ದೀರಿ. ಆದರೆ 250 ಕೋಟಿಯಷ್ಟು ರೂಪಾಯಿಗಳ ಖರ್ಚು ಮಾಡುವಾಗ ದೊಡ್ಡ ಕ್ಯಾಪಿಟಲ್ ವರ್ಕುಗಳಿಗಾಗಿ ಆಗುವ ಖರ್ಚುಗಳನ್ನು ಮಾಡುವಾಗ ಇನ್ನೂ ಹೆಚ್ಚಾಗಿ ಮಾಡಬೇಕಾಗುತ್ತದೆ. ಆಗ ಅದು 250 ಕೋಟಿಗಿಂತ ಹೆಚ್ಚಾಗಿಬಿಡುತ್ತದೆ. ಅದಕ್ಕೆ ಬೇಕಾಗುವಂತಹ ಹಣವನ್ನು ನಾವು ಎಲ್ಲಿಂದ ತೆಗೆದುಕೊಳ್ಳಬೇಕು ? ದೊಡ್ಡ ಕೆಲಸಗಳನ್ನು ನಾವು ತೆಗೆದುಕೊಂಡು ಬೇಗನೆ ಮುಗಿಸಬೇಕು. ಮೊದಲು ಶರಾವತಿಗಾಗಿ 70 ಕೋಟಿ ಖರ್ಚು ಬರುತ್ತದೆ ಎಂದು ಅಂದಾಜಿತ್ತು. ಈಗ ನೂರು ಕೋಟಿಯಷ್ಟು ಆಯಿತು. ಹಾಗೇ ತುಂಗಭದ್ರಾದಲ್ಲಿ 70 ಕೋಟಿ ಇದ್ದದ್ದು ನೂರು ಕೋಟಿಯಷ್ಟು ಆಯಿತು. ಇದರಲ್ಲೇನೂ ಹೊಸದಾಗಿ ಕುತಂತ್ರವನ್ನೇನೂ ಮಾಡುವುದೇನಿಲ್ಲ. If you want to implement the entire thing, there may be a shortfall of 50 or 60 crores of rupees under the planned items and not on the revenue account.

5-00 P.M.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಡೆವಲಪ್‌ಮೆಂಟು ಮಾಡುವಾಗ ಹೆಚ್ಚಾಗಿ ಹಣ ಬೇಕಾಗುತ್ತದೆ ಎಂದು ಹೆಚ್ಚು ಹೆಚ್ಚಾಗಿ ಕರಭಾರವನ್ನು ಹೊರಿಸಬಹುದು ಎಂದು ಜನತೆ ನಂಬಲಿಕ್ಕೆ ಅವಕಾಶ ಇದೆ. ಕೇಂದ್ರ ಸರ್ಕಾರದವರು ಎಲ್ಲಿ ಖಾಲಿ ಜಾಗ ಇದೆ ಅಲ್ಲಿ ಅದನ್ನು ನೋಡಿಕೊಂಡು ಕರವನ್ನು ಹಾಕಬೇಕು ಎಂದು ಯೋಚನೆ ಮಾಡುತ್ತಿದ್ದಾರೆ ಎಂದು ನನಗೆ ಕಾಣುತ್ತದೆ. ನಾನು ಹೇಳುವುದೇನೆಂದರೆ, ಜನರ ಮೇಲೆ ಇನ್ನೂ ಹೆಚ್ಚಿನ ತೆರಿಗೆಗಳನ್ನು ಹೊರಿಸಲು ಹೋಗಬೇಡಿ. ಅದಕ್ಕೆ ಬದಲು ಬೇರೆ ಏರ್ಪಾಡು ಮಾಡಿಕೊಳ್ಳಬಹುದು. ಜನತೆಯ ಮೇಲೆ ಹೆಚ್ಚಿನ ಹೊರೆಯನ್ನು ಹೊರಿಸಲು ಹೋಗಬೇಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಹೋದ ಸಲ ರೆವಿನ್ಯೂ ಡಿಮ್ಯಾಂಡ್ ಮೇಲೆ ಇಲ್ಲಿ ಮಾತನಾಡಿದ್ದೇನೆ. ಈ ರಾಜ್ಯದಲ್ಲಿ ನಾಲ್ಕು ಡಿವಿಜನಲ್ ಕಮಿಷನರುಗಳ ಹುದ್ದೆಗಳನ್ನು ಮಾಡಿದ್ದಾರೆ. ಇವು ಬರೀ ಪೋಸ್ಟು ಆಫೀಸಿನಂತೆ ಇವೆಯೇ ಹೊರತು ಇದರಿಂದೇನೂ ಕೆಲಸಗಳಾಗುತ್ತಿಲ್ಲ, ಬರೀ ಖಾಲಿ ಆಫೀಸುಗಳಿಗಾಗಿ ನಾಲ್ಕು ಡಿವಿಜನಲ್ಲು ಕಛೇರಿಗಳನ್ನು ತೆಗೆದಿರುವುದಕ್ಕಾಗಿ ಸುಮಾರು ಆರು ಲಕ್ಷದಷ್ಟು ಹಣ ಖರ್ಚಾಗುತ್ತಿದೆ, ಈ ಆಫೀಸುಗಳನ್ನು ರದ್ದುಪಡಿಸಿದರೆ ರಾಜ್ಯಕ್ಕೆ 6 ಲಕ್ಷದಷ್ಟು ಹಣ ಉಳಿತಾಯವಾಗುತ್ತದೆ, ಎಂದು ಇಲ್ಲಿ ಹೇಳಬಯಸುತ್ತೇನೆ. ಹಿಂದೆ ಏನೋ ಮೈಸೂರು ರಾಜ್ಯದಲ್ಲಿ ಒಂದು ಕೌನ್ಸಿಲ್ಲು ಎಂದು ಇತ್ತು ಎಲ್ಡರ್ಸ್ ಸಭೆ ಎಂದು ಮಾಡಿಕೊಂಡಿದ್ದರು. ಅದೇ ನಮೂನೆಯನ್ನೇ ಈಗಲೂ ಅನುಸರಿಸಿ, ಒಂದು ತರಹದ ಹಠ ಹಿಡಿದುಕೊಂಡು ಲೆಜಿಸ್ಲೇಟಿವ್ ಕೌನ್ಸಿಲ್ಲನ್ನು ಮುಂದುವರಿಸಿಕೊಂಡು ಬರುವುದರಿಂದ ಏನು ಪ್ರಯೋಜನವಾಗುತ್ತದೆ ? ಈಗಿರುವ ವಿಧಾನಪರಿಷತ್ತನ್ನು ರದ್ದುಪಡಿಸಿದರೆ ಅನುಕೂಲವಾಗುವುದಿಲ್ಲವೆ ? ಅದನ್ನೇಕೆ ಇಟ್ಟುಕೊಂಡಿರಬೇಕು ? ಇದರಿಂದ ಸಾಧಾರಣವಾಗಿ ವರ್ಷವೊಂದಕ್ಕೆ 2,40,000 ರೂಪಾಯಿಗಳು ಖರ್ಚಾಗುತ್ತವೆ. ಇದನ್ನು ರದ್ದು ಮಾಡಿದರೆ ದೇಶಕ್ಕೆ ಎಷ್ಟೋ ಅನುಕೂಲವಾಗುತ್ತದೆ. ಆದುದರಿಂದ ಈ ಕೌನ್ಸಿಲ್ಲನ್ನು ಖಂಡಿತ ಕ್ಯಾನ್ಸಲ್ಲು ಮಾಡಬೇಕೆಂದು ಹೇಳುತ್ತೇನೆ.

Mr. SPEAKER.—The Hon'ble Member may stop with that so far as the Council is concerned.

Sri C. J. MUCKANNAPPA.—We are entitled......

Mr. SPEAKER.—That is why I did not disallow it.

Sri C. J. MUCKANNAPPA.—It is my opinion that the Upper House is not necessary in this State. Even the Constitution says that if the State wants it, it can have it.

Mr. SPEAKER.—The Hon'ble Member is entitled to his opinion but he must express it at the appropriate time.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತಾವು ಈ ರಾಜ್ಯದಲ್ಲಿ ಪ್ರೊಹಿಬಿಷನ್ ಕಾನೂನು ಎಂದು ಏನು ತಂದಿದ್ದೀರಿ ಅದನ್ನು ಸರಿಯಾಗಿ ಕಣ್ಣು ತೆರೆದು ನೋಡುತ್ತಿಲ್ಲ ಎಂದು ಕಾಣುತ್ತದೆ. ಪ್ರೊಹಿಬಿಷನ್ ಕಾನೂನು ಇಡೀ ಹಿಂದೂ ದೇಶಕ್ಕೆ ಮಾತ್ರ ಸೇರಿದ ಕಾನೂನಲ್ಲ. ನೂರಾರು ವರ್ಷಗಳಿಂದ ಸಾಧನೆ ಮಾಡಿ ತಂದರೂ ಇದು ಎಲ್ಲಾ ದೇಶಗಳಲ್ಲೂ ವಿಫಲವಾಗಿದೆ. ಹೇಗೆ ಆಗಿದೆ ಎನ್ನುವುದಕ್ಕೆ ಸಾಕಷ್ಟು ಅಂಕೆ ಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ. ಉದಾಹರಣೆಗೆ, ರಷ್ಯಾ ದೇಶದಲ್ಲಿ 1940 ರಲ್ಲಿ 1,21,30 ಲಕ್ಷ ಲೀಟರು ಬೀರು ತಯಾರಾಗುತ್ತಿದ್ದುದು 1960 ರಲ್ಲಿ 2,49,80 ಲಕ್ಷದಷ್ಟು ಬೀರು ತಯಾರಾಯಿತು. ಇದು ಸರ್ವಾಧಿಕಾರ ನಡೆಯುತ್ತಿರುವ ದೇಶದ ಮಾತು. ನಮ್ಮ ಹಿಂದೂ ದೇಶದಲ್ಲಿ ಗಾಂಧಿ ತತ್ವದ ವಾದವನ್ನು ಎತ್ತಿ ಹಿಡಿದು ಅದಕ್ಕೆ ಪುರಸ್ಕಾರ ಕೊಡಬೇಕು ಎಂದು ಈ ಪ್ರೊಹಿಬಿಷನ್ನು ಕಾನೂನನ್ನು ಜಾರಿಗೆ ತಂದರು ಅದು ಗಾಂಧಿ ತತ್ವದ ಆಧಾರದ ಮೇಲೆ ಮುಂದುವರಿಯುತ್ತಿದೆಯೇ ಎನ್ನುವುದನ್ನು ತಾವು ನೋಡಬೇಕು. ನಮ್ಮ ಕೇಂದ್ರ ಸರಕಾರದ ಅಂಕಿ ಅಂಶಗಳ ಪ್ರಕಾರ 1957–58ರಲ್ಲಿ 1,49,85,605 ಗ್ಯಾಲನ್ನುಗಳಷ್ಟು ಮಾದಕ ಪದಾರ್ಥಗಳು ತಯಾರಾಗುತ್ತಿದ್ದವು. ಅದೇ 1961–62ನೆಯ ಸಾಲಿನಲ್ಲಿ 2,07,72,487 ಗ್ಯಾಲನ್ನುಗಳಷ್ಟು ತಯಾರಾಗುತ್ತಿದೆ. ಆಗ ಅದರ ಬೆಲೆ 34, 18 ಲಕ್ಷದಷ್ಟು ಇತ್ತು. 1961–62ರಲ್ಲಿ 44, 91 ಲಕ್ಷ ರೂಪಾಯಿಗಳ ಮಾದಕ ಪದಾರ್ಥಗಳು ಉತ್ಪತ್ತಿಯಾಗಿ ಲಾಭ ಪಡೆದಿದ್ದಾರೆ. ಇದು ಸರಕಾರದಿಂದ ಲೈಸನ್ಸು, ಪರ್ಮಿಟ್ಟುಗಳನ್ನು ಪಡೆದುಕೊಂಡು ಮಾರಾಟ ಮಾಡುತ್ತಿರುವ ಲೆಕ್ಕಾಚಾರದಿಂದ ತೆಗೆದಿದ್ದು. ಈ ಲೆಕ್ಕಾಚಾರವಲ್ಲದೆ ಮುಂಬಾಯಿ ಸಿಟಿ ಒಂದರಲ್ಲೇ ಸುಮಾರು 240 ಲಕ್ಷ ಗ್ಯಾಲನ್ನುಗಳಷ್ಟು ಕಳ್ಳಭಟ್ಟಿ ತಯಾರಾಗುತ್ತಿದೆ. ಎಂದರೆ ಇದರ ನೌಕರರಿಗೆ ತಿಂಗಳೊಂದರ ಸಂಬಳಕೊಡಲು ಸುಮಾರು ಸಾಧಾರಣವಾಗಿ 18 ಲಕ್ಷದಷ್ಟು ಖರ್ಚು ಬರುತ್ತದೆ. ಮೈಸೂರು ರಾಜ್ಯದಲ್ಲಿ ಕಳ್ಳಭಟ್ಟಿ ತಯಾರಕರಿಂದ ಪೋಲೀಸು ಇಲಾಖೆಯವರು ಸುಮಾರು 57 ಲಕ್ಷಕ್ಕೆ ಮೇಲ್ಪಟ್ಟು ಮಾಮೂಲು ಪಡೆದು ಆದಾಯ ಸಂಪಾದನೆ ಮಾಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಕಾಪೂ ಎಂದು ಒಂದು ಪೋಲೀಸು ಸ್ಟೇಷನ್ನಿದೆ. ಇಲ್ಲಿ ಪೋಲೀಸರು ತಿಂಗಳೊಂದಕ್ಕೆ 12 ಸಾವಿರ ರೂಪಾಯ ಕಳ್ಳಭಟ್ಟಿ ಕೋರರಿಂದ ಪಡೆಯುತ್ತಾರೆ. ಅಲ್ಲಿ ಎಷ್ಟೊಂದು ಲಂಚರುಷುವತ್ತು ಇದೆ ಎನ್ನುವುದನ್ನು ಹೇಳುವುದೇ ಅಸಾಧ್ಯ. ಪೋಲೀಸಿನವರೂ ಕಳ್ಳಬಟ್ಟಿ ಮಾಡುವವರೊಡನೆ ಸೇರಿಕೊಂಡಿರುವುದರಿಂದ ಜನತೆಯ ನೈತಿಕ ಮಟ್ಟ ದಿನೇ ದಿನೇ ಅಧೋಗತಿಗೆ ಹೋಗುತ್ತಿದೆ. ಇಂತಹ ಪ್ರೊಹಿಬಿಷನ್ ಕಾನೂನನ್ನು ತಂದಿರುವುದರಿಂದ ಜನತೆಯ ನೈತಿಕ ಬೌದ್ಧಿಕ ಮಟ್ಟ ಹಾಳಾಗಿ ಹೋಗಿದೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಜನರ ನೈತಿಕಮಟ್ಟ ಹಾಳಾಗುವುದೊಂದೇ ಅಲ್ಲ. ರಾಜ್ಯದಲ್ಲಿ ಯಾರು ಪೋಲೀಸುಖಾತೆಯಿಂದ ರಕ್ಷಣೆ ಪಡೆಯಬೇಕು ಎಂದು ಇತ್ತೋ ಇಂದು ಅದೆಲ್ಲ ಹಾಳಾಗಿ ಹೋಗುವ ಪರಿಸ್ಥಿತಿ ಬಂದಿದೆ. ಪೋಲೀಸರನ್ನು ಜನತೆಕಾಯುವಸ್ಥಿತಿ ಬಂದಿದೆ. ಪೋಲೀಸಿನವರು ಕಳ್ಳಭಟ್ಟಿ ಮಾಡುವವರ ಹೆಗಲಿನಮೇಲೆ ಕೈ ಹಾಕಿಕೊಂಡು ಧೈರ್ಯದಿಂದ ಓಡಾಡಿಕೊಂಡು ಸಂಪಾದನೆ ಮಾಡುತ್ತಿದ್ದಾರೆ. ಅಲ್ಲದೆ ಕೊಲೆ ಕಳವುಗಳಾದರೂ ಅವನ್ನು ಅವರು ನೋಡುವಂತೆಯೇ ಇಲ್ಲ. ಅಲ್ಲದೆ ಕಳ್ಳಭಟ್ಟಿಕಾರರುಗಳು ಈ ಕೊಲೆ ಕಳವುಗಳ ಮಧ್ಯೆ ದಳ್ಳಾಳಿಗಳು. ಹೀಗಾಗಿ ಅವರು ಬೇಕಾದಹಾಗೆ ಲಾಭ ಪಡೆಯುತಿದ್ದಾರೆ ಮತ್ತು ಬಲಪ್ರದವಾಗಿದ್ದಾರೆ. ಜನರ ಬಾಳನ್ನು ಅನೈತಿಕ ಮಟ್ಟಕ್ಕಿಳೆಯಲು ಇಂತಹವರು ಕಾರಣರಾಗಿದ್ದಾರೆ. ಪ್ರೊಹಿಬಿಷನ್ನು ಕಾನೂನಿನಿಂದ ಖಜಾನೆಯೇನೂ ತುಂಬುತ್ತಿಲ್ಲ. ಕಳ್ಳಭಟ್ಟಿಕಾರರುಗಳ ಜೋಬುಗಳು ತುಂಬುತ್ತಿವೆ. ಜನತೆಯ ನೈತಿಕ ಮಟ್ಟ ಹಾಳಾಗಿ ಹೋಗುತ್ತಿದೆ. ಜನತೆಗೆ ರಕ್ಷಣೆ ಕೊಡುವುದಕ್ಕೆ ಬದಲಾಗಿ ಕೊಡಲಿ ಏಟು ಹಾಕಿದ್ದೀರಿ. ಇದು ಸಾಧುವಲ್ಲ, ಇದಕ್ಕೆ ಬೇಕಾದ ಪುರಾವೆಗಳು ಬೇಕಾದಷ್ಟು ನನ್ನಲ್ಲಿವೆ, ಬೇಕಾದರೆ ಕೊಡುತ್ತೇನೆ.

ಸ್ವಾಮಿ, ನಾನು ನನ್ನ ಸ್ವಂತ ಕ್ಷೇತ್ರದ ಗ್ರಾಮವಾದ ಪಳಪಾರು ಗ್ರಾಮಕ್ಕೆ ಹೋಗಿದ್ದೆ. ನಾನು ಅಲ್ಲಿಗೆ ಹೋಗುವಷ್ಟರಲ್ಲೆ ಪೋಲಿಸಿನವರು ಅಲ್ಲಿ 4–5 ಜನರನ್ನು ಕಳ್ಳಭಟ್ಟಿ ಷರಾಬನ್ನು ತಯಾರಿಸುತ್ತಿದ್ದವರೆಂದು ಅವರನ್ನು ಹಿಡಿದುಕೊಂಡು ಪೋಲಿಸ್‌ಸ್ಟೇಷನ್ನಿಗೆ ಕರೆದುಕೊಂಡು ಹೋದರು. ಹಾಗೆ ಅವರನ್ನು ಅಲ್ಲಿಗೆ ಕರೆದುಕೊಂಡು ಹೋದನಂತರ ಅವರಿಂದ ಒಬ್ಬೊಬ್ಬರಲ್ಲಿ 30 ರೂಪಾಯಿಗಳನ್ನು ಕಸಿದುಕೊಂಡು ಅಲ್ಲಿಂದಾಚೆಗೆ ಅವರು ತಿಂಗಳೊಂದಕ್ಕೆ ಪೋಲೀಸಿನವರಿಗೆ 25 ರೂಪಾಯಿಗಳನ್ನು ಕೊಡುವಂತೆ ಒಂದು ಒಪ್ಪಂದಮಾಡಿಕೊಂಡು ಅವರನ್ನು ಕೈ ಬಿಟ್ಟಿದ್ದಾರೆ. ಈ ವರ್ತಮಾನ ನನಗೆ ಹೀಗೆಂದು ತಿಳಿದುಬಂದಿದೆ. ಸರ್ಕಾರದವರು ಕಳ್ಳಭಟ್ಟಿ ತಯಾರಿಕೆಯನ್ನು ತಡೆಗಟ್ಟಲು ಈ ಪೋಲೀಸಿನವರನ್ನು ನೇಮಕಮಾಡಿದ್ದಾರೆ. ಇದು ತೋಳವನು ಕುರಿಕಾಯುವುದಕ್ಕೆ ನೇಮಕಮಾಡಿದಂತಾಗಿದೆ. ಅದಕ್ಕಾಗಿ ನಾನು ಈಗ ಹೇಳುವುದೇನೆಂದರೆ; ಈ ಪ್ರೊಹಿಬಿನ್‌ಷ

ಒಂದನ್ನು ಕಿತ್ತೊಗೆದರೆ ನಾವು ಈಗ ಪೋಲೀಸ್ ಇಲಾಖೆಗೆ ಖರ್ಚುಮಾಡುತ್ತಿರುವ ಹಣ ಉಳಿತಾಯವಾಗವುದೊಂದೇ ಅಲ್ಲದೆ ನಮ್ಮ ಸರ್ಕಾರ ಜನರ ಮೇಲೆ ಹಾಕುತ್ತಿರುವ ಕರ ಕಂದಾಯಗಳೇನಿವೆ ಅವನ್ನು ಸರ್ಕಾರ ಸಂಪೂರ್ಣವಾಗಿ ಮನ್ನಾಮಾಡಬಹುದೆಂದು ನಾನು ಹೇಳಬಯಸುತ್ತೇನೆ. ಬೊಂಬಾಯಿನಲ್ಲಿ ಈ ಪ್ರೊಹಿಬಿಷನ್ ಒಂದು ರೀತಿ ನಡೆಯುತ್ತಿರಬಹುದು. ಅವರು ಅಲ್ಲಿ ಇದರ ಪರಿಣಾಮವಾಗಿ 12 ಕೋಟಿ ರೂಪಾಯಿಗಳನ್ನು ತೆರಿಗೆಹಾಕಿದ್ದರೆ, ಇಲ್ಲಿ ನಮ್ಮ ಪ್ರೊಹಿಬಿಷನ್ನನ್ನೂ ತೆಗೆದುಹಾಕಿದರೆ ಮೈಸೂರು ರಾಜ್ಯದಲ್ಲಿ 15 ಕೋಟಿ ರೂಪಾಯಿಗಳ ತೆರಿಗೆಯನ್ನು ನಾವು ವರ್ಷ ಒಂದಕ್ಕೆ ಪಡೆಯಬಹುದು. ಈಗ ಬೊಂಬಾಯಿನಲ್ಲೂ ಜನರ ಹಿತರಕ್ಷಣೆಯದೃಷ್ಟಿಯಿಂದಲೂ, ಖಜಾನೆಯ ಹಿತರಕ್ಷಣೆಯ ದೃಷ್ಟಿಯಿಂದಲೂ ಪ್ರೊಹಿಬಿಷನ್ ಪಾಲಿಸಿಯನ್ನು ಬರುವ ಏಪ್ರಿಲ್ ತಿಂಗಳಿಂದ ಸ್ವಲ್ಪಮಟ್ಟಿಗೆ ಮಾರ್ಪಾಡು ಮಾಡಬೇಕೆಂದು ಆಲೋಚಿಸಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿಯೂ ಈ ಪ್ರೊಹಿಬಿಷನನ್ನು ಕಿತ್ತೊಗೆಯಬೇಕೆಂದು ಹೇಳುತ್ತಿದ್ದೇನೆ. ಇಲ್ಲವೇ ಈ ಅಧಿವೇಶನ ಮುಗಿಯುವುದರೊಳಗೆ ಈ ಕಾನೂನಿನ ಬದಲಾವಣೆ ಮಾಡಬೇಕು.

ಸ್ವಾಮಿ, ಇನ್ನು ಈ ಸರ್ಕಾರದ ಆಡಳಿತದಲ್ಲಿ ಉಂಟಾಗಿರತಕ್ಕ ಶಿಥಿಲತೆಯನ್ನು ನೋಡಿದರೆ ನನಗೆ ಬಹಳ ನೋವುಂಟಾಗುತ್ತದೆ. ಇಂದಿನ ನಮ್ಮ ಸರ್ಕಾರದ ಧೋರಣೆಯು ಆಡಳಿತದಲ್ಲಿರತಕ್ಕ ಶಿಥಿಲತೆಯನ್ನು ತೊಡೆದುಹಾಕಲು ಅಸಮರ್ಥತೆಯನ್ನು ಹೊಂದಿದೆ; ಹಾಗೂ ತನ್ನ ಕರ್ತವ್ಯಪರಿಪಾಲನೆಯಲ್ಲಿ ವಿಫಲತೆಯನ್ನು ಹೊಂದಿದೆ ಎಂದು ನಾನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಇಷ್ಟು ಸಕ್ಕರೆ ತಯಾರಾಗುತ್ತಿದ್ದರೂ ಇಲ್ಲಿಯ ಜನರಿಗೆ ಸಕ್ಕರೆ ಸಿಗುತ್ತಿಲ್ಲ. ಈ ಹಿಂದೆ ಮಾನ್ಯ ರೆವಿನ್ಯೂ ಮಂತ್ರಿಗಳು ಭಾಷಣಮಾಡುತ್ತ ಸಕ್ಕರೆಯನ್ನು ನಾವು ಪರದೇಶಕ್ಕೆ ರವಾನೆಮಾಡಿ ಅಲ್ಲಿಂದ ಡಾಲರುಗಳನ್ನು ಪಡೆಯುತ್ತಿದ್ದೇವೆಂದು ಹೇಳಿದರು. ಈಗ ನಾನು ಅವರಿಗೊಂದು ಪ್ರಶ್ನೆಯನ್ನು ಕೇಳಬೇಕಾಗಿತ್ತು. ನಾನೀಗ ಈ ಸಕ್ಕರೆ ಹಂಚಿಕೆಯ ವಿತರಣೆಯ ವಿಚಾರವಾಗಿ ಕೆಲವು ಅಂಶಗಳನ್ನು ಸರ್ಕಾರದವರ ಗಮನಕ್ಕೆತರಬೇಕಾಗಿದೆ. ಈ ದಿವಸ ಹಳ್ಳಿಯಜನರಿಗೆ ಸಕ್ಕರೆ ಬೇಕಾದರೆ ಅವರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಕೆ. ಜಿ. ಒಂದಕ್ಕೆ ಎರಡೂವರೆ-ಮೂರು ರೂಪಾಯಿಗಳನ್ನು ತರಬೇಕಾಗಿದೆ. ಸರ್ಕಾರದವರು ಕೂಡಲೆ ಇದಕ್ಕೆ ಗಮನಕೊಡಬೇಕೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ನಮ್ಮ ಫುಡ್ ಸಪ್ಲೈಸ್ ಇಲಾಖೆಯ ವಿಚಾರವಾಗಿ ಕೆಲವು ಮಾತುಗಳನ್ನಾಡಬೇಕಾಗಿದೆ. ಪಿ. ಜಿ. ವೆಂಕಟಾಚಲಶೆಟ್ಟಿ ಎಂಬತಕ್ಕವರು, ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್‌ಗೆ ಒಂದು ಅರ್ಜಿ ಕೊಟ್ಟು 80 ಗೋಣಿ ಸಕ್ಕರಗೆ ಲೈಸನ್ಸನ್ನು ಪಡೆದರು. ಈ ಸಕ್ಕರೆಯ ಲೈಸೆನ್ಸನ್ನು ರಾಜ ಆಯಿಲ್ ವೆಜಿಟೆಬಲ್ಸ್ ಮಿಲ್ಸ್ ಎಂಬ ವಿಳಾಸಕ್ಕೆ ಪಡೆಯಲಾಗಿತ್ತು. ಕೆಲವು ದಿನಗಳಾದ ಮೇಲೆ ಈ ಮೊದಲನೆಯ ಲೈಸೆನ್ಸ್ ಎಲ್ಲಿಯೋ ಕಳೆದುಹೋಯಿತೆಂದು ಹೇಳಿ ಹೊಸದಾಗಿ ಎರಡನೆ ಸಾರ್ತಿಗೆ ಇನ್ನೊಂದು ಲೈಸೆನ್ಸನ್ನು ಸಿಂಪ್‌ಸನ್ ಕೋ-ಆಪರೇಟಿವ್ ಹೆಸರಿನಲ್ಲಿ ಪಡೆದುಕೊಂಡರು. ಆ ಪಿ. ಜಿ. ವೆಂಕಟಾಚಲ ಶೆಟ್ಟಿ ಎಂಬುವವರು ಈ ಎರಡು ಲೈಸೆನ್ಸ್‌ಗಳಲ್ಲೂ ಸಕ್ಕರೆಯನ್ನು ಡ್ರಾ ಮಾಡುತ್ತಿದ್ದರು. ಆದರೆ ಒಂದು ದಿವಸ ಈ ಸಕ್ಕರೆ ಗೋಣಿಗಳು ಬ್ಲಾಕ್‌ಮಾರ್ಕೆಟ್ಟಿಗೆ ಹೋಗುತ್ತಿದ್ದಾಗ ಪೋಲೀಸಿನವರು ಹಿಡಿದುಕೊಂಡರು ? ಆ ವಿಚಾರವನ್ನು ಫುಡ್ ಸಪ್ಲೈ ಇಲಾಖೆಗೆ ತಿಳಿಸಿದರು. ಆಗ ಫುಡ್ ಸಪ್ಲೈ ಇಲಾಖೆಯವರು ಹೇಗೆ ನೀವು ಎರಡು ಸಾರ್ತಿ ಲೈಸೆನ್ಸನ್ನು ಪಡೆದುಕೊಂಡಿರಿ ? ನೀವು ಫೋರ್ಜರಿಮಾಡಿ ಒಂದು ಲೈಸೆನ್ಸನ್ನು ಪಡೆದುಕೊಂಡಿದ್ದೀರೆಂದು ನಿಮ್ಮ ಮೇಲೆ ಏಕೆ ಸೂಕ್ತ ಕ್ರಮ ಕೈಗೊಳ್ಳಬಾರದು ಎಂದು ಒಂದು ನೋಟೀಸನ್ನು ಅವರಿಗೆ ಸರ್ವ್‌ಮಾಡಿದರು. ಆ ನೋಟೀಸಿಗೆ ಪಿ. ಜಿ. ವೆಂಕಟಾಚಲಶೆಟ್ಟರು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್ ಅವರಿಗೋ ಏನೋ ಒಂದು ಎದುರು ನೋಟೀಸನ್ನು ಕೊಟ್ಟು ಈ ಡೂಪ್ಲಿಕೇಟ್ ಲೈಸೆನ್ಸ್ ಕೊಟ್ಟಿರತಕ್ಕ ವಿಚಾರ ನಿಮಗೆ ಸಂಪೂರ್ಣವಾಗಿ ಗೊತ್ತಿದೆ. ತಿಳಿದೂ ತಿಳಿದೂ ನೀವು ಅದನ್ನು ಕೊಟ್ಟಿದ್ದೀರಿ. ಈಗ ನೀವೇನಾದರೂ ಈ ವಿಚಾರದಲ್ಲಿ ಮುಂದುವರಿದರೆ ನೀವೆ ಸಿಕ್ಕಿಬೀಳುತ್ತೀರಿ, ತಿಳಿಯುವುದು ಎಂದು ಬರೆದಿದ್ದಾರೆ. ಈ ದಿವಸ ಬಂದಿರತಕ್ಕ ಸಕ್ಕರೆಯ ಕಂಟ್ರೋಲ್ ಹೀಗಿದೆ. ಇಂಥ ಒಂದು ಒಣ ವ್ಯಾಮೋಹವೇ ಆ ಪ್ರೊಹಿಬಿಷನ್ ಬಗ್ಗೆಯೂ ಇದೆ ಎಂದು ಹೇಳಲಿಚ್ಛಿಸುತ್ತೇನೆ.

ಈ ಸಕ್ಕರೆ ಹಂಚಿಕೆಯ ವಿಚಾರದಲ್ಲಿ ನಾನು ಮತ್ತೊಂದು ವಿಷಯವನ್ನು ಈಗ ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ಅದೇನೆಂದರೆ : ವೆಂಕಟಾಚಲಯ್ಯ ಸೆಟ್ಟಿ ಎಂಬ ಇನ್ನೊಬ್ಬರು ವರ್ತಕರಿದ್ದಾರೆ. ಇವರು ಮೊದಲಿಗೆ ಪುರಿಭಟ್ಟಿ ವ್ಯಾಪಾರ ಮಾಡುತ್ತಿದ್ದರು. ಈಗ ಇವರು ಷುಗರ್ ಕ್ಯಾಂಡಿಯನ್ನು ತಯಾರಿಸುತ್ತಿದ್ದಾರೆ. ಇವರಿಗೆ ಫುಡ್‌ಸಪ್ಲೈಸ್ ಇಲಾಖೆಯವರು ನೂರಾರು ಗೋಣಿ ಸಕ್ಕರೆಯನ್ನು ಕೊಡುತ್ತಿದ್ದಾರೆ. ಹೀಗೆಯೇ ಪ್ರಭಾಕರ್ ಟ್ರೇಡರ್ಸ್ ಎಂದು ಹೆಸರನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇಷ್ಟು ಮಾತ್ರವಲ್ಲದೆ ಸಕ್ಕರೆಯ ವಿತರಣೆಗಾಗಿ ರೀಟೈಲರ್ಸ್ ಅಂಗಡಿಗಳು ಸಾವಿರಾರು ಇರುತ್ತವೆ. ಒಂದೊಂದು ಅಂಗಡಿಗೂ ಸಾವಿರಾರು ಕಾರ್ಡುಗಳಿರುತ್ತವೆ. ಇವರಲ್ಲಿ ಇನ್ನೊಬ್ಬ ವೆಂಕಟಾಚಲಯ್ಯ ಸೆಟ್ಟರು ಮುನಿರೆಡ್ಡಿ ಪಾಳ್ಯದವರು,

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಆದರೆ ಇವರ ವ್ಯವಹಾರವೆಲ್ಲಾ ತುಮಕೂರಿನಲ್ಲಿ ನಡೆಯುತ್ತಿದೆ. ಇವರಿಗೆ ಫುಡ್ ಸಪ್ಲೈಸ್ ಡಿಪಾರ್ಟ್‌ಮೆಂಟಿನವರು ಸಕ್ಕರೆ ಕಾರ್ಡನ್ನು ಕೊಟ್ಟಿದ್ದಾರೆ. ಪುನಃ ಇವರಿಗೆ ಸ್ಪೆಷಲ್ ಎಂತ ಹೇಳಿ ತಿಂಗಳು, ತಿಂಗಳು ತುಂಬಾ ಗೋಣಿ ಸಕ್ಕರೆಯನ್ನು ಕೊಡುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ. ಒಟ್ಟಿನಲ್ಲಿ ನನಗೆ ಬಂದಿರತಕ್ಕ ವರ್ತಮಾನದ ಪ್ರಕಾರ ಈ ಸಕ್ಕರೆ ಪ್ರತಿ ತಿಂಗಳು 15 ಸಾವಿರ ಗೋಣಿಗೆ ಮೇಲ್ಪಟ್ಟು ಬ್ಲಾಕ್ ಮಾರ್ಕೆಟ್ಟಿನಲ್ಲಿ ವಿಲೇವಾರಿಯಾಗುತ್ತಿದೆ. ಇಂದಿನ ಸರ್ಕಾರ ಈ ಸಕ್ಕರೆಯ ಹಂಚಿಕೆಯಲ್ಲಿ ಲಂಚಾವತಾರವನ್ನೇ ದೇಶದಲ್ಲಿ ಬೆಳಸುತ್ತಿದೆ. ಸಕ್ಕರೆಯ ಹಂಚಿಕೆಯಲ್ಲಿ ಬ್ಲಾಕ್ ಮಾರ್ಕೆಟ್ ಮಾಡಲು ನಮ್ಮ ಮೈಸೂರು ರಾಜ್ಯ ಹೆಸರನ್ನು ಗಳಿಸಿದಂತಾಗಿದೆ. ನಾನೂ ಸಹಾ ಒಂದು ಕ್ಷೇತ್ರದಿಂದ ಆರಿಸಿ ಬಂದ ಎಂ. ಎಲ್. ಎ. ಆಗಿದ್ದೇನೆ. ನನ್ನ ಕ್ಷೇತ್ರದಲ್ಲಿ ಒಂದು ಸಹಕಾರ ಸಂಘ ಇದೆ. ಅಲ್ಲಿ ಒಂದಾವರ್ತಿ 4 ಗೋಣಿ ಸಕ್ಕರೆಯನ್ನು ಜನರಿಗೆ ಹಂಚಲು ಕಳುಹಿಸಿದ್ದರು. ಅದೆಲ್ಲವನ್ನೂ ಒಂದೇ ದಿನದಲ್ಲಿ ಆ ಛೇರ್ಮನ್ನರು ಬ್ಲಾಕ್‌ನಲ್ಲಿ ಮಾರಾಟ ಮಾಡಿಬಿಟ್ಟರು. ಈ ವಿಚಾರದಲ್ಲಿ ನಾನು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರಿಗೆ—ಕಳೆದ ಜನವರಿ ತಿಂಗಳಲ್ಲಿ ಒಂದು ಪತ್ರ ಬರೆದು, ಅದೇ ವಿಚಾರವನ್ನು ಐ.ಜಿ., ಡಿ.ಐ.ಜಿ. ಇವರೆಲ್ಲರಿಗೂ ಕಳುಹಿಸಿದ್ದೇನೆ. ನಾನು ಮುಖ್ಯಮಂತ್ರಿಗಳಿಗೆ ಕೂಡಲೆ ಸಿ.ಐ.ಡಿ. ಗಳನ್ನು ಸ್ಥಳಕ್ಕೆ ಕಳುಹಿಸಿಕೊಡಬೇಕೆಂದು ತಿಳಿಸಿದ್ದಕ್ಕೆ ನನಗೆ ಇಲ್ಲಿಯವರೆಗೂ ಉತ್ತರವಿಲ್ಲ. ನಾನು ನಡೆಸಿರತಕ್ಕ ಪತ್ರವ್ಯವಹಾರಗಳಿಗೆಲ್ಲಾ ಎಕ್ಸ್‌ಪ್ರೆಸ್-ಎಂದು ಹೇಳಿ ಬರೆದಿರುವುದಲ್ಲದೆ ಆ ಬಗ್ಗೆ ಪೋಸ್ಟಲ್ ಸರ್ಟಿಫಿಕೇಟುಗಳನ್ನೂ ಕೂಡ ಇಟ್ಟುಕೊಂಡಿದ್ದೇನೆ. ಒಬ್ಬ ವಿಧಾನಸಭಾ ಸದಸ್ಯ ಮುಖ್ಯಮಂತ್ರಿಗಳಿಗೊಂದು ಪತ್ರ ಬರೆದರೆ ತಿಂಗಳಾನುಗಟ್ಟಲೆಯಾದರೂ ಅದಕ್ಕೆ ಒಂದು ಉತ್ತರ ವಿಲ್ಲ. ಆಡಳಿತದ ವೈಖರಿ ಹೀಗಿದೆ. ಇಂಥದೇ ಒಂದು ವಿಚಾರವನ್ನು ಹೋದ ಸಾರ್ತಿ ಇದೇ ಸಭೆಯಲ್ಲಿ ತಿಳಿಸಿದ್ದಕ್ಕೆ ನನ್ನ ಪತ್ರ ಅವರಿಗೆ ಸಕಾಲಕ್ಕೆ ಮುಟ್ಟಲಿಲ್ಲ ಎಂದು ಸಭೆಯಲ್ಲಿ ತಿಳಿಸಿಬಿಟ್ಟರು. ನಮ್ಮ ಇಂಥ ಪರಿಸ್ಥಿತಿಯನ್ನು ಆ ಸೊಸೈಟಿಯವರು ತಿಳಿದುಕೊಂಡು ಅವರು ಬಹಿರಂಗವಾಗಿ ಆ ಸೊಸೈಟಿಯವರು ನಿಜಲಿಂಗಪ್ಪನವರಿಗೂ ಮತ್ತು ಸಿ.ಐ.ಡಿ. ಗಳಿಗೂ ಬರಕೂಡದೆಂದು ಪತ್ರ ಬರೆದಿರುವುದಾಗಿ ಬಾಯಿಬಿಟ್ಟು ಹೇಳುತ್ತಿದ್ದಾರೆ. ಅಂತೂ ಅಲ್ಲಿ ಇಲ್ಲಿಯವರೆಗೆ ಯಾವ ಒಂದು ಎನ್‌ಕ್ವೈರಿಯೂ ನಡೆಯಲಿಲ್ಲ. ಇದನ್ನೆಲ್ಲಾ ನೋಡಿದರೆ—ಸರ್ಕಾರದ ದಕ್ಷತೆ ಯಾವ ಮಟ್ಟಕ್ಕೇರಿದೆಯೆಂದರೆ ನಾಯಿ ಬಾಲವನ್ನು ಅಲ್ಲಾಡಿಸತಕ್ಕದ್ದು ವಾಸ್ತವವಾಗಿದ್ದರೆ ಇಲ್ಲಿ ಬಾಲ ನಾಯಿಯನ್ನು ಅಲ್ಲಾಡಿಸುವಂತಾಗಿದೆ.

ಈ ತರಹ ಮಾಡಿದರೆ ಜನತೆಗೆ ಯಾವ ತರಹದ ರಕ್ಷಣೆಯನ್ನೂ ಕೊಡಲು ಸಾಧ್ಯವಿಲ್ಲ ಎಂದು ಈ ಸಂದರ್ಭದಲ್ಲಿ ಖಂಡಿತವಾಗಿ ಹೇಳುತ್ತೇನೆ. ಕಾಂಗ್ರೆಸ್ಸಿನವರು ರಾಜ್ಯಕ್ಕೆ ಬಂದು ರಕ್ಷಣೆ ಕೊಡುತ್ತಾರೆ ಎಂದು ನಂಬಿದ ಜನಕ್ಕೆ ನೀವು ರಕ್ಷಣೆ ಕೊಡುವುದಕ್ಕೆ ಆಗುತ್ತಿಲ್ಲ. ಇದೇ ಮನುಷ್ಯ ಹೋದ ಸಾಲಿನಲ್ಲಿ ಎಂದರೆ ಸೆಪ್ಟಂಬರು 1963ರಲ್ಲಿ ಲ್ಯಾಂಡು ರೆವಿನ್ಯೂ ಕಲೆಕ್ಷನ್ನನ್ನು ಮಾಡಿದ್ದುದನ್ನು ಸರಕಾರದ ಖಜಾನೆಗೆ ಕಟ್ಟದೇ ಇದ್ದರೂ ಕೂಡ ಅವರ ಮೇಲೆ ಸರಕಾರದವರು ಕಾರ್ಯಕ್ರಮವನ್ನೇನೂ ತೆಗೆದು ಕೊಳ್ಳಲಿಲ್ಲ. ಅಲ್ಲದೆ ಕಳೆದ ವರ್ಷದ ರಶೀತಿಯನ್ನು ವಾಪಸು ತೆಗೆದು ಫೆಬ್ರವರಿ 1964ರಲ್ಲಿ ರಶೀತಿಯನ್ನು ಕೊಟ್ಟಿದ್ದಾರೆ. ಇದನ್ನು ಬೇಕಾದರೆ ನಾನು ತಮಗೆ ರುಜುವಾತು ಪಡಿಸಿಕೊಡುತ್ತೇನೆ. ಇದು 1963ನೇ ಸಾಲಿನ ಸೆಪ್ಟಂಬರು ತಿಂಗಳಲ್ಲಿ ವಸೂಲು ಮಾಡಿದುದು.

ಶ್ರೀ ಬಿ. ಡಿ. ಜತ್ತಿ.—ತಾವು ಹೇಳುವುದು ನಿಜ ಇರಬಹುದು ಎಂದು ಇಟ್ಟುಕೊಳ್ಳೋಣ. ಇವರ ಹೆಸರು ತಾರೀಖು ಇತ್ಯಾದಿಗಳನ್ನು ಕರಾರುವಾಕ್ಕಾಗಿ ತಾವು ನನ್ನ ಕಡೆಗೆ ಕಳುಹಿಸಿ ಕೊಟ್ಟರೆ ವಿಚಾರ ಮಾಡಬಹುದು, ಇದರ ವಿಚಾರ ಈಗ ಏನಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ತಾವು ಸರಿಯಾದ ವಿವರಗಳನ್ನು ಕೊಟ್ಟರೆ ನಾವು ಯೋಚನೆ ಮಾಡಬಹುದು.

Mr. SPEAKER.—Generalisation is no use. The member will have to give instances that in such and such a case, the man applied for so much............

ಶ್ರೀ ಬಿ. ಭಾಸ್ಕರ ಶೆಟ್ಟಿ.—ಡೀಟೇಲ್ಸ್ ಬೇಕಾದರೆ ತಮಗೆ ನಾನು ಒದಗಿಸಿ ಕೊಡುತ್ತೇನೆ. ನನ್ನಲ್ಲಿ ಪ್ರತಿಯೊಂದರ ವಿವರಗಳೂ ಇವೆ. ತಾವು ವಿಚಾರಮಾಡುವುದಾದರೆ ಅಗತ್ಯವಾಗಿ ತಮಗೆ ಎಲ್ಲ ವಿವರಗಳನ್ನೂ ಕಳುಹಿಸಿ ಕೊಡುತ್ತೇನೆ. ಇದರಿಂದ ನನಗಾದರೂ ಎಷ್ಟು ನೋವು ಆಗುತ್ತದೆ ಎಂದರೆ ಸರಕಾರ ಮಾಡುವ ವಿಧಾನ ನೋಡಿ ನನಗೆ ಒಂದು ಕಥೆ ಇಲ್ಲಿ ನೆನಪಾಗುತ್ತಿದೆ. ಅದು

ಸನಕ ಸನಂದನಾದಿಗಳಂತಹ ಋಷಿಗಳ ಕಥೆ. ಹಿಂದೆ ಒಮ್ಮೆ ವೈಕುಂಠವಾಸಿಯಾದ ಶ್ರೀಮನ್ನಾರಾಯಣನ ದ್ವಾರಪಾಲಕರಾಗಿ ಜಯ ವಿಜಯರೆಂಬ ಇಬ್ಬರು ಇದ್ದರು. ಅವರಿಗೆ ಒಂದು ಕಾಲಕ್ಕೆ ಸ್ವಲ್ಪ ಗರ್ವ ಬಂದಿತ್ತು. ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಶ್ರೀಮನ್ನಾರಾಯಣನ ದರ್ಶನಕ್ಕಾಗಿ ಸನಕ ಸನಂದನಾದಿ ಋಷಿಗಳು ಬಂದರು. ಆಗ ಈ ಜಯ ವಿಜಯರೆಂಬ ದ್ವಾರಪಾಲಕರು ಬಾಗಿಲಲ್ಲಿ ಅವರನ್ನೆಲ್ಲಾ ತಡೆದು ನಿಲ್ಲಿಸಿದರು. ಅದರಿಂದ ಆ ಋಷಿಗಳಿಗೆ ಬಹಳ ಕೋಪ ಬಂದು ಇವರನ್ನು ಬರುವ ಜನ್ಮಗಳಲ್ಲಿ ರಾಕ್ಷಸರಾಗಿ ಹೋಗಿರೆಂದು ಶಪಿಸಿಬಿಟ್ಟು ಹೋದರು. ಆಗ ಅವರುಗಳು ವಿಷ್ಣುವಿನಲ್ಲಿಗೆ ಹೋಗಿ ಅವರು ಮಾಡಿದುದು ತಪ್ಪಾಯಿತು ನಮಗೆ ತಮ್ಮ ಸೇವೆ ಇಲ್ಲದೇ ಇರಲು ಸಾಧ್ಯವಿಲ್ಲ. ಹೇಗಾದರೂ ಮಾಡಿ ಶಾಪ ವಿಮೋಚನೆಗೆ ಸರಿಯಾದ ದಾರಿಯನ್ನು ತೋರಿಸಿ ಕೊಡಬೇಕೆಂದು ಬಹಳವಾಗಿ ಪ್ರಾರ್ಥಿಸಲಾಗಿ ಆಗ ವಿಷ್ಣುವು ನೀವುಗಳು ಮೂರು ಜನ್ಮಗಳ ಕಾಲ ವೈರಿಗಳಾಗಿ ರಾಕ್ಷಸರಾಗಿದ್ದು ಭೂಲೋಕದಲ್ಲಿ ಅವತರಿಸಿ ನನ್ನನ್ನು ಮತ್ತೆ ಸೇರುವಿರಾ ಇಲ್ಲವೇ ಏಳು ಜನ್ಮಗಳ ಕಾಲ ನನ್ನ ಮಿತ್ರರಾಗಿದ್ದುಕೊಂಡು ನನ್ನನ್ನು ಸೇರುವಿರಾ ಎಂದು ಜಯ ವಿಜಯರನ್ನು ಕೇಳಿದಾಗ ಅವರುಗಳು ನಾವೆಲ್ಲ ಮೂರು ಜನ್ಮಗಳ ಕಾಲ ವಿಷ್ಣುವಿಗೆ ವೈರಿಗಳಾಗಿಯೇ ಇರುತ್ತೇವೆ ಏಕೆಂದರೆ ಬೇಗನೆ ವಿಷ್ಣುವಿನ ಬಳಿಗೆ ಬಂದು ಸೇರಬಹುದು ಎಂದು ಮೂರು ಜನ್ಮಗಳ ಕಾಲ ವೈರಿಗಳಾಗಿರಲು ರಾಕ್ಷಸ ಜನ್ಮವನ್ನು ಪಡೆಯಲು ಭೂಲೋಕಕ್ಕೆ ಬಂದರು ಎಂದು ಕಥೆಯನ್ನೂ ನಾವೆಲ್ಲರೂ ಕೇಳಿದ್ದೇವೆ. ಹಾಗೆ ಮಹಾತ್ಮಗಾಂಧಿಯವರು ಸ್ವರಾಜ್ಯ ಬಂದ ಕೂಡಲೆ ಕಾಂಗ್ರೆಸ್ಸಿಗೆ ಅಧಿಕಾರ ಬೇಡ ಎಂದೂ, ಲೋಕ ಸೇವಾ ಸಂಘ ಎನ್ನುವ ಸಂಸ್ಥೆ ಕಟ್ಟಿ ಆ ಹೆಸರಿನಲ್ಲಿ ಓಟನ್ನು ಗಿಟ್ಟಿಸಿಕೊಳ್ಳಬಹುದೆಂದು ರಾಜ್ಯಭಾರ ಮಾಡಿದರೆ, ಚುನಾವಣೆಯಲ್ಲಿ, ಅತಿ ಸುಲಭವಾಗಿ ರಾಜ್ಯಭಾರವನ್ನು ಮಾಡಲಿಕ್ಕೆ ಆರಂಭ ಮಾಡಿದರು. ಹಳ್ಳಿಗಳಿಗೆ ಹೋಗಿ ಜನತೆಯ ಸೇವೆಯನ್ನು ಮಾಡಬೇಕು ಎಂದು ಹೇಳುತ್ತಿದ್ದರು. ಈ ಕಾಂಗ್ರೆಸ್ಸು ಸಂಸ್ಥೆ ಅಧಿಕಾರಕ್ಕೆ ಬಂದರೆ ಅದರೊಳಗೆ ಬಂಡವಾಳಷಾಹಿಗಾರರು ಬಂದು ತಮ್ಮೊಡನೆ ತುಂಬುತ್ತಾರೆ ಅದರಿಂದಾಗಿ ಕಾಂಗ್ರೆಸ್ಸಿನ ಹೆಸರು ಕೆಟ್ಟುಹೋಗುತ್ತದೆ ಎಂದು ಹೇಳುತ್ತಿದ್ದರು. ಹಾಗಿದ್ದರೂ ಕೆಲವು ವರಿಷ್ಟ ಮುಖಂಡರುಗಳು ಒಟ್ಟುಗೂಡಿಕೊಂಡು ಕಾಂಗ್ರೆಸ್ಸಿನಲ್ಲಿ ಆಗ ಗಾಂಧೀಜಿಯವರಿಗೆ ಈ ವರ್ತನೆಯಿಂದ ನೋವಾಗಿ, ತಾನು ಕಟ್ಟಿದ ಸಂಸ್ಥೆ ಬರುವ ಮೂರು ಚುನಾವಣೆಯಲ್ಲಿ ಗೆದ್ದು ಬಂದು ಆಮೇಲೆ ಅಳಿದು ಹೋಗಿರೆಂದು ವರ ಕೊಟ್ಟಿರಬೇಕು. ಏನೋ ಇನ್ನು ಮುಂದೆಯಾದರೂ ಜನಕ್ಕೆ ಈ ಸಂಸ್ಥೆಯಿಂದ ಅನುಕೂಲವಾಗುತ್ತದೆ ಎಂದು ಭಾವಿಸಿದ್ದೆವು. ಮೂರನೇ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದೇವೆ, ಜನಕ್ಕೆ ಅನುಕೂಲ ಮಾಡುತ್ತೇವೆ ಎಂದು ಕಾಂಗ್ರೆಸ್ಸಿನವರು ಟೊಳ್ಳು ಆಶ್ವಾಸನೆ ಕೊಡುತ್ತಿದ್ದಾರೆ ಯೆಂದು ನನಗನಿಸುತ್ತಿದೆ. ರೈತರು ನಮ್ಮ ದೇಶದ ಬೆನ್ನುಮೂಳೆ ಎಂದು ಹೇಳುತ್ತಾ ಅವರಿಗಾಗಿ ಬೇಕಾದಷ್ಟು ಸಹಾಯ ಸಲಕರಣೆಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ ಮತ್ತು ನಮ್ಮ ರಾಜ್ಯದಲ್ಲಿ ಇದಕ್ಕಾಗಿ ಒದಗಿಸಿರುವ ಹಣ ಪೂರ್ಣವಾಗಿ ಖರ್ಚಾಗುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ರೈತನ ವಿಷಯಗಳನ್ನು ತಾವು ಸಂಪೂರ್ಣವಾಗಿ ಮತ್ತು ಆಳವಾಗಿ ಅಭ್ಯಾಸ ಮಾಡಿಲ್ಲ ಮತ್ತು ರೈತನ ಸ್ಥಿತಿಗತಿಗಳ ಬಗ್ಗೆ ಸರಿಯಾದ ಅರಿವು ಅನುಭವಗಳು ನಿಮಗಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ರೈತರಿಗೆ ತಾವು ಕೊಡುತ್ತಿರುವ ಸಹಾಯ ಸಲಕರಣೆಗಳು ಸರಿಯಾಗಿ ದೊರಕುತ್ತಿಲ್ಲ. ಸಾಲಕ್ಕಾಗಿ ಸಹಕಾರ ಸಂಘಗಳು ಇದ್ದರೂ ಕೂಡ ಅವುಗಳಿಂದ ಸಾಲಗಳು ಬೇಕಾದವರಿಗೆ ಸಿಗದೇ ಬೇರೆ ರೈತರಲ್ಲದವರಿಗೆ ಹೋಗುತ್ತಿದೆ.

Mr. SPEAKER.—The Hon'ble members' suggestion is that the amount is provided for and is does not reach him.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಾನು ಹೇಳುತ್ತೇನೆ ನಮ್ಮ ಮನೆಯಲ್ಲಿಯೇ ಸಾಧಾರಣವಾಗಿ ಒಂದು ವರ್ಷದಿಂದ ನೀರಾವರಿ ಬಾವಿ ಬೇಕು ಎಂದು ಒಂದು ಸಾಲಕ್ಕಾಗಿ ನಾವು ರಾಷ್ಟ್ರೀಯ ವಿಸ್ತರಣೆ ಯೋಜನೆ ಮೂಲಕ ಕೇಳಿದ್ದೇವೆ. ನಾವು ಕೆಳದರ್ಜೆಯ ರೈತರ ಎರಡು ಸಾವಿರ ರೂಪಾಯಿಗಳ ಸಾಲಕ್ಕಾಗಿ ಅರ್ಜಿ ಹಾಕಿಕೊಂಡು ತಾಲ್ಲೂಕು ಡೆವಲಪ್ಮೆಂಟು ಬೋರ್ಡು ಆಫೀಸಿನಲ್ಲಿ ವಿಚಾರಿಸಿ ಎಂದು ಹೇಳುತ್ತಿದ್ದಾರೆ. ಅಲ್ಲಿ ಕೇಳಿದರೆ ಈ ವರ್ಷದ ಬಡ್ಜೆಟ್ಟಿನಲ್ಲಿ ದುಡ್ಡಿಲ್ಲ ಬರುವ ವರ್ಷದ ಬಡ್ಜೆಟ್ಟಿನಲ್ಲಿ ಇದಕ್ಕಾಗಿ ಅಂದಾಜನ್ನು ತಯಾರಿಸುತ್ತಿದ್ದೇವೆ ಬರುತ್ತದೆ ಎಂದು ಹೇಳುತ್ತಾರೆಯೇ ಹೊರತು ಇಲ್ಲಿಯವರೆಗೆ ಒಂದು ಆಶ್ವಾಸನೆಯೂ ಬರಲಿಲ್ಲ.

Sri ANGADI CHANNABASAPPA.—After all this is a general distribution.

Mr. SPEAKER.—If he says that amounts are not permitted to reach the applicant.........

Sri ANGADI CHANNABASAPPA.—Such things are happening every day.

Mr. SPEAKER.—That amount does not reach.........

Sri ANGADI CHANNABASAPPA.—Some middleman must have taken.

Mr. SPEAKER.—That is why I said—give instances. Here it is not the case of middleman. Middleman does not get.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಧ್ಯವರ್ತಿಗಳ ಪ್ರಭಾವದಿಂದಾಗಿ ರೈತರಿಗೆ ನೇರವಾಗಿ ಕೊಡುವ ಸಾಲದ ಹಣ ರೈತರುಗಳ ಕೈಗೆ ಸಿಗುತ್ತಿಲ್ಲ. ರೈತರಲ್ಲದವರಿಗೆ ಸರಕಾರ ಪಾಲಕೊಂಡು ಖಾಲಿ 5–6 ತೆಂಗಿನ ಸಸಿಗಳನ್ನು ಹಾಕಿಕೊಂಡು ಇರುವಂತಹವರಿಗೆ ಬಾವಿ ತೆಗೆಯಲು 3,000ರಷ್ಟು ಸಾಲ ಕೊಟ್ಟಿದ್ದಾರೆ. ಆದರೆ ಅಲ್ಲಿ ಬಾವಿ ತೆಗೆದಿದ್ದಾರೆಯೇ ಎನ್ನುವುದನ್ನು ನೋಡಿದರೆ ಅಲ್ಲಿ ಬಾವಿ ಇರುವುದಿಲ್ಲ ಮತ್ತು ಇದನ್ನು ತನಿಖೆ ಮಾಡುವವರೂ ಇಲ್ಲ. ಯಾರು ನಿಜವಾಗಿ ಆಹಾರ ಧಾನ್ಯಗಳನ್ನು ಬೆಳೆಸಿಕೊಂಡು ಅನುಕೂಲ ಮಾಡಿಕೊಳ್ಳಬೇಕು ಎಂದು ಸಾಲಕ್ಕಾಗಿ ಬೇಡುತ್ತಾರೋ ಅವರುಗಳು ತಾಲ್ಲೂಕು ಡೆವಲಪ್‌ಮೆಂಟು ಬೋರ್ಡು ಮತ್ತು ಸಹಕಾರ ಸಂಘಗಳಿಂದು ಮಾಡಿದ್ದರೂ ಕೂಡ ಅಲ್ಲಿರುವ ಮಧ್ಯವರ್ತಿಗಳ ಕಾಟದಿಂದಾಗಿ ಅದರಿಂದ ಎಷ್ಟು ಪ್ರಯೋಜನವಾಗಬೇಕೆಂದಿದೆಯೋ ಅಷ್ಟು ಫಲ ರೈತರಿಗೆ ಸಿಗುತ್ತಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಅದಕ್ಕಾಗಿ ನಾನು ಸೂಚಿಸುವುದು ಈ ದೇಶದಲ್ಲಿರುವ ಎಲ್ಲ ಬ್ಯಾಂಕುಗಳ ಮೂಲಕ ಹೆಚ್ಚಿನ ಸಾಲಗಳನ್ನು ರೈತರು ಪಡೆಯಲು ಅನುಕೂಲವಾಗಲಿ ಎಂದು ಮಾಡಿದ್ದರೂ ರೈತರು ಅವುಗಳನ್ನು ಪಡೆಯುವಂತಹ ಅನುಕೂಲ ಸ್ಥಿತಿಯಿಲ್ಲಿಲ್ಲ. ಮೊನ್ನೆ ರಿಸರ್ವ್ ಬ್ಯಾಂಕಿನವರು ಕೊಟ್ಟಿರುವ ಅಂಕೆ ಸಂಖ್ಯೆಗಳು 1963ನೇ ಮಾರ್ಚಿಯವರೆಗೆ ಕೊಟ್ಟಿರುವುದನ್ನು ನೋಡಿದರೆ 1,611 ಕೋಟಿಯಷ್ಟು ಇಡೀ ದೇಶದಲ್ಲಿ ಸಾಲ ಕೊಟ್ಟಿದ್ದಾರೆಂದೂ, ಅದರಲ್ಲಿ ರೈತರಿಗಾಗಿ ಖಾಲಿ ಮೂರು ಕೋಟಿಯಷ್ಟು ಮಾತ್ರ ಕೊಟ್ಟಿದ್ದಾರೆಂದು ಇದೆ. ಇದರಿಂದ ರೈತರ ಮೇಲೆ ಎಷ್ಟು ಆಸಕ್ತಿ ಇದೆ ಎನ್ನುವುದು ತಿಳಿಯುತ್ತದೆ. ಅವರುಗಳೇ ಒದಗಿಸಿರುವ ಶೇಖಡಾವಾರು ಪಟ್ಟಿಯನ್ನು ನೋಡುವಾಗ ಶೇಕಡ 47ರಷ್ಟು ದೊಡ್ಡ ದೊಡ್ಡ ಕೈಗಾರಿಕೋದ್ಯಮಗಳಿಗೂ, 32ರಷ್ಟು ವ್ಯಾಪಾರಸ್ಥರಿಗೆ ಸಾಲಗಳನ್ನು ಕೊಟ್ಟಿದ್ದಾರೆ. ರೈತರುಗಳಿಗಾಗಿ ಶೇಖಡಾ 3ರಷ್ಟು ಎಂದು ಕೊಡಲಾಗಿದೆ. ರೈತರಿಗೆ ಬ್ಯಾಂಕುಗಳಿಂದ ಹೆಚ್ಚಿನ ಫಲ ದೊರೆಯುತ್ತಿಲ್ಲ. ಆದುದರಿಂದ ಈ ಬ್ಯಾಂಕುಗಳ ನ್ಯಾಷನಲೈಸೇಷನ್ನು ಎಂದರೆ ರಾಷ್ಟ್ರೀಕರಣವನ್ನು ಮಾಡಿದರೆ ಮೈಸೂರು ರಾಜ್ಯ ಅಭಿವೃದ್ಧಿಯಾಗುತ್ತದೆ. ರಾಜ್ಯದ ಅಭಿವೃದ್ಧಿಯಾಗಬೇಕಿದ್ದರೆ ರೈತರ ಜೊತೆಗೆ ಪ್ರಾಮುಖ್ಯವಾದ ಅದರಲ್ಲೂ ಹೊಲದ ಉಳುಮೆ ಮಾಡುವವರಿಗೆ ಹೆಚ್ಚಿನ ಸಹಾಯಗಳನ್ನು ಒದಗಿಸಿದರೆ ರೈತರೂ ಆಸಕ್ತಿ ವಹಿಸಿ ನಮ್ಮ ದೇಶದಲ್ಲಿ ಹೆಚ್ಚಿನ ಆಹಾರ ಉತ್ಪತ್ತಿ ಮಾಡಲು ಅನುಕೂಲವಾಗುತ್ತದೆ ಮತ್ತು ನಮ್ಮ ದೇಶದ ಅಭಿವೃದ್ಧಿ ಹೆಚ್ಚಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲವೆ ಬ್ಯಾಂಕುಗಳಿಗೆ ಇಂತಿಷ್ಟು ಪರ್ಸೆಂಟು ಸಾಲಗಳನ್ನು ರೈತರಿಗಾಗಿ ಒದಗಿಸಿ ಕೊಡಬೇಕೆಂದು ಕಾನೂನು ಮಾಡಬೇಕು ಎಂದು ತಾವು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವಂತೆ ಈ ಸಂದರ್ಭದಲ್ಲಿ ಹೇಳುತ್ತೇನೆ.

5–30 P.M.

Mr. SPEAKER.—Does he want the State Government to do it or the Central Government to do it?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸೆಂಟ್ರಲ್ ಗೌರ್ನಮೆಂಟಿಗೆ ಬರೆಯಲಿ. ಇಲ್ಲಿಯ ರೆಕಮೆಂಡೇಷನ್ ಆದರೆ ಅವರು ಮಾಡಿಕೊಡುತ್ತಾರೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆ ಹೆಚ್ಚಾಗಿ ಬರುತ್ತದೆ. ಮೈಸೂರು ಸರ್ಕಾರದ ಕೆಲವು ವಿಷಯಗಳನ್ನು ತೆಗೆದುಕೊಂಡರೆ ಇವರು ಸಿದ್ಧ ಮಾಡುತ್ತಾ ಇದ್ದಾರೆ. ವಸ್ತು ಸ್ಥಿತಿ ಗೊತ್ತಿಲ್ಲ, ಮೂರನೇ ಪಂಚವಾರ್ಷಿಕಯೋಜನೆಯಲ್ಲಿ ಕೇಂದ್ರ ಸರ್ಕಾರದವರು ನೆರೆಯ ನಿಯಂತ್ರಣಕ್ಕೋಸ್ಕರ 60ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಅದರಲ್ಲಿ ಮೈಸೂರು ರಾಜ್ಯಕ್ಕೆ ಒಂದು ಪೈ ಕೂಡ ಸಿಕ್ಕಿಲ್ಲ. ಅದರ ಅಂದಾಜು ಪಟ್ಟಿಯನ್ನು ಕಳಿಸಿಕೊಟ್ಟಿಲ್ಲ. ಈ ಬಗ್ಗೆ ಇನ್ನೊಂದು ಮನೆಯಲ್ಲಿ ಪ್ರಶ್ನೆಯನ್ನು ಕೇಳಿದಾಗ ಅದಕ್ಕೆ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಮೈಸೂರು ರಾಜ್ಯದಲ್ಲಿ ಎಲ್ಲಿ ನೆರೆ ಬರುತ್ತದೆ. ಎಲ್ಲಿ ನೆರೆ ಬರುತ್ತದೆಂಬ ವಿಷಯ ಅವರಿಗೆ ಗೊತ್ತಿಲ್ಲ. ಮೈಸೂರು ರಾಜ್ಯದಲ್ಲಿ ನೆರೆಯೇ ಇಲ್ಲ ಎಂದು ಹೇಳಿದ್ದಾರೆ. ಅದು ಪೇಪರ್‌ನಲ್ಲಿ ಬಂದಿದೆ ವಸ್ತುತಃ

ಯಾವ ಯಾವ ಜಿಲ್ಲೆಯಲ್ಲಿ ಹೇಗಿದೆ ಎಂಬುದು ಮೈಸೂರು ಆಡಳಿತದವರಿಗೆ ಗೊತ್ತಿಲ್ಲ. ನೆರೆಯ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರದವರು ಒದಗಿಸಿರತಕ್ಕ 60 ಕೋಟಿ ರೂಪಾಯಿನಲ್ಲಿ ಮೈಸೂರು ರಾಜ್ಯಕ್ಕೆ ಒಂದು ಪೈ ಕೂಡ ಸಿಕ್ಕಿಲ್ಲವೆಂಬುದು ಬಹಳ ವಿಷಾದಕರ. ನನ್ನ ಕ್ಷೇತ್ರದಲ್ಲಿ ಒಂದು ಸಣ್ಣ ನದಿ ಹರಿಯುತ್ತದೆ. 5 ಮೈಲಿ ಉದ್ದಕ್ಕೂ ಬೆಳಗು ಎಂಬ ಗ್ರಾಮದಿಂದ ಪಂಗಳ ಎಂಬ ಗ್ರಾಮಕ್ಕೆ ಹೋಗುತ್ತದೆ. ನಾನು ಈ ವಿಷಯವನ್ನು ಸರ್ಕಾರದ ಗಮನಕ್ಕೆ ಅನೇಕ ಸಲ ತಂದಿರುತ್ತೇನೆ. ಮತ್ತು ಬರೆದೂ ಇದ್ದೇನೆ. ಅಲ್ಲಿ ನೆರೆಯ ನೀರು ಬಂದು 4 ಸಾವಿರ ಎಕರೆ ಭೂಮಿಯಲ್ಲಿ ಒಂದನೇ ಮತ್ತು ಎರಡನೇ ಬೆಳೆಯೂ ಕೂಡ ಆಗುವುದಿಲ್ಲ. ಅದರ ಮೇಲೆ ನೀರು ನಿಂತು ಬೆಳೆ ಆಗದೆ ಇರುವ ಪರಿಸ್ಥಿತಿ ಇದೆ. ಮಾತ್ರವಲ್ಲದೆ ಆ ನದಿಯನ್ನು ಆಳ ಮಾಡಿ ಸಿಲ್ಟ್ ತೆಗೆದು ಅದರ ದಂಡೆಯನ್ನು ಸ್ವಲ್ಪ ಎತ್ತರಿಸಿದರೆ ಒಂದನೇ ಬೆಳೆ ಎರಡನೇ ಬೆಳೆ ಆಗುವುದಲ್ಲದೆ ಮೂರನೆಯ ಬೆಳೆಗೆ ಆ ನದಿಯಲ್ಲಿ ನೀರು ಸಿಕ್ಕುವುದಕ್ಕೆ ಸಾಧ್ಯ ಉಂಟು. ಇದು ದೊಡ್ಡ ಯೋಜನೆ. ಇದನ್ನು ಕಾರ್ಯಗತ ಮಾಡಬೇಕೆಂದು ನಾವು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಬರೆದಿದ್ದೆವು. ಅದಕ್ಕೆ ಅವರು ಇದು ನಮ್ಮ ಕೆಲಸವಲ್ಲ ನಮ್ಮಲ್ಲಿ ಹಣವಿಲ್ಲ ನೆರೆಯ ನಿಯಂತ್ರಣದ ಇಲಾಖೆಯನ್ನು ನೋಡಿ ಎಂದು ಹೇಳಿದರು. ಆದರೆ ಮೈಸೂರು ರಾಜ್ಯಕ್ಕೆ ನೆರೆಯ ನಿಯಂತ್ರಣಕ್ಕೆ ಕೇಂದ್ರ ಸರ್ಕಾರದಿಂದ ಯಾವ ಹಣವೂ ಬರಲಿಲ್ಲ. ಇಂಥಾ ಕೆಲಸಗಳನ್ನು ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಒಂದು ವರ್ಷಕ್ಕೆ 8 ಸಾವಿರ 10 ಸಾವಿರ ಮುಡಿ ಬತ್ತವನ್ನು ಬೆಳೆಯುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರ 20ನೇ ಒಂದು ಅಂಶವನ್ನಾದರೂ ಆ ನದಿಯಿಂದ ಹೆಚ್ಚಿಗೆ ಬೆಳೆಯುವುದಕ್ಕೆ ಸಾಧ್ಯವುಂಟು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾತ್ರವಲ್ಲದೆ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀವ್ರತರ ಬತ್ತದ ಕೃಷಿ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಬರುವ ಮೂರು ವರ್ಷಗಳಲ್ಲಿ ಅದಕ್ಕಾಗಿ ಸರ್ಕಾರದವರು ಎರಡೂ ಕಾಲು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆ ಯೋಜನೆಗೆ ಸರ್ಕಾರದವರು ಖರ್ಚು ಮಾಡುವುದು $2\frac{1}{4}$ ಲಕ್ಷ ರೂಪಾಯಿಗಳು. ಅದರಲ್ಲಿ 70 ಪರ್ಸೆಂಟ್ ಹಣವನ್ನು ತೀವ್ರತರ ಯೋಜನೆಯನ್ನು ಜಾರಿ ಮಾಡಲು ಅಧಿಕಾರಿಗಳಿಗೆ ಖರ್ಚುಮಾಡುತ್ತಾರೆ. ಎಂದರೆ ಅಧಿಕಾರಿಗಳ ಸಂಬಳ ಸಾರಿಗೆ ವಗೈರೆಗಳಿಗೆ ಖರ್ಚು ಮಾಡುತ್ತಾರೆಂದು ನನ್ನ ತಿಳುವಳಿಕೆಗೆ ಬಂದಿದೆ. ಹಾಗಿದ್ದ ಪಕ್ಷದಲ್ಲಿ ಇಂಥಾ ಯೋಜನೆಯನ್ನು ತಂದು ಖಜಾನೆಯಿಂದ ದುಡ್ಡನ್ನು ಖರ್ಚುಮಾಡುವುದರಿಂದ ಜನರಿಗೆ ಏನೂ ಪ್ರಯೋಜನವಾಗಲಾರದು. ಆ ಯೋಜನೆಯನ್ನು ಜಾರಿಮಾಡುವುದಕ್ಕೆ 18 ಜನ ಅಧಿಕಾರಿಗಳನ್ನು ಕಳುಹಿಸಿ ಅವರಿಗೆ ಒಂದು ಜೀಪನ್ನೂ ಕೊಡುತ್ತಾರೆ. $2\frac{1}{4}$ ಲಕ್ಷ ರೂಪಾಯಿನಲ್ಲಿ ಒಂದು ಲಕ್ಷ 80 ಸಾವಿರ ರೂಪಾಯಿಗಳು ಸಿಬ್ಬಂದಿ ವಗೈರೆ ಖರ್ಚಿಗೇ ಹೋಗುವುದಾದರೆ ಇನ್ನು ಉಳಿದಿರತಕ್ಕ 50ಸಾವಿರ ರೂಪಾಯಿಗಳಲ್ಲಿ ರೈತರು ಪ್ರಯೋಜನವನ್ನು ಪಡೆಯುವಂತಾಗುತ್ತದೆಯೇ? ಇಷ್ಟೆಲ್ಲಾ ಕಷ್ಟ ಬೇಡ. ಬ್ಲಾಕ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನಲ್ಲಿ ಅಧಿಕಾರಿಗಳು ಕೆಲಸವಿಲ್ಲದೆ ತಿರುಗಾಡುತ್ತಿರುತ್ತಾರೆ, ಆದ್ದರಿಂದ ಅದನ್ನು ತೆಗೆದುಬಿಡಿ ಎಂದು ನಮ್ಮ ಮಿತ್ರರು ಹೇಳುತ್ತಾರೆ. ಹೀಗಿರುವ ಸಂದರ್ಭದಲ್ಲಿ ಅಂಥವರಿಗೆ ಈ ಕೆಲಸವನ್ನು ವಹಿಸಿ ತೀವ್ರತರ ಕೃಷಿ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಗೆ ತರಬಹುದು. ಇನ್ನೂ ಅಧಿಕ ಖರ್ಚಿನ ಭಾರವನ್ನು ಹೊರಬಾರದು ಎಂದು ನಾನು ಹೇಳುತ್ತೇನೆ

ಇನ್ನು ಫಿಷರಿ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ನನ್ನ ಮಿತ್ರರು ಅನೇಕರು ಹೇಳಿದ್ದಾರೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಪ್ಪಿನ ಯಾರ್ಡುಗಳು ಇವೆ. ಅಲ್ಲಿ ಉಪ್ಪಿನ ಯಾರ್ಡುಗಳು ಇದ್ದರೂ ಅಲ್ಲಿ ಉಪ್ಪಿಗೆ ಬಾಕಿ ಕಡೆಗಿಂತ ಹೆಚ್ಚಿನ ಧಾರಣೆಯಿದೆ, ಅಲ್ಲಿ ಉಪ್ಪು ಮಾರ್ಕೆಟ್ ರೇಟಿಗಿಂತ ಜಾಸ್ತಿಯಾಗಿದೆ. ಉಪ್ಪಿನ ಸಬ್ಸಿಡಿ ಕ್ರಮ ಏನಿತ್ತೋ ಅದನ್ನು ಸರ್ಕಾರದವರು ನಿಲ್ಲಿಸಿಬಿಟ್ಟಿದ್ದಾರೆ. ಸಬ್ಸಿಡಿ ಕೊಡದೆ ಉಪ್ಪಿನ ಯಾರ್ಡುಗಳನ್ನು ಇಟ್ಟುಕೊಂಡು ಅಲ್ಲಿನ ನೌಕರರುಗಳಿಗೆ ಸಂಬಳ ಸಾರಿಗೆಯನ್ನು ಕೊಟ್ಟು ಅದನ್ನು ನಡೆಸಿಕೊಂಡು ಹೋಗುವುದು ಅನಾವಶ್ಯಕ. ಒಂದುವೇಳೆ ಉಪ್ಪಿನ ಸಬ್ಸಿಡಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಯಾರ್ಡುಗಳನ್ನು ತೆಗೆದುಬಿಡಬೇಕು. ಆಹಾರೋತ್ಪಾದನೆಯಲ್ಲಿ ಮೀನಿನ ಉತ್ಪಾದನೆ ಬಹಳ ಪ್ರಾಮುಖ್ಯವಾದ ಪಾತ್ರವನ್ನು ಹೊಂದಿದೆ. ಮೀನಿನ ಉತ್ಪಾದನೆ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಕರಾವಳಿಯಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಹೊಂದುವಂತೆ ಮಾಡಲು ಅದಕ್ಕೆ ಬೇಕಾದ ಕಾರ್ಯಕ್ರಮವನ್ನು ಮೀನುಗಾರಿಕೆಯ ಇಲಾಖೆಯವರು ತೆಗೆದುಕೊಂಡಿದ್ದಾರೆ. ಮೊನ್ನೆ ಮಾನ್ಯ ಮೀನುಗಾರಿಕೆ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಅವರು ಐಸ್ ಕೋಲ್ಡ್ ಸ್ಟೋರೇಜ್ ಫ್ಯಾಕ್ಟ್ರಿಯನ್ನು ಉದ್ಘಾಟನೆ ಮಾಡಿದರು. ಮಾತ್ರವಲ್ಲದೆ ಮಿಕ್ಕವರ ಕಷ್ಟಸುಖಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆ ವಿಷಯದಲ್ಲಿ ತುಂಬಾ ಸಂತೋಷವಿದೆ. ನಾನು ಹೇಳುವುದೇನೆಂದರೆ ಅಲ್ಲಿರತಕ್ಕವರಿಗೆ ಮೀನುಗಾರಿಕೆಯ ಇಲಾಖೆಯವರು ಮೆಕಾನೈಜ್ಡ್ ಬೋಟುಗಳನ್ನು ಕೊಡುವಾಗ ಸ್ವಲ್ಪ ಚೆನ್ನಾಗಿ ಆಲೋಚನೆಮಾಡಿ ನೋಡಬೇಕು. ದೊಡ್ಡ ದೊಡ್ಡ ಫಿಷರ್‌ಮನ್, ಲಕ್ಷಾಧೀಶ್ವರರು ಇಂಥವರ ಶಿಫಾರಸ್ಸಿನ ಮೇಲೆ ಬೋಟುಗಳನ್ನು

(ಶ್ರೀ ಬಿ. ಭಾಸ್ಕರ ಶೆಟ್ಟಿ)

ನಷ್ಟೆತ್ರ ಮಾಡಬೇಡಿ. ಅವರು ಅನುಕೂಲಸ್ಥರು. ಫಿಷರಮನ್ ಜಾತಿಯಲ್ಲಿ 100ಕ್ಕೆ 99 ಜನ ಬಡವರು ಇದ್ದಾರೆ. ಅವರ ವಿಷಯವನ್ನು ಕನಿಕರದಿಂದ ನೋಡುವುದು ಅವಶ್ಯ ಇದೆ. ಆದ್ದರಿಂದ ಅವರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಅವರು ಟ್ರೈನಿಂಗ್ ಪಡೆದುಕೊಳ್ಳುತ್ತಾರೆ. ನಾಲ್ಕು ಜನ ಟ್ರೈನೀಸಿಗೆ ಒಂದು ಬೋಟನ್ನು ಕೊಡುತ್ತೇವೆ. ಐಶ್ವರ್ಯವಂತರು ಬಡವರು ಎಂದೇನು ನಾವು ನೋಡುವುದಿಲ್ಲ. ಯಾರು ಫಿಷಿಂಗ್ ಟ್ರೈನಿಂಗ್ ತೆಗೆದುಕೊಳ್ಳುತ್ತಾರೆಯೋ ಅವರೆಲ್ಲರಿಗೂ ಬೋಟುಗಳನ್ನು ಕೊಡುತ್ತಾ ಬರುತ್ತಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಟ್ರೈನಿಂಗ್ ಪಡೆದುಕೊಂಡಿರುವವರಿಗೆ ಮಾತ್ರ ಬೋಟುಗಳನ್ನು ಕೊಡುತ್ತಾ ಇಲ್ಲ. ಟ್ರೈನಿಂಗ್ ಆಗದೇ ಇರುವವರಿಗೂ ಬೋಟನ್ನು ಕೊಡುತ್ತಾರೆ. ಒಂದು ಬೋಟಿನಲ್ಲಿ ನಾಲ್ಕೈದು ಜನಗಳಿದ್ದರೆ ಅದರಲ್ಲಿ ಒಬ್ಬರು ಟ್ರೈನ್ಡ್ ಹ್ಯಾಂಡ್ ಇರಬೇಕೆಂದು ಷರತ್ತು ಇದೆ. ಅದನ್ನು ಬೇಕಾದರೆ ತೋರಿಸಿ ಕೊಡುತ್ತೇನೆ.

ಅಧ್ಯಕ್ಷರು.—ಯಾವುದಾದರೂ ನ್ಯಾಯತಪ್ಪಿ ಕೊಟ್ಟ ಪ್ರಕರಣ ಉಂಟೋ ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಒಂದೇ ಕಡೆ ನಾಲ್ಕೈದು ಬೋಟುಗಳನ್ನು ಕೊಟ್ಟಿದ್ದಾರೆ. ಬಾಕಿ ಕಡೆಯೂ ಕೊಡಬೇಕು. ಬಾಕಿಕಡೆ ಬಡವರು ಇದ್ದಾರೆ. ಅವರಿಗೆ ಬೋಟುಗಳನ್ನು ಕೊಡದಿದ್ದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಮಂಡಿಸಿರುವ 1964-65ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ಸಾಲಿನ ಆಯವ್ಯಯದ ಒಂದು ಪಟ್ಟಿಯನ್ನು ನಾವು ನೋಡುವುದಾದರೆ ಕಳೆದ ಸಾಲಿನಲ್ಲಿ ಏನು ವಿಷಯಗಳನ್ನು ಅಡಕ ಮಾಡಿದ್ದರೋ ಅದಕ್ಕಿಂತ ಕೆಲವು ಅಂಶಗಳನ್ನು ಹೆಚ್ಚಿಗೆ ಈ ರಾಜ್ಯದಲ್ಲಿ ಪ್ರಾರಂಭಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಅದಕ್ಕಾಗಿ ಹಣವನ್ನು ಒದಗಿಸತಕ್ಕ ಪ್ರಯತ್ನಗಳನ್ನು ಮಾಡುತ್ತೇವೆಂದು ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದರಲ್ಲಿ ಬಹಳ ಮಹತ್ವವಾದುದು ವೃದ್ಧಾಪ್ಯ ವಿಶ್ರಾಂತಿ ವೇತನಗಳು ಮತ್ತು ಕುಟುಂಬ ವಿಶ್ರಾಂತಿ ವೇತನಗಳು ಮತ್ತು ಕಡಿಮೆ ಸಂಬಳವನ್ನು ಪಡೆಯತಕ್ಕ ನೌಕರರುಗಳಿಗೆ ತುಟ್ಟಿ ಭತ್ಯವನ್ನು ಜಾಸ್ತಿಮಾಡುವುದು ಇತ್ಯಾದಿಗಳು ಇವೆ. ಇವುಗಳಿಗೆ ಆದಷ್ಟು ಬೇಗ ಹಣವನ್ನು ಒದಗಿಸುತ್ತೇವೆ, ಇವುಗಳನ್ನು ಕಾರ್ಯರೂಪಕ್ಕೆ ತರುತ್ತೇವೆಂದು ಆಶ್ವಾಸನೆಯನ್ನು ಈ ಸಭೆಯಲ್ಲಿ ಕೊಟ್ಟಿದ್ದಾರೆ. ಅವರು ಮುಂದಿನ ಸಾಲಿನಲ್ಲಿ ನಾನಾ ಇಲಾಖೆಗಳಲ್ಲಿ ಏನು ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ ಎನ್ನುವುದನ್ನು ಕೂಡ ವಿವರವಾಗಿ ವಿಶದವಾಗಿ ಹೇಳಿದ್ದಾರೆ.

ನಾನು ಎಲ್ಲವನ್ನೂ ಚರ್ಚೆ ಮಾಡಿದೆ. ನನಗೆ ಒಂದೆರಡು ವಿಚಾರಗಳಲ್ಲಿ ಉಂಟಾಗಿರತಕ್ಕ ಸಂಶಯದ ಕಡೆಗೆ ಅವರ ಗಮನವನ್ನು ಸೆಳೆಯಲು ಪ್ರಯತ್ನಪಡುತ್ತೇನೆ. ಮೊಟ್ಟಮೊದಲನೆಯದಾಗಿ ದೊಡ್ಡ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ಅವರು ಪ್ರಸ್ತಾಪ ಮಾಡಿದ್ದಾರೆ. ಮುಂದಿನ ಸಾಲಿಗೆ ಬೇಕಾದ ಹಣದ ಅವಶ್ಯಕತೆ ಏನು ಎಂದು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದೊಂದೇ ಸಂದರ್ಭದಲ್ಲಿ ಅಲ್ಲ, ಅನೇಕವೇಳೆ ಈ ಸಭೆಯಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಕೂಡ ನಮ್ಮ ದೇಶದಲ್ಲಿ ನೀರಾವರಿಯ ಪರಿಸ್ಥಿತಿ ಏನಿದೆ, ಅದಕ್ಕೆ ಯಾವ ರೀತಿ ಉತ್ತೇಜನವನ್ನು ಕೊಡಬೇಕು, ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ನಿನ್ನೆ ತಾನೇ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಕೂಡ ಸೂಕ್ಷ್ಮವಾಗಿ ಹೇಳಿದರು. ನೀರಾವರಿ ಯಾವ ಮಟ್ಟದಲ್ಲಿದೆ ಎನ್ನುವುದಕ್ಕೆ ಸ್ವಲ್ಪ ಅಂಕಿ ಅಂಶಗಳನ್ನು ಕೊಡಲು ಇಷ್ಟಪಡುತ್ತೇನೆ. ನಮ್ಮ ಸಂಸ್ಥಾನದಲ್ಲಿ ನೀರಾವರಿಗೆ ಯೋಗ್ಯವಾದ ಭೂಮಿ ಸುಮಾರು 35 ಮಿಲಿಯನ್ ಎಕರೆಗಳಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅದರಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ 1.7 ಮಿಲಿಯನ್ ಎಕರೆಗಳಷ್ಟು ನೀರಾವರಿ ಪ್ರದೇಶವಿತ್ತು ಎಂದು ಕೂಡ ಹೇಳುತ್ತಾರೆ. ಅದನ್ನು ನಾವು ಸೇಕಡಾವಾರು ಎಷ್ಟಾಗುತ್ತದೆ ಎಂದು ಲೆಕ್ಕ ಹಾಕಿದರೆ 4.7 ಆಗುತ್ತದೆ. ಈ ಮೂರು ಯೋಜನೆಗಳಲ್ಲಿ ಏನು ಕಾರ್ಯವನ್ನು ಸಾಧಿಸಿದ್ದೇವೆ ಎಂದು ಲೆಕ್ಕಾಚಾರ ಮಾಡಿದರೆ ಮೊದಲನೆ ಯೋಜನೆಯಲ್ಲಿ 11 ಭಾರಿ ನೀರಾವರಿ ಕೆಲಸಗಳನ್ನು ತೆಗೆದುಕೊಂಡಿದ್ದು ಅದರ ಅಂದಾಜು 83.72 ಕೋಟಿ ರೂಪಾಯಿಗಳು. ಅದರಲ್ಲಿ 37.28 ಕೋಟಿ ರೂಪಾಯಿಗಳನ್ನು ಖರ್ಚುಮಾಡ

ಲಾಗಿದೆ. ನಮಗೆ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡುವುದಾದರೆ 1.17 ಲಕ್ಷ ಎಕರೆಗಳಿಗೆ ನೀರಾವರಿಯಾಗುವಷ್ಟು ಮಟ್ಟಿಗೆ ಏರ್ಪಾಡು ಮಾಡಿದೆವು. ಆದರೆ ಉಪಯೋಗವಾದ್ದು ಕೇವಲ 41 ಸಾವಿರ ಎಕರೆಗಳು ಎಂದು ಹೇಳುತ್ತಾರೆ. ಎರಡನೆಯ ಯೋಜನೆಯಲ್ಲಿ ನೋಡುವುದಾದರೆ ಮೊದಲನೆಯ ಯೋಜನೆಯ 11 ಯೋಜನೆಗಳ ಜೊತೆಗೆ 3 ಭಾರಿ ಪ್ರಮಾಣದ ಯೋಜನೆಗಳು ಮತ್ತು 11 ಮಧ್ಯಮ ಪ್ರಮಾಣದ ಯೋಜನೆಗಳನ್ನು ಪ್ರಾರಂಭ ಮಾಡಿದೆವು. ಅದರ ಸುಮಾರು ಒಟ್ಟು ವೆಚ್ಚ 129 ಕೋಟಿ ರೂಪಾಯಿಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಎರಡನೆಯ ಯೋಜನೆಯಲ್ಲಿ 26 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಸುಮಾರು 4 ಲಕ್ಷ ಎಕರೆ ನೀರಾವರಿ ಆಗುವ ರೀತಿ ಏರ್ಪಾಡುಗಳನ್ನು ಮಾಡಿಕೊಟ್ಟರು. ? ಅದರಲ್ಲಿ ಉಪಯೋಗಿಸಿರುವ ಭೂಮಿ 2,91, 000 ಎಕರೆಗಳು. ಮೂರನೆಯ ಯೋಜನೆಯಲ್ಲಿ 25 ಪ್ರಾಜೆಕ್ಟ್‌ಗಳ ಜೊತೆಗೆ 3 ಭಾರಿ ಪ್ರಮಾಣದ ಮತ್ತು 4 ಮಧ್ಯಮ ಪ್ರಮಾಣದ ಪ್ರಾಜೆಕ್ಟ್‌ಗಳನ್ನು ಕಟ್ಟಬೇಕೆಂದು ಯೋಜನೆಮಾಡಿ ಅದಕ್ಕೂ ಕೂಡ ಸುಮಾರು 99.11 ಕೋಟಿ ರೂಪಾಯಿಗಳನ್ನು ವೆಚ ಮಾಡಲು ಅಂದಾಜು ಮಾಡಿದ್ದಾರೆ. ಈ ಮೂರು ಯೋಜನೆಗಳಲ್ಲಿ ತೆಗೆದುಕೊಂಡಿರುವ ಕಾರ‍್ಯಗಳನ್ನು ಪೂರ್ತಿ ಮಾಡಬೇಕಾದರೆ 228.69 ಕೋಟಿ ರೂಪಾಯಿಗಳು ಬೇಕು ಎಂದು ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಹೇಳಿದರು ಆಲಮಟ್ಟಿ ಮತ್ತು ನಾರಾಯಣಪುರ ಎರಡು ಕಡೆಗಳಲ್ಲಿಯೂ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು. ಇದಕ್ಕೆ ಸುಮಾರು 120 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಒಟ್ಟಿನಲ್ಲಿ 340 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಅಷ್ಟೇ ಅಲ್ಲದೆ ನಾವು ಮಾತನಾಡುವಾಗ ನಮ್ಮ ದೇಶದಲ್ಲಿರತಕ್ಕ ಎರಡು ನದಿಗಳು ಎಂದರೆ ಕೃಷ್ಣ-ಗೋದಾವರಿ ಮತ್ತು ಕಾವೇರೀ ನದೀ ಪಾತ್ರಗಳ ನೀರನ್ನು ಉಪಯೋಗಿಸಿಕೊಳ್ಳಬೇಕಾದ ವಿಚಾರವನ್ನೂ ಹೇಳುತ್ತಿದ್ದೇವೆ. ಕಾವೇರಿ ನದಿ ನೀರಿನ ಸಂಬಂಧದಲ್ಲಿ ಮದ್ರಾಸ್ ಸರ್ಕಾರದ ಜೊತೆಯಲ್ಲಿ ನಾವು ಒಂದು ಅಗ್ರಿಮೆಂಟನ್ನು ಮಾಡಿಕೊಂಡಿದ್ದೇವೆ. ಅದರ ಸಂಪೂರ್ಣವಾದ ಫಲವನ್ನು ಹೊಂದಬೇಕು ಎಂದರೆ 1974ರ ಒಳಗಾಗಿ ನಮ್ಮ ಕಾರ್ಯಗಳನ್ನು ಪೂರೈಸಬೇಕು. ಅದರಲ್ಲಿ ಅಡಕವಾಗಿರುವ ಅಂಶವೆಂದರೆ ನಾವು ಕನ್ನಂಬಾಡಿಯಿಂದ ಈಗಾಗಲೇ ಉಪಯೋಗಿಸುತ್ತಿರತಕ್ಕ 59 ಟಿ. ಎಂ. ಸಿ. ನೀರನ್ನು ಬಿಟ್ಟರೂ ಕೂಡ 45 ಟಿ. ಎಂ. ಸಿ. ನೀರನ್ನು ಉಪಯೋಗಿಸಬೇಕಾದ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎಂದು. ಅದರ ಅಂದಾಜು, ಕಂಬದಕಡ ಮತ್ತು ಹಾರಂಗಿ ಅದರ ಉಪ ಅಣೆಕಟ್ಟುಗಳಿಗೆ ಸುಮಾರು 11 ಕೋಟಿ ರೂಪಾಯಿಗಳು ಬೇಕಾಗುತ್ತವೆಂದು ಹೇಳುತ್ತಾರೆ. ಎಲ್ಲವನ್ನೂ ಪರಿಶೀಲನೆ ಮಾಡಿ ನೋಡಿದರೆ ಬರೀ ನೀರಾವರಿ ಯೋಜನೆಗಳಿಗಾಗಿ 300 ಕೋಟಿಗಿಂತ ಜಾಸ್ತಿ ಹಣ ಬೇಕಾಗುತ್ತದೆಂದು ಅಂದಾಜು ಮಾಡುತ್ತಿದ್ದಾರೆ. ಆದರೆ ನಮ್ಮ ಮುಂದೆ ಇರತಕ್ಕ ಪ್ರಸಕ್ತ ಸಾಲಿನ ಹಣಕಾಸಿನ ಆಯವ್ಯಯ ಪಟ್ಟಿಯನ್ನು ನೋಡುವುದಾದರೆ ನೀರಾವರಿ ಕಾಮಗಾರಿಗಳಿಗಾಗಿ ಯಾವರೀತಿಯ ಉತ್ತೇಜನವನ್ನು ಕೊಟ್ಟುಕೊಂಡು ಬಂದಿದ್ದಾರೆಂದರೆ 10 ಕೋಟಿ ಬೇಕು ಎಂದು ಹೇಳಿದ್ದಾರೆ. ಅದೇ 1964-65ನೇ ಸಾಲಿನಲ್ಲಿ 786 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಬಹುಶಃ ಆಂಧ್ರದವರು ನಾಗಾರ್ಜುನಸಾಗರ ಮತ್ತು ಶ್ರೀ ಶೈಲ ಯೋಜನೆಗಳಿಗೂ ಮದ್ರಾಸಿನವರು 1974ನೇ ಇಸವಿ ಮುಗಿದ ಮೇಲೆ ಕಾವೇರಿ ನೀರನ್ನು ಸರಿಯಾಗಿ ಉಪಯೊಗಿಸಲಿಲ್ಲವಾದ ಕಾರಣ ಉಳಿದ ನೀರಿನಲ್ಲಿ ನಮಗೂ ಪಾಲನ್ನು ಕೊಡಿ ಎಂದು ಕೇಳುತ್ತಾರೆಂಬುದಾಗಿ ಆ ಭಯದಿಂದ ಈ ಮನೆಯಲ್ಲಾಗಲೀ ಹೊರಗಡೆಯಲ್ಲಾಗಲೀ ಏನೇ ಆದರೂ ನೀರನ್ನು ಉಪಯೋಗಿಸಿಕೊಳ್ಳುತ್ತೇವೆ, ಕಟ್ಟೆಗಳನ್ನು ಕಟ್ಟುತ್ತೇವೆ ಎಂದು ಬರೀ ಹೇಳಿಕೆಗಳನ್ನು ಕೊಟ್ಟ ಮಾತ್ರಕ್ಕೆ ಇವೆಲ್ಲ ಕಾರ್ಯರೂಪಕ್ಕೆ ಬರುತ್ತದೆಯೆ ಎನ್ನುವ ಶಂಕೆ ಬಹಳವಾಗಿ ಕಾಣುತ್ತಿದೆ. ನಮಗೆ 300 ಕೋಟಿ ರೂಪಾಯಿ ಬೇಕು ಎನ್ನುವಾಗ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣ $7\frac{3}{4}$ ಕೋಟಿ ರೂಪಾಯಿ ಇಷ್ಟು ಹಣವನ್ನು ಪ್ರತಿ ವರ್ಷ ಅಂದಾಜು ಮಾಡುತ್ತ ಹೋದರೆ ಅಪ್ಪರ್ ಕೃಷ್ಣ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ, ಕಾವೇರಿ ನದಿ ನೀರನ್ನು 1974ರ ಒಳಗಾಗಿ ಉಪಯೋಗಿಸಲು ಆಗುತ್ತದೆಯೇ, ಹೀಗೆ ಹಣವನ್ನು ಒದಗಿಸಿವರೆ ಎಷ್ಟು ಯೋಜನೆಗಳನ್ನು ಕಾರ್ಯರೂಪಕ್ಕೆ ತರಬಹುದು, ಈ ವಿಚಾರದಲ್ಲಿ ಸರ್ಕಾರ ಸಾಕಾದಷ್ಟು ಪ್ರಯತ್ನ ಮಾಡಲಿಲ್ಲವೋ ಏನೋ ಎಂದು ನನಗೆ ಶಂಕೆಯಾಗಿದೆ.

ಶರಾವತಿ ಪ್ರಾಜೆಕ್ಟ್ ಮುಗಿಯಬೇಕೆಂದು 16 ಕೋಟಿ ರೂಪಾಯಿಗಳನು ಒದಗಿಸಿದ್ದಾರೆ. ಇದು ಬೇಗ ಆಗಬೇಕಾದ ಕೆಲಸ. ಅದೇ ಕಾಲದಲ್ಲಿ ಬೇರೆ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಿ ಅದರ ನೀರನ್ನು ಉಪಯೋಗಿಸಿಕೊಳ್ಳಲು ಏನು ಮಾಡಿದ್ದೀರಿ, ಎಷ್ಟು ಕೋಟಿ ರೂಪಾಯಿಗಳ ಯೋಜನೆಗಳನ್ನು ಮಾಡಿಕೊಂಡಿದ್ದೀರಿ ಎಂದರೆ. ನಾವು ನೀರನ್ನು ಉಪಯೋಗಿಸಿಕೊಳ್ಳುತ್ತೇವೆ, ಅದಕ್ಕೆ ಎಲ್ಲ ಏರ್ಪಾಡುಗಳನ್ನೂ ಮಾಡಿಕೊಂಡಿದ್ದೇವೆ ಎಂದು ಬರೀ ಮಾತಿನಲ್ಲಿ ಹೇಳಿದರೆ ಸಾಲುವುದಿಲ್ಲ. ನಮ್ಮ ವಾರ್ಷಿಕ ಅಂದಾಜುಗಳಲ್ಲಿ ಸುಮಾರು 25—30 ಕೋಟಿ ರೂಪಾಯಿಗಳ

(ಶ್ರೀ ಎಂ. ಸಿ. ಬಸಪ್ಪ)

ನ್ನಾದರೂ ಆ ಯೋಜನೆಗಳಿಗೆ ಒದಗಿಸಬೇಕಾದ ಅವಶ್ಯಕತೆ ಇದೆ. ಹಣಕಾಸಿನ ಮಂತ್ರಿಗಳು ಆ ರೀತಿ ಒದಗಿಸಲು ಏನು ರಿಸೋರ್ಸೆಸ್ ಇವೆ, ಹಣವನ್ನು ಎಲ್ಲಿಂದ ಒದಗಿಸಬೇಕು ಎಂದು ಕೇಳುತ್ತಾರೆ. ನಿಜವಾಗಿ ಅವರು ಕೇಳಬೇಕಾದ ಪ್ರಶ್ನೆಯೇ. ನನಗೆ ಇಷ್ಟು ಅನ್ನಿಸುತ್ತದೆ. ತುರ್ತು ಪರಿಸ್ಥಿತಿಯಲ್ಲಿ ನಾವು ಕೆಲವು ಕ್ರಮಗಳನ್ನು ಯೋಚನೆ ಮಾಡಿದೆವು. ಕೆಲವು ಇಲಾಖೆಗಳಲ್ಲಿ ಎಷ್ಟೇ ಕಷ್ಟವಾದರೂ ಸ್ವಲ್ಪದಿವಸವಾದರೂ ಖರ್ಚನ್ನು ತಡೆ ಹಿಡಿಯಬೇಕು, ನೂರಕ್ಕೆ 10—15ರಷ್ಟು ಕಡಮೆ ಮಾಡಿ ಅದನ್ನು ಯೋಜನೆಗಳಿಗೆ ಉಪಯೋಗಿಸಿಕೊಳ್ಳಬೇಕು ಎನ್ನುವ ಸಲಹೆಗಳು ಕೂಡ ಬಂದುವು. ಆದರೆ ಕಾರ್ಯಗತ ಮಾಡುವಾಗ ನಾವು ಯಶಸ್ವಿಯಾಗಲಿಲ್ಲ ಎಂದರೆ ತಪ್ಪಾಗಲಾರದು. ಈ ವಿಷಯವನ್ನು ಯೋಚನೆ ಮಾಡಿ ಅದು ಯಶಸ್ವಿಯಾಗುವ ರೀತಿ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಹೇಳುವುದಲ್ಲದೆ ಕೇಂದ್ರ ಸರ್ಕಾರದವರು ಇಂಡಿಯಾ ದೇಶದಲ್ಲೆಲ್ಲ ಅನೇಕ ಪ್ರಾಜೆಕ್ಟ್‌ಗಳನ್ನು ಕಟ್ಟಲು ಸಾಲದ ರೂಪದಲ್ಲಿ ಹಣವನ್ನು ಕೊಡುವ ಮೂಲಕವಾಗಲೀ ಅಥವಾ ಅವರೇ ಸ್ವತಃ ತೆಗೆದುಕೊಂಡು ಕಟ್ಟಿಸಿಕೊಟ್ಟಿರತಕ್ಕ ನಿದರ್ಶನಗಳು ನಮ್ಮ ಮುಂದೆ ಇವೆ. ಅಲ್ಲದೆ ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲಿ ಒಂದು ವಾಕ್ಯವನ್ನು ಹೇಳಿದ್ದಾರೆ. ಸುಮಾರು 10 ಕೋಟಿ ರೂಪಾಯಿಗಿಂತ ಜಾಸ್ತಿ ವೆಚ್ಚ ತಗಲತಕ್ಕ ಪ್ರಾಜೆಕ್ಟ್‌ಗಳನ್ನು ಕೇಂದ್ರದವರು ತೆಗೆದುಕೊಳ್ಳಬೇಕು, ಅದಕ್ಕೆ ಸಂಪೂರ್ಣವಾಗಿ ಆಗತಕ್ಕ ಹಣವನ್ನು ಕೊಡಬೇಕು.

Sri B. D. JATTI.—There is some difference. They should finance. Taking over and financing are quite different.

ಶ್ರೀ ಎಂ. ಸಿ. ಬಸಪ್ಪ.—ಬಹುಶಃ ಹತ್ತು ಕೋಟಿಗಿಂತ ಹೆಚ್ಚು ಖರ್ಚು ತಗಲತಕ್ಕ ಪ್ರಾಜೆಕ್ಟ್‌ಗಳಿಗೆ ಅಥವಾ ಯೋಜನೆಗಳಿಗೆ ಸಂಪೂರ್ಣವಾಗಿ ಹಣದ ಸಹಾಯವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳು ಆಸೆಪಟ್ಟಿದ್ದಾರೆ. ನಾನಾದರೂ ಸಹ ಹಣಕಾಸಿನ ಮಂತ್ರಿಗಳು ಹೇಳಿರುವುದಕ್ಕೆ ಒಂದು ಹೆಜ್ಜೆ ಮುಂದೆ ಹೋಗಿ ಇಂಥ ಪ್ರಾಜೆಕ್ಟ್‌ಗಳನ್ನು ಕೇಂದ್ರ ಸರ್ಕಾರದವರೇ ತೆಗೆದುಕೊಂಡು ಅವರೇ ಕಟ್ಟಿಸಿ ಅದರಿಂದ ಬರತಕ್ಕ ಪ್ರಯೋಜನವನ್ನು ನಮ್ಮ ದೇಶಕ್ಕೆ ಅನ್ಯಾಯವಾಗದ ಹಾಗೆ ಹಣಕಾಸಿನ ನೆರವನ್ನು ಕೊಟ್ಟು ಸಹಾಯವನ್ನು ಮಾಡಬೇಕೆಂದು ಕೇಳಿದರೆ ತಪ್ಪಾಗಲಾರದು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಒಂದೇ ಅಂಶವನ್ನು ಹೇಳುವುದಾದರೆ, ನಮಗೆ ಬರಬೇಕಾದಷ್ಟು ನೀರನ್ನು ನಾವು ಅವರಿಂದ ಪಡೆಯಬೇಕು. ನಮ್ಮಲ್ಲಿರುವ ಹಣಕಾಸಿನಲ್ಲಿ ದುರ್ವ್ಯಯವಾಗುತ್ತಿದ್ದರೆ ಅದನ್ನು ನಿಲ್ಲಿಸಿ, ಎಲ್ಲೆಲ್ಲಿ ಯಾವ ಯಾವ ಇಲಾಖೆಗಳಲ್ಲಿ ಖರ್ಚು ಕಡಮೆ ಮಾಡಬಹುದೋ ಅದನ್ನು ಮಾಡಿ, ಹಣವನ್ನುಳಿಸಿ, ಅದನ್ನು ಭಾರಿ ನೀರಾವರಿ ಯೋಜನೆಗಳಿಗೆ ಉಪಯೋಗ ಮಾಡುವುದು ಒಳ್ಳೆಯದು. ಇದಕ್ಕೆ ಸರಕಾರ ಪ್ರಯತ್ನ ಮಾಡುತ್ತದೆ ಎನ್ನುವ ಆಶಯವನ್ನಿಟ್ಟುಕೊಂಡಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಹಣಕಾಸಿನ ಪರಿಸ್ಥಿತಿ ತಮಗೆ ಗೊತ್ತಿದೆ. ಈಗ ವ್ಯಯವಾಗುತ್ತಿರುವ ಹಣದಲ್ಲಿ ಖರ್ಚು ಕಡಮೆ ಮಾಡಿದರೆ ಅಷ್ಟರಿಂದಲೇ ಭಾರಿ ನೀರಾವರಿ ಯೋಜನೆಗಳಿಗೆ ಹಣ ಸಾಕಾಗುತ್ತದೆಯೆ ? ಇನ್ನಾವುದಾದರೂ ಸಲಹೆಯನ್ನು ಮಾಡುತ್ತೀರೋ ? ಕೇವಲ ಸರಕಾರದ ಖರ್ಚನ್ನು ಕಡಮೆ ಮಾಡುವುದರಿಂದ ಹತ್ತು ಕೋಟಿ ರೂಪಾಯಿಯೇನೂ ಉಳಿಯುವುದಿಲ್ಲ. ಈಗ ಸರಕಾರಿ ನೌಕರರಿಗೆ ತುಟ್ಟಿಭತ್ಯವನ್ನು ಹೆಚ್ಚುಮಾಡಬೇಕಾಯಿತು. ಬೇರೆ ಉತ್ಪನ್ನ ಮೂಲಗಳೇನಾದರೂ ಇವೆಯೆ ಈ ಭಾರಿ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಎಂಬುದನ್ನು ಹೇಳಿ.

ಶ್ರೀ ಗಂಗಾಧರ ನಾಮೋಷಿ.—ಪಾನನಿರೋಧವನ್ನು ರದ್ದು ಮಾಡಿದರೆ ಹತ್ತು ಕೋಟಿ ರೂಪಾಯಿ ಬರುತ್ತದೆ ಎಂದು ಹೇಳುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಾನನಿರೋಧವನ್ನು ರದ್ದುಮಾಡುವುದು, ರೋಡ್ ಟ್ರಾನ್ಸ್‌ಪೋರ್ಟ್ ಆಡಳಿತವನ್ನು ಸರಿಪಡಿಸುವುದು ಇದನ್ನೆಲ್ಲ ಮಾಡಿದರೆ ಬೇಕಾದಷ್ಟು ಹಣ ಬರುತ್ತದೆ.

ಶ್ರೀ ಎಂ. ಸಿ. ಬಸಪ್ಪ.—ಸಂಪನ್ಮೂಲಗಳನ್ನು ಗೊತ್ತು ಮಾಡುವುದು, ಹಣವನ್ನು ಸರಿಯಾಗಿ ಉಪಯೋಗ ಮಾಡುವುದು, ಇವೆಲ್ಲ ನನ್ನೊಬ್ಬನ ಕರ್ತವ್ಯವಲ್ಲ ; ಇತರ ಸದಸ್ಯರೂ ಯೋಚನೆ ಮಾಡಿ ಸರಕಾರಕ್ಕೆ ಸಲಹೆ ಕೊಡುತ್ತಾರೆ. ನಾನಾದರೂ ಹೇಳುವುದಿಷ್ಟು: ಕೃಷ್ಣ, ಕಾವೇರಿ ನೀರನ್ನು ಉಪಯೋಗ ಮಾಡುತ್ತೇವೆ ಎಂದು ಹೇಳಿದರೆ ಮಾತ್ರ ಸಾಲದು. ಈ ಎರಡು ನದಿಗಳ ಆಶ್ರಯದಲ್ಲಿ ಕಟ್ಟಬೇಕಾದ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಬೇಕಾದ ಹಣವನ್ನು ಕೇಂದ್ರದ ನೆರವಿನಿಂದಲೂ ಮಿತವ್ಯಯಮಾಡುವುದರಿಂದಲೂ ಪಡೆದು ಮಾಡಬೇಕೆಂದು ಹೇಳಿದ್ದೇನೆ. ಹೆಚ್ಚಿನ

ಸಂಪನ್ಮೂಲಗಳನ್ನು ಪಡೆಯಲು ಸರಕಾರ ಯೋಚಿಸಿದರೆ ಅದಕ್ಕೆ ನನ್ನ ಅಡ್ಡಿಯಿಲ್ಲ. ಇದಕ್ಕಾಗಿ ದೇಶದಲ್ಲಿ ಹೆಚ್ಚು ತೆರಿಗೆ ಹಾಕಬೇಕೆಂದು ಹೇಳಿದರೆ ಅದಕ್ಕೂ ಸಿದ್ಧವೆಂದು ಹೇಳಿದರೆ ತಪ್ಪಾಗಲಾರ ದೆಂದು ನನ್ನ ಅಭಿಪ್ರಾಯ. ಏಕೆಂದರೆ ನಾವು ನೀರಾವರಿ ಕೆಲಸಗಳನ್ನು ಮಾಡದೇಯಿದ್ದರೆ ಆ ನೀರು ಬೇರೆಯವರಿಗೆ ಹೋಗುತ್ತದೆಂದು ಹೇಳುವಾಗ ಹೇಗಾದರೂ ಮಾಡಿ ನಾವು ಮಾಡಲೇಬೇಕು.

ಎರಡನೆಯದಾಗಿ, ನಮ್ಮ ಮೈನರ್ ನೀರಾವರಿಗಳ ವಿಚಾರದಲ್ಲಿ ಒಂದು ಸಲಹೆಯನ್ನು ಹೇಳ ಬೇಕಾಗಿದೆ. ಲಿಬರಲೈಸ್ಡ್ ಯೋಜನೆಯಲ್ಲಿ ನಾವು ಬಾವಿಗಳನ್ನು ತೆಗೆಸಿದ್ದೇವೆಂದು ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ಕೆರೆಕಟ್ಟೆಗಳನ್ನು ರಿಪೇರಿ ಮಾಡಿ ಸುಮಾರು 49 ಸಾವಿರ ಎಕರೆಗಳನ್ನು ನೀರಾವರಿ ಮಾಡಿದ್ದೇವೆಂದು ಹೇಳಿದರು. ಸುಮಾರು ಐದು ವರ್ಷಗಳಲ್ಲಿ ಮಾಡಬೇಕಾದ ಕಾರ್ಯ ವನ್ನು ಮೂರು ವರ್ಷದಲ್ಲಿ ಮಾಡಿ ಮುಗಿಸಿದ್ದೇವೆಂದು ಹೇಳಿದ್ದಾರೆ. ಕೆಲವು ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ನಾವು ಹಿಂದು ಮುಂದೆ ನೋಡುತ್ತೇವೆ. ಕಳೆದ ವರ್ಷ ಹಾಗೂ ಈ ವರ್ಷದ ಬಡ್ಜೆಟ್ಟನ್ನು ನೋಡಿದ್ದೇವೆ. ಇದರಲ್ಲಿ ಲಿಫ್ಟ್ ಇರಿಗೇಷನ್ ಯೋಜನೆ ಇದೆ. ಈ ಯೋಜನೆಯಲ್ಲಿ ಜನರಿಗೆ ಹೇಗೆ ಸಹಾಯ ಕೊಡಬೇಕೆಂದು, ಕೊಟ್ಟಿದೆಯೆಂಬುದನ್ನು ಯೋಚನೆ ಮಾಡಿದರೆ ಬಹುಶಃ ನಾವು ಶೇಕಡ ಆರರಷ್ಟರಲ್ಲೇ ಉಳಿಯುತ್ತೇವೆ, ಮದರಾಸಿನವರು ಮೂವ ತ್ತೆಂಟರ ಮೇಲೆ ಹೋಗುತ್ತಾರೆಂದು ಕಾಣುತ್ತದೆ. ಸಹಕಾರ ಸಂಘಗಳ ಮೂಲಕ ಈ ಸಹಾಯ ವನ್ನು ಕೊಡಬೇಕೇ ಅಥವಾ ಸರಕಾರ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಹಾಕಿ ಹಣವನ್ನು ತೆಗೆದುಕೊಳ್ಳಬೇಕೇ ಎಂಬ ವಿಚಾರವಿದೆ. ನೀರಾವರಿ ಸಂಬಂಧವಾಗಿ, ನೀರನ್ನು ಉಪಯೋಗ ಮಾಡಿಕೊಂಡು ಹೆಚ್ಚು ಬೆಳೆ ಬೆಳೆಯುವ ಸಂದರ್ಭದಲ್ಲಿ ಸರಕಾರ ತುರ್ತು ತೀರ್ಮಾನ ತೆಗೆದುಕೊಳ್ಳ ಬೇಕಾದುದು ಅವಶ್ಯಕ. ಕಳೆದು ಹೋದ ಕಾಲವನ್ನು ಪುನಃ ಗಳಿಸುವುದಕ್ಕೆ ಸಾಧ್ಯವಿಲ್ಲ. 1974ನೆಯ ಇಸವಿಯೊಳಗಾಗಿ ನಾವು ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂದಿರುವ ಒಪ್ಪಂದದ ಪ್ರಕಾರ, ಆಮೇಲೆ ಕಾಮನ್ ಪೂಲ್‌ಗೆ ಹೆಚ್ಚಿಗೆ ನೀರನ್ನು ಕೊಡಬೇಕೆಂದು ಕೇಳಿದರೆ, ತಾಳಿ ಎಂದು ಅವರಿಗೆ ನಾವು ಹೇಳುವುದಕ್ಕಾಗುವುದಿಲ್ಲ. ಲಿಫ್ಟ್ ಇರಿಗೇಷನ್ನಿಗೆ ಒದಗಿಸಿರುವ ಹಣವನ್ನು ಈ ವರ್ಷವಾದರೂ ಖರ್ಚು ಮಾಡಬೇಕು. ಒದಗಿಸಿರುವ ಹಣವಾದರೂ ಕಡಮೆ. ಒಂದೇ ನದಿಗೆ ಇದೇ ರಾಜ್ಯದಲ್ಲಿ ಎರಡು ಮೂರು ಕಡೆ ಒದಗಿಸಬೇಕೆಂದು ಮಾಡಿದ್ದಾರೆ. ದೇಶದಲ್ಲಿರುವ ಎಲ್ಲ ನದಿಗಳಿಂದಲೂ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿದೆ. ಹೆಚ್ಚು ನೀರಾವರಿ ಮಾಡುವುದಕ್ಕೆ ಅವಕಾಶವಿದೆ. ಆದಕಾರಣ ಆದಷ್ಟು ಬೇಗ ತೀರ್ಮಾನ ತೆಗೆದುಕೊಂಡು ದೇಶದಲ್ಲಿ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಮೂಲಕ ನದಿಗಳ ನೀರನ್ನು ಉಪಯೋಗ ಮಾಡಬಹುದೋ ಅಲ್ಲೆಲ್ಲ ಮಾಡಬೇಕು. ಅಂಥ ಕಡೆಗಳಲ್ಲಿ ವಿದ್ಯುಚ್ಛಕ್ತಿ ಪಂಪುಗಳನ್ನೂ ಹಾಕಬೇಕಾಗುತ್ತದೆ. ಅದರಿಂದ ನೀರು ಸರಬರಾಯಿ ಮಾಡಿ ಹೆಚ್ಚು ನೀರಾವರಿ ಮಾಡಲು ಏರ್ಪಾಡು ಮಾಡುವುದು ಸರಕಾರದ ಕರ್ತವ್ಯ. ಆದಷ್ಟು ಬೇಗ ತೀರ್ಮಾನ ತೆಗೆದುಕೊಂಡು ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಬೇಗ ಕಾರ್ಯಗತ ಮಾಡಬೇಕು. ಅಗತ್ಯವಿದ್ದರೆ ಹೆಚ್ಚು ಹಣವನ್ನು ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಕೇಳಿ ಜನರಿಗೆ ಸೌಕರ್ಯನ್ನೊದಗಿಸ ಬೇಕೆಂದು ಸೂಚಿಸುತ್ತೇನೆ.

ರೈತನಿಗೆ ಮುಖ್ಯವಾಗಿ ಬೇಕಾದ ವಿದ್ಯುಚ್ಛಕ್ತಿಯನ್ನೊದಗಿಸಿದ್ದೇವೆಂದು ಹೇಳಿಕೊಂಡಿರುವುದಲ್ಲದೆ, ಆಹಾರ ಧಾನ್ಯಗಳ ಬೆಲೆ ಬಿದ್ದು ಹೋಗದ ಹಾಗೆ ನೋಡಿಕೊಂಡಿದ್ದೇವೆಂದೂ ಹೇಳಿಕೊಂಡಿದ್ದಾರೆ. ಆಹಾರ ಧಾನ್ಯಗಳ ಬೆಲೆ ಹೆಚ್ಚಾಗಿದೆಯೆಂದೂ ಒಂದು ವಾದವಿದೆ. ಇದನ್ನು ತಡೆಗಟ್ಟಬೇಕೆಂದು ಹೇಳುತ್ತಿದ್ದಾರೆ. ನಾನು ರೈತನ ಕಷ್ಟಸುಖಗಳನ್ನರಿತವನಾಗಿ ಈ ವಿಷಯದಲ್ಲಿ ನನ್ನ ಅಭಿಪ್ರಾಯ ವನ್ನು ಹೇಳುತ್ತೇನೆ. ಕೊಂಡುತಿನ್ನುವ ಜನರು ಜಾಸ್ತಿ ಎಂದು ಹೇಳುವುದು ನಿಜ. ಆದರೆ ಬೆಳೆಯು ವವನಿಗೆ ನಿಗಧಿಯಾದ ಧಾರಣೆಯಿರುವ ಧೈರ್ಯವನ್ನು ಕೊಡದೇಹೋದರೆ ಅವನು ವ್ಯವಸಾಯವನ್ನು ಹೇಗೆ ಧೈರ್ಯದಿಂದ ಮಾಡಬಹುದು ಎಂಬುದನ್ನು ಯೋಚನೆ ಮಾಡಬೇಕು. ಈ ವರ್ಷ ಬತ್ತಕ್ಕೆ ಈ ಸೌಕರ್ಯವನ್ನೊದಗಿಸಿದ್ದೇವೆಂದು ಹೇಳಿರುವುದರಿಂದ ಬತ್ತ ಬೆಳೆಯುವ ರೈತ ಅದಕ್ಕೆ ಬೇಕಾದ ಗೊಬ್ಬರ ಹಾಕುವುದಕ್ಕೂ ಇಂಟರ್‌ಕಲ್ಚರ್ ಮಾಡುವುದಕ್ಕೂ ಧೈರ್ಯವಾಗಿ ಹಣವನ್ನು ಹಾಕುತ್ತಾನೆ. ಏಕೆಂದರೆ ಬತ್ತವನ್ನು ಬೆಳೆದರೆ ತನಗೆ ಸರಿಯಾದ ಬೆಲೆ ಸಿಕ್ಕುತ್ತದೆಂದು ಹಾಗೆ ಮಾಡುತ್ತಾನೆ. ಅದೇ ಕಬ್ಬಿನ ಬೆಳೆಯನ್ನು ತೆಗೆದುಕೊಳ್ಳುವುದಾದರೆ, ಈ ಸಾಲಿನಲ್ಲಿ ಹೆಚ್ಚು ಬೆಳೆ ಬಂತೆಂದು ಹೇಳು ತ್ತಾರೆ, ಅದು ನಿಜ; ಎರಡು ವರ್ಷಗಳ ಹಿಂದೆ ಇದೇ ಕಬ್ಬಿಗೆ ಶೇಕಡ 25ರಷ್ಟು ಬೆಲೆ ಕೂಡ ಸಿಕ್ಕಲಿಲ್ಲ. ಒಂದು ಎಕರೆ ಕಬ್ಬು ಬೆಳೆಯಬೇಕಾದರೆ ಎಕರೆಗೆ ಒಂದು ಸಾವಿರದ ಐನೂರು ರೂಪಾಯಿಗಳ ವರೆಗೆ ಖರ್ಚು ಹಾಕಬೇಕಾಗುತ್ತದೆ. ಮೂರು ಸಾರಿ ಇಂಟರ್ ಕಲ್ಟಿವೇಷನ್ ಮಾಡಿ ಗೊಬ್ಬರ ಹಾಕಬೇಕಾಗುತ್ತದೆ. ಎರಡು ವರ್ಷಗಳ ಹಿಂದಿದ್ದ ಬೆಲೆ ರೈತನಿಗೆ ಸಿಕ್ಕಿದರೆ ಈಗ ಯಾರೂ ಕಬ್ಬು ಬೆಳೆಯುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಹಾಕಿದ ಹಣ ವಾಪಸ್ಸು ಬರುವುದಿಲ್ಲ. ಅಧಿಕ ಬೆಳೆ ಬೆಳೆದು ಸಂಪಾದನೆ ಮಾಡುವುದಕ್ಕೆ ಬದಲು ತನ್ನ ಆಸ್ತಿಯನ್ನು ಮಾರಿಕೊಳ್ಳಬೇಕಾದ ಸ್ಥಿತಿ

(ಶ್ರೀ ಎಂ. ಸಿ. ಬಸಪ್ಪ)

ಬರುತ್ತದೆ. ಆದಕಾರಣ ಒಂದು ಕಾರ್ಯಕ್ರಮ ಹಾಕಿಕೊಂಡು ಬೆಳೆಯುವ ರೈತನಿಗೆ ಅವನು ಬೆಳೆಯುವ ಧಾನ್ಯಕ್ಕೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಬೇಕು. ಧಾರಣೆಗಳು ಕಡಮೆಯಾಗುವುದರಿಂದ ನಷ್ಟವಾಗಬಾರದು. ಹೀಗಾದರೆ ವ್ಯವಸಾಯೋತ್ಪನ್ನವನ್ನು ಹೆಚ್ಚು ಮಾಡಲು ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಸರಕಾರ ಎಷ್ಟು ಪ್ರೋತ್ಸಾಹ ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಆದರೆ ಒಂದು ಸಂತೋಷದ ವಿಷಯ, ಈ ಕಾರ್ಯವನ್ನು ಪ್ರಾರಂಭಮಾಡಿದ್ದಾರೆ.

6-00 P.M.

ಕಳೆದಸಾರಿ ಒಂದು ಬೆಳೆಗೆ ಕೊಟ್ಟಿದ್ದಾರೆ, ಬರುವ ವರ್ಷ ಎಲ್ಲ ಬೆಳೆಗಳಿಗೂ ಇಂತಹ ಸೌಕರ್ಯ ಕೊಡುವುದರಿಂದ ಬೆಳೆಯುವ ರೈತರಿಗೆ ಅನುಕೂಲವಾಗುತ್ತದೆ.

ಸ್ವಾಮಿ, ಇನ್ನು ಹೆಚ್ಚು ವಿಷಯ ಪ್ರಸ್ತಾಪ ಮಾಡದೆ ಇನ್ನೆರಡು ನಿಮಿಷಗಳಲ್ಲಿ ನನ್ನ ಭಾಷಣ ಮುಗಿಸುತ್ತೇನೆ. ಅಗ್ರಿಕಲ್ಚರ್ ವಿಚಾರದಲ್ಲಿ ಅಂಕಿಅಂಶಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆ ಹಾಕಬೇಕು: ಇಲ್ಲದಿದ್ದರೆ ನಮ್ಮ ಯೋಜನೆ ನಿಷ್ಫಲವಾಗುತ್ತದೆ. ಸೀಡ್ ಮಲ್ಟಿಪ್ಲಿಕೇಷನ್ ವಿಚಾರದಲ್ಲಿ ಹೇಳುವುದಾದರೆ ಬೀಜ ಉತ್ಪತ್ತಿ ಮಾಡಿ ವ್ಯವಸಾಯಗಾರರಿಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ಈ ಅಂಕಿಸಂಖ್ಯೆಗಳಿಗೆ ಆಧಾರವೇನು ? ಹೊಸದಾಗಿ ಪ್ರೊಡಕ್ಷನ್ ಪ್ಲಾನ್ ಎಂದು ಮಾಡಿದ್ದಾರೆ. ಪಂಚಾಯತಿ ಮುಖಾಂತರ ಕೂಡ ಗ್ರಾಮಗಳಲ್ಲಿ ವ್ಯವಸಾಯವನ್ನು ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಿದೆ, ನಿಜವಾಗಿಯೂ ಹೆಚ್ಚು ಮಾಡಿದ್ದೇವೆ ಎಂದು ಹೇಳುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದರೆ ಇವರಲ್ಲಿ ಸತ್ಯಾಂಶ ಎಷ್ಟಿದೆ ಎಂಬುದು ಗೊತ್ತಾಗುವುದಿಲ್ಲ. ವಾಸ್ತವವಾಗಿ ಕಾರ್ಯರೂಪದಲ್ಲಿ ಎಷ್ಟು ಸಾಧನೆಯಾಗಿದೆ ಎಂಬುದು ತಿಳಿದುಬರುವುದಿಲ್ಲ. ಆದುದರಿಂದ ಈ ವಿಚಾರವಾಗಿ ಜನರಿಗೆ ತಿಳುವಳಿಕೆ ಕೊಡಬೇಕು. ಜನರಿಗೆ ನಂಬಿಕೆ ಉಂಟಾಗುವಂತೆ ಮಾಡಬೇಕು. ಅಧಿಕಾರಿಗಳು ಕೂಡ ಸತ್ಯಾಂಶದಿಂದ ಕೂಡಿದ ಅಂಕಿಅಂಶಗಳನ್ನು ಒದಗಿಸಬೇಕು. ಅವರು ಮನಸ್ಸಿನಲ್ಲಿ ಭಯ ಸಂಶಯಗಳನ್ನು ಇಟ್ಟುಕೊಳ್ಳಬೇಕಾಗಿಲ್ಲ. ನಿಜವಾಗಿಯೂ ಸತ್ಯದಿಂದ ನಡೆದರೆ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ಸರಕಾರ ಇದನ್ನು ಪರಿಶೀಲನೆ ಮಾಡಿ ಅಧಿಕಾರಿಗಳಿಗೆ ಸೂಕ್ತ ಕಾರ್ಯಕ್ರಮ ಹಾಕಿಕೊಟ್ಟು ಕೆಲಸ ನಡೆಸಿದರೆ ಆಗ್ಗೆ ಈ ಯೋಜನೆ ಯಶಸ್ವಿಯಾಗಲು ನೆರವಾಗುತ್ತದೆ ಎಂದು ಸಲಹೆಗಳನ್ನು ಕೊಟ್ಟು ನನ್ನ ಮಾತು ಮುಗಿಸುತ್ತೇನೆ.

Mr. SPEAKER.—The House will now adjourn to meet at 12-30 P.M. tomorrow.

The House adjourned at Five Minutes past Six of the Clock to meet again at Thirty Minutes past Twelve of the Clock on Friday, the 6th March 1964.

WD 2484—GPB—900—9-5-64

MYSORE LEGISLATIVE ASSEMBLY

EIGHTH DAY.

Friday, 6th March 1964.

The House met in the Assembly Hall, Vidhana Soudha, Bangalore at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given).

Adult Education Centres in Shorapur Taluk, Gulbarga District.

*Q.—8. Sri RAJA PID NAIK (Shorapur).—

Will the Government be pleased to state :—

(a) the number of Adult Education Centres in Shorapur Taluk, Gulbarga District ;

(b) the number of Adults attending such Centres as on 1st January 1963 ;

(c) if there are no Centres at present, when they are going to provide them ?

A.—Sri S. R. KANTHI (Minister for Education).—

(a) Nil.

(b) Does not arise in view of (a).

(c) During 1964-65.

ಶ್ರೀ ಗೋಪಾಲಸಾರೆನ್ನ.—ವಯಸ್ಕರ ವಿದ್ಯಾಭ್ಯಾಸ ಕ್ರಮವನ್ನು ಪ್ರಾರಂಭ ಮಾಡಲು ಸರ್ಕಾರದ ನಿರ್ದಿಷ್ಟವಾದ ನೀತಿ ನಿಯಮಗಳೇನಾದರೂ ಇವೆಯೇ ?

Sri S. R. KANTHI.—Sir, at present there are different systems. In the Education Department there is one system and in the N. E. S. there is another system. Now Government are rethinking of amalgamating and taking charge of the entire adult education, *i.e.*, social education as it is called.

ಶ್ರೀ ಸಿ. ಆರ್. ರಂಗೇಗೌಡ.—ಇದುವರೆಗೂ ಹಳೇ ಮೈಸೂರು ಭಾಗದಲ್ಲಿ ಇದ್ದ ವಯಸ್ಕರ ಶಿಕ್ಷಣ ಸಮಿತಿ ಕೆಲಸ ಮಾಡುತ್ತಿದೆ. ಇದಕ್ಕೆ ವರ್ಷಕ್ಕೆ ಐದು ಲಕ್ಷ ರೂಪಾಯಿ ಪ್ರಕಾರ ಹಣ ಕೊಡುತ್ತಿದ್ದಿರಿ. ಹೊಸ ರಾಜ್ಯ ಆದಮೇಲೆ ಅದರ ಕಾರ್ಯವ್ಯಾಪ್ತಿ ಜಾಸ್ತಿಯಾಗಿದೆ. ಇದಕ್ಕೆ ಈಗ ಎಷ್ಟು ಹಣವನ್ನು ಒದಗಿಸಿದ್ದೀರಿ ?

Sri S. R. KANTHI.—What has been allotted for the next year has been shown in the budget.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವಯಸ್ಕರ ವಿದ್ಯಾಭ್ಯಾಸ ಕ್ರಮವನ್ನು 'ಅಡಲ್ಟ್ ಎಜುಕೇಷನ್ ಕೌನ್ಸಿಲಿನಿಂದ ವಿದ್ಯಾ ಇಲಾಖೆಗೆ ವಹಿಸಿದರೆ ಬಹಳ ಪರಿಣಾಮಕಾರಿಯಾಗಿ ಕೆಲಸಮಾಡುತ್ತದೆ ಎಂದು ಹಿಂದೆ ವಿದ್ಯಾಮಂತ್ರಿಗಳು ಅಪ್ಪಣೆ ಕೊಡಿಸಿದ್ದರು. ಈ ಕಾರ್ಯವನ್ನು ವಿದ್ಯಾ ಇಲಾಖೆಗೆ ವಹಿಸಿ ಕೊಡುವುದರಲ್ಲಿ ಏನು ನಿಲುವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಹೇಳಿದ ಹಾಗೆ ವಿದ್ಯಾ ಇಲಾಖೆಗೆ ಎಲ್ಲವನ್ನೂ ತೆಗೆದುಕೊಳ್ಳಬೇಕು, ಅದು ಸೂಕ್ತ. ಮುಂದಿನ ಏಪ್ರಿಲ್‌ನಿಂದ ಸೋಷಿಯಲ್ ಎಜುಕೇಷನ್ ಆಫೀಸರ್ ಅವರು, ಎಲ್ಲರೂ ವಿದ್ಯಾಭ್ಯಾಸ ಇಲಾಖೆಗೆ ವರ್ಗವಾಗುತ್ತಾರೆ.

Sri GANJI VEERAPPA.—Who has the administrative control over this, Sir ?

Sri S. R. KANTHI.—Sir, at present in the old Mysore area we have what is called the State Adult Education Council and it is dealing with this matter. In the integrated areas we have certain Committees. On the whole, it is with the D. P. I.

Sri J. P. SARWESH.—What will be the basic pay of these teachers who will be in these centres ?

Sri S. R. KANTHI.—Sir, the Hon'ble Member knows that the S. E. Os. salary is fixed by the Development Department and Adult Education work is looked after by the Adult Education Council and they are paying according to their salary scales.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಹೊಸದಾಗಿ ವಿದ್ಯಾ ಇಲಾಖೆಗೆ ವಹಿಸುವ ಏರ್ಪಾಡು ಮಾಡುವುದರಿಂದ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೆಲಸದಲ್ಲಿದ್ದವರ ಭವಿಷ್ಯ ಏನಾಗುತ್ತದೆ ?

ಶ್ರೀ ಎಸ್. ಆರ್. ಕಂಠಿ.—ವಯಸ್ಕರ ಶಿಕ್ಷಣ ಸಮಿತಿಯವರ ವ್ಯಾಪ್ತಿ ಹಳೆಯ ಮೈಸೂರಿಗೆ ಮಾತ್ರ ಇತ್ತು. ಈಗ ಅದನ್ನು ರೀ ಆರ್ಗನೈಜ್ ಮಾಡಿ ಅದರ ಕ್ಷೇತ್ರ ಇಡೀ ಹೊಸ ಮೈಸೂರಿಗೆ ಅನ್ವಯಿಸುವಂತೆ ಮಾಡುತ್ತಿದ್ದೇವೆ. ಇನ್ನು ಮುಂದೆ ವಯಸ್ಕರ ಶಿಕ್ಷಣ ಸಮಿತಿಯವರು ನಡೆಸಬೇಕೋ ಅಥವಾ ಸರ್ಕಾರದವರು ನಡೆಸಬೇಕೋ ಎನ್ನುವ ವಿಚಾರವು ಇದೆ. ಸರ್ಕಾರದವರು ತೆಗೆದುಕೊಂಡರೆ ಅಲ್ಲಿ ಕೆಲಸಮಾಡುತ್ತ ಇರುವವರನ್ನು ಯಾವ ರೀತಿ ಅಬ್ಸಾರ್ಬ್ ಮಾಡಬೇಕು ಎನ್ನುವುದನ್ನು ಸರ್ಕಾರ ವಿಚಾರ ಮಾಡುತ್ತದೆ.

Sri RAJA PID NAIK.—Sir, when and how many centres do Government intend to open ?

†**Sri S. R. KANTHI.**—Recently N. E. S. has been introduced there. They will open ten centres and each centre will contain 25 trainees.

Sri J. P. SARWESH.—May I know where these centres would be started ?

Sri S. R. KANTHI.—The places have not been fixed.

Sri GANGADHAR NAMOSHI.—Have you received any applications from those taluks to open those centres ?

Sri S. R. KANTHI.—I am not aware of such applications.

Sri G. DUGGAPPA.—Sir, Government had constituted one committee called the Central Committee for Adult Education Council. May I know whether it exists and if it exists, whether it functions ?

---

†Indicates that the remarks or speeches have not been revised by the member concerned.

Sri S. R. KANTHI.—Sir, The Adult Education Council is an executive body whereas the State Social Education Advisory Council is only an advisory body. These are two different bodies. Both are existing.

Sri G. DUGGAPPA.—May I know whether that Council for social education continues to function ?

Sri S. R. KANTHI.—Yes.

Appointing as Primary School Teachers.

*Q.—124. Sri H. D. DEVE GOWDA (Holenarasipur).—

Will the Government be pleased to state :—

(a) whether they intend appointing as Primary School Teachers those who have passed Lower Secondary Public Examinations ;

(b) the number of candidates who have passed Lower Secondary Examination and who have been enlisted by Public Service Commission for appointment as teacher prior to 1956 (districtwar information may be furnished) ;

(c) out of them, the number of persons appointed ;

(d) the reasons for the delay in appointing them ;

(e) whether it is not a fact that P.S C. has called for applications in 19 8 for purpose of enlisting the candidates who have passed Lower Secondary for the purpose of enlisting them for appointment as teachers ;

(f) the number of applications received in this behalf ;

(g) whether these applicants have been enlisted by the Public Service Commission ;

(h) if not, the reasons for the same ?

A.—Sri S. R. KANTHI (Minister for Education).—

(a) Yes, only lady candidates.

(b) and (c) the information is given in the statement given below.

(d) Non-availability of vacancies.

(e) Yes.

(f) 16,309.

(g) No.

(h) The minimum qualification had in the meanwhile been raised to S.S.L.C. with Teacher Training Certificate.

(SRI S. R. KANTHI)

STATEMENT

DISTRICT-WISE

Name of the District.		Number of candidates enlisted.		Number of candidates appointed.
Bangalore City District	...	203	...	Nil
Bangalore District	...	180	...	...
Tumkur District	...	904	...	829
Mysore District	...	325	...	...
Mandya District	...	536	...	177
Chirtadurga District	...	1,319	...	464
Chickmagalore District	...	113	...	39
Bellary District	...	...	...	...
Hassan District	...	444	...	367
Shimoga District	...	1,434	...	1,434
Kolar District	...	255	...	93
Total	...	5,713	...	3,403

ಶ್ರೀ ಎಚ್. ಡಿ. ದೇವೇಗೌಡ.—ಲೋಯರ್ ಸೆಕಂಡರಿ ಪಾಸ್ ಮಾಡಿರುವ ಹೆಣ್ಣುಮಕ್ಕಳನ್ನು ಮಾತ್ರ ನೇಮಕ ಮಾಡಿಕೊಳ್ಳತಕ್ಕದ್ದು ಎಂದು ನಿರ್ಧಾರ ತೆಗೆದುಕೊಂಡಿರುವುದಾಗಿ ಹೇಳಿದ್ದಾರೆ. ಅದೇ ರೀತಿ ಗಂಡಸರ ವಿಷಯದಲ್ಲಿಯೂ ಏಕೆ ಆಗಬಾರದು ಎನ್ನುವ ಬಗ್ಗೆ ಯಾವಾಗ ನಿರ್ಣಯ ತೆಗೆದುಕೊಳ್ಳುತ್ತೀರಿ ?

† Sri S. R. KANTHI.—Sir, in 1959 Government took a decision that the S.S.C. or S.S.L.C. candidates should be appointed. After that, Government discontinued appointing L.S. male candidates except non-S.S.L.C. trained candidates who were trained before 1st June 1961.

ಶ್ರೀ ಎಚ್. ಡಿ. ದೇವೇಗೌಡ.—1956ರಲ್ಲಿ ಲೋಯರ್ ಸೆಕೆಂಡರಿ ಪಬ್ಲಿಕ್ ಪರೀಕ್ಷೆಯಾಗಿತ್ತು. ಆಗ ಪಾಸ್ ಮಾಡಿರುವವರನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಇಂಟರ್‌ವ್ಯೂ ಮಾಡಿ ಅವರ ಹೆಸರು ರಿಜಿಸ್ಟರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅವರು ಐದು ಸಾವಿರ ಚಿಲ್ಲರೆ ಜನರ ಒಂದು ಪಟ್ಟಿಯನ್ನು ಮಾಡಿದರು. ಅದರಲ್ಲಿ ಮೂರು ಸಾವಿರ ಜನಗಳಿಗೆ ಕೆಲಸ ಸಿಕ್ಕಿದೆ. ಉಳಿದವರಿಗೆ ಜಾಗ ಇಲ್ಲವಾದ್ದರಿಂದ ಸಿಕ್ಕಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಅವರ ಹೆಸರು ರಿಜಿಸ್ಟರಾದ ಮೇಲೆ ಮೂರು ಸಾವಿರ ಜನಕ್ಕೆ ಕೆಲಸಕೊಟ್ಟಿದ್ದೇವೆ, ಉಳಿದವರಿಗೆ ಕೆಲಸ ಸಿಕ್ಕಿಲ್ಲವೆಂದು ಹೇಳುತ್ತೀರಿ. ಯಾರಿಗೆ ಕೆಲಸ ಸಿಕ್ಕಲಿಲ್ಲವೋ ಅವರು ಎಲ್. ಎಸ್. ಪರಿಕ್ಷೆಯಲ್ಲಿ ತೇರ್ಗಡೆ ಹೊಂದಿದವರು. ಅವರ ಹೆಸರುಗಳು ರಿಜಿಸ್ಟರಾದಾಗ ಉಪಾಧ್ಯಾಯರ ಕೆಲಸಕ್ಕೆ ಸೇರಲು ಬೇಕಾದ ಅರ್ಹತೆಯನ್ನು ಹೊಂದಿದ್ದರು. ಆ ಅರ್ಹತೆಯನ್ನು ಈಚೆಗೆ ಹಿಂತೆಗೆದುಕೊಂಡದ್ದರಿಂದ ಅವರಿಗೆ ಅನ್ಯಾಯವಾಗಲಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆಯನ್ನು ಲಾ ಡಿಪಾರ್ಟ್‌ಮೆಂಟಿಗೆ ಕಳಿಸಿ ಅವರ ಅಭಿಪ್ರಾಯವನ್ನು ಪಡೆದಿದ್ದೇವೆ. ಪಬ್ಲಿಕ್ ಸರ್ವಿಸ ಕಮಿಷನ್ನವರು ಪಟ್ಟಿಯನ್ನು ಕಳಿಸಿದ ಮೇಲೆ ಅದಕ್ಕೆ ಇದ್ದ ಅರ್ಹತೆಯನ್ನು ಬದಲಾಯಿಸಿದ್ದರಿಂದ ಅವರಿಗೆ ಏನೂ ಹಕ್ಕಿರುವುದಿಲ್ಲ ಎಂದು ತಿಳಿಸಿದ್ದಾರೆ.

ಶ್ರೀಮತಿ ಜಿ. ಸಿ. ಭಾಗೀರತಮ್ಮ.—ಪಟ್ಟಿಯಲ್ಲಿ 5713 ಜನರನ್ನು ಸೇರಿಸಿ, 3403 ಜನರಿಗೆ ಮಾತ್ರ ಕೆಲಸಗಳನ್ನು ಕೊಟ್ಟಿದೆ, ಬಾಕಿಯವರಿಗೆ ವಯೋಮಿತಿ ಮೀರಿ ಹೋದರೆ ಅವರ ಗತಿ ಏನು ?

ಶ್ರೀ ಎಸ್. ಆರ್. ಕಂಠಿ.—ಕೆಲಸಗಳು ಖಾಲಿ ಇದ್ದಷ್ಟು ಕೊಟ್ಟಿದೆ, ಈಚೆಗೆ ಕೊಟ್ಟಿಲ್ಲ. ಅವರಿಗೆ ಕೆಲಸಗಳನ್ನು ಕೊಟ್ಟೇ ಕೊಡಬೇಕೆಂದು ಕೇಳಲು ಯಾವ ಹಕ್ಕೂ ಇಲ್ಲವೆಂದು ಲಾ ಡಿಪಾರ್ಟ್‌ಮೆಂಟ್ ಅಭಿಪ್ರಾಯಕೊಟ್ಟಿದೆ.

ಶ್ರೀ ಗೋಪಾಲ ಸಾಲೆನ್ನ.—ಮಹಿಳೆಯುವರಿಗೆ ಮಾತ್ರ ಕೊಟ್ಟರೆ ಗಂಡಸರ ಗತಿ ಏನು ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಉತ್ತರವನ್ನು ಸರಿಯಾಗಿ ನೋಡಬೇಕು, ಹೆಣ್ಣು ಮಕ್ಕಳಿಗೆ ಎಸ್. ಎಸ್. ಎಲ್. ಸಿ. ಆಗಿರಬೇಕಾಗಿಲ್ಲ, ಎಲ್. ಎಸ್. ಆಗಿದ್ದರೆ ಸಾಕು. ಹೆಣ್ಣು ಮಕ್ಕಳು ಹಳ್ಳಿಗಳಿಗೆ ಹೋಗಿ ಕೆಲಸಮಾಡಬೇಕಾಗುತ್ತದೆ, ಅವರಿಗೆ ಪ್ರೋತ್ಸಾಹ ಕೊಡುವುದಕ್ಕಾಗಿ ಅವರು ಎಲ್. ಎಸ್. ಆದರೂ ಸಾಕು ; ಅವರನ್ನು ನೇಮಕ ಮಾಡಿಕೊಂಡು ಮುಂದೆ ಅವರಿಗೆ ಎರಡು ವರ್ಷ ಟ್ರೈನಿಂಗ್ ಕೊಡಬೇಕೆಂದು ಉದ್ದೇಶಿಸಿದೆ.

Sri S. RAJAGOPAL.—Along with this S.S.L.C. certificate, the teacher-training certificate also has got to be obtained. Most of them have not gone to the training course. May I know what is the arrangement the Government is making to send them for training ?

Sri S. R. KANTHI.—Sir, we are sending them for training.

Sri G. DUGGAPPA.—Government have introduced condensed S.S.L.C. course for the benefit of lady candidates who could not attend the regular High school course. May I know whether preference would be given to such candidates for appointment ?

Sri S. R. KANTHI.—S.S.L.C. examination is the same whether it is through condensed course or regular course. The condensed course is available only to those ladies who are above 21 years of age. and after that they can appear for S.S.L.C., and they stand on the same footing.

Sri K. LAKKAPPA.—Has it come to the notice of the Government that many representations have been received from the candidates enlisted by the P.S.C. before 1956 and what is the action taken by the Government ?

Sri S. R. KANTHI.—No doubt, they have represented. Some of them, who were enlisted before 1956 by the P.S.C. have made representation to the Government to consider their cases. The Government, on the 10th January 1964, have passed an order that those of the enlisted candidates who have now passed the S.S.L.C. examination will be taken in.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ನೇಮಕ ಮಾಡಿರುವ 3403 ಜನರಲ್ಲಿ ಎಷ್ಟು ಜನ ಮಹಿಳೆಯರಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಹೇಳಲು ಸಾಧ್ಯವಿಲ್ಲ, ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಬೆಂಗಳೂರು ನಗರಜಿಲ್ಲೆಯಲ್ಲಿ 203 ಜನರು ಪಟ್ಟಿಯಲ್ಲಿ ಸೇರಿದ್ದಾರೆ, ಅವರಲ್ಲಿ ಒಬ್ಬರಿಗೂ ಕೆಲಸ ಕೊಟ್ಟಿಲ್ಲ, ಇಲ್ಲಿನ ಶಾಲೆಗಳಿಗೆ ಉಪಾಧ್ಯಾಯಿನಿಯರ ಅಥವಾ ಉಪಾಧ್ಯಾಯರ ಅಗತ್ಯವಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಇದುವರೆಗೆ ಬೆಂಗಳೂರಿನ ಪಟ್ಟಿಯಲ್ಲಿ 703 ಜನರಿದ್ದರು, ಯಾರೂ ನೇಮಕವಾಗಿಲ್ಲ, ಅವರಲ್ಲಿ ಎಷ್ಟು ಜನ ಎಸ್. ಎಸ್. ಎಲ್. ಸಿ. ಆಗಿದ್ದಾರೋ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ 10-1-64 ರಲ್ಲಿ ಆಜ್ಞೆ ಮಾಡಿದೆ.

ಶ್ರೀ ಎಚ್. ಡಿ. ದೇವೇಗೌಡ.—ವಿದ್ಯಾ ಅರ್ಹತೆಯನ್ನು ಹೆಚ್ಚು ಮಾಡಿದುದರಿಂದ ಅವರಿಗೆ ಕೆಲಸಗಳನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದಿರಿ, ಈ ನಿರ್ಣಯವನ್ನು ಯಾವಾಗ ತೆಗೆದುಕೊಂಡಿರಿ ? ನನಗೆ ಗೊತ್ತಿರುವ ಹಾಗೆ ಎಸ್‌ಎಲ್‌ಸಿ ಆಗಿದ್ದ ಎಲ್. ಎಸ್. ಆಗಿರುವವರನ್ನು ಆರು ತಿಂಗಳ ಹಿಂದೆ ಕೆಲಸಕ್ಕೆ ತೆಗೆದುಕೊಂಡರು.

ಶ್ರೀ ಎಸ್. ಆರ್. ಕಂಠಿ.—ಮಾರ್ಚ್ 1959ರಲ್ಲಿ ಎಸ್.ಎಸ್.ಎಲ್.ಸಿ. ಎಂದು ಗೊತ್ತಾಯಿತು; ಎಸ್.ಎಸ್.ಎಲ್.ಸಿ. ಆಗದೇಯಿರುವವರನ್ನು ತೆಗೆದುಕೊಳ್ಳಬಾರದೆಂದು ಕೇಂದ್ರ ಸರಕಾರದವರು ಸಲಹೆ ಮಾಡಿದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—5713 ಜನರ ಪೈಕಿ 3403 ಜನರನ್ನು ಮಾತ್ರ ನೇಮಕ ಮಾಡಲು ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಖಾಲಿ ಇಲ್ಲದ್ದರಿಂದ ನೇಮಕ ಮಾಡಿಲ್ಲವೆಂದು ಹೇಳಿದ್ದೇನೆ.

Sri C. J. MUCKANNAPPA.—Where there is need for more than six thousand teachers, does the Government say that there is no dearth of teachers for the schools or is it anything coming in the way of appointments ?

ಶ್ರೀ ಎಸ್. ಆರ್. ಕಂಠಿ.—ವೇಕೆನ್ಸಿ ಇಲ್ಲವೆಂದು ಹೇಳಿರುವುದು ಆ ಕಾಲಕ್ಕೆ ಸಂಬಂಧಪಟ್ಟದ್ದು, ಮುಂದೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಪ್ರಾರಂಭವಾದಮೇಲೆ ಜಾಸ್ತಿ ಉಪಾಧ್ಯಾಯರ ಸ್ಥಾನಗಳಾಗಿವೆ. ಈ ಯೋಜನೆ ಜಾರಿಗೆ ಬರುವುದಕ್ಕೆ ಮುಂಚೆ ಹೆಚ್ಚು ಜನ ಉಪಾಧ್ಯಾಯರು ಬೇಕಾಗಿರಲಿಲ್ಲ.

Sri G. DUGGAPPA.—In spite of the fact that many of these candidates have registered their names in the P.S.C., most of them have not been able to secure jobs as they come within the purview of the upper age limit. Would Government consider relaxing the age limit for such candidates ?

Sri S. R. KANTHI.—If those candidates still remain as L. S. candidates, they have no chance. If they have passed the S.S.L.C. examination, the question does not arise.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದರಲ್ಲಿ ಸ್ವಲ್ಪ ವಿರೋಧಾಭಾಸವಿರುವ ಹಾಗೆ ಕಾಣುತ್ತದೆ. ಎಲ್.ಎಸ್. ಪಾಸ್. ಆಗಿರುವವರನ್ನು ಪ್ರೈಮರಿ ಸ್ಕೂಲು ಉಪಾಧ್ಯಾಯರಾಗಿ ನೇಮಿಸುತ್ತೀರ ಎಂದು ಕೇಳಿರುವುದಕ್ಕೆ, ಹೆಂಗಸರನ್ನು ಮಾತ್ರ ಎಂದು ಉತ್ತರ ಹೇಳಿದರು, ಮೈಸೂರು ಜಿಲ್ಲೆಯಲ್ಲಿ 325 ಜನರು ಎಸ್‌ಎಲ್‌ಸಿ ಆಗಿದ್ದಾರೆ, ಒಬ್ಬರನ್ನೂ ನೇಮಕ ಮಾಡಿಲ್ಲ. ಅವರಲ್ಲಿ ಹೆಣ್ಣು ಮಕ್ಕಳೊಬ್ಬರೂ ಇರಲಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಹೆಣ್ಣುಮಕ್ಕಳ ವಿಚಾರ ಬೇರೆ, ನನ್ನಲ್ಲಿ ಈಗ ಆ ವಿವರಗಳಿಲ್ಲ. ಮಾನ್ಯ ಸದಸ್ಯರು ಎಲ್.ಎಸ್. ಆಗಿದ್ದವರನ್ನು ನೇಮಕ ಮಾಡಲಿಲ್ಲವೆಂದು ಹೇಳಿದರು, ಮೊದಲು ಎಸ್.ಎಸ್.ಎಲ್.ಸಿ. ಆಗಿರಬೇಕೆಂದು ನಿಗದಿ ಮಾಡಿತ್ತು; ಆ ಮೇಲೆ ಹೆಣ್ಣು ಮಕ್ಕಳಿಗೆ ಎಲ್.ಎಸ್. ಆಗಿದ್ದರೆ ಸಾಕೆಂದು ಮಾಡಿದೆ. ಯಾರಿಗಾದರೂ ಇದರಲ್ಲಿ ಜಾಗ ಸಿಕ್ಕದೆ ತೊಂದರೆಯಾಗಿದ್ದರೆ ವಿಚಾರ ಮಾಡಿ ಸರಿ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—1959ರಲ್ಲಿ ಕೇಂದ್ರ ಸರಕಾರದ ಸಲಹೆಯ ಮೇಲೆ ಮಾಡಿರುವುದಾಗಿ ಹೇಳಿದರು, 1956ರಲ್ಲಿ ಎಲ್.ಎಸ್. ಮಾಡಿದವರನ್ನು ನೇಮಕ ಮಾಡಿಲ್ಲ.

ಶ್ರೀ ಎಸ್. ಆರ್. ಕಂಠಿ.—ಅದರ ಪೂರ್ಣ ವಿವರವನ್ನು ನನ್ನಲ್ಲಿ ತಂದರೆ ಅಗತ್ಯವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಎಲ್.ಎಸ್. ಪಾಸು ಮಾಡಿದ್ದವರನ್ನು ನೇಮಕ ಮಾಡಿದ್ದು, ಆ ವೇಕೆನ್ಸಿಯಲ್ಲಿ ಈಗಲೂ ನೇಮಕ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಬಂದಿಲ್ಲ ಅಂಥಾದ್ದು ಯಾವುದಾದರೂ ಸಂದರ್ಭ ಇದ್ದರೆ ನನ್ನ ಗಮನಕ್ಕೆ ತನ್ನಿ, ನೋಡುತ್ತೇನೆ.

Sri S. RAJAGOPAL.—May I know the total number of training centres in our State and the average number of teachers getting training through those centres ?

SRI S. R. KANTHI.—Every year about sixty two thousand and odd people are undergoing training.

SRI G. V. GOWDA.—I wish to know whether the lady candidates who have passed the Lower Secondary examination are eligible for being appointed and whether men candidates are eligible. If so, would it not amount to discrimination?

SRI S. R. KANTHI.—It is a matter of opinion. I think in order to encourage ladies, we had to lower down the qualification.

SRI G. DUGGAPPA.—Sir, lady candidates who have passed the S.S.L C. and condensed SSLC course could not get appointment on account of Passing the upper age-limit though they had enlisted 10 years ago. Do Government consider the question of relaxing the upper age limit in the case of such lady candidates in order to help them?

SRI S. R. KANTHI.—I wish to make a submission, Sir. Just this morning I have passed an order that lady candidates up to the age of 40, if they are qualified should be taken as teachers. This should satisfy the House.

Tourist Centres Established in Mysore State

*Q.—177 SRI S. P. PHAYADE (Ankola).—

Will the Government be pleased to state:—

(a) which are the Tourist Centres established in Mysore State in each district;

(b) what is the amount incurred for various items of establishment and running for each one of the Centres for the last two years;

(c) who are in charge in each one of the Centres?

A.—SRI R. M. PATIL (Minister for Home).—

(a) Tourist Bureaux have been established in the following places.

(i) Bangalore
(ii) Hassan
(iii) Bijapur
(iv) Mercara and
(v) Mysore.

(b)

	1961—62 Rs. nP.	1962—63 Rs. nP.
Bangalore ...	Nil	1,285—22
Hassan ...	1,652—50	3,002—55
Bijapur ...	1,418—57	2,418—09
Mercara ...	2,913—12	3,539—50
Mysore ...	756—00	768—00

(c) A receptionist under the department of Publicity and Information (Tourists) is in charge of each of these centres.

ಶ್ರೀ ಎಸ್. ಪಿ. ಪಾಯದೆ.—ಮೈಸೂರು ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಎಲ್ಲೆಲ್ಲಿ ಯಾವ ಯಾವ ಟೂರಿಸ್ಟ್ ಸೆಂಟರ್ಸ್ ಸ್ಥಾಪಿಸಲಾಗಿದೆ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರ ಹೇಳುತ್ತೀರಾ ?

Sri R. M. PATIL.—I will supply that information. But for the information of the House, I shall keep this list on the Table of the House.

Mr. SPEAKER.—There is plenty of literature printed on the subject.

Sri R. M. PATIL.—So far as North Kanara is concerned, MAGODFALLS is to be taken up and the budget provision is also there for the information of the Hon'ble Member.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, (ಬಿ) ಪ್ರಶ್ನೆಗೆ ಉತ್ತರ ಕೊಡುತ್ತಾ ವೆಚ್ಚಮಾಡಲಾದ ಮೊಬಲಗಿನ ವಿವರಗಳನ್ನು ಕೊಡಲಾಗಿದೆ. ಆದರೆ ಪ್ರತಿಯೊಂದು ಕೇಂದ್ರದ ಬಗ್ಗೆ ವಿವರಗಳನ್ನು ಕೊಟ್ಟಿಲ್ಲ. ಈ ಟೂರಿಸ್ಟ್ ಸೆಂಟರ್ಸ್ ಮುಖಾಂತರ ಮೈಸೂರಿನ ನಕಾಶೆ, ನೋಡತಕ್ಕಂಥ ಪ್ರೇಕ್ಷಣೀಯ ಸ್ಥಳಗಳ ವಿವರ ಮುಂತಾದವುಗಳನ್ನು ಏರೋಡ್ರೋಂ ಬಸ್‌ಸ್ಟ್ಯಾಂಡ್‌ಗಳಲ್ಲಿ ಪ್ರವಾಸಿಕರ ಅನುಕೂಲಕ್ಕಾಗಿ ಡಿಸ್‌ಪ್ಲೇ ಮಾಡವುದಕ್ಕೆ ಹಣ ಕೊಟ್ಟಿದ್ದೀರಾ ?

Sri R. M. PATIL.—That is a proposal pending with the Finance Department for some time. This time, I hope it will be sanctioned.

Sri G. V. GOWDA.—I wish to know the tourist centres in Mysore District.

Sri R. M. PATIL.—Somanathpur, Mahadeswara Betta, Bandipur, Shivasamudra. These are selected for implementation in the Third Plan.

Sri D. PARAMESWARAPPA.—May I know whether Kemmanagundi is taken up as a tourist centre and if so, are there any proposals before the Government ?

Sri R. M. PATIL.—In the Third Plan, it is not contemplated. As for the same being taken up in the Fourth Plan, it is under consideration.

ಶ್ರೀ ಆರ್. ಎನ್. ಲಕ್ಷ್ಮಿಪತಿ.—ಕೋಲಾರ ಜಿಲ್ಲೆಯಲ್ಲಿ ಯಾವ ಯಾವ ಟೂರಿಸ್ಟ ಸೆಂಟರ್ಸ್ ಇವೆ.?

ಶ್ರೀ ಆರ್. ಎಂ. ಪಾಟೀಲ್.—ಅದು ಅವರಿಗೇ ಚೆನ್ನಾಗಿ ಗೊತ್ತಿದೆ. ಕೋಲಾರ್ ಜಿಲ್ಲೆಯಲ್ಲಿ ನಂದೀ ಬೆಟ್ಟ ಇದೆ.

Mr. SPEAKER.—May I suggest to the Hon'ble Minister to supply every Member with a copy of the list ? It is printed and published.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಐದು ಜಿಲ್ಲೆಗಳಲ್ಲದೆ ಇನ್ನೂ ಎಲ್ಲಿಯಾದರೂ ಟೂರಿಸ್ಟ್ ಸೆಂಟರ್ಸ್ ಮಾಡಲು ಸಾಧ್ಯವಿದೆಯೇ ಎನ್ನುವುದಕ್ಕೆ ಸರಕಾರ ಸರ್ವೆ ಕೆಲಸ ಏನಾದರೂ ಮಾಡಿಸಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಕೆಲವು ಕಡೆ ವರ್ಕ್ಸ್ ಪ್ರಾರಂಭವಾಗಿದೆ.

In Tumkur District, Devarayana Durga. In Chitradurg District, Vani Vilas Sagar, in Mysore District, Somanathpur, Mahadeswara Betta, Bandipur, Shivasamudra.

Sri G. V. GOWDA.—What about Gopalaswamy Betta ?

Sri R. M. PATIL.—That will be taken up afterwards.

Hassan District : Sravanabelagola, Belur.

South Kanara : Mangalore

Coorg District : Talakaveri

Belgaum : Gokak Falls work is to be started.

Bidar : Basavakalyan

North Kanara : Magod Falls

Mr. SPEAKER.—What about "MUKKA" ?

Sri R. M. PATIL.—Mukka is to be taken up after acquisition proceedings are over.

Sri T. MADIAH GOWDA.—Is it not a fact that Savanadurga can be a tourist centre in Bangalore District ?

Sri R. M. PATIL.—It will be considered when the plan in drawn up.

Sri D. PARAMESWARAPPA.—In Shimoga District, is it not a fact that most of the tourists have suggested Kodachadri Hills as the most suitable place for a tourist centre ?

Sri R. M. PATIL.—Personally I do not know. Even Government records do not bear it. So far as the Third Plan is concerned, it is not included. If my friend urges, it is a matter for consideration.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸ್ವಾಮಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವುದಾದರೂ ಒಂದು ಸ್ಥಳವನ್ನು ಟೂರಿಸ್ಟ್ ಕೇಂದ್ರಕ್ಕೆ ಯೋಗ್ಯವಾದುದು ಸರಕಾರದ ಕಣ್ಣಿಗೆ ಬೀಳಲಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಈಗ ಹೇಳಿದರೆ ಕಣ್ಣಿಗೆ ಬೀಳುತ್ತದೆ.

Sri K. LAKKAPPA.—I am glad for having proposed Devarayana Durga as a tourist centre. What about the proposal of Siddana Betta in Koratagere Taluk ? Is there any proposal at all ?

Sri R. M. PATIL.—Siddanna Betta is one of the good spots. But funds are not available.

Sri J. P. SARWESH.—May I know why Gulbarga is not added because it happens to be a very religious place ? It is famous for URS and it is a historical place Do you consider the question of including it *i.e.*, Gulbarga proper ?"

Sri R. M. PATIL.—In Gulbarga proper, there is a Tourist Home to be built up. It has been taken up and it will be implemented shortly.

ಶ್ರೀ ಎನ್. ನಂಜೇಗೌಡ.—ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಹೇಮಗಿರಿ ಎಂದು ಇದೆ. ಅದನ್ನು ಟೂರಿಸ್ಟ್ ಸೆಂಟರಾಗಿ ಮಾಡುತ್ತೀರಾ ?

Sri R. M. PATIL.—Well, for the information of the House, the old Mysore area is said to be a paradise for tourists. Unfortunately funds are not available. Therefore many of the Hon'ble Members shall have to be disappointed at least in the Third Plan.

ಶ್ರೀ ಪಿ. ಮನಿಯಪ್ಪ.—ಜೋಗೀಮಠ ಹಿಲ್ ಪ್ರವಾಸೀ ಕೇಂದ್ರವನ್ನಾಗಿ ಮಾಡುತ್ತೀರಾ ?

Sri R. M. PATIL.—After Vani Vilas Sagar is completed it will be considered.

1-00 P.M.

Sri S. M. KRISHNA.—Is the Government aware that a large number of tourists who come to visit our State go back frustrated, disappointed because they do not get the necessary assistance from the various tourist bureaus that are established by Government ?

Sri R. M. PATIL.—It is self-contradictory. If there is frustration and disappointment, tourists will not come. The very fact that a large number of tourists are coming goes to show that they are well satisfied.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರದಲ್ಲಿ ಅಶೋಕನ ಶಿಲಾಶಾಸನಗಳಿವೆ. ಅದು ಬಹಳ ಮುಖ್ಯವಾದ ಸ್ಥಳ. ಅದನ್ನು 4ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಟೂರಿಸ್ಟ್ ಸೆಂಟರಾಗಿ ಸೇರಿಸುವುದಕ್ಕೆ ಸರಕಾರದವರು ಯೋಜನೆ ಮಾಡುತ್ತಾರೆಯೇ ?

Sri R. M. PATIL.—That also will be considered.

ಶ್ರೀ ಎಚ್. ಡಿ. ದೇವೇಗೌಡ.—ಹಾಸನದಲ್ಲಿ ಕಟ್ಟಡಕಟ್ಟಿ, ಟೂರಿಸ್ಟ್ ಸೆಂಟರು ಓಪನ್ ಮಾಡದೆಯೇ ಹಾಗೆಯೇ ಬಿಟ್ಟಿರುವುದಕ್ಕೆ ಕಾರಣವೇನು ?

Sri R. M. PATIL.—It will be opened after April.

ಶ್ರೀ ಎನ್. ರಾಚಯ್ಯ.—ಮೈಸೂರು ಜಿಲ್ಲೆಯಲ್ಲಿ ತಲಕಾಡು ಮತ್ತು ನಂಜನಗೂಡನ್ನೂ ಏಕೆ ಸೇರಿಸಬಾರದು ?

Sri R. M. PATIL.—It will be listed along with others for consideration.

ಶ್ರೀ ಕೆ. ಲಕ್ಕಪ್ಪ.—ಕೊರಟಗೆರೆ ತಾಲ್ಲೂಕು ಸಿದ್ಧನಬೆಟ್ಟದಲ್ಲಿ ಅನೇಕ ಖಾಹಿಲೆಗಳನ್ನು ವಾಸಿ ಮಾಡುವ, ರಾಜಕೀಯದಲ್ಲಿ ನೊಂದಿರತಕ್ಕಂಥವರ ಆಯಸ್ಸನ್ನು ಅಭಿವೃದ್ಧಿ ಮಾಡತಕ್ಕಂಥ ಮತ್ತು ಅವರ ತೊಂದರೆಗಳಿಗೆ ಕಾಯಕಲ್ಪ ಸಿಕ್ಕುವಂಥ ಸೊಪ್ಪು, ಆಯುರ್ವೇದ ಮೂಲಿಕೆಗಳು ಸಿಕ್ಕುತ್ತವೆ. ಅದನ್ನು ಏನಾದರೂ ತೆಗೆದುಕೊಳ್ಳುವುದಕ್ಕೆ ಸರಕಾರ ಕಾರ್ಯಕ್ರಮ ತೆಗೆದು ಕೊಳ್ಳುತ್ತದೆಯೆ ?

Sri C. J. MUCKANNAPPA.—Pandit Madan Mohan Malaviya got some herbs from Sidddanabetta.

Sri R. M. PATIL.—That will be considered when health resort is to be considered.

ಶ್ರೀ ಎಸ್. ಪಿ. ಘಾಯದೆ.—ಉತ್ತರಕರ್ಣಾಟಕದ ಗೋಕರ್ಣವನ್ನು ಟೂರಿಸ್ಟ್ ಸೆಂಟರಾಗಿ ಮಾಡಬೇಕೆಂದು ಒಂದು ಸಲ ಡಿಸೈಡ್ ಮಾಡಿದ್ದರು. ಏನು ಮಾಡುತ್ತೀರಿ ?

Sri R. M. PATIL.—It is already a tourist centre; but it requires some good rest home.

Sri S. SIVAPPA.—The Minister was pleased to state that old Mysore area had become almost a paradise for tourists. In view of this fact, will the Government of Mysore urge the Centre to provide more funds to give more amenities to the tourists in the Mysore State and make it really a paradise ?

Sri R. M. PATIL.—We are trying our level best.

ಶ್ರೀ ಡಿ. ಎನ್. ಪಾಟೀಲ್.—ಬಾದಾಮಿ ಚಾಲೂಕ್ಯರ ರಾಜಧಾನಿಯಾಗಿತ್ತು. ಟೂರಿಸ್ಟ್ ಸೆಂಟರಾಗಿ ಮಾಡಿದರೆ ಅನುಕೂಲವಾಗುತ್ತದೆ. ವಿಚಾರ ಮಾಡುತ್ತೀರ ?

Sri R. M. PATIL.—That is being considered so far as Bijapur is concerned. But as for Badami, I do not know whether we are in a position to establish a tourist bureau there.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಿಂದೂಸ್ಥಾನದಲ್ಲಿ ಅತ್ಯಂತ ಪ್ರಖ್ಯಾತವಾಗಿರತಕ್ಕಂಥ ಶೃಂಗೇರಿ ಕ್ಷೇತ್ರ, ಬಾಬಾಬುಡನಗಿರಿ, ಮುಳ್ಳಯ್ಯನಗಿರಿ, ಕೆಮ್ಮಣ್ಣುಗುಂಡಿಯನ್ನು ಪ್ರವಾಸಿಕೇಂದ್ರಗಳಲ್ಲಿ ಸೇರಿಸಬೇಕು ಎಂದು ರೆಕಮೆಂಡ್ ಮಾಡಿದ್ದಾರೆಯೇ ?

Sri R. M. PATIL.—The Presidents and Members of almost all the Taluka Boards of Chickmagalur District met me. They are very anxious to contribute their quota and we shall consider that.

Sri S. M. KRISHNA.—Would the Minister categorise the nature of the assistance and help that is being rendered to the tourists in these bureaus in Bangalore, Hasssan, Bijapur and other places ?

Sri R. M. PATIL.—The bureau is meant only to give information and so far as facilities are concerned, we are making frantic efforts to afford vehicles and good restaurants also. That is the only thing that is required and as such we are trying our level best to satisfy the tourists, whether they are tourists of our country or foreign tourists.

SRI SANJEEVANATH AIKALA.—In how many such centres Government guides are provided and other places there are guides independent of the tourists centre ?

SRI R. M. PATIL.—So far as the tourist bureaus are concerned, there are guides and in other places some unauthorised agents are working. But we have got a training class and candidates are being trained and they are to be absorbed shortly.

Construction of a bridge across Hemavathi river on the Halke-Kotrakere road.

*Q.—192 SMT. B. L. SUBBAMMA (Chickmagalur).—

Will the Government be pleased to state :—

(a) since how many years the people are requesting to construct a bridge across Hemavathi River on the Halike—Kotrakere Road in Banakal Hobli, Mudigere taluk ;

(b) whether they would take up this construction work early, as this road connects about 21 villages and also this being a District Board Road ;

(c) when they have received the estimate in respect of this work ?

A.—SRI G. B. SHANKAR RAO (Parliament Secretary to the Minister for Public Works).—

(a) 3 years.

(b) Yes, when funds are available.

(c) No estimate is received.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—(ಇ) ನಲ್ಲಿ ತತ್ಸಂಬಂಧದಲ್ಲಿ ಯಾವ ಅಂದಾಜೂ ಬಂದಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಎರಡು ವರ್ಷದಲ್ಲಿ ೧, ೬೬,೦೦೦ ರೂಪಾಯಿಗೆ ಸೂಪರಿಂಟೆಂಡಿಂಗ್ ಇಂಜಿನಿಯರ ಆಫೀಸಿಗೆ ಅಂದಾಜು ಬಂದಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಜಿ. ಬಿ. ಶಂಕರರಾವ್.—ಅದು ಗಮನಕ್ಕೆ ಬಂದಿಲ್ಲ. ಅದು ಸೂಪರಿಂಟೆಂಡಿಂಗ್ ಇಂಜಿನಿಯರಿಂದ ಸ್ಕ್ರುಟಿನಿಯಾಗಿ, ನಂತರ ಚೀಫ್ ಇಂಜಿನಿಯರಿಂದ ಸ್ಕ್ರುಟಿನಿಯಾಗಿ ಆಮೇಲೆ ಸರಕಾರಕ್ಕೆ ಬರುತ್ತದೆ.

ಶ್ರೀ ಜಿ. ಎಸ್. ಪಾಟೀಲ್.—ಹಣ ದೊರೆತಾಗ ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ. ಎಲ್ಲ ಕಡೆಗೂ ಖರ್ಚುಮಾಡಿ ಎಲ್ಲರಿಗೂ ಅನುಕೂಲ ಮಾಡಿಕೊಡುವುದು ಸರಕಾರದ ಕರ್ತವ್ಯ ವಲ್ಲವೆ?

ಶ್ರೀ ಜಿ. ಬಿ. ಶಂಕರರಾವ್.—ಒಂದು ಕಡೆಯ ಕೆಲಸ ತೆಗೆದುಕೊಳ್ಳುವುದಕ್ಕೆ ಅಗುವುದಿಲ್ಲ. ಎಲ್ಲಾ ಕಡೆಯ ಅವಶ್ಯಕತೆಗಳನ್ನೂ ಗಮನದಲ್ಲಿಟ್ಟುಕೊಂಡು ಸರಕಾರ ಕೆಲಸ ಮಾಡುತ್ತದೆ. ಮಾನ್ಯ ಸದಸ್ಯರು ಆ ರೀತಿ ಭಾವಿಸಿದ್ದರೆ ತಪ್ಪು.

ಶ್ರೀ ಕೆ. ಎಚ್. ರಂಗನಾಥ.—ಯಾವಾಗ ಎಸ್ಟಿಮೇಟು ಮಾಡಲಾಯಿತು?

MR. SPEAKER.—Let the Hon'ble Member kindly see the answer given; 'No estimate received'.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಸೇತುವೆಗಳ ನಿರ್ಮಾಣಕಾರ್ಯಗಳಿಗೆ ಕೇಂದ್ರ ಸರಕಾರದವರು ೧ ಕೋಟಿ ರೂಪಾಯಿಯನ್ನು ಈ ವರ್ಷ ಕೊಡುವ ಸಂದರ್ಭದಲ್ಲಿ, ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಮನಸ್ಸನ್ನು ಮಾಡುತ್ತೀರ?

Mr. SPEAKER.—It is Hypothetical.

ಶ್ರೀ ಡಿ. ಪರಮೇಶ್ವರಪ್ಪ.—ಮಲೆನಾಡು ಭಾಗದಲ್ಲಿ ಇಂಥ ಕಾರ್ಯಗಳಿಗೆ ಆದ್ಯತೆ ಕೊಡುವುದಕ್ಕೆ ಸರಕಾರ ವಿಚಾರ ಮಾಡುತ್ತದೆಯೆ?

ಶ್ರೀ ಜಿ. ಬಿ. ಶಂಕರರಾವ್.—ಮಲೆನಾಡು ಭಾಗದಲ್ಲಿಯೆ ಅಲ್ಲ, ಎಲ್ಲ ಕಡೆಯೂ ಅವಶ್ಯಕತೆ ಇದೆ. ಹಣಕಾಸಿನ ಪರಿಸ್ಥಿತಿ ಮತ್ತು ಅವಶ್ಯಕತೆಗಳನ್ನು ನೋಡಿಕೊಂಡು; ಕೆಲಸ ಮಾಡುತ್ತೇವೆ.

Grievances of the Students of the Government College of Ayurvedic Medicine

*Q.—256 **Sri GANGADHAR NAMOSHI** (Gulbarga).—

Will the Government be pleased to state :—

(a) whether the Health Minister had promised to consider the grievances of the Government College of Ayurvedic Medicine students who had gone on strike recently ;

(b) what steps have been taken in this regard ?

A.—**Sri K. NAGAPPA ALVA** (Minister for Health)—

(a) Yes.

(b) *Vide* annexure given below.

ANNEXURE

(1) The students of Government College of Ayurvedic Medicine have been posted to Mercara Hospital for Clinical Training. Part time Lecturers in Allopathic subjects have been sanctioned for teaching in the above Hospital.

(2) The equipment required for the Laboratories have been sanctioned.

(3) Arrangements have been made for the students to witness post-mortem cases in Mysore Medical College.

(4) Permanent building for the College and the Hostel for men and women students in Epidemic Diseses Hospital premises are under way.

(5) Pending the posting of permanent staff, part-time allopathic lecturers have been appointed. There is sufficient teaching staff in the College and 2 teachers have undergone post-graduate training at Jamnagar. Two Lecturers have undergone Refresher Courses in Ayurveda at Jamnagar. Two members of the staff of the Department have been deputed to Jamnagar for post-graduate training for a period of 2 years.

(6) *Internship* : Government are examining the proposals sent by the *ex-officio* Director of Indian Medicine.

ಶ್ರೀ ಗಂಗಾಧರ ನಾಮೋಷಿ.—ಮಾನ್ಯ ಮಂತ್ರಿಗಳು ಪ್ರಾಮಿಸ್ ಕೊಟ್ಟು ಎರಡು ವರ್ಷವಾಯಿತು. ಮೊದಲನೆಯ ಬ್ಯಾಚಿನವರು ಹೋಂ ಸರ್ಜನ್ ಕೋರ್ಸನ್ನೂ ಮುಗಿಸಿಕೊಂಡು ಬಂದಿದ್ದಾರೆ. ಅವರ ಸಂಬಳ ಎಷ್ಟು ಅನ್ನುವ ಬಗ್ಗೆ ಏನು ನಿರ್ಧಾರ ಮಾಡಿದ್ದೀರಿ?

ಶ್ರೀ ಕೆ. ನಾಗಪ್ಪ ಆಳ್ವ.—ಸರಕಾರ ಇನ್ನು ಸ್ವಲ್ಪ ಸಮಯದಲ್ಲಿಯೆ ನಿರ್ಣಯ ಮಾಡುತ್ತದೆ.

ಶ್ರೀ ಗಂಗಾಧರ ನಾಮೋಷಿ.—ಬೋರ್ಡ್ ಕಾನ್ ಸ್ಟಿಟ್ಯೂಟ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದನ್ನು ಮಾಡಿದ್ದೀರಾ

ಶ್ರೀ ಕೆ. ನಾಗಪ್ಪ ಆಳ್ವ.—ಬೋರ್ಡ್ ಕಾನ್‌ಸ್ಟಿಟ್ಯೂಷನ್ ಕೂಡ ಈ ತಿಂಗಳ ಆಖೈರೊಳಗೆ ಆಗುತ್ತದೆ.

Sri G. V. GOWDA.—Is it in the interests of the students to ask them to go for clinical work at Mercara and witness the post-mortem cases in Mysore and live elsewhere with Allopathic doctors as Lecturers?

Sri K. NAGAPPA ALVA.—The answers have not been understood properly. For observation of post-mortem different classes of students are posted and the students of the Final Year only are posted in the Civil Hospital at Mercara for clinical training and accordingly, the time table is so adjusted that those who are at Mercara will attend the hospital there and those who are in Mysore will avail of other facilities.

Sri G. DUGGAPPA.—May I know whether the laboratory equipment for which sanction has been accorded has been supplied to the hospital or is the sanction only on paper?

Sri K. NAGAPPA ALVA.—Equipment worth Rs. 23,320 has sanctioned and it is being got. The staff has also been sanctioned.

Sri G. DUGGAPPA.—I want a definite reply as to whether the equipment has been supplied to the hospital?

Sri K. NAGAPPA ALVA.—They have not been completely supplied but they will be supplied.

Sri G. DUGGAPPA.—Has it come to the notice of Government that the clinical material available in the hospital is not adequate?

Sri K. NAGAPPA ALVA.—As it is, the clinical material is not enough but we have been increasing the bed strength. It has been increased from 100 to 150.

Sri SANJEEVANATH AIKALA.—Is it a fact that Unani system is not being taught because there is no sufficient teaching staff?

Sri K. NAGAPPA ALVA.—We are having enough staff as it is, except one post which has not been filled up.

ಶ್ರೀ ಗಂಗಾಧರ ನಾಮೋಷಿ.—ಎರಡು ವರ್ಷ ಆದರೂ ಆ ಬಾಡಿ ಕಾನ್‌ಸ್ಟಿಟ್ಯೂಟ್ ಮಾಡಿಲ್ಲ, ಅದನ್ನು ಮಾಡಿ ನಿರ್ಣಯ ತೆಗದುಕೊಳ್ಳಲಿಕ್ಕೆ ಎಷ್ಟು ದಿವಸ ಆಗಬಹುದು ?

ಅಧ್ಯಕ್ಷರು.—ಈ ತಿಂಗಳ ಆಖೈರಿನಲ್ಲಿ ಎಂದು ಹೇಳಿದರು.

Scholarships, freeships, and half-freeships sanctioned to the Krishnarajapet Polytechnic during 1962.

*Q.—49. Sri N. NANJE GOWDA (Krishnarajapet).—

Will the Government be pleased to state :—

(a) the number of scholarships, freeships and half-freeships sanctioned to the Krishnarajapet Polytechnic during 1962;

(SRI N. NANJE GOWDA)

(b) the number of applications received for the same during the above year;

(c) the number of students who have been awarded scholarships, freeships and half freeships?

A.—SRI S. R. KANTHI (Minister for Education).—

(a)

Normal Scheme			Plan Scheme
General Scholarships	S.C. and S.T. Scholarships	Freeships	Scholarships
34	4	39	38

(b) 209 in all.

(c)

Normal Scheme				Plan Scheme
Scholarships		Freeships		Scholarships
General	S.C. and S.T.	Full	Half	
34	...	21	36	38

ಶ್ರೀ ಎನ್. ನಂಜೇ ಗೌಡ.—ಈ ಸ್ಕಾಲರ್‌ಷಿಪ್ ಅನ್ನು ಹಂಚಬೇಕಾದರೆ ಕಮಿಟಿ ಇರುತ್ತದೆ ಅಲ್ಲವೇ?

† ಶ್ರೀ ಎಸ್. ಆರ್. ಕಂಠಿ.—ಹೌದು.

ಶ್ರೀ ಎನ್. ನಂಜೇ ಗೌಡ.—ಆ ಕಮಿಟಿಯವರು ಮಾಡಿರುವ ಪಟ್ಟಿಯನ್ನು ಅಲ್ಲಗಳೆದು ಬೇರೆ ಯಾವರಿಗೆ ಸ್ಕಾಲರ್ ಷಿಪ್ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಆರ್. ಕಂಠಿ.—ಇಲ್ಲ.

ಶ್ರೀ ಎನ್. ನಂಜೇ ಗೌಡ.—ಹಾಗೆ ಮಾಡಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್. ಆರ್. ಕಂಠಿ.—ಹಾಗೇನಾದರೂ ಆಗಿದ್ದರೆ ನನ್ನ ಗಮನಕ್ಕೆ ತನ್ನಿ ವಿಚಾರ ಮಾಡಿ ನೋಡೋಣ.

ಶ್ರೀ ಎನ್. ನಂಜೇ ಗೌಡ.—ಪೂರ್ಣ ಶುಲ್ಕ ರಿಯಾಯಿತು 39 ಇದ್ದು 21 ಮಾತ್ರ ಕೊಟ್ಟು ಉಳಿದದ್ದನ್ನು ಕೊಡದೇ ಇರುವುದಕ್ಕೆ ಕಾರಣವೇನು?

ಶ್ರೀ ಎಸ್. ಆರ್. ಕಂಠಿ.—21 ಮಾತ್ರ ಕೊಟ್ಟಿದೆ ಎಂದು ಅದರ ಅರ್ಥ ಅಲ್ಲ. ಅರ್ಧ ಶುಲ್ಕ ರಿಯಾಯಿತಿ ಕೂಡ ಇದೆ, ಪೂರ್ಣ ಶುಲ್ಕ ರಿಯಾಯಿತಿಯಲ್ಲಿ 21 ಪೂರ್ಣ ಶುಲ್ಕ ರಿಯಾಯಿತಿ ಮಾಡಿದೆ, ಉಳಿದದ್ದು ಅರ್ಧ ಮಾಡಿದೆ.

SRI G. V. GOWDA.—Is there any machinery to verify if the candidates whose names have been furnished by the Scholarship Committee are actually awarded the scholarships?

SRI S. R. KANTHI—The persons affected will not keep quiet. They will bring any lapse to the notice of Government.

SRI G. V. GOWDA.—Has it come to the notice of Government that the list prepared by the committee has not been implemented and that somebody else has got the scholarships?

SRI S. R. KANTHI.—No, Sir. It has not come to the notice of Government.

SRI G. DUGGAPPA.—In (a) it is stated that 4 scholarships were awarded to Scheduled Castes but (b) shows nil. Why were the scholarships discontinued?

SRI S. R. KANTHI.—That is because these students subsequently got the Government of India scholarships.

ಶ್ರೀ ಎನ್. ನಂಜೇ ಗೌಡ.—ಮೆರಿಟ್ ಸ್ಕಾಲರ್‌ಷಿಪ್ ಕೊಡುವಾಗ ಮೆರಿಟ್ ಇಲ್ಲದೇ ಇರುವವರಿಗೆ ರೆಕಮಂಡ್ ಮಾಡಿ ಮೆರಿಟ್ ಇರುವವರನ್ನು ಬಿಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಬಹಳ ಚಮತ್ಕಾರದ ವಿಚಾರ ಹೇಳುತ್ತಾ ಇದ್ದೀರಿ. ದಯಮಾಡಿ ಅದನ್ನು ಪ್ರತ್ಯೇಕವಾಗಿ ನನ್ನ ಗಮನಕ್ಕೆ ತಂದರೆ ವಿಚಾರ ಮಾಡಿ ನೋಡಿಸುತ್ತೇನೆ.

ಶ್ರೀ ಎನ್. ನಂಜೇ ಗೌಡ.—ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ವಿಚಾರ ಮಾಡಿ ನೋಡಿಸುತ್ತೇನೆ.

Applications received for Irrigation pump sets from Mandya District.

**Q*.—43. Sri N. NANJE GOWDA (Krishnarajapet).—

Will the Government be pleased to state:—

(*a*) the number of applications they have received for irrigation pumpsets from Mandya District from March 1962 uptil now (Taluk-war information may be given);

(*b*) out of them how many have been sanctioned together with the number of pumpsets supplied (Taluk-war information may be furnised)?

A.—Sri H. C. BORAIAH (Parliamentary Secretary to Minister for Agriculture).—

(*a*) 224 for Electric Pumpsets; 75 fcr Diesel Oil Engine Pumpsets (*Vide* statement appended).

(b)—	*Electric Pumpsets*	*Diesel Oil Engine Pumpsets*
Sanctioned ...	89	50
Supplied ...	88	50

(*Vide* statement appended)

STATEMENT

Showing Talukwise the Progress of Distribution of Electric Pumpsets in Mandya District from 1st March 1962 to 3rd December 1963.

(i)	Mandya ...	62
(ii)	Maddur ...	35
(iii)	Nagamangala ...	27
(iv)	Pandavapura ...	30
(v)	Malavalli ...	31
(vi)	Srirangapatna ...	17
(vii)	Krishnarajpet ...	22
	Total ...	224

(SRI H. C. BORAIAH)

Sanctioned.			Supplied.
(i)	Mandya ...	36	35
(iii)	Maddur ...	16	16
(ii)	Nagamangala ...	7	7
(iv)	Pandavapura ...	2	2
(v)	Malavalli ...	12	12
(vi)	Srirangapatna ...	8	8
(vii)	Krishnarajpet ...	8	8
	Total ...	89	88

STATEMENT

Showing Talukwise the Progress of Distribution of Diesel Oil Engine Pumpsets in Mandya District from 1st March 1962 to 3rd December 1963.

Sl. No.	Taluk	No. of applications received.	No. sanctioned and supplied.
1	Mandya ...	6	...
2	Maddur ...	13	12
3	Malavalli ...	17	12
4	Pandavapura ...	5	4
5	Srirangapatna ...	6	2
6	Krishnarajpet ...	15	12
7	Nagamangala ...	13	8
	Total ...	75	50

ಶ್ರೀ ಎಚ್. ನಂಜೇಗೌಡ.—300 ಅರ್ಜಿ ಬಂದದ್ದರಲ್ಲಿ ಕೇವಲ 130 ಮಾತ್ರ ಮಂಜೂರು ಆಗಿವೆ. ಉಳಿದದ್ದು ಮಂಜೂರು ಆಗದೇ ಇರುವುದಕ್ಕೆ ಕಾರಣವೇನು?

† ಶ್ರೀ ಎಚ್. ಸಿ. ಬೋರಯ್ಯ.—ಅದಕ್ಕೆ ರಿಕಾರ್ಡ್ ಬಿಲ್ಡ್ ಅಪ್ ಮಾಡಬೇಕಾಗುತ್ತದೆ, ಅದು ನಾನಾ ಸ್ಟೇಜ್‌ನಲ್ಲಿ ಇರುತ್ತದೆ, ಯಾವ ಯಾವುದು ಪೂರ್ಣವಾಗಿರುತ್ತದೆಯೋ ಅವುಗಳನ್ನು ಮಂಜೂರು ಮಾಡುತ್ತಾರೆ.

ಶ್ರೀ ಸಿ. ಆರ್. ರಂಗೇಗೌಡ.—ಇದು ಬಹಳ ನಿಧಾನವಾಗುತ್ತಾ ಇದೆ ಎಂದು ಹೇಳುತ್ತಾರೆ. ಅದಕ್ಕೆ ಕಾರಣ ಇದಕ್ಕೆ ಸಂಬಂಧಪಟ್ಟ ಕಾಗದಗಳು ಎಂ. ಇ. ಎಸ್. ಇಲಾಖೆಯಲ್ಲಿ 4-5 ಜನರ ಹತ್ತಿರ ಹೋಗಬೇಕು. ಇದೇ ರೀತಿ ಇನ್ನೂ ಕೆಲವಾರು ಕಡೆ ಹತ್ತಾರು ಕಡೆ ಅರ್ಜಿ ಓಡಾಡಬೇಕಾಗುತ್ತದೆ. ಆದ್ದರಿಂದ ಇದನ್ನು ಮಿನಿಮೈಸ್ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡುತ್ತೀರಾ.

ಶ್ರೀ ಎಚ್. ಸಿ. ಬೋರಯ್ಯ.—ಬಹಳ ನಿಧಾನವಾಗುತ್ತಿದೆ ಎಂದರೆ ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಸರಳಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಇದನ್ನು ಜಿಲ್ಲಾ ಮಟ್ಟದಲ್ಲಿ ಇತ್ಯರ್ಥ ಮಾಡಲಾಗುತ್ತಿದೆ. ಅದಕ್ಕೆ ಬದಲಾಗಿ ಎಲೆಕ್ಟ್ರಿಸಿಟಿ ಇಲಾಖೆಯವರು ತಾಲ್ಲೂಕು ಲೆವಲ್‌ನಲ್ಲೇ ಇತ್ಯರ್ಥಮಾಡಿ ರೈತರಿಗೆ ಅನುಕೂಲ ಮಾಡಿಕೊಡುವಂತೆ ಸರ್ಕಾರದವರು ವ್ಯವಸ್ಥೆ ಮಾಡುತ್ತಾರೆಯೇ?

ಶ್ರೀ ಎಚ್. ಸಿ. ಬೋರಯ್ಯ.—ಅದನ್ನು ಪರಿಶೀಲನೆ ಮಾಡಬಹುದು.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ನಾಗಮಂಗಲ ತಾಲ್ಲೂಕು ಸದಾ ಅಭಾವ ಪ್ರದೇಶವಾದುದರಿಂದ ಅಲ್ಲಿ ಹೆಚ್ಚು ಇರಿಗೇಷನ್ ಪಂಪ್ ಸೆಟ್‌ಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಸಿ. ಬೋರಯ್ಯ.—ಸಾಧ್ಯವಾದಷ್ಟು ಹೆಚ್ಚಾಗಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಸಿ. ಬಸಪ್ಪ.—50 ಡೀಸಲ್ ಆಯಿಲ್ ಪಂಪ್ ಸೆಟ್ಟುಗಳನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ. 50 ಸಂಪೂರ್ಣವಾಗಿ ಸಪ್ಲೈ ಆಗಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿ. ಬೋರಯ್ಯ.—ಅಷ್ಟೂ ಸರಬರಾಯಿ ಆಗಿದೆ.

ಶ್ರೀ ಎಸ್. ನಂಜೇಗೌಡ.—ಕೃಷ್ಣರಾಜಪೇಟೆಗೆ 12 ಡೀಸಲ್ ಆಯಿಲ್ ಇಂಜನ್ನುಗಳನ್ನು ಕೊಟ್ಟಿದ್ದೀರಿ, ಆ 12 ಕೆಲಸ ಮಾಡುತ್ತಾ ಇವೆಯೇ? ಮತ್ತು ಬಾವಿ ಇರುವವರಿಗೆ ಅವುಗಳನ್ನು ಕೊಟ್ಟಿದ್ದೀರಾ?

ಶ್ರೀ ಎಚ್. ಸಿ. ಬೋರಯ್ಯ.—ಬಾವಿ ಇದ್ದವರಿಗೇ ಅವನ್ನು ಮಂಜೂರು ಮಾಡುವುದು.

ಶ್ರೀ ಎಸ್. ನಂಜೇಗೌಡ.—ಬಾವಿ ಇದೆ ಎನ್ನುವುದಕ್ಕೆ ತಮ್ಮ ಹತ್ತಿರ ಏನಾದರೂ ಸಾಕ್ಷಿ ಇದೆಯೇ?

(ಉತ್ತರ ಇಲ್ಲ)

Amount spent for the tour of the Parliament Members of the Mysore State in the District of South Kanara, Coorg and Mysore.

*Q.—63. Sri SANJEEVANATH AIKALA (Suratkal).—

Will the Government be pleased to state :—

(a) the total amount spent by the Government of Mysore through the Department of Publicity and Information, for the tour of the Parliament Members of Mysore State in the District of South Kanara, Coorg and Mysore in the month of November 1963;

(b) what is the purpose of the said tour;

(c) what is the actual amount drawn for the said tour?

A.— Sri R. M. PATIL (Minister for Home).—

(a) A Tour of the Members of Parliament from this State was organised by the Department in October, 1963 and not in November, 1963. The tour covered Chitradurga, Bellary, Raichur, Bijapur Belgaum, Dharwar, North Kanara, Shimoga, Chickmagalure, Hassan, South Kanara, Coorg, Mysore, Bangalore and Kolar Districts. The total amount of expenditure incurred was Rs. 6,229-07 NP.

(b) To acquaint the Members of Parliament with the development activities of the State and to enable them to make an on the spot study.

(c) An amount of Rs. 12,000 was drawn as advance.

SRI SANJEEVANATH AIKALA.—How many Parliamentary Members of the Mysore State partcipated in this tour?

Sri R. M. PATIL.—Sir, the list is not with me. I do not know how my friend is interested in the list of names.

Sri SANJEEVANATH AIKALA.—Is it not important to know as to how many members participated ? Did they submit any report to Government ?

Sri R. M. PATIL.—A report has been submitted and it is a very useful report and my friend may go through it.

Sri G. V. GOWDA.—Can a copy of the report be given.

Sri R. M. PATIL.—Yes, Sir.

Sri ANGADI CHANNABASAPPA.—Has this team which was appointed and which undertook a tour in Mysore submitted a report either to this Government or the Central Government ?

Sri R. M. PATIL.—It was not appointed. It was only at the suggestion of the Chief Mininister to know the development of the State that these Hon'ble Members took interest in this and they voluntarily went there.

ಶ್ರೀ ಗಂಗಾಧರ ನಾಮೋಶಿ—ಬಿದರೆ ಮತ್ತು ಗುಲ್ಬರ್ಗ ಹಿಂದುಳಿದ ಜಿಲ್ಲೆಗಳು ಅಭಿವೃದ್ಧಿಯಾಗಿಲ್ಲ ಎಂದು ಅಲ್ಲಿಗೆ ಹೋಗಲಿಲ್ಲವೋ ಅಥವಾ ಬೇರೆ ಯಾವ ಕಾರಣದಿಂದ ಹೋಗಲಿಲ್ಲ ?

ಶ್ರೀ ಆರ್. ಎಂ ಪಾಟೀಲ್.—ಅವರು ತಮ್ಮ ಷೆಡ್ಯೂಲ್ ಪ್ರಕಾರ ಪ್ರವಾಸಮಾಡಿದ್ದಾರೆ. ಇನ್ನೊಂದು ಸಲ ಪ್ರವಾಸ ಅರೇಂಜ್ ಮಾಡಿ ಬೇಕಾದರೆ ಬಿದರೆ ಮತ್ತು ಗುಲ್ಬರ್ಗಗಳನ್ನು ಸೇರಿಸೋಣ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದೇ ರೀತಿಯಲ್ಲಿ ಶಾಸನಸಭಾ ಸದಸ್ಯರು ರಾಜ್ಯದ ಎಲ್ಲಾ ಭಾಗಗಳಲ್ಲೂ ಪ್ರವಾಸಮಾಡುವುದು ಅವಶ್ಯಕವಲ್ಲವೆ ?

Sri R. M. PATIL.—By batches it can be arranged.

ಶ್ರೀ ಎಸ್. ಗೋಪಾಲಗೌಡ.—ಪ್ರವಾಸಮಾಡಿದ ಸಂಸತ್ ಸದಸ್ಯರಲ್ಲಿ ಮೈಸೂರು ರಾಜ್ಯದಿಂದ ಆರಿಸಿಬಂದವರು ಮಾತ್ರ ಇದ್ದರೋ ಅಥವಾ ಹೊರಗಿನವರೂ ಇದ್ದರೋ ?

ಶ್ರೀ ಆರ್. ಎಂ. ಪಾಟೀಲ್.—ಮೈಸೂರು ರಾಜ್ಯದಿಂದ ಆರಿಸಿಬಂದರು ಮಾತ್ರ ಇದ್ದರು.

Sri SANJEEVANATH AIKALA.—Who was in charge of that tour from the Government side ?

Sri R. M. PATIL.—The Director of Publicity had made arrangements and the concerned Deputy Commissioner of the places they visited were in charge.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಮೈಸೂರು ದೇಶದಿಂದ ಸಂಸತ್ತಿಗೆ ಆರಿಸಲ್ಪಟ್ಟಿರುವವರು ದೇಶ ಸಂಚಾರಮಾಡಿ ವರದಿ ಮಾಡಬೇಕಾದರೆ ಸರ್ಕಾರಿ ಖರ್ಚಿನಲ್ಲಿ ಅವರಿಗೆ ಟಿ. ಎ. ಡಿ. ಎ. ಮುಂತಾದ್ದನ್ನೆಲ್ಲಾ ಏಕೆ ಕೊಡಬೇಕು ? ವಸತಿ ಸೌಕರ್ಯ, ಊಟ ಮುಂತಾದವುಗಳ ಖರ್ಚು ಸಹ ಇದರಲ್ಲಿ ಸೇರುತ್ತದೆಯೇ ?

Sri R. M. PATIL.—It has been answered and I invite his attention to the answer;

Mr. SPEAKER.—Now the Hon. Member Sri Revana Siddappa may answer the question of the Hon. Minister that he does not read the answers. (laughter)

ಶ್ರೀ ಅಂಗಡಿ ಚನ್ನಬಸಪ್ಪ.—ಖರ್ಚುಮಾಡಿರುವ ಈ ಹಣ ಯಾವ ಹೆಡ್ಡಿಗೆ ಹೋಗುತ್ತದೆ ?

ಶ್ರೀ ಆರ್. ಎಂ. ಪಾಟೀಲ್.—ಪಬ್ಲಿಸಿಟಿ ಇಲಾಖೆಯ ಹೆಡ್ಡಿಗೆ.

ಶ್ರೀ ಎಸ್. ಗೋಪಾಲಗೌಡ.—ಪ್ರವಾಸಕಾರ್ಯ ಮೈಸೂರು ಸರಕಾರವೇ ಏರ್ಪಡಿಸಿತೋ ಅಥವಾ ಸಂಸತ್ ಸದಸ್ಯರೇ ಇನಿಷಿಯೇಟಿವ್ ತೆಗೆದುಕೊಂಡು ಸರ್ಕಾರದ ನೆರವನ್ನು ಕೇಳಿದರೋ ?

Sri R. M. PATIL.—A Suggestion was made by the State Government and they agreed and ultimately a decision was taken and they went round voluntarily.

ಶ್ರೀ ಎಸ್. ಗೋಪಾಲಗೌಡ.— ಪ್ರವಾಸ ಕೈಕೊಳ್ಳುವುದನ್ನು ಎಲ್ಲಾ ಸಂಸತ್ ಸದಸ್ಯರಿಗೂ ಪೂರ್ವಭಾವಿಯಾಗಿ ತಿಳಿಸಿದ್ದರೇ? ಎಲ್ಲ ಸದಸ್ಯರೂ ಬಂದಿದ್ದರೇ? ಹುಬ್ಬಳ್ಳಿಯಲ್ಲಿ ನಡೆಸಿದ ಸಭೆಯ ನಂತರ ಮುಖ್ಯವಾದ ಸಲಹೆಗಳನ್ನೇನು ಸರ್ಕಾರಕ್ಕೆ ಕೊಟ್ಟಿದ್ದಾರೆ?

Sri R. M. PATIL.—Sir, my friend is confusing. The Hubli meeting is a different meeting, from the one which is under discussion now. So for as this is concerned, they voluntarily agreed to join and went in a team as a study team.

Sri SANJEEVANATH AIKALA.— Sir, is it not a fact that in certain dry areas this team broke the prohibition law thinking that they were in a wet area?

Mr. SPEAKER.—Does he mean an innocent mistake on their part? (Laughter)

Sri R. M. PATIL.—It has not come to the notice of the Government.

Sri V. S. PATIL.—May I know as to whether there are any boards showing the limits of wet area and dry area? Is there anything to enlighten the public in this respect?

Sri R. M. PATIL.—I think the people concerned do not need any such boards. They know the jurisdiction and they further know where the drinks are available.
(Laughter)

ಶ್ರೀ ಎಸ್. ಭೀಮಣ್ಣ.—ನಾಮೋಷಿಯವರಿಗೆ ಉತ್ತರ ಹೇಳುವಾಗ ಬೀದರ್ ಮತ್ತು ಗುಲ್ಬರ್ಗ ಬಿಟ್ಟಿರುವುದನ್ನು ಮುಂದೆ ಸೇರಿಸೋಣ ಎಂದು ಹೇಳಿದರು. ಆ ಪ್ರದೇಶಗಳು ಬಹಳ ಹಿಂದುಳಿದಿವೆಯೆಂದು ಅವನ್ನು ಆರಿಸಲಿಲ್ಲವೋ?

Mr. SPEAKER.—It was asked by Sri Namoshi and it was answered.

Sri V. S. PATIL.—Sir, the wet area is now restricted to certain taluks and certain districts. Even though we have been here for the last 7 years we do not know the exact limits of these taluks. How is it possible for outsides to know the limits whether it is a wet area or dry area?

Sri R. M. PATIL.—If my Hon. friend tries to know it, he will know it in a minute; he has not applied his mind to that perhaps.

ಶ್ರೀ ಎಸ್. ಗೋಪಾಲಗೌಡ.—ರಾಜ್ಯದಿಂದ ಆರಿಸಿ ಹೋಗಿರುವ ಸಂಸತ್ ಸದಸ್ಯರನ್ನು ರಾಜ್ಯಕ್ಕೆ ಕರೆಸಿ ರಾಜ್ಯಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದಿಂದ ಏನೇನು ಕೆಲಸಗಳನ್ನು ಮಾಡಿಸಿಕೊಳ್ಳಬೇಕಾಗಿದೆ ಎಂದು ತಿಳಿಸುವುದು ಅಥವಾ ಬ್ರೀಫ್ ಮಾಡುವುದು ಇಂಥ ವ್ಯವಸ್ಥೆಗೆ ರಾಜ್ಯದಲ್ಲಿ ಏನಾದರೂ ಏರ್ಪಾಡು ಮಾಡಿದ್ದೀರಾ?

Sri R. M. PATIL.—For the last two years this programme is being taken up. Before they go to Parliament, they are invited by the Chief Minister and they are enlightened. This is one of such team study so far as the economic development of the State is concerned. As I have assured the House, the report will be placed before the House. The Secretary or the Convenor who was leading the team has submitted a report and that will be placed before the House.

1-30 P.M.

Sri SANJEEVANATH AIKALA.—Am I right when I say that the Government wants to avoid giving names of the number of persons who included the team, because it is my impression that hardly 6 or 7 Parliamentary members have been included in that team?

Sri R. M. PATIL.—It is not so, Sir. It was a good number.

Mr. SPEAKER.—Question our is over.

QUESTIONS FOR ANSWERS ON THE DAY
(but not taken up)

Damages Caused to the Villagers Due to Floods in Hirehalla.

*Q.—35. Sri KUNDUR RUDRAPPA (Channagiri).—

Will the Government be pleased to state :—

(a) whether they have received representation from the Talk Development Board and the aggrieved villages stating that Hirehalla is causing damages to the villagers due to floods; and if so action taken thereon;

(b) whether the Minister concerned has not assured immediate relief to the people?

A.— Sri ALUR HANUMANTHAPPA (Deputy Minister for Minor Irrigation.—

(a) Yes. Flood banks were put up to protect the lands.

(b) Yes. The Minor Investigation Division, Shimoga, is conducting investigation.

Starting of a tourist centre at Santisagar.

*Q.—39. Sri KUNDUR RUDRAPPA (Channagiri).—

Will the Government be pleased to state :—

(a) whether they have received representations to start a tourist centre at Santisagar in Channagiri Taluk;

(b) whether they intend to start the same early in view of the facilities existing there?

A.—Sri R. M. PATIL (Minister for Home) —

(a) Yes.

(b) The proposal will be considered along with others.

Share of the Land Revenue due to the Group Gram Panchayat at Mache in Belgaum District.

*Q.—162. Sri V. S. PATIL (Belgaum-1).—

Will the Government be pleased to state :—

(a) whether they are aware that the Group Gram Panchayat at Mache in Belgaum taluk consists of Mache, Kutalwadi and Zadsapur villages;

(*b*) if so, whether they are aware that the share of Land Revenue due from Zadsapur and Kutalwadi villages have not been given to the Panchayat as yet;

(*c*) the reason for not paying the share of Land Revenue from those two villages yet;

(*d*) whether any representations have been made to the concerned officers in this regard;

(*e*) if so, the amount due to this Group Gram Panchnyat from those two villages till the end of 1963-64?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) The Groun Gram Panchayat at Mache consists of Mache, Kutalwadi, Zadsapur and Somanaiknahatti.

(*b*) It is reported that the share of L. R. due from Zadsapur and Kutalwadi villages has been paid to the Group Village Panchayat.

(*c*) Does not arise in view of the reply to clause (*b*) above.

(*d*) Yes.

(*e*) Nil.

Member's Representations.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮೀ,

ಈ ಸಭೆಯು ಇತರ ಕಾರ್ಯಕಲಾಪಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ತಮ್ಮ ಗಮನವನ್ನು ಹಾಗೂ ಈ ಸಭೆಯ ಗಮನವನ್ನು ಒಂದು ಮಹತ್ವವಾದ ವಿಚಾರದಬಗ್ಗೆ ಇಲ್ಲಿ ಸೆಳೆಯ ಮಾಡಬೇಕಾಗಿದೆ. ನಮ್ಮ ರಾಜ್ಯದ ತುಮಕೂರು ಜಿಲ್ಲೆಗೆ ಸೇರಿದ ಬೆಳವತ್ತಿ ಎಂಬ ಹಳ್ಳಿಯಲ್ಲಿ ಧಾರ್ಮಿಕ ಕಾರ್ಯಗಳು ನಾಳೆ ಬರುವ ಸೋಮವಾರದಂದು ನಡೆಯಬೇಕಾಗಿದ್ದವು. ಅದಕ್ಕಾಗಿ ಎಲ್ಲ ಭಾಗಗಳಿಂದಲೂ ಜನ ಅಲ್ಲಿಗೆ ಬರುವುದರಲ್ಲಿದ್ದರು. ಆದರೆ ಇದರಲ್ಲಿ ನಮ್ಮ ರಾಜ್ಯ ಸರಕಾರದವರು ಮಧ್ಯೆ ತಲೆಹಾಕಿ ಇಲ್ಲದೇ ಇದ್ದ ತೊಡಕೊಂದನ್ನು ಮಾಡುತ್ತಿರುವುದನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

Mr. SPEAKER.—Should the House not follow some procedure? By simply mentioning it to me, can I allow a discussion?

ಶ್ರೀ ಎಸ್. ಎಂ. ಕೃಷ್ಣ.—ತಾವು ಇದನ್ನು ಡಿಸ್‌ಕಷನ್ನಿಗೂ ತೆಗೆದುಕೊಳ್ಳಬೇಕು. ಅದೂ ಒಂದು ವಿಚಾರ. ಈ ಕೆಲಸದ ಬಗ್ಗೆ ಏನಾದರೂ ಒಂದು ತರದ ತೀರ್ಮಾನ ಬೇಗನೆ ಆಗಬೇಕು.

Mr. SPEAKER.—By oral requests of this type, what does the member expect?

Sri S. M. KRISHNA.—I have made a written request also.

Mr. SPEAKER.—It contains no resolution, no question. It is neither an interpellation nor a short-notice question nor a Resolution or any thing of the type.

ಶ್ರೀ ಎಸ್. ಎಂ. ಕೃಷ್ಣ.—ರಾಜ್ಯಾಂಗದ ಪ್ರಕಾರ ಇಲ್ಲಿ ಕೆಲಸ ಮಾಡುತ್ತಿದ್ದೇವೆ. ಅದರ ಕೆಲವು ವಿಧಿಗಳನ್ನನುಸರಿಸಿ ಕೆಲಸ ಮಾಡುವಾಗ ಇಂತಹ ಮುಖ್ಯವಾದ ಧಾರ್ಮಿಕ ಭಾವನೆಗಳನ್ನುಳ್ಳ ಜನರ ಮೇಲೆ ರಾಜ್ಯ ಸರಕಾರ ಮಧ್ಯೇ ಪ್ರವೇಶಿಸುತ್ತಿರುವುದನ್ನು ನಾವು ಇಲ್ಲಿ ಪ್ರತಿಭಟಿಸಬೇಕು. ಶಾಸನ ಸಭೆ ನಡೆಯುತ್ತಿರುವ ಕಾಲದಲ್ಲಿ ರಾಜ್ಯ ಸರಕಾರ ಸ್ವೇಚ್ಛೆಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದರೆ ಅದನ್ನು ನಾವು ಅರಿತೂ ಸುಮ್ಮನೆ ಇರುವುದಕ್ಕೆ ಆಗುತ್ತದೆಯೇ? ಹೀಗಾದರೆ ಸರಕಾರದ ಮಾತುಗಳಿಗೆ ಏನು ಗೌರವವಿರುತ್ತದೆಯೇ ಎನ್ನುವುದನ್ನು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

Mr. SPEAKER.—The Hon'ble Member has suggested in his letter that fundamental rights are violated. Does he want the chair to break the Rules of Procedure? Let him give a Resolution or a short-notice question.

Sri S. M. KRISHNA.—My friend, Sri Ranganath has tabled a Short Notice Question.

Mr. SPEAKER.—Then it will have its effect.

Sri S. M. KRISHNA.—Some of the rules can be set aside to take up this urgent matter.

Mr. SPEAKER.—What does the member want me to do? Shall I order a Debate on that now? He has drawn the attention and achieved the purpose.

Sri V. S. PATIL (Belgaum I).—What is that matter going on between the Hon'ble Speaker and the Hon'ble Member?

Mr. SPEAKER.—I will explain. The Hon'ble member Sri Krishna wants to do something which is not in accordance with the Rules of Procedure.

Sri V. S. PATIL.—What is that something?

Mr. SPEAKER.—He referred to a certain incident that is said to have taken place or is going to take place somewhere. It must be either by means of an interpellation, Short Notice Question or a Resolution or Adjournment Motion. By merely mentioning I cannot create a situation out of nothing and say; 'let this be debated upon'. He said that Sri Ranganath had tabled a Short-notice Question, If so, it will come in at the appropriate time. He wanted to achieve his object by bringing this to the notice of the House. That he has done.

ಶ್ರೀ ಅಂಗಡಿ ಚನ್ನಬಸಪ್ಪ (ಹಡಗಲಿ).—ರೂಲ್ಸ್ ಆಫ್ ಪ್ರೊಸೀಜರು ಇಲ್ಲಿರುವುದು ಹೇಗಿದೆ ಎಂದರೆ ಇಂಗ್ಲೆಂಡಿನಲ್ಲಿರುವ 'ಡೂಮ್ಸ್ ಡೇ ಬುಕ್'ನಂತಿದೆ. ನನಗನಿಸುವುದು ಅಂತಹ ರೂಲುಗಳನ್ನು ಸಸ್‌ಪೆಂಡುಮಾಡಿ ಇಂತಹ ದುಃಖಸೂಚಕವಾದ ಹೇಳಿಕೆಯನ್ನು ಇಲ್ಲಿ ಹೇಳಲು ಅವಕಾಶ ವಿರಬೇಕು. It is something like a 'Dooms Day Book' of England.

Mr. SPEAKER.—I have not seen it. I do not want to see it.

ಶ್ರೀ ಅಂಗಡಿ ಚನ್ನಬಸಪ್ಪ.—ನಮಗೆ ಅಡ್‌ಜರ್ನ್‌ಮೆಂಟು ಮೋಷನ್ನು ಕಳುಹಿಸುವುದಕ್ಕೆ ಕಾಲವಿಲ್ಲ. ಮಾನ್ಯ ಮಂತ್ರಿಗಳು ಇಂತಹ ಧಾರ್ಮಿಕ ಕೆಲಸಗಳಲ್ಲಿ ಸುಮ್ಮನೆ ಕ್ರೈತಾಕಿ ಇಲ್ಲದೇ ಇರುವ ಹರಕತ್ತುಗಳನ್ನು ಮಾಡುತ್ತಿದ್ದಾರೆ ಇಲ್ಲಿ ನಡೆಯುತ್ತಿರುವ ಕೆಲಸಗಳನ್ನು ತಡೆಯಲು ಮಾನ್ಯ ಮಂತ್ರಿಗಳು ಅಲ್ಲಿನ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟುಗಳಾಗಿಲ್ಲ ಅಥವಾ ಬರೀ ಮ್ಯಾಜಿಸ್ಟ್ರೇಟುಕೂಡ ಅಲ್ಲ. ಆದರೆ ಅಲ್ಲಿರುವ ತಹಶೀಲುದಾರರೇ ಮ್ಯಾಜಿಸ್ಟ್ರೇಟು ಅಧಿಕಾರ ಹೊಂದಿರುವುದರಿಂದ ಅವರು ಬೇಕಾಗಿದ್ದರೆ 144ನೇ ಸೆಕ್ಷನ್ನನ್ನು ಜಾರಿಗೆ ತರಬಹುದಾಗಿತ್ತು. ಅದಕ್ಕೆ ಬದಲು ಮಾನ್ಯ ಮಂತ್ರಿಗಳೆಲ್ಲ ಬಂದು ಇಲ್ಲಿಂದ ಸ್ಟೇ ಆರ್ಡರು ತಗೆದುಕೊಂಡು ಬಂದು ಇಂತಹ ಧಾರ್ಮಿಕ ಕೆಲಸಗಳಲ್ಲಿ ಅಡ್ಡಿ ಮಾಡಿದರೆ ಹೇಗೆ? ಇಂತಹ ಕಷ್ಟ ಪರಿಸ್ಥಿತಿ ಉಂಟಾಗಿದೆ. ಇಂತಹ ದುಃಖಸೂಚಕವಾದ ಕೆಲವು ಅಂಶಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಅವರ ಗಮನವನ್ನು ಸೆಳೆಯಬೇಕು ಎಂದು ನನ್ನ ಅಭಿಪ್ರಾಯ ಇರಬೇಕು. ಇಂತಹ ಸಂದರ್ಭದಲ್ಲಿ ತಾವುಕೂಡ ರೂಲನ್ನು ಸ್ವಲ್ಪ ರಿಲ್ಯಾಕ್ಸ್ ಮಾಡುವಹಾಗೆ ಇಂತಹ ರೂಲುಗಳನ್ನು ಬ್ರೆಕ್ ಮಾಡುವುದಕ್ಕಾಗಿ ಇಲ್ಲಿ ಹೇಳುತ್ತಿದ್ದೇವೆ ಮತ್ತು ಅಸೆಂಬ್ಲಿಯಲ್ಲಿ ಗಲಾಟೆ ಮಾಡಬೇಕು ಎನ್ನುವುದೂ ನಮ್ಮ ಉದ್ದೇಶವಲ್ಲ.

ಅಧ್ಯಕ್ಷರು.—ರೂಲ್ಸ್ ಇದ್ದರೂ ಗಲಾಟೆ ಮಾಡಬಹುದು ಎಂಬುದು ಸದಸ್ಯರ ಅಭಿಪ್ರಾಯ ವಲ್ಲವಷ್ಟೇ?

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮೀ,

ಇಲ್ಲಿ ಮಾನ್ಯ ಗೃಹ ಮಂತ್ರಿಗಳು ಇಷ್ಟೊಂದು ಜನರು ಮಾಡುವ ಧಾರ್ಮಿಕ ಕೆಲಸಗಳಿಗೆ ವಿರೋಧವಾಗಿ ಯಾವ ರಿಪೋರ್ಟುಗಳನ್ನೂ ನೇರವಾಗಿ ತರಿಸಿಕೊಳ್ಳದೆ ಅಧಿಕಾರಗಳನ್ನು ಚಲಾಯಿಸುತ್ತಿರುವುದು ನಮ್ಮ ಕಾನ್ಸ್ಟಿಟ್ಯೂಷನ್‌ಗೇ ವಿರೋಧವಾದುದೂ ಇಂತಹ ಲಕ್ಷಾಂತರ ಜನ ಸೇರಿ ಮಾಡತಕ್ಕಂಥ ದೇವತಾ ಕಾರ್ಯವನ್ನು ನಡೆಯ ಗೊಡದಿರುವುದು ಸರಿಯಲ್ಲ. ಇದಕ್ಕಾಗಿ ಮಾನ್ಯ ಗೃಹ ಮಂತ್ರಿಗಳು ಸೂಕ್ತವಾದ ನೆರವನ್ನು ನೀಡಬೇಕು ಎಂದು ನಾನು ತಮ್ಮ ಮೂಲಕ ಅವರನ್ನು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

Mr. SPEAKER.—That is a prayer. Whether it will be granted or not by the Home Minister, I am not concerned with that.

Sri ANGADI CHANNABASAPPA.—The Chair may suggest to the Home Minister to consider the matter as early as possible because the function is going to come up on Monday.

Mr. SPEAKER.—Sri Angadi Channabasappa appealed to me and mentioned that the chair was repository of all the grievances and that if the chair did not try to help things, perhaps Member would feels that I was trying to adhere to the rules rigidly. He also stated that. Whenever such a situation arose, those rules should not be adhere to so rigidly and that some way out must be found. The position is this. There must be a provision for suspending a rule. If I am appealed to under that provision I can suspend as particular rule. What is the rule to be suspended ? There is no provision to say that by suspension of any rule or all rules put together, only matter can come up before the House unless it be in one of the known ways *i.e.*, a resolution, interpellation or the adjournment motion. Therefore the best way always is to give notice of it under some rule, so that I can apply my mind at once.

Sri S. SIVAPPA (Sravanabelagola).—Since the matter has been raised a ready and the House knows, what the issue is, since the Hon'ble Home Minister is here, the Home Minister can easily solve this problem by giving a reply.

Mr. SPEAKER.—I will certainly use the good office or the bad office I possess, but not on the Floor of the House, not in the Assembly now. I cannot do that. Therefore, we must know how to achieve what we want. Sri S. M. Krishna has cleverly and tactfully brought the matter to the notice of this House. We shall see how matters develop. I cannot do anything. I will have it examined. Now I want to know which member has given notice of this subject ?

Sri ANGADI CHANNABASAPPA.—No notice has been given, Sir.

Mr. SPEAKER.—Why not move in that direction? After all, it does not require a long time.

Sri G. DUGGAPPA.—I rise to a point of order. Under what provisions of the Rules of procedure of the House, is the Hon'ble Speaker allowing this discussion, Sir ?

Sri C. J. MUCKANNAPPA.—Sir, he is questioning the authority of the Chair. Is it a point of order ? The Chair is the supreme authority here. Is he the Speaker here ? We are addressing the Chair.

MR. SPEAKER.—I am not in the least influenced by some member raising his voice or the tempo or even the temper. I take coolly all the words that are mentioned. Now a point of order has been raised by Sri G. Duggappa asking how I am allowing discussion in violation of the Rules. I want to ask him, is any discussion taking place now? They are making representations and are they not entitled to make representations? Is the Member entering the House for the first time today? Shall I get the previous records of proceedings and point out how many times...

SRI G. DUGGAPPA.—At no time the Chair has allowed the matter to go to this extent.

SRI K. LAKKAPPA.—He is questioning the ruling of the Chair, Sir.

MR. SPEAKER.—If he is questioning the ruling of the Chair and so long as I am occupying the Chair, I can always take care of the prestige of the Chair.

SRI V. S. PATIL.—We have wasted, according to me, fifteen minutes of the valuable time of the House. Your ruling was that whenever anything was to be raised on the floor of the House, it must be through a proper notice—may be short-notice question, so many other ways. But this discussion has taken place without any notice, without any rule without any regulation, without the desire of the Chair. So, I should like to know who is to be held responsible for wasting fifteen minutes of this House and whether it is in order?

MR. SPEAKER.—I strongly deprecate this kind of a thing happening at all. When the Hon'ble Member Sri Krishna got up, I told him that this item did not appear in the agenda, but still he wanted to impress upon me the importance, the gravity and the urgency of the matter. So far as the procedure is concerned, Sri V. S. Patil with the wealth of his experience as he is a senior parliamentarian, knows how in the past how much time was consumed, — I will not call it a waste, on matters uncovered by the Agenda. Does he feel that this is the first time that it is happening? I cannot apportion the liability for this—consumption of time according to me, 'wastage' according to him—and I say that all those that have participated are fully responsible. Negatively, I am not responsible, nor is the House responsible, because I tried my best to curb it.

SRI V. S. PATIL.—When anything is not allowed by the Rules of procedure, then it is the Chair's duty —I humbly submit Sir, to check it and stop it. Since the Chair has not stopped it immediately, the whole responsibility lies upon the Chair.

MR. SPEAKER.—The hon'ble member has given me a good handle. I was only leading the Hon'ble Member to that position. All Members may please take notice that what is not included in the Agenda, under any circumstances, will not be permitted to be raised from tomorrow.

SRI G. V. GOWDA (Palya).—It is our right to make representations in case of need.

BUDGET ESTIMATES FOR 1964-65

Ceneral Discussion—(*continued*)

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಹಣಕಾಸಿನ ಪರಿಸ್ಥಿತಿ ಈ ರಾಜ್ಯದಲ್ಲಿ ಹೇಗಿದೆ ಎಂದು ಹೇಳಿ ಅದನ್ನು ಚರ್ಚೆಮಾಡಿ ಈ ದೇಶವನ್ನು ನಾವು ಯಾವ ರೀತಿ ಮುಂದಕ್ಕೆ ನಡೆಸ ಬೇಕೆಂದೂ ಯಾವ ರೀತಿ ನಡೆಸಿಕೊಂಡು ಹೋಗುತ್ತಿದ್ದೇವೆ ಎಂದು ಹೇಳುತ್ತಾ ಆಡಳಿತದಲ್ಲಿರತಕ್ಕ ಪಕ್ಷ ನಮಗೆ ಒಂದು ಆಯವ್ಯಯಪಟ್ಟಿ ಮೂಲಕ ಅವರಿಗೆ ಬರತಕ್ಕ ಹಣ, ಅವರು ಖರ್ಚುಮಾಡತಕ್ಕ ಹಣ, ಮತ್ತು ಅವರು ಮಾಡತಕ್ಕಂಥ ಕೆಲಸ ದಾಸ್ತಾನು ಕೂಡ 7-8 ಪುಸ್ತಕಗಳಲ್ಲಿ ಪ್ರಿಂಟ್ ಮಾಡಿ ನಮ್ಮಗಳ ಕೈಲಿ ಕೊಟ್ಟಿದ್ದಾರೆ. ಇದನ್ನೆಲ್ಲಾ ಓದಿ ಈ ರಾಜ್ಯ ಬಹಳ ಸುಭದ್ರವಾದ ಬುನಾದಿ ಮೇಲೆ ಇದೆಯೆಂದು ಹೇಳಬೇಕಾದರೆ ನೀವು ಕೊಟ್ಟಿರುವ 3-4 ದಿನಗಳಲ್ಲಿ ಏನೂ ಆಗುವುದಿಲ್ಲ. ಬಡ್ಜೆಟ್ ಪ್ರಿಪರೇಷನ್‌ಗೆ 6 ತಿಂಗಳುಗಳವರಗೂ ಕಾಲಾವಕಾಶ ತೆಗೆದುಕೊಳ್ಳುವಾಗ ಈಗ ಅದನ್ನು ಬಹಳ ಶೀಘ್ರವಾಗಿ ಇಟ್ಟಿದ್ದೀರಿ. ಬಡ್ಜೆಟ್ ಇಲ್ಲಿ ಮಂಡಿಸಿದ ಮೇಲೆ ಎಲ್ಲಾ ಪುಸ್ತಕಗಳನ್ನು ಈಗ ತೆಗೆದುಕೊಂಡು ಓದಬೇಕಾದರೆ ಕೊನೆಯಪಕ್ಷ 15 ದಿನಗಳಾದರೂ ಬೇಕು. ಈ 15 ದಿವಸಗಳಲ್ಲಿ ಈ ಸರ್ಕಾರದವರು ಏನೇನು ಮಾಡಿದ್ದಾರೆಂಬುದನ್ನು ತಿಳಿದುಕೊಂಡು ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶವಿಲ್ಲ. ಇನ್ನು ಸಾಮಾನ್ಯ ಚರ್ಚೆ ಕಾಲದಲ್ಲಿ ಹಣಕಾಸಿನ ರೂಪರೇಖೆಗಳು ಹೇಗೆ, ರಾಜ್ಯದ ಅಭಿವೃದ್ಧಿ ಹೇಗೆ, ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧನ ಮಾಡಿದ್ದೇವೆಯೇ, ಅದರಿಂದ ಜನತೆಯ ಕಲ್ಯಾಣವನ್ನು ಎಷ್ಟರಮಟ್ಟಿಗೆ ಸಾಧಿಸಿದ್ದೇವೆಂಬುದನ್ನು ನಾವು ಈಗ ನೋಡಬೇಕಾಗಿದೆ. 1957 ರಿಂದ ಇವತ್ತಿನವರೆಗೂ ಕೂಡ 7 ಬಡ್ಜೆಟ್ಟುಗಳನ್ನು ನಾವು ಚರ್ಚೆ ಮಾಡಿದ್ದೇವೆ. 21 ಸಾರಿ ಸಪ್ಲಿಮೆಂಟರಿ ಗ್ರಾಂಟುಗಳನ್ನು ಕೊಟ್ಟಿದ್ದೇವೆ. ಈ 7 ವರ್ಷಗಳಲ್ಲಿ 3 ಯೋಜನೆಗಳನ್ನು ಮಾಡಿದ್ದೇವೆ. ಈ 3 ಯೋಜನೆಗಳಲ್ಲಿಯೂ ಹಣಕಾಸಿನ ಸಚಿವರು ಹೇಳಿದಹಾಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದಮೇಲೆ ಇವತ್ತು ಮಾನ್ಯ ಹಣಕಾಸಿನ ಪರಿಸ್ಥಿತಿ ಹೇಗೆ ಎಂದು ಹೇಳಿದರೆ ಅದರಲ್ಲಿ ಏನು ಕಾಣಿಸುತ್ತದೆಂದರೆ, ಅದನ್ನು ಒಡೆದು ನೋಡಿದರೆ ಅದರಲ್ಲಿ ಏನೂ ಇಲ್ಲ. ಹಣಕಾಸಿನ ಪರಿಸ್ಥಿತಿ ಬಗ್ಗೆ ಇವತ್ತು ಸರ್ಕಾರಕ್ಕೆ ನಾನು ನಿರ್ಭಯವಾಗಿ ಒಂದೇ ಖಚಿತವಾಗಿ ಹೇಳಬೇಕಾದರೆ ಸರ್ಕಾರ ಯಾವ ಒಂದ ದಿಶೆಯಲ್ಲಿ ಹೋಗುತ್ತಿದೆಎಂದರೆ ದೇಶದಲ್ಲಿರತಕ್ಕ ಸರ್ಕಾರದ ಬೊಕ್ಕಸವನ್ನು ಬರಿದು ಮಾಡಿ ದೇಶದ ಜನತೆಯನ್ನು ದಿವಾಳಿತನಕ್ಕೆ ಕರೆದುಕೊಂಡು ಹೋಗುತ್ತಿದೆಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ನಿನ್ನೆ ದಿನ ನನ್ನ ಸ್ನೇಹಿತರಾದ ಶ್ರೀಮಾನ್ ಬಸಪ್ಪನವರು ಮಾತನಾಡುತ್ತಾ ಅಪ್ಪರ್ ಕೃಷ್ಣಾ, ಘಟಪ್ರಭಾ, ಮಲಪ್ರಭಾ, ಆಲಮಟ್ಟಿ, ನಾರಾಯಣ ಪುರ, ಹಾರಂಗಿ, ಕಂಬದಕಡ, ಕಾವೇರಿ, ಈ ಯೋಜನೆಗಳನ್ನೆಲ್ಲಾ ತೆಗೆದುಕೊಂಡು ಈಗ ಕಟ್ಟ ಬೇಕಾದರೆ ನಿಜವಾಗಿ ಜನಗಳ ಮೇಲೆ ಯಾವುದಾದರೂ ಸುಂಕ ಹಾಕಬೇಕೆಂದು ಹೇಳಿದರು. ಅದಕ್ಕೆ ಮಂತ್ರಿಗಳು ಯಾವ ತೆರಿಗೆಯನ್ನು ಎಲ್ಲಿ ಹಾಕಬೇಕೆಂಬ ಬಗ್ಗೆ ಯಾವೊಂದು ಉತ್ತರವನ್ನೂ ಹೇಳಲಿಲ್ಲ. ಇವತ್ತಿನ ದಿವಸ ಇಂಡಿಯಾದೇಶದ ರಾಜ್ಯಗಳಲ್ಲಿ ಮೈಸೂರು ದೇಶದಲ್ಲಿ ನಾವು ಎಷ್ಟುದೂರ ತೆರಿಗೆ ಯನ್ನು ಹಾಕಿದ್ದೇವೆ, ತೆರಿಗೆಯ ಭಾರ ಎಷ್ಟು ದೂರ ಹೋಗಿದೆ, ನಾವು ಈಗಾಗಲೇ ಹೊತ್ತಿರತಕ್ಕ ತೆರಿಗೆ ನಾವು ಮಾಡಿರತಕ್ಕ ಸಾಲದ ಹಣವೆಷ್ಟು, ನಮ್ಮ ಸಿಬ್ಬಂದಿ ಎಷ್ಟು, ನಮ್ಮ ರಿಸೋರ್ಸಸ್ ಏನು—ಇದನ್ನೆಲ್ಲಾ ತೆಗೆದುಕೊಂಡರೆ ಇವರು ಸಾಧನೆ ಮಾಡಿರವುದೆಲ್ಲಾ ಇಷ್ಟೇ, ಕೇವಲ ಕೆಲವು ಹೈಸ್ಕೂಲುಗಳನ್ನು ತೆರೆದಿರುವುದು, 15 ಬಸ್ಸುಗಳನ್ನು ಜಾಸ್ತಿಮಾಡಿರುವುದು, 25 ನೌಕರಿಗಳನ್ನು ಭರ್ತಿಮಾಡಿರುವುದು, ಕೆಲವಾರು ಕೈಗಾರಿಕೆಗಳನ್ನು ಎರಡು ಲಕ್ಷದಿಂದ 4 ಲಕ್ಷದವರೆಗೆ ಖರ್ಚುಮಾಡಿ ಸ್ಥಾಪನೆಮಾಡಿರುವುದು, ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ 4 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿರುವುದು, ಸುಮಾರು ಐದಾರು ಜನ ಪದವೀದಾರರಿಗೆ ದೊಡ್ಡ ಉದ್ಯಮಗಳನ್ನು ಕೊಟ್ಟಿರುವುದು—ಇದೊಂದು ಸಾಧನೆಯೇ ? ಇವತ್ತಿನ ದಿವಸ ಕಾಂಗ್ರೆಸ್ಸಿನ ಪ್ರಭುತ್ವ, ಈ ರಾಜ್ಯ ವನ್ನು ಕಲ್ಯಾಣಮಾಡುವ ಈ ಕಾಂಗ್ರೆಸ್ ಪ್ರಭುತ್ವ ಭಾವನೆಯುಳ್ಳವರು ಡೆಮೋಕ್ರೆಟಿಕ್ ಸೋಷಿಯಾಲಿ ಸಂನ್ನು ಸಾಧನೆಮಾಡುವುದಕ್ಕೆ ನಿರ್ವೀರ್ಯತೆಯನ್ನು ಹೊಂದಿದ್ದಾರೆ. ಇವತ್ತಿನ ದಿವಸ ನಮ್ಮ ಆಹಾರ ಪರಿಸ್ಥಿತಿ ಬಗ್ಗೆ ತುಂಬಾ ಕಳವಳ ಪರಿಸ್ಥಿತಿಯನ್ನು ಉಂಟುಮಾಡುತ್ತಿದ್ದಾರೆ. ಹಣಕಾಸಿನ ಪರಿಸ್ಥಿತಿ ಇನ್ನೆರಡುವರ್ಷಗಳ ಕಾಲದವರೆಗೆ ಚೇತರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಉತ್ತರ ಹೇಳುತ್ತಿದ್ದಾರೆ. ಇವತ್ತಿನದಿವಸ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕಾದರೆ ಜೋಗಿನ ಜನರೇಟಿಂಗ್ ಸ್ಟೇಷನ್ ಕಟ್ಟಿದರೆ ನಿಜವಾಗಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ದಿನೇ ದಿನೇ ಉತ್ತಮ ಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಖಂಡಿತ ಆಗುವುದಿಲ್ಲ. ಅದ ಕ್ಕೋಸ್ಕರ ಜುಲೈನಲ್ಲಿ ಅಥವಾ ಡಿಸೆಂಬರ್‌ನಲ್ಲಿ ಒಂದು ಜನರೇಟಿಂಗ್ ಸ್ಟೇಷನ್ ಪ್ರಾರಂಭಮಾಡು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ತ್ತೇವೆ, ಮತ್ತೆ ಆರು ತಿಂಗಳಿಗೊದಂರಂತೆ ಪುನಃ ಪ್ರಾರಂಭಮಾಡುತ್ತೇವೆಂದು ಹೇಳುತ್ತಿದ್ದಾರೆ. ಶರಾವತಿ ವಿದ್ಯುತ್ ಯೋಜನೆಯನ್ನು ಇನ್ನೂ ಸಂಪೂರ್ಣವಾಗಿ ಕೈಗೊಂಡಿಲ್ಲ. ಅವರು ಪ್ರತಿಯೊಂದಕ್ಕೂ ವೆಚ್ಚಮಾಡಿರತಕ್ಕ ಹಣವನ್ನು ಯಾವರೀತಿ ಹಿಂದಕ್ಕೆ ತೆಗೆದು ಕೊಳ್ಳಬೇಕೆಂಬುದನ್ನು ಯೋಚನೆಮಾಡುತ್ತಿದ್ದೇವೆಂಬುದಾಗಿ ಹೇಳಿದರು. ನಿಮ್ಮಲ್ಲಿ ಹಣವಿಲ್ಲ, ಪ್ಲಾನು ಎಕ್ಸ್‌ಪೆಂಡಿಚರ್ ಗೋಸ್ಕರವಾಗಿ ಏನೋ ಮಾಡುತ್ತಿದ್ದೇವೆಂದು ಈಗ ಹೇಳುವುದು, ಪುನಃ ಸಪ್ಲಿಮೆಂಟರಿ ಗ್ರಾಂಟು ಗಳನ್ನು ತೆಗೆದುಕೊಂಡು ಬಂದು ಅದನ್ನು ಒಪ್ಪಿಕೊಳ್ಳಿ ಎಂಬುದಾಗಿ ಹೇಳುತ್ತಾರೆ. ಈ ಬಗ್ಗೆ ನಿನ್ನೆ ಮೊನ್ನೆ ಅನೇಕ ಪ್ರಶ್ನೆಗಳು ಬಂದಾಗ್ಗೆ ಹಣಕಾಸಿನ ಮಂತ್ರಿಗಳು ಅದಕ್ಕೆ ಬೇಕಾದಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ, ಇದು ಯಶಸ್ವಿಯಾಗಬೇಕಾದರೆ ಸುಮಾರು ಒಂದು ನೂರು ಕೋಟಿ ರೂಪಾಯಿಗಳು ಯೋಜನೆಯಾಗುತ್ತದೆ. ಅದರಲ್ಲಿ ಸುಮಾರು 80 ಕೋಟಿ ರೂಪಾಯಿ ಗಳಷ್ಟು ಖರ್ಚಾಗುತ್ತದೆ, ಅದಕ್ಕೋಸ್ಕರ ಈ ಹಣವನ್ನು ಅದೇ ರೀತಿಯಲ್ಲಿಯೇ ಸಾಧನೆ ಮಾಡ ಬೇಕಾಗಿದೆಯೇ ಹೊರತು ನಾವು ಹೇಳಿದಷ್ಟು ನಿರ್ದಿಷ್ಟವಾಗಿ ಹಣ ಖರ್ಚಾಗುವುದಿಲ್ಲ. ಸ್ವಲ್ಪ ಜಾಸ್ತಿ ಅಥವಾ ಕಮ್ಮಿಯಾಗಬಹುದೆಂದು ಹೇಳಿದರು. ನಮ್ಮ ಕೈಲಿ ಕೊಟ್ಟಿರತಕ್ಕ ಬಡ್ಜೆಟ್ ಮೆಮೊರ್ಯಾಂಡಂ, ಎರಡು ಭಾಷಣಗಳು 1964-65ನೇ ಸಾಲಿನ ಬಡ್ಜೆಟ್ ಅಂಕಿ ಅಂಶಗಳು, ಇವನ್ನೆಲ್ಲಾ ಓದಿ ನೋಡಿದರೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆಯೆಂಬುದು ಗೊತ್ತಾಗುತ್ತದೆ. ಇವತ್ತಿನ ದಿವಸ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ನೆರೆಹೊರೆಯ ರಾಜ್ಯಗಳ ಹಣಕಾಸಿನ ಪರಿಸ್ಥಿತಿಗಿಂತ ಎಷ್ಟು ಹೀನಾಯಕವಾಗಿದೆಂಬುದನ್ನು ಅರಿತುಕೊಂಡು ನೋಡಿದರೆ ಇವತ್ತಿನ ದಿವಸ ಇವರು ಈ ರಾಜ್ಯದ ಕಲ್ಯಾಣವಾಗುವುದಕ್ಕಾಗಿ ಏನು ಕೆಲಸ ಮಾಡಿದರೂ ಅದರಿಂದೇನೂ ಫಲ ಇದು ವರೆಗೂ ದೊರೆತಿಲ್ಲವೆಂದು ಹೇಳಬಹುದು. ಹಣಕಾಸಿನ ಪರಿಸ್ಥಿತಿ ಬಹಳ ಶೋಚನೀಯವಾಗಿದೆ, ಬಹಳ ಕಷ್ಟದಲ್ಲಿ ಜನರಿದ್ದಾರೆಂದು ಹೇಳಬಹುದು. ಸಾಮಾನ್ಯವಾಗಿ ಈ ಓಲ್ಡ್ ಏಜ್ ಪೆನ್‌ಷನ್ ಎಂದು ಒಬ್ಬನಿಗೆ 5 ರೂಪಾಯಿಗಳನ್ನು ಕೊಡುತ್ತಾರೆನ್ನೋಣ. ಮತ್ತೆ ಇನ್ನೊಬ್ಬನಿಗೆ ಇಂಕ್ರಿಮೆಂಟ್ ಕೊಡುತ್ತೇನೆನ್ನುವುದು ಅದನ್ನು ಮಾಡುತ್ತೇನೆ, ಇದನ್ನು ಮಾಡುತ್ತೇನೆಂದು ಹೇಳಿ ಪುನಃ ಕಾಯಿದೆಮೇಲೆ ಇನ್ನೊಂದ ಬರೆ ಹಾಕುತ್ತಾರೆ. ಜನತೆಗೆ ಈ ಸರ್ಕಾರ ಕೊಡತಕ್ಕ ಆಶ್ವಾಸನೆಗಳು ಎಲ್ಲವೂ ಮೈಸೂರಿನ 2 ಕೋಟಿ 40 ಲಕ್ಷ ಜನಗಳಿಗೆ ಈಡೇರದೆ ಇರುವುದರಿಂದ ಅವರಲ್ಲಿ ಬೇಸರ ಹುಟ್ಟಿದೆ ಮತ್ತು ಇವರ ಕೆಲಸಕಾರ್ಯಗಳಲ್ಲಿ ಅವರಿಗೆ ನಿರಾಶೆಯನ್ನುಂಟು ಮಾಡಿದೆ. ನೀರು ಕುಡಿದಾದರೂ ದಾಹ ಅಡಗಿಸಿಕೊಳ್ಳುವಂತಾಗಿದೆ. ಇವರು ಹಾಕತಕ್ಕ ಧ್ಯೇಯಧೋರಣೆಗಳಿಂದ ನಿಜವಾಗಿ ದೇಶದ ಕಲ್ಯಾಣವಾಗುವುದಿಲ್ಲವೆಂಬುದಾಗಿ ನಾನು ಸರ್ಕಾರಕ್ಕೆ ಹೇಳುತ್ತೇನೆ. ಇವತ್ತಿನ ದಿವಸ ಅಧಿಕಾರದಲ್ಲಿರತಕ್ಕ ಯಾವ ವ್ಯಕ್ತಿಯೇ ಆಗಲೀ ಅಧಿಕಾರಕ್ಕೆ ಬಂದಮೇಲೆ ಈ ಕಾಂಗ್ರೆಸ್ ಪ್ರಭುತ್ವದಲ್ಲಿ 1947 ರಿಂದ ಈ ಮೂರನೆಯ ಪಾಂಚವಾರ್ಷಿಕ ಯೋಜನೆಯ ಅಂತ್ಯದೊಳಗಾಗಿ ಸಾಧಿಸಿರತಕ್ಕದ್ದು ಏನೆಂಬುದನ್ನು ನೋಡಿದರೆ ನಿಜವಾಗಿ ದೇಶದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ; ಕೈಗಾರಿಕೆ ಅಭಿವೃದ್ಧಿಯಾಗಿಲ್ಲ, ವ್ಯವಸಾಯಾಭಿವೃದ್ಧಿಯಾಗಿಲ್ಲ, ಕೇವಲ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಇವರು ತೆಗದಿರತಕ್ಕ ಕೆಲವು ಹೈಸ್ಕೂಲುಗಳನ್ನು ಬಿಟ್ಟರೆ ಮತ್ತೇನೂ ನಡೆದಿಲ್ಲವೆಂದು ಹೇಳಬಹುದು. 3ನೇ ಪಾಂಚವಾರ್ಷಿಕ ಯೋಜನೆಯಲ್ಲಿ ಹೈಸ್ಕೂಲುಗಳನ್ನು ಕಟ್ಟುವುದು ಒಂದು ದೊಡ್ಡ ಯೋಜನೆಯಾಗಿದೆ ಇದೆಲ್ಲಾ ಬರೀ ಜೊಳ್ಳು ವಾದವಾಗಿ ಹೋಗಿದೆ. ಇದರಿಂದ ನಿಜವಾಗಿ ರಾಜ್ಯದ ಪ್ರಗತಿ ಸಾಧನೆಯಾಗುವುದಿಲ್ಲ, ಇನ್ನು ರಾಜ್ಯಪಾಲರ ಭಾಷಣದಲ್ಲಿಯೂ ಮತ್ತು ಹಣಕಾಸಿನ ಮಂತ್ರಿಗಳ ಬಡ್ಜೆಟ್ ಭಾಷಣದಲ್ಲಿಯೂ ಕೈಗಾರಿಕೆಗಳ ಅಭಿವೃದ್ಧಿಯಿಂದ ಎಷ್ಟೋ ಹಣ ಬರುತ್ತದೆಂದು ಹೇಳಿದ್ದಾರೆ. ಮೆಮೊರ್ಯಾಂಡಂನಲ್ಲಿಯೂ ಹೇಳಿದ್ದಾರೆ. ನಾನು ಆಗ ಕೂಡಲೆ ಕೈಗಾರಿಕೆಯ ಪ್ರಗತಿ ನಮ್ಮ ರಾಜ್ಯದಲ್ಲಿ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಕಣ್ಣಿನಲ್ಲಿ ಕಣ್ಣನ್ನಿಟ್ಟು ನೋಡಿದ್ದೇನೆ. ಆದರೆ ಮದ್ರಾಸ್ ರಾಜ್ಯಕ್ಕಿಂತ ನಾವು ಮುಂದುವರಿದಿಲ್ಲವೆಂದು ಹೇಳಬಹುದು. ಮದ್ರಾಸ್ ರಾಜ್ಯ ಅಷ್ಟು ತೀವ್ರಗತಿಯಿಂದ ಮುಂದೆ ಹೋಗುವುದಕ್ಕೆ ಕಾರಣವೇನೆಂದು ನೋಡಿದರೆ ಅದರ ಪಕ್ಕದಲ್ಲಿ ಇರತಕ್ಕ ನೀರಾವರಿ ಸೌಲಭ್ಯಗಳು, ಮತ್ತು ಇತರ ಅನುಕೂಲತೆಗಳೇ ಕಾರಣವೆಂದು ಈ ಸಂದರ್ಭದಲ್ಲಿ ಹೇಳಬಹುದು. ಆದರೆ ನಮ್ಮ ಈ ರಾಜ್ಯದಲ್ಲಿ ಇದರಲ್ಲಿ ಏನು ತಪ್ಪಿದೆ ಎಂಬ ಬಗ್ಗೆ ಮೂಲ ಕಾರಣವನ್ನು ಕಂಡುಹಿಡಿಯದೇ ಇದ್ದರೆ ರಾಜ್ಯದ ಪ್ರಗತಿ ಖಂಡಿತ ಆಗುವುದಿಲ್ಲ. ಈಗ ನಮ್ಮ ರಾಜ್ಯಕ್ಕೆ ಕೊಟ್ಟಿರತಕ್ಕಂಥ ಅಲ್ಯೂಮಿನಿಯಂ ಫ್ಯಾಕ್ಟರಿ, ಫರ್ಟಿಲೈಸರ್ಸ್ ಫ್ಯಾಕ್ಟರಿ, ಆಯಿಲ್ ರಿಫೈನರಿ—ಈ ಮೂರು ಕೈಗಾರಿಕೆಗಳನ್ನು ತೆಗೆದುಹಾಕಿ ಮೂರನೆಯ ಪಾಂಚವಾರ್ಷಿಕ ಯೋಜನೆಯು ಒಂದೊಂದು ಹೊಸ ಕೈಗಾರಿಕೆಯನ್ನು ಸ್ಥಾಪನೆಮಾಡುವುದಕ್ಕೆ ಯೋಚನೆಮಾಡುತ್ತಿದ್ದಾರೆ. ಸರ್ಕಾರೀ ವಿದ್ಯುಚ್ಛಕ್ತಿ ಕಾರ್ಖಾನೆಯೊಂದನ್ನು ಮಾತ್ರ ತಮ್ಮ ಭಾಷಣದಲ್ಲಿ ಹೇಳಿದ್ದಾರೆಯೇ

ಹೊರ್ತು ಮತ್ತೇನೂ ಇಲ್ಲ. ಹಾಸ್ಪೇಟ್‌ಯಲ್ಲಿ ಒಂದು ಕೈಗಾರಿಕೋದ್ಯಮವನ್ನು ಮತ್ತು ಸಾಂಡೂರಿನಲ್ಲಿ ಸ್ಥಾಪನೆಮಾಡುವ ಕಬ್ಬಿಣ ಕಾರ್ಖಾನೆ, ಎಲ್ಲಿ ಮಾಯವಾಯಿತೋ ಗೊತ್ತಿಲ್ಲ. ಆದರೆ ಇವತ್ತು ಸರ್. ಎಂ. ವಿಶ್ವೇಶ್ವರಯ್ಯನವರು ಹೇಳಿದ ಹಾಗೆ ಈ ರಾಜ್ಯವನ್ನು ಇಂಡಸ್ಟ್ರಿಯಲೈಸ್ ಮಾಡದೇ ಹೋದರೆ ಯಾವ ಸರ್ಕಾರವೇ ಇರಲಿ ಅದು ವಿನಾಶವಾಗಿ ಹೋಗುತ್ತದೆಂದು ಹೇಳಿವ್ವಾರೆ. ಅಂದಮೇಲೆ ಇವತ್ತು ಈ ಸರ್ಕಾರದವರು ಆ ಬಗ್ಗೆ ಒಂದು ಅಭಿಪ್ರಾಯ ಸೋಪಾನವನ್ನು ಹಾಕುತ್ತಿದ್ದಾರೆಂದು ಹೇಳಿದರೆ ಅದರಲ್ಲಿ ಏನೂ ತಪ್ಪಾಗುವುದಿಲ್ಲ. ಆರ್ಥಿಕ ಮಂತ್ರಿಗಳು ಇವತ್ತು ಯಾವ ಬಟ್ಟೆ ಸುತ್ತಿಕೊಂಡು ಬಂದು 7 ಲಕ್ಷ ರೂಪಾಯಿಗಳನ್ನು ಬಹಳ ಬುದ್ಧಿವಂತಿಕೆಯಿಂದ ಉಳಿಸಿದ್ದೇನೆಂದು ಹೇಳುತ್ತಾರೋ ಗೊತ್ತಿಲ್ಲ. ಅವರ ಒಂದು ಮೇಧಾಶಕ್ತಿ ಇದರಿಂದ ಖಂಡಿತವಾಗಿ ತೋರುವುದಿಲ್ಲ. ನಾನು ಈ ರೀತಿ ಹೇಳುತ್ತಿದ್ದೇನೆ ಎಂಬುದಾಗಿ ಹಣಕಾಸಿನ ಸಚಿವರು ಕೋಪಮಾಡಿಕೊಳ್ಳಬಾರದು. ಆರ್ಥಿಕ ಸಚಿವರು ಬಹಳ ಬುದ್ಧಿವಂತರು ಎಂದು ಜನ ತಿಳಿದುಕೊಳ್ಳಲಿ ಎಂದು 7 ಲಕ್ಷ ರೂಪಾಯಿಗಳನ್ನು ಉಳಿತಾಯವೆಂದು ತೋರಿಸಿದ್ದಾರೆ. ಇನ್ನು ಓಲ್ಡ್ ಏಜ್ ಪೆನ್‌ಷನ್ ಬಗ್ಗೆ ಹಣ ಒದಗಿಸಿದ್ದಾರೆ? ಆದರೆ ರಿಸೋರ್ಸಸ್ ಬಂದರೆ ಇದನ್ನು ಕೊಡುವುದಕ್ಕೆ ಸಾಧ್ಯವೆಂಬುದಾಗಿ ಬಜೆಟ್ಟಿನಲ್ಲಿ ಹೇಳಿದ್ದಾರೆ. ಅದನ್ನು ಇಲ್ಲಿ ತೋರಿಸಿ ರೆವಿನ್ಯೂ ಸರ್ಪ್ಲಸ್ ತೋರಿಸಿದ್ದಾರೆ, ಇನ್ನೊಂದು ಕಡೆ 888 ಲಕ್ಷ ರೂಪಾಯಿಗಳನ್ನು ಡಿಫಿಸಿಟ್ ತೋರಿಸಿದ್ದಾರೆ. ಈ ಹಣವನ್ನು ಯಾವ ರೀತಿ ತುಂಬಬೇಕೆಂದು ಯೋಚನೆ ಮಾಡುತ್ತಿರುವಾಗಲೇ ರೆವಿನ್ಯೂ ಸರ್‌ಚಾರ್ಜಿನಮೇಲೆ ಬರುವ ಹಣ ನಿಂತುಹೋಯಿತು. ಇವೆಲ್ಲ ಯೋಜನೆಗಳು ಯಶಸ್ವಿಯಾಗಿ ಮಾಡಲು ಪ್ರತಿಯೊಂದು ಸಂದರ್ಭದಲೂ ಟೆಂಪೊರರಿ ಅಕಾಮಡೇಷನ್ ಎಂದು ಯಾವಾಗಲೂ ಕೇಂದ್ರದ ಕಡೆ ಇವರು ಭಿಕ್ಷೆ ಬೇಡಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ವ್ಯಾಪಾರೋದ್ಯಮಿಗಳಿಂದಾಗಲೀ ಅಥವಾ ಬ್ಯಾಂಕಿನಿಂದಾಗಲೀ ಇವರು ಇಟ್ಟಿರುವ ಹಣವನ್ನು ತೆಗೆದುಕೊಳ್ಳುತ್ತಾರೆ. ಆದರೆ ಇವರು ಇಟ್ಟಿರತಕ್ಕ ಹಣವೆಲ್ಲಾ ಎಗ್ಸಾಸ್ಟ್ ಆದಮೇಲೆ ಎಲ್ಲಿ ಏನು ಹಣ ಕೇಳುತ್ತಾರೋ ಗೊತ್ತಿಲ್ಲ.

2-00 P.M.

ತಮ್ಮಲ್ಲಿರತಕ್ಕ ಹಣವೆಲ್ಲಾ ಖರ್ಚಾದಮೇಲೆ ಟೆಂಪರರಿ ಅಕಾಮಡೇಷನ್ ಮಾಡಬೇಕಾಗುತ್ತದೆ. ಸೆಕ್ಯೂರಿಟಿಗಾಗಿ ಇಟ್ಟಿರುವ 25 ಕೋಟಿ ರೂಪಾಯಿಗಳು ಮತ್ತು ಸ್ಟೇಟ್ ರೀಆರ್ಗನೈಜೇಷನ್ ಆಕ್ಟ್ ಪ್ರಕಾರ ಬ್ಯಾಂಕಿನಲ್ಲಿಟ್ಟಿರತಕ್ಕ 18 ಕೋಟಿ ರೂಪಾಯಿಗಳನ್ನು ಡ್ರಾ ಮಾಡುತ್ತಾರೆ. ಅದೂ ಎಗ್ಸಾಸ್ಟ್ ಆದಮೇಲೆ ರಿಜರ್ವ್ ಬ್ಯಾಂಕಿನ ಪರ್ಮಿಷನ್ ತೆಗೆದುಕೊಂಡು ಓವರ್‌ಡ್ರಾಫ್ಟ್ ತೆಗೆದ ಕೊಳ್ಳುತ್ತಾರೆ. ಅದೂ ಮುಗಿದಮೇಲೆ ಹಣ ಇಲ್ಲವೆ ಇದ್ದರೆ ಸ್ವಲ್ಪ ಕಾಲದಲ್ಲಿ ಈ ರಾಜ್ಯದಲ್ಲಿರತಕ್ಕ ಅಧಿಕಾರಿಗಳಿಗೆ ಸಂಬಳವನ್ನು ಕೊಡುವುದಕ್ಕೆ ದುಡ್ಡು ಇಲ್ಲವೆ ಇರುವ ಪರಿಸ್ಥಿತಿ ಬರುತ್ತದೆ. ಏತಕ್ಕೆಂದರೆ ನಮ್ಮ ಹಣಕಾಸಿನ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನಾವು ಆಲೋಚನೆಮಾಡಬೇಕು. ಸರ್ಕಾರದವರು ಸೇಲ್ಸ್‌ಟ್ಯಾಕ್ಸನ್ನು ಬುದ್ಧಿವಂತಿಕೆಯಿಂದ ವಸೂಲು ಮಾಡಬಹುದು. ಕಂದಾಯವನ್ನು ವಸೂಲು ಮಾಡಬಹುದು. ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ವಸೂಲು ಮಾಡಬಹುದು. ಎಲ್ಲಾ ಟ್ಯಾಕ್ಸುಗಳನ್ನೂ ವಸೂಲುಮಾಡಿ, ಲೀಕೇಜ್ ಮತ್ತು ಲೂಪ್‌ಹೋಲ್‌ಗಳನ್ನೆಲ್ಲಾ ಪ್ಲಗ್ ಮಾಡಿ ನೀವು ಏನು ನಿರೀಕ್ಷಣೆ ಮಾಡಿದ್ದೀರೋ ಅದನ್ನು ಪಡೆಯುವುದಕ್ಕೆ ಸಾಧ್ಯವಿದೆಯೇ? ನಮ್ಮ ಹಣಕಾಸಿನ ಮಂತ್ರಿಗಳ ಧೈರ್ಯ ಹೇಗಿದೆ ಎಂಬುದನ್ನು ಸ್ವಲ್ಪ ಹೇಳುತ್ತೇನೆ. ಇವರ ಬಡ್ಜೆಟ್ ಎನ್ನುವ ವಾಹನ ಹೇಗಿದೆ ಎಂದರೆ 50 ಮೈಲಿ ಹೋಗಬೇಕಾದರೆ 25 ಸಾರಿ ನಿಲ್ಲುತ್ತದೆ. ಅದನ್ನು 15 ಸಾರಿ ತಳ್ಳಬೇಕಾಗುತ್ತದೆ. ಹೀಗೆಯೇ ತಳ್ಳಿಕೊಂಡು ಹೋದರೆ ಹೇಗೆ? ಈ ಬಡ್ಜೆಟ್ಟು ಕುರುಡನ ಮೇಲೆ ಹೆಳವ ಕುಳಿತುಕೊಂಡು ದಾರಿಯನ್ನು ಸಾಗಿಸಿದಂತಿದೆ. ಹೆಳವ ಮತ್ತು ಕುರುಡರು ದಾರಿಯನ್ನು ಸಾಗಿಸಲಿಲ್ಲ. ಹಾಗೆ ನೀವು ನಿಮ್ಮ ಗುರಿಯನ್ನು ಮುಟ್ಟಲಿಲ್ಲ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ. ಕೈಗಾರಿಕೆಗಳಲ್ಲಿ ಸರ್ಕಾರದವರು ಏನು ಉತ್ಪತ್ತಿಯನ್ನು ನಿರೀಕ್ಷಣೆ ಮಾಡಿದ್ದರೋ ಅದು ದೊರಕಿದೆಯೇ? ಮೊನ್ನೆ ತಾನೆ ಕೃಷ್ಣಮಾಚಾರಿಯವರು ಹೇಳಿದ್ದಾರೆ, ನಾವು ಕೈಗಾರಿಕೆಗಳಲ್ಲಿ ಏನು ನಿರೀಕ್ಷಣೆ ಮಾಡಿದ್ದೇವೋ ಅದು ದೊರಕಿಲ್ಲ ಎಂದು. ನಮ್ಮ ದೇಶದಲ್ಲಿರತಕ್ಕ 48 ಕೈಗಾರಿಕೆಗಳಲ್ಲಿ ಒಂದು ಕೈಗಾರಿಕೆಯಲ್ಲಿ ಫಲ ದೊರಕಿದೆಯೇ ಹೊರತು ಇನ್ನು 47 ಕೈಗಾರಿಕೆಗಳು ಫಲವನ್ನು ಕೊಟ್ಟಿಲ್ಲ ಎಂದು ಹೇಳಿದರು. ಪೋರ್ಸಿಲೈನ್ ಫ್ಯಾಕ್ಟರಿ, ರಂಕೋ, ಸಿಲ್ಕ್ ಫಿಲೇಚರ್ ಇವುಗಳ ಮುಖಾಂತರ ಸರ್ಕಾರಕ್ಕೆ ಬರುವ ಹಣ ಎಷ್ಟು? ಇವೊತ್ತಿನ ದಿವಸ ನಮ್ಮ ದೇಶ ಉನ್ನತಿಯ ಕಡೆಗೆ ಹೋಗುತ್ತಿದೆಯೇ ಅಥವಾ ಅವನತಿಯ ಕಡೆಗೆ ಹೋಗುತ್ತಿವೆಯೇ ಎನ್ನುವುದನ್ನು ನೋಡಬೇಕಾಗಿದೆ. ಹಿಂದೆ ಹಣಕಾಸಿನ ಮಂತ್ರಿಗಳಾಗಿದ್ದ ಶ್ರೀಮಾನ್ ಮರಿಯಪ್ಪನವರು we have to tighten our belts ಎಂದು ಹೇಳಿದ್ದಾರೆ. ಆದ್ದರಿಂದ ಆ

(ಶ್ರೀ ಸಿ ಜೆ ಮುಕ್ಕಣ್ಣಪ್ಪ)

ರೀತಿ ಮಾಡದೆ ಹೋದರೆ ಮುಂದೆ ತೊಂದರೆಗೆ ಒಳಗಾಗಬೇಕಾಗುತ್ತದೆ. ಸರ್ಕಾರದಲ್ಲಿ ನಡೆಯತಕ್ಕ ದುಂದುವೆಚ್ಚ, ಅವ್ಯವಹಾರ, ಅನೀತಿ ಇವುಗಳಿಂದ ದೇಶಕ್ಕೆ ಕಲ್ಯಾಣವಾಗುವುದಿಲ್ಲ. ಶರಾವತಿಯಲ್ಲಿ ಏನೇನೂ ಕಮಿಟ್‌ಮೆಂಟ್ ಮಾಡಿಕೊಂಡಿಲ್ಲ ಎಂದು ಹೇಳಿದ್ದೀರಿ. ಶ್ರೀಮಾನ್ ಎಂ. ಸಿ. ನರಸಿಂಹನ್ ಅವರು ವಿಧಾನಪರಿಷತ್ತಿನಲ್ಲಿ ಪ್ರಶ್ನೆಯನ್ನು ಕೇಳಿದಾಗ errors have been committed ಎಂದು ಹೇಳಿದ್ದೀರಿ. ಅದು ವೃತ್ತಪತ್ರಿಕೆಯಲ್ಲಿ ಬಂದಿದೆ. ಬೇಕಾದರೆ ನಾನು ಅದನ್ನು ತೋರಿಸುತ್ತೇನೆ.

Sri B. D. JATTI (Minister for Finance).—At the Conference of Chief Engineers, the Chief Engineer said that irregularities have been committed by the Finance Department in procedures but not in the P.W.D. I said it was wrong. If at all there is a mistake it is on the part of the Chief Engineers and his staff.

Sri C. J. MUCKANNAPPA.—The Finance Minister has only established my case. He has supported my case and my contention. There is joint responsibility.

Sri B. D. JATTI.—What I said pertained to Sri Manickam not to Sharavati. Sri Manickam is not in-charge of Sharavati.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನು ಹಣಕಾಸಿನ ಖಾತೆಯವರು ಮಾಡಲಿ ಅಥವಾ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡಲಿ, ಅದು ಒಂದು ಸರ್ಕಾರದ ಅಂಗ. ಅವರು ಮಾಡಿದಂಥಾದ್ದು ಸರ್ಕಾರದ ಮೇಲೆ ಪರಿಣಾಮವಾಗುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡಿದಂತಹ ಆ ವ್ಯವಹಾರ ದೇಶದ ಜನತೆಯ ಮೇಲೆ ಪರಿಣಾಮ ಆಗಲಾರದು. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕಂಟ್ರಾಕ್ಟರುಗಳ ಜೊತೆಯಲ್ಲಿ ಸೇರಿಕೊಂಡು ಅನ್ಯಾಯ ಮತ್ತು ಅಕೃತ್ಯಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಶರಾವತಿಯ ವಿಷಯವನ್ನು ಶ್ವೇತ ಪತ್ರದಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಹಣ ಪೋಲಾಗಿದೆ ಎಂಬುದು ಗೊತ್ತಾಗುತ್ತದೆ. ಈ ದೇಶದಲ್ಲಿ ಯಾವ ರಾಜ್ಯದಲ್ಲಿಯೂ ಇಲ್ಲದೆ ಇರುವ ರಾಜಕೀಯ ಗೊಂದಲವುಂಟಾದಾಗ, ರಾಜಕೀಯ ಆವೇಶ ನಡೆಯುತ್ತಾ ಇದ್ದಾಗ ನಮ್ಮ ಮಾನ್ಯ ಹಣಕಾಸಿನ ಸಚಿವರು ತಮ್ಮ ಜಾಗವನ್ನು ಭದ್ರವಾಗಿ ಉಳಿಸಿಕೊಂಡರು. ಅವರು ಶರಾವತಿಗೆ ಹಣಕಾಸನ್ನು ಯಥೇಚ್ಛವಾಗಿ, ಸ್ವೇಚ್ಛೆಯಾಗಿ, ಉದಾರವಾಗಿ ಕೊಟ್ಟಿದ್ದಾರೆ. ಬೇಕಾದರೆ ಅವರಿಗೆ ನಾನು ಸವಾಲು ಹಾಕುತ್ತೇನೆ. ಅವರು ಅವರ ಸ್ಥಾನವನ್ನು ಬಿಟ್ಟುಕೊಡಬೇಕು. ಇಲ್ಲದಿದ್ದರೆ ಅಲ್ಲಿ ನಡೆದಿರತಕ್ಕ ದುರ್ವ್ಯವಹಾರವನ್ನು ದೇಶದ ಜನತೆಯ ಮುಂದೆ ಉತ್ತರವನ್ನು ಹೇಳುವುದಕ್ಕೆ ತಯಾರಾಗಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಖಾದಿ ಬೋರ್ಡಿನ ವಿಷಯಕ್ಕೆ ಬಂದರೆ ಇದು ಡಿಲ್ಲಿಯಿಂದ ಒಂದು ಸರ್ಟಿಫಿಕೇಟ್ ತೆಗೆದುಕೊಳ್ಳುವ ಖಾತೆ. ಅದರಲ್ಲಿ ಏನೂ ಅನ್ಯಾಯ ನಡೆದಿಲ್ಲ ಎಂದು ಹೇಳುತ್ತಾರೆ. ಅದರಲ್ಲಿ ಅನ್ಯಾಯ ನಡೆದಿಲ್ಲವೇ? ನಾಲ್ಕು ಕೋಟಿ ರೂಪಾಯಿಗಳ ಲೆಕ್ಕವನ್ನು ಬರೆಯದೇ ಹೋದರೂ ಕೂಡ ಅದನ್ನು ಹೊಸದಾಗಿ ಲೆಕ್ಕ ಬರೆಸಿ ಅದು ಸರಿಯಾಗಿದೆ ಎಂದು ಹೇಳಬೇಕಾದರೆ ಸತ್ತ ಮಗುವಿಗೆ ನಾಮಕರಣ ಮಾಡಿದ ಹಾಗೆ ಅದನ್ನು ಮಾಡುವುದಕ್ಕೆ ಹೊರಟಿದ್ದೀರಿ. ನೀವು ನಿಜವಾಗಿಯೂ ಜನತೆಯ ಪ್ರೀತಿ, ವಿಶ್ವಾಸ ಮತ್ತು ನಂಬಿಕೆಗೆ ಅರ್ಹರಾಗಿದ್ದೀರಾ ಎಂದು ನಾನು ಸರ್ಕಾರಕ್ಕೆ ಕೇಳುತ್ತೇನೆ. ಶ್ರೀಮಾನ್ ಲಕ್ಕಪ್ಪನವರು ಹೇಳಿದರು ಹಿಂದೆ ಖಾದಿ ಬೋರ್ಡಿನಲ್ಲಿ ಅಧ್ಯಕ್ಷರಾಗಿದ್ದವರು ತಮ್ಮ ಹಿಂದೆ ಬೊಗಳತಕ್ಕ ನಾಯಿಮರಿಯನ್ನು ಖಾದಿ ಬೋರ್ಡಿನ ಹಣದಲ್ಲಿ ಕೊಂಡುಕೊಂಡಿದ್ದರು ಎಂದು. ಇದಕ್ಕಿಂತ ನಾಚಿಕೆಗೇಡಿನ ಕೆಲಸ ಬೇರೆ ಯಾವುದಿದೆ ಎಂದು ನಾನಾದರೂ ಕೇಳುತ್ತೇನೆ. ಒಂದನೆಯದು ಶರಾವತಿ, ಎರಡನೆಯದು ಖಾದಿ ಬೋರ್ಡು, ಇವೆರಡೇ ಸಾಕು. ಇವುಗಳಲ್ಲಿ ನಡೆಯುತಕ್ಕಂಥ ಕೆಲಸಕಾರ್ಯಗಳನ್ನು ನೋಡಿದರೆ ಇವರು ಸರಿಯಾದಂಥ ದಾರಿಯಲ್ಲಿ ಹೋಗುತ್ತಾ ಇಲ್ಲ ಎಂಬುದು ಗೊತ್ತಾಗುತ್ತದೆ. ಹಿಂದೆ ಈ ಸಭೆಯಲ್ಲಿ ಸದಸ್ಯರಾಗಿದ್ದಂಥ ಶ್ರೀಮಾನ್ ಅಮ್ಮುಗಪ್ಪ ಅವರು ಶರಾವತಿಯ ವಿಷಯ ಈ ಸಭೆಯಲ್ಲಿ ಚರ್ಚೆಯಾಗಬೇಕು ಎಂದು ಹೇಳಿದಾಗ ಹಿಂದಿನ ಮಂತ್ರಿಮಂಡಲದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಶ್ರೀಮಾನ್ ಚನ್ನಬಸಪ್ಪನವರು ಶರಾವತಿಯಲ್ಲಿ ಎಲ್ಲವೂ ಸರಿ

ಯಾಗಿ ನಡೆಯುತ್ತಿದೆ ಎಂದು ಹೇಳಿದವರು ಅಧಿಕಾರದಿಂದ ಹೊರಗೆ ಹೋದಮೇಲೆ ಶರಾವತಿಯಲ್ಲಿ ಬೇಕಾದಷ್ಟು ಅನ್ಯಾಯ ನಡೆದಿದೆ ಎಂದು ಹೇಳುತ್ತಿದ್ದಾರೆ.

Sri B. D. JATTI.—Let not the Hon. Member criticise ex-Ministers who are not here to defend themselves.

Sri C. J. MUCKANNAPPA.—I am entitled to criticise ex-Ministers. The successor Government has to take the responsibility for the follies of the previous Government.

Mr. SPEAKER.—The Hon. Member may speak of different standards in the same person.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇವರು ಅಧಿಕಾರದಲ್ಲಿದ್ದಾಗ ಒಂದು ರೀತಿ, ಅಧಿಕಾರದಲ್ಲಿಲ್ಲದೆ ಇದ್ದಾಗ ಒಂದು ರೀತಿಯಾಗಿ ಮಾತನಾಡುತ್ತಾರೆ. ಪತಿವ್ರತೆಯಾದ ಹೆಂಗಸು ಗಂಡನಾದವನು ಇರುವಾಗ ಬಳೆ, ಅರಸಿನ, ಕುಂಕುಮ, ಮಾಂಗಲ್ಯ ಹೀಗೆ ಐದನ್ನು ಇಟ್ಟುಕೊಂಡಿರುತ್ತಾಳೆ. ಗಂಡನಾದವನು ಸತ್ತು ಹೋದರೆ ಅವಳು ತನ್ನ ಕೈಯಲ್ಲಿರುವ ಬಳೆಯನ್ನು ಒಡೆದು ಹಾಕುತ್ತಾಳೆ, ಹಣೆಯಲ್ಲಿರುವ ಕುಂಕುಮವನ್ನು ಅಳಿಸುತ್ತಾಳೆ, ಕತ್ತಿನಲ್ಲಿರುವ ಮಾಂಗಲ್ಯವನ್ನು ಕಿತ್ತು ಹಾಕುತ್ತಾಳೆ. ಅದೇ ರೀತಿ ನೀವು ಅಧಿಕಾರಕ್ಕೆ ಬಂದ ಕೂಡಲೇ ಎಲ್ಲವನ್ನೂ ಕೂಡಿ ಬರುತ್ತೀರಿ. ಆದರೆ ಅಧಿಕಾರವನ್ನು ಬಿಟ್ಟ ಕೂಡಲೇ ಬೋಳು ಮುಂಡೆಯ ಹಾಗೆ ಮಾತನಾಡುತ್ತೀರಿ. ಇದು ನಿಮ್ಮ ನೀತಿಯೇ ಎಂದು ಕೇಳುತ್ತೇನೆ. (ನಗು). 'ಅಧಿಕಾರವುಳ್ಳನಕ ಸಿರಿಯಪ್ಪನಂತಕ್ಕು ಅಧಿಕಾರ ಹೋದ ಮರು ದಿನವೇ ಹಾಳೂರು ಶುನಕನಂತಕ್ಕು ಸರ್ವಜ್ಞ' ಎನ್ನುವಂತೆ ಅಧಿಕಾರದಲ್ಲಿದ್ದಾಗ ಒಂದು ತರಹ ಇದ್ದು ಅಧಿಕಾರವನ್ನು ಬಿಟ್ಟು ಕೂಡಲೇ ಸಿಕ್ಕಾಪಟ್ಟೆ ಮಾತನಾಡುವುದು ಸರಿಯಲ್ಲ. ನ್ಯಾಯವಾಗಿ ಮಾಡಿದ್ದರೆ ನ್ಯಾಯವಾಗಿ ಮಾಡಿದ್ದೇನೆ ಎಂದು ಹೇಳಬೇಕು, ತಪ್ಪು ಮಾಡಿದ್ದರೆ ಅದನ್ನು ಒಪ್ಪಿಕೊಂಡು ಹೇಳಬೇಕು. ಈ ಖಾದಿ ಬೋರ್ಡ್ ಮತ್ತು ಶರಾವತಿ ವಿಷಯದಲ್ಲಿ ಒಂದು ಜುಡಿಷಿಯಲ್ ವಿಚಾರಣೆಯಾಗಬೇಕು. ತಾವು ಕೊಟ್ಟಿರತಕ್ಕ ಶ್ವೇತ ಪತ್ರ ಈ ಸಭೆಯಲ್ಲಿ ಚರ್ಚೆಯಾಗಬೇಕು. ಅದಕ್ಕೆ ಸರ್ಕಾರದವರೂ ಮತ್ತು ಅಧ್ಯಕ್ಷರು ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಅಧ್ಯಕ್ಷರನ್ನು ಮತ್ತು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮೊನ್ನೆ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ದೇಶದಲ್ಲಿ ಇನ್ನೊಂದು ಮಿನಿಯೇಚರ್ ಖಾದಿ ಬೋರ್ಡ್ ವ್ಯವಹಾರ ನಡೆದಿದೆ ಎಂದು ಹೇಳಿದೆ. ಅದರಲ್ಲಿ ಏಕಚಕ್ರಾಧಿಪತ್ಯ ನಡೆದಿದೆ. ಅದು ಕೇಂದ್ರ ಉಣ್ಣೆ ಸಂಘದ ವ್ಯವಹಾರ. ಅಲ್ಲಿ ನಡೆದಿರತಕ್ಕ ಅವ್ಯವಹಾರ, ಹಣದ ದುರುಪಯೋಗ ಇದರ ಬಗ್ಗೆ ನಾನು ಹಣಕಾಸಿನ ಸಚಿವರಲ್ಲಿ, ಸಂಬಂಧಪಟ್ಟ ಸಚಿವರಲ್ಲಿ, ಮುಖ್ಯ ಮಂತ್ರಿಗಳಲ್ಲಿ ಹಾಗೂ ಗೃಹ ಸಚಿವರಲ್ಲಿ ಸಹ ಚರ್ಚೆ ಮಾಡಿದ್ದೇನೆ. ದೇವರ ಹೆಸರಿನಲ್ಲಿ, ಕಾಂಗ್ರೆಸ್ಸಿನ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಒಬ್ಬನೇ ಮನುಷ್ಯ ಸುಳ್ಳು ಪತ್ರ ಬರೆದು, ಸುಳ್ಳು ಲೆಕ್ಕ ಬರೆದು, ಲೆಕ್ಕಗಳನ್ನು fabricate ಮಾಡಿ ತನ್ನ ಮುಖಂಡತ್ವವನ್ನು ಬೆಳಸಿಕೊಳ್ಳಲು ಕೆಲಸ ಮಾಡುತ್ತಿದ್ದಾನೆ. ಒಬ್ಬ ರಾಜಕೀಯ ಮುಖಂಡನನ್ನು ಬೆಳೆಸುವುದಕ್ಕೆ ಸರಕಾರದ ಹಣ ಮೀಸಲಾದರೆ ನಮ್ಮ ರಾಜ್ಯ ಉಳಿಯುವುದಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಕಂಬಳಿಗಳನ್ನು ಆಂಧ್ರದಲ್ಲಿ ಕೊಂಡುಕೊಂಡು ಪಾವಗಡ ಸೊಸೈಟಿಯಲ್ಲಿ ಲೆಕ್ಕ ತೋರಿಸುತ್ತಾರೆ, ಕೇರಳದಲ್ಲಿ ಕೊಂಡು ಕೊಂಡು ಪಕ್ಕದಲ್ಲಿರುವ ಸೊಸೈಟಿಯಲ್ಲಿ ಲೆಕ್ಕವನ್ನು ಬರೆಸುತ್ತಿದ್ದಾರೆ. ತಾವು ಇದನ್ನು probe ಮಾಡಬೇಕು. ಅದೇ ರೀತಿ ಉಣ್ಣೆ ಕೇಂದ್ರಗಳಿರುವ ಕಡೆಯೂ ನೋಡಬೇಕು, ಅಲ್ಲಿಯೂ ಕೈ ಹಾಕಬೇಕು. ಇಲ್ಲವೆ ಹೋದರೆ ಈ ರಾಜ್ಯದಲ್ಲಿ ಅವರು ಏನು ಮಾಡುತ್ತಾರೆಯೋ ಎನ್ನುವ ಭಯ ನಮ್ಮಲ್ಲುಂಟಾಗಿದೆ.

ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತನಾಡಿದ ಮೇಲೆ ಆ ಸಂಘ ಬೆಂಗಳೂರು ನಗರದಲ್ಲಿದ್ದುದು ಕೃಷ್ಣರಾಜಪುರಕ್ಕೆ ಹೋಗಿದೆ, ಮತ್ತು ಅಲ್ಲ ರಾತ್ರಿ ಹಗಲೂ ಲೆಕ್ಕ ಬರೆಯುತ್ತಿದ್ದಾರೆ. ಇದನ್ನು ಸರಿಪಡಿಸದೆ ಹೋದರೆ ದೇಶಕ್ಕೆ ಬಹಳ ಅನ್ಯಾಯ ಮಾಡಿದ ಹಾಗೆ ಆಗುತ್ತದೆಂದು ನಾನು ಸರ್ಕಾರದಲ್ಲಿ ಹೇಳುತ್ತೇನೆ. ಈ ಮೂರು ಕೆಲಸಗಳಲ್ಲಿಯೂ ಏನೆಂದು ಕೆಲಸವಾಗಿದೆ, ಅದರಿಂದ ಈ ಇವು ಮೂರೇ ಉದಾಹರಣೆಗಳು ಸಾಕು, ಮತ್ತೊಂದು ಉದಾಹರಣೆ ಬೇಕಾಗಿಲ್ಲ ಎಂದು ಹೇಳುತ್ತೇನೆ.

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಸ್ವಾಮಿ, ಈ ರಾಜ್ಯದಲ್ಲಿ ಸಹಕಾರ ಸಂಘಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ ಎಂಬುದನ್ನು ನೋಡೋಣ. ಸಹಕಾರ ತತ್ವ ಎನ್ನುವುದರ ವ್ಯವಸಾಯ ಮಾಡುವುದಕ್ಕೆ, ಎಲ್ಲದಕ್ಕೂ ಬಂದಿದೆ. ಆದರೆ ಈ ಸಹಕಾರ ಸಂಘಗಳು ಸರಿಯಾಗಿ ನಡೆಯುತ್ತಿವೆಯೇ ಎಂದು ಕೇಳುತ್ತೇನೆ. ನಾಲ್ಕು ಸಾವಿರ ರೂಪಾಯಿಗಳನ್ನು ತಿಂದಿದ್ದಾರೆ ಎಂದು ದೂರು ಕೊಟ್ಟು ಮೂರು ತಿಂಗಳಾದರೂ ಪೋಲೀಸಿನವರು ಈ ತನಕ ಆ ಮನುಷ್ಯನನ್ನು ಹಿಡಿದಿಲ್ಲ. ಆತ ಒಬ್ಬ ಕಾಂಗ್ರೆಸ್ ಪುಢಾರಿ. ಇದಕ್ಕೆ ನಾನು ಸರ್ಕಾರವನ್ನು ದೂಷಣೆ ಮಾಡುತ್ತಿಲ್ಲ. ಒಬ್ಬ ನಾಲ್ಕು ಸಾವಿರ ರೂಪಾಯಿ ತಿಂದು ಹಾಕಿದರೆ, ಸೊಸೈಟಿ ಸೆಕ್ರೆಟರಿ ಅಥವಾ ಮತ್ತೊಬ್ಬನನ್ನು ಹಿಡಿಯುವ ಕೆಲಸವನ್ನು ಮಂತ್ರಿಗಳು ಮಾಡುವುದಾದರೆ ನೀವು 130 ಜನ ಕೆಲಸ ಮಾಡಿದರೂ ಸಾಲುವುದಿಲ್ಲ. ಇವರ ಕೈಕೆಳಗೆ ಕೆಲಸ ಮಾಡುವ ಅಧಿಕಾರಿಗಳು ಇಷ್ಟು ನಿರ್ಲಕ್ಷ್ಯವಾಗಿದ್ದರೆ ಹೇಗೆ? ಅಧಿಕಾರಿಗಳಲ್ಲಿರುವ Negligence of duty, deriliction of duty, ಇಂಥಾದ್ದನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

ತುಮಕೂರು ಜಿಲ್ಲಾ ಬ್ಯಾಂಕಿನಲ್ಲಿ 1,15,000 ರೂಪಾಯಿಗಳು ಲೆಕ್ಕದಲ್ಲಿ ಕಾಣೆಯಾಗಿರುವುದು ಅಥವಾ ದುರ್ವಿನಿಯೋಗವಾಗಿದೆ ಎಂದು ಹೇಳಿದೆವು. ನಾನು ಡಿಸೆಂಬರ್ ತಿಂಗಳಿನಲ್ಲಿ ನಡೆದ ಅಧಿವೇಶನದಲ್ಲಿಯೂ ಹೇಳಿದೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗಲೂ ಹೇಳಿದೆ. ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ! ಇವತ್ತಿನ ದಿವಸ ಸರ್ಕಾರ ಸಾಲಮಾಡಿ ದೇಶದ ಜನತೆಯನ್ನು ಒತ್ತೆ ಇಟ್ಟು ಅಪೆಕ್ಸ್ ಬ್ಯಾಂಕ್ ಮತ್ತು ಸೆಂಟ್ರಲ್ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಇವುಗಳಿಗೆ ರಿಸರ್ವ್ ಬ್ಯಾಂಕಿನಿಂದ ಸಾಲವನ್ನು ಕೊಡಿಸಿದ್ದೀರಿ. ಇದಕ್ಕೆ ಸರ್ಕಾರದ ಜವಾಬ್ದಾರಿ ಇದೆ. ಸಹಕಾರ ತತ್ವ ಚೆನ್ನಾಗಿ ಬೆಳೆದು ಉಪಯೋಗವಾಗಬೇಕು; ಸಹಕಾರ ತತ್ವ ರಾಜ್ಯದ ಬುನಾದಿ ಎಂದು ಹೇಳುವಾಗ ಅದು ಸರಿಯಾದ ಭದ್ರವಾದ ಬುನಾದಿಯಾಗಬೇಕಾಗಿದ್ದರೆ ಸಹಕಾರ ಸಂಘಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಇವತ್ತಿನ ದಿವಸ ಸಹಕಾರ ಸಂಘಗಳಲ್ಲಿ ಎಷ್ಟರಮಟ್ಟಿಗೆ ದುರ್ವ್ಯವಹಾರ ನಡೆಯುತ್ತಿದೆ ಅದನ್ನು ಮುಂದುವರಿಯಲು ಬಿಟ್ಟರೆ ಎಲ್ಲ ವಿಷಯಗಳಲ್ಲಿಯೂ ಕೂಡ ಅದೇ ರೀತಿ ನಡೆಯುತ್ತದೆ. ಇದಕ್ಕೆ ಮೊದಲು ಸಮಾಜ ಸುಧಾರಣೆ ಆಗಬೇಕು, ಸಮಾಜ ಸುಧಾರಣೆಯಾಗಿ ಅದರಿಂದ ಸರ್ಕಾರದ ಸುಧಾರಣೆಯಾಗಬೇಕು. ಇವೆರಡೂ ಆದರೆ ಅದರಿಂದ ರಾಜ್ಯದ ಕಲ್ಯಾಣವಾಗುತ್ತದೆ. ಇಲ್ಲದೆ ಹೋದರೆ ನಿಮಗೆ ಓಟು ಕೊಟ್ಟ ಸಮಾಜವೇನಿದೆ ಅದು ನಿಮ್ಮನ್ನು ದೂಷಣೆ ಮಾಡುತ್ತದೆ. ಅವರು ನಿರೀಕ್ಷಣೆ ಮಾಡುವುದು ಸರ್ಕಾರದಿಂದ ಒಳ್ಳೆಯ ಪ್ರತಿಫಲವನ್ನು. ಎಲ್ಲ ವಿಷಯಗಳಲ್ಲಿಯೂ ಕೂಡ ತೀವ್ರವಾದ ಆಸೆ, ಆಕಾಂಕ್ಷೆಗಳನ್ನು ಏನು ಜನತೆ ಇಟ್ಟುಕೊಂಡಿದೆ ಅದನ್ನು ಈ ದೇಶದ ಕಲ್ಯಾಣಕ್ಕೋಸ್ಕರ ನೆರವೇರುವಂತೆ ಮಾಡಬೇಕೆಂದು ಹೇಳಿ ಅಧ್ಯಕ್ಷರ ಮನಸ್ಸಿಗೆ ಸ್ವಲ್ಪ ಬೇಜಾರು ಪಟ್ಟುಕೊಂಡರೂ ನಾನು ಎರಡು ಮೂರು ನಿಮಿಷಕ್ಕೂ ಹೆಚ್ಚಾಗಿ ತೆಗೆದುಕೊಂಡದ್ದಕ್ಕೆ ಕ್ಷಮಿಸಬೇಕು ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ, ಸ್ವಾಮಿ.

†Sri B. D. JATTI.—Sir, I am grateful to Sri Muckannappa for bringing to my notice what he read about something in the papers. I just looked into it. The head line in the Deccan Herald is 'Jatti admits Sharavathi errors'. It is most misleading. It was to a question of Sri Mallaradhya in the Upper House regarding Audit Report and the irregularities of several departments as pointed out by the Audit Report and all that. There may be irregularities in several departments including Sharavathi and those irregularities will be pointed out by the Audit Report and it will come before the House for discussion. The head line is misleading and so the Hon. Member has come to that conclusion.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಸ್ವಾಮಿ ಅಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು ಸಭೆಯಲ್ಲಿ ಮಂಡಿಸಿರುವ ಆಯವ್ಯಯದ ಪಟ್ಟಿಯನ್ನು ಸ್ವಾಗತಿಸುತ್ತೇನೆ. ಮುಂದಿನ ವರ್ಷದಲ್ಲಿ ಹೊಸ ತೆರಿಗೆ ಹಾಕುವ ಸೂಚನೆ ಇಲ್ಲದೆಯಿರುವುದು ಸ್ವಾಗತಾರ್ಹವಾಗಿದೆ. ಇದಕ್ಕಾಗಿ ಸರಕಾರವನ್ನು ವಂದಿಸುತ್ತೇನೆ. ಇದೇ ರೀತಿ ವೃದ್ಧಾಪ್ಯ ವಿರಾಮ ವೇತನವನ್ನು ಕೊಡುವುದಕ್ಕೆ ವ್ಯವಸ್ಥೆ

ಮಾಡಿರುವುದು ಮತ್ತು ಕೆಳದರ್ಜೆ ನೌಕರರಿಗೆ ಸ್ವಲ್ಪಮಟ್ಟಿಗೆ ಪರಿಹಾರ ಕಲ್ಪಿಸಿರುವುದು ಸ್ವಾಗತಾರ್ಹವಾಗಿವೆ. ಸಂಸ್ಥಾನದ ಸಾಧನಸಂಪತ್ತುಗಳಿಗನುಗುಣವಾಗಿ ಮೂರನೆಯ ಯೋಜನೆಯ ಕಾರ್ಯಕಲಾಪಗಳನ್ನು ಇದ್ದುದರಲ್ಲಿ ತೃಪ್ತಿಕರವಾಗಿ ನಡೆಸಿದ್ದಾರೆ. ಅದರಲ್ಲಿಯೂ ಕೆಲವು ಇಲಾಖೆಗಳಲ್ಲಿ ಕಾರ್ಯ ತೃಪ್ತಿಕರವಾಗಿವೆ ಎಂದು ಹೇಳಿವರೆ ತಪ್ಪಾಗಲಾರದು. ಕಳೆದ ಕೆಲವು ದಿನಗಳಿಂದ ವಂದನಾರ್ಪಣೆಯ ನಿರ್ಣಯದ ಮೇಲೆ ಮತ್ತು ಆಯವ್ಯಯಗಳ ಅಂದಾಜು ಪಟ್ಟಿಯ ಮೇಲೆ ಮಾತನಾಡಿದ ವಿರೋಧ ಪಕ್ಷದ ಕೆಲವು ಸದಸ್ಯರು ಸ್ವಾತಂತ್ರ್ಯ ಲಭಿಸಿದ ತರುವಾಯ ದೇಶದಲ್ಲಿ ಯಾವ ಪ್ರಗತಿಯೂ ನಡೆದಿಲ್ಲವೋ ಏನೋ ಎಂಬ ಅರ್ಥ ಬರುವ ರೀತಿಯಲ್ಲಿ ಮಾತನಾಡಿದರು. ಕಳೆದ ಹದಿನಾರು ವರ್ಷಗಳ ಅವಧಿಯಲ್ಲಿ ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ ನಡೆದಿರುವ ಪ್ರಗತಿ ಅಸಾಧಾರಣವಾದುದು ಮತ್ತು ನಮ್ಮನ್ನು ನಾವು ಅಭಿನಂದಿಸಿಕೊಳ್ಳಬಹುದೆಂದು ಹೇಳಬಹುದಾಗಿದೆ. ಎಂದ ಮಾತ್ರಕ್ಕೇ ಜನತೆಯಲ್ಲಿ ಸಂಪೂರ್ಣ ತೃಪ್ತಿ ಮೂಡಿದೆ, ಸಂಪೂರ್ಣ ಸಮಾಧಾನವಿದೆ ಎಂದು ನಾನು ಹೇಳುವುದಿಲ್ಲ. ಕಳೆದ ಹದಿನಾರು ವರ್ಷಗಳಲ್ಲಿ ಈ ದೇಶದಲ್ಲಿ ನಾನಾ ರೀತಿಯ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಶಿಕ್ಷಣ ಕ್ಷೇತ್ರದಲ್ಲಿ, ವ್ಯವಸಾಯ ಕ್ಷೇತ್ರದಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ನಡೆದಿದೆ. ಶಿಕ್ಷಣ ಕ್ಷೇತ್ರವನ್ನು ಪ್ರಸ್ತಾಪಿಸುವುದಾದರೆ, ಕಾಲೇಜು ಮತ್ತು ಶಾಲೆಗಳ ಸಂಖ್ಯೆ ಜಾಸ್ತಿಯಾಗಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಜಾಸ್ತಿಯಾಗಿದೆ. ಸರಕಾರದವರು ಜನಾರೋಗ್ಯದ ಕಡೆ ಹೆಚ್ಚು ಗಮನವನ್ನು ಕೊಟ್ಟಿದ್ದಾರೆ. ಇದರ ಪರಿಣಾಮವಾಗಿ ಹಲವು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲಾಗಿದೆ. ಮತ್ತು ಜನರ ಸರಾಸರಿ ವಯಸ್ಸು ಹೆಚ್ಚಾಗಿದೆ. ಇದೇ ರೀತಿ ಕೈಗಾರಿಕಾಭಿವೃದ್ಧಿಯ ದೃಷ್ಟಿಯಿಂದಲೂ ಕೂಡ ದೇಶ ಬಹಳ ಪ್ರಗತಿಯನ್ನು ಸಾಧಿಸಿದೆ. ಹೆಚ್ಚಿನ ವಿವರಗಳ ಕಡೆ ನಾನು ಹೋಗುವುದಿಲ್ಲ. ಆದರೂ ಜನರಲ್ಲಿ ಸ್ವಲ್ಪ ಮಟ್ಟಿಗೆ ಅತೃಪ್ತಿಯಿದೆಯೆನ್ನುವುದನ್ನು ನಾನು ಒಪ್ಪುತ್ತೇನೆ. ಈ ಅತೃಪ್ತಿಗೆ ಕಾರಣವೇನೆಂಬುದನ್ನು ನನ್ನ ಅನುಭವದ ಆಧಾರದ ಮೇಲೆ ಪರಿಶೀಲನೆ ಮಾಡಲು ಪ್ರಯತ್ನ ಮಾಡಿದ್ದೇನೆ. ಅಸಮಾಧಾನಕ್ಕೆ ಮೊದಲನೆಯ ಕಾರಣ ಇತ್ತೀಚಿನ ಕೆಲವು ವರ್ಷಗಳಲ್ಲಿ ಧಾರಣೆವಾಸಿಗಳು ಬಹಳ ಹೆಚ್ಚಾಗಿ ಜೀವನದ ಖರ್ಚುವೆಚ್ಚಗಳು ದುಬಾರಿಯಾಗಿರುವುದರಿಂದ ಜನರು ಸ್ವಲ್ಪಮಟ್ಟಿಗೆ ಕಳವಳಗೊಂಡಿದ್ದಾರೆ. ಎರಡನೆಯ ಕಾರಣ, ಕೆಲವು ಮಂದಿ ರಾಜಕಾರಣದ ಹೆಸರಿನಲ್ಲಿ ಅಕ್ಷಮ್ಯ ಕಾರುಬಾರುಗಳನ್ನು ಮಾಡುತ್ತಿರುವುದರಿಂದ ಜನರು ಸ್ವಲ್ಪಮಟ್ಟಿಗೆ ಅಸಹ್ಯ ಪಟ್ಟಿದ್ದಾರೆ. ಮೂರನೆಯ ಕಾರಣ, ಈ ರಾಜ್ಯದ ಮತ್ತು ದೇಶದ ಸಂಪತ್ತು ಜಾಸ್ತಿಯಾಗಿದ್ದರೂ ಕೂಡ ಆ ಸಂಪತ್ತಿನಲ್ಲಿ ಬಹುಭಾಗ ಅಕ್ರಮ ಮತ್ತು ಅನೀತಿಯ ವಿಧಾನಗಳಲ್ಲಿ ಸಂಪಾದನೆ ಮಾಡತಕ್ಕ ಜನರ ಕೈಸೇರುತ್ತಿರುವ ಸೂಚನೆ ಕಂಡುಬರುತ್ತಿರುವುದರಿಂದ ಸಾಮಾನ್ಯ ಜನರಿಗೆ ಸ್ವಲ್ಪಮಟ್ಟಿಗೆ ಅಸಮಾಧಾನವಾಗಿದೆ. ನಾಲ್ಕನೆಯ ಕಾರಣ, ಆಡಳಿತದಲ್ಲಿ, ಅದರಲ್ಲಿಯೂ ಕೆಲವು ಕ್ಷೇತ್ರಗಳಲ್ಲಿ ಕಂಡುಬರತಕ್ಕ ಲೋಪದೋಷಗಳಿಂದ ಜನರು ಅಸಮಾಧಾನಗೊಂಡಿದ್ದಾರೆ. ಈ ಕೆಲವು ಕಾರಣಗಳಿಂದ ಜನರಲ್ಲಿ ಅಸಮಾಧಾನ ಮೂಡಿದೆ. ಈ ಕಾರಣಗಳಿಗೆ ಸಂಪೂರ್ಣವಾಗಿ ರಾಜ್ಯ ಸರಕಾರದವರು ಜವಾಬ್ದಾರರೆಂದು ಹೇಳುವುದಕ್ಕಾಗುವುದಿಲ್ಲ. ಧಾರಣೆವಾಸಿಗಳು ಹೆಚ್ಚಿರುವುದಕ್ಕೆ ಸಂಸ್ಥಾನ ಸರಕಾರ ಮಾತ್ರ ಜವಾಬ್ದಾರಿಯಾಗಿಲ್ಲ. ಇಡೀ ದೇಶದ ಆಗುಹೋಗುಗಳು, ದೇಶದಲ್ಲಿರುವ ವಿದ್ಯಮಾನಗಳ ದೆಸೆಯಿಂದ ಧಾರಣೆಗಳು ಹೆಚ್ಚಾಗಿವೆ. ಅದರಲ್ಲಿಯೂ ಮಧ್ಯಮ ವರ್ಗದ ಜನರ ಸ್ಥಿತಿ ಬಹಳ ಶೋಚನೀಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಸರಕಾರದವರು ಅವರ ಕಾರುಬಾರುಗಳಿಂದ ಪದಾರ್ಥಗಳ ಬೆಲೆಗಳನ್ನು ಕಡಮೆ ಮಾಡುವುದು ಸಾಧ್ಯವಾಗದೇಯಿರಬಹುದು. ಆದರೆ ಇವರ ಪಾತ್ರವನ್ನು ಸ್ವಲ್ಪಮಟ್ಟಿಗೆ ವಹಿಸುವುದಕ್ಕೆ ಅವಕಾಶವಿದೆ. ಧಾರಣೆಗಳು ಜಾಸ್ತಿಯಾಗುವುದಕ್ಕೆ ಹಲವು ಕಾರಣಗಳಿವೆ. ಇವುಗಳಲ್ಲಿ ಪ್ರಬಲವಾದ ಕಾರಣ, ಕೇಂದ್ರದ ಹಣಕಾಸಿನ ಸಚಿವರು ಕೆಲವು ದಿನಗಳ ಹಿಂದೆ ಹೇಳಿದ ಹಾಗೆ ಕಳ್ಳದುಡ್ಡು. ಇಂಥ ದುಡ್ಡು ಯಾರಲ್ಲಿ ಸೇರಿದೆಯೆಂದರೆ, ಕಾಳಸಂತೆ ವ್ಯಾಪಾರಗಾರರು, ಲಂಚಕೋರ ಅಧಿಕಾರಿಗಳು ಲಾಭಕೋರ ಖಾಸಗಿ ಜನರು ಮತ್ತು ತೆರಿಗೆ ಕೊಡದೇಯಿರುವ ಜನರಲ್ಲಿ ಸೇರಿದೆ—ಕಳ್ಳದುಡ್ಡೆಲ್ಲವೂ ಇವರಲ್ಲಿ ಸೇರಿದೆ. ಇದನ್ನು ಹೊಂದುವವರು ತೆರಿಗೆ ಕೊಡುವ ಗೋಜಿಗೇ ಹೋಗುವುದಿಲ್ಲ. ಆದುದರಿಂದ ಆ ಹಣವನ್ನು ಇವರು ಯಥೇಚ್ಛವಾಗಿ ಖರ್ಚುಮಾಡುವುದಕ್ಕೆ ಅವಕಾಶವಿದೆ. ಸಾಚಾ ದುಡ್ಡಿಗೂ ಕಳ್ಳದುಡ್ಡಿಗೂ ಪೈಪೋಟಿ ನಡೆದರೆ ಕಳ್ಳದುಡ್ಡು ಮುಂದೆ ಬರುತ್ತದೆ. ಒಂದು ಸಾಮಾನಿಗೆ ಸಾಚಾ ದುಡ್ಡಿನವನು ನಾಲ್ಕಾಣೆ ಕೊಡುವುದಕ್ಕೆ ಹಿಂತೆಗೆದರೆ ಕಳ್ಳದುಡ್ಡಿನವನು ಒಂದು ರೂಪಾಯಿ ಕೊಡುವುದಕ್ಕೆ ಮುಂದೆ ಬರುತ್ತಾನೆ. ಆದುದರಿಂದ ಧಾರಣೆಗಳು ಮಿತಿಮೀರಿ ಏರುತ್ತಿವೆ. ಸರಕಾರದವರು ಕಾರ್ಯಗತ ಮಾಡುವ ಕಾಮಗಾರಿಗಳಲ್ಲಿ ಸಾಕಷ್ಟು ವಿಚಕ್ಷಣೆ, ದರ್ಪ ಮತ್ತು ಪ್ರಾಮಾಣಿಕತೆಯುಳ್ಳ ಅಧಿಕಾರಿಗಳು ಇದ್ದರೆ ಈ ಕಳ್ಳ ಹಣ ಕೆಲವರಲ್ಲಿ ಸೇರುವುದು ಕಡಮೆಯಾಗುತ್ತದೆ. ಅದರಲ್ಲಿಯೂ ಕೆಲವು ಕಾಮಗಾರಿಗಳಲ್ಲಿ ಮಾಮೂಲು ಎಂದಿದೆ. ನಾನು

(ಶ್ರೀ ಕಡಿದಾಳ್ ಮಂಜಪ್ಪ)

ಪಬ್ಲಿಕ್‌ವರ್ಕ್ಸ್ ಮಂತ್ರಿಯಾಗಿದ್ದಾಗ ಇದು ಸುಮಾರು ಸೇಕಡ ಐದರಷ್ಟಿತ್ತೆಂದು ಕೇಳಿದ್ದೆ. ಈ ಮಾಮೂಲು ಈ ರಾಜ್ಯದಲ್ಲಿ ಮಾತ್ರವಲ್ಲ ಎಲ್ಲ ಕಡೆಯೂ ಇದೆಯೆಂದು ತಿಳಿದುಬಂದಿದೆ. ಇದು ಈಗ ಸೇಕಡ 40 ರಿಂದ 50ರವರೆಗೆ ಹೋಗುತ್ತಿದೆ ಎಂದು ಹೇಳುತ್ತಾರೆ. ಹೀಗೆ ವೇಸ್ಟೇಜ್, ಲೀಕೇಜ್ ಹೆಚ್ಚಾಗದೇಯಿದ್ದರೆ......

ಶ್ರೀ ಎಸ್. ಎಂ. ಕೃಷ್ಣ.—ಮಾಮೂಲಿನ ಜತೆಯ ಗೀಮೂಲಿನಲ್ಲಿ ಕಾಂಗ್ರೆಸ್ ಪಕ್ಷದವರಿಗೆ ಎಷ್ಟು ಸಿಕ್ಕುತ್ತದೆ ?

ಶ್ರೀ ಕಡಿದಾಳ ಮಂಜಪ್ಪ.—ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದು ಕಾಮಗಾರಿಗೆ ಸರಕಾರದವರು 50 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ ಎಂದು ಇಟ್ಟುಕೊಳ್ಳೋಣ. 50 ಕೋಟಿಯಲ್ಲಿ 25 ಕೋಟಿ ರೂಪಾಯಿ ಅಧಿಕಾರಿಗಳು, ಕಂಟ್ರಾಕ್ಟರ್‌ಗಳು ಮತ್ತು ನಡುವೆ ಇರತಕ್ಕಂಥ ಖಾಸಗಿಯವರು ಹಂಚಿಕೊಂಡರೆ ಉಳಿದ ಅರ್ಧ ಹಣದ ಕೆಲಸ ನಡೆಯುತ್ತದೆ. ಈ ಮೂರು ವರ್ಗದವರ ಜೇಬಿಗೆ ಸೇರಿದ 25 ಕೋಟಿಯ ಮೇಲೆ ಅವರು ತೆರಿಗೆ ಕೊಡುವುದಿಲ್ಲ; ಮತ್ತು ಅದು ಮನಿಮಾರ್ಕೆಟ್ಟಿಗೆ ಹೋಗುತ್ತದೆ. ಮಾರ್ಕೆಟ್ಟಿನಲ್ಲಿ ಆ ಹಣ ಸಾಕಷ್ಟು ಪೈಪೋಟಿ ನಡೆಯಿಸುವುದರಿಂದ ಧಾರಣೆವಾಸಿ ಹೆಚ್ಚಾಗುತ್ತದೆ. ಈ ವಿಚಾರದಲ್ಲಿ ಎಲ್ಲ ರಾಜ್ಯ ಸರಕಾರಗಳೂ ಕೇಂದ್ರ ಸರಕಾರವೂ ಸೂಕ್ತ ಕ್ರಮ ಕೈಗೊಳ್ಳಬೇಕಾದ್ದು ಅವಶ್ಯಕ. ಇದನ್ನು ತಡೆಗಟ್ಟಬೇಕಾದುದು ಸರಕಾರದ ಪವಿತ್ರ ಕರ್ತವ್ಯವಾಗಿದೆ. ಇದಕ್ಕೆ ತಕ್ಕ ಔಷಧ ಕಂಡುಹಿಡಿಯತಕ್ಕದ್ದು ಅತ್ಯಗತ್ಯ ಎಂದು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಕೆಲವರು ಸ್ಥಳೀಯ ಮುಖಂಡರ, ಅಥವಾ ಪುಢಾರಿಗಳ ಹಾವಳಿ ಬಗ್ಗೆ ಹೇಳಬೇಕೆಂದಿದ್ದೇನೆ. ಇಂಗ್ಲೀಷಿನಲ್ಲಿ ಇವರಿಗೆ ಪೊಲಿಟಿಕಲ್ ಟೌಟ್ಸ್ ಅಥವಾ ಅನ್‌ಡಿಜೈರೆಬಲ್ ಲೀಡರ್ಸ್ ಎಂದು ಹೇಳಬಹುದು. ಇವರ ಕೈವಾಡ ಅಲ್ಲಲ್ಲಿ ಆಡಳಿತದಲ್ಲಿ ಹೆಚ್ಚಾಗಿದೆ. ಈ ವಿಚಾರದಲ್ಲಿ ನಾನು ಮಂತ್ರಿಯಾಗಿದ್ದಾಗಲೂ ಕೂಡ ಪ್ರಸ್ತಾಪ ಮಾಡಿದ್ದೇನೆ. ನಾನು ಮಾಡಿದ ಭಾಷಣಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ಇತ್ತೀಚೆಗೆ ಈ ಪುಢಾರಿ ಮಹಾಶಯರುಗಳು ಜನರಿಗೆ ಮತ್ತು ಒಳ್ಳೆಯ ಅಧಿಕಾರಿಗಳಿಗೆ ಕಿರುಕುಳ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅಲ್ಲಲ್ಲಿ ಲಂಚ ಕೊಟ್ಟು ಅಧಿಕಾರಿಗಳನ್ನು ಕಿಸೆಗೆ ಹಾಕಿಕೊಂಡಿದ್ದಾರೆ. ಕೆಲವರು ಲಂಚಕೋರ ಅಧಿಕಾರಿಗಳು ಅವರೊಂದಿಗೆ ಶರೀಕಾಗಿ ಮಾಡಬಾರದ ಕೃತ್ಯ ಮಾಡುತ್ತಿದ್ದಾರೆ. ಈ ಪುಢಾರಿಗಳೂ ತಮಗೆ ಬೇಡಾದ ಅಧಿಕಾರಿಗಳನ್ನು ವರ್ಗ ಮಾಡಿಸುತ್ತಾರೆ ಮತ್ತು ತಮಗೆ ಬೇಕಾದವರನ್ನು ತಮ್ಮ ಊರಿಗೆ ಹಾಕಿಸಿಕೊಳ್ಳುತ್ತಾರೆ. ಆಗದೇ ಇದ್ದವರ ಮೇಲೆ ಕ್ರಿಮಿನಲ್ ಕೇಸೆಸ್ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಕೆಲವು ಕಡೆ ಇಂಥ ಪುಢಾರಿಗಳು ಕಂಟ್ರಾಕ್ಟ್ ಕೆಲಸ ಮಾಡುವುದಕ್ಕೆ ಸಹ ಪ್ರಾರಂಭ ಮಾಡಿದ್ದಾರೆ. ಕೆಲವು ಲಂಚಕೋರ ಇಂಜಿನಿಯರುಗಳನ್ನು ಷರೀಕುಮಾಡಿಕೊಂಡು ಅವರೂ ಇವರೂ ಸೇರಿ ಕಂಟ್ರಾಕ್ಟ್ ಮಾಡುತ್ತಾ ಇದ್ದಾರೆ. ಕೆಲವು ಕಾಂಗಾರಿಗಳಲ್ಲಿ ದೊಡ್ಡ ಕಂಟ್ರಾಕ್ಟರುಗಳಿಂದ ಸಬ್ ಕಂಟ್ರಾಕ್ಟ್ ಪಡೆದು ತಮ್ಮ ಕೈಕೆಳಗಿನ ಸಬ್ ಕಂಟ್ರಾಕ್ಟರುಗಳಿಗೆ ಕೇಸ ಕೊಟ್ಟು ಬರೀ ಲಾಭ ಸಂಪಾದನೆ ಮಾಡುತ್ತಿದ್ದಾರೆ. ಕೆಲವು ಕಡೆ ಇಂಥ ಪುಢಾರಿಗಳನ್ನು ನೋಡಿ ಅಧಿಕಾರಿಗಳು ಭಯ ಭೀತಿಯಿಂದ ನಡುಗುತ್ತಿದ್ದಾರೆ. ಉತ್ಪ್ರೇಕ್ಷೆಮಾಡಿ ಇದನ್ನು ನಾನು ಹೇಳುತ್ತಿಲ್ಲ. ಪುಢಾರಿಗಳು ಫೋನು ಮಾಡಿದರೆ ಸ್ಥಳೀಯ ಅಧಿಕಾರಿಗಳು ಕೆಲವರು ನಡುಗುವ ನಿದರ್ಶನಗಳು ಬಂದಿವೆ. ಕಷ್ಟಪಟ್ಟು ತ್ಯಾಗಮಾಡಿ ಸ್ವರಾಜ್ಯ ಸಂಪಾದನೆ ಮಾಡಿದ್ದು, ಇಂಥ ಪುಢಾರಿ ಮತ್ತು ಅವರನ್ನು ನಂಬಿರತಕ್ಕಂಥ ಕಂಟ್ರಾಕ್ಟದಾರರ ಮತ್ತು ಲಾಭಕೋರರ ಪ್ರಯೋಜನಕ್ಕಾಗಿ ಅಲ್ಲ. ಇವರ ಬಗ್ಗೆ ಒಂದು ಸೂಕ್ತವಾದ ಯೋಜನೆ ಮಾಡಬೇಕಾದ ಕಾಲ ಸನ್ನಿಹಿತವಾಗಿದೆ ಎಂದು ಬಹಳ ಕಳಕಳಿಯಿಂದ ಹೇಳುತ್ತೇನೆ. ನನ್ನ ಮಾತಿನಲ್ಲಿ ಯಾವ ರಾಜಕಾರಣದ ಉದ್ದೇಶವೂ ಇಲ್ಲ. ನನ್ನ ಹತ್ತಿರ ಇರುವ ವಿವರ ಕೊಡಿಸಿ ಈ ವಿಷಯದ ಮೇಲೆ ಒಂದು ದೊಡ್ಡ ಪುಸ್ತಕ ಬರೆಯಬಹುದು. ನಿಷ್ಕಳಂಕವಾದ ಆಡಳಿತ ನಡೆಸುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಜನರು ಮಂತ್ರಿಗಳಿಂದ ಮತ್ತು ಅಧಿಕಾರಿಗಳಿಂದ ಆಳಿಸಿಕೊಳ್ಳಲಿಕ್ಕೆ ಸಿದ್ಧರಿದ್ದಾರೆ ಆದರೆ ನೀತಿ ನಿಯಮ, ಲಂಗು ಲಗಾಮು ಇಲ್ಲದ ಇಂಥ ಜನರಿಂದ ಆಳಿಸಿಕೊಳ್ಳಲಿಕ್ಕೆ ಮಾತ್ರ ತಯಾರಿಲ್ಲ. ಈ ಪುಢಾರಿಗಳು ಮಂತ್ರಿಗಳ ಅಥವಾ ಇತರ ರಾಜಕಾರಣಿಗಳ ಸಂಪರ್ಕವನ್ನು ಬೆಳೆಯಿಸಿ, ಸ್ಥಳೀಯ ಅಧಿಕಾರಿಗಳ ಮೇಲೆ ಆಧಿಪತ್ಯ ನಡೆಯಿಸಿ ಮಾಡಬಾರದ ಕೆಲಸ ಮಾಡುತ್ತಿದ್ದಾರೆ. ಇವರನ್ನು ಎದುರಿಸಲು ಜನ ನಿಸ್ಸಹಾಯಕರಾಗಿದ್ದಾರೆ. ಇವರು ತಮಗೆ ಆಗದವರ ಜಮೀನು ಆಕ್ವೈಯರ್ ಮಾಡಿಸುತ್ತಾರೆ, ಮನೆ ಒಡೆಸುತ್ತಾರೆ; ಕೇಸ್ ಹಾಕಲು ಪ್ರಯತ್ನ ಮಾಡುತ್ತಾರೆ. ಇದನ್ನು ಸಂಪೂರ್ಣವಾಗಿ ತಡೆಗಟ್ಟಲು

ಸರಕಾರ ಪ್ರಯತ್ನ ಮಾಡುವುದು ಅಗತ್ಯವಾಗಿದೆ. ಇದನ್ನು ನಿಲ್ಲಿಸಲಿಕ್ಕೇಬೇಕು. ಅಧಿಕಾರಿಗಳು ಸರಕಾರಕ್ಕೆ ವಿಧೇಯರಾಗಿ ಇರಬೇಕಾದುದು ಅಗತ್ಯ. ಸರಕಾರದ ಆಜ್ಞೆಯ ಪ್ರಕಾರ ಅಧಿಕಾರಿಗಳು ನಡೆಯಬೇಕು. ಅವರು ದೇಶಭಕ್ತಿಯಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲಸಮಾಡಬೇಕು. ಆದರೆ ಪುಢಾರಿಗಳ ಅಧೀನವಾಗಿರಬಾರದು. ನಾನು ಮಂತ್ರಿಯಾಗಿದ್ದಾಗ್ಗೆ ನಾನೇನು ಮಾಡಿದೆ ಎಂದು ನೀವು ಕೇಳಬಹುದು. ನಾನು ಬಹಿರಂಗವಾಗಿ ಸಭೆಗಳಲ್ಲಿ ಇಂಥ ಪುಢಾರಿಗಳ ಬಗ್ಗೆ ಎಚ್ಚರಿಕೆಯಿಂದ ಇರಲು ಅಧಿಕಾರಿಗಳಿಗೆ ಹೇಳಿದ್ದೇನೆ. ಆದುದರಿಂದ ಈ ಬಗ್ಗೆ ಸರಕಾರದವರು ನಿರ್ದಿಷ್ಟವಾಗಿ ಬಹಿರಂಗವಾಗಿ ಘಂಟಾಘೋಷವಾಗಿ ಅಧಿಕಾರಿಗಳಿಗೆ ಹೇಳಬೇಕು ಅಂದರೆ ಕೆಲಸ ಚನ್ನಾಗಿ ನಡೆಯುತ್ತದೆ. ಸರಕಾರಿ ಅಧಿಕಾರಿಗಳು ಸರ್ಕಾರ ವಿನಹ ಬೇರೆ ಯಾರಿಗೂ ವಿಧೇಯಕರಾಗಿ ಇರಬೇಕಾಗಿಲ್ಲ. ಜನರ ಹಿತ ದೃಷ್ಟಿಯಿಂದ ದೇಶಕ್ಕೆ ಜವಾಬ್ದಾರರಾಗಿ ಸರಕಾರದ ಆಜ್ಞೆಗಳನ್ನು ಶಿರಸಾವಹಿಸಿ ಪರಿಪಾಲನೆ ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಬೇಕು. ಮುಖಂಡರು ಸಣ್ಣವರೇ ಆಗಲಿ ದೊಡ್ಡವರೇ ಆಗಲಿ ಅವರ ಲಂಚಕೋರರಾದರೆ ಅವರ ಮಾತಿಗೆ ಅಧಿಕಾರಿಗಳು ಬೆಲೆ ಕೊಡಬಾರದು ಎಂದು ಮನವಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಸಾರ್ವಜನಿಕರಿಗೂ ಮನವಿ ಮಾಡಿಕೊಳ್ಳುತ್ತೇನೆ. ಲಂಚಕೋರರ ಮಾತು ಕೇಳಬಾರದು.

ಇನ್ನು ಮಲೆನಾಡಿನ ಸಂಬಂಧಪಟ್ಟ ಒಂದು ಮಾತು ಹೇಳಬೇಕಾಗಿದೆ. ಮಲೆನಾಡು ಪ್ರದೇಶ ಬಹಳ ಹಿಂದುಳಿದಿದೆ. ಕಳೆದ ವರ್ಷ ತುರ್ತು ಪರಿಸ್ಥಿತಿ ಬಂದ ನಂತರ ಮಲೆನಾಡಿನಲ್ಲಿ ಕೆಲವು ಕಾಮಗಾರಿಗಳನ್ನು ಸರಕಾರ ನಿಲ್ಲಿಸಿದೆ. ಈ ಎಲ್ಲ ಕಾಮಗಾರಿಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಈ ಪೈಕಿ ಒಂದು ಕಾಮಗಾರಿಯ ವಿಚಾರವನ್ನು ಪ್ರಸ್ತಾಪಮಾಡಬೇಕಾಗಿದೆ. ಒಂದು ಕಾಮಗಾರಿ ಹಿಂದಿನ ಕೆಲವು ವರ್ಷಗಳಿಂದ ಬಜೆಟ್ಟಿನಲ್ಲಿ ಸೇರಿತ್ತು. ಆದರೆ ನನ್ನಮೇಲೆ ಕೆಲವರು ಅಪಾದನೆ ಮಾಡಿದ್ದರಿಂದ ಆ ಕಾಮಗಾರಿ ಅನಾವಶ್ಯಕ ಅಂತ ಹೇಳಿ ಸರಕಾರದವರು ಆಜ್ಞೆಯನ್ನು ಹೊರಡಿಸಿ ಆ ಕಾಮಗಾರಿಗೆ ಮೀಸಲಾಗಿದ್ದ ಹಣವನ್ನು ಬೇರೆ ಉಪಯುಕ್ತವಾದ ಕಾಮಗಾರಿಗೆ ಉಪಯೋಗಿಸಬೇಕು ಎಂದು ಸರಕಾರದವರು ಆಜ್ಞೆ ಮಾಡಿದ್ದಾರೆ. ಇದು ಬಹಳ ಶೋಚನೀಯ.

ಈ ಕಾಮಗಾರಿಯ ಇತಿಹಾಸವನ್ನು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸುವುದಾದರೆ, ಅದು ನಮ್ಮ ತಾಲ್ಲೂಕಿನಲ್ಲಿ ಮತ್ತು ನಮ್ಮ ಊರಿಗೆ ಹತ್ತಿರವಿರುವ ತುಂಗಾನದಿಗೆ ಕಟ್ಟುವ ಸೇತುವೆ ವಿಚಾರ. ನಾನು ಲೋಕೋಪಯೋಗಿ ಮಂತ್ರಿಯಾಗಿದ್ದಾಗ ಆ ಪ್ರದೇಶದ ಜನರು ಒಂದು ಸೇತುವೆ ತುಂಗಾ ನದಿಗೆ ಅವಶ್ಯಕವೆಂತ ಹೇಳುತ್ತಾ ಇದ್ದರು. ನನ್ನ ಹತ್ತಿರ ಮ್ಯಾಪ್ ಇದೆ. ಆದರೆ ಸಭೆಗೆ ಮತ್ತು ಸರಕಾರಕ್ಕೆ ತಿಳಿಯುವ ಮಟ್ಟಿಗೆ ಹೇಳುವುದಾದರೆ, ತುಂಗಾನದಿ ನಮ್ಮ ಊರಿನ ಆಚೆಗೆ ಇದೆ. ಗೋಪಾಲಗೌಡರು ಕೂತಿರುವ ದಿಕ್ಕಿನಲ್ಲಿ ತೀರ್ಥಹಳ್ಳಿ ಇದೆ. ನಮ್ಮ ಊರಿಗೆ ಸೇತುವೆ ಬೇಕಾಗಿಲ್ಲ. ನದಿಯ ಆಚೆ ಇರುವ ಸುಮಾರು 20 ಹಳ್ಳಿಗಳವರು ಮಳೆಗಾಲದಲ್ಲಿ ನದಿಯನ್ನು ದಾಟುವುದಕ್ಕೆ ಆಗುವುದಿಲ್ಲ. ಆಸ್ಪತ್ರೆಗೆ ಮತ್ತು ತಾಲ್ಲೂಕು ಆಫೀಸಿಗೆ ಬರಬೇಕಾದರೆ 20 ಮೈಲಿಗಳ ದೂರ ಬಳಸಿ ಅವರು ಬರಬೇಕು. ಈ ಸೇತುವೆಯನ್ನು 1957ನೆ ಇಸವಿಯಲ್ಲಿ ನಾನು ಮಂತ್ರಿಯಾಗದೆ ಇದ್ದಾಗ, ಶ್ರೀ ವೀರಣ್ಣಗೌಡರು ಕಟ್ಟಿಸಬೇಕು ಅಂತ ಹೇಳಿ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದರು— ಸೆಂಟ್ರಲ್ ರೋಡ್ ಫಂಡ್ ಹಣವನ್ನು ಅಪೇಕ್ಷೆಮಾಡಿ. 1958ನೇ ಇಸವಿ ಮಾರ್ಚಿ ತಿಂಗಳಿನಲ್ಲಿ ಆ ಸೇತುವೆ ಕಟ್ಟಬೇಕು ಅಂತ ಹೇಳಿ ಮಂಜೂರಾತಿ ಕೊಟ್ಟರು. ಆಗಲೂ ನಾನು ಮಂತ್ರಿಯಾಗಿರಲಿಲ್ಲ. 1959ನೇ ಇಸವಿಯಲ್ಲಿ ನಾನು ಮಂತ್ರಿಯಾದೆ. ಪುನಃ ಆಗ ಕೆಲವರು ಇವರು ಊರಿಗೆ ಮಾಡಬೇಕು ಅಂತ ಇದನ್ನು ಮಾಡಿದ್ದಾರೆ ಆದ್ದರಿಂದ ಅಲ್ಲಿ ಕಟ್ಟಬಾರದು ಬೇರೆಕಡೆ ಕಟ್ಟಬೇಕು ಎಂದು ಹೇಳಿದರು. ಅವರಮೇಲೆ ಸ್ವಲ್ಪಮಟ್ಟಿಗೆ ಚರ್ಚೆ, ವಾದ ವಿವಾದ ನಡೆದು, ನಂತರ ಶ್ರೀ ಚನ್ನಬಸಪ್ಪನವರಿಗೆ ಕಾಗದ ಬರೆದೆ, ಅದು ನನಗೆ 'ಉಪಯೋಗವಾಗುವುದಿಲ್ಲ, ತಜ್ಞರಿಂದ ತನಿಖೆ ನಡೆಸಿ, ಎಲ್ಲಿ ಸಾಧ್ಯವೋ ಅಲ್ಲಿ ಕಟ್ಟಿಸಿ ಅಂತ ಹೇಳಿ ಆಮೇಲೆ ಇಬ್ಬರು ಚೀಫ್ ಇಂಜಿನಿಯರುಗಳು ಹೋಗಿ ಅಲ್ಲಿ ತನಿಖೆ ನಡೆಸಿಬಿಟ್ಟು, ವಿವರದಲ್ಲಿದ್ದ 2 ಸೈಟುಗಳನ್ನು ಬಿಟ್ಟು ಮೂರನೇ ಸೈಟಿನಲ್ಲಿ ಕಟ್ಟಬಹುದೆಂದು ತೀರ್ಮಾನಮಾಡಿದರು. ಅಲ್ಲಿಗೆ ವಿವಾದ ನಿಲ್ಲಲಿಲ್ಲ. ಚನ್ನಬಸಪ್ಪನವರೇ ಖುದ್ದಾಗಿ ಹೋಗಿ ಪರಿಶೀಲನೆ ಮಾಡಿಬಿಟ್ಟು, ಇಂಜಿನಿಯರುಗಳು ಸೆಲೆಕ್ಟ್ ಮಾಡಿದ ಸೈಟುಗಳನ್ನು ಒಪ್ಪಿದರು. ಅನಂತರ ಟೆಂಡರ್ ಕರೆಯಲಾಯಿತು. ಟೆಂಡರು ಕರೆದಾಗ ರೇಟು ಸರಿಬರಲಿಲ್ಲ ಅಂತ ಹೇಳಿಬಿಟ್ಟು 2ನೇ ಸಾರಿ ಟೆಂಡರು ಕರೆದರು. ಆಗ ಕೆಲವರಿಂದ ನನ್ನ ಮೇಲೆ ಆಪಾದನೆ ಬಂತು. ಏನೆಂದರೆ ಕಡಿದಾಳ್ ಮಂಜಪ್ಪನವರ ಕೈವಾಡದಿಂದ ಸೇತುವೆಯ ನಿವೇಶನವನ್ನು ನಿಗದಿ ಮಾಡಿದ್ದಾರೆ, ಕಡಿದಾಳ್ ಮಂಜಪ್ಪನವರ ಊರಿಗೆ ಉಪಯೋಜನವಾಗುತ್ತದೆ, ಅವರ ಮನೆಗೆ ಉಪಯೋಗವಾಗುತ್ತದೆ ಎಂದು. ನಾನು ಮತ್ತು ನನ್ನ ಹೆಂಡತಿ ಸೇತುವೆಯ ಮೇಲೆ ಪ್ರತಿಸಾಯಂಕಾಲ ಗಾಳಿ ಸವಾರಿಗೆ ಹೋಗಬೇಕಾದ ಪ್ರಮೇಯವಿಲ್ಲ. ನನ್ನ ಮಗ ನದಿಯ ಆಚೆ ಇದ್ದುಕೊಂಡು ಕಂಟ್ರಾಕು

(ಶ್ರೀ ಕಡಿದಾಳ್ ಮಂಜಪ್ಪ)

ಮಾಡುತ್ತಾ ಇಲ್ಲ. ನನ್ನ ನೆಂಟರಿಷ್ಟರ್‍ಯಾರೂ ನದಿಯ ಆಚೆ ಇಲ್ಲ. ನದಿಯ ಆಚೆ ನಮಗೆ ಆಸ್ತಿಯಿಲ್ಲ. ಜತ್ತಿಯವರು ನನ್ನ ಮನೆ ನೋಡಿದ್ದಾರೆ. ಶ್ರೀಮತಿ ಸುಬ್ಬಮ್ಮನವರೂ ನೋಡಿದ್ದರೆಂದು ಅಂದುಕೊಂಡಿದ್ದೇನೆ. ವೈಯಕ್ತಿಕವಾಗಿ ನನಗೆ ಸೇತುವೆಯಿಂದ ಪ್ರಯೋಜನವಿಲ್ಲ.

ಏಕೆ ಹೇಳುತ್ತಿದ್ದೇನೆಂದರೆ, ನನ್ನ ಹೆಸರು ನಮೂದಿಸಿ ಕೆಲವರು ಅರ್ಜಿ ಕೊಟ್ಟ ತಕ್ಷಣ ಒಂದು ಕಾಂಗಾರಿಯನ್ನು ನಿಲ್ಲಿಸುವುದೆಂದರೆ, ನಾನು ಬಹಳ ಕೆಟ್ಟವನಾಗಿರಬೇಕು. ಒಂಭತ್ತು ವರ್ಷದಿಂದ ರಾಜ್ಯದ ಮಂತ್ರಿಯಾಗಿ ರಾಜ್ಯದಲ್ಲಿ ಹಲವು ಕ್ಷೇತ್ರಗಳಲ್ಲಿ ದುಡಿದು ಈ ಒಂದು ವಿಚಾರದಲ್ಲಿ ನಾನು ಕೆಟ್ಟವನಾಗುವುದಾದರೆ ಸಾರ್ವಜನಿಕ ಕ್ಷೇತ್ರದಲ್ಲಿ ಇರುವುದಕ್ಕೆ ನಾನು ಲಾಯಕ್ಕಲ್ಲ. ಅದಕ್ಕೋಸ್ಕರ ಸರ್ಕಾರಕ್ಕೆ ಎರಡು ಸಲಹೆ ಮಾಡುತ್ತೇನೆ. ಸರ್ಕಾರಕ್ಕೆ 25—50—100—300 ಜನರು ಅರ್ಜಿ ಕೊಟ್ಟಿರಬಹುದು. ಆ ಅರ್ಜಿಯ ಆಧಾರದ ಮೇಲೆ ಕೆಲಸವನ್ನು ನಿಲ್ಲಿಸಲಾಗಿದೆ. ತಮಗೆ ಸಾರ್ವಜನಿಕ ಅಭಿಪ್ರಾಯ ಬೇಕಾಗಿದ್ದರೆ ತೀರ್ಥಹಳ್ಳಿ ಮತ್ತು ಕೊಪ್ಪ ತಾಲ್ಲೂಕಿನಲ್ಲಿ ಈ ಒಂದು ಇಶ್ಯೂ ಮೇಲೆ ಒಂದು ರೆಫರೆಂಡಮ್ ತೆಗೆಯಿರಿ. ರೆಫರೆಂಡಮ್ ನನಗೆ ವಿರುದ್ಧವಾಗಿ ತೀರ್ಮಾನವಾದರೆ ನಾನು ರಾಜಕೀಯ ಬಿಡುತ್ತೇನೆ, ಸಾರ್ವಜನಿಕ ಜೀವನ ಖೈದು ಮಾಡುತ್ತೇನೆ. ಅದು ಸಾಕಾಗದೆ ಹೋದರೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರು—ಈ ಎರಡು ಡಿಸ್ಟ್ರಿಕ್ಟುಗಳಲ್ಲಿ ರೆಫರೆಂಡಮ್ ತೆಗೆಯಿರಿ. ಆಗಲೂ ಕೂಡ ರಾಜಕಾರಣವನ್ನು ಬಿಡುತ್ತೇನೆ. ಅದೂ ಇಲ್ಲದಿದ್ದರೆ, ನನ್ನ ಕೈವಾಡ ಏನಿದೆ ಎಂಬುದರ ಬಗ್ಗೆ ವಿಚಾರಣೆ ಮಾಡಿಬಿಟ್ಟು ನಾನು ತಪ್ಪಿತಸ್ಥನೆಂದು ಹೇಳಿದರೆ ಸರಕಾರದವರು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಇದು ಕಾಂಗ್ರೆಸ್ ಸರಕಾರ, ನಾನೂ ಕಾಂಗ್ರೆಸ್ ವ್ಯಕ್ತಿ. ವೈಯಕ್ತಿಕವಾಗಿ ಈ ಸೇತುವೆ ಇಲ್ಲದೆ ಇರುವುದರಿಂದ ನನಗೆ ಏನೂ ನಷ್ಟವಾಗುವುದಿಲ್ಲ. ಆದರೆ ಯಾರೋ ಅರ್ಜಿ ಕೊಟ್ಟರು ಅಂತ ಹೇಳಿ ಆ ಸೇತುವೆಯ ಕೆಲಸವನ್ನು ಬಿಟ್ಟು, ಆ ದುಡ್ಡನ್ನು ಬೇರೆ ಉಪಯುಕ್ತವಾದ ಕೆಲಸಕ್ಕೆ, ಕಾಂಗಾರಿಗೆ ಹೇಗೆ ಉಪಯೋಗಿಸಿದರು ಅಂತ ಹೇಳಿದರೆ ನನಗೆ ಇದರ ಅರ್ಥ ಗೊತ್ತಾಗುವುದಿಲ್ಲ.

ಸ್ವಾಮಿ, ಇನ್ನೂ ಅನೇಕ ವಿಷಯಗಳನ್ನು ನಾನು ಪ್ರಸ್ತಾಪಿಸಬೇಕಾಗಿತ್ತು. ಆದರೆ ಈ ಸಭೆಯ ಕಾಲವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಮುಂದೆ ಬೇಡಿಕೆಗಳು ಬಂದಾಗ ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಮುಖ್ಯವಾಗಿ ಪಾನನಿರೋಧದ ವಿಚಾರ, ಅಧಿಕಾರಿಗಳ ನೇಮಕದ ವಿಚಾರ, ಮತ್ತು ವಿದ್ಯಾ ಇಲಾಖೆಯ ಬಗ್ಗೆ ಕೆಲವು ಪ್ರಾಮುಖ್ಯವಾದ ಅಂಶಗಳನ್ನು ಪ್ರಸ್ತಾಪಿಸಬೇಕೆಂದಿದ್ದೇನೆ. ಇಷ್ಟು ಸಮಯವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR DEPUTY SPEAKER in the Chair]

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೆ, ನಮ್ಮ ಆರ್ಥಿಕ ಮಂತ್ರಿಗಳು ಮಂಡಿಸಿರುವ 1964—65ನೇ ಸಾಲಿನ ಅಂದಾಜು ಪಟ್ಟಿಯನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಸರಕಾರದ ಮುಂದೆ ಇಡಬಯಸುತ್ತೇನೆ.

ಸರಕಾರದವರು 1962-63ನೇ ಸಾಲಿಗೆ 9,181.48 ಲಕ್ಷ, 1963-64ನೆ ಸಾಲಿಗೆ 9,911.52 ಲಕ್ಷ ನಿರೀಕ್ಷಿಸಿದ್ದು, ಈಗ 1964-65ನೇ ಸಾಲಿಗೆ 11,106.03 ಲಕ್ಷ ರೂಪಾಯಿಗಳನ್ನು ನಿರೀಕ್ಷಿಸಿದ್ದಾರೆ. ಆದರೆ ಸರ್ಕಾರದವರು ಇನ್ನೂ ಸ್ವಲ್ಪ ಮುತುವರ್ಜಿ ವಹಿಸಿದ್ದರೆ, ಇನ್ನೂ ಹೆಚ್ಚಿನ ಹಣವನ್ನು ನಿರೀಕ್ಷಿಸಬಹುದಾಗಿತ್ತು ಎಂದು ಹೇಳುವುದಲ್ಲದೆ, ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಮಾಡಲೂ ಸಿದ್ಧನಾಗಿದ್ದೇನೆ.

ಈಗಾಗಲೇ ಈ ವೇಳೆಗೆ 1—2—3ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದು—ಎರಡನೆಯ ಯೋಜನೆಗಳನ್ನು ಕಳೆದಿದ್ದೇವೆ. 3ನೇ ಪಂಚವಾರ್ಷಿಕ ಯೋಜನೆ ಮುಗಿದು 4ನೇ ವರ್ಷಕ್ಕೆ ಕಾಲು ಇಡುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ಕೂಡ ಸರಕಾರದವರು ಬೇಕಾದಷ್ಟು ಹಣ ಅಭಿವೃದ್ಧಿ ಕಾರ್ಯಗಳ ಮೇಲೆ ಖರ್ಚುಮಾಡುತ್ತಾ ಇದ್ದೇವೆ. ಆದರೆ ಎಷ್ಟೆಷ್ಟು ಹಣದಿಂದ ಯಾವಯಾವ ಜಾಗಕ್ಕೆ ಎಷ್ಟು ಅನುಕೂಲವಾಗಿದೆ, ಏನೇನು ಪ್ರತಿಫಲ ನಮಗೆ ಉಂಟಾಗಿದೆ ಅನ್ನುವುದನ್ನು ಸರ್ವೆ ನಡೆಸಿ ತಿಳಿಸಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಸರಕಾರದವರು ಕೈಬಿಟ್ಟಿರುವ ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ತರಬೇಕಾಗಿದೆ.

ಬೆಂಗಳೂರು ಪಟ್ಟಣದಲ್ಲಿ ಹಾಗೂ ಜಿಲ್ಲಾಕೇಂದ್ರಗಳು ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಬೇಕಾದಷ್ಟು ಕಟ್ಟಡಗಳ ಕೆಲಸ ನಡೆಯುತ್ತಾ ಇದೆ. ಈ ಕಟ್ಟಡಗಳಿಗೆ ಕಲ್ಲು, ಇಟ್ಟಿಗೆ, ಮರಳು ಮುಂತಾದ ಸಾಮಾನುಗಳನ್ನು ಬೇಕಾದಷ್ಟು ಹೊರಗಡೆಯಿಂದ ತರುತ್ತಾ ಇದ್ದಾರೆ. ಅದಕ್ಕೆ ರಾಯಲ್ಟಿ ವಸೂಲು ಮಾಡುತ್ತಾ ಇಲ್ಲ. ಸರಕಾರಿ ಕಟ್ಟಡಗಳಿಗೆ ಕಂಟ್ರಾಕ್ಟುದಾರರಿಂದ ವಸೂಲು ಮಾಡುತ್ತಾ ಇದ್ದಾರೆ. ಖಾಸಗಿಯವರ ಕಟ್ಟಡಗಳಿಗೆ ಒದಗಿಸುವ ಇಟ್ಟಿಗೆ, ಕಲ್ಲು, ಮರಳು ಇತ್ಯಾದಿಗಳಿಗೆ ರಾಯಲ್ಟಿ ವಸೂಲು ಮಾಡುತ್ತಾ ಇಲ್ಲ. ಬೆಂಗಳೂರು ಜಿಲ್ಲೆಗೆ ನಮ್ಮ ತಾಲ್ಲೂಕಿನಿಂದ ಸಾವಿರಾರು ಲಾರಿಗಳ ಲೋಡಿನಷ್ಟು ಮರಳು, ಕಲ್ಲು ಸಪ್ಲೈ ಮಾಡುತ್ತಾ ಇದ್ದಾರೆ. ಯಾರು ಸಪ್ಲೈ ಮಾಡುತ್ತಿದ್ದಾರೆ, ಎಷ್ಟು ರಾಯಲ್ಟಿ ಅವರಿಂದ ವಸೂಲು ಮಾಡಿದ್ದಾರೆ, ಯಾರಾದರೂ ವಸೂಲು ಮಾಡಿದ್ದಾರೆಯೋ, ಬೆಂಗಳೂರು ಸಿಟಿಗೆ ಮತ್ತು ಜಿಲ್ಲೆಗೆ ಹೊರಗಡೆಯಿಂದ ಬಂದ ಸಾಮಾನುಗಳಿಗೆ ಎಷ್ಟು ಹಣವನ್ನು ವಸೂಲು ಮಾಡಿದ್ದೆ ಎಂಬುದನ್ನು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬೇಕು.

ನಮ್ಮ ದೇಶದಲ್ಲಿ ರೆವಿನ್ಯೂ ಇಲಾಖೆಗೆ ಸೇರಿದ ಅಮಲಾಯಿ ಮರಗಳು ಇವೆ. ರೆವಿನ್ಯೂ ಇಲಾಖೆಯವರು ಅವುಗಳನ್ನು ಹಾಳಾಗುವುದನ್ನು ನೋಡಡೆ, ಇಂಟರೆಸ್ಟೆಡ್ ಪಾರ್ಟೀಸ್ ಯಾರು ಇರುತ್ತಾರೆಯೋ ಅವರ ಹೇಳಿಕೆಯ ಮೇಲೆ ಆ ಮರಗಳನ್ನು ಹರಾಜು ಮಾಡುತ್ತಾರೆ. ನೂರಾರು ರೂಪಾಯಿಗಳ ಬೆಲೆ ಬಾಳತಕ್ಕ ಮರಗಳನ್ನು 10–15 ರೂಪಾಯಿಗಳಿಗೆ ಹರಾಜು ಮಾಡಿ ಸರಕಾರದವರಿಗೆ ನಷ್ಟವಾಗುತ್ತಾ ಇದೆ. ಅದರ ಮೇಲೆ ತೀವ್ರವಾದ ಗಮನವಿಟ್ಟು ಹೆಚ್ಚು ಬೆಲೆಗೆ ಹರಾಜು ಮಾಡಿದರೆ ಸರಕಾರದವರಿಗೆ ಬೇಕಾದಷ್ಟು ಉತ್ಪನ್ನ ಬರುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ.

ದೇವಸ್ಥಾನಗಳಿಗೆ ನಮ್ಮ ದೇಶದಲ್ಲಿ ಬೇಕಾದಷ್ಟು ಜಮೀನುಗಳು ಇವೆ. ಅವು ಬಹಳ ಉತ್ಕೃಷ್ಟವಾದ ಜಮೀನುಗಳು. ಹಿಂದಿನ ಕಾಲದ ಜನತೆ ಅವುಗಳನ್ನು ದೇವಸ್ಥಾನಗಳಿಗೆ ಮಾನ್ಯವಾಗಿ ಕೊಟ್ಟಿದ್ದರು, ಅವು ಉತ್ಕೃಷ್ಟವಾದುವು ಮತ್ತು ಫಲವತ್ತಾದ ಜಮೀನುಗಳಾಗಿವೆ. ಸದರಿ ಜಮೀನುಗಳನ್ನು ಎಕರೆಗೆ 5–6 ರೂ. ನಂತೆ ಗುತ್ತಿಗೆಗೆ ಕೊಡಲಾಗುತ್ತೆ. ಅವುಗಳನ್ನು ವ್ಯವಸಾಯಕ್ಕೆ ಇಟ್ಟುಕೊಂಡು ಪಾಂಚಸಾಲು ಗುತ್ತಿಗೆಗೆ ಕೊಟ್ಟಿದ್ದಾರೆ. ಅವನ್ನು ಮತ್ತೆ ಹರಾಜು ಮಾಡಿಸಿದ್ದರೆ ದೇಶಕ್ಕೆ ಬೇಕಾದಷ್ಟು ದುಡ್ಡು ಬರುತ್ತಾ ಇತ್ತು, ಅದನ್ನು ಕಡೆಗಾಣಿಸಿದ್ದಾರೆ. ಆ ಬಗ್ಗೆ ತೀವ್ರ ಕ್ರಮ ಕೈಕೊಂಡು ಹೆಚ್ಚಿನ ದುಡ್ಡು ಬರುವುದಕ್ಕೆ ವ್ಯವಸ್ಥೆ ಮಾಡಬೇಕು.

ಹಾಗೆಯೇ ಮೊದಲು ಸಾಲುಮರಗಳು ರೆವಿನ್ಯೂ ಇಲಾಖೆಗೆ ಸೇರಿತ್ತು. ಈಗ ಅವನ್ನು ಪಿ. ಡಬ್ಲ್ಯು. ಇಲಾಖೆಗೆ ಸೇರಿಸಿದ್ದಾರೆ. ನನಗೆ ಈ ಸಂದರ್ಭದಲ್ಲಿ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ವಿಶ್ವೇಶ್ವರಯ್ಯನವರು ಎಲ್ಲೋ ಒಂದು ಕಡೆ ಭಾಷಣ ಮಾಡುತ್ತಾ ಯಾರೋ ಕೆಲವರು ಸರಕಾರದವರು ಬಹಳ ಸಾಲ ಮಾಡುತ್ತಾ ಇದ್ದಾರೆ ಎಂದು ಹೇಳಿದಾಗ, ಅದಕ್ಕೆ ಉತ್ತರವಾಗಿ ಅವರು ಸರಕಾರದವರು ಎಷ್ಟೇ ಸಾಲ ಮಾಡಿದರೂ ಕೂಡ ಪರವಾಗಿಲ್ಲ; ರಸ್ತೆ ಪಕ್ಕದಲ್ಲಿರತಕ್ಕ ಸಾಲು ಮರಗಳನ್ನು ಮಾರಿ ಅವನ್ನು ತೀರಿಸಬಹುದು ಎಂದು ಹೇಳಿದರು. ಈಗ ಅವುಗಳನ್ನು ಹೇಳುವವರು ಕೇಳುವವರು ಇಲ್ಲದಂತಾಗಿದೆ. ಪಿ. ಡಬ್ಲ್ಯು. ಡಿ. ಅವರು 200–300 ರೂಪಾಯಿ ಬೆಲೆ ಬಾಳತಕ್ಕ ಮರಗಳನ್ನು 10–15 ರೂಪಾಯಿಗಳಿಗೆ ಮಾರಿದ್ದಾರೆ; ಈ ವಿಷಯದಲ್ಲಿ ತೀವ್ರ ಕ್ರಮ ಕೈಕೊಳ್ಳಬೇಕು.

ಹಾಗೆಯೇ ನಮ್ಮ ದೇಶದಲ್ಲಿ ಬಡವರಿಗೆ ಗೋಮಾಳಗಳನ್ನು ಕೊಟ್ಟು ಅವರು ಅವರಲ್ಲಿ ಉಳುಮೆ ಮಾಡಿದ್ದಾರೆ. ಅದನ್ನು ಅವರಿಗೇ ಖಾಯಂ ಮಾಡಿ ಅಪ್‌ಸೆಟ್ ಪ್ರೈಸ್‌ಗೆ ಮಾರಿದರೆ ಖಂಡಿತವಾಗಿಯೂ ಸರಕಾರದವರಿಗೆ ಹಣ ಬರುತ್ತದೆ. ಈಗ ಏನಾಗಿದೆ ಎಂದರೆ ಇವಿಕ್ಷನ್ ಆರ್ಡರ್ ಕೊಟ್ಟಿದ್ದಾರೆ ಆದರೆ ಜಮೀನು ಮಾತ್ರ ಅವರ ಸ್ವಾಧೀನದಲ್ಲೇ ಇದೆ. ಆದ್ದರಿಂದ ಅವುಗಳನ್ನು ಅವರಿಗೇ ಅಪ್‌ಸೆಟ್ ಪ್ರೈಸ್‌ಗೆ ಕೊಡುವುದರಿಂದ ಒಳ್ಳೆಯ ಬೆಲೆ ಬರುತ್ತದೆ ಎಂದು ಹೇಳುತ್ತೇನೆ.

ಹಾಗೆಯೇ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅವುಗಳ ಸುತ್ತಮುತ್ತಲೂ ಇರತಕ್ಕ ಪ್ರದೇಶಗಳನ್ನು ವ್ಯವಸಾಯಕ್ಕೆ ಅನುಕೂಲವಾಗಿರತಕ್ಕ ಪ್ರದೇಶಗಳನ್ನು ಕನ್‌ವರ್ಟ್ ಮಾಡಿ ಅವುಗಳನ್ನು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಉಪಯೋಗಿಸುತ್ತಾ ಇದ್ದಾರೆ. ಅವಕ್ಕೆ ಕನ್‌ವರ್ಷನ್ ಫೈನ್ ಮಾತ್ರ ವಸೂಲು ಮಾಡುತ್ತಾ ಇದ್ದಾರೆ, ಕೆಲವು ಕಡೆ ನಾನ್ ಅಗ್ರಿಕಲ್ಚರಲ್ ಅಸೆಸ್‌ಮೆಂಟ್ ವಸೂಲು ಮಾಡುತ್ತಾ ಇಲ್ಲ ಎಂದು ಗೊತ್ತಾಗಿದೆ; ಅದನ್ನೂ ಕೂಡ ದಯವಿಟ್ಟು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಾತನಾಡುತ್ತಾ, ಕೆಲವರು ಇನ್‌ಕಂ ಟ್ಯಾಕ್ಸ್ ಮುಂತಾದುವುಗಳನ್ನು ಕೊಡುವುದರಲ್ಲಿ ತಪ್ಪಿಸಿಕೊಳ್ಳುತ್ತಾ ಇದ್ದಾರೆ ಎಂದು ಹೇಳಿದರು. ಅದೇ ರೀತಿ ನಮ್ಮ ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ಬೇಕಾದಷ್ಟು ಕಾಗದಪತ್ರಗಳು ರಿಜಿಸ್ಟರ್ ಆಗುತ್ತವೆ, ಹೆಚ್ಚು ಬೆಲೆ ಬಾಳತಕ್ಕ ಆಸಿಪಾಸ್ತಿಗಳನ್ನು ಮಾರಾಟ ಮಾಡುವಾಗ ಸ್ಟ್ಯಾಂಪ್ ಡ್ಯೂಟಿ ತಪ್ಪಿಸಿಕೊಳ್ಳುವುದಕ್ಕೋಸ್ಕರ ಕಡಿಮೆ ಬೆಲೆಗೆ ಕಾಗದ ಪತ್ರಗಳನ್ನು ಬರೆದು ರಿಜಿಸ್ಟರ್ ಮಾಡಿಸುತ್ತಾರೆ. ಕೊಂಡವರಿಂದ ಒಂದು ವೇಳೆ ಹೆಚ್ಚು ಹಣ ಪಡೆದರೂ ಪತ್ರದಲ್ಲಿ ಕಡಿಮೆ ಹಣ ತೋರಿಸುವುದು ಮತ್ತು ಆಸ್ತಿಗೆ ಕಡಿಮೆ ಬೆಲೆ ನಿಗದಿ ಮಾಡುವುದನ್ನು ಈ ವಿಷಯದಲ್ಲೂ ಕೂಡ ಸರಕಾರದವರು ತೀವ್ರ ಗಮನ

(ಶ್ರೀ ಕಡಿದಾಳ್ ಮಂಜಪ್ಪ)

ಕೊಟ್ಟು ಬರಬೇಕಾದ ಹಣವನ್ನು ಸರಿಯಾಗಿ ವಸೂಲು ಮಾಡಿದರೆ ಈಗ 11,106.03 ಎಂದು ಏನು ಅಂದಾಜು ಆಗಿದೆ ಅದಕ್ಕಿಂತ ಹೆಚ್ಚು ಆದಾಯ ಬರುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ.

ಹಾಗೆಯೇ ನಮ್ಮ ಆರ್ಥಿಕ ಮಂತ್ರಿಗಳು ನಮಗೆ ಕೊಟ್ಟಿರುವ ಈ ವರದಿಯಲ್ಲಿ ಉದ್ಯೋಗವನ್ನು ಕಳೆದುಕೊಂಡ ಅಕ್ಕಸಾಲಿಗರಿಗೆ 950 ಎಕರೆಗಳಷ್ಟು ಭೂಮಿಯನ್ನು 307 ಜನಗಳಿಗೆ ಹಂಚಿದ್ದೇವೆ ಎಂದು ಹೇಳಿದ್ದಾರೆ. ಎಲ್ಲೆಲ್ಲಿ ಹಂಚಿದ್ದಾರೆ, ಯಾರ್ಯಾರಿಗೆ ಹಂಚಿದ್ದಾರೆ ಎಂಬುದನ್ನು ನಮಗೆ ತಿಳಿಸಿಲ್ಲ. ಜಮೀನನ್ನು ಕೊಟ್ಟರೂ ಕೂಡ ಪ್ರಥಮವಾಗಿ ವ್ಯವಸಾಯ ಮಾಡುವ ಮನುಷ್ಯನಿಗೆ ಬರೀ ಜಮೀನಿನಿಂದ ಪ್ರಯೋಜನವಾಗುವುದಿಲ್ಲ. ಅದಕ್ಕೆ ಬೇಕಾದ ಎತ್ತು, ಗಾಡಿ, ಗೊಬ್ಬರಕ್ಕೆ ಇನೀಷಿಯಲ್ ಕ್ಯಾಪಿಟಲ್ ಇವೆಲ್ಲಾ ಬೇಕಾಗುತ್ತದೆ. ಇವುಗಳು ಇಲ್ಲವೇ ಇದ್ದರೆ ಜಮೀನನ್ನು ನೆಪ ಮಾತ್ರಕ್ಕೆ ಕೊಟ್ಟ ಹಾಗೆ ಆಗುತ್ತದೆಯೇ ಹೊರತು ಅದರಿಂದ ವ್ಯವಸಾಯಗಾರರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಅದಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರೋ ಗೊತ್ತಿಲ್ಲ, ಅದನ್ನು ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಹಾಗೆಯೇ ಮಾನ್ಯ ಗೃಹ ಸಚಿವರು ಈಗತಾನೆ ಒಂದು ಪ್ರಶ್ನೆಗೆ ಉತ್ತರ ಹೇಳುತ್ತಾ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಟೂರಿಸಂಗೆ ಹಣ ಇಲ್ಲ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಾ ಇದ್ದೇವೆ ಎಂದು ಹೇಳಿದರು. ನಮ್ಮ ದೇಶಕ್ಕೆ ನಾನಾ ದೇಶಗಳಿಂದ ಬರುತ್ತಾರೆ; ಅನೇಕ ಪ್ರೇಕ್ಷಣೀಯವಾದ ಸ್ಥಳಗಳು ಇವೆ; ಅಲ್ಲಿಗೆ ಅವರನ್ನು ಆಕರ್ಷಣೆ ಮಾಡುವ ವಿಷಯದಲ್ಲಿ ಏಕೆ ಈ ರೀತಿ ಅನಾದರಣೆ ತೋರಿಸಿದ್ದಾರೆಯೋ ಗೊತ್ತಿಲ್ಲ. ನಮ್ಮ ದೇಶದಲ್ಲಿ ಪ್ರತಿಯೊಂದು ಕಡೆಯಲ್ಲೂ ಒಂದೊಂದು ಟೂರಿಸ್ಟ್ ಸೆಂಟರ್ ಇದೆ. ಅದರ ಫೋಟೋ ತೆಗೆದುಕೊಂಡು ಬಸ್‌ಸ್ಟ್ಯಾಂಡ್‌ಗಳಲ್ಲಿ ಮತ್ತು ನಮ್ಮ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ, ಏರೋಡ್ರೋಮ್‌ಗಳಲ್ಲಿ ಅವುಗಳನ್ನು ಡಿಸ್‌ಪ್ಲೇ ಮಾಡಿದರೆ ತುಂಬ ಪ್ರಯೋಜನವಾಗುತ್ತದೆ. ಆ ರೀತಿ ಮಾಡುವುದು ಸೂಕ್ತ ಎಂದು ಸಲಹೆ ಮಾಡುತ್ತೇನೆ. ಅದೇ ರೀತಿ ಆ ಫೋಟೋಗಳನ್ನು ಪ್ರತಿ ಪಂಚಾಯಿತಿ ಮತ್ತು ಸ್ಕೂಲುಗಳಿಗೂ ಹಂಚಬೇಕು ಹಾಗೆ ಮಾಡಿದರೆ ನಮ್ಮ ದೇಶದಲ್ಲಿ ಪ್ರಕೃತಿ ಸೌಂದರ್ಯ ಏನು ಇದೆ ಎಂಬುದು ಜನರಿಗೆ ಅರ್ಥವಾಗುತ್ತದೆ. ಅದಕ್ಕೆ ಸರಕಾರದವರು ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿ ಪ್ರವಾಸಿಗರಿಗೆ ಒಂದು ಕೈಪಿಡಿಯನ್ನು ತಯಾರುಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಹಾಗೆಯೇ ನಮ್ಮ ದೇಶದಲ್ಲಿ 1964-65ನೇ ಸಾಲಿಗೆ 38.56 ಲಕ್ಷ ರೂಪಾಯಿಗಳನ್ನು ಫ್ಯಾಮಿಲಿ ಪ್ಲಾನಿಂಗ್‌ಗೆ ಒಳವಡಿಸಲಾಗಿದೆ ಎಂದು ಹೇಳಿದರು. ಏಕೆ ಒಳವಡಿಸಿದ್ದಾರೋ ಗೊತ್ತಿಲ್ಲ. ಅಥವಾ ಅದರಿಂದ ಏನು ಪ್ರಯೋಜನವಾಗುತ್ತದೆ ಎಂದು ತಿಳಿದುಕೊಂಡಿದ್ದಾರೋ ಅರ್ಥವಾಗುವುದಿಲ್ಲ. ಇದೇ ದುಡ್ಡನ್ನು ದೇಶದಲ್ಲಿರತಕ್ಕ ಬಡವರ ಪ್ರಗತಿಗೆ ಸಹಾಯವಾಗತಕ್ಕ ಕಾರ್ಯಗಳಿಗೆ ವಿನಿಯೋಗ ಮಾಡಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ನನಗೆ ತಿಳಿದಮಟ್ಟಿಗೆ ಇದರ ಅವಶ್ಯಕತೆ ಬಡವರಿಗೆ ಹೆಚ್ಚಾಗಿದೆಯೇ ಹೊರತು ಶ್ರೀಮಂತರಿಗೆ ಅಲ್ಲ, ಏಕೆಂದರೆ ಅವರಿಗೆ ಬೇಕಾದಷ್ಟು ಮಾರ್ಗಗಳು ಇವೆ. ಬಡವರಿಗೆ ಇವರು ಯಾವ ರೀತಿ ಸಹಾಯ ಮಾಡಿದ್ದಾರೆ ಎಂದು ನಾನು ಕೇಳುತ್ತಾ ಇದ್ದೇನೆ. ಏಕೆಂದರೆ ನಾನು ಈ ದಿವಸ ಒಂದು ಉದಾಹರಣೆ ಕೊಡುವುದಾದರೆ ಕಾಂಟ್ರಸೆಪ್ಟೀವ್ಸ್‌ನ್ನು ಇವತ್ತಿನ ದಿವಸ ಯಾರಿಗೆ ಸಪ್ಲೈ ಮಾಡಿದ್ದಾರೆ ಎಂದರೆ ಅವಿವಾಹಿತ ತರುಣ ತರುಣಿಯರಿಗೆ. ಅವರಿಗೆ ಹಂಚುತ್ತಾ ಇರುವುದರಿಂದ ಇವತ್ತು ನಮ್ಮ ದೇಶದಲ್ಲಿ ಮಾರಲ್ ಡಿಗ್ರೆಡೇಷನ್ ಆಗುತ್ತಾ ಇದೆ, ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶ್ರೀ ಎ. ಪಿ. ಅಪ್ಪಣ್ಣ (ವೀರಾಜಪೇಟೆ).—ಫ್ಯಾಮಿಲಿ ಪ್ಲಾನಿಂಗ್ ಬೇಕಾಗಿಲ್ಲ ಎಂದು ಹೇಳುತ್ತೀರಾ ?

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಅಪ್ಪಣ್ಣನವರಿಗೆ ಅಧ್ಯಕ್ಷರ ಮೂಲಕ ಒಂದು ಪ್ರಶ್ನೆಯನ್ನು ಹಾಕುತ್ತೇನೆ. ಅವಿವಾಹಿತ ತರುಣ ತರುಣಿಯರಿಗೆ ಕಾಂಟ್ರಸೆಪ್ಟೀವ್ಸ್ ಒದಗಿಸುವುದು ಸರಿಯೇ ಎಂಬುದನ್ನು ತಾವು ಹೇಳಬೇಕು.

ಶ್ರೀ ಎ. ಪಿ. ಅಪ್ಪಣ್ಣ.—ಅವುಗಳನ್ನು ಹಂಚುವಾಗ ಅವರು ವಿವಾಹಿತರೇ, ಅವಿವಾಹಿತರೇ ಎಂದು ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಸಿ. ಆರ್. ರಂಗೇಗೌಡ.—ಜವಾಬ್ದಾರಿ ಸ್ಥಾನದಲ್ಲಿದ್ದು ದೇಶದ ಹಿತವನ್ನು ಬಯಸುವವರು ಅದನ್ನೆಲ್ಲಾ ಕೂಲಂಕಷವಾಗಿ ತಿಳಿದುಕೊಂಡು ಅವುಗಳನ್ನು ಹಂಚಬೇಕು.

ಹಾಗೆಯೇ ಫಾರೆಸ್ಟ್ ಇಲಾಖೆಯಲ್ಲಿ ಹೇಳುವುದಾದರೆ ಫಾರೆಸ್ಟ್ ಮಂತ್ರಿಗಳು ಬಹಳ ಶ್ರದ್ಧೆ ವಹಿಸಿ ಅದನ್ನು ಇಂಪ್ರೂವ್ ಮಾಡಿದ್ದಾರೆ. ಫಾರೆಸ್ಟ್‌ನಲ್ಲಿ ಎಷ್ಟು ಉತ್ಪನ್ನವಾಗುತ್ತದೆ ಅದಕ್ಕೆ ತಕ್ಕಂತೆ ಖರ್ಚು ಮಾಡುತ್ತಾ ಇಲ್ಲ. ಅಲ್ಲದೆ ಖರ್ಚು ಮಾಡುತ್ತಾ ಇರುವ ಹಣಕ್ಕೆ ತಕ್ಷಣ ಪ್ರತಿಫಲ ಅಲ್ಲಿ ದೊರೆಯುವುದು ಬಹಳ ಬಹಳ ಕಾಲವಾಗುತ್ತೆ. ಫಾರೆಸ್ಟ್ ಇಲಾಖೆಯಲ್ಲಿ ಯಾವ ಸ್ಕೀಮನ್ನು ತೆಗೆದುಕೊಂಡರೂ ಕೂಡ ಅದರ ಪ್ರತಿಫಲ 10–15 ವರ್ಷದಲ್ಲಿ ಬರುತ್ತದೆ. ಇದು ಹತ್ತಾರು ವರ್ಷಗಳಲ್ಲಿ ಆದಾಯ ಬರುವಂತಹ ಬಾಬು. ಆದ್ದರಿಂದ ಸರಕಾರದವರು ಅದಕ್ಕೆ ಇವತ್ತಿನ ದಿವಸ ಏನು ಹಣ ಒದಗಿಸಿದ್ದಾರೆ ಅದು ಸಾಲದು. ಇನ್ನೂ ಹೆಚ್ಚು ಹಣವನ್ನು ಕೊಡಬೇಕು. ಫಾರೆಸ್ಟ್ ಮಂತ್ರಿಗಳಿಗೆ ಗೊತ್ತು, ಅದರಲ್ಲಿ ಗೋಡಂಬಿ, ಟೀಕ್ ಮುಂತಾದ ಪ್ಲಾಂಟೇಷನ್‌ಗಳಿಗೆ ಖರ್ಚು ಮಾಡುತ್ತಾ ಇದ್ದಾರೆ. ಅದೇ ರೀತಿ ಹೆಚ್ಚು ಅಮರಾಯಿ ಬರತಕ್ಕ ತೆಂಗು, ಹುಣಸೆ, ಅಳಲೆ, ಹಿಪ್ಪೆ, ಹೊಂಗೆ ಮುಂತಾದ ಗಿಡಗಳನ್ನು ಬೆಳೆಸಬೇಕು, ಎಲ್ಲಿ ಫಲವತ್ತಾದ ಪ್ರದೇಶ ಇದೆಯೋ ಅಲ್ಲಿ ಮೆಡಿಸಿನಲ್ ಹರ್ಬ್ಸನ್ನು ಬೆಳೆಸಬೇಕು. ನಮ್ಮಲ್ಲಿ ಕೊಕೋ ಟ್ರೀ ಬೆಳೆಸುವ ಉತ್ಕೃಷ್ಟ ವಾತಾವರಣ ಮತ್ತು ಪ್ರದೇಶ ಇದೆ ಅಂತಹ ಪ್ರದೇಶದಲ್ಲಿ ಕೊಕೋ ಟ್ರೀ ಬೆಳೆಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಕಾಡಿನಲ್ಲಿ ಕೋತಿಗಳು ವಾಸ ಮಾಡುತ್ತಾ ಇದ್ದವು. ಇವತ್ತು ಅವುಗಳೂ ಕೂಡ ಕಾಡನ್ನು ಬಿಟ್ಟು ಊರನ್ನು ಸೇರುತ್ತಾ ಇವೆ. ಸರ್ವ ಋತುವಿನಲ್ಲಿ ಫಲ ಕೊಡುವ ಬೆಳೆಗಳನ್ನು ಕಾಡಿನಲ್ಲಿ ಬೆಳೆಸಿದರೆ ಊರು ಸೇರಿರುವ ಕೋತಿಗಳು ಪುನಃ ಕಾಡನ್ನು ಸೇರುವುವು. ಆಗ ಅವುಗಳಿಂದ ರೈತರಿಗೆ ನಷ್ಟವಾಗುವುದನ್ನೂ ಕೂಡ ತಪ್ಪಿಸಬಹುದು. ಆದ್ದರಿಂದ ಸರ್ವ ಋತುವಿನಲ್ಲಿ ಫಲ ಕೊಡುವಂತಹ ಮರಗಳನ್ನು ಬೆಳೆಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಫಿಷರೀಸ್ ವಿಚಾರದಲ್ಲಿ ಒಂದು ಮಾತು. ಅವುಗಳ ಸಾಗಾಣಿಕೆಯ ಒಂದು ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ 25 ಸಾವಿರ ರೂಪಾಯಿಗಳನ್ನು ಮಾತ್ರ ಅಳವಡಿಸಿದ್ದಾರೆ. ದೇಶದ ಎಲ್ಲಾ ಭಾಗಗಳಿಂದ ಈ ಮೀನುಗಳನ್ನು ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಇಷ್ಟು ಹಣದಿಂದ ಎಂಬುದನ್ನು ಅವರು ಪರಿಶೀಲನೆ ಮಾಡಬೇಕು. ಹಾಗೆಯೇ ಆರ್ಟಿಫಿಷಿಯಲ್ ಬ್ರೀಡಿಂಗ್ ವ್ಯವಸ್ಥೆಮಾಡಿದ್ದಾರೆ. ಎಲ್. ಎಸ್. ರಾಮಸ್ವಾಮಿ ಎಂಬುವರು ಸೆಂಟ್ರಲ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದಾರೆ. ಅವರು ಕ್ಯಾಟ್‌ಫಿಷ್ ಮೇಲೆ ಪ್ರಯೋಗ ನಡೆಸಿ 18 ಗಂಟೆಗಳಲ್ಲಿ ಈ 1 ಲಕ್ಷ ಫಿಷ್‌ಸೀಡ್ ಬರುವ ಹಾಗೆ ಮಾಡಲು ಒಂದು ರೀತಿಯಲ್ಲಿ ಇಂಜಕ್ಷನ್ ಕೊಟ್ಟು ತಯಾರು ಮಾಡಲು ಪ್ರಯತ್ನಪಟ್ಟಿದ್ದಾರೆ. ಈ ರೀತಿ ಆರ್ಟಿಫಿಷಿಯಲ್ ಬ್ರೀಡಿಂಗ್‌ಗೆ ವ್ಯವಸ್ಥೆ ಮಾಡಿದ್ದಾರೆ. ಇದನ್ನು ಗಮನಿಸಿ ಹೆಚ್ಚಿನ ರೀತಿಯಲ್ಲಿ ಇನ್‌ಲೆಂಡ್ ಫಿಷರೀಸ್ ಆರ್ಟಿಫಿಷಿಯಲ್ ಬ್ರೀಡಿಂಗಿಗೆ ಅವಕಾಶ ಮಾಡಬೇಕು. ಬ್ಯಾಕ್‌ವಾಟರ್ಸ್‌ನಲ್ಲಿ ಪ್ರಾನ ಕಲ್ಚರ್‌ಗೆ ಅವಕಾಶ ಮಾಡಬೇಕು. ಫಾರಿನ್ ಮಾರ್ಕೆಟ್ಟಿನಲ್ಲಿ ಅದಕ್ಕೆ ಹೆಚ್ಚಿನ ಡಿಮ್ಯಾಂಡಿದೆ. ಮೀನನ್ನು ಈಗ ಐಸ್‌ನಲ್ಲಿ ಪ್ರಿಸರ್ವ್ ಮಾಡುತ್ತಿದ್ದಾರೆ. ಅದನ್ನು ಹಾಗೆ ಮಾಡಬೇಕಾದ್ದು ಅಗತ್ಯ. ಅದಲ್ಲದೆ ನನಗೆ ತಿಳಿದಹಾಗೆ ಸ್ಕಾಟ್‌ಲೆಂಡಿನಲ್ಲಿ ಒಂದು ರಿಸರ್ಚ್ ಮಾಡಿದ್ದಾರೆ. ಟೆಟ್ರಸೈಕ್ಲಿನ್ ಗ್ರೂಪಿನ ಆಂಟಿಬಯಾಟಿಕ್ಸ್‌ನಲ್ಲಿ ಮೀನನ್ನು ಹೆಚ್ಚು ಕಾಲ ಎಂದರೆ 6 ದಿವಸಗಳವರೆಗೆ ಪ್ರಿಸರ್ವ್ ಮಾಡಬಹುದು. ಐಸ್‌ನಲ್ಲಿ 3 ದಿವಸ ಪ್ರಿಸರ್ವ್ ಮಾಡಿದರೆ ಅದರಲ್ಲಿ 6 ದಿವಸಗಳವರೆಗೆ ಪ್ರಿಸರ್ವ್ ಮಾಡಬಹುದು. ಆ ರೀತಿ ಪ್ರಿಸರ್ವ್ ಮಾಡಿದ ಮೀನು ಹೊಸದಾದ ಮೀನಿನಷ್ಟೇ ಉತ್ತಮವಾಗಿರುತ್ತೆ. ಆ ರೀತಿ ನಮ್ಮಲ್ಲೂ ಮಾಡಲು ಪ್ರಯತ್ನಿಸಬೇಕೆಂದು ಸೂಚಿಸುತ್ತೇನೆ.

3-00 P.M.

ಹಾಗೆಯೇ ರೆವೆನ್ಯೂ ಇಲಾಖೆ ವಿಷಯದಲ್ಲಿ ಒಂದೆರಡು ಮಾತು. ತುರ್ತುಪರಿಸ್ಥಿತಿ ಇರುವಾಗ ದೇಶದಲ್ಲಿ ಹೆಚ್ಚು ಬೆಳೆಯಿರಿ ಎಂದು ಹೇಳುತ್ತಿದ್ದಾರೆ. ಕಾರ್ಯತಃ ನೋಡಿದರೆ ನಮ್ಮ ತಾಲ್ಲೂಕಿನಲ್ಲಿ ನಡೆಯುವುದನ್ನು ನೋಡಿದರೆ ವಿಷಾದವಾಗುತ್ತದೆ. ಹಳ್ಳಿಗಳಲ್ಲಿ ಅಲ್ಪನಿಗೆ ಐಶ್ವರ್ಯ ಬಂದರೆ ಹೊಡೆ ಗದ್ದೆ ಕೊಯ್ದು ಎಂಬ ಗಾದೆ ಇದೆ. ಅಂಥ ಸನ್ನಿವೇಶವೊಂದು ಗಮನಕ್ಕೆ ಬಂದಿದೆ. ಇರಳಿಗರು, ಹರಿಜನರು ಮುಂತಾದ ಹಿಂದುಳಿದವರಿಗೆ ಮಾಗಡಿ ತಾಲ್ಲೂಕು ಗೇರಹಳ್ಳಿ ಗ್ರಾಮದಲ್ಲಿ ಜಮೀನಿಗೆ ಅರ್ಜಿ ಹಾಕಿದರೂ ಕೆಲವರಿಗೆ ಸಿಕ್ಕಿಲ್ಲ, ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಜಾಗವಿಲ್ಲ. ಈ ಬಗ್ಗೆ ಒತ್ತಾಯ ಮಾಡಿದರೂ ಗಮನ ಕೊಟ್ಟಿಲ್ಲ. ಕೆಲವರು ರೈತರು ಬಗರ್ ಹುಕುಂ ಸಾಗುವಳಿ ಮಾಡಿದರು. ಕಳೆದ ಸಾರಿ ನಾನು ಸರ್ಕಾರಕ್ಕೆ ಇದನ್ನೆಲ್ಲಾ ಹೇಳಿದಮೇಲೆ ಜಮೀನು ಕೊಡುವುದಾಗಿ ಹೇಳಿದರು. ನಾನು ಪ್ರಶ್ನೆ ಹಾಕಿದ ಮೇಲೆ ಮೂರು ನಾಲ್ಕು ದಿವಸಗಳಲ್ಲಿ ಉತ್ಕೃಷ್ಟವಾಗಿ ಬೆಳೆ ಆಗಿರುವ ಜಮೀನಿಗೆ ಪ್ರವೇಶಮಾಡಿ ತಹಸೀಲ್ದಾರ್‌ರವರ ಪೂರ್ಣ ಹದಕ್ಕೆ ಬರದ ಬೆಳೆಯನ್ನು ಕಟಾವು ಮಾಡಿಸಿದ್ದಾರೆ, ಕಟಾವು ಮಾಡಿದ ಫಸಲನ್ನು ಕೊಯ್ದರೋ ಅವರೇ ಅದನ್ನು ತೆಗೆದುಕೊಂಡು ಹೋಗಿರುತ್ತಾರೆ. ರೈತರಿಗೂ ಇಲ್ಲ. ಸರ್ಕಾರಕ್ಕೂ ಇಲ್ಲ. ಇದರಿಂದ

(ಶ್ರೀ ಸಿ. ಆರ್. ರಂಗೇಗೌಡ)

ರೈತರಿಗೆ ಫಸಲು ನಷ್ಟವಾಗಿದೆ. ಅವರಿಗೆ ಯಾರು ಅಧಿಕಾರ ಕೊಟ್ಟರೋ ತಿಳಿಯದು. ಇದು ಬಹಳ ಶೋಚನೀಯ ವಿಚಾರ. ಸರ್ಕಾರ ತೀವ್ರವಾಗಿ ಈ ಕಡೆ ಗಮನಕೊಟ್ಟು ರೈತರಿಗೆ ತಕ್ಕ ಸೌಲಭ್ಯವನ್ನುಂಟುಮಾಡಬೇಕು. ಹೆಚ್ಚು ಬೆಳೆಯಬೇಕೆಂದು ಹೇಳಿ ಉತ್ತೇಜನ ಕೊಡುತ್ತಿರುವಾಗ ತೊಂದರೆ ಮಾಡುವುದು ಖಂಡನೀಯ ಎಂದು ತಿಳಿಸಿ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಕೆ. ಎಂ. ದೇವಯ್ಯ (ಪೊಣ್ಣಂಪೇಟೆ).—ಅಧ್ಯಕ್ಷರೆ, ಹಣಕಾಸಿನ ಮಂತ್ರಿಗಳು ಮಂಡಿಸಿದ ಆಯವ್ಯಯಪಟ್ಟಿಗೆ ಸಮ್ಮತಿ ನೀಡುತ್ತಾ ಈ ಪಟ್ಟಿಯಲ್ಲಿ ಮಲೆನಾಡಿಗೆ ಎಷ್ಟು ನಿಗಾ ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಂತೆ ಕಾಣಲಿಲ್ಲ ಎಂದು ಹೇಳಬೇಕಾಗಿದೆ. ಸ್ವಾಮಿ, ನಾನು ಇದನ್ನು ಪ್ರಥಮತಃ ಅಲ್ಲ, ಸಂದರ್ಭ ಬಿದ್ದಾಗಲೆಲ್ಲಾ ಹೇಳುತ್ತಿದ್ದೇನೆ. ಮಲೆನಾಡಿನಲ್ಲಿ ನಮ್ಮ ಜೀವನಾಡಿ ಎಂದರೆ ರಸ್ತೆಗಳು. ಅವುಗಳಿಗೆ ಹೆಚ್ಚಿನ ಗಮನ ಕೊಡಬೇಕು; ಹೆಚ್ಚಿನ ಹಣ ವ್ಯಯ ಮಾಡಬೇಕು. ಮಲೆನಾಡು ಎಂದರೆ ಕನ್ನಡನಾಡಿನ ಚಿನ್ನದ ಕಣಜ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಏಕೆಂದರೆ ಮಲೆನಾಡಿನಲ್ಲಿ ಬೆಳೆಯುವ ಕಾಫಿ, ಮೆಣಸು ಮುಂತಾದುವು ವಿದೇಶಿ ವಿನಿಮಯವನ್ನು ಗಳಿಸುತ್ತವೆ. ಈ ವಿಷಯದಲ್ಲಿ ಎಷ್ಟು ಗಮನ ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಇದರಿಂದ ಮಲೆನಾಡಿನ ಜನರಿಗೆ ಮಾತ್ರವಲ್ಲದೆ ಸರ್ಕಾರಕ್ಕೂ ಅನ್ಯಾಯವಾಗುತ್ತದೆ. ಏಕೆಂದರೆ ಅಲ್ಲಿನ ಕ್ಷೇಮವನ್ನು ಹಿತವನ್ನು ಸರ್ಕಾರ ನೋಡಿಕೊಂಡರೆ ಸರ್ಕಾರದ ಆದಾಯವೂ ಜಾಸ್ತಿಯಾಗುತ್ತದೆ, ಅಲ್ಲಿಗೆ ಖರ್ಚುಮಾಡುವ ಹಣ, ಹಾಲು ಕರೆಯುವ ಹಸುವಿಗೆ ಹಿಂಡಿ ಕೊಟ್ಟಂತೆ. ಜಾಸ್ತಿ ಹಾಲು ಕೊಟ್ಟರೆ ಸರ್ಕಾರಕ್ಕೂ ಅನುಕೂಲ. ಮಲೆನಾಡಿನ ಜೀವನಾಡಿಯಾದ ರಸ್ತೆ ಕೇಳಿದರೆ ತುರ್ತುಪರಿಸ್ಥಿತಿ, ಹಣವಿಲ್ಲ, ಮಲೆನಾಡಿನವರ ಕಷ್ಟ ಗೊತ್ತಿದೆ ಎಂದು ಹೇಳುವುದುಂಟು. ಅದು ಸರಿಯಲ್ಲ, ಹಾಗೆ ಅವರು ಹೇಳಬಾರದು. ಕೊಡಗಿನವರು ಸರ್ಕಾರಕ್ಕೆ ಯಥೇಷ್ಟವಾಗಿ ವರಮಾನ ತೆರಿಗೆ ಕೊಡುತ್ತಾರೆ, ಇಡೀ 18 ಜಿಲ್ಲೆಗಳಲ್ಲಿ ಕೊಡುವ ಅರ್ಧಪಾಲನ್ನು ಕೊಡುತ್ತಾರೆ; ಅಷ್ಟೇ ಅಲ್ಲ, ಸೆಂಟ್ರಲ್ ಎಕ್ಸೈಜ್ ಬೇರೆ ಕೊಡುತ್ತಾರೆ. ಅಂದಮೇಲೆ ಆ ಹಣಕ್ಕೆ ತಕ್ಕಂತೆ ನಮ್ಮ ಜಿಲ್ಲೆಗೆ ಅನುಕೂಲ ಒದಗಿಸಬೇಕು. ಆಹಾರ ಜಾಸ್ತಿ ಬೆಳೆಯಬೇಕೆಂದು ಹೇಳುತ್ತಿದ್ದಾರೆ, ಅದಕ್ಕೇ ಒಂದು ಇಲಾಖೆ ಇದೆ. ಆದರೆ ಕೊಡಗಿನವರಿಗೆ ಆ ಇಲಾಖೆ ಬೇಡ, ಗ್ರಾಮಸೇವಕರ ಬೋಧೆ ಬೇಡ, ಅಲ್ಲಿನ ರೈತರು ಬುದ್ಧಿವಂತರು, ಅವರಿಗೆ ಹೇಗೆ ವ್ಯವಸಾಯ ಮಾಡಬೇಕೆಂಬುದು ಗೊತ್ತಿದೆ. ಆದರೆ ಅನುಕೂಲತೆಯಿಲ್ಲ, ರಸ್ತೆಯಿಲ್ಲ, ಗೊಬ್ಬರ ಕೊಟ್ಟರೆ ಹೊಲದ ಬಳಿಗೆ ತೆಗೆದುಕೊಂಡು ಹೋಗಲು ಅನುಕೂಲವಿಲ್ಲ. ಹಾಗಿರುವಾಗ ಗೊಬ್ಬರ ಕೊಟ್ಟು ಪ್ರಯೋಜನವೇನು ? ಆದುದರಿಂದ ಬೋಧೆ ಮಾಡುವ ಇಲಾಖೆ ಮುಂತಾದುವುಗಳಿಗೆ ಖರ್ಚು ಮಾಡುವುದಕ್ಕಿಂತ ಗೊಬ್ಬರ ಹೊಲಗಳಿಗೆ ಸಾಗಿಸುವುದಕ್ಕೆ, ಬೆಳೆದ ಸಾಮಾನು ಮಾರಾಟಮಾಡುವ ಕಡೆಗೆ ಸಾಗಿಸುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಜಾಸ್ತಿ ಬೆಳೆ ತೆಗೆಯಬೇಕೆಂಬ ಯಾವ ಕೂಗುಂಟು ಅದಕ್ಕೆ ಅವಕಾಶವಾಗುತ್ತದೆ. ಅದನ್ನು ಮಾಡದೆ ಇಲಾಖೆಗೆ ಖರ್ಚುಮಾಡಿ ಗೊಬ್ಬರ, ಬೀಜ ಕೊಟ್ಟರೆ ಜಾಸ್ತಿ ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲ ಎಂಬುದನ್ನು ಗಮನಿಸಿ ರಸ್ತೆ ವಗೈರೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಕೊಡಗಿನಲ್ಲಿ ದೊಡ್ಡ ಕಟ್ಟೆಗಳು ಬೇಕಾಗಿಲ್ಲ. ನೀರಾವರಿಗಳಿಗಾಗಿ ನಮಗೆ ಹೆಚ್ಚಾಗಿ ಬೇಕಾಗಿರುವುದು ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳು. ಇದಕ್ಕಾಗಿ ಸಣ್ಣ ಕಟ್ಟೆಗಳನ್ನು, ಸಣ್ಣ ಕೆರೆಗಳನ್ನು ರಿಪೇರಿ ಮಾಡಬೇಕು. ಇದು ಬಹು ಪ್ರಾಮುಖ್ಯವಾದುದು ಮತ್ತು ಸರಕಾರ ಇದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ಇದನ್ನು ಮಾಡಿದರೆ ಕೇವಲ ಹತ್ತು ಹದಿನೈದು ಲಕ್ಷದೊಳಗೇ ಇದಕ್ಕೆ ಬೇಕಾಗುತ್ತದೆ ಮತ್ತು ಇದನ್ನು ಮಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಹಾಗಾದರೆ ತಮಗೆ ಹಾರಂಗಿ ಕೆಲಸ ಮಾಡಬೇಡವೆಂದೋ ?

ಶ್ರೀ ಕೆ. ಎಂ. ದೇವಯ್ಯ.—ಹಾರಂಗಿ ವಿಷಯ ಇದೊಂದು ಅಣೆಕಟ್ಟು ಆಗಬೇಕು ಎನ್ನುವ ಕೂಗು ಬಹಳ ವರ್ಷಗಳಿಂದಲೂ ಇದೆ. ಸುಮಾರು ನೂರು ವರ್ಷಗಳಿಂದಲೂ ಹಾರಂಗಿ ಅಣೆಕಟ್ಟನ್ನು ಕಟ್ಟಬೇಕೆಂದು ಅಲ್ಲಿನ ಜನರು ಕೇಳುತ್ತಿದ್ದಾರೆ. ಆದರೆ ಯಾವುದೋ ಒಂದು ಕಾರಣದಿಂದಾಗಿ ಎಂದರೆ ಕೊಡಗು ಭಾಗದಲ್ಲಿ ಕಟ್ಟಲು ಮೈಸೂರಿನ ಅನುಮತಿ ಇದಕ್ಕೆ ಬೇಕಾಗಿತ್ತು. ಆದರೆ ಇಲ್ಲಿ ಸ್ವಲ್ಪ ದೊಡ್ಡ ಕಟ್ಟೆ ಕಟ್ಟುವ ಪ್ರಶ್ನೆ ಇತ್ತು. ಒಟ್ಟಿನಲ್ಲಿ ಕೊಡಗು ಮೈಸೂರಿಗೆ ಸೇರಿದ ಮೇಲೆ ಈ ಭಾರಿ ಕಟ್ಟೆಯನ್ನು ಕಟ್ಟುವುದರಿಂದ ಮೈಸೂರಿಗೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ಇದಕ್ಕಾಗಿ ಒಂದು ಯೋಜನೆ ಮಾಡಿ ಅದರ ಬಗ್ಗೆ ವಿಚಾರ ವಿನಿಮಯಗಳನ್ನು ಮಾಡಿ ಅದಕ್ಕಾಗಿ

ಪ್ಲಾನು ಹಾಗೂ ಎಸ್ಟಿಮೇಟುಗಳನ್ನು ತಯಾರಿಸಿಯೂ ಇದ್ದರು. ಇದರ ಬಗ್ಗೆ ಕೊಡಗಿನಲ್ಲಿ ಒಂದು ಚಳುವಳಿಯೇ ಪ್ರಾರಂಭವಾಯಿತು. ಬರೀ ಹಾರಂಗಿ ಕಟ್ಟೆ ಕಟ್ಟುವುದು ಬೇಡ ಎಂದು ಚಳುವಳಿ ಏಕೆ ಆಯಿತು ಎಂದು ವಿಚಾರ ಮಾಡಲಿಕ್ಕೆ ಹೋದರೆ ಹಾರಂಗಿ ಬಳಿ ಒಂದು ಕಟ್ಟೆ ಮತ್ತು ಕಂಬದ ಕಡದ ಹತ್ತಿರ ಒಂದು ಕಟ್ಟೆ ಮಾಡಿದರೆ ಜನಕ್ಕೆ ಪ್ರಯೋಜನವಾದೀತು ಎಂದರು. ಹಾರಂಗಿ ಒಂದೇ ಆದರೆ ಸರಿಯಿಲ್ಲ ಎಂದು ಅದಕ್ಕಾಗಿ ಕೊಡಗಿನ ಬಳಿ ಇರುವ ಬಾರಾಪೊಳೆ ಬಳಿ ಒಂದು ಅಣೆಕಟ್ಟು, ಲಕ್ಷ್ಮಣ ತೀರ್ಥದ ಬಳಿ ಒಂದು ಕಟ್ಟೆಯನ್ನು ಕಟ್ಟಬೇಕೆಂದು ಇತ್ತು. ಹಾರಂಗಿ ಕಟ್ಟೆಗಾಗಿ ಕೊಡಗಿನ ಕಲವು ಶ್ರೀಮಂತರುಗಳು ಮಾತ್ರ ಇದಕ್ಕೆ ವಿರೋಧ ಮಾಡುತ್ತಿದ್ದರು. ಹಾರಂಗಿ ಜೊತೆ ಯಲ್ಲೇ ಕಂಬದಕಡ ಕಟ್ಟೆಯನ್ನೂ ಏಕೆ ಆರಂಭ ಮಾಡಬಾರದು ಎಂದು ವಿಚಾರ ಬಂತು. ಇದನ್ನೆಲ್ಲಾ ಸರಿಯಾಗಿ ವಿಚಾರಮಾಡಲು ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದರು ಮತ್ತು ಅವರು ಒಂದು ವರದಿಯನ್ನೂ ಮಾಡಿದರು. ಆದರೆ ಕೊಡಗಿನ ಜನ ಬರೀ ಹಾರಂಗಿ ಕಟ್ಟೆ ಕಟ್ಟಸಬೇಕೆಂದಿದ್ದರೆ ಅದನ್ನು ವಿರೋಧ ಮಾಡುತ್ತಿರಲಿಲ್ಲ. ಮತ್ತು ಹಿಂದೆ ನಮ್ಮ ಸಭೆಯ ಮಾನ್ಯ ಸದಸ್ಯರಾಗಿದ್ದ ಶ್ರೀಮಾನ್ ಮಲ್ಲಪ್ಪನವರು (ಈಗ ಮಂತ್ರಿಗಳಾಗಿದ್ದಾರೆ) ಹಿಂದೆ ಇದ್ದ ಮಂತ್ರಿಗಳನ್ನು ಕರೆದು ಕೊಂಡು ಹೋಗಿ ಇದಕ್ಕಾಗಿ ಎರಡು ಮೂರು ಜಾಗಗಳನ್ನೂ ನೋಡಿಬಂದಿದ್ದರು. ಇದರ ಬಗ್ಗೆ ವಿಚಾರ ಮಾಡಲು ಇಂಜನೀಯರುಗಳಿಗೂ ಹೇಳಿದ್ದರು. ಇಂಜನೀಯರುಗಳೂ ಸಹ ಇದರ ಸುತ್ತ ಮುತ್ತಲಿನ ಭಾಗಗಳನ್ನು ಪರಿಶೀಲನೆ ಮಾಡಿ ಹಾರಂಗಿಯ ಬಳಿ ಕಟ್ಟೆ ಕಟ್ಟುವುದು ಬಹಳ ಒಳ್ಳೆಯದು. ಆ ದೃಷ್ಟಿಯಿಂದ ಈ ಯೋಜನೆ ಮಾಡಿದರೆ ಇಡೀ ಕರ್ಣಾಟಕಕ್ಕೇ ಬಹಳ ಒಳ್ಳೆಯದಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇವೊತ್ತು ಇಲ್ಲ ಆಗದಾರದು, ಇಲ್ಲಿ ಸಣ್ಣ ಕಟ್ಟೆಯೊಂದನ್ನು ಕಟ್ಟಿ ಇನ್ನೊಂದು ಕಡೆ ಒಂದು ಸಣ್ಣ ಕಟ್ಟೆ ಕಟ್ಟಬೇಕೆಂದು ಬದಲಾವಣೆಯಾಗುತ್ತಿದೆ. ಮೊನ್ನೆ ಮಾನ್ಯ ಮಂತ್ರಿಗಳು ಇದರ ಸಂಬಂಧವಾಗಿ ಇಲ್ಲಿ ಹೇಳುತ್ತ ಇದಕ್ಕೆ ಜನರೇ ವಿರೋಧ ಮಾಡುತ್ತಿದ್ದಾರೆ ಮತ್ತು ಈ ಹಿಂದೆ ಇಲ್ಲ 190 ಅಡಿಯಷ್ಟು ಎತ್ತರದ ಕಟ್ಟೆ ಕಟ್ಟಬೇಕೆಂದು 1960ನೇ ಇಸವಿಯಲ್ಲೇ ತೀರ್ಮಾನವಾಗಿತ್ತು. ಆದರೆ ಇಲ್ಲಿ ಇಂತಹ ದೊಡ್ಡ ಕಟ್ಟೆಯನ್ನು ಕಟ್ಟಿದರೆ ಬಹಳ ಅನಾಹುತಗಳಾಗುತ್ತವೆ ಅದರಿಂದ ಇದನ್ನು 180 ಅಡಿಯಿಂದ 100 ಅಥವಾ 110 ಅಡಿ ಎತ್ತರಕ್ಕೆ ಮೇಲ್ಪಟ್ಟು ಕಟ್ಟಬಾರದು ಎಂದು ಅವರು ಸ್ಪಷ್ಟವಾಗಿ ಹೇಳಿದ್ದರು. ಜನರ ಅಭಿಪ್ರಾಯ ಕೂಡ ಹಾಗೇ ಇದೆ. ಆದರೆ ಸರಕಾರ ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟರು, ಇದರಿಂದ ಬಡವರಿಗೆ ಕಷ್ಟವಾಗುತ್ತದೆ ಎಂದು ಕೆಲವು ಜನರು ಒಂದು ತರಹದ ಚಳುವಳಿ ನಡೆಸುವುದಕ್ಕೆ ಹೊರಟರು. ಇದರಿಂದಾಗಿ ಸರಕಾರ ಯಾವ ಮಾರ್ಗದಲ್ಲಿ ಹೋದರೆ ಅನುಕೂಲವಾಗಬಹುದು ಎಂದು ವಿಚಾರ ಮಾಡಿ 90 ಅಡಿ ಮತ್ತು 110 ಅಡಿಯ ಎರಡು ಕಟ್ಟೆಗಳನ್ನು ಕಟ್ಟಬೇಕೆಂದು ಸೂಚನೆ ಬಂತು. ಮೊದಲು ಇದು ಇರಲಿಲ್ಲ. ಇದರ ಅಸೆಸ್ಸುಮೆಂಟನ್ನು ನೋಡುವಾಗ ಬಹಳ ಕಡಿಮೆ ಎಕರೆಗಳು ಏರಿಯಾ ಮುಳುಗಡೆ ಯಾಗುವುದೂ ಇದಿರಲ್ಲಿರುವುದರಿಂದ ಇದರಿಂದ ಜನಕ್ಕೆ ತೊಂದರೆಯೂ ಜಾಸ್ತಿ ಬರುವುದಿಲ್ಲ ಖರ್ಚು ಕಡಿಮೆ ಬರುತ್ತದೆ. ನಮ್ಮ ಕೊಡಗಿನ ಭಾಗದಲ್ಲಿ ಮುಳುಗಡೆ ಏರಿಯಾ ಕೂಡ ಕಡಿಮೆ ಮತ್ತು ಹೆಚ್ಚು ಖರ್ಚು ಬರದಂತೆ ಕಟ್ಟೆಯನ್ನು ಕಟ್ಟಿದರೆ ಅದಕ್ಕೆ ಯಾರ ಆಕ್ಷೇಪಣೆಯೂ ಬರುವುದಿಲ್ಲ. ನನ್ನ ಸ್ವಂತ ಅಭಿಪ್ರಾಯದಲ್ಲಿ ಮೊದಲು ಇದರ ಬಗ್ಗೆ ಹೇಗೆ ತೀರ್ಮಾನ ಮಾಡಿದ್ದಾರೋ ಹಾಗೆ ಮಾಡಬೇಕಾಗುತ್ತದೆ ಮತ್ತು ಆ ನೀತಿಯನ್ನೇ ಅನುಸರಿಸಬೇಕು ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಚಳುವಳಿ ಮಾಡತಕ್ಕ ಜನ ಒಂದು ಕಡೆ ಹಾರಂಗಿ ಕಟ್ಟೆ ಮಾಡುವಂತೆ ಬಾರಾಪೊಳೆ ವಿಷಯದಲ್ಲಿ ಕೂಡ ಹೆದರಬೇಕಾಗುತ್ತದೆ ಎಂದು ಇತ್ತು. ಅದರಂತೆ ಕಂಬಂದಕಡದ ಕಟ್ಟೆ ಬೇಡ ಬರೀ ಹಾರಂಗಿ ಒಂದೇ ಸಾಕು ಎಂದ ಇದ್ದಿದ್ದರೆ ಆಗ ಯಾವ ಚಳುವಳಿಯೂ ಆಗಲಿಕ್ಕೆ ಕಾರಣವಿಲ್ಲ. ಇವೊತ್ತು ಎಲ್ಲ ಕೊಡಗು ಪ್ರಾಂತ ಸೇರಿ ಮೈಸೂರಿಗೆ ಒಂದು ಭಾಗವಾಗಿ ಬಂದು ಸೇರಿದೆ. ಕೊಡಗನ್ನು ಅಭಿವೃದ್ಧಿ ಮಾಡಬೇಕು ಅದಕ್ಕಾಗಿ ಕಂಬಂದಕಡವನ್ನು ಬೇಡಿ ಎಂದು ಹೇಳುವುದು ಸರಿಯಲ್ಲ. ಇದಕ್ಕೆ 1924 ರಲ್ಲಿ ಆದಂತಹ ಅಗ್ರಿಮೆಂಟಿನ ಪ್ರಕಾರ ಇದು ಭಾಗಿಯಾಗುವುದಿಲ್ಲ. ಹಾರಂಗಿಯ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳುವುದು ಸೂಕ್ತವಾದುದು.

ಇನ್ನು ನಮ್ಮ ಕೊಡಗು ಭಾಗದಲ್ಲ 20-22 ಡಿಸ್ಪೆನ್ಸರಿಗಳಿವೆ. ಆದರೆ ಇದರಿಂದ ಬೇಕಾಗುವ ಸವಲತ್ತುಗಳು ಸಿಗುವುದು ಕಷ್ಟವಾಗಿದೆ. 13 ಡಿಸ್ಪೆನ್ಸರಿಗಳಲ್ಲಿ ಡಾಕ್ಟರುಗಳೇ ಇಲ್ಲ. ಪ್ರತಿ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿಯೂ ಎಷ್ಟೋ ಕಡೆಗಳಲ್ಲಿ ಡಿಸ್ಪೆನ್ಸರಿಗಳಿದ್ದರೂ ಕೂಡ ಡಾಕ್ಟರುಗಳೇ ಇಲ್ಲ. ಇದರಿಂದ ಈ ಭಾಗದಲ್ಲಿರುವ ಜನಕ್ಕೆ ಬಹಳ ನೋವುಂಟಾಗುತ್ತಿದೆ. ಆಸ್ಪತ್ರೆಗಳನ್ನೇನೋ ಜಾಸ್ತಿಯಾಗಿ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ನಮಗೆ ಹೆಚ್ಚಿನ ಆಸ್ಪತ್ರೆ ಬೇಕಿಲ್ಲ. ಇರುವ ಆಸ್ಪತ್ರೆಗಳಲ್ಲಿ ಹೆಚ್ಚಿನ ಅನುಕೂಲಗಳು ಜನಕ್ಕೆ ಸಿಗುತ್ತಿಲ್ಲ. ಮೈಸೂರಿಗೆ ಸೇರಿದ ಮೇಲೆ ಜನಕ್ಕೆ ಹೆಚ್ಚಿನ ಅನುಕೂಲಗಳು ಸಿಗುತ್ತೆ ಎಂದು ಭಾವಿಸಿದ್ದರು. ನಮ್ಮಲ್ಲಿ ಎಷ್ಟೋ ಜನರು ಮುಂದೆ ಬಂದು ಆಸ್ಪತ್ರೆಗಳನ್ನು ಕಟ್ಟಿಸಿ ವಾರ್ಡುಗಳನ್ನೂ ಕಟ್ಟಿಸಿದ್ದರೂ ಕೂಡ ಅಂತಹ

(ಶ್ರೀ ಕೆ. ಎಂ. ದೇವಯ್ಯ)

ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲವೇ ಹೋದರೆ ಜನಕ್ಕೆ ಏನು ಅನುಕೂಲ ಸಿಕ್ಕಿದಂತಾಗುತ್ತದೆ. ಹೆರಿಗೆಗಾಗಿ ಆಸ್ಪತ್ರೆಗೆ ಬರುವ ಹೆಂಗಸರಿಗೆ ಅಲ್ಲಿ ಡಾಕ್ಟರುಗಳೇ ಇಲ್ಲದೆ ಇದ್ದರೆ ಅವರ ಪರಿಸ್ಥಿತಿ ಏನಾಗಬೇಕು ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು. ಹಿಂದೇನೋ ಮನೆಗಳಲ್ಲಿಯೇ ಸೂಲಗಿತ್ತಿಯರು ಬಂದು ಹೆರಿಗೆ ಕೆಲಸಗಳನ್ನು ನಡೆಸುತ್ತಿದ್ದರು. ಈಗ ಜನ ಸೂಲಗಿತ್ತಿಯರನ್ನು ಮರೆತು ಬಿಟ್ಟು ಎಲ್ಲರೂ ಆಸ್ಪತ್ರೆಗಳಿಗೇ ಹೋಗುತ್ತಿದ್ದಾರೆ. ಆಸ್ಪತ್ರೆಗಳಿಗೆ ಹೋಗುವಾಗ ಅಲ್ಲಿ ಡಾಕ್ಟರುಗಳೇ ಇರದಿದ್ದರೆ ಹೇಗೆ. ಇಂತಹ ಪರಿಸ್ಥಿತಿ ಇನ್ನು ಮುಂದಾದರೂ ಇರಬಾರದು. ಇದರಿಂದಾಗಿ ಜನತೆಗೆ ಬಹಳ ನೋವುಂಟಾಗುತ್ತದೆ. ಸರಕಾರ ಕೂಡ ಆಸ್ಪತ್ರೆಗಳನ್ನು ಕಟ್ಟಿಸುತ್ತಿಲ್ಲ. ಯಾರೊ ರೈತರು ಹಿಂದಿನಿಂದ ಧರ್ಮಾರ್ಥವಾಗಿ ಆಸ್ಪತ್ರೆಗಾಗಿ ಕಟ್ಟಡ ಕಟ್ಟಿಸಿಕೊಟ್ಟಿದ್ದಾರೆ. ಆದರೆ ಎಷ್ಟೋ ಕಡೆಗಳಲ್ಲಿ ಸರಿಯಾದ ಡಾಕ್ಟರುಗಳನ್ನೇ ನೇಮಕ ಮಾಡಿಲ್ಲ. ಇದರಿಂದ ನಮ್ಮಲ್ಲಿ ಡಾಕ್ಟರುಗಳಿಗೆ ಕೊರತೆಯಾಗಿವೆ ಎಂದು ಹೇಳುತ್ತಾರೆ. ಮೈಸೂರಿನಲ್ಲಿ ಏತಕ್ಕಾಗಿ ಡಾಕ್ಟರುಗಳ ಕೊರತೆ ಇದೆ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದೆ. ಇವೊತ್ತು ಇಲ್ಲಿ ಡಾಕ್ಟರುಗಳ ಕೊರತೆ ಏಕೆ ಆಗಿದೆ ಎಂದರೆ ಅವರುಗಳ ಕೆಲಸಕ್ಕೆ ತಕ್ಕಷ್ಟು ಸಂಬಳ ಇಲ್ಲಿ ದೊರೆಯುತ್ತಿಲ್ಲ ಮತ್ತು ಇದಕ್ಕೆ ತಕ್ಕಂತೆ ಅನುಕೂಲಗಳನ್ನೂ ಒದಗಿಸಿ ಕೊಡುತ್ತಿಲ್ಲ. ಮದರಾಸಿನಲ್ಲಿ ಮೈಸೂರಿಗಿಂತ ಹೆಚ್ಚಿನ ಸಂಬಳ ಕೊಡುತ್ತಾರೆ. ಅದೇ ರೀತಿ ಆಂಧ್ರದಲ್ಲೂ ಹೆಚ್ಚಿಗೆ ಸಂಬಳಗಳನ್ನು ಡಾಕ್ಟರುಗಳಿಗೆ ಕೊಡುತ್ತಿದ್ದಾರೆ. ಆದುದರಿಂದ ನಮ್ಮ ಸರಕಾರ ಇತರ ಪ್ರದೇಶಗಳಿಗಿಂತ ಇಲ್ಲಿ ಡಾಕ್ಟರುಗಳಿಗೆ ಕಡಿಮೆ ಸಂಬಳವನ್ನು ಕೊಟ್ಟರೆ ಅವರುಗಳು ಇಲ್ಲಿ ಹೇಗೆ ಕೆಲಸ ಮಾಡುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು.

ಅಲ್ಲಿ ನಮ್ಮ ಜನರ ಆರೋಗ್ಯವನ್ನು ಕಾಪಾಡಿಕೊಳ್ಳಲು ಡಾಕ್ಟರುಗಳ ಹಾಗೂ ಔಷಧಿಗಳ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಈ ವಿಚಾರಗಳಿಗೆ ಈಗ ನಿಗಾ ಕೊಡದೇ ಇರುವುದರಿಂದ ಜನರಿಗೆ ಬಹಳ ಹಿಂಸೆ ಬಂದಿದೆ. ಇದರಿಂದ ಅಲ್ಲಿರತಕ್ಕ ಜನರಲ್ಲಿ ಕಡುಬಡವರಾಗಿರತಕ್ಕದವರು ಕಮ್ಯೂನಿಸ್ಟರಾಗುತ್ತಿದ್ದಾರೆ. ಇನ್ನು ಶ್ರೀಮಂತರಾಗಿರತಕ್ಕವರು ಸ್ವತಂತ್ರ ಪಾರ್ಟಿಯಾಗುತ್ತಿದ್ದಾರೆ. ಇದಕ್ಕೆಲ್ಲಾ ಅವಕಾಶ ಕೊಡದಂತೆ ಸರ್ಕಾರದವರು ಜಾಗ್ರತೆಯಾಗಿ ಅಲ್ಲಿಗೆ ಡಾಕ್ಟರುಗಳ ಮತ್ತು ಔಷಧಿಗಳ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮಲ್ಲಿ ಈಗ ಒಂದು ವೆಲ್ ಎಕ್ವಿಪ್ಡ್ ಫಸ್ಟ್ ಗ್ರೇಡ್ ಕಾಲೇಜಿದೆ. ಅಲ್ಲಿ ಹಿಂದೆ ಇದ್ದ ವಿದ್ಯಾರ್ಥಿಗಳ ಸಂಖ್ಯೆಗಿಂತ ಈಗ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಮೊದಲು ಅಲ್ಲಿ ಎಂಟು ಜನ ಪ್ರೊಫೆಸರ್ಸ್‌ಗಳಿದ್ದರು. ಈಗ ಅದು ನಾಲ್ಕಕ್ಕೆ ಇಳಿದಿದೆ. ಇದರ ರಿಜಲ್ಟ್ ಸಹಾ ಸರಿಯಾಗಿ ಬರುತ್ತಿಲ್ಲ. ಈ ಕಾಲೇಜು ಇಂಥ ಸ್ಥಿತಿಗೆ ಬರಬಾರದು. ಇದರ ವಿಚಾರದಲ್ಲಿ ಸರ್ಕಾರದವರು ಈ ರೀತಿ ಮಾಡಬಾರದೆಂದು ಬೇಡಿಕೊಳ್ಳುತ್ತೇನೆ.

— ಇನ್ನು ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ, ಅಲ್ಲಿ ಈಗ ನಮ್ಮ ಮಕ್ಕಳಿಗೆ ಬೇಸಿಕ್ ಎಜುಕೇಷನ್ ಎಂತ ಕೊಡುತ್ತಿದ್ದಾರೆ. ಆದರೆ ಇದರ ತತ್ವ ಚೆನ್ನಾಗಿರಬಹುದು. ಆದರೆ ಇದನ್ನು ಅಲ್ಲಿ ಜಾರಿಮಾಡುತ್ತಿರುವುದು ಸರಿಕಾಣುವುದಿಲ್ಲ. ಇದನ್ನು ಸರ್ಕಾರದವರು ಬೇಕಾಗಿದ್ದಲ್ಲಿ ಪಟ್ಟಣಗಳಲ್ಲಿ ಜಾರಿಗೆ ತರಲಿ. ನಮ್ಮ ಗ್ರಾಮಾಂತರ ಪ್ರದೇಶಕ್ಕೆ ಇದನ್ನು ಬೇಡ ಎಂದು ನಾನು ಹೇಳುತ್ತೇನೆ, ಅಲ್ಲಿ ಪಾಠಗಳೂ ಸಹ ಸರಿಯಾಗಿ ನಡೆಯುತ್ತಿಲ್ಲ. ಸ್ಟಾಂಡರ್ಡ್ ಬಹಳ ಕಡಿಮೆಯಾಗುತ್ತಿದೆ. ನಮ್ಮ ಮಕ್ಕಳಿಗೆ ಬೇಸಾಯದ ವಿಚಾರವನ್ನು ಪಾಠಶಾಲೆಗೆ ಹೋಗಿ ಕಲಿಯಬೇಕೆಂಬ ಇರಾದೆಯಿಲ್ಲ. ಇವನ್ನು ನಮ್ಮ ಮಕ್ಕಳಿಗೆ ಮನೆಯಲ್ಲಿ ತಂದೆ ತಾಯಿಗಳು ಕಲಿಸುತ್ತಾರೆ. ಅಲ್ಲಿ ನಮ್ಮ ಮಕ್ಕಳಿಗೇನಿದ್ದರೂ ಓದುವುದನ್ನು ಕಲಿಸಿದರೆ ಸಾಕು. ಆದ್ದರಿಂದ ಹಳ್ಳಿಯ ಜನರಿಗೆ ಈ ಬೇಸಿಕ್ ಎಜುಕೇಷನ್ ಬೇಕಾಗಿಲ್ಲವೆಂದು ಹೇಳುತ್ತೇನೆ. ನಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ವಿದ್ಯೆಯನ್ನು ಕಲಿಯುವುದಕ್ಕಾಗಿ. ಇದರ ಬಗ್ಗೆ ಸರ್ಕಾರ ಪುನರಾಲೋಚನೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗೋಪಾಲ ಸಾರೆನ್ನ (ಮರೋಬದ್ರಿ).—ಸ್ವಾಮಿ ಅಧ್ಯಕ್ಷರೇ, ಈ ಆಯವ್ಯಯವನ್ನು ಮಾನ್ಯ ಹಣಕಾಸಿನ ಸಚಿವರು ತಯಾರುಮಾಡುವಾಗ ಅವರ ಮನೋಭಾವನೆ ಹೇಗಿದ್ದಿತೆಂಬುದನ್ನು ಈ ಆಯವ್ಯಯ ಪಟ್ಟಿಯನ್ನು ತಯಾರಿಸಲು ಅಂಕಿ ಸಂಖ್ಯೆಗಳನ್ನು ಶೇಖರಿಸಿದ್ದ ಆ ಗುಮಾಸ್ತರುಗಳ ಮನೋಭಾವನೆ ಯಾವ ರೀತಿ ಇತ್ತೋ ಅದೇ ರೀತಿಯಲ್ಲಿ ಇವರೂ ಅದನ್ನು ತಯಾರಿಸಿದ್ದಾರೆ. ಆದರೆ ಈ ಆಯವ್ಯಯ ಪಟ್ಟಿಯಲ್ಲಿ ಒಂದು ಆರ್ಥಿಕ ಸುಧಾರಣೆಯೇನಿರಬೇಕಾಗಿತ್ತೋ ಅದಿಲ್ಲ ಎಂಬ ಅಂಶವನ್ನು ಈಗಾಗಲೇ ಅನೇಕ ಮಾನ್ಯ ಸದಸ್ಯರು ಸ್ಪಷ್ಟಪಡಿಸಿದ್ದಾರೆ. ಅಂತೂ ಈ ಬಜೆಟ್ಟಿನಲ್ಲಿ ಸಾಮಾನ್ಯ ಜನರ ಆರ್ಥಿಕಾಭಿವೃದ್ಧಿಗೆ ಅವಕಾಶಮಾಡಿದ ಸೂಚನೆಗಳೊಂದೂ ಕಂಡುಬರುವುದಿಲ್ಲ.

ನಮ್ಮ ದೇಶದಲ್ಲಿ ಇಂದು ಭೂಮಿ ಕಾಣಿಗಳಿಲ್ಲದ ನಿರ್ಗತಿಕರ ಸಂಖ್ಯೆ ಬಹಳವಾಗಿದೆ. ಇವರ ಸಂಖ್ಯೆ 35-40 ಲಕ್ಷವಾಗಬಹುದು. ಇವರೇ ನಮ್ಮ ರಾಷ್ಟ್ರದ ಬೆನ್ನುಮೂಳೆ. ಇವರು ನಮ್ಮ ರಾಜ್ಯದಲ್ಲಿ ಶೇಕಡ 50ಕ್ಕೂ ಜಾಸ್ತಿ ಇದ್ದಾರೆ. ಇಷ್ಟು ಜನರನ್ನು ನಮ್ಮ ಸರ್ಕಾರ ಈ ದಿವಸ ಗಣನೆಗೆ ತೆಗೆದುಕೊಂಡಂತೆ ಕಾಣುವುದಿಲ್ಲ. ಇಷ್ಟು ಜನರ ಆದಾಯ ಹದಗೆಟ್ಟು ಹೋಗಿದೆ. ಅವರು ಜೀವನಕ್ಕಾಗಿ ತುಂಬಾ ತೊಂದರೆ ಪಡುತ್ತಿದ್ದಾರೆ. ಅವರಿಗೆ ಮಾಡುವುದಕ್ಕೆ ಸಾಕಷ್ಟು ಉದ್ಯೋಗವಿಲ್ಲ. ಇಂಥವರ ವಿಚಾರವನ್ನು ಸರ್ಕಾರದವರು ಗಮನಕ್ಕೇ ತೆಗೆದುಕೊಂಡಿಲ್ಲ. ಆದಾಗ್ಯೂ ಅವರಿಗೆಲ್ಲಾ ಈ ಸರ್ಕಾರ, ನಿಮಗೆ ಅನುಕೂಲ ಮಾಡಲು ಭೂ ಸುಧಾರಣೆಯನ್ನು ಜಾರಿಗೆ ತರುತ್ತೇವೆ, ನಿಮಗೆಲ್ಲ ಭೂಮಿಯನ್ನು ಉಚಿತವಾಗಿ ಹಂಚುತ್ತೇವೆಂದು ಒಂದು ಕುಂಟು ನೆಪವನ್ನು ಹೇಳಿಕೊಂಡು ಬರುತ್ತಿದ್ದಾರೆ. ಭೂಹೀನರಾದ ಲಕ್ಷಾಂತರ ಜನರು ದೇಶದಲ್ಲಿರುವಾಗ ಹಂಚಲಿಕ್ಕೆ ಭೂಮಿ ಇಲ್ಲದಿದ್ದರೂ ಭೂಮಿಯನ್ನು ಕೊಡುತ್ತೇವೆಂದರೆ ಅದು ಎಷ್ಟರಮಟ್ಟಿಗೆ ಸಫಲವಾಗುತ್ತದೆಂಬುದನ್ನು ಸರ್ಕಾರದವರು ಆಲೋಚನೆ ಮಾಡಿದಂತೆ ಕಂಡುಬರುತ್ತಿಲ್ಲ. ಆದರೆ ಜನರು ಈ ಒಂದು ಸ್ಲೋಗನ್ನನ್ನು ಕೇಳಿಕೊಂಡು ನಾವೂ ಕೂಡ ಒಂದು ದಿನ ಜಮೀನ್ದಾರರಾಗುತ್ತೇವೆಂಬ ಹಂಬಲದಲ್ಲಿ ಬಿದ್ದಿದ್ದಾರೆ. ಅಂತೂ ಈ ವರ್ಗದ ಜನರನ್ನು ಸರ್ಕಾರ ಸಂಪೂರ್ಣವಾಗಿ ಕಡೆಗಾಣಿಸಿದೆಯೆಂದು ನಾನು ಹೇಳಬಯಸುತ್ತೇನೆ.

ಇನ್ನು ನಮ್ಮ ಹಣಕಾಸಿನ ಸಚಿವರೇ ನಮ್ಮ ಭೂರಹಿತ ವರ್ಗದವರ ಸಂಪಾದನೆ 104 ನಯೇ ಪೈಸೆಗಳಿದ್ದುದು ಈಗ 96 ನಯೇಪೈಸೆಗಿಳಿದಿದೆ ಎಂದು ಅವರ ವರದಿಯಲ್ಲೇ ತಿಳಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಮೂರು ಯೋಜನೆಗಳನ್ನು ಮುಗಿಸಿದನಂತರ ಇಲ್ಲಿಯ ಜನರ ಸಂಪಾದನೆ ಇಷ್ಟು ಇಳಿಮುಖವಾಗಿದೆಯೆಂದು ಗೊತ್ತಾಗುತ್ತಿದೆ. ಹೀಗಿರುವಾಗ ನಮ್ಮ ಸರ್ಕಾರದವರು ಈ ವಿಚಾರಕ್ಕೆ ಎಷ್ಟರಮಟ್ಟಿಗೆ ಗಮನ ಕೊಟ್ಟಿದ್ದಾರೆಂಬುದು ಇದರಿಂದಲೇ ವ್ಯಕ್ತವಾಗುತ್ತಿದೆ. ಈ ಭೂರಹಿತ ಜನರಿಗೆ ವರ್ಷದಲ್ಲಿ 154 ದಿನ ಉದ್ಯೋಗ ದೊರೆತರೆ ಹೆಚ್ಚಾಯಿತು. ಹೀಗಿರುವಾಗ ಅವರ ಜೀವನ ಹೇಗೆ ನಡೆಯಬೇಕು ? ಅವರಿಗೆ ವಸ್ತ್ರವಿದ್ದರೆ ತಿನ್ನಲಿಕ್ಕೆ ಅನ್ನವಿಲ್ಲ. ಅನ್ನ ವಸ್ತ್ರಗಳೆರಡೂ ಇದ್ದರೆ ಇರಲಿಕ್ಕೆ ಮನೆಯಿಲ್ಲ. ಹೀಗಿದೆ ಇವರ ಬಾಳು. ಆದ್ದರಿಂದ ಈ ವರ್ಗ ಯಾವತ್ತೂ ಬಂಡವಾಳಶಾಹಿ ವರ್ಗವನ್ನೋ ಇಲ್ಲವೇ ಭೂ ಮಾಲೀಕ ವರ್ಗವನ್ನೋ ಆಶ್ರಯ ಮಾಡಿಕೊಂಡೇ ತಮ್ಮ ಜೀವನವನ್ನು ಸಾಗಿಸಬೇಕಾಗಿದೆ. ಈ ದಾಕ್ಷಿಣ್ಯದ ಬಾಳುವೆಯನ್ನು ತೊಡೆದುಹಾಕಲು ಸರ್ಕಾರ ಯಾವ ಕ್ರಮವನ್ನು ಹಾಕಿಕೊಂಡಿದೆ ? ಇವರಿಗೆ ನ್ಯಾಯ ದೊರಕಿಸಿಕೊಡಲು ಯಾವ ದಾರಿಯನ್ನು ಹಾಕಿದೆ? ಇವರ ಕಷ್ಟನಷ್ಟಗಳನ್ನು ಬಗೆಹರಿಸುವುದಕ್ಕೆ ಸರ್ಕಾರ ಯಾವ ದಾರಿಯನ್ನೂ ಹಾಕಿಲ್ಲವೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಈ ದಿವಸ ಈ ವರ್ಗದ ಜನರಿಗೆ ಒಂದು ಅಂಗಿ, ಒಂದು ಷರಾಯಿ ಬಟ್ಟರೆ ಬೇರೆ ಗತಿ ಇಲ್ಲ. ಇವರಿಗೆ ಎರಡು ಜೊತೆ ಡ್ರೆಸ್ಸನ್ನು ಮಾಡಬೇಕೆಂಬ ಉದ್ದೇಶದಿಂದ ಇವರಿಗೇನಾದರೂ ಸ್ವಲ್ಪ ಹೆಚ್ಚಿನ ನೆರವನ್ನು ನೀಡಿದರೆ ಅದು ನೇರವಾಗಿ ಮಿಲ್ ಮಾಲೀಕರಿಗೆ ಹೋಗುತ್ತದೆ ಮನೆ ಮಾಡಿಕೊಳ್ಳಲಿ ಎಂದು ಅನುಕೂಲಗಳನ್ನೊದಗಿಸಿದರೆ ಅದು ಹೆಂಚಿನ ಕಾರ್ಖಾನೆಯವರಿಗೆ ಅಥವಾ ಸಿಮೆಂಟ್ ಕಂಪನಿಯವರಿಗೆ ಸೇರಿಹೋಗುತ್ತದೆ. ಹಣಕಾಸಿನ ಸಚಿವರು ಇಲ್ಲಿ ಎಲ್ಲ ವರ್ಗದವರಿಗೂ ವಾರ್ಷಿಕವರಮಾನ 289.6ರೂಪಾಯಿಗಳೆಂದು ಅವರು ಹೇಳಿದ್ದಾರೆ. ಆದರೆ ವಿರೋಧ ಪಕ್ಷದ ನಾಯಕರು ಇವರ ಸಂಪಾದನೆ ದಿನಕ್ಕೆ ನಾಲ್ಕು ಆಣೆಗಳಿಗೆ ಜಾಸ್ತಿಯಾಗಿಲ್ಲವೆಂದು ಅವರು ಹೇಳಿದ್ದಾರೆ. ಇನ್ನು ಕೆಲವು ರಾಷ್ಟ್ರದ ಮುಖಂಡರು ಇವರ ವರಮಾನ ಮೂರು ಆಣೆಗಳಿಗಿಂತ ಜಾಸ್ತಿಯಿಲ್ಲವೆಂದು ಅವರು ಹೇಳುತ್ತಿದ್ದಾರೆ. ಹೀಗಾದರೆ ಅವರು ಜೀವನ ಮಾಡುವುದು ಹೇಗೆ ? ಕೇವಲ ಖೈದಿಗಳಿಗೆ ಊಟಕ್ಕೆ ಒಂದು ರೂಪಾಯಿಯನ್ನು ಕೊಡುತ್ತಾರೆ. ಖೈದಿಗಳಿಗೆ ಅದರಲ್ಲೂ ಕ್ರಿಮಿನಲ್ ಆಗಿರುವವರಿಗೂ ಸಹ ದಿವಸಕ್ಕೆ ಒಂದು ರೂಪಾಯಿಯನ್ನು ಕೊಡುತ್ತಾರೆ. ಆದ್ದರಿಂದ ಅವರ ಕುಟುಂಬವನ್ನು ಹೇಗೆ ಸಂರಕ್ಷಣೆ ಮಾಡಬೇಕೆಂದು ಕೇಳುತ್ತೇನೆ. ನಿಮ್ಮ ಸರ್ಕಾರದಲ್ಲಿರತಕ್ಕ ಪ್ರಜೆಗಳಿಗಾಗಿ ಬಾಳತಕ್ಕ ಜನರು ಕ್ರಿಮಿನಲ್ ಖೈದಿಗಳಿಗಾಗಿ ಹೇಗಾದರೂಮಾಡಿ ಜೀವನನಡೆಸಬೇಕಲ್ಲವೇ? ಇಂಥವರ ಕಡೆ ಸರ್ಕಾರದವರು ತಮ್ಮ ಗಮನವನ್ನು ಏಕೆ ಇನ್ನೂ ಕೊಡಲಿಲ್ಲವೋ ಎಂದು ಕೇಳುತ್ತೇನೆ. ಘಟನೆಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡಬೇಕೆಂದು ಹೇಳಿದೆ. ಪ್ರತಿಯೊಬ್ಬರಿಗೂ ಆ ಪ್ರಕಾರ ಉದ್ಯೋಗ ಕಲ್ಪಿಸಿಕೊಡಬೇಕು. ವಿದ್ಯಾವಂತ ನಿರುದ್ಯೋಗ ಸಮಸ್ಯೆ ಮತ್ತು ಅವಿದ್ಯಾವಂತ ನಿರುದ್ಯೋಗ ಸಮಸ್ಯೆ ಒಂದೊಂದು ಕಡೆ ಇದೆ. ಖಾಯಂ ಆಗಿರುವಂತಹ ನಿರುದ್ಯೋಗ ಸಮಸ್ಯೆ ಮತ್ತೊಂದು ಕಡೆ ಇದೆ. ಆದ್ದರಿಂದ ಘಟನೆಯಲ್ಲಿ ಹೇಳಿರತಕ್ಕ ಒಂದು ತತ್ವ, ಒಂದು ವಾದ ಏನಿದೆ ಅದನ್ನು ಈ ಸರ್ಕಾರವೂ ಅನುಸರಿಸತಕ್ಕದ್ದು ಬಹಳ ಮುಖ್ಯ.

ಇನ್ನು ಪ್ರೊಹಿಬಿಷನ್ ಎಂಬುದನ್ನು ಇಡೀ ರಾಜ್ಯಕ್ಕೆಲ್ಲಾ ಅನ್ವಯ ಮಾಡಬೇಕೆಂದು ಅದನ್ನು ಜಾರಿಗೆ ತರಬೇಕೆಂದಿದ್ದಾರೆ. ಗಾಂಧೀಜಿಯವರ ತತ್ವವನ್ನು ಅನುಸರಿಸುತ್ತಿದ್ದೇವೆಂದು ಇವರು

(ಶ್ರೀ ಗೋಪಾಲ ಸಾರೆನ್ನ)

ಹೇಳುತ್ತಿದ್ದಾರೆ. ಆದರೆ ಅವರ ತತ್ವಗಳನ್ನು ಪರಿಪಾಲಿಸುವುದರಲ್ಲಿ ಕೊಂಚ ಮಟ್ಟಿಗೆ ಹಿಂದುಳಿದಿದ್ದಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಏಕೆಂದರೆ ಇನ್ನೂ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಲ್ಲ. ಅಶಕ್ತರಾದವರಿಗೆ ರಕ್ಷಣೆ ಕೊಡಬೇಕು. ಮೊನ್ನೆತಾನೆ ಸೋಷಿಯಲ್ ವೆಲ್‌ಫೇರ್ ಸಚಿವರು ಅಂಗವಿಕಲರಿಗೆ ರಕ್ಷಣೆ ಕೊಡುವ ಇಲಾಖೆಯಿದು ಎಂಬುದಾಗಿ ಹೇಳಿದ್ದಾರೆ. ಎಲ್ಲರಿಗೂ ಸಂಬಂಧಪಟ್ಟದ್ದು, ಹರಿಜನ, ಗಿರಿಜನರಿಗೆ ಮಾತ್ರವೇ ಅಲ್ಲ ಎಂದೂ ಸಹ ಹೇಳಿದರು. ಆದರೆ ಎಷ್ಟೋ ಜನ ಕುರುಡರು, ಕುಂಟರು, ಮೂಗರು ರಸ್ತೆಗಳ ಮಗ್ಗುಲಲ್ಲಿ ಮಾಳಿಗೆಗಳ ಮೇಲೆ ಮಲಗಿಕೊಂಡಿರುತ್ತಾರೆ. ಅವರ ಒಂದು ದೃಷ್ಟಿಗೆ ಈ ಇಲಾಖೆ ಏನು ಮಾಡಿದೆ, ಅವರಿಗೆ ಏನು ರಕ್ಷಣೆ ಕೊಟ್ಟಿದೆ? ಎಂದು ನಾನು ಕೇಳುತ್ತೇನೆ. ಅದು ಈ ಇಲಾಖೆಗೆ ಸಂಬಂಧ ಪಟ್ಟದ್ದು ಅಲ್ಲವೇ? ಆದರೆ ಇಂತಹ ಒಂದು ರಾಷ್ಟ್ರದಲ್ಲಿ ಬೆಂಗಳೂರು, ಕ್ಯಾಪಿಟಲ್ ಹೆಡ್ ಕ್ವಾರ್ಟರ್ಸ್ ಎಂಬುದಾಗಿ ಹೇಳುತ್ತಾ ಈ ರೀತಿ weaker sections ನರಕ ಯಾತನೆಯನ್ನು ಹೊಂದುತ್ತಿರುವಾಗ ಈ ಸೋಷಿಯಲ್ ವೇರ್‌ಫೇರ್ ಇಲಾಖೆ ಒಳ್ಳೆಯರೀತಿಯಲ್ಲಿ ಕೆಲಸಮಾಡುತ್ತಿದೆಯೆಂದು ಹೇಳುವುದು ಸರಿಯೆ ? ಇನ್ನು ಸೋಷಿಯಲ್ ವೆಲ್‌ಫೇರ್ ಇಲಾಖೆಯ ವಿಚಾರವಾಗಿ ಹೇಳುವುದಾದರೆ ಇದು weaker sections ಎಂದು ಏನು ಹೇಳುತ್ತಾರೆ ಅವಕ್ಕೆ ಅಷ್ಟಾಗಿ ಸಹಾಯವನ್ನು ದೊರಕಿಸುತ್ತಾ ಇಲ್ಲ. ದಲಿತವರ್ಗದವರ ಮತ್ತು ಹರಿಜನ, ಗಿರಿಜನರ ಅಭಿವೃಧಿಯ ಬಗ್ಗೆ ಮಾತ್ರವೇ ಈ ಇಲಾಖೆ ಕೆಲಸ ಮಾಡಿಕೊಂಡಿರುವುದಕ್ಕೆ ಪ್ರಮುಖ್ಯವಾದ ಕಾರಣವೆಂದು ಕಲ್ಯಾಣ ಅಭಿವೃದ್ಧಿ ಶಾಖೆಯ ಸಚಿವರು ಒಂದೆರಡು ಸಾರಿ ಹೇಳಿಕೆಯನ್ನು ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ. ಘಟನೆಯಲ್ಲಿ ಹೇಳಿರುವಂತೆ ಈ ಇಲಾಖೆಯು ನಮ್ಮ ದಲಿತವರ್ಗದವರ ಅಭಿವೃದ್ಧಿ ಒಂದು ಕಡೆ, ಅಸ್ಪೃಶ್ಯತಾ ನಿವಾರಣೆ ಮತ್ತೊಂದು ಕಡೆ, ಇನ್ನೊಂದು ಕಡೆ ಸಾಮಾಜಿಕ ಸಮಾನತೆ, ಮತ್ತೊಂದು ಕಡೆಯಲ್ಲಿ ಉದ್ಯೋಗಗಳಲ್ಲಿ ಸಮಾನತೆ ಅವಕಾಶಗಳನ್ನು ಒದಗಿಸಿಕೊಡಬೇಕಾದುದು ಮುಖ್ಯ. ಇದಕ್ಕಾಗಿಯೇ ಈ ಇಲಾಖೆ ಅಗತ್ಯವಾಗಿರುವುದು. ಅಂದಮೇಲೆ ಈ ಇಲಾಖೆಯ ಮೂಲಕ ಈ ಬಗ್ಗೆ ಕಾನೂನುಗಳನ್ನು ಜಾರಿ ಮಾಡಬೇಕೆಂದು ನಾನು ಹೇಳುತ್ತೇನೆ. Weaker sections ರಕ್ಷಣೆ ಕೊಡಬೇಕೆಂಬ ಉದ್ದೇಶದಿಂದ ಪ್ರತಿಯೊಂದು ರಾಜ್ಯದಲ್ಲೂ ಈ ಇಲಾಖೆ ಪ್ರತ್ಯೇಕವಾಗಿ ಕೆಲಸ ಮಾಡುತ್ತಿದೆ. ಮದ್ರಾಸನ್ನು ತೆಗೆದುಕೊಂಡರೆ ಹರಿಜನರಿಗೆ ಮತ್ತು ಗಿರಿಜನರಿಗೆ ಈ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದು ಪ್ರತ್ಯೇಕವಾಗಿಟ್ಟಿದ್ದಾರೆ. ಮಹಾರಾಜರುಗಳ ಕಾಲದಲ್ಲಿ ಹಿಂದೆ ತರಗತಿಗಳಲ್ಲೂ ಕೂಡ Depressed Class Welfare Department ಎಂದು ಪ್ರತ್ಯೇಕವಾಗಿ ನಡೆಯುತ್ತಿತ್ತು. ಆದರೆ ಇಂದು ಪದೇ ಪದೇ ಈ ಇಲಾಖೆ ಹೆಚ್ಚಾಗುವುದು ಬೇಡವೆಂಬ ದೃಷ್ಟಿಯಿಂದಲೂ ಮತ್ತು ಮಂತ್ರಿಗಳ ಸಂಖ್ಯೆ ಈಬಗ್ಗೆ ಇನ್ನಷ್ಟು ಜಾಸ್ತಿ ಕೊಡುವುದು ಬೇಡವೆಂದು ಈ ಸರಕಾರ ಈ ಇಲಾಖೆಯನ್ನು ಕೇವಲ ಒಬ್ಬ ಮಂತ್ರಿ ಮತ್ತು ಒಬ್ಬ ಉಪಮಂತ್ರಿಗಳ ವಶಕ್ಕೆ ಕೊಟ್ಟರು, ಆದರೆ ಇವರು ಕೇವಲ ಹರಿಜನ ಮತ್ತು ಗಿರಿಜನರಿಗೆ ಮಾತ್ರ ಈ ಇಲಾಖೆ ಸಂಬಂಧಪಟ್ಟದ್ದಲ್ಲ. ಎಲ್ಲರಿಗೂ ಸಂಬಂಧಪಟ್ಟಿದೆ ಎಂಬ ವಾದವನ್ನು ಆಡಿಕೊಂಡು ಹೇಗೊ ತಪ್ಪಿಸಿಕೊಂಡು ಹೋಗೋಣವೆಂಬ ನೀತಿಯನ್ನು ಅನುಸರಿಸುವುದು ಖಂಡಿತವಾಗಿ ಸರಿಯಲ್ಲವೆಂಬುದಾಗಿ ನಾನು ಮಾನ್ಯ ಸಚಿವರಿಗೆ ತಿಳಿಸುತ್ತೇನೆ. ಇನ್ನು ಇಲಾಖೆಯಲ್ಲಿ ಬಹಳವಾಗಿ ಹಣ ದುರುಪಯೋಗವಾಗಿದೆ. ಈ ಇಲಾಖೆಯ ದುಡ್ಡನ್ನು ಯಾವ ಒಂದು ಕಾರ್ಯಕ್ಕೆ ವಿನಿಯೋಗಿಸಬೇಕೋ ಅದಕ್ಕೆ ವಿನಿಯೋಗಿಸದೆ ಪೋಲು ಮಾಡುತ್ತಿದ್ದಾರೆಂದು ತಿಳಿದುಬಂದಿದ್ದರಿಂದ ಅದನ್ನು ಈಗ ತನಿಖೆ ನಡೆಸಲಿಕ್ಕೆ ಒಬ್ಬ ಆಫೀಸರನ್ನು ನೇಮಕ ಮಾಡಿದ್ದೀರೆಂದು ತಿಳಿಸಿದರು. ಇದು ಬಹಳ ಸ್ವಾಗತಾರ್ಹವಾದುದು. ಆದರೆ ಅವರು ಇದನ್ನು ಸರಿಯಾದ ರೀತಿಯಲ್ಲಿ ವಿಮರ್ಶೆ ಮಾಡಿ, ತಪ್ಪಿತಸ್ಥರನ್ನು ಬೈಲಿಗೆ ತಂದು, ಮುಂದೆ ಆ ರೀತಿ ನಡೆಯದಹಾಗೆ ಮಾಡಿದರೆ ಮಾತ್ರ ಆ ಆಫೀಸರನ್ನು ನೇಮಕ ಮಾಡಿದ್ದಕ್ಕೆ ಸಾರ್ಥಕವಾದೀತು. ಇನ್ನೊಂದು ವಿಚಾರ ಹೇಳಿದರು. 17 ಮಂದಿಗಳನ್ನು ಈ ಇಲಾಖೆಯಿಂದ ತೆಗೆದ ವಿಚಾರ. ಇವರನ್ನು ಹಿಂದಿನ ಮಂತ್ರಿಗಳು ನೇಮಕ ಮಾಡಿದ್ದರು. ಅದನ್ನು ಕ್ರಮಬದ್ಧವಾಗಿ ಮಾಡಿಲ್ಲವೆಂದು ಎ. ಜಿ. ಅವರು ಆಕ್ಷೇಪಣೆ ಮಾಡಿದ್ದಾರೆ. ಅವರ ಪೈಕಿ ಒಬ್ಬರು 12 ವರ್ಷಗಳ ಕಾಲ ಸರ್ವಿಸ್ ಮಾಡಿದವರು. ಇನ್ನೊಬ್ಬರು Welfare Department ನಲ್ಲಿ ರಿಟೈರ್ಡ್ ಆಗಿ ಕೆಲಸಕ್ಕೆ ಹೋಗಿರುವವರು. ಇದರಿಂದ ಗೆಜೆಟೆಡ್ ರ್‍ಯಾಂಕ್‌ನಲ್ಲಿರುವ ಗ್ರಾಜುಯೇಟನ್ನು ಎಲ್ಲಿ ಕಳುಸುತ್ತಾರೆಂಬುದು ಬೇರೆ ಗೊತ್ತಿಲ್ಲ. ಸರ್ಕಾರದವರು ಮಾಡಿದ್ದೆಲ್ಲಾ ತಪ್ಪಾಗಿ ಹೋಗಿದೆ. ಪಿ.ಎಸ್.ಸಿ. ಯವರು ಅದಕ್ಕಾಗಿಯೇ ಒಪ್ಪಲಿಲ್ಲ. ಅವರು ಮಹಾರಾಜರ ಕಾಲದಲ್ಲಿ ಆಗ ವೆಲ್‌ಫೇರ್ ಆಫೀಸಿನಲ್ಲಿ ಕೆಲಸ ಮಾಡಿದಂತಹವರು. ಅವರಲ್ಲಿ ಯೋಗ್ಯತೆ ಇಲ್ಲವೋ ವಿದ್ಯೆ ಇಲ್ಲವೋ, ಅಂತು ಸ್ಪೆಷಲ್ಲಾಗಿ ಟ್ರೈನಿಂಗ್ ಆಗಿ ಬಂದವರು. ಅಂದಮೇಲೆ, ಇವರನ್ನು ಇದೇ ಇಲಾಖೆಯಲ್ಲಿ ದುಡ್ಡನ್ನು ಖರ್ಚು ಮಾಡದೆಯೇ ಇವರನ್ನು ನೇಮಕ ಮಾಡುವಾಗ ಈಗ ಅವರು

ಅರ್ಹರು ಎಂದು ಹೇಗೆ ಗೊತ್ತಾಯಿತೋ ! ಹೈಕೋರ್ಟು ಮತ್ತು ಸುಪ್ರೀಂ ಕೋರ್ಟುಗಳಲ್ಲಿ ಹೋದಮೇಲೆ ಅವರಿಗೆ ಆ ಅಧಿಕಾರ ಕೊಡಬೇಕು ಎಂಬ ಹೈಕೋರ್ಟಿನ ತೀರ್ಮಾನವನ್ನು ಇಟ್ಟು ಕೊಂಡು ಕೂಡಲೇ ಜಾರಿಗೆ ತಂದಿದ್ದಾರೆ. ಆದ್ದರಿಂದ ಆ ರೀತಿಯಲ್ಲಿ ಅಧಿಕಾರಿಗಳನ್ನು ಒಳಗೆ ತರಬಹುದು. ಈ ವಿಷಯದಲ್ಲಿ ಸುಪ್ರೀಂ ಕೋರ್ಟಿನವರು ಒಂದು ತೀರ್ಮಾನವನ್ನು ಕೊಟ್ಟು ಪ್ರೋಮೋಷನ್ನಿನಲ್ಲಿ ಅವರಿಗೆ ಅವಕಾಶವನ್ನು ಕೊಡದಿದ್ದರೆ ರಿಜರ್ವೇಷನ್ ನಿಯಮವನ್ನಾದರೂ ಅನುಸರಿಸಿ ಸರ್ಕಾರದವರು ಅವರಿಗೆ ಆ ಅಧಿಕಾರವನ್ನು ಕೊಡುತ್ತಾರೆಂದು ಹೇಳಿದ್ದಾರೆ. ಅಂದಮೇಲೆ ಅದನ್ನು ಇದುವರೆಗೆ ಏಕೆ ಜಾರಿಗೆ ತರಲಿಲ್ಲ ? ಹರಿಜನ ಮತ್ತು ಗಿರಿಜನ ಸೇವಕರು ಮತ್ತು ರಕ್ಷಕ ರಾಗಿರತಕ್ಕಂಥವರು ಅದನ್ನು ಏತಕ್ಕೆ ಜಾರಿಗೆ ತರಲಿಲ್ಲವೋ ಗೊತ್ತಿಲ್ಲ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆಯೋ ಅಲ್ಲಿ ಶೇಕಡ 18ರಷ್ಟು ನೇಮಕಮಾಡಿ ರೂಲ್ಸ್ ಪ್ರಕಾರ ಬಾಕಿಯವರನ್ನು ಮನೆಗೆ ಕಳುಹಿಸುತ್ತಿದ್ದಾರೆ. ಇದರಿಂದ ಅವರ ಪರ್ಸೆಂಟೇಜನ್ನು ಮುಂದಕ್ಕೆ ತರಲಿಲ್ಲ. ಈ ವಿಷಯವನ್ನು ಇಲಾಖೆಯವರೊಂದಿಗೆ ಕೇಳುತ್ತೇನೆ. ಇಲಾಖೆಯಲ್ಲಿ weaker section ಬಗ್ಗೆ ಅನೇಕರು ಕಣ್ಣು ಮುಚ್ಚಿಕೊಂಡು ಕೆಲಸ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಏನಾದರೂ ಇರಲಿ ಹೈಕೋರ್ಟಿನವರು ಸರ್ಕಾರದವರ ವಾದ ಏನೇ ಇರಲಿ ಅವರ ವಾದವನ್ನೇ ಡೆಫಿನಟ್ ಮಾಡಿಕೊಳ್ಳುವುದು ನಿಜವೆಂದು ಹೇಳಿದ್ದಾರೆ. ಆದ್ದರಿಂದ Social Welfare Office ನಲ್ಲಿರತಕ್ಕ ಅಧಿಕಾರಿಗಳು ಅಷ್ಟಾಗಿ ಪ್ರಯೋಜನವಿಲ್ಲ. ಅವರವರು ಚೆನ್ನಾಗಿ ಕೆಲಸಮಾಡದಿದ್ದರೆ ಅದು ಸರ್ಕಾರದ ಅವಗಾಹನೆಗೆ ಬಂದು ನಿಜವಾಗಿ ಅಂತಹವರನ್ನು ಸಸ್ಪೆಂಡ್ ಅಥವಾ ಡಿಸ್‌ಮಿಸ್ ಮಾಡಬೇಕಾಗಿ ಬರುತ್ತದೆ. ಆದ್ದರಿಂದ ನಾನು ಸರ್ಕಾರಕ್ಕೆ ಅಪೀಲು ಮಾಡುವುದೇನೆಂದರೆ ಮನಸ್ಸಿಗೆ ನೋವು, ಕಷ್ಟ ಉಂಟುಮಾಡುವವರನ್ನು ಪೋಲೀಸರಿಗೆ ಕೊಡಿ. ಏಕೆಂದರೆ ಈಗ ಹರಿಜನವೆಂಬ ಪ್ರಶ್ನೆ ಇಲ್ಲ, ಹರಿಜನ-ಗಿರಿಜನವೆಂಬ ರಿಯಾಯಿತಿ ಬೇಡ. ಅವರೂ ಸಹ ಒಳ್ಳೆಯವರಾಗಿ ಅಕ್ಕಪಕ್ಕದವರ ಹಾಗೆ ಕಾನೂನು ಬದ್ಧರಾಗಿರಬೇಕು. ಮುಖ್ಯವಾಗಿ ದಲಿತವರ್ಗದವರು ಎಲ್ಲರೊಡನೆ ಸಾಮೂಹಿಕವಾಗಿ ಸೇರುವುದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆಮಾಡಬೇಕೆಂದು ನಾನು ಕೋರುತ್ತೇನೆ. ಆ ರೀತಿ ಅನೇಕ ಕಡೆಗಳಲ್ಲಿ ಆಗದೆ ಎಷ್ಟೋ ಸಂಸಾರಗಳು ದುಃಖದಿಂದ ಕೂಡಿವೆ. ಆ ವಿಷಯವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅವರ ಅಭಿವೃದ್ಧಿಯ ಬಗ್ಗೆ ತಕ್ಕ ಏರ್ಪಾಡುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಹಿಳಾ ಅಭಿವೃದ್ಧಿ ಕೇಂದ್ರಗಳನ್ನು ಅಲ್ಲಲ್ಲಿ ತೆರೆಯಲಾಗುತ್ತಿದೆ ಎಂದು ಹೇಳಿದ್ದಾರೆ. ಅದು ಸಂತೋಷದ ವಿಚಾರ. ಇದಕ್ಕೆ ಸೋಷಿಯಲ್ ವೆಲ್‌ಫೇರ್ ಬೋರ್ಡಿನಲ್ಲಿ ಹೆಚ್ಚಿನ ಹಣವನ್ನೂ ಸಹ ಒದಗಿಸಿದ್ದಾರೆ. ಸೋಷಿಯಲ್ ವೆಲ್‌ಫೇರ್ ಶಾಖೆಯ ಸಚಿವೆಯರು ಇದರಲ್ಲಿ ನಾಯಕತ್ವವನ್ನು ವಹಿಸಿ, ತುಂಬಾ ಕೆಲಸಮಾಡುತ್ತಿದ್ದಾರೆ. ಸೋಷಿಯಲ್ ವೆಲ್‌ಫೇರ್ ಬೋರ್ಡಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನ ಮಹಿಳಾ ಅಭಿವೃದ್ಧಿ ಸಂಸ್ಥೆಗಳಿಗೆ ಏನು ಹಣವನ್ನು ಒದಗಿಸಿದ್ದಾರೆಯೋ ಆ ಹಣವನ್ನು ಬೇರೆ ಮಹಿಳಾ ಸಂಸ್ಥೆಗೆ, ಬೇರೆ ಮಹಿಳೆಯವರನ್ನು ಸುಧಾರಿಸುವುದಕ್ಕೆ ಸಂಬಂಧಪಟ್ಟ ಕೆಲಸಗಳಿಗೆ ವಿನಿಯೋಗಿಸುವುದು ಸರಿಯಲ್ಲ. ಆ ಮಹಿಳಾ ಸಂಸ್ಥೆಗಳಿಗೆ ಖರ್ಚುಮಾಡುವುದಕ್ಕೆ ಬೇಕಾಗಿರತಕ್ಕ ಹಣವನ್ನು ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಬೋರ್ಡಿನಿಂದ ತರಿಸಬೇಕು. ಈ ದೇಶದಲ್ಲಿರತಕ್ಕ ನಿರ್ಗತಿಕರಿಗೆ ಮತ್ತು ದುಃಖಕ್ಕೆ ಈಡಾಗಿರತಕ್ಕವರಿಗೆ ಈ ಬಡ್ಜೆಟ್ಟಿನಲ್ಲಿ ಯಾವ ರಕ್ಷಣೆಯನ್ನೂ ಮಾಡಿಕೊಟ್ಟಿಲ್ಲ. ಇದರಲ್ಲಿ ಕೇವಲ ದೊಡ್ಡ ದೊಡ್ಡ ಸಾಹುಕಾರರುಗಳಿಗೆ, ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಅನುಕೂಲವಾಗಿದೆಯೇ ಹೊರತು, ಸಾಮಾನ್ಯ ಮನುಷ್ಯನಿಗೆ ಸಾಮಾನ್ಯ ಜನತೆಗೆ ಅನುಕೂಲಮಾಡಿಕೊಟ್ಟಿಲ್ಲ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri D. VENKATARAMAIAH (Robertsonpet).—I rise to make a few observations on the budget estimates proposed by the Finance Minister for the year 1964-65. Yesterday the Leader of the Opposition initiating the discussion on the budget proposals in his usual, exaggerated manner, compared the administration to a dilapidated cart tied to the yoke with old bullocks. I would only tell the Leader of the Opposition that the cart which is being run by the Mysore Government is a cart made of iron and steel and that the bullocks are not old but experienced bullocks. We all have seen when we travel in automobiles at nights, that the bullocks give way to motor vehicles at night, even though the cartmen is asleep.

(SRI. D. VENKATARAMAIAH)

That is because of their experience, just as the men running the administration here are experienced.

Members spoke about Sharavathi, Krishna, Arkavati, Cauvery and so on but in my district, namely Kolar, none of these flow, excepting the Palar which is dry as dust for 11½ months in a year. When I compare the budget allotment for the other districts with Kolar, I find very little allotments have been made, it is hardly 4 or 5 per cent and I hope the Finance Minister will give redress to this district.

Members are aware that with the amalgamation of the Mysore Mines and the Champion Reef Mines, retrenchmet of thousands of workers are going to take place. A committee has been constituted for the purpose, of which Hon'ble Finance Minister is a Member. My suggestion is that till the Earth Moving Factory is established, retrenchment from the gold mines should not take place. Alternatively, as the work on the new factory proceeds and as and when people from the Mines are absorbed, simultaneous retrenchment could take place in the Mines but the workers should not be left on the roads. Otherwise, the unemployment which is already heavy in K.G.F. will increase giving rise to a number of problems.

For the earth moving machinery factory, the Government of Mysore have released about 1,600 acres of land. Meanwhile, I am told, that of these 1,600 acres, one or 2 acres have been disposed of by the Revenue Department at the instance of a very influential person. I am sorry to bring this to the notice of the House and I request the Government to look into the matter immediately. Land which was selling at Rs. 40 or 50 in the area has shot up to 6 or 7 thousand rupees. Immediate action should be taken and the land released for the location of the factory should not be disposed of. An application was filed on one day, and within 2 or 3 days, the land has been granted with very great speed.

SRI B. D. JATTI.—If tha Hon'ble Member can given the information to me today privately, I will see that something is done. Our intention is to give the land for the purpose of the factory to be set-up for manufacturing heavy earth moving machinery and also the Minting Factory.

SRI SANJEEVANATH AIKALA (Suratkal).—When big projects come into being, naturally the price of neighbouring lands goes. Government must be aware of it.

SRI B. D. JATTI.—The Hon'ble Member did not understand what we were discussing. He is most unfortunate.

SRI D. VENKATARAMAIAH.—Now that the gold mine has been taken over by the Government of India, the management is vested with a Mining Board, of which Hon'ble Finance Minister is a Member. In this connection I like to submit that the factory to be located there is virtually an unit of the H. A. L. at Bangalore and the office has been located at Bangalore and not at K. G. F. My information is that most

of the officers appointed do not belong to Mysore but come from Kerala or Madras or other provinces.

My request to the Finance Minister is, sufficient and early attention must be given to that and see that the majority of the personnel that will have to be taken into the factories should be Mysoreans and Mysoreans alone. I am well aware that this is a concern of the Government of India. But still in view of the retrenchment that takes place in the mines, they should be given first preference.

SRI B. D. JATTI.—Sir, the point is, if technical personnel required for the running of the factory is available in Mysore State, they will have given priority. If they are not available, we must take from outside. That is what has occurred today.

SRI D. VENKATARAMAIAH.—Sir, in view of the fact that the Chairman of this Board is the Finance Minister of Government of India, why not sufficient pressure and influence be used to have the Finance Minister of Mysore State as the Vice-Chairman of that Board? It is then and then alone that we can have the scope of safe-guarding the interest of Mysoreans. Our experience in the other factories is entirely different.

Next, Sir, about the Central Workshop at K. G. F. In that connection my suggestion is, there are already workshops in Champion Reefs, Mysore Mines and Nandidurg. One of these mines might well be developed in a Central Workshop and additional finances is not necessary for an additional workshop. It is regrettable that at a cost of nearly six lakhs of rupees the building for a School of Mines......

SRI B. D. JATTI.—Sir, let there not be any mistake here so far as the Central Workshop is concerned. It is divided into two stages. First it consists of all the articles available in the K. G. F. and they will be made use of by the K. G. M. U. This new Central Factory which is to be started is to take up work from the general public.

SRI D. VENKATARAMAIAH.—Sir, regarding the Schools of Mines at K. G. F., for the last 2 or 3 years assurance is being given by Government that the school is going to be up-graded to Mining College. It has not been done yet. More than that, a building at the cost of six lakhs of rupees has been built and the construction was completed one year back. I do not know what obstacle is there to have the building used. The rumour is, either they have got the Prime Minister or the President for opening this and till then, this will not be opened at all. I really fail to understand this.

MR. SPEAKER.—The Hon'ble Member may ask for its early utilisation and use and occupation. Let him not bring in names here.

SRI D. VENKATARAMAIAH.—Very well Sir. My only request is that the building which is ready should be opened immediately.

Next, Sir, I congratulate the Minister for Agriculture for having brought a Bill for Agriculture College. In this connection I want to submit that unless we utilise the money that is going to be given by

(SRI D. VENKATARAMAIAH)

Government of India immediately, I feel there is a possibility of the Andhra Government taking it away. Therefore, Government should take immediate steps. A Bill has been passed into Act by the Andhra Legislature and they are going to utilise this amount unless we come into the field first. I request the Finance Minister to look into this matter.

Sir, so far as starting of sugar factories is concerned, we find in the budget and the speech of the Finance Minister, the name of four or five places, I do not know what happened to the request of Bangarpet Committee which was formed in this connection and which has also applied for a licence to have a sugar factory there. Sufficient data and material is there and I request the Finance Minister that from among the 5 or 6 factories that are going to be started, one should be started at Bangarpet.

SRI B. D. JATTI.—There is already one at Gowribidnur.

SRI D. VENKATARAMAIAH.—Sir, I am aware of it. Gowribidnur factory can be used only for 3 or 4 taluks round about. At Bangarpet the sugar cane production is more than Gowribidnur. As a matter of fact, 3 or 4 lakhs of rupees have already been collected for this and so this request might kindly be viewed with great generosity.

Sir, I preface my speech by saying that there is neither Cauvery nor Krishna in Kolar District. So far as Bangarpet is concerned, there is the Palar river which goes into Madras State. There is a good tank atchkat where sugarcane can been grown and a sugar factory could be established there. When I speak about Kolar District, I must say that the irrigation pump sets that are now given are not sufficient and more should be given.

An application for a textile factory to be located at Kolar is still pending with the Mysore Government. They should look into the matter and give redress.

Then, Sir, the agitation to have a District and Sessions Judge's Court at Kolar is there since a very long time. I do not know what objections and hurdles ars there to have a District and Session Judge's Court at Kolar. As things stand to-day, there are 46 session cases pending in that district. Fortunately for us, the District Judges who are posted for the last 6 or 7 years have cleared much of the arrears. But, there are a number of cases which are to be disposed of immediately because there are persons who are in custody for nearly a year. I request the authorities to establish a District and Sessions Court located in Kolar.

Then Sir, yesterday I learnt that a railway link from Marikuppam to Kuppam, *i.e.*, Madras-Bangalore line would be laid and the orders have already been passed by the Central Government. I do not know definitely about that. I request the Government to look into the matter and see that the line is given.

Coming to the Co-operation Department, it is really a very good decision that has been taken by the Hon'ble Minister for Co-operation to have District Industrial Co-operative Bank in every district. But, the

personnel of the societies, the nomination is respect of Directors and all that has not yet been done. I request Government to take early steps in this matter. With these words, I commend the Budget for the approval of this House.

4-00 P. M.

† ಶ್ರೀ ಅಂಗಡಿ ಚನ್ನಬಸಪ್ಪ (ಹಡಗಲಿ).—ಸ್ವಾಮಿ, ಅರ್ಥಸಚಿವರು 1964-65ನೆಯ ಸಾಲಿಗೆ ಈ ಸಭೆಯ ಮುಂದಿಟ್ಟಿರುವ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಸ್ವಾಗತಾರ್ಹವಾದುದೇನೂ ಇಲ್ಲದ ಕಾರಣ ನಾನಿದನ್ನು ಸ್ವಾಗತ ಮಾಡಲು ಅಸಮರ್ಥನಾಗಿದ್ದೇನೆ. ಈಗ ನಮ್ಮೆಲ್ಲರಿಗೂ ಗೊತ್ತಿರುವಂತೆ ನಮ್ಮ ದೇಶದಲ್ಲಿ ಹಾಗೂ ರಾಜ್ಯದಲ್ಲಿ, ಪಾರ್ಲಿಮೆಂಟರಿ ಪದ್ಧತಿಯ ಸರಕಾರಗಳು ನಡೆಯುತ್ತಿವೆ. ಪಾರ್ಲಿಮೆಂಟರಿ ಸರಕಾರ ಪದ್ಧತಿ ಎಂದರೆ ನಾವು ಪ್ರಜಾಪ್ರಭುತ್ವ ಅಥವಾ ಡೆಮೋಕ್ರಸಿ ಎಂದು ಹೇಳುತ್ತೇವೆ. ಆದರೆ ನಾವು ಗಂಭೀರವಾಗಿ ಯೋಚನೆಮಾಡಿ ನೋಡಿ ಈ ಪದ್ಧತಿ ಏನೆಂದು ನಾವು ಆಳವಾಗಿ ಅಭ್ಯಾಸ ಮಾಡಿಲ್ಲ. ಇಂಗ್ಲೆಂಡಿನಲ್ಲಿ ಒಬ್ಬ ಮನುಷ್ಯನನ್ನು ಪಾರ್ಲಿಮೆಂಟರಿ ಸರಕಾರ ಪದ್ಧತಿಯ ಅರ್ಥವೇನೆಂದು ಕೇಳಿದಾಗ ಅವನು 'ಬ್ರೆಡ್ ಫಾರ್ ಆಲ್, ಕೇಕ್ ಫಾರ್ ಎ ಫ್ಯೂ' ಎಂದು ಹೇಳಿದನಂತೆ. ಇದನ್ನು ಸುಲಭವಾಗಿ ಕನ್ನಡಕ್ಕೆ ತರ್ಜುಮೆ ಮಾಡಿದರೆ, ಎಲ್ಲರಿಗೂ ರೊಟ್ಟಿ ಕೆಲವರಿಗೆ ಹೋಳಿಗೆ ಎಂದು ಮಾಡಬಹುದು. ಇದು ಪಾರ್ಲಿಮೆಂಟರಿ ಸರಕಾರ. ಇಂಗ್ಲೆಂಡಿನಲ್ಲಿಯೂ ಕೂಡ ಪಾರ್ಲಿಮೆಂಟರಿ ಪದ್ಧತಿಯ ಸರಕಾರ ಜಾರಿಯಲ್ಲಿದೆ. ಆದರೆ ಇಲ್ಲಿನ ಕಾಂಗ್ರೆಸ್ ಸಂಸ್ಥೆ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ನಮ್ಮ ಗುರಿ ಎಂದು ಹತ್ತು ವರ್ಷಗಳ ಕೆಳಗೆ ಸಾರಿ ಅದನ್ನು ಇಟ್ಟುಕೊಂಡಿದ್ದಾರೆ.

[Chairman (SMT. NAGARATHNAMMA HIREMATH) in the Chair.]

ಸ್ವಾಮಿ, ಈ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಂಬ ಪದವನ್ನು ಹಾಕಿ ಜನರಲ್ಲಿ ಕಳವಳವನ್ನುಂಟು ಮಾಡಿದ್ದಾರೆ. ಪಾರ್ಲಿಮೆಂಟರಿ ಪದ್ಧತಿಯಲ್ಲಿ ಕೆಲವರಿಗೆ ಹೋಳಿಗೆ ಸಿಕ್ಕಿದರೆ, ಸೋಷಿಯಲಿಸ್ಟಿಕ್ ಪ್ಯಾಟರ್ನ್‌ನಲ್ಲಿ ಸಮಾನತೆ ಸಿಕ್ಕುತ್ತದೆ. ಆದರೆ ಕಾಂಗ್ರೆಸ್ ಸರಕಾರ ಈ ಸಮಾನತೆಯನ್ನು ದೊರಕಿಸುವುದಕ್ಕೆ ಪ್ರಯತ್ನಪಡುತ್ತೇವೆ ಎಂಬ ಉದ್ದೇಶದಿಂದ ಹೊರಟರು. ಅವರು ಏನು ಮಾಡಿದ್ದಾರೆ ತಮ್ಮ ಗುರಿ ಸಾಧಿಸುವುದಕ್ಕೆ ಎಂಬುದನ್ನು ನೋಡಬಹುದು. ಭೂ ಸುಧಾರಣೆ ಆಗಬೇಕೆಂದು ಹೈ ಕಮಾಂಡಿನವರು ಆದೇಶ ಕಳುಹಿಸುತ್ತಿದ್ದಾರೆ, ಈ ಸಭೆಯಲ್ಲಿ ಒಂದು ಕಾಯಿದೆ ಕೂಡ ಅಂಗೀಕಾರವಾಗಿದೆ. ಆದರೂ ಅದು ಜಾರಿಗೆ ಬಂದಿಲ್ಲ. ನಿಜವಾಗಿ ಅದನ್ನು ಜಾರಿಗೆ ತರುವುದಕ್ಕೆ ಈ ಸರಕಾರ ಅಸಮರ್ಥವಾಗಿದೆಯೆಂದು ಹೇಳಬಹುದು. ಅವರು ಜಾರಿಗೆ ತಂದಿರುವುದಕ್ಕೆ ಏನಾದರೂ ಕಾರಣ ಹೇಳಬಹುದು ಸುಪ್ರೀಮ್ ಕೋರ್ಟಿನ ಜಡ್ಜ್‌ಮೆಂಟ್ ತೋರಿಸಬಹುದು. ಆದರೆ ಇವರಿಗೆ ಮನಸ್ಸಿದ್ದರೆ ಬಹುಭಾಗವನ್ನು ಜಾರಿಗೆ ತಂದು ಆಮೇಲೆ ತಿದ್ದುಪಡಿ ತಂದು ಮಿಕ್ಕುದನ್ನು ಜಾರಿಗೆ ತರಬಹುದು. ಭೂ ಸುಧಾರಣೆಯ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಸಮಾಜವಾದದ ಈ ಒಂದು ಮುಖ್ಯ ಕಾರ್ಯವನ್ನು ಮಾಡಲು ಈ ಸರಕಾರ ಅಸಮರ್ಥವಾಗಿದೆ.

ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಹಳ್ಳಿಗಾಡಿನ ಜನರಿಗೆ ಎಷ್ಟು ಸಾಲವಿದೆ ಎನ್ನುವ ಬಗ್ಗೆ ನಮ್ಮ ರಾಜ್ಯ ಸರಕಾರದಲ್ಲಿ ಅಂಕಿ ಅಂಶಗಳಿಲ್ಲ. ರೈತನ ಸಾಲವೆಲ್ಲ ಪೂರ್ಣವಾಗಿ ತೀರಿದ ಹೊರತು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಯಾವ ಯೋಜನೆಗಳನ್ನು ಮಾಡಿದರೂ ಸಫಲವಾಗುವುದಿಲ್ಲ. ನಿಜವಾಗಿ ಡೆಟ್‌ಮಾರಟೋರಿಯಂ ಕಾನೂನನ್ನು ಅಂಗೀಕಾರ ಮಾಡುವುದಕ್ಕೆ ತಯಾರಾಗಿದ್ದಾರೆಯೆ ಎಂದು ಕೇಳುತ್ತೇನೆ. ಇಲ್ಲದಿದ್ದರೆ ಇವರಂದು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಗುರಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಬಿ. ಡಿ. ಜತ್ತಿ.—ಡೆಟ್ ಮಾರಟೋರಿಯಂ ಬಹಳ ಹಳೆಯದಾಗಿದೆ. ಸೋಷಿಯಲಿಸಮನ್ನು ನಾವು ವಿರೋಧ ಮಾಡಿಲ್ಲ. ಬೊಂಬಾಯಿನಲ್ಲಿ ಮೊದಲು ಆ ಕಾನೂನಿತ್ತು.

ಶ್ರೀ ಅಂಗಡಿ ಚನ್ನಬಸಪ್ಪ.—ಇಲ್ಲಿನ ವಿಷಯ ಹೇಳಬೇಕು. ಇಂತಹ ಒಂದು ಪ್ರಸಂಗದಲ್ಲಿ ನಿಜವಾಗಿಯೂ ಸೋಷಿಯಲಿಸ್ಟ್ಸ್ ಎಂದು ಕರೆದುಕೊಳ್ಳುತ್ತಿದ್ದರೆ, ಸೋಷಿಯಲಿಸಂನಲ್ಲಿ ನಂಬಿಕೆಯಿದ್ದರೆ ಅದಕ್ಕೆ ಬೇಕಾದ ಕರ್ತವ್ಯಗಳನ್ನು ಮಾಡಿದರೆ ಸರಿಹೋಗುತ್ತದೆ.

ಆಯವ್ಯಯದ ಅಂದಾಜು ಪಟ್ಟಿಯ ಮೇಲೆ ಮಂತ್ರಿಗಳು ಭಾಷಣ ಮಾಡುವಾಗ ತಮ್ಮ ಸರಕಾರದ ಬಗ್ಗೆ ತುಂಬಾ ಹೊಗಳಿಕೊಂಡಿದ್ದಾರೆ. ರಾಷ್ಟ್ರದ ರಕ್ಷಣಾ ನಿಧಿಗೆ ಇಷ್ಟು ಹಣ ಕೊಟ್ಟೆವು, ಇಷ್ಟು

(ಶ್ರೀ ಅಂಗಡಿ ಚನ್ನಬಸಪ್ಪ)

ಬಂಗಾರ ಕೊಟ್ಟೆವು ಎಂದು ಹೇಳಿದ್ದಾರೆ. ನನಗೊಂದು ಸುದ್ದಿ ಬಂದಿದೆ.. ಬಿಜಾಪುರ ಜಿಲ್ಲೆಯಲ್ಲಿ ಇಂದಿರಾ ಗಾಂಧಿಯವರನ್ನೂ ಮಾನ್ಯ ಮುಖ್ಯ ಮಂತ್ರಿಯವರನ್ನೂ ತೂಕ ಮಾಡಿದ. ಬಂಗಾರವನ್ನು ನಿಜವಾಗಿಯೂ ರೈತರೂ ಮತ್ತು ಜನರೂ ಕೊಡಲಿಲ್ಲ. ಆದರೆ ಅವರನ್ನು ಒತ್ತಾಯ ಮಾಡಿ ಬಂಗಾರ ಇಲ್ಲವೆಂದು ಹೇಳಿದವರಿಂದ ಹಣವನ್ನು ವಸೂಲು ಮಾಡಿ, ತೊಲಕ್ಕೆ 150 ರೂಪಾಯಿನಂತೆ ಹುಬ್ಬಳ್ಳಿ ಮತ್ತು ಗೋವಕ್ಕೆ ಹೋಗಿ ಕೊಂಡು ಚಿನ್ನವನ್ನು ತಂದಿದ್ದಾರೆ. ಅಲ್ಲದೆ ಪ್ರತಿ ಶಾಲೆಗೂ ಕಾರ್ಯಕರ್ತರು ಮತ್ತು ಸ್ವಾಗತ ಸಮಿತಿಯ ಸದಸ್ಯರೂ ಹೋಗಿ ನಿಮ್ಮ ಶಾಲೆಯಿಂದ ಐದು ತೊಲ ಕೊಡಿ ಹತ್ತು ತೊಲ ಕೊಡಿ ಎಂದು ಹೇಳಿದರು. ಶಾಲಾ ಉಪಾಧ್ಯಾಯರಲ್ಲಿ ಬಂಗಾರವಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ ; ಅವರಿಂದ ಹಣವನ್ನು ವಸೂಲು ಮಾಡಿಕೊಂಡು ಬಂದು ಶಾಲೆಯವರು ಇಷ್ಟು ಕೊಟ್ಟರೆಂದು ಪತ್ರಿಕೆಗಳಲ್ಲಿ ಪ್ರಕಟಿಸಿದರು. ಇದನ್ನೇಕೆ ಹೇಳಿದೆನೆಂದರೆ, ಅವರ ತೂಕ ಚಿನ್ನವನ್ನು ಕೊಟ್ಟರು, ಆದರೆ ಅದು ಎಲ್ಲಿಂದ ಬಂತು ! ರಕ್ಷಣಾ ನಿಧಿಗೆ ಹಣವನ್ನು ಕೊಡಿಸುವಾಗ ಚಿನ್ನದ ಹತೋಟಿ ಆಜ್ಞೆಯನ್ನು ಉಲ್ಲಂಘನೆ ಮಾಡಿಯಾದರೂ ತೂಕ ಮಾಡಿ ಎಂದು ಎಲ್ಲಿಯೂ ಇಲ್ಲ. ನಿಜವಾಗಿ ಜನರು ಸಹಾಯ ಮಾಡಿದ್ದಾರೆಯೆ, ನಿಜವಾಗಿ ಎಷ್ಟು ಬಂಗಾರ ಬಂತು, ಎಷ್ಟು ಜನರು ಕೊಟ್ಟರು ಎನ್ನುವುದನ್ನು ಹೇಳುವುದಿಲ್ಲ. ದೊಡ್ಡ ದೊಡ್ಡ ಕಾರ್ಖಾನೆಯವರು, ಸಕ್ಕರೆ ಕಂಪನಿಯವರು ಇಂಥವರಿಂದ ತೆಗೆದುಕೊಂಡಿದ್ದಾರೆ ; ಲಕ್ಷಾಂತರ ರೂಪಾಯಿಗಳನ್ನು ನಿಜವಾಗಿಯೂ ಸಾಮಾನ್ಯ ಜನರು ಕೊಟ್ಟಿಲ್ಲ. ಎಷ್ಟು ಲಕ್ಷ ಜನರು ಕೊಟ್ಟರೆಂದು ಹೇಳಲಿ. ಯಾರಲ್ಲಿಯೋ ದಬ್ಬಾಳಿಕೆ ಮಾಡಿ ತಂದು ನಮ್ಮ ರಾಜ್ಯದಿಂದ ರಾಷ್ಟ್ರದ ರಕ್ಷಣಾ ನಿಧಿಗೆ ಇಷ್ಟು ಕೊಟ್ಟು ಸಹಾಯ ಮಾಡಿದ್ದೇವೆಂದು ಹೇಳುತ್ತಾರೆ.

ನಾವೆಲ್ಲರೂ ಸ್ವಾಗತಿಸುತ್ತೇವೆಂಬ ಭ್ರಮೆಯಿಂದ ಶ್ರೀಮಾನ್ ಜತ್ತಿಯವರು ವೃದ್ಧಾಪ್ಯ ವಿರಾಮ ವೇತನ ಎಂದು ಮಾಡಿದ್ದಾರೆ.. ಆದರೆ ಇದಕ್ಕೆ ಆಯವ್ಯಯದ ಪಟ್ಟಿಯಲ್ಲಿ ಹಣವನ್ನೊದಗಿಸಿಲ್ಲ. 70 ವರ್ಷ ವಯಸ್ಸಾದ ಅನಾಥರು ಎಂದರೆ ಯಾರು ಡೆಸ್ಟಿಟ್ಯೂಟ್ಸ್ ಕಾನೂನನ್ನು ಜಾರಿಗೆ ತಂದಿದ್ದಾರೆಯೆ ಎನ್ನುವುದು ಗೊತ್ತಿಲ್ಲ. ಒಬ್ಬ ಮುದುಕ ಇದ್ದಾನೆ ಅವನ ಮಗ ಅವನಿಗೆ ರಕ್ಷಣೆ ಕೊಡುವುದಿಲ್ಲ, ಅಂಥ ಸಂದರ್ಭದಲ್ಲಿ ಅವನು ಮೇಂಟೆನೆನ್ಸ್‌ಗಾಗಿ ಕೋರ್ಟಿಗೆ ಹೋಗುವುದಕ್ಕಾಗುವುದಿಲ್ಲ ನಮ್ಮ ಹಿಂದೂ ಲಾ ಪ್ರಕಾರ. ಹೆಣ್ಣು ಮಕ್ಕಳಾದರೆ ಮಾತ್ರ ಹೋಗಬಹುದು. ಹೀಗಿದ್ದರೂ ಶಹಭಾಸ್‌ಗಿರಿ ಪಡೆಯಬೇಕೆಂದು ಹಣಕಾಸಿನ ಸಚಿವರು ಇಂತಹ ಒಂದು ವಿಷಯವನ್ನು ನಮ್ಮ ಮುಂದಿಟ್ಟಿದ್ದಾರೆ. ಇದು ನೋಡುವವರಿಗೆ ಇವರೇನೋ ಹೊಸದಾಗಿ ತಂದರೆಂದು ಕಾಣುತ್ತದೆ. ಬಜೆಟ್ ಭಾಷಣವನ್ನು ನೋಡಿದಾಗ ಇವರನ್ನು ಅಭಿನಂದಿಸಬೇಕೆಂಬ ಅಭಿಪ್ರಾಯ ಬಂತು. ಇದರ ಬಗ್ಗೆ ಬಜೆಟ್ ಪ್ರೊವಿಜನ್ ಇಲ್ಲ ಎಂಬುದು ಓದಿ ನೋಡಿದ ಮೇಲೆ ಗೊತ್ತಾಯಿತು. ಡೆಸ್ಟಿಟೂಟ್ಸ್ ಆಗಿದ್ದವರು 70 ವರ್ಷಗಳ ನಂತರ ಬದುಕುವುದಕ್ಕೆ ಸಾಧ್ಯವಿಲ್ಲ ಎಂದು ನನಗೆ ಅನಿಸುತ್ತದೆ. ಚೆನ್ನಾಗಿ ಆರೋಗ್ಯ ಕಾಪಾಡಿಕೊಂಡು ಬಂದವರು, ಹೆಚ್ಚು ಕಷ್ಟ ಪಡದೇ ಇರತಕ್ಕಂಥವರು, ಆರ್ಥಿಕ ಸ್ಥಿತಿ ಉತ್ತಮ ಇರತಕ್ಕಂಥವರು ಮಾತ್ರ 70 ವರ್ಷಗಳ ನಂತರ ಸಹ ಬದುಕುತ್ತಾರೆ. ಕೂಲಿಕಾರರಾಗಲಿ ದುಡಿಯುವವರಾಗಲಿ ಹೆಚ್ಚು ಕಾಲ ಬದುಕುವುದಿಲ್ಲ. 70 ವರ್ಷದ ಲಿಮಿಟ್ ಇಟ್ಟಿರುವುದರಿಂದ ಯಾರಿಗೂ ಸಹಾಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಲು ಬಯಸುತ್ತೇನೆ.

Sri B. D. JATTI.—The Madras Government have tried this system. They have fixed the age at 70. For the first time, it was difficult for them to get correct number. They did not know what amount they would spend. They provided 40 lakhs of rupees. Next year, when it was widely known when they got correct information, they are now spending about a crore of rupees.

Sri V. S. PATIL.—How are you going to define the word 'destitute' ?

Sri B. D. JATTI.—We have got sufficient information from Madras where they have already introduced this two years ago. We also invite the suggestion of the Hon'ble Members by way of improvement. Our intention is to help those who are destitute and those who are over 70 years. There is no concealing.

ಶ್ರೀ ಅಂಗಡಿ ಚನ್ನಬಸಪ್ಪ.—ಎರಡನೆಯದಾಗಿ 300 ರೂಪಾಯಿಗಿಂತ ಕಡಿಮೆ ಸಂಬಳ ಬರತಕ್ಕಂಥ ಸರಕಾರಿ ನೌಕರರಿಗೆ 5 ರೂಪಾಯಿ ತುಟ್ಟಿ ಭತ್ಯ ಕೊಡಬೇಕೆಂದು ಮಾನ್ಯ ಅರ್ಥಸಚಿವರು ಸೂಚನೆ ಮಾಡಿದ್ದಾರೆ. ಹಿಂದಕ್ಕೊಮ್ಮೆ ನೂರು ರೂಪಾಯಿವರಗೆ ಸಂಬಳ ಪಡೆಯುತಕ್ಕವರಿಗೆ ಐದು ರೂಪಾಯಿ ಕೊಡಬೇಕೆಂದು ಆಜ್ಞೆಯಾಗಿತ್ತು. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ನನಗೆ ಗೊತ್ತಿರುವ ಹಾಗೆ ತಾಲ್ಲೂಕು ಬೋರ್ಡು ನೌಕರರಿಗೆ 1957 ರ ಪೇ ಸ್ಕೇಲ್ಸ್ ಆಗಲಿ 1961ರ ರಿವಿಜನ್ ಆಗಲಿ ಕೊಟ್ಟಿಲ್ಲ. 1963 ರಲ್ಲಿ ಅನ್ವಯಿಸಿದ ಪೇ ಸ್ಕೇಲ್ ಅಥವಾ ಐದು ರೂಪಾಯಿ ಹೆಚ್ಚುವರಿ ಕೊಟ್ಟಿಲ್ಲ. ಈ ಹಣ ಸ್ಯಾಂಕ್ಷನ್ ಆಗದೆ ಸರಿಯಾಗಿ ಜಾರಿಗೆ ಬರುವುದಿಲ್ಲ. ಇದನ್ನು ಜಾರಿಗೆ ಯಾವಾಗ ಕೊಡುವುದು ?

ಶ್ರೀ ಬಿ. ಡಿ. ಜತ್ತಿ.—ನಾನು ಬಳ್ಳಾರಿಗೆ ಹೋದಾಗ್ಗೆ ಈ ಬಗ್ಗೆ ಸ್ವತಃ ನಾನು ಚೌಕಾಶಿ ಮಾಡಿದ್ದೇನೆ. ಕಂಪ್ಲೀಟ್ ಇನ್‌ಫರ್‌ಮೇಷನ್ ಕಳಿಸಿರಿ. ಎಲ್ಲ ಹಣ ಮಂಜೂರು ಮಾಡುತ್ತೇವೆ. If he sends detailed information I will assure the Hon'ble Member, before he leaves for his place after this Session, I will sanction all the money.

ಶ್ರೀ ಅಂಗಡಿ ಚನ್ನಬಸಪ್ಪ.—ಸ್ವಾಮಿ, ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿ ಮತ್ತು ಸ್ಟೋರ್ಸ್ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಸ್ಟೋರ್ಸ್ ಚೆನ್ನಾಗಿ ಕೆಲಸ ಮಾಡುತ್ತಾ ಇದೆಯೇ ಎಂಬುದು ಗೊತ್ತಿಲ್ಲ. ಫಾರ್ಮಿಂಗ್ ಸೊಸೈಟಿಮಾತ್ರ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಒಬ್ಬ ಮನುಷ್ಯ ತನ್ನ ಹೆಂಡತಿ ಮಗ ಮಗಳು ಅಳಿಯ ಸೊಸೆ ಹೀಗೆ ಎಲ್ಲರೂ ಹೆಸರುಗಳನ್ನು ಸೇರಿಸಿ ಹತ್ತು ಜನ ಮೆಂಬರ್ಸ್ ಮಾಡಿ ಒಂದು ಸೊಸೈಟಿ ಪ್ರಾರಂಭಿಸಿ ಸರಕಾರದಿಂದ ದೊರೆಯುವ ಸಾಲ ಪಡೆಯುತ್ತಿರುವುದು ನಮ್ಮೆಲ್ಲರಿಗೂ ಗೊತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಒಂದು ಸೊಸೈಟಿ ಇದೆ. ಅಗ್ರಿಕಲ್ಚರಲ್ ಡಿಪಾರ್ಟಮೆಂಟಿನ ಡೆಪ್ಯೂಟಿ ಡೈರೆಕ್ಟರರ ಮಿಸೆಸ್ ಅವರು ಛೇರಮನ್‌ರಾಗಿ ನಡೆಸುತ್ತಿದ್ದಾರೆ. ಇಂಥ ಅನೇಕ ಸೊಸೈಟಿ ಇವೆ. ಈ ಯೋಜನೆಯಲ್ಲಿ ನಿಮಗೂ ವಿಶ್ವಾಸ ಇದ್ದ ಹಾಗೆ ಕಾಣುವುದಿಲ್ಲ. ಪ್ಲಾನಿಂಗ್ ಕಮಿಷನ್ ಅವರು ಹೇಳಿದ್ದಾರೆ ; ದಿಲ್ಲಿ ಸರಕಾರ ಆದೇಶ ಕೊಟ್ಟಿದೆ ಎಂದೂ ಅವರ ಮಾತು ಮೀರುವುದಕ್ಕೆ ಆಗುವುದಿಲ್ಲ ಎಂದು ಇವುಗಳಿಗೆ ಸಾಲ ಕೊಟ್ಟು ಹಣ ಒದಗಿಸುತ್ತಿದ್ದೀರಿ. ಬಜೆಟ್ಟಿನಲ್ಲಿ ಒದಗಿಸಿದ ಹಣ ಖರ್ಚು ಮಾಡಿದ್ದಾರೆ ಆದರೆ ಉಪಯೋಗ ಮಾಡಿಲ್ಲ.

Sri B. D. JATTI.—I have mentioned this in my speech. From this year onwards, we have made it a point to conduct performance audit by the Finance Department. Then you will know whether the money that has been spent, has been spent for the purpose for which it was meant. In the past what has happened is true. I admit it. From now onwards, we want to have a performance audit every year. Then you will know how much money has been spent and whether it is spent for the proper purpose.

ಶ್ರೀ ಎಸ್. ಗೋಪಾಲ ಗೌಡ.—ಇದನ್ನು ಎಲ್ಲ ಇಲಾಖೆಗಳಿಗೂ ಅನ್ವಯಿಸುತ್ತೀರಾ ? ಅಥವಾ ಇದೊಂದೇ ಇಲಾಖೆಗೆ ಎಂದು ಮಾತ್ರ ಮಾಡಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಎಲ್ಲಾ ಡಿಪಾರ್ಟಮೆಂಟ್‌ಗಳಿಗೂ ಇದನ್ನು ಅನ್ವಯಿಸುತ್ತೇವೆ. ತಪ್ಪು ಯಾರೇ ಮಾಡಿದರೂ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅಂಗಡಿ ಚನ್ನಬಸಪ್ಪ.—ನಾನು ಈ ಮೊದಲು ಅನೇಕ ಸಲ ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಹಳ್ಳಿಗಾಡಿನಲ್ಲಿರುವ ಜನರಿಗೆ ಸಾಲ ಎಷ್ಟಿದೆ ತಿಳಿದುಕೊಳ್ಳಬೇಕು. ಡೆಟ್ ಬಿಲ್ ಪಾಸ್ ಮಾಡಬೇಕು. 10-20 ವರ್ಷದ ಬಾಕಿ ವಸೂಲ್ಮಾಡಬಾರದು. ಡೆವಲಪ್‌ಮೆಂಟ್ ಕೆಲಸಗಳಿಗಾಗಿ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದ್ದೀರಿ. ಸೊಸೈಟಿಗಳನ್ನು ಪ್ರಾರಂಭ ಮಾಡುವುದರಲ್ಲಿ ಮೂರು ಕೆಲಸಗಳು ಇವೆ. ಸಾಲ ತೆಗೆದುಕೊಳ್ಳುವುದು, ಹಣ ಉಪಯೋಗಮಾಡುವುದು, ಲಾಭ ಪಡೆಯುವುದು ಮತ್ತು ಹಣ ವಾಪಸ್ ಕೊಡುವುದು. ಸಹಕಾರ ಸಂಘಗಳು ಮೊದಲನೇ ಕೆಲಸ ಅಂದರೆ ಹಣ ತೆಗೆದುಕೊಳ್ಳುತ್ತಾರೆ. ಆದರೆ ಅದನ್ನು ಉಪಯೋಗ ಮಾಡುವುದಿಲ್ಲ, ಹಾಗೂ ವಾಪಸ್ ಸಹ ಕೊಡುವುದಿಲ್ಲ. ಸಾಮಾನ್ಯವಾಗಿ ಮೂರರಲ್ಲಿ ಒಂದು ಭಾಗ ಇದೇ ರೀತಿ ಸಹಕಾರ ಸಂಘಗಳು ನಡೆಯುತ್ತಿವೆ.

ಕೊನೆಯದಾಗಿ ತುಂಗಭದ್ರ ಡ್ಯಾಮಿನ ಕೆಳಗೆ ಕೆಲವು ವರ್ಷಗಳಿಂದ ಎಷ್ಟು ಉತ್ಪತ್ತಿಯಾಗುತ್ತಿದೆ ಎಂಬ ಬಗ್ಗೆ ಸೂಕ್ಷ್ಮವಾಗಿ ಸೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ತಾವು ತುಂಗಭದ್ರ

(ಶ್ರೀ ಅಂಗಡಿ ಚನ್ನಬಸಪ್ಪ)

ಲೇಕ್ ಹತ್ತಿರ ಬಂದು ನೋಡಿ ; ಭೂಮಿ ಬೇಕಾದಷ್ಟಿದೆ. ನೀರು ಬೇಕಾದಷ್ಟಿದೆ. ಅದರೆ ಜಮೀನು ಮಾಡುವವರೇ ಇಲ್ಲ. ಸಾಲಗಳು ಮಾಡಿದರು; ಸರಕಾರ ಮತ್ತು ಸೊಸೈಟಿಗಳ ಮುಖಾಂತರ. ರೈತರು ಒಂದು ಎಕರೆ ಭೂಮಿ ಮಾಡಬೇಕಾದರೆ, ಕನಿಷ್ಠ 500 ರೂಪಾಯಿ ಬೇಕು. ಒಬ್ಬ ರೈತನಿಗೆ 10 ಎಕರೆ ಇದ್ದರೆ 50 ನೂರು ಕೊಡಬೇಕಾಗುತ್ತೆ. 10 ಎಕರೆಗೆ 10 ನೂರು ಕೊಟ್ಟರೆ, ಸಾಲ ಕೊಟ್ಟದ್ದು ದುರುಪಯೋಗವಾಗಿಬಿಡುತ್ತದೆ. ಇಂಥ ಪ್ರಸಂಗವಾಗದಿರಲು, ಸರಕಾರ ಮನಸ್ಸು ಮಾಡಿ, ಸರಕಾರದ ಕಡೆಯಿಂದಲೇ ತರಿಭೂಮಿ ಮಾಡಿಸಿಕೊಡಿ ; ಬಾಂಡ್ ಬರೆಸಿಕೊಂಡು ಮಾಡಿ.

Sri B. D. JATTI.—The field channels were not constructed by the farmers themselves either due to ignorance or because they could not get the money to prepare the channels. Considering their difficulty, Government sanctioned Rs. 3½ crores for preparting field channels and carrying waters to the fields. That is what we have done. Beyond that, we cannot do anything.

ಶ್ರೀ ಡಿ. ದೇವರಾಜ ಅರಸ್.—ಫೀಲ್ಡ್ ಚಾನಲ್ ಸರಕಾರ ಏರ್ಪಾಡು ಮಾಡುತ್ತದೆ. ಇನ್ನೂ ಸ್ವಲ್ಪ ಸಾಲ ಹೆಚ್ಚಾಗಿ ಬೇಕಾದರೂ ಕೊಡಿಸಬಹುದು. ಜಮೀನುದಾರರು ಜಮೀನು ಮಟ್ಟ ಮಾಡಿ ಕೊಳ್ಳುವುದಕ್ಕೆ ಮುಂದೆ ಬರದೆ ಹೋದರೆ ಸರಕಾರ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಅಂಗಡಿ ಚನ್ನಬಸಪ್ಪ.—ತಾವು ಏನು ಬಜೆಟ್ ಪ್ರಪೋಸಲ್ಸ್ ಮಾಮೂಲಾಗಿ ಇಟ್ಟಿದ್ದೀರಿ, ಅದು ಮಾಮೂಲ್ ಪಾಸಾಗುತ್ತದೆ. ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ಹಣ ಖರ್ಚುಮಾಡಿದ್ದನ್ನು, ಇನ್ನು ಮುಂದೆ ಸದ್ವಿನಿಯೋಗಮಾಡಿ. ತಮಗೆ ಒಂದು ವಾಕ್ಯವನ್ನು ಇಲ್ಲಿ ಉದಹರಿಸಿ ಹೇಳಿ ಭಾಷಣ ಮುಗಿಸುತ್ತೇನೆ. ಯಾವ ಸರಕಾರದಲ್ಲಿ Freedom from want, freedom from fear ಇರುತ್ತದೋ, ಅದು ಒಳ್ಳೆಯ ಸರಕಾರ. ಆ ರೀತಿ ನೀವು ಒಳ್ಳೆಯವರಾಗಿರಿ.

† Sri GANJI VEERAPPA (Harihar).—Mr. Speaker, Sir, I am one with some of those friends who have spoken here, congratulating the Finance Minister on having presented a tax free surplus budget and some of the welcome features are, old age pension is given, increase of dearness allowance is given to low paid Government servants and some of these measures go to alleviate the conditions of the poor, and much more so, not levying any extra tax is really a matter for which Government is to be congratulated. I have been listening in this House to some of the speeches made by my friends on the other side, especialy from *the MES*. They are all very good friends......

Sri B. P. KADAM.—Nobody on this side has spoken on the Budget so far.

Sri GANJI VEERAPPA.—On whatever matter you have been speaking, the one thing that is prominent in your speeches is that they want to go to Maharashtra. Not that I am coming in the way of their going ; but when Mr. Jatti said 'Please go', they mistook him.

Sri V. S. PATIL.—On a point of order. When my friend is speaking on the budget, is it within his power to the speeches made on other subjects by other members and to while away the time or to create unnecessary heat on the floor of the House ? According to me, it is quite irrelevant and he ought not to refer to what has been said on other subjects by other members. I should like to have a ruling from the chair.

SRI GANJI VEERAPPA.—I am not here to create any controversy or to displease any of the members. What I was trying to impress upon their minds is only this. The Government of Mysore is not discriminating against any part of the State. Let them not feel that any part of the State, more so, the parts that they represent have been neglected. When I see the budget, I find that many of their areas also are properly provided for so as to give them satisfaction. I would like to tell them that the generosity of the Government of Mysore cannot in any way be questioned because we do not find the same attitude elsewhere. Not that I am criticising the neighbouring State. The burning question before us to which I must make reference is the Goa question. I submit, without offending the feelings of my friends on the other side that Goa historically, culturally......

SRI V. S. PATIL.—My friend is referring to Goa. We will take another opportunity to discuss the point here. Is it relevant to the discussion now ?

SRI B. D. JATTI.—It would not be relevant to talk about Goa. It is better to drop it. We agree.

SRI GANJI VEERAPPA.—Then I need not dilate on this point. I was coming to some of the bright sides of the budget. In fact, with regard to the provision in the budget for education, the Finance Minister has not made it very clear with regard to the opening of Bangalore University, it is not very clear from his speech whether Government have taken a decision. Anyway, reference has been made in the budget about the starting of Bangalore University. Unless adequate grants are forthcoming from the University Grants Commission......

SRI B. D. JATTI.—I explained at that time. If we are to get assistance from the Government of India and the University Grants Commission for recurring and non-recurring expenditure as promised, we will make a beginning. Otherwise, it is not possible.

SRI GANJI VEERAPPA.—I may bring to the notice of the Honourable Minister that in the case of all new Universities started for certain coureses—post graduate courses and research for which only the Bangalore University is intended, 75 or 80 per cent grant is coming from the U.G.C.

SRI B. D. JATTI—He is one of the members who had gone there. Whatever promise he got from certain persons orally, if we receive in writing under the signature of those persons, I am prepared to commit myself. Mere talk cannot produce money.

SRI GANJI VEERAPPA.—In fact, they are prepared to give; in fact, they have been doing so in the case of other Universities. 80 or 86 per cent grant will be coming forth. So I wish the Government take a decision.

4-30 P. M.

SRI B. D. JATTI.—I wish to make it clear once again, that when we are speaking about the budget and moneys, we must be definite in our

(SRI B. D. JATTI)

mind. Merely assuming that we would get 50 per cent or 75 per cent would not help and I cannot myself and the House on such a basis.

Sri GANJI VEERAPPA.—I am happy that the Government has atleast agreed with the recommendation of the Committee that there is need for a Bangalore University for the development of science and research.

With regard to education, there are many matters which concern policies of an all-India character but so far as Mysore is concerned, we should fall in line with some of the decisions taken at the Inter-University Vice-Chancellors Conference. I wish the Education Minister was here now. The Government is contemplating to open the XI standard in high schools and the University has in a way agreed to have two-year pre-University course, which is akin to the two-year Intermediate course which were having before. This would mean that before a student obtains his degree, he would be putting 2 years for the PUC, plus 3 years for the degree, that is 5 years in all. This added to the 10 years at the school, would mean 15 years in all before a student becomes a graduate. In regard to this matter, I wish the Government made itself definite as to whether the XI standard that we are opening in the high schools should come within the purview of the University in matters concerning examinations, curriculum and the like or it should be a matter purely for the Department of Education. I may say that if the I standard is to be equivalent to the present PUC, then in matters of standard, it is better that this is left to the University. Below XI standard, the Director of Public Instruction may have purview. That would help maintenance of standards.

We have been noticing that a number of technical colleges have been started in the State in the private sector. An anamolous position has thus been created. Government have stated that they are not a party to their establishment. The University says that they have O.Kayed it because they found the standards obtaining in these colleges satisfactory. Whatever it might be, opening of technical institutions are matters of policy and colleges for which provision is not made in the plans should not be allowed. The colleges are now functioning, the University has recognised them and the question is whatever Government would give them recognition.

Sri B. D. JATTI.—The University is the proper authority to give affiliation. Once they affiliate, Government should give them recognition. But we are never committed to spending any moneys over them because they are not included in the plan. Unless the Planning Commission or the Government of India asks us to provide funds for such institutions, we are not in a position to pay them anything.

Sri GANJI VEERAPPA.—Somehow, Mysore has been a State from which a good number of engineers have been exported to the neighbouring States. We are really proud that our boys are doing wonderful services in places like Kashmir and Assam.

In regard to the polytechnics, a situation has arisen wherein a number of civil diploma holders are unemployed. In the last 2 or 3 years, thousands of them are without jobs. I suggested that some way be devised whereby they would be absorbed in the Public Works Department because we are undertaking many new projects. Government may also think whether it would not be wise to discontinue civil diploma courses in polytechnics for sometime to come. The electrical and mechanical courses might continue because there is employment potention for diploma holders.

In regard to technical education, there should be better co-ordination between the type of education given in the schools and colleges and the job requirements in industries. Many of the industrial concerns have complained that our boys are not fit for jobs in the industries and that they would prefer men with experience. With regard to student who passed B.Sc (Textiles), none of the industries would take them in because they want people who have worked in textile industries. Therefore there ought to be some co-ordination between the colleges and the industries so that the boys would be trained in a manner as would fit them in into the jobs.

It is not enough that we expand education quantitatively. Quality should also improve. Our examination system should change. Standards are not upto the mark in our schools and colleges. This is a very serious matter both at the State and the national level. I am glad that the new Education Minister at the Centre, Mr. Chagla, is introducing some radical changes and I hope they would be reflected in the States also.

Sir, now that there is emphasis on savings in all directions, I wish the Finance Minister had spelt out the proposals he has in mind for effecting economics in the expenditure of Government. I would only refer to the N. E. S. as an example. All of us know that the expenditure can be cut short here. We would effect savings to the tune of 2 crores. The staff in the NES are not doing their work. I do not think any of us can say that they are doing good work to the extent of the expenditure on them. I would not go to the extent of suggesting the scrapping of NES. It is a good scheme but whether it is properly worked out is a matter which has to be seriously examined. One officer in a taluk may function both as Tahsildar and Block Development Officer. The BDOs. do all the work and the Tahsildars have no work excepting collect taxes. As a measure of economy, one tahsildar may look after both the work. Some of these suggestions of economy might usefully be looked into by Government.

I find that even after the passing of the Civil Courts Act, the district courts have not been constituted. The Government have powers to constitute such courts in consultation with the High Court. There is no district court in Chitaldrug but I find no provision in the budget for the opening of such courts. The very object of the Act was to establish new courts where there was need. In the interest of the litigant public and to enable the people to get justice cheaply and conveniently, it is necessary that Government constitutes these courts expeditiously.

(SRI GANJI VEERAPPA)

We have been urging for the appointment of Assistant Public Prosectors as is in vogue in the Bombay area. We find that most of the police officers, Inspectors and Sub-Inspectors, who are in-charge of investigation and prosecution of cases, have had no training. I suggest that for prosecution work, lawyers who have experience in Criminal work, should be given an opportunity to work as Assistant Public Prosecutors instead of police officers. That will solve two problems: it would encourage young lawyers to get themselves trained in criminal work and it would also provide for the efficient prosecution of cases. What prevails in Bombay could usefully be adopted in other areas also.

The police S.Is. and Inspectors should be given special training in investigation of cases. In henious offences, if the police officers do not know the elementary principles of investigation, justice would suffer.

In regard to the provision of houses for Scheduled Castes, I suggest that instead of giving them loans, the previous practice of giving them grants for construction of houses would be better. I find wherever I go that most of these poor people have not availed of the loan because it would be difficult for them to re-pay. Therefore Government may revert to the old system. The Finance Minister has said that he has approached the Insurance Corporation to advance a crore of rupees. Government may themselves may keep them in reserve and advance loans but this cumbersome process of becoming members of societies is difficult and many of them do not become members nor draw loans.

Sri G. DUGGAPPA.—They have become members in many taluks but in spite they do not get the loans because there is no allotment by Government.

Sri GANGI VEERAPPA.—I am not against granting of loans. Whoever wants, let them take advantage of the loans. But if some people do not want loans, let them be given grants also. If we want to serve the cause of the Scheduled Castes, we should see that the middlemen do not come in the way and eat up the loans.

I want the Government to improve the standard of life in the State. More and more industries must come up. The State Government must impress upon the Centre the need to start more industries. The private sector in the State should also encourage to establish more industries. But where they cannot come in, Government should step in. The national income of the people should go up. All efforts to increase agricultural production and improve industrial potentialities should be made. There should be greater employment and better living. I hope in the times to come the condition of our people would improve.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಅಧ್ಯಕ್ಷಣಿಯವರೆ, ನಮ್ಮ ಮುಂದೆ ಇಟ್ಟಿರುವ 1964—65 ನೆಯ ಸಾಲಿನ ಅಂದಾಜುಪಟ್ಟಿಯ ಬಗ್ಗೆ ಒಂದೆರಡು ಮಾತುಗಳನ್ನಾಡಬಯಸುತ್ತೇನೆ. ಮಾನ್ಯ ಅರ್ಥಿಕ ಮಂತ್ರಿಗಳು ಬಹಳ ಚಾಣಕ್ಯರು, ಸರ್ಪ್ಲಸ್ ಬಡ್ಜೆಟ್ಟನ್ನು ಸಭೆಯ ಮುಂದಿಟ್ಟಿದ್ದಾರೆ. ವಯಸ್ಸಾದವರಿಗೆ ಹಾಗೂ ನಾನ್-ಗೆಜೆಟೆಡ್ ನೌಕರರಲ್ಲಿ 300 ರೂಪಾಯಿ

ಗಳವರೆಗೆ ಸಂಬಳ ಪಡೆಯುವವರಿಗೆ ಕೆಲವು ಸೌಲಭ್ಯಗಳನ್ನು ಒದಗಿಸಿರುವುದಾಗಿಯೂ ಹೇಳಿದ್ದಾರೆ ಆದರೆ ಅದಕ್ಕೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಿಲ್ಲ, ಅದಕ್ಕೆ ಸಂಪನ್ಮೂಲಗಳನ್ನು ಕಂಡುಹಿಡಿಯಬೇಕಾಗಿದೆ. ಎಂದು ಹೇಳಿದ್ದಾರೆ. ಇದರಿಂದ ಅದಕ್ಕೆ ಪ್ರಾವಿಷನ್ ಮಾಡಿದರೆ ಖೋತಾ ಬಡ್ಜೆಟ್ಟಾಗುತ್ತದೆ, ಸರ್ಪ್ಲಸ್ ಬಡ್ಜೆಟ್ ಎಂದು ಜನರಿಗೆ ತೋರಿಸಲು ಜಾಣತನ ಮಾಡಿದ್ದಾರೆ ಎಂದು ಅರ್ಥವಾಗುತ್ತದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಆರ್ಥಿಕ ಸಚಿವರ ಭಾಷಣದ ಒಂದು ಅಂಶದ ಕಡೆಗೆ ಗಮನ ಸೆಳೆಯಲು ಇಚ್ಛೆಪಡುತ್ತೇನೆ. ಭುವನೇಶ್ವರದ ಅಧಿವೇಶನದಲ್ಲಿ ಸೋಷಿಯಲಿಸಂ ಕಾರ್ಯಗತ ಮಾಡುವುದಾಗಿ ಏನು ಸ್ಲೋಗನ್ ಇತ್ತು ಅದಕ್ಕೆ ವ್ಯತಿರಿಕ್ತವಾಗಿದೆ ಈ ಆಯವ್ಯಯ ಪಟ್ಟಿ. ಇಲ್ಲೇ ಒಂದು ಕಡೆ ಹೇಳುತ್ತಾರೆ, ಪ್ಲಾಂಟರುಗಳಿಗಾಗಿ ಒಂದು ತರಹದ ಸೂಪರು-ಟ್ಯಾಕ್ಸು ಹಾಕುವುದಕ್ಕೆ ಅವರಿಂದ ಬಂದಿರತಕ್ಕ ರೆಪ್ರಸೆಂಟೇಷನ್ನುಗಳನ್ನು ಪರಿಶೀಲನೆ ಮಾಡಿ ತರಲು ಅದಕ್ಕಾಗಿ ಸೂಕ್ತವಾದ ತಿದ್ದುಪಡಿ ತರುತ್ತೇವೆಂದು ಹೇಳಿದ್ದಾರೆ. ಡೆಮಾಕ್ರಟಿಕ್ ಸೋಷಿಯಲಿಸಂನ್ನು ತರುತ್ತೇವೆ ಮತ್ತು ಇದನ್ನು ಕಾರ್ಯಗತ ಮಾಡಲು ಏನೇನು ಮಾಡಬೇಕೆನ್ನುವುದಕ್ಕೆ ಇದರಲ್ಲಿ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಈಗ ತಾನೇ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದ ಹ ಗೆ ಬ್ಲಾಕು ಮನಿ ಎಲ್ಲಿದೆ ಮತ್ತು ಯಾವ ವಿಧವಾದ ದುರ್ವ್ಯವಹಾರಗಳಿಂದ ದುಡ್ಡು ಸಂಪಾದನೆ ಮಾಡುತ್ತಿದ್ದಾರೆನ್ನುವುದನ್ನು ಹೇಳಿದರು. ಬಡವರು ಹೆಚ್ಚಿನ ಸಂಖ್ಯೆಯಲ್ಲಿ ಬಡವರಾಗುತ್ತಿದ್ದಾರೆ. ಸೇವೆಯ ಹೆಸರಿನಲ್ಲಿ ಇನ್ನು ಕೆಲವರು ದುರ್ವ್ಯವಹಾರಗಳಿಂದ ದೇಶದಲ್ಲಿರುವ ಸಂಪತ್ತನ್ನು ಅನ್ಯಾಯ, ಅನೀತಿಯುತವಾದ ಮಾರ್ಗಗಳಿಂದ ಸಂಪಾದನೆ ಮಾಡುತ್ತಿದ್ದಾರೆ. ಇಂತಹ ದುರ್ಮಾರ್ಗಗಳನ್ನು ತಪ್ಪಿಸುವುದಕ್ಕೆ ಏನಾದರೂ ಯೋಜನೆಗಳು ಈ ಬಡ್ಜೆಟ್ಟಿನಲ್ಲಿಲ್ಲ ಮತ್ತು ಸರ್ಕಾರದಲ್ಲಿಯೂ ಇಲ್ಲ ಎನ್ನುವುದು ಕಂಡು ಬರುತ್ತಿದೆ. ಇಂತಹ ಮಾರ್ಗಗಳು ಯಾವುದೂ ಇರಲಿಲ್ಲವೇ ಎಂದು ಈ ಸಂದರ್ಭದಲ್ಲಿ ಮಾನ್ಯ ಆರ್ಥಿಕ ಸಚಿವರನ್ನು ಕೇಳಲು ಇಚ್ಛಿಸುತ್ತೇನೆ.

ಸಹಕಾರ ಸಂಘಗಳ ಸ್ಟೋರ್ಸುಗಳ ಬಗ್ಗೆ ಸರಕಾರ ಏನೇನು ವ್ಯವಸ್ಥೆ ಮಾಡಿದ್ದಾರೆನ್ನುವುದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ರಾಜ್ಯಪಾಲರು ಮುಂದೆ ನಮ್ಮ ದೇಶಕ್ಕೆ ಅನುಕೂಲವಾಗುವಂತಹ ಯೋಜನೆಗಳನ್ನೇನಾದರೂ ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ಹೇಳಿದ್ದಾರೆಯೇ ಎನ್ನುವುದಕ್ಕೆ ನಿಮ್ಮ ಎದೆ ಮುಟ್ಟಿ ನೋಡಿಕೊಂಡು ನೀವೇ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಭಾಷಣಮಾಡುವಾಗ ಕಳೆದ 16 ವರ್ಷಗಳಿಂದಲೂ ಕಾಂಗ್ರೆಸ್ ಸರ್ಕಾರ ಬಹಳ ಒಳ್ಳೆಯ ಕೆಲಸಗಳನ್ನು ಸಾಧಿಸಿದೆ. ಅದಕ್ಕಾಗಿ ನೀವು ನಿಮ್ಮ ಬೆನ್ನನ್ನು ಚಪ್ಪರಿಸಿಕೊಳ್ಳುತ್ತಿದ್ದೀರಿ. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಭಾಷಣ ಮಾಡುವಾಗ ಒಂದು ಮಾತನ್ನು ಗಮನಕ್ಕೆ ತಂದರು. ಸಾಧಾರಣವಾಗಿ ಪ್ರತಿಯೊಬ್ಬ ಮೆಂಬರೂ ಕೂಡ ಇಂತಹ ಹಳ್ಳಿಗಳಲ್ಲಿ ರೋಡು ಆಗಿಲ್ಲ ಮತ್ತು ಇದಕ್ಕಾಗಿ ಕೊಟ್ಟಿರುವ ಹಣ ಖರ್ಚಾಗಿಲ್ಲ ಎಂದು ಹೇಳಿದರೆ ಅದಕ್ಕೆ ಸಾಮಾನ್ಯವಾಗಿ ಯಾವ ರೀತಿಯಾಗಿ ಉತ್ತರ ಕೊಡುತ್ತಾರೆ ಎನ್ನುವುದಕ್ಕೆ ಹಾಗೂ ಯಾವ ರೀತಿಯಾದ ಅಂಕಿ ಅಂಶಗಳನ್ನು ಕೊಡದೇ ಸರ್ಕಾರ ಉತ್ತರವನ್ನು ಕೊಡುವುದನ್ನು ನೋಡಿದರೆ ಅದೇ ಅರ್ಥವಾಗುತ್ತದೆ ಎಂದು ಇಲ್ಲಿ ನಾನು ಹೇಳಲು ಬಯಸುತ್ತೇನೆ.

ನ್ಯಾಷನಲ್ ಆದಾಯವು 1956–57 ರಲ್ಲಿ ರೂ. 488.17 ಕೋಟಿ ಇದ್ದುದ್ದು 1960–61ನೇ ಸಾಲಿನಲ್ಲಿ ರೂ. 670.00 ಕೋಟಿಯಷ್ಟು ಏರಿದೆ ಎಂದು ಅವರ ಭಾಷಣದಲ್ಲಿರುವುದು ನಮಗೆ ಗೊತ್ತಾಗುತ್ತಿದೆ. ಆದರೆ ಇಂತಹ ಅಂಕಿ ಅಂಶಗಳನ್ನು ಕೊಟ್ಟವರು ಯಾರು ಎನ್ನುವುದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ಅಂಕಿ ಅಂಶಗಳನ್ನು ಕೊಡತಕ್ಕದ್ದೇನೋ ಸುಲಭ. ಆದರೆ ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ. ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವ ಕಾಲಕ್ಕೆ ಈ ಅಂಕಿ ಅಂಶಗಳನ್ನು ಸರಿಯಾಗಿ ಕೊಟ್ಟಿದ್ದಾರೆಯೇ ಇಲ್ಲವೇ ಎನ್ನುವುದನ್ನು ತಿಳಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಅಗ್ರಿಕಲ್‌ಚರ್ ಪ್ರೊಡಕ್ಷನ್ನು ವಿಷಯದ ಬಗ್ಗೆ ಅನೇಕ ವಿಷಯಗಳನ್ನು ಈಗಾಗಲೇ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಇಲಾಖೆಯ ಬಗ್ಗೆ ಹೇಳುವುದಾದರೆ ಬಹುಶಃ ನಿಮಗೂ ಗೊತ್ತಿದೆ ಈ ಇಲಾಖೆ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದು. ಈ ದೇಶದಲ್ಲಿ ಸುಮಾರು ಶೇಕಡಾ 80 ರಿಂದ 85 ರಷ್ಟು ಜನ ವ್ಯವಸಾಯದಿಂದಲೇ ಜೀವನ ಮಾಡುತ್ತಿದ್ದಾರೆ. ಇಂತಹವರ ಪರಿಸ್ಥಿತಿ ಇಂದು ಏನಾಗಿದೆ ಎನ್ನುವುದನ್ನು ಸ್ವಲ್ಪ ನಾವು ತುಲನ ಮಾಡಿ ನೋಡಬೇಕಾಗಿದೆ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 55 ಬುಲ್ ಡೋಜರುಗಳು ಸರ್ಕಾರದಿಂದ ನಡೆಸುತ್ತಿರುವುದು ಹಾಗೂ 100 ಟ್ರಾಕ್ಟರುಗಳು ಹೈರ್ ಪರ್ಚೇಸ್ ಸಿಸ್ಟಂನಂತೆ ರೈತರಿಗೆ ಹಂಚಿಕೆಯಾಗಬೇಕು ಎಂದಿರುವುದು ಅಷ್ಟುಮಟ್ಟಿಗೆ ಕಾರ್ಯಗತವಾಗಿದೆಯೇ ಎನ್ನುವುದನ್ನು ನಾನು ಇಲ್ಲಿ ಕೇಳಬೇಕಾಗಿದೆ. ನಾನು ತಿಳಿದಿರುವಂತೆ ನಮ್ಮಲ್ಲಿರುವ ಎಲ್ಲ ಮೆಷಿನರಿಗಳೂ ಕೂಡ ಯಾವಾಗ ನೋಡಿದರೂ 'ಸಿಕ್ಕು' ಎಂದು ಹೇಳುತ್ತಿರುವುದನ್ನು ಯಾರಾದರೂ ಒಬ್ಬರು ಅಗ್ರಿಕಲ್‌ಚರ್ ಡೈರೆಕ್ಟರು ವಿಚಾರಿಸಿನೋಡಿ

(ಶ್ರೀ ಎಚ್. ಡಿ. ದೇವೇಗೌಡ)

ದ್ದಾರೆಯೇ ? ಪ್ರತಿಯೊಂದು ಮಿಷನರಿಯೂ ಸಿಕ್ಕು ಎಂದು ಇದ್ದರೆ ಇದರಿಂದ ರೈತನಿಗೆ ತಕ್ಕಷ್ಟು ಫಲ ಹೇಗೆ ದೊರೆಯಬೇಕು ಮತ್ತು ವ್ಯವಸಾಯಕ್ಕೆ ಹೇಗೆ ಉಪಯೋಗಿಸಿಕೊಳ್ಳಬೇಕು? ನಿಮ್ಮ ವ್ಯವಸಾಯದ ಇಲಾಖೆಯಲ್ಲಿ ಪೂರ್ಣವಾಗಿ ರಾಜಕೀಯವಿದೆ. ಇಲಾಖೆಯಲ್ಲಿರುವ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಇಲ್ಲಿರುವ ಇಲಾಖೆಯ ಅಧಿಕಾರಿಗಳನ್ನು ಬೇರೆ ಕಡೆ ಇಟ್ಟು ಬೇಕಾದರೆ ಸಂಬಳ ಕೊಡಲಿ. ಇಲ್ಲಿಗೆ ಬೇರೆಯವರನ್ನು ಚೆನ್ನಾಗಿ ಕೆಲಸ ಮಾಡುವವರನ್ನು ನೇಮಕ ಮಾಡಿದರೆ ಆಗೇನಾದರೂ ವ್ಯವಸಾಯದ ಕೆಲಸಗಳು ಚೆನ್ನಾಗಿ ನಡೆಯುತ್ತದೋ ಏನೋ ನೋಡಬಹುದು. ಈ ದೇಶದಲ್ಲಿರುವ ಸುಮಾರು 85 ಪರ್ಸೆಂಟಿನಷ್ಟು ಜನರಿಗೆ ಒಳ್ಳೆಯ ಫಲ ದೊರಕುವ ಸಲುವಾಗಿ ವ್ಯವಸಾಯ ಅಭಿವೃದ್ಧಿ ಮಾಡಬೇಕಾಗಿದೆ. ಅದು ಹೇಗೆ ದೊರಕಲು ಸಾಧ್ಯ ಎನ್ನುವುದನ್ನು ತಾವೇ ಯೋಚನೆ ಮಾಡಬಹುದು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಆಹಾರದವಸ ಧಾನ್ಯಗಳನ್ನು ಬೆಳೆಯಲು ಹೆಚ್ಚಿನ ಯೋಜನೆಗಳನ್ನು ಹಾಕಿದ್ದರೂ ಅದರಂತೆ ವ್ಯವಸಾಯದ ಕ್ಷೇತ್ರದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡಬೇಕಾದರೆ ಅದಕ್ಕೆ ತಕ್ಕ ಮುಖ್ಯ ಅಧಿಕಾರಿ ಇರಬೇಕು. ಆದರೆ ಈಗಿರುವ ಅಧಿಕಾರಿಗಳಿಂದ ಸರಿಯಾಗಿ ಕೆಲಸಗಳೇನೂ ಆಗುತ್ತಿಲ್ಲ. ಆದುದರಿಂದ ಇವರನ್ನು ಬೇರೆ ಕಡೆ ಇಟ್ಟು ಬೇಕಾದರೆ ಸಂಬಳ ಕೊಡಿ ನಾನು ಬೇಡ ಎನ್ನುವುದಿಲ್ಲ. ಇದನ್ನು ನಾನೊಬ್ಬನೇ ಹೇಳುತ್ತಿಲ್ಲ. ಇಲ್ಲಿರುವ ಎಷ್ಟೋ ಜನ ಕಾಂಗ್ರೆಸ್ಸು ಸದಸ್ಯರೂ ಇದಕ್ಕೆ ಒಪ್ಪುತ್ತಾರೆ. ಇವರು ಏನು ಅಂಕಿ ಅಂಶಗಳನ್ನು ಕೊಡುತ್ತಾರೆಂದರೆ ತಾಲ್ಲೂಕು ಬೋರ್ಡ್ ಮೆಂಬರು ಕೊಟ್ಟ ಅಂಕಿ ಅಂಶಗಳನ್ನು ಇಲ್ಲಿ ನೋಡಿ ಹೇಳುತ್ತಾರೆ. ಇದು ಬರೀ ಸುಳ್ಳು. ಇಲ್ಲಿ ನ್ಯಾಚುರಲ್ ಗ್ರೀನ್ ಮೆನ್ಯೂರ್ಸ್‌ನಿಂದ ಕಂಪೋಸ್ಟು ಮಾಡಬೇಕೆಂದು ಹೇಳಿದಂತೆ ನೋಡುವಾಗ ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳು ಸುಳ್ಳು ಮತ್ತು ಸರಿಯಾದುದಲ್ಲ ಎಂದು ದಿಟ್ಟತನದಿಂದ ಹೇಳುತ್ತೇನೆ. ಇದರ ಜೊತೆಗೆ ಕೆಮಿಕಲ್ ಮೆನ್ಯೂರ್ಸ್‌ನ್ನು ಕೂಡ ಸರಿಯಾಗಿ ಹಂಚುವ ವ್ಯವಸ್ಥೆಮಾಡಿದ್ದಾರೆಯೇ ಎಂದು ನೋಡಿದರೆ ಅದರಲ್ಲೂ ಎಷ್ಟೋ ಲೋಪ ದೋಷಗಳು ಇವೆ. ಕೆಮಿಕಲ್ ಮೆನ್ಯೂರುಗಳನ್ನು ಯಾವ ರೀತಿ ಉಪಯೋಗಿಸಿದರೆ ಎಷ್ಟು ಫಲ ದೊರಕುತ್ತದೆ ಎನ್ನುವುದನ್ನು ಜನತೆಗೆ ತಿಳಿಸಲು ಇದರಲ್ಲಿ ಯಾವ ಅಂಕಿ ಅಂಶಗಳೂ ಇಲ್ಲ. ಸಾಯಿಲ್ ಟೆಸ್ಟು ಮಾಡುವುದಕ್ಕಾಗಿ ಹೆಬ್ಬಾಳಿನಲ್ಲಿ ಮಾತ್ರ ಒಂದು ಸಂಶೋಧನೆ ಮಾಡಬೇಕೆಂದು ಮಾಡಿರುವುದರಿಂದ ದೇಶದ ಎಲ್ಲ ಜನಕ್ಕೂ ಇದರಿಂದ ಉಪಯೋಗವಾಗುವುದಿಲ್ಲ ಮತ್ತು ವ್ಯವಸಾಯಕ್ಕೂ ಖಂಡಿತ ಅನುಕೂಲವಾಗುವುದಿಲ್ಲ. ಇಂತಹ ಮಾದರಿಯ ಮೆನ್ಯೂರು ಇದೆ ಇದಕ್ಕೆ ಯಾವ ಪ್ರಪೋರ್ಷನ್ನಿನಲ್ಲಿ ಹಾಕಬೇಕು ಮತ್ತು ಹಾಕಿದರೆ ಯಾವ ತರಹದ ಬೆಳೆ ಬರುತ್ತದೆ ಎನ್ನುವುದನ್ನು ತೋರಿಸಲು ವ್ಯವಸಾಯ ಇಲಾಖೆಯಲ್ಲಿರುವ ಅಧಿಕಾರಿಗಳು ಯಾರೂ ಜನಕ್ಕೆ ಸಹಾಯ ಮಾಡುತ್ತಿಲ್ಲ. ಆದುದರಿಂದ ಇಲಾಖೆಯಿಂದ ಏನೂ ಉಪಯೋಗವಿಲ್ಲ ಎಂದು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ನಿದರ್ಶನಕ್ಕಾಗಿ ಬೇಕಾದಷ್ಟು ಹೇಳಬಹುದು. ಇನ್ನು ರೋಗಗಳು ಬೆಳೆಗೆ ಯಾವ ರೀತಿ ಬರುತ್ತವೆ ಮತ್ತು ಅದನ್ನು ನಿವಾರಣೆ ಮಾಡಬೇಕಾದರೆ ಏನು ಮಾಡಬೇಕು ಎನ್ನುವುದನ್ನು ಇಲಾಖೆಯಲ್ಲಿರುವ ಅಧಿಕಾರಿಗಳು ಹೇಳುವುದಕ್ಕೇ ಆಗುತ್ತಿಲ್ಲ. ಅವರಿಗೆ ರೋಗ ಯಾವುದು ಬಂದಿದೆ ಎನ್ನುವುದನ್ನು ಮೊದಲಿಗೆ ಕಂಡು ಹಿಡಿಯುವುದಕ್ಕೇ ಬರುವುದಿಲ್ಲ. ನಮ್ಮ ಹಾಸನ ಜಿಲ್ಲೆಯಲ್ಲಿ ನಾನೇ ಒಂದು ಸಾರಿ ಅಲ್ಲಿದ್ದ ಬೆಳೆಗೆ ಕೊಳೆರೋಗ ಎಂದು ಬಂದಿತ್ತು. ಅದನ್ನು ಪರೀಕ್ಷೆಮಾಡಿ ಅದಕ್ಕೇನು ಪರಿಹಾರ ಕೊಡಬೇಕು ಎನ್ನುವುದನ್ನು ಹೇಳಲು ಶಕ್ತಿಯುತರಾದ ಅಧಿಕಾರಿಗಳು ನಿಮ್ಮಲ್ಲಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇನ್ನು ಸೀಡ್ ಮಲ್ಟಿಪ್ಲಿಕೇಷನ್ನು ಫಾರಂಗಳೆಂದು ಮಾಡಿದ್ದಾರೆ. ಇದು ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ತಿಳಿಯಬೇಕಾದರೆ ಮಾನ್ಯ ಮಂತ್ರಿಗಳು ನನ್ನೊಡನೆ ಒಂದು ಸಾರಿ ಬಂದರೆ ನಮ್ಮ ಕ್ಷೇತ್ರದಲ್ಲೇ ಒಂದು ಸೀಡು ಮಲ್ಟಿಪ್ಲಿಕೇಷನ್ನು ಫಾರಂ ಇದೆ. ಅದು ಎಷ್ಟು ಮಟ್ಟಿನ ಕೆಲಸ ಮಾಡುತ್ತಿದೆ ಎನ್ನುವುದನ್ನು ಕಣ್ಣಾರೆ ನೋಡಬಹುದು. ಬಹುಶಃ ಈ ದೇಶದಲ್ಲಿರುವ 9 ಸೀಡ್ ಮಲ್ಟಿಪ್ಲಿಕೇಷನ್ನು ಫಾರಂಗಳೂ ಇದೇ ರೀತಿ ಕೆಲಸ ಮಾಡುತ್ತಿವೆ ಎಂದು ಅರ್ಥಮಾಡಿಕೊಳ್ಳಬಹುದು. ಮೂರನೇ ಯೋಜನೆಯಲ್ಲಿ ಇಂತಹ 55 ಸೀಡ್ ಫಾರಂಗಳನ್ನು ತೆಗೆಯಬೇಕೆಂದು ಇದ್ದಾರೆ ಎಂದು ಇತ್ತು. ಇದರ ಬಗ್ಗೆ ನಮಗೆ ಯಾವ ಲೆಕ್ಕಗಳೂ ಇದರಲ್ಲಿ ಕಂಡು ಬರುತ್ತಿಲ್ಲ. ಹೀಗಾದರೆ ವ್ಯವಸಾಯ ಮಾಡುವುದಾದರೂ ಹೇಗೆ ? ಇದು ಎಷ್ಟು ಮಟ್ಟಿಗೆ ಕಾರ್ಯಗತವಾಗುತ್ತದೆ ಮತ್ತು ಬೀಜಗಳು ಎಷ್ಟು ಮಟ್ಟಿಗೆ ವಿಲೇವಾರಿಯಾಗುತ್ತವೆ ಎನ್ನುವುದರಲ್ಲಿ ನಮಗೆ ಸಂಶಯ ಉತ್ಪನ್ನವಾಗುತ್ತದೆ.

ಇನ್ನು ನಮ್ಮ ದೇಶದಲ್ಲಿ ಸಕ್ಕರೆಯ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂದು ಇನ್ನೂ ಐದು ಸಕ್ಕರೆ ಕಾರ್ಖಾನೆಗಳನ್ನು ತೆಗೆಯಬೇಕೆಂದು ಯೋಚನೆ ಮಾಡುತ್ತಿದ್ದಾರೆಂದು ಇದರಲ್ಲಿ ಹೇಳಿದ್ದಾರೆ. ನಮ್ಮ ಹಾಸನ ಜಿಲ್ಲೆಯಲ್ಲಿ ಕೂಡ ಕಬ್ಬು ಜಾಸ್ತಿಯಾಗಿ ಬೆಳೆಯುತ್ತಿದೆ. ಇಲ್ಲಿನ ಜಿಲ್ಲಾ ಕಾಂಗ್ರೆಸ್

ಕಮಿಟಿಯವರೂ ಕೂಡ ಒಂದು ನಿರ್ಣಯ ಮಾಡಿ ಇಲ್ಲಿಗೆ ಒಂದು ಸಕ್ಕರೆ ಕಾರ್ಖಾನೆಗಾಗಿ ಒಂದು ಲೈಸನ್ಸನ್ನು ಕೊಡ ಬೇಕೆಂದು ಹತ್ತಾರು ಸಲ ಕೇಳಿದರೂ ಕೂಡ ಸರ್ಕಾರ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇಲ್ಲಿ ಸಕ್ಕರೆ ಕಾರ್ಖಾನೆಯನ್ನು ತೆಗೆಯಲು ಸರ್ಕಾರಕ್ಕೆ ಗಮನ ಬರಲಿಲ್ಲ. ಇದನ್ನು ನೋಡಿದರೆ ನಮ್ಮ ಸರ್ಕಾರದಲ್ಲಿ ಹಾಸನ ಜಿಲ್ಲೆಯ ಬಗ್ಗೆ ಮಲತಾಯಿಯ ಭಾವನೆ ತೋರಿಸುತ್ತಿದ್ದಾರೋ ಏನೋ ಎನ್ನುವುದು ಗೊತ್ತಾಗುತ್ತಿಲ್ಲ.

ಇನ್ನು ಕರಪ್ಷನ್ ಬಗ್ಗೆ ಇದರಲ್ಲಿ ತಾವೇನೂ ಪ್ರಸ್ತಾಪ ಮಾಡಿಲ್ಲ. ತಾವೇನೋ ದೊಡ್ಡದಾದ ಪ್ರತಿನಿಧಿಗಳನ್ನು ಸೇರಿಸಿ ಒಂದು ವಿಜಿಲೆನ್ಸ್ ಕಮಿಟಿಯನ್ನು ಮಾಡುತ್ತೇವೆಂದು ದೊಡ್ಡದಾಗಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ನಂದಾರವರು ಹೇಳಿದ್ದಾರೆ. ನಾನೂ ಇನ್ನು ಸ್ವಲ್ಪ ಮುಂದೆ ಹೋಗುತ್ತೇನೆ. ಈ ಸಭೆಯ 208 ಮಂದಿ ಸದಸ್ಯರಲ್ಲಿ ಕೂಡ ಚುನಾವಣೆಯ ಕಾಲದಲ್ಲಿ ಓಟನ್ನು ಪಡೆಯಲು ಎಷ್ಟು ಮಟ್ಟಿಗೆ ಎಷ್ಟು ಮಂದಿ ಲಂಚವನ್ನು ಕೊಟ್ಟು ಬಂದಿದ್ದಾರೆ. ಇದರಿಂದ ಸ್ಥಾಪಿಸಿರುವ ಸರ್ಕಾರ ಇದನ್ನು ಎಷ್ಟರ ಮಟ್ಟಿಗೆ ಕಾರ್ಯಗತಮಾಡುತ್ತದೆ ಎನ್ನುವುದು ಎಲ್ಲರೂ ಸ್ವಲ್ಪ ಯೋಚನೆ ಮಾಡಬೇಕಾದ ವಿಷಯ. ತಾವೇನೋ ಒಂದು ದೊಡ್ಡ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಆದರೆ ಅದರಿಂದ ಎಷ್ಟು ಮಟ್ಟಿನ ಪ್ರಯೋಜನವಾಗುತ್ತದೆ ಅಥವಾ ಫಲಕಾರಿಯಾಗುತ್ತದೆ ಎನ್ನುವುದನ್ನು ನಾವು ಪರಿಶೀಲಿಸಿ ನೋಡೋಣ.

ಒಂದು ವಿಷಯವನ್ನು ನಾನೀಗ ಇಲ್ಲಿ ಪ್ರಸ್ತಾಪಮಾಡಬೇಕೆಂದಿದ್ದೇನೆ. ಜನರಲ್ ಅಡ್ಮಿಷ್ಟ್ರೇಷನ್ ಬಾಬಿನಲ್ಲಿ ಅಧಿಕಾರಿಗಳಿಗೆ ಬಡ್ತಿ ಕೊಡತಕ್ಕ ಕಾಲದಲ್ಲಿ ಸರ್ಕಾರದವರೇನು ಅರವತ್ತಾರು ಮೂರನೇ ಎರಡು ಭಾಗವನ್ನು ಕ್ಲುಪ್ತ ಮಾಡಿಕೊಂಡಿದ್ದಾರೋ ಅದರಲ್ಲಿ ಎಷ್ಟು ಅನ್ಯಾಯ ನಡೆಯುತ್ತದೆಂಬುದನ್ನು ನಾನೀಗ ತಿಳಿಸಲಿಚ್ಛಿಸುತ್ತೇನೆ. ಒಬ್ಬ ಬಿ.ಇ. ಡಿಗ್ರಿ ಪದವೀಧರನು ಇಂಜಿನಿಯರಿಂಗ್ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರೆ ಅವನು 15-20 ವರ್ಷ ಕೆಲಸ ಮಾಡಿದರೂ ಅಸಿಸ್ಟೆಂಟ್ ಇಂಜಿನಿಯರಾಗುವುದಕ್ಕೆ ಸಾಧ್ಯವಿಲ್ಲ. ಆದರೆ ಅದೇ ಬಿ.ಇ. ಡಿಗ್ರಿ ಪಡೆದಿರತಕ್ಕ ಮತ್ತೊಬ್ಬ ಮನುಷ್ಯ ಮಂತ್ರಿಗಳ ಹತ್ತಿರ ಸ್ವಲ್ಪ ಇನ್‌ಫ್ಲ್ಯುಯೆನ್ಸ್ ಇಟ್ಟುಕೊಂಡಿದ್ದರೆ ಅವನು ಏಕ್‌ದಂ-ಅಸಿಸ್ಟೆಂಟ್ ಇಂಜಿನಿಯರಾಗುತ್ತಾನೆ. ಒಂದೇ ಕ್ವಾಲಿಫಿಕೇಷನ್ ಇದ್ದು ಸಾಲದ್ದಕ್ಕೆ ಇಲಾಖೆಯಲ್ಲಿ 15-20 ವರ್ಷ ಕೆಲಸಮಾಡಿರತಕ್ಕಂಥ ವ್ಯಕ್ತಿ ಆಗತಾನೆ ಕೆಲಸಕ್ಕೆ ಸೇರಿ ಅಸಿಸ್ಟೆಂಟ್ ಇಂಜಿನಿಯರಾಗಿರತಕ್ಕ ವ್ಯಕ್ತಿಗೆ ಅಧೀನನಾಗಿ ನಡೆಯಬೇಕೆಂದರೆ ಅವನ ಮನಸ್ಸು ಹೇಗಿರಬೇಕು? ಇಬ್ಬರ ಕ್ವಾಲಿಫಿಕೇಷನ್ನೂ ಒಂದೇ, ಆದರೆ ಒಬ್ಬನಿಗೆ 400 ರೂ. ಸಂಬಳ ಇನ್ನೊಬ್ಬನಿಗೆ 15-20 ವರ್ಷ ಕೆಲಸ ಮಾಡಿದ್ದರೂ 150 ರೂಪಾಯಿ ಸಂಬಳ. ಹೀಗಾದರೆ ಇವರಲ್ಲಿ ಸರ್ಕಾರದವರು ಹೇಳತಕ್ಕ ಆನೆಸ್ಟಿ ಇರಬೇಕೆಂದರೆ ಅದು ಹೇಗೆ ಸಾಧ್ಯ? ಸರ್ಕಾರಿ ಕೆಲಸಗಳು ದಕ್ಷತೆಯಿಂದ ನಡೆಯಬೇಕೆಂದರೆ ಅದು ಹೇಗೆ ಸಾಧ್ಯ? ಇಂಥ ಒಂದು ಪಾಲಿಸಿಯಿಂದ ಯಾರಲ್ಲಿ ತಾನೆ ಆ ಒಂದು ಆನೆಸ್ಟಿಯಾಗಲೀ ಅಥವಾ ದೇಶಪ್ರೇಮವಾಗಲೀ ಇರಲು ಸಾಧ್ಯ? ಈ ವಿಚಾರವನ್ನು ಸರ್ಕಾರದವರು ಚೆನ್ನಾಗಿ ಆಲೋಚನೆ ಮಾಡಬೇಕು.

5-00 P.M.

ಶ್ರೀ ಬಿ. ಡಿ. ಜತ್ತಿ.—ಇಬ್ಬರು ಏಕ ಕಾಲದಲ್ಲೇ ಕೆಲಸಕ್ಕೆ ಸೇರಿದ್ದರೆ ಸೀನಿಯಾರಿಟಿ ಕಂ ಮೆರಿಟ್ಟಿನ ಮೇಲೆ ಅವರ ಪ್ರಮೋಷನ್ ನಿರ್ಧರಿಸಲಾಗುತ್ತದೆ. ಆದರೆ ಇನ್ನು ಹಳೆಯ ಬ್ಲಡ್ ಜೊತೆಗೆ ನ್ಯೂಬ್ಲಡ್ ಸಹಾ ಇರಬೇಕೆಂದು ಪಿ. ಎಸ್. ಸಿ. ಅವರು ಅರವತ್ತಾರು ಮೂರನೆ ಎರಡು ಭಾಗವನ್ನು ಡೈರೆಕ್ಟ್ ರೆಕ್ರೂಟ್ ಮೂಲಕ ನೇಮಕ ಮಾಡುತ್ತಾರೆ. ಇದಕ್ಕೆ ಸರ್ಕಾರದವರೇನೂ ಮಾಡುವ ಹಾಗಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈ ನೀತಿಯಿಂದ ಸರ್ಕಾರದವರೇ ಅಧಿಕಾರಿಗಳನ್ನು ಕರಪ್ಷನ್‌ಗೆ ಎಳೆಯುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಇನ್ನು ಎಗ್ಜಿಕ್ಯುಟೀವ್ ಇಂಜಿನಿಯರ್ ಹುದ್ದೆಯಿಂದ ಮುಂದಕ್ಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರ್ ಹುದ್ದೆಗೆ ಪ್ರಮೋಷನ್ ಮಾಡುವಾಗ ಸಲೆಕ್ಷನ್ ಬೇಸಿಸ್ಸನ್ನು ಇಟ್ಟುಕೊಂಡಿರುತ್ತಾರೆ. ಈ ಒಂದು ನೀತಿಯಿಂದಲೂ ಕೂಡ ಸರ್ಕಾರದವರೇ ಅಧಿಕಾರಿಗಳ ನೀತಿಯನ್ನು ಕೆಡಿಸಿಕೊಳ್ಳಲು ಕಾರಣರಾಗಿದ್ದಾರೆಂದು ನಾನು ಹೇಳುತ್ತೇನೆ. ಇಬ್ಬರೂ ಒಂದೇ ಕ್ವಾಲಿಫಿಕೇಷನ್ ಇಟ್ಟುಕೊಂಡಿದ್ದು, ಇಬ್ಬರೂ ಒಂದೇ ಕಾಲದಲ್ಲಿ ಕೆಲಸಕ್ಕೆ ಸೇರಿದ್ದಾಗ, ಇಬ್ಬರೂ ಒಂದೇ ಇಲಾಖೆಯಲ್ಲಿ ಕೆಲಸಮಾಡುತ್ತಿರುವಾಗ ಅವರ ಪ್ರಮೋಷನ್ ವಿಚಾರದಲ್ಲಿ ಅವರ ಸೀನಿಯಾರಿಟಿಯನ್ನು ಪರಿಗಣಿಸದೆ ಮೆರಿಟ್‌ಮೇಲೆ ಕನ್‌ಸಿಡರ್ ಮಾಡುತ್ತೇವೆಂದು ಹೇಳುತ್ತಾರೆ. ಇಂಥಾ ಒಂದು ಪದ್ಧತಿಯಿಂದ ಅವರು ಎಂಥವರೇ ಆಗಿರಲಿ ಕೋಮುವಾರು

(ಶ್ರೀ ಎಚ್. ಡಿ. ದೇವೇಗೌಡ)

ಭಾವನೆ, ಸ್ವಜನ ಪಕ್ಷಪಾತ ಇತ್ಯಾದಿ ಕನ್‌ಸಿಡರೇಷನಗಳು ಬಂದೇ ಬರುತ್ತದೆ. ಇದರಿಂದ ಅಧಿಕಾರಿಗಳು ದೇಶವಾತ್ಸಲ್ಯದಿಂದ ಕೆಲಸಮಾಡಲು ಸಾಧ್ಯವಿಲ್ಲ. ಆನೆಸ್ಟಾಗಿ ಇರಬೇಕೆಂದರೂ ಅದು ಸಾಧ್ಯವಿಲ್ಲದ ಮಾತು. ಅದ್ದರಿಂದ ಸರ್ಕಾರದವರು ಕೂಡಲೇ ಈ ನೀತಿಯನ್ನು ಬದಲಾಯಿಸುವುದು ತ್ತಮ ಎಂದು ಹೇಳುತ್ತೇನೆ. ಸಾಲದ್ದಕ್ಕೆ ಇದರ ಜೊತೆಗೆ ಮೈನರ್ ಕಮ್ಯೂನಿಟಿ, ಮೋರ್ ಬ್ಯಾಕವರ್ಡ್ ಕಮ್ಯೂನಿಟಿಗಳು ಬೇರೆ ಇರುತ್ತವೆ. ಅವುಗಳು ಮುಂದೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದೆಲ್ಲಾ ಈ ಡೈರೆಕ್ಟ್ ರೆಕ್ರೂಟ್‌ಮೆಂಟಿನ ಪರಿಣಾಮ. ಆದುದರಿಂದ ಸರ್ಕಾರದವರು ತಮ್ಮ ನೀತಿಯನ್ನು ಪುನರ್ ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಇಲ್ಲವಾದರೆ ಅಧಿಕಾರಿಗಳಲ್ಲಿ ಈ ಅತೃಪ್ತಿ ಎಂಬುದು ಹೋಗುವುದಿಲ್ಲ. ನೀವು ಎಷ್ಟೇ ವಿಜಿಲೆನ್ಸ್ ಕಮಿಟಿಗಳನ್ನು ನೇಮಕ ಮಾಡಿದರೂ ಪ್ರಯೋಜನವಿಲ್ಲ. ಸರ್ಕಾರದವರಿನ್ನೂ ಈ ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಒಂದು ಯೂನಿಫಾರಂ ಸ್ಕೇಲಿಗೆ ತರಲು ಸಾಧ್ಯವಾಗಿಲ್ಲ. ಮೊನ್ನೆತಾನೆ ವಿದ್ಯಾಮಂತ್ರಿಗಳು ಮೈಸೂರು ಯೂನಿವರ್ಸಿಟಿಯ ಹಾಗೂ ಕರ್ಣಾಟಕ ಯೂನಿವರ್ಸಿಟಿಯ ಯೂನಿಫಾರ್ಮಿಟಿ ವಿಚಾರವನ್ನು ಎತ್ತಿ ಎಲ್ಲಾ ಕಡೆಗಳಲ್ಲೂ ಒಂದೇಥೀ ಸ್ಟ್ರಕ್ಚರ್ ಇರಬೇಕೆಂದು ಹೇಳಿ ಒಂದು ಹೇಳಿಕೆಯನ್ನು ಹೊರಡಿಸಿದ್ದರು. ಸ್ವಾಮಿ ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಾದರೆ— ಒಂದೇ ಬೆಂಚಿನಲ್ಲಿ ಕುಳಿತು ಕೆಲಸಮಾಡತಕ್ಕ ಹಳೇ ಮೈಸೂರಿನವರ ಸಂಬಳವೆಷ್ಟು? ಹೊಸ ಮೈಸೂರಿನವರ ಸಂಬಳವೆಷ್ಟು? ಇಬ್ಬರು ಮಾಡುವುದೂ ಒಂದೇ ಕೆಲಸ, ಇಬ್ಬರ ಗ್ರೇಡೂ ಒಂದೇ. ಇಂಥ ಅಜಗಜಾಂತರ ವ್ಯತ್ಯಾಸವಿರುವಾಗ ಅವರು ದಕ್ಷತೆಯಿಂದ ಮುತವರ್ಜಿಯಿಂದ ಕೆಲಸ ಮಾಡಬೇಕೆಂದರೆ ಹೇಗೆ ಸಾಧ್ಯ? ಉತ್ತಮ ಕೆಲಸ ಮಾಡತಕ್ಕವರಿಗೆ ಸಾಕಷ್ಟು ಪ್ರೋತ್ಸಾಹವಿಲ್ಲ. ಇಂಥ ಪರಿಸ್ಥಿಯಲ್ಲಿ ಹುರುಪಿನಿಂದ ಕೆಲಸಮಾಡಲು ಯಾರಿಗೂ ಮನಸ್ಸು ಬರುವುದಿಲ್ಲ. ಎಲ್ಲರಲ್ಲೂ ಅತೃಪ್ತಿ, ಅಸಮಾಧಾನಗಳು ಮೂಡಿವೆ.

ಇನ್ನು ಅಧಿಕಾರಿಗಳ ವರ್ಗಾವರ್ಗಿ ವಿಚಾರಕ್ಕೆ ಬಂದರೆ–ಒಬ್ಬ ಡಿ.ಸಿ.ಯ ವರ್ಗವಾಗಲೀ ಅಥವಾ ಒಬ್ಬ ಸಬ್—ಇನ್‌ಸ್ಪೆಕ್ಟರ ವರ್ಗವಾಗಲೀ ಒಂದಾವರ್ತಿ ಅವರನ್ನು ವರ್ಗಮಾಡಿದಮೇಲೆ ಮುಖ್ಯ ಮಂತ್ರಿಗಳು ಅದನ್ನು ಬದಲಾವಣೆ ಮಾಡಬಾರದು. ಈ ವಿಚಾರಗಳಲ್ಲಿ ಮುಖ್ಯಮಂತ್ರಿಗಳು ಪ್ರವೇಶ ಮಾಡಬಾರದು. ಹೀಗೆ ಇವರು ಆ ವಿಚಾರದಲ್ಲಿ ಪ್ರವೇಶಮಾಡಿ ಸರ್ಕಾರದ ಮುಖ್ಯ ಸೆಕ್ರೆಟೆರಿಗಳನ್ನು ಇವರು ತಮ್ಮ ಲೈನಿಗೆ ಎಳೆಯುವುದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ಕೋ—ಆಪರೇಟೀವ್ ವಿಚಾರಕ್ಕೆ ಬಂದರೆ: ಇದು ನಮ್ಮ ರಾಜ್ಯದಲ್ಲಿ ಸಹಕಾರ ಸಕ್ಸೆಸ್ಸಾಗುವುದಿಲ್ಲವೆಂದು ಅನೇಕರು ಹೇಳುತ್ತಿದ್ದಾರೆ. ಆದರೆ ಈ ವಿಚಾರದಲ್ಲಿ ಕೆಲವು ಅಂಶಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕೆಂದಿದ್ದೇನೆ. ಆದರೆ ನನಗೆ ಒಬ್ಬರು ಒಂದು ಪತ್ರವನ್ನು ಬರೆದು ಕಳುಹಿಸಿದ್ದಾರೆ: ಅದನ್ನೆಲ್ಲಾ ಓದುವುದು ಅನ್‌ಪಾರ್ಲಿಮೆಂಟ್ರಿಯಾಗುತ್ತದೋ ಏನೊ ಎಂಬ ಶಂಕೆಯಿಂದ ನಾನು ಒಂದು ವಿಚಾರಕ್ಕೆ ಮಾತ್ರ ಮಾನ್ಯ ಸಹಕಾರ ಮಂತ್ರಿಗಳ ಗಮನವನ್ನು ಸೆಳೆಯಲು ಒಂದು ವಾಕ್ಯವನ್ನು ಓದಲಿಚ್ಛಿಸುತ್ತೇನೆ. ಈ ಅರ್ಜಿಯ ಕಾಪಿಯನ್ನು ಸಹಿ ಹಾಕಿ ಮುಖ್ಯ ಮಂತ್ರಿಗಳಿಗೂ ಮತ್ತು ಸಹಕಾರ ಮಂತ್ರಿಗಳಿಗೂ ಈಗಾಗಲೇ ಕೊಟ್ಟಿರುತ್ತಾರೆ.

1962-63ನೇ ಆಡಿಟ್ ರಿಪೋರ್ಟ್‌ನಲ್ಲಿ ಈ ಸೊಸೈಟಿಯನ್ನು ಲಿಕ್ವಿಡೇಟ್ ಮಾಡುವ ಪರಿಸ್ಥಿತಿ ಬರಬಹುದು ಎಂಬ ಮಾನ್ಯ ಶ್ರೀ ಜತ್ತಿಯವರು ಆಡಳಿತ ನಿರ್ಮಲವಾಗಿದೆ ಎಂದು ಹೇಳಿದರೂ ಕೂಡ ಸಹಕಾರ ಸಂಘದ ಕೆಲಸಕಾರ್ಯಗಳು ಶ್ರೀಮಾನ್ ಜತ್ತಿಯವರ ಕಾಲದಲ್ಲಿ ಹೇಗೆ ನಡೆಯುತ್ತಿವೆ ಎಂಬುದನ್ನು ನಾನು ಕೇಳಿದ್ದೇನೆ. It is out of the way place that weavers cannot use for their benefit. It would be more useful for the benefit of some of the Directors who come and stay there and have their gala days with wine and women. ಇದಕ್ಕಾಗಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 210 ಲಕ್ಷ ರೂಪಾಯಿಗಳನ್ನು ಕೈಮಗ್ಗದವರ ಅಭಿವೃದ್ಧಿಗಾಗಿ ಖರ್ಚುಮಾಡುತ್ತಿದ್ದಾರೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುತ್ತಾಇಲ್ಲವೆಂದು ನಾನು ಹೇಳುತ್ತೇನೆ. ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಅವರ ಅಭಿವೃದ್ಧಿಗಾಗಿ ಅನೇಕ ಪ್ರಯತ್ನಗಳನ್ನು ಸರ್ಕಾರದವರ ಕೈಗೊಳ್ಳುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಅವರಿಗೆ ಕೊಡುತ್ತಿದ್ದ ಸಬ್ಸಿಡಿ ಮತ್ತು ರಿಬೇಟ್‌ಗಳನ್ನು ಇತ್ತೀಚೆಗೆ ತೆಗೆದುಹಾಕುತ್ತಿದ್ದಾರೆ. ನೇರವಾಗಿ ನೇಕಾರರಿಗೆ ಶೇಕಡ 4ರಷ್ಟು ಬಡ್ಡಿ ಹಣ ಕೊಡುವುದನ್ನು ಬಿಟ್ಟು ಸಬ್ಸಿಡಿ ಬಂದ್ ಮಾಡಿ ಕೇವಲ ಶೇಕಡ ಎರಡೂವರೆಯಷ್ಟು ಕೊಟ್ಟರೆ ಏನು ಲಾಭವಾಗುತ್ತದೆ? ಇನ್ನು ಕಮಿಷನ್ ಹಂಚಿಕೊಡುವುದರಲ್ಲಿಯೂ ಬಡ ಜನರಿಗೆ

ತುಂಬಾ ತೊಂದರೆಯಾಗುತ್ತಿದೆ. ಕೆಲವು ಕಡೆಗಳಲ್ಲಿ 3 ಪಟ್ಟು ರಿಬೇಟ್ ತೆಗೆದುಕೊಳ್ಳುತ್ತಾರೆ. ಈ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದವರೂ ಸಹ ಸಿದ್ಧರಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಸ್ಟೇಟ್‌ವಾರ್ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ಟೇಟ್‌ವಾರ್ ಮಾಡಲಿಕ್ಕೆ ನಾನು ಸಹ ಒಪ್ಪುತ್ತೇನೆ. ಇದನ್ನು ನಿಲ್ಲಿಸಲಿಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಕೇಂದ್ರ ಸರ್ಕಾರಕ್ಕೆ ಈ ನೇಕಾರರ ಅಭಿವೃದ್ಧಿ ಮಾಡಲಿಕ್ಕೆ ಒತ್ತಾಯಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಿಜವಾಗಿ ಸರ್ಕಾರವೇನಾದರೂ ಜೀವಂತವಾಗಿದ್ದರೆ ಇದರ ಬಗ್ಗೆ ಅವರು ಸರಿಯಾದ ರೀತಿಯಲ್ಲಿ ವಿಚಾರಣೆ ನಡೆಸಿ ಆ ಕೋ-ಆಪರೇಟಿವ್ ಸೊಸೈಟಿಯಲ್ಲಿರತಕ್ಕ ಎಡರು ತೊಡರುಗಳನ್ನು ವಿಚಾರಮಾಡತಕ್ಕ ದಿಟ್ಟತನವನ್ನು ಈ ಸರ್ಕಾರ ತೆಗೆದುಕೊಳ್ಳುತ್ತದೆಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನನ್ನಲ್ಲಿರುವ ಕಾಗದವನ್ನು ಅಧ್ಯಕ್ಷಣಿಯವರ ಮುಖಾಂತರ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಆಡಿಟ್ ವರದಿಯಲ್ಲಿ ಒಂದು ಕಥೆ ಹೀಗೆ ಹೇಳುತ್ತಾರೆ. ಆಡಿಟ್ ವರದಿಯನ್ನು ಈ ಮಟ್ಟದಲ್ಲಿ ಕೊಟ್ಟಿದ್ದರೂ ಸರ್ಕಾರ ಇದರ ಬಗ್ಗೆ ಏನು ಗಮನ ತೆದುಕೊಂಡಿದೆ ಎಂಬುದನ್ನು ನಾನು ಕೇಳಬಯಸುತ್ತೇನೆ. ಆಡಿಟ್ ವರದಿಯಲ್ಲಿ if this state of affairs is allowed to continue, a time should come to invoke Section 69 of the M.C.S. Act. It is believed that the Management will take precautionary measures to avoid such unpleasantness ಎಂದು ಹೇಳಿದೆ. 1962-63ನೇ ಸಾಲಿನಲ್ಲಿ 80 ಸಾವಿರ ರೂಪಾಯಿಗಳನ್ನು ವೇವ್ ಮಾಡಬೇಕೆಂಬ ಬಗ್ಗೆ ಜನರಲ್ ಬಾಡಿಯಲ್ಲಿ ಆಲೋಚನೆ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ಆದರೆ ಈ ಸಂಸ್ಥೆಗೆ ಸಂಬಂಧಪಟ್ಟಹಾಗೆ ಒಂದು ವ್ಯಾನಿಗೆ ಒಂದು ನೇಮ್ ಬೋರ್ಡ್ ಇಲ್ಲ, ಲಾಗ್ ಬುಕ್ ಒಂದೂ ಇಲ್ಲ, ಕೇವಲ ಒಂದು ವ್ಯಾನಿಗೆ ಎಷ್ಟೋ ಹಣವನ್ನು ಖರ್ಚು ಮಾಡಿದ್ದಾರೆ. ಇದರ ಬಗ್ಗೆ ಡೈರೆಕ್ಟರ್ಸ್ ಮೀಟಿಂಗ್ ಆಗಿ ಡೈರೆಕ್ಟರ್ಸ್ ರುಜು ಹಾಕಿಕೊಂಡು ಯಾವುದೋ ಒಂದು ದಿನ ನಿರ್ಣಯ ಬರೆದಿರುವುದನ್ನು ನಾನು ನೋಡಿದ್ದೇನೆ. ಅಂದಮೇಲೆ ಸಂಸ್ಥಾನದಲ್ಲಿ ಒಂದು ಲಕ್ಷ ಕೈಮಗ್ಗಗಳನ್ನು ನೋಡಿಕೊಳ್ಳತಕ್ಕ ಆ ಒಂದು ಸೊಸೈಟಿಗೆ ಸರ್ಕಾರದವರು ಎಷ್ಟೋ ಹಣವನ್ನು ಕೊಡುತ್ತಾರೆ. ಸರ್ಕಾರದವರು ಈ ಸಂಸ್ಥೆ ಮಾಡಿಕೊಂಡು 210 ಲಕ್ಷ ರೂಪಾಯಿಗಳನ್ನು ಖರ್ಚುಮಾಡತಕ್ಕ ಕಾಲದಲ್ಲಿ ಈ ಕೈಮಗ್ಗದ ವೃತ್ತಿಯನ್ನು ಅವಲಂಬಿಸಿರತಕ್ಕ ಜನಗಳಿಗೆ ಅದರಿಂದ ಫಲ ದೊರೆಯದೆ ಹೋದರೆ ಅಂತಹ ಸಹಕಾರ ಸಂಘಗಳ ಬಗ್ಗೆ ಈ ಮಟ್ಟದ ಧೋರಣೆ ಇಟ್ಟುಕೊಂಡರೆ ಏನು ಪ್ರಯೋಜನವಾಗುತ್ತದೆಂಬುದನ್ನು ಸರ್ಕಾರ ಯೋಚನೆಮಾಡಬೇಕು.

ಇನ್ನು ಪೋಲೀಸ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ. ಪೋಲೀಸ್ ಇಲಾಖೆ ಬಗ್ಗೆ ಹೇಳುವುದಾದರೆ ಬಹುಶಃ ಈ ಇಲಾಖೆ ಏನಾದರೂ ಜೀವಂತವಾಗಿದೆಯೇ ಇಲ್ಲವೇ ಎಂದು ಹೇಳುವುದು ಕಷ್ಟ. ಶ್ರೀಮಾನ್ ಆರ್. ಎಂ. ಪಾಟೀಲರು ಬಹಳ ವಿಚಾರಪರರು ಮತ್ತು ಬಹಳ ಅನುಭವಸ್ಥರಾದ ಲಾಯರ್. ಅವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಮಂತ್ರಿಗಳಾದ ಪ್ರಥಮದಲ್ಲಿ ಸಾಕಷ್ಟು ಇವರ ಬಗ್ಗೆ ಒಂದು ರೀತಿಯ ಆಶೆ ಇಟ್ಟುಕೊಂಡಿದ್ದೆ. ಕಡೆಕಡೆಯಲ್ಲಿ ಇವರು ಮೊದಲಿನಷ್ಟು ಕೆಲಸಮಾಡುತ್ತಿಲ್ಲವೆಂದು ನಾನು ಹೇಳಬಹುದು. ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಮೊನ್ನೆ ಹೈಕೋರ್ಟಿನಲ್ಲಿ ಒಂದು ತೀರ್ಮಾನವಾಗಿದೆ. 52 ವರ್ಷಗಳಿಗೆ ಮೇಲ್ಪಟ್ಟಿರುವ CI ಸಕ್ಕರೆ ಇನಿಸ್ಪೆಕ್ಟರ್‌ಗೆ ಪ್ರೊಮೋಷನ್ ಕೊಡಬಾರದೆಂದು ಸರ್ಕಾರದ ಧೋರಣೆ ಇದೆ. ಆದರೆ ಹೈಕೋರ್ಟು ಇದರ ಬಗ್ಗೆ ತೀರ್ಮಾನವನ್ನು ವ್ಯತಿರಿಕ್ತವಾಗಿ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿದೆ. ಪ್ರೊಮೋಷನ್ ಕೊಡಬೇಕಾದರೆ (SP) ಮಟ್ಟದಲ್ಲಿ ಏನು ಕಾನ್‌ಫಿಡೆನ್ಷಿಯಲ್ ವರದಿ ಬರುತ್ತದೋ ಅದರ ಮೇಲೆ ಡಿಪೆಂಡ್ ಅಗುತ್ತದೆಂದು ಶ್ರೀಮಾನ್ ಆರ್. ಎಂ. ಪಾಟೀಲ್ ಅವರು ತಿಳಿಸಿದರು. ಎಷ್ಟು ಜನ ಎಸ್.ಪಿ.ಗಳು ಪ್ರಾಮಾಣಿಕರಾಗಿ ಕೆಲಸಮಾಡುತ್ತಾರೆಂಬುದು ನನಗೆ ಗೊತ್ತು. ಅಪ್ರಾಮಾಣಿಕರಾಗಿರುವವರು ಏನು ವರದಿಯನ್ನು ಬರೆಯುತ್ತಾರೆಂಬುದೂ ಸಹ ನನಗೆ ಗೊತ್ತು. ಇಂತಹ ಸಂದರ್ಭದಲ್ಲಿ ಎಸ್. ಪಿ. ಪ್ರೊಮೋಷನ್ ಕೊಡುತ್ತೇವೆಂದು ಹೇಳಿದರೆ ಕಾನ್‌ಫಿಡೆನ್ಷಿಯಲ್ ರಿಪೋರ್ಟಿನ ಆಧಾರದ ಕೆಳಮಟ್ಟದಲ್ಲಿರುವ ಅಧಿಕಾರಿಯನ್ನು ಕರಪ್ಷನ್ನಲ್ಲಿ ತೊಡಗುವಂತಹ ಒಂದು ಸಂದರ್ಭವನ್ನು ಈ ಸರ್ಕಾರದವರೇ ಸೃಷ್ಟಿ ಮಾಡುತ್ತಿದ್ದಾರೆ. ಒಂದುವೇಳೆ ಎಸ್. ಪಿ. ಅಪ್ರಾಮಾಣಿಕನಾದರೆ ಅವನು ವಿಮ್ಸ್ ಅಂಡ್ ಫ್ಯಾನ್ಸಿಗೋಳಗಾಗಿ ಕಳುಹಿಸಿದ ಒಂದು ಕಾನ್‌ಫಿಡೆನ್‌ಷಿಯಲ್ ವರದಿ ಸಹಾಯವಾಗುತ್ತದೆಂದು ಈ ಸರ್ಕಾರದವರು ನಿರ್ಣಯ ಮಾಡಿದ್ದಾರೆ. ಅದು ತಪ್ಪು. ಅದನ್ನು ಖಂಡಿತವಾಗಿ ಕೂಡಲೇ ಪುನರ್ವಿಮರ್ಶೆ ಮಾಡಬೇಕು. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಬ್ಬ

(ಶ್ರೀ ಎಚ್. ಡಿ. ದೇವೇಗೌಡ)

ಹೆಡ್ ಕಾನ್‌ಸ್ಟೆಬಲ್ ತನ್ನ ತಾಯಿಯ ಹೆಸರಿನಲ್ಲಿ ಆಸ್ತಿಯನ್ನು ರಿಜಿಸ್ಟರ್ ಮಾಡಿಸಿಕೊಂಡಿದ್ದಾನೆ. ಸದರಿ ಆಪಾದನೆಯ ಮೇಲೆ ಈಗ ಅವನನ್ನು ಡಿಸ್‌ಮಿಸ್ ಮಾಡಿದ್ದಾರೆ. ಆದರೆ ಇಂದು ಅನೇಕ ಅಧಿಕಾರಿಗಳು ತಮ್ಮ, ಹೆಂಡತಿ, ಮಾವ, ಅತ್ತೆ ಅವರ ಹೆಸರಿನಲ್ಲಿ ಬೇಕಾದಷ್ಟು ಆಸ್ತಿ ಮಾಡಿದ್ದಾರೆ. ಅಂತಹವರನ್ನು ಎಷ್ಟು ಜನರನ್ನು ಡಿಸ್‌ಮಿಸ್ ಮಾಡಿದ್ದಾರೆಯೋ ಗೊತ್ತಿಲ್ಲ. ಸರ್ಕಾರಕ್ಕೆ ಇಂಥಾದ್ದನ್ನು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಧೈರ್ಯವಿದೆಯೇ ? ಈಗ ಆ ಪೋಲೀಸ್ ಕಾನ್‌ಸ್ಟೇಬಲ್ ಬೀದಿಯಲ್ಲಿ ಅಲೆಯುತ್ತಿದ್ದಾನೆ. ಮೈಸೂರು ಲ್ಯಾಂಡ್ ಮಾರ್ಟ್‌ಗೇಜ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಇವತ್ತಿನ ದಿವಸ ಸಾಲಕ್ಕೆ ಅಪ್ಲೈ ಮಾಡಿದ್ದಾನೆ. ಹೋಮ್ ಡಿಪಾರ್ಟ್‌ಮೆಂಟಿನ ಒಬ್ಬ ಅಂಡರ್-ಸೆಕ್ರೆಟರಿ ಈ ಅಧಿಕಾರಿಯನ್ನು ಕರೆದು ಹೀಗೆ ಹೇಳಿದರಂತೆ, ಅಸೆಂಬ್ಲಿ ಸದಸ್ಯರನ್ನು ಕರೆದುಕೊಂಡು ಬಂದರೆ ಏನೂ ಕೆಲಸವಾಗುವುದಿಲ್ಲ, ನಿಮಗೆ ಅಂಡರ್ ಸೆಕ್ರೆಟರಿಯವರನ್ನು ಹೇಗೆ ನೋಡಬೇಕು ಗೊತ್ತಿಲ್ಲ ಎಂದು ತಿಳಿಸಿದರು. ಆದರೆ ಅಂಡರ್ ಸೆಕ್ರೆಟರಿ ಒಬ್ಬ ಹೇಳಿದರೆ ಕೆಲಸವಾಗುತ್ತದೆ. ಆದ್ದರಿಂದ ಈ ಸರ್ಕಾರ ಜೀವಂತವಾಗಿದೆಯೇ ಎಂದು ಕೇಳುತ್ತೇನೆ. ನಾನು ಸೆಕ್ರೆಟರಿ ಬಗ್ಗೆ ಹೇಳುತ್ತಾ ಇಲ್ಲ, ಅಂಡರ್-ಸೆಕ್ರೆಟರಿ ಬಗ್ಗೆ ಹೇಳುತ್ತಾ ಇದ್ದೇನೆ. ಒಂದು ಮಾತನ್ನು ಹೇಳುತ್ತೇನೆ. ಸರ್ಕಾರದವರು ತಮ್ಮ ಇಲಾಖೆಗಳಲ್ಲಿರತಕ್ಕ ಮೆಷಿನರಿಗಳನ್ನು ಸರಿಯಾಗಿ ಪುಲಪ್ ಮಾಡದೆ ಇದ್ದರೆ ಆಡಳಿತದಲ್ಲಿ ಯಾವ ಪಕ್ಷವೇ ಇರಲಿ ಸರ್ಕಾರಕ್ಕೆ ಗೌರವ ತರಲಿಕ್ಕಿಲ್ಲವೆಂದು ನಾನು ಮಾನ್ಯ ಸಚಿವರಲ್ಲಿ ಸೂಚಿಸಲು ಇಷ್ಟಪಡುತ್ತೇನೆ.

ಇನ್ನೊಂದು ವಿಷಯ. ಪ್ರೊಹಿಬಿಷನ್ ಬಗ್ಗೆ ಒಂದು ಮಾತನ್ನಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಇವತ್ತು ಕೇಸುಗಳನ್ನು ಇಲ್ಲಿಸಿಟ್ ಡಿಸ್ಟಿಲೇಷನ್ ಮಾಡುವುದರಿಂದ ಹಾಕುತ್ತಾರೆ. ಇದರಲ್ಲಿ ಅವರು ಪ್ರೊಹಿಬಿಷನ್ನನ್ನು ಜಾರಿಗೆ ತಂದಿರುವ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಹುರುಳಿಲ್ಲವೆಂದು ಹೇಳುವುದಕ್ಕೆ ಇವತ್ತು ಅವರು ಕೊಟ್ಟಿರತಕ್ಕ ಅಂಕಿಅಂಶಗಳೇ ಸಾಕು ಎಂಬುದಾಗಿ ನಾನು ಹೇಳುತ್ತೇನೆ. ನಿಜವಾಗಿ ಪೋಲೀಸಿನವರು ಅವರ ಜೊತೆಯಲ್ಲಿ ಸೇರಿಕೊಂಡು ಸರ್ಕಾರದವರು ಪ್ರೊಹಿಬಿಷನ್ನನ್ನು ಸರಿಯಾದ ರೀತಿಯಲ್ಲಿ ಬಿಗಿಯಿಂದ ನಿಲ್ಲಿಸತಕ್ಕ ವ್ಯವಸ್ಥೆಗೆ ಆತಂಕ ಮಾಡುತ್ತಿರುವುದಾಗಿ ಕಂಡುಬರುತ್ತಿದೆ. ಅದು ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳಿಂದ ಗೊತ್ತಾಗುತ್ತದೆ ಎಂಬುದಾಗಿ ನಾನು ಹೇಳುತ್ತೇನೆ.

ಇವೊತ್ತಿನ ದಿವಸ ಎಸ್. ಪಿ. ಅವರು ; ತರುಣರು ಅವರು ಬಹಳ ಉತ್ಸಾಹದಿಂದ ಕೆಲಸಮಾಡುತ್ತಿದ್ದಾರೆ. ಅವರು ಈ ಪ್ರೊಹಿಬಿಷನ್ ರೈಡ್ ಮಾಡಬೇಕೆಂದು ಸುಮಾರು 3 ತಿಂಗಳ ಕಾಲ ಪ್ರಯತ್ನ ಮಾಡಿದರು. ಆದರೂ ಸಹ ಅವರ ಕೈಲಿ ಒಂದು ಕೇಸನ್ನೂ ರೈಡ್ ಮಾಡುವುದಕ್ಕೆ ಆಗಲಿಲ್ಲ. ಅವರಿಗೆ ಇನ್‌ಫರ್‌ಮೇಷನ್ ಎಲ್ಲಿಂದ ಹೋಗುತ್ತದೆ, ಹೇಗೆ ಇನ್‌ಫರ್‌ಮೇಷನ್ ಕೊಡುತ್ತಾರೆಂಬುದನ್ನು ಪತ್ತೆ ಹಚ್ಚಿ ಅದನ್ನು ಕಂಟ್ರೋಲ್ ಮಾಡಬೇಕೆಂದು ಇನ್‌ಸ್ಪೆಕ್ಟರು, ಸಬ್-ಇನ್‌ಸ್ಪೆಕ್ಟರುಗಳನ್ನು ಮತ್ತು ಕಾನ್‌ಸ್ಟೇಬಲ್‌ಗಳನ್ನು ಕಳುಹಿಸಿ ರಿಜರ್ವ್ ಪೋಲೀಸ್ ಕಾವಲು ಹಾಕಿ ಪ್ರೋಹಿಬಿಷನ್ ಕೇಸನ್ನು ರೈಡ್ ಮಾಡಿದರು. ಸುಮಾರು 8 ಮನೆಗಳಲ್ಲಿ ಇಲ್ಲಿಸಿಟ್ ಡಿಸ್ಟಿಲೇಷನ್ ಕೇಸನ್ನು ಹಿಡಿದರು. ಹೀಗೆ ಒಬ್ಬ ಪ್ರಾಮಾಣಿಕನಾದ ಅಧಿಕಾರಿಯಿಂದ ಹತ್ತಾರು ಜನ ಅಧಿಕಾರಿಗಳು ಪ್ರಾಮಾಣಿಕರಾಗಿದ್ದಾರೆ. ಈ ಒಂದು ಪ್ರೊಹಿಬಿಷನ್ ನೀತಿ ಏನಿದೆಯೋ ಅದನ್ನು ಫಲಕಾರಿಯಾಗಿ ಮಾಡುವುದಕ್ಕಾಗುವುದಿಲ್ಲ. ಇದರಿಂದ 100ಕ್ಕೆ 90 ಜನ ಅನೀತಿಯುತವಾದ ರೀತಿಯಲ್ಲಿ ನಡೆಯತಕ್ಕ ಸನ್ನಿವೇಶದಲ್ಲಿ ಅದನ್ನು ಕಾರ್ಯಗತ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕು. ಈ ವಿಷಯವನ್ನು ಹೇಳಿದಾಗ ಶ್ರೀಮಾನ್ ರಾಚಯ್ಯನವರಿಗೆ ಮುಖ ಸ್ವಲ್ಪ ಪೆಚ್ಚಾಗುತ್ತದೆ. ಏತಕ್ಕೆಂದರೆ ಅವರು ಒಂದು ಸ್ಟೇಟ್‌ಮೆಂಟ್ ಅನ್ನು ಕೊಟ್ಟಿದ್ದಾರೆ, ಈ ಪ್ರೊಹಿಬಿಷನ್ ಪಾಲಸಿಯನ್ನು ಬದಲಾವಣೆ ಮಾಡುವುದಾದರೆ ನಾನು ರಾಜೀನಾಮೆಯನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ ಎಂದು. ನಾವು ಈಗಾಗಲೇ ನೋಡಿರುವಂತೆ ಈ ಪ್ರೊಹಿಬಿಷನ್ ಪಾಲಿಸಿಯು ಕೆಲವು ಕಡೆ ಬದಲಾವಣೆಯಾಗಿದೆ. ನಮ್ಮ ದೇಶದಲ್ಲಿ ಈ ಪಾನನಿರೋಧ ನೀತಿ ವಿಫಲವಾಗಿದೆ. ಎಷ್ಟೋ ಜನ ಹರಿಜನರನ್ನು ಈ ಕಾನೂನನ್ನು ತಿಳಿದಿರತಕ್ಕವರು ಕೆಡಿಸುವುದನ್ನು ನಾನು ಬೇಕಾದರೆ ತೋರಿಸುತ್ತೇನೆ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ಸಮಾಜದಲ್ಲಿ ಇಂಥಾ ಒಂದು ಕಾನೂನಿನ ಮುಖಾಂತರ ಅದನ್ನು ಸಾಧನೆ ಮಾಡುತ್ತೇವೆಂದು ಹೇಳತಕ್ಕ ನೀತಿ ಏನಿದೆಯೋ ಅದು ತಪ್ಪು. ನಾವು ಮಾಡತಕ್ಕಂಥ ಕೆಲಸ ತಪ್ಪು ಇದು ಸರಿಯಲ್ಲ ಎನ್ನುವ ಭಾವನೆ ಜನಗಳಿಗೆ ಬರುವವರೆಗೂ ಇಂಥಾ ಒಂದು ಕಾನೂನನ್ನು ಮಾಡಿ ಅದನ್ನು ಅವರು ಡಿಸ್‌ರಿಗಾರ್ಡ್ ಮಾಡತಕ್ಕ ಪರಿಸ್ಥಿತಿಗೆ ಜನತೆಯನ್ನು ಎಳೆಯುವುದು ಸರಿಯಲ್ಲ. ಆದ್ದರಿಂದ ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಬೇಕೆಂದು.

ಹೇಳಿ ನನಗೆ ಮಾತನಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯಪಾಲರು ಈ ಸಭೆಯಲ್ಲಿ ಕನ್ನಡದಲ್ಲಿ ಭಾಷಣ ಮಾಡಿದ್ದನ್ನು ಸ್ವಾಗತಿಸಲು ನಮಗೆ ಎಷ್ಟು ಆನಂದವಾಯಿತೋ ಅದೇ ರೀತಿಯಲ್ಲಿ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀ ಮಾನ್ ಜತ್ತಿಯವರು ಈ ಸಭೆಯ ಮುಂದೆ ಇಟ್ಟಿರುವ 1964–65ನೇ ಸಾಲಿನ ಆಯವ್ಯಯ ಮುಂಗಡ ಪತ್ರವನ್ನು ಸ್ವಾಗತಿಸಲು ನನಗೆ ತುಂಬಾ ಆನಂದವೆನಿಸುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಮುಂದಿನ ವರ್ಷ ಏನೇನು ಕೆಲಸ ಕಾರ್ಯಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆಯೋ ಅದನ್ನೇ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳಾದ ಜತ್ತಿಯವರು ತಮ್ಮ ಆಯವ್ಯಯ ಮುಂಗಡ ಪತ್ರದಲ್ಲಿ ಹೇಳಿದ್ದಾರೆ, ಈ ಅಲ್ಪ ಉಳಿತಾಯದ ಮುಂಗಡ ಪತ್ರವನ್ನು ಕಂಡು ನಾವು ಹಿಗ್ಗ ಬೇಕಾಗಿಲ್ಲ. ಈ ಮುಂಗಡ ಪತ್ರದಲ್ಲಿ ಪ್ರಾರಂಭದ ಸಿಲ್ಕನ್ನು ಕೊನೆಯ ಸಿಲ್ಕನ್ನು ನೋಡುವುದಾದರೆ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯು ಕಳವಳಕಾರಿಯಾಗಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಈ ವರ್ಷ ಇದರಲ್ಲಿ ತೋರಿಸಿರತಕ್ಕ ಕೊರತೆಯನ್ನು ಯಾವರೀತಿ ತುಂಬಿಕೊಳ್ಳಬೇಕು ಎನ್ನುವ ಸೂಚನೆಯನ್ನು ಶ್ರೀಮಾನ್ ಜತ್ತಿಯವರು ಮಾಡಿಲ್ಲ. ಈ ತೊಂದರೆಯನ್ನು ಭಾರತ ಸರ್ಕಾರದವರ ತಾತ್ಕಾಲಿಕ ಹಣದ ಬೇಡಿಕೆಯ ಸಹಾಯದಿಂದ ತುಂಬಿಕೊಳ್ಳುವ ಮಾತನ್ನು ಎತ್ತಿ ತೋರಿಸಿದ್ದಾರೆ. ನಮ್ಮ ದೇಶದಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ಕೇಂದ್ರ ಸರ್ಕಾರದವರು 250 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಅದರ ಬಗ್ಗೆ ನಮ್ಮ ರಾಜ್ಯ ಸರ್ಕಾರದ ಪಾಲು ಬೇರೆ ಕೊಡಬೇಕಾಗಿರುವುದರಿಂದ ಅದಕ್ಕೆ ಸಂಬಂಧಪಟ್ಟಹಾಗೆ 50–60 ಕೋಟಿ ರೂಪಾಯಿಗಳ ಕೊರತೆ ಬೀಳುತ್ತದೆ. ಈ ಕೊರತೆಯನ್ನು ತುಂಬುವುದಕ್ಕೆ ನಿರ್ದಿಷ್ಟವಾದ ಸೂಚನೆಗಳನ್ನು ಇದರಲ್ಲಿ ಕೊಡಬೇಕಾಗಿತ್ತು. ಆದರೆ ಅದನ್ನು ಇದರಲ್ಲಿ ಕೊಟ್ಟಿಲ್ಲ. ಇತರ ರಾಜ್ಯಗಳು ಯೋಜನೆಗಳಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ಶಕ್ತಿ ಸಾಮರ್ಥ್ಯವನ್ನು ಪಡೆದು ಕೊಂಡಿರುವಾಗ ಮೈಸೂರು ರಾಜ್ಯದವರು ಮಾತ್ರ ಮುಗ್ಗಟ್ಟನ್ನು ಎದುರಿಸಲು ಕಾರಣವೇನು? ನಾನು ತಿಳಿದು ಕೊಂಡಿರುವ ಹಾಗೆ ನಮ್ಮ ಹಣಕಾಸಿನ ಸಚಿವರು ಹೊಸ ತೆರಿಗೆಗಳನ್ನು ಹೇರುವುದಿಲ್ಲ ಎಂದು ಹೇಳಿದ್ದಾರೆ. ಮತ್ತು ಈಗ ಹಾಲಿ ಇರತಕ್ಕ ತೆರಿಗೆಗಳನ್ನು ವಸೂಲು ಮಾಡುವುದರಲ್ಲಿ ಪ್ರಭಾವೀ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಅನಾವಶ್ಯವಾದ ಖರ್ಚುಗಳನ್ನು ವರ್ಜಿಸುತ್ತೇವೆ, ಅವಶ್ಯಕವಾದ ಖರ್ಚುಗಳನ್ನು ಮುಂದುವರಿಸುತ್ತೇವೆ, ಕೆಲವೊಂದು ಹಣವನ್ನು ಉಳಿಸುತ್ತೇವೆ, ಕೆಲವೊಂದು ಗಳಿಸುತ್ತೇವೆ ಎನ್ನುವುದನ್ನು ಎತ್ತಿ ತೋರಿಸಿ ಜನತೆಯನ್ನು ಕರಭಾರದಿಂದ ಮುಕ್ತರನ್ನಾಗಿ ಮಾಡಿದ್ದಾರೆ. ಹಿಂದಿನ ಅಧಿವೇಶನದಲ್ಲಿ ಹಿಂದಿನ ವರ್ಷದ ಕೊರತೆಯನ್ನು ತುಂಬಿ ಕೊಳ್ಳುವುದರ ಸಲುವಾಗಿ ಮರು ತೆರಿಗೆಗಳ ತಿದ್ದುಪಡಿಗಳನ್ನು ಕೆಲವನ್ನು ಈ ಸಭೆಯಲ್ಲಿ ತಂದು ಕೆಲವೊಂದು ಆದಾಯವನ್ನು ತಂದುಕೊಂಡರು. ಈಗ ನಮ್ಮ ಮುಂದೆ ಇಟ್ಟಿರುವ ಮುಂಗಡ ಪತ್ರದಲ್ಲಿ ನೌಕರರಿಗೆ ತುಟ್ಟಿ ಭತ್ಯವನ್ನು ಹೆಚ್ಚಿಸುವುದು, ವೃದ್ಧಾಪ್ಯವೇತನ, ಕುಟುಂಬವೇತನ ಇತ್ಯಾದಿ ಸೌಲಭ್ಯಗಳನ್ನು ಕೊಡುವುದಾಗಿ ತಿಳಿಸಿದ್ದಾರೆ. ಆದರೆ ಅವುಗಳಿಗೆ ಈ ಮುಂಗಡ ಪತ್ರದಲ್ಲಿ ಹಣವನ್ನು ಇಟ್ಟಿಲ್ಲ. ಈ ಬಾಬುಗಳಿಗೆ ಯಾವ ರೀತಿ ಹಣವನ್ನು ಒದಗಿಸುತ್ತಾರೆ ಎನ್ನುವ ವಿಷಯವನ್ನು ಇದರಲ್ಲಿ ಕಾಣಿಸಿಲ್ಲ. ನೀರಾವರಿ ಯೋಜನೆ, ವಿದ್ಯುಚ್ಛಕ್ತಿಯ ಉತ್ಪಾದನೆ, ಮತ್ತು ವ್ಯವಸಾಯ ಇವುಗಳ ಸಲುವಾಗಿ ಸ್ವಲ್ಪ ಹೆಚ್ಚು ಪ್ರಗತಿಯನ್ನು ಸಾಧಿಸಬಹುದು ಎಂಬುದನ್ನು ಎತ್ತಿ ತೋರಿಸಿದ್ದಾರೆ. ವಿದ್ಯುಚ್ಛಕ್ತಿಯ ಉತ್ಪಾದನೆ ಆದಷ್ಟು ಬೇಗ ಆಗಲಿ ಎಂದು ನಾನು ದೇವರನ್ನು ಬೇಡಿಕೊಳ್ಳುತ್ತೇನೆ. ಆಹಾರ ಧಾನ್ಯಗಳ ಬೆಳೆಗಳು ಹೆಚ್ಚಾಗಿದ್ದರೂ ಕೂಡ, ಆಹಾರ ಧಾನ್ಯಗಳ ಕೊರತೆ ಮತ್ತು ಬೆಲೆಗಳ ಏರಿಕೆ ಇವುಗಳು ವಿವಿಂಚನಾತ್ಮಕವಾಗಿವೆ. ಎಂದು ಆರ್ಥಿಕ ಮಂತ್ರಿಗಳೇ ಹೇಳುವಾಗ ಟೀಕೆ ಅನಾವಶ್ಯಕ.

ಇನ್ನು ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ 32 ದೊಡ್ಡ ನೀರಾವರಿ ಯೋಜನೆಗಳು ಮತ್ತು ಮಧ್ಯಮ ವರ್ಗದ ನೀರಾವರಿ ಯೋಜನೆಗಳು ಸೇರ್ಪಡೆಯಾಗಿವೆ ಎಂದು ಕಾಣುತ್ತದೆ. ಆ ಪೈಕಿ 25 ಯೋಜನೆಗಳನ್ನು ಎರಡನೇ ಪಂಚವಾರ್ಷಿಕ ಯೋಜನೆಯಿಂದ ಮುಂದುವರಿಸಿಕೊಂಡು ಬಂದಿದ್ದಾರೆ. ಇದರಲ್ಲಿ ಘಟಪ್ರಭಾ ಯೋಜನೆ ಬಹಳ ಹಳೆಯದು. ನಾನು ಕಾಲೇಜಿಗೆ ಹೋಗುವುದಕ್ಕೆ ಮುಂಚೆಯೇ ಘಟಪ್ರಭಾ ಯೋಜನೆಗೆ ಅಸ್ತಿಭಾರವನ್ನು ಹಾಕಿದ್ದನ್ನು ನಾನು ಕೇಳಿದ್ದೇನೆ. ಆದರೂ ಸಹ ಇಲ್ಲಿಯವರೆಗೂ, ಅದು ಕಾರ್ಯಗತ ಆಗದೇ ಇರುವುದಕ್ಕೆ ಕಾರಣವನ್ನು ತಿಳಿಯದಂತಾಗಿದೆ. ಪ್ರತಿವರ್ಷ ಅದಕ್ಕೆ 20–25 ಲಕ್ಷರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿರುತ್ತಾರೆ. ಆ ಹಣವನ್ನು ಅಲ್ಲಿ ಕೆಲಸ ಮಾಡತಕ್ಕ ನೌಕರರ ಸಂಬಳಕ್ಕೂ ಮತ್ತು ಅವರು ಓಡಾಡತಕ್ಕ ಜೀಪಿನ ಪೆಟ್ರೋಲಿಗೂ ಖರ್ಚು ಮಾಡುತ್ತಾರೆ. ಹೀಗಾಗಿ ಅಲ್ಲಿ ಒಂದು ಇಂಚು ಕೆಲಸ ಕೂಡ ಆಗಿರುವುದಿಲ್ಲ

(ಶ್ರೀ ಆರ್. ಎಸ್. ಪಾಟೀಲ್)

ಎಂಬುದು ನಮಗೆ ಕಂಡು ಬರುತ್ತದೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮುಧೋಳದ ಹತ್ತಿರ ಇರುವ ನನ್ನ ಹೊಲದಲ್ಲಿ ಇರುವ ಕಾಲುವೆ ಈಗ 5–6 ವರ್ಷಗಳಿಂದ ಹಾಗೆಯೇ ಇದೆ. ಅದರಲ್ಲಿ ನೀರು ಮಾತ್ರ ಬರುವುದಿಲ್ಲ. ಮಲಪ್ರಭಾ ಮತ್ತು ಕೃಷ್ಣಾ ಯೋಜನೆಗಳಿಗೆ ತಾಂತ್ರಿಕ ಅನುಮತಿ ಸಿಕ್ಕಿದೆ, ಆ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ ಎಂದು ಮಾನ್ಯ ಹಣಕಾಸಿನ ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದರು.

ನಾವು ಇಲ್ಲಿ ನೋಡುತ್ತ ಇರುವ ಪ್ರಕಾರ ಅಲ್ಲಿ ಪ್ರಾರಂಭದ ಕೆಲಸಗಳು ಯಾವುವೂ ಆಗುತ್ತಾ ಇಲ್ಲ. ಅಲ್ಲ ಕೆಲವು ಕಟ್ಟಡಗಳು ಆಗುತ್ತಿರುವುದನ್ನೂ ಸ್ವಲ್ಪ ಚಾನಲ್ ಮಾತ್ರ ತೆಗೆದಿರುವುದನ್ನೂ ನೋಡಬಹುದು.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಆ ಭಾಗದಿಂದ ಬರುವವರು. ಅಲ್ಲಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಕಟ್ಟಡಗಳನ್ನು ಕಟ್ಟಲು 50 ಲಕ್ಷರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಆರ್. ಎಸ್. ಪಾಟೀಲ್.—ಕಟ್ಟಡಗಳ ಕೆಲಸ ಆಗಿದೆ. ಆದರೆ ಕಟ್ಟೆಯ ಕೆಲಸ ಆಗಿಲ್ಲ ಅಲ್ಲಿಗೆ ಒದಗಿಸುವ ಹಣವೆಲ್ಲ ಇಂಜಿನಿಯರು, ಸಿಬ್ಬಂದಿ, ಇವರ ಪಗಾರ, ಮೋಟಾರುಗಳಿಗೆ ಪೆಟ್ರೋಲ್ ವಗೈರೆಗಳಿಗಾಗಿ ಹಣ ಖರ್ಚಾಗುತ್ತಿದೆ. ಇದರ ಸಲುವಾಗಿ ಮಾತ್ರ ಖರ್ಚಾಗುತ್ತಿದೆ ಎಂದು ಹೇಳಬಯಸುತ್ತೇನೆ.

ಸಭಾಪತಿಯವರು :—ಮಾನ್ಯ ಸದಸ್ಯರು ನಾಳೆಯ ದಿನ ತಮ್ಮ ಭಾಷಣವನ್ನು ಮುಂದುವರಿಸಬಹುದು. ಸಭೆಯು ಈಗ ಎದ್ದು ಮತ್ತೆ ನಾಳೆ ಬೆಳಿಗ್ಗೆ ಎಂಟೂವರೆ ಗಂಟೆಗೆ ಸೇರುತ್ತದೆ.

The House adjourned at Thirty Minutes past Five of the Clock to meet again at Thirty Minutes past Eight of the Clock on Saturday, the 7th March 1964.

WD 2485—GPB—900—8-5-64

MYSORE LEGISLATIVE ASSEMBLY

NINTH DAY.

Saturday, 7th March 1964.

The House met in the Assembly Hall, Vidhana Soudha, Bangalore at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Tanks in Mandya District.

*Q.—51. Sri N. NANJE GOWDA (Krishnarajpet).—

Will the Government be pleased to state :—

(a) the number of tanks in Mandya District having an atchkat of more than 200 acres ;

(b) the number of tanks having an atchkat of more than 100 acres in the above district ;

(c) out of them, the number of tanks which have been desilted together with their location ?

A.—Sri ALUR HANUMANTHAPPA (Deputy Minister for Minor Irrigation).—

(a) 31.
(b) 33.
(c) Nil.

Sri N. NANJE GOWDA.—200 ಎಕರೆಗೆ ಮೇಲ್ಪಟ್ಟು ಅಚ್ಚುಕಟ್ಟಿರುವ ಕೆರೆಗಳು 31 ಎಂದು ಹೇಳಿದ್ದೀರಿ, ಇವು ಯಾರ ಆಡಳಿತಕ್ಕೊಳಪಟ್ಟಿವೆ ?

† ಶ್ರೀ ಆಲೂರು ಹನುಮಂತಪ್ಪ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿವೆ.

ಶ್ರೀ ಎನ್. ನಂಜೇಗೌಡ.—ಇವು ರೆವಿನ್ಯೂ ಇಲಾಖೆಯ ಆಡಳಿತಕ್ಕೊಳಪಟ್ಟಿಲ್ಲವೆ ?

Sri ALUR HANUMANTHAPPA.—Hitherto the supervision of the tanks was with the Revenue Department, but now Government has thought it fit to transfer them to the P.W.D. for maintenance and repairs.

---

†Indicates that the remarks or speeches have not been revised by the member concerned.

ಶ್ರೀ ಎನ್. ನಂಜೇಗೌಡ.—ಹೂಳು ಬಿದ್ದುದರಿಂದ ಈ ಕೆರೆಗಳ ಕೆಳಗೆ ಮುಂಚೆ ಎಷ್ಟು ಎಕರೆ ಶೇರಿ ಆಗುತ್ತಿತ್ತೊ ಅಷ್ಟು ನೀರಾವರಿಯಾಗದೆ ಕಡಮೆ ಬಿದ್ದಿರುವುದು ಗೊತ್ತಿದೆಯೆ ?

ಶ್ರೀ ಆಲೂರು ಹನುಮಂತಪ್ಪ.—ಹೂಳು ಮುಚ್ಚಿರುವ ವಿಚಾರವನ್ನು ಅನೇಕ ಸಂದರ್ಭಗಳಲ್ಲಿ ಈ ಸಭೆಗೆ ತಿಳಿಸಿದ್ದೇನೆ. ಕ್ಯಾಚ್‌ಮೆಂಟ್ ಪ್ರದೇಶದಲ್ಲಿ ಮಳೆ ಬಿದ್ದು ಬರುವ ನೀರಿನ ಜೊತೆಯಲ್ಲಿ ಮಣ್ಣು ಕೂಡ ಬಂದು ಕೆರೆಯೊಳಕ್ಕೆ ಬೀಳುತ್ತದೆ.

ಶ್ರೀ ಎಂ. ಸಿ. ಬಸಪ್ಪ.—ಡೀಸಿಲ್ಟಿಂಗ್ ಕಾರ್ಯಕ್ರಮ ಮೂರನೆಯ ಯೋಜನೆಯಲ್ಲಿದೆಯಲ್ಲವೆ?

ಶ್ರೀ ಆಲೂರು ಹನುಮಂತಪ್ಪ.—ಹೌದು, ಆಳ ಮಾಡಲು ಎಲ್ಲೆಲ್ಲಿ ಸಾಧ್ಯವೊ, ಅಲ್ಲಿ ಬುಲ್ ಡೋಜರುಗಳನ್ನುಪಯೋಗಿಸಿ ಆಳ ಮಾಡುವುದಕ್ಕೆ ಕೆಲವು ಕಡೆ ಈಗಾಗಲೇ ಕ್ರಮಗಳನ್ನು ತೆಗೆದು ಕೊಳ್ಳುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕ್ಯಾಚ್‌ಮೆಂಟ್ ಪ್ರದೇಶದಿಂದ ಮಣ್ಣು ಕೆರೆಗೆ ಬರುತ್ತದೆಂದು ಹೇಳುತ್ತೀರಿ, ಅದನ್ನು ತಪ್ಪಿಸುವುದಕ್ಕೆ ಏನು ಮಾಡುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಕಾಂಟೂರ್ ಬಂಡಿಂಗ್, ಸಾಯಿಲ್ ಕನ್‌ಸರ್ವೇಷನ್, ಸಿಲ್ಟ್ ಡ್ಯಾಮ್ಸ್ ಹಾಕುವುದು ಮುಂತಾದುವನ್ನು ಈಗಾಗಲೇ ಅನೇಕ ಕಡೆ ಮಾಡುತ್ತಿದ್ದಾರೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಮೇಜರ್ ಕೆರೆಗಳ ನೀರುಗಂಟಿಗಳನ್ನು ಸರಕಾರದವರು ನೇಮಕ ಮಾಡುತ್ತಾರೆ, ಹಾಗೆ ಇವುಗಳಿಗೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ನೇಮಿಸುತ್ತಾರೆಯೆ ?

ಶ್ರೀ ಆಲೂರು ಹನುಮಂತಪ್ಪ.—ಸೌಡಿಗಳನ್ನು ಕಡ್ಡಾಯವಾಗಿ ನೇಮಕ ಮಾಡಬೇಕಾಗುತ್ತದೆ. ಇರಿಗೇಷನ್ ಆಕ್ಟ್ ಪ್ರಕಾರ ಸೂಪರ್‌ವಿಷನ್, ರೆಗ್ಯುಲೇಷನ್, ಕಂಟ್ರೋಲ್ ಎಲ್ಲವೂ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲೇ ಬರುವುದರಿಂದ, ಈ ಕೆಲಸವನ್ನು ನಾಲಾ ಮಣೇಗಾರರು ವಹಿಸಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಕೆರೆಗಳ ಮೇಲಿರುವ ಸರಕಾರಿ ಜಮೀನುಗಳನ್ನು ಸಾಗುವಳಿಗೆ ಕೊಡುವುದರಿಂದ, ಅದನ್ನು ಅವರು ಉಳುಮೆ ಮಾಡಿ ಆ ಮಣ್ಣು ಕೆರೆಗಳಿಗೆ ಬಂದು ತುಂಬುತ್ತಿದ್ದರೆ ಸರಕಾರದವರು ಆ ಜಮೀನನ್ನು ಕೊಡುವುದನ್ನು ತಪ್ಪಿಸುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಉಳುಮೆಯಾಗಿ ಮೇಲಿರುವ ಜಮೀನಿನಿಂದ ಮಣ್ಣು ಕೆರೆಗೆ ಬರುತ್ತದೆ ಎಂಬುದು ನಿಜವಾದರೂ, ಕೆರೆಯ ಮೇಲೆ ಯಾವ ಜಮೀನಿದ್ದರೂ ಅದರಿಂದ ಮಣ್ಣು ಮಳೆಯ ನೀರಿನೊಡನೆ ಕೆರೆಯೊಳಕ್ಕೆ ಬರುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೆಲವು ಕಡೆ ಡೀಸಿಲ್ಟಿಂಗ್ ಮಾಡುತ್ತಿದ್ದೇವೆಂದು ಅಪ್ಪಣೆ ಕೊಡಿಸಿದಿರಿ, ಇದಕ್ಕಾಗಿ ಎಷ್ಟು ಹಣವನ್ನೊದಗಿಸಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಕೆಲವು ಕಡೆ ರಿಕ್ಲಮೇಷನ್ ಮತ್ತೆ ಕೆಲವು ಕಡೆ ಡೀಸಿಲ್ಟಿಂಗ್ ಮಾಡಬೇಕಾಗುತ್ತದೆ. ಕೆಲವು ಮೈನರ್ ಕೆರೆಗಳಲ್ಲಿ ಅಂಗಳ ಅಚ್ಚುಕಟ್ಟಿಗಿಂತ ಹೆಚ್ಚಾಗಿದೆ. ಇಂತಹ ಕಡೆಗಳಲ್ಲಿ ರಿಕ್ಲಮೇಷನ್ ಮತ್ತು ಡೀಸಿಲ್ಟಿಂಗ್ ಅನುಕೂಲವಾಗುತ್ತದೆ ಎಂದು ಅನೇಕ ಕಡೆ ಮಾಡುತ್ತಿದ್ದೇವೆ.

ಶ್ರೀ ಟಿ. ಮಾದಯ್ಯ ಗೌಡ.—ಕೆರೆಗಳ ರಿಜಿಸ್ಟರಿನಲ್ಲಿ ಯಾವ ಯಾವ ಕೆರೆ ಎಷ್ಟೆಷ್ಟು ಪ್ರಮಾಣದ್ದಿದೆ, ಎಷ್ಟುಮಟ್ಟಿಗೆ ಹೂಳು ತುಂಬಿದೆ, ಹೂಳು ತುಂಬುವುದಕ್ಕೆ ಕಾರಣವೇನು, ಎನ್ನುವುದನ್ನು ಕಂಡು ಹಿಡಿಯಲು ಸರಕಾರ ಯಾವುದಾದರೂ ಏಜೆನ್ಸಿಯನ್ನು ನೇಮಕ ಮಾಡಿದೆಯೆ ?

ಶ್ರೀ ಆಲೂರು ಹನುಮಂತಪ್ಪ.—ಟ್ಯಾಂಕ್ ರಿಜಿಸ್ಟರ್ ಎಂದಿದೆ, ಅದರಲ್ಲಿ ಕೆರೆಯ ಹೆಸರು, ಅದನ್ನು ಕಟ್ಟಿದಾಗ ಪ್ರಾರಂಭದಲ್ಲಿ ಅದರ ಆಳವೆಷ್ಟಿತ್ತು, ಅದರ ಅಚ್ಚುಕಟ್ಟು ಎಷ್ಟು ಇತ್ಯಾದಿ ವಿಷಯಗಳಿರುತ್ತವೆ. ಅದು ಈಚೆಗೆ ಅಪ್‌ಟುಡೇಟ್ ಆಗುತ್ತಿದೆ, ಹಳೆಯ ಮೈಸೂರು ಭಾಗದಲ್ಲಿ ಈಗಾಗಲೇ ಶೇಕಡ 90ರಷ್ಟು ಭಾಗ ಮಾಡಿ ಮುಗಿಸುತ್ತಿದ್ದಾರೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಹೂಳು ತುಂಬುವುದನ್ನು ತೆಗೆಯುವುದಕ್ಕೆ, ಎಂದರೆ ಡೀಸಿಲ್ಟಿಂಗ್ ಕೆಲಸಕ್ಕೆ ಹೆಚ್ಚು ಖರ್ಚು ಎಂದು ಹಿಂದೆ ಹೇಳಿದುದು ನಿಜವೆ ?

ಶ್ರೀ ಆಲೂರು ಹನುಮಂತಪ್ಪ.—ಅದು ಅನ್‌ಎಕನಾಮಿಕಲ್ ಎಂಬುದು ಗೊತ್ತಿದೆ ; ಬುಲ್ ಡೋಜರುಗಳು ಮತ್ತು ಅರ್ತ್ ಮೂವಿಂಗ್ ಯಂತ್ರೋಪಕರಣಗಳನ್ನು 14 ಲಕ್ಷ ರೂಪಾಯಿಗಳಷ್ಟು ಪಡೆಯಲು ಕೇಂದ್ರ ಸರಕಾರ ಅನುಮತಿ ಕೊಟ್ಟಿದೆ. ಈಗಾಗಲೇ 20 ಯಂತ್ರಗಳು ಬಂದಿವೆ,

ವ್ಯವಸಾಯ ಇಲಾಖೆಗೆ. ಅಲ್ಲದೆ ನಮ್ಮಲ್ಲಿ 60-70 ಬುಲ್‌ಡೋಜರುಗಳಿವೆ, ಅವನ್ನೂ ಉಪಯೋಗ ಮಾಡಬೇಕು, ಅವನ್ನು ರಿಪೇರಿ ಮಾಡಿ ಎಲ್ಲ ಜಿಲ್ಲೆಗಳಿಗೂ ಕೊಡಬೇಕೆಂದು ಮಾಡಿದ್ದೇವೆ, ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎನ್. ನಂಜೇಗೌಡ.—ಕೆಲವು ಕೆರೆಗಳ ಫೀಡರ್ ನಾಲೆಗಳನ್ನು ರಿಪೇರಿ ಮಾಡುವುದಕ್ಕಾಗಿ ಅಂದಾಜನ್ನು ರೆವಿನ್ಯೂ ಇಲಾಖೆಗೆ ಕಳುಹಿಸಿದರೂ ಅವರಲ್ಲಿ ಹಣವಿಲ್ಲವೆಂದು ಆ ಇಲಾಖೆಯವರು ಕೆಲಸ ಮಾಡದೆ, ನೀರು ವ್ಯಥಾ ಹೋಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಆಲೂರು ಹನುಮಂತಪ್ಪ.—ಫೀಡರ್ ಚಾನಲ್ ರಿಪೇರಿ ಮಾಡುವುದಕ್ಕೆ ಅಂದಾಜನ್ನು ರೆವಿನ್ಯೂ ಇಲಾಖೆಗೆ ಕಳುಹಿಸುವುದಿಲ್ಲ, ಇದು ಮುಖ್ಯವಾದ ಕೆಲಸವಾದುದರಿಂದ ಇದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಇಪ್ಪತ್ತು ಬುಲ್‌ಡೋಜರುಗಳನ್ನು ಪಡೆಯಲು ಅನುಮತಿ ಕೊಟ್ಟಿದ್ದಾರೆಂದು ಹೇಳಿದಿರಿ, ಅವುಗಳಲ್ಲಿ ಎಷ್ಟು ಸರಿಯಾಗಿದೆ ?

ಶ್ರೀ ಆಲೂರು ಹನುಮಂತಪ್ಪ.—ಸುಮಾರು ಎಪ್ಪತ್ತು ಬುಲ್‌ಡೋಜರುಗಳು ಮುನಿರಾಬಾದಿನಲ್ಲಿ ನಿಂತಾದ ಕಡೆಗಲ್ಲಿವೆ, ಅವನ್ನು ಮುಖ್ಯವಾಗಿ ಸಣ್ಣನೀರಾವರಿಗಳಿಗೆ, ಅದರಲ್ಲಿಯೂ ಕೆರೆಗಳ ಹೂಳು ತೆಗೆಯುವುದಕ್ಕೆ ಉಪಯೋಗ ಮಾಡಬೇಕೆಂದು ಯೋಚನೆ ಮಾಡಿದಾಗ ಅವುಗಳಿಗೆ ಸ್ಪೇರ್ ಪಾರ್ಟ್ಸು ಗಳ ಆವಶ್ಯಕತೆಯಿದೆ ಎಂದು ಕಂಡು ಬಂತು, ಅವುಗಳನ್ನು ತರಿಸಿಕೊಂಡು ಸರಿಮಾಡಿಸಿಕೊಡ ಬೇಕೆಂದು ಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಕೆರೆಗಳ ಹೂಳು ತೆಗೆಯುವುದು ಬಹಳ ಒಳ್ಳೆಯದು, ಆದರೆ ರಾಜ್ಯ ದಲ್ಲಿ ಎಷ್ಟು ಕೆರೆಗಳ ಹೂಳು ತೆಗೆಯಬೇಕೆಂಬ ಅಂದಾಜಿದೆಯೆ ?

ಶ್ರೀ ಆಲೂರು ಹನುಮಂತಪ್ಪ.—ಒಟ್ಟು ಸುಮಾರು 16 ಸಾವಿರ ಕೆರೆಗಳು ದುಸ್ಥಿತಿಯಲ್ಲಿವೆ, ಹೂಳು ತುಂಬಿವೆ. ಈ ಕೆರೆಗಳನ್ನೆಲ್ಲ ಸರಿಮಾಡಲು 20 ಕೋಟಿ ರೂಪಾಯಿ ಬೇಕಾಗುತ್ತದೆ. ಬ್ರೀಚ್ ಆಗಿರುವ ಕೆರೆಗಳನ್ನೆಲ್ಲ ಸರಿಮಾಡುವುದಕ್ಕೆ 20 ಕೋಟಿ ರೂಪಾಯಿ ಬೇಕೆಂದು ಅಂದಾಜು ಮಾಡಿದ್ದಾರೆ. ಪ್ರತಿ ವರ್ಷವೂ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿ ಮುಗಿಸುತ್ತಿದ್ದೇವೆ.

ಶ್ರೀ ಎನ್. ನಂಜೇಗೌಡ.—ಪಬ್ಲಿಕ್ ವರ್ಕ್ಸ್ ಇಲಾಖೆಯವರನ್ನು ಕೇಳಿದರೆ ರೆವಿನ್ಯೂ ಇಲಾಖೆಯ ಕಡೆ ಕೈತೋರಿಸುತ್ತಾರೆ, ಹೀಗಾಗಿ ಕೆರೆಯ ವಿಷಯದಲ್ಲಿ ತೊಂದರೆಯಾಗಿದೆ; ಆದಕಾರಣ ಇವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಸುತ್ತೀರ ?

ಅಧ್ಯಕ್ಷರು.—ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಸಿದ್ದೇವೆಂದು ಆಗಲೇ ಹೇಳಿದ್ದಾರೆ.

ಶ್ರೀ ಎನ್. ನಂಜೇಗೌಡ.—ಈಗ ರೆವಿನ್ಯೂ ಇಲಾಖೆಗೆ ಅಂದಾಜು ತಯಾರು ಮಾಡಿ ಕಳುಹಿಸು ತ್ತಾರೆ, ಆದರೆ ಅವರು ತಮ್ಮಲ್ಲಿ ಹಣವಿಲ್ಲವೆಂದು ಅದನ್ನು ವಾಪಸು ಕಳುಹಿಸುತ್ತಾರೆ.

ಶ್ರೀ ಆಲೂರು ಹನುಮಂತಪ್ಪ.—ರೆವಿನ್ಯೂ ಇಲಾಖೆಗೆ ಕೌಂಟರ್ ಸಿಗ್ನೇಚರಿಗಾಗಿ ಕಳುಹಿಸು ತ್ತಾರೆ, ಅಷ್ಟೆ. ಅವರ ಇಲಾಖೆಯ ಯಾವ ಹೆಡ್‌ನಲ್ಲಿಯೂ ಹಣವಿರುವುದಿಲ್ಲ, ಆದುದರಿಂದ ಅವರು ಹಾಗೆ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ.''

Mr. SPEAKER.—If there are any such cases, the Hon'ble Deputy Minister may dispose of the same early.

Sri ALUR HANUMANTHAPPA.—Yes.

Sri M. V. KRISHNAPPA.—Recently a decision has been taken to transfer all the tanks to the P.W.D.

Sri G. V. GOWDA.—No Government Order has been issued in this behalf.

Mr. SPEAKER.—If they do it today, will that not be allright ?

Sri. G. V. GOWDA.—This is being said for the last two years ever since our Revenue Minister took charge.

Mr. SPEAKER.—Is it being said since two years that this is going to be done and that despite that assurance nothing has been done ?

Sri ALUR HANUMANTHAPPA.—Maintenance and repair works are done by the P.W.D. even till to-day, but the entire management of the tank can be taken over by the P.W.D. only after the Bill is passed, but there is no difficulty for maintenance and repair works to be done by the P.W.D.

Sri S. SIVAPPA.—In view of the fact that there are thousands of minor tanks to be restored in the State, will the Government think of the feasibility of having in Minor Tanks Restoration Division in every district ?

Mr. SPEAKER.—The Minister just now said that Rs. 20 crores were required for the desilting work alone and instead of spending Rs. 20 crores on desilting perhaps new tanks could be constructed at a lesser cost.

Sri ALUR HANUMANTHAPPA.—Restoration is not confined to desilting alone ; restoration includes desilting, raising the waste weir, keeping the bund in tact, etc. All that work is being done by the regular Executive Engineer and the Chief Engineer (General) is looking after all maintenance works.

Sri S. SIVAPPA.—There was a Minor Tank Resotration Division in Hassan and it was abolished 7 or 8 years ago. Will the Government re-examine it and restore such Minor Tanks Restoration Divisions in such districts where there were such Divisions ?

Sri ALUR HANUMANTHAPPA.—The Chief Engineer (General) is the highest authority for minor irrigation works and under him there are regular Superintending Engineers, Executive Engineers and Assistant Engineers and they will concentrate on restoration as well as new projects and I do not think there is any necessisity to have a separate Sub-Division exclusively for restoration work.

Sri C. J. MUCKANNAPPA.—Will the Government provide adequate money for the restoration of minor tanks to the existing Divisions and Sub-Divisions ?

Sri ALUR HANUMANTHAPPA.—We have given sufficient grants for the restoration of these tanks.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಪ್ರವಾಹದ ಹಾವಳಿಯಿಂದ ರೈತರಿಗೆ ಬಹಳ ಅನ್ಯಾಯವಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ? ಇದನ್ನು ಜಾಗ್ರತೆ ತಡೆಗಟ್ಟುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಫ್ಲಡ್ ಕಂಟ್ರೋಲ್ ಮಾಡುವದಕ್ಕೆ ಕ್ರಮ ತೆಗೆದುಕೊಳ್ಳಲು ಎಸ್ಟಿಮೇಟು ಆಗಿದೆ. ಕೇಂದ್ರ ಸರಕಾರದಿಂದ ಇದಕ್ಕಾಗಿ ಹೆಚ್ಚು ಹಣ ಬರುತ್ತದೆಂದು ನಿರೀಕ್ಷಣೆ ಮಾಡುತ್ತಿದ್ದೇವೆ. ಈ ಕೆಲಸಕ್ಕೆ ಹತ್ತು ಕೋಟಿ ರೂಪಾಯಿ ಬೇಕಾಗುವುದು. ಫ್ಲಡ್ ಕಂಟ್ರೋಲ್ ಮಾಡುವುದು ಬೇರೆ, ಪ್ರೊಟೆಕ್ಟಿವ್ ಮೆಷರ್ಸ್ ತೆಗೆದುಕೊಳ್ಳುವುದು ಬೇರೆ. Flood protective works are quite different from flood control works. We are doing protective works of a minor nature. To take up more works we expect more grants from the Government of India. I have stressed this point in January last when I attended the National Flood Control Board.

ಶ್ರೀ ಜಿ. ರಾಮೇಗೌಡ.—ಸ್ವಾಮಿ, ಸಾಕಷ್ಟು ಹಣ ಒದಗಿಸಿದ್ದೇವೆಂದು ಹೇಳಿದ್ದೀರಿ. ಹಾಗಾದರೆ ಎಸ್ಟಿಮೇಟ್ ಮಾಡಿರತಕ್ಕಂಥ ಎಲ್ಲ ಕೆಲಸವನ್ನು ಈ ವರ್ಷ ಪೂರೈಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಇನ್ನೂ ಎಷ್ಟು ಗ್ರಾಂಟ್ ಬಂದರೂ ಹಣ ಸಾಕಾಗುವುದಿಲ್ಲ. ಕೇಂದ್ರಕ್ಕೆ ಇದನ್ನು ಮನವರಿಕೆ ಮಾಡಿದ್ದೇವೆ. ಹೆಚ್ಚು ಹಣವನ್ನು ಕೊಡುತ್ತೇವೆಂದು ಕೇಂದ್ರದವರು ಆಶ್ವಾಸನೆ ಕೊಟ್ಟಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಸ್ಟಿಮೇಟ್ ಮಾಡದೆ ಹಣ ಸ್ಯಾಂಕ್ಷನ್ ಆಗುವುದಿಲ್ಲ. ಆದರೆ ಒದಗಿಸಿದ ಹಣ ಅಧಿಕಾರಿಗಳ ಸಂಬಳಕ್ಕೆ ಖರ್ಚಾಗುತ್ತದೆ. ಯಾವ ಎಸ್ಟಿಮೇಟಿನ ಕೆಲಸ ಮಾಡುವುದಿಲ್ಲ ಅಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಒಂದು ಸಬ್-ಡಿವಿಜನ್ ಕೆಲಸ ಮಾಡಬೇಕಾದರೆ ಕನಿಷ್ಟ 10 ಲಕ್ಷ ರೂಪಾಯಿ ಕೆಲಸ ಇರಬೇಕಾಗುತ್ತದೆ. ಒಂದು ಡಿವಿಜನ್ನಿನಲ್ಲಿ 40-50 ಲಕ್ಷ ರೂಪಾಯಿ ಕೆಲಸದ ವರ್ಕ್‌ಲೋಡ್ ಇರಬೇಕಾಗುತ್ತದೆ. ಹೆಚ್ಚು ಕೆಲಸ ಇದ್ದಾಗ್ಗೆ ಹೆಚು ಸ್ಟಾಫ್ ಕೊಡಬೇಕಾಗುತ್ತದೆ. They must exert a little more and do the work. We are trying to increase the staff wherever necessary.

ಶ್ರೀ ಜಿ. ರಾಮೇಗೌಡ.—ಸಬ್‌ಡಿವಿಜನ್ನುಗಳಲ್ಲಿ ಇಂಜಿನಿಯರ್‌ಅವರ ಜಾಗಗಳ ಖಾಲಿ ಇವೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಯಾರಾದರೂ ಟ್ರಾನ್ಸ್‌ಫರ್ ಆದಾಗ್ಗೆ ಜಾಗ ಖಾಲಿಯಾಗಿರುತ್ತದೆ. ವರ್ಕ್‌ಲೋಡ್ ಇದ್ದು ಸ್ಟಾಫ್ ಕೇಳಬೇಕಾದ ಪರಿಸ್ಥಿತಿ ಏನೂ ಇಲ್ಲ.

Extent of Government land belonging to the Revenue Department in Kaup firka of Udipi Taluk.

*Q.—69. Sri B. BHASKAR SHETTY (Kaup).—

Will the Government be pleased to state :—

(a) the total extent of Government land belonging to the Revenue Department in Kaup Firka of Udipi Taluk ;

(b) the villages in which they are situated together with their survey numbers (acrewise information may be given) ;

(c) the extent of these lands granted during the last three years in the said firka ;

(d) the total number of persons to whom such lands have been granted during the above said period ;

(e) out of them, the number of landless persons ?

A.—Sri M. V. KRISHNAPPA (Minister for Revenue).—

(a) 51 acres 44 cents. (this represents the area available as on 31st December 1963).

(SRI M. V. KRISHNAPPA)

(*b*) Village: Shirva.

S. No.			Extent *Acres.*	*Cents*
50	1D	...	...	67
105	5	...	1	...
177	4	...	2	...
178		...	6	...
288		...	1	50
428		...	29	36
436/2 B1A		...	1	...
499/1B		...	...	50
1C		...	...	50
1D		...	...	50
1F		...	...	50
1G		...	...	50
1H		...	...	50
1I		...	...	50
537/1A2		...	...	71
604 — 2		...	3	62
612 — 2		...	...	84
— 3		...	...	24
634 — 1		...	1	00
Total		...	51	44

(*c*) 98 acres 69 cents (this represents the area already disposed of).
(*d*) 232.
(*e*) 227.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇದರಲ್ಲಿ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ಕೊಟ್ಟಿದ್ದೀರಿ. ನಮ್ಮ ಸ್ವಂತ ಗ್ರಾಮದಲ್ಲ ನಮ್ಮ ಮನೆಯವರಿಗೆ 30 ಎಕರೆ ಗೌರ್ನಮೆಂಟ್ ಲ್ಯಾಂಡ್ ಇವೆ. ಇದು ಹೇಗೆ?

Sri M. V. KRISHNAPPA.—There are lands belonging the various Departments like the Excise Department and the Forest Departments. The Hon'ble Member's question is only about the Revenue Department............ಗೌರ್ನಮೆಂಟ್ ಲ್ಯಾಂಡ್ಸ್ ಇರಬಹುದು. ತಮ್ಮ ಪ್ರಶ್ನೆ ರೆವಿನ್ಯೂ ಲ್ಯಾಂಡ್ಸ್ ವಿಚಾರವಾಗಿ ಇದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸೇರಿದ ಲ್ಯಾಂಡು ಹೇರೂರು ಗ್ರಾಮದಲ್ಲಿದೆ. ಗ್ರಾಮ ಪಂಚಾಯತಿಯವರೂ ಒಂದು ಕಾಗದ ಬರೆದಿದ್ದಾರೆ. ಅದರಲ್ಲ ಅನ್-ಆಥರೈಸ್ಡ್ ಎನ್‌ಕ್ರೋಚ್‌ಮೆಂಟ್ ಆಗಿದೆ, ಅದನ್ನು ತಡೆಯಬೇಕು, ಹಸಿರು ಎಲೆ ಗೊಬ್ಬರಕ್ಕೆ ತೊಂದರೆಯಾಗಿದೆ ಎಂದು ಮನವಿ ಬಂದಿದೆಯೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಉತ್ತರ ಹೇಳಿದ್ದೇನೆ, ರೆವಿನ್ಯೂ ಲ್ಯಾಂಡು ಎಲ್ಲೆಲ್ಲಿದೆ ಎಂದು. ತಾವು ಹೇಳಿದ ಮನವಿಗಳು ಆಗಾಗ ಬರುತ್ತಾ ಇರುತ್ತವೆ. ಚೆಕ್-ಅಪ್ ಮಾಡಬೇಕು. ಬಂದಿದೆಯೊ ಇಲ್ಲವೊ ಎಂದು.

Mr. SPEAKER.—If the Hon'ble Member has got anything, let him pass it on.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಕೊಡುತ್ತೇನೆ; 3 ವರ್ಷಗಳಲ್ಲಿ 232 ಜನರಿಗೆ ಕೊಟ್ಟಿದ್ದೀರಿ. ಇದರಲ್ಲಿ ಒಬ್ಬೊರಿಗೆ ಸಾಧಾರಣವಾಗಿ ಎಷ್ಟು ವಿಸ್ತೀರ್ಣದ ಸ್ಥಳವನ್ನು ಕೊಟ್ಟಿದ್ದೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—232 ಜನಕ್ಕೆ 98 ಎಕರೆ ಕೊಟ್ಟಿದ್ದೇವೆ. ಅನೇಕ ಜನಕ್ಕೆ ಅರ್ಧ ಎಕರೆ, ಕಾಲು ಎಕರೆ ಕೊಟ್ಟಿದ್ದೇವೆ. ಅಲ್ಲಿನ ಪರಿಸ್ಥಿತಿ ಹಾಗಿದೆ. ಭೂಮಿ ಕಡಮೆ ಇದೆ. ಸೌತ್ ಕೆನರಾದಲ್ಲಿ ಹೌಸ್ ಬಿಲ್ಡಿಂಗ್ ಸೈಟುಗಳಿಗೋಸ್ಕರ ಜಮೀನುಗಳನ್ನು ತೆಗೆದುಕೊಳ್ಳುತ್ತಾರೆ. ಜಮೀನು ಜಾಸ್ತಿ ಇಲ್ಲ; ಕಡಮೆ ಇದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—227 ಲ್ಯಾಂಡ್‌ಲೆಸ್ ಜನಕ್ಕೆ ಕೊಟ್ಟಿದ್ದೀರ. ಇನ್ನು ಐದು ಜನ ಜಮೀನು ಇದ್ದವರು ಇದ್ದಾರೆ, ಈ ಐದು ಜನಕ್ಕೆ ಎಷ್ಟು ಜಮೀನನ್ನು ಕೊಟ್ಟಿದ್ದೀರಿ;

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಡೀಟೇಲ್ಸ್ ಇಲ್ಲ. 90 ಎಕರೆಯನ್ನು 232 ಜನಕ್ಕೆ ಹಂಚಿದೆ. The Hon'ble Member can understand how much land they would have got.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ವರೆಗೆ ಸಾಧಾರಣವಾಗಿ ಅನ್‌ಅಥರೈಸ್ಡ್ ಆಗಿ ಕಲ್ಟಿವೇಷನ್ ಆಗಿರುವಂಥ ಲ್ಯಾಂಡ್ಸ್ ಎಷ್ಟಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಕೇಳಿರುವ ಡೀಟೇಲ್ಸ್ ನನ್ನ ಹತ್ತಿರವಿಲ್ಲ.

ಶ್ರೀ ಜಿ. ವಿ. ಗೌಡ.—ಅನ್‌ಅಥರೈಸ್ಡ್ ಕಲ್ಟಿವೇಷನ್ ಇದ್ದು, ಜನ ಲ್ಯಾಂಡ್‌ಲೆಸ್ ಆಗಿದ್ದರೆ, ಇನ್‌ಸಫಿಷಿಯಂಟ್ ಹೋಲ್ಡರುಗಳಾಗಿದ್ದರೆ; ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—2-3 ವರ್ಷಗಳ ಹಿಂದೆ ಕೊಟ್ಟಿದೆ. 1961ರಲ್ಲಿ ಸರ್ಕ್ಯುಲರ್ ಕೊಟ್ಟಿದ್ದಾರೆ. ಅನ್‌ಅಥರೈಸ್ಡ್ ಆಕ್ಯುಪೆಂಟ್ಸು ಇನ್‌ಸಫಿಷಿಯಂಟ್ ಹೋಲ್ಡರ್ಸ್ ಆಗಿ, 6 ವರ್ಷಗಳು ಟಿ. ಟಿ. ಕೊಡುತ್ತಾ ಇದ್ದರೆ, ಅವರ ಹೆಸರಿಗೆ ಮಾಡಬಹುದು. ಹರಿಜನರು, ಷೆಡ್ಯೂಲ್ಡ್ ಕ್ಲಾಸ್ಸಿನವರಾದರೆ 2 ವರ್ಷ ಟಿ. ಟಿ. ಕೊಟ್ಟಿದ್ದರೆ ಅವರ ಹೆಸರಿಗೆ ಮಾಡಬಹುದು ಎಂದು 1961ನೆಯ ಇಸವಿಯಲ್ಲಿ ಜನರಲ್ ಸರ್ಕ್ಯುಲರ್ ಹೊರಡಿಸಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಲ್ಲಿರುವ ರೆವಿನ್ಯು ಆಫೀಸರುಗಳು ಹಣ ತೆಗೆದುಕೊಂಡು ಲ್ಯಾಂಡ್ಸ್ ಕೊಡುತ್ತಾ ಇದ್ದರೆ ರೈತರುಗಳಿಗೆ ತೊಂದರೆಯಾಗುತ್ತದೆ. ಅಲ್ಲಿ ಲ್ಯಾಂಡಿನಲ್ಲಿ ಸೊಪ್ಪು ಇರುತ್ತದೆ. ರೈತರುಗಳಿಗೆ ಹಸಿರೆಲೆ, ಗೊಬ್ಬರ, ಗೋಮಾಳ ಇವುಗಳ ತೊಂದರೆ ಇದೆ. ಇನ್ನು ಮುಂದೆ ಹಾಗೆ ಕೊಡಬಾರದು ; ಎಂದು ಡಿಪಾರ್ಟ್‌ಮೆಂಟಲ್ ಅಧಿಕಾರಿಗಳಿಗೆ ಬರೆಯುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇನ್ನು ಜಾಸ್ತಿ ಭೂಮಿ ಇಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಂಕಿ ಅಂಶಗಳು ಎಲ್ಲಾ ತಪ್ಪಾಗಿವೆ. ರೆವಿನ್ಯೂ ಡಿಪಾರ್ಟ್‌ಮೆಂಟ್ ಲ್ಯಾಂಡ್ಸು ಜಾಸ್ತಿ ಇವೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಕಾಮನ್ ಲ್ಯಾಂಡ್ಸ್ ಇದ್ದುಕೊಂಡು ಸೊಪ್ಪಿಗೆ ತೊಂದರೆ ಇದ್ದರೆ ಕೊಟ್ಟುಬಿಡಿ ಎಂದು ತಿಳಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅನ್‌ಅಥರೈಸ್ಡ್ ಆಕ್ಯುಪೆನ್ಸಿ ಚೆಕ್‌ಮಾಡುವುದಕ್ಕೆ ಸರಕಾರ ಏನಾದರೂ ಮನಸ್ಸು ಮಾಡಿದೆಯೆ ಅಥವಾ ಹೀಗೆಯೆ ಯಾರು ಬೇಕಾದರೂ ಎಲ್ಲಿಯಾದರೂ ಉಳಿಮೆ ಮಾಡಿಕೊಳ್ಳಬಹುದು ಎನ್ನುವುದು ಸರಕಾರದ ನೀತಿಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಂದೆರಡು ವರ್ಷಗಳಿಂದ ಸ್ವಲ್ಪ ನಿರ್ದಾಕ್ಷಿಣ್ಯವಾಗಿ ನೋಟೀಸುಗಳನ್ನು ಸರ್ವ್‌ಮಾಡಿ, ಒಂದೆರಡು ಸ್ಥಳಗಳಲ್ಲಿ ಪೋಲೀಸು ಸಹಾಯ ತೆಗೆದುಕೊಂಡು ಎವಿಕ್ಟ್ ಮಾಡಿದ ಸಂದರ್ಭಗಳು ನಮ್ಮ ಗಮನಕ್ಕೆ ಬಂದಿವೆ.

ಶ್ರೀ ಗೋಪಾಲ ಸಾಲೆನ್ನ.—ದರಖಾಸ್ತು ಪ್ರೊಸೀಡಿಂಗ್ಸು ಬಹಳ ಡಿಲೆಯಾಗಿ ಆಗುತ್ತಾ ಇದೆ. ಸಾವಿರಗಟ್ಟಲೆ ಅರ್ಜಿಗಳು ಬಂದು ವರ್ಷಗಟ್ಟಲೆ ಅರ್ಜಿ ವಿಲೇವಾರಿಗೆ ಟೈಂ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಪ್ರತ್ಯೇಕ ಮೆಷಿನರಿ ಮಾಡಿ ಎಕ್ಸ್‌ಪಿಡೈಟ್ ಮಾಡುವಂತೆ ಏರ್ಪಾಟು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಲ್ಯಾಂಡ್ ಡಿಸ್‌ಪೋಸಲ್ಲಿಗೆ ಎಲ್ಲೆಲ್ಲಿ ಹೆಚ್ಚಾಗಿ ಜಮೀನಿದೆಯೊ ಅಲ್ಲಿಗೆ ಅಸಿಸ್ಟೆಂಟು ಕಮೀಷನರನ್ನು ಕೊಟ್ಟಿದ್ದೇವೆ. ಮೈಸೂರು ಡಿವಿಜನ್ನಿನಲ್ಲಿ ಒಬ್ಬರು ಇದ್ದಾರೆ. ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ಒಬ್ಬರು ಇದ್ದರು, ಈಗ ಆ ಪೋಸ್ಟ್ ಅಬಾಲಿಷ್ ಆಗಿದೆ. ತುಮಕೂರಿನಲ್ಲಿ ಒಬ್ಬರು ಇದ್ದರು. ಎಲ್ಲೆಲ್ಲಿ ಹೆಚ್ಚಿಗೆ ಲ್ಯಾಂಡ್ ಡಿಸ್‌ಪೋಸಲ್ ಮಾಡಬೇಕೋ ಅಂಥ ಸ್ಥಳಗಳಲ್ಲಿ ಅದಕ್ಕೋಸ್ಕರ ಒಬ್ಬ ಆಫೀಸರನ್ನು ನೇಮಕ ಮಾಡುತ್ತಿದ್ದೇವೆ. ಸದಸ್ಯರ ಡಿಸ್ಟ್ರಿಕ್ಟಿನಲ್ಲಿ 25 ಸಾವಿರ ಎಕರೆ ಜಾಸ್ತಿ ಭೂಮಿ ಇರುವುದು. ಅದರಲ್ಲಿ ಉಡುಪಿ ತಾಲ್ಲೂಕಿನಲ್ಲಿ ಬಹಳ ಕಡಿಮೆ ಇದೆ. It does not require a Special Officer to dispose of a few acres of land.

ಶ್ರೀ ಪಿ. ಬಿ. ಬೊಮ್ಮಣ್ಣ.—ಪೋಲೀಸು ಸಹಾಯ ತೆಗೆದುಕೊಂಡು ಅನ್‌ಆಥರೈಸ್ಡ್ ಆಕ್ಯು ಪೆಂಟುಗಳನ್ನು ಬಿಡಿಸುವುದಕ್ಕೆ ಏರ್ಪಾಡು ಮಾಡಿದ್ದೇವೆಂದು ಈಗತಾನೆ ಹೇಳಿದಿರಿ. ಹಾಗೆ ಜಮೀನುಗಳನ್ನು ಬಿಡಿಸಿರುವ ಉದಾಹರಣೆಗಳಿವೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ಕಡೆ ಬಿಡಿಸಿದ್ದೇವೆ. ಬೇಕಾದರೆ ಬೇರೆ ಕೊಶ್ಚನ್ ಕೇಳಿ, ಡೀಟೇಲ್ಸ್ ಕೊಡುತ್ತೇನೆ, ಯಾವ ಯಾವ ಗ್ರಾಮದಲ್ಲಿ ಎಂದು.

ಶ್ರೀ ಸಂಜೀವನಾಥ ಐಕಳ.—ಮಾನ್ಯ ಮಂತ್ರಿಗಳು ಹೇಳಿದರು, 1961ನೆಯ ಇಸವಿಯಲ್ಲಿ ಅನ್ ಆಥರೈಸ್ಡ್ ಆಕ್ಯುಪೇಷನ್ ಮಾಡಿದ ಜಾಗಗಳು ಏನೇನಿವೆ, ಅವುಗಳನ್ನು ಆಕ್ರಮಿಸಿಕೊಂಡವರಿಗೆ ಕೊಡಬೇಕು ಎಂದು ಒಂದು ಸರ್ಕ್ಯುಲರ್ ಹೊರಡಿಸಿದೆ ಎಂದು. ಪಂಚಾಯತಿ ಗೋಮಾಳ, ಅಥವಾ ಅಗ್ರಿಕಲ್ಚರಲ್ ಪರ್ಪಸ್ಸಿಗೆ ಇದ್ದಂಥ ಲ್ಯಾಂಡು ವಿಲೇಜು ಪಂಚಾಯತಿಗೆ ಕೊಟ್ಟು ಅವರು ಅದನ್ನು ಉಪಯೋಗ ಮಾಡಬೇಕೆಂದಿದೆ. Now there are several instances where a circular of the Government will be in conflict with the decision of the Village Panchayats. There will be several such cases in our District where lands have been occupied by several people who have built some houses and the Village Panchayats have been authorised to evict those people. Whose authority will be supreme, whether the Government circular or Village Panchayats ?

Sri M. V. KRISHNAPPA.—What is his suggestion ? Does he want them to be evicted ?

Sri SANJEEVANATH AIKALA.—I am pointing out that the Government had sent a circular and various Village Panchayats which own this area will try to evict these people. In my Taluk the Government will have to face such cases. There is a lot of unauthorised occupation of gomal lands by "*hathu samastharu*".

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುವಷ್ಟು ಕಾನ್‌ಫ್ಲಿಕ್ಟ್ ಆಗಿಲ್ಲ. ಕನ್‌ಫ್ಯೂಷನ್ ಮಾಡಿ ಕೊಂಡಿದ್ದೀರ. ಗ್ರಾಮದಲ್ಲಿ ತೋಪುಗಳು, ಕೆಲವು ಕಾಮನ್ ಲ್ಯಾಂಡ್ಸ್ ಇದ್ದರೆ, they have been transferred to Panchayats. The ultimate authority is the Revenue Department which has to sanction the land. No doubt Gomal land and Thopes will be under the control of Panchayats but the Government has power to sanction that land.

Sri SANJEEVANATH AIKALA.—When the Minister visited our Village last time, he had to face the Village Panchayat on the one side and unauthorised occupiers on the other side. He was trying to satisfy both the people and that process is continuing. Practically nobody has got the benefit.

Sri M. V. KRISHNAPPA.—According to the Land Grant Rules, the Government have got supreme power to sanction.

Sri SANJEEVANATH AIKALA.—'*Hathu samastharu*' is supreme as far as the Madras Code is concerned.

Mr. SPEAKER.—Where does '*hathu samastharu*' prevail ? Is the Government subordinate to them ?

Sri SANJEEVANATH AIKALA.—That is what the Madras Revenue Code says.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಾವು ಗೋಮಾಳವನ್ನು ಉಳುವುದಕ್ಕೆ ಕೊಡುತ್ತೀರ, ಕೆರೆ ಅಂಗಳ ಉಳುತ್ತಾರೆ. ಇರುವ ಜಮೀನಿನಲ್ಲಿಯೇ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಅವಕಾಶ ಮಾಡಿ, ಗೋಮಾಳಗಳು, ಕೆರೆ ಅಂಗಳಗಳನ್ನು ಕೊಡ ವುದನ್ನು ನಿಲ್ಲಿಸುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೆಯೇ ಉತ್ತರ ಕೊಟ್ಟಿದೆ. It varies from place to place. ಕೆಲವು ಕಡೆ ಬೇಕಾದಷ್ಟು ಭೂಮಿ ಇದೆ. ಅಲ್ಲಿ ಗೋಮಾಳಕ್ಕೆ ರಿಜರ್ವ್ ಮಾಡಿಕೊಳ್ಳು,

ತ್ತಾರೆ. ರೂಲ್ಸು ಪ್ರಕಾರ 3 ಎಕರೆಗೆ 100 ರೂಪಾಯಿ ಇಟ್ಟುಕೊಳ್ಳಬೇಕು. ಭೂಮಿ ಜಾಸ್ತಿ ಇದ್ದರೆ ಅಂಥ ಕೆಲವು ಕಡೆಗಳಲ್ಲಿ ರೂಲ್ಸ್ ರಿಲ್ಯಾಕ್ಸ್ ಮಾಡಿ ಜಮೀನು ಕೊಡುತ್ತಾ ಇದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೆಲವು ಜನ ತಾಲ್ಲೂಕು ಮಟ್ಟದಲ್ಲಿ ಸೇರಿಕೊಂಡು ಜಮೀನಿನಲ್ಲಿ ಅಕ್ರಮ ಪ್ರವೇಶ ಮಾಡಿ ಸೇರಿಕೊಂಡು ಗೇದು ಉಳುಮೆಮಾಡಿರುತ್ತಾರೆ. ಲ್ಯಾಂಡ್ ರೆವಿನ್ಯೂ ರೂಲ್ಸ್ ಪ್ರಕಾರ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಪೋಲೀಸು ಸಹಾಯ ತೆಗೆದುಕೊಂಡು ಎವಿಕ್ಟ್ ಮಾಡುವುದಕ್ಕೆ ಸಾಧ್ಯವಿದೆ. ಆದರೆ ಅಕ್ರಮ ಪ್ರವೇಶಮಾಡಿದ ಆಸಾಮಿ ಮಂತ್ರಿಗಳ ಪ್ರೀತಿ ಸಂಪಾದಿಸಿದ್ದರೆ ಅದನ್ನು ಅವನಿಗೇ ಸ್ಯಾಂಕ್ಷನ್ ಮಾಡುವುದಕ್ಕೂ ಸಾಧ್ಯವಿದೆ. ಅವನನ್ನು ಬಿಡಿಸಿಯೆ ಬಿಡಬೇಕು, ಇಲ್ಲ ಬೇಡ ಎಂದು ಒಂದು ಏನಾದರೂ ನಿಗದಿಯಾದ ವ್ಯವಸ್ಥೆ ಮಾಡಬೇಕು, ಇಲ್ಲದಿದ್ದರೆ ಮನಸ್ಸಿಗೆ ಬಂದಹಾಗೆ ಮಾಡುವುದಕ್ಕೆ ಅವಕಾಶವಿದೆ. ರೂಲ್ಸಿನಲ್ಲಿ ಸ್ಯಾಂಕ್ಷನ್ ಮಾಡುವುದಕ್ಕೂ ಪವರ್ ಇದೆ, ಮಾಡದೆ ಇರುವುದಕ್ಕೂ ಪವರ್ ಇದೆ. ಎಲ್ಲಾ ಪವರುಗಳೂ ಇವೆ; ಜನಗಳಿಗೆ ನಿಮ್ಮ ಪವರ್ಸ್ ಆಫ್ ಸ್ಯಾಂಕ್ಷನ್ ಏನು ಎನ್ನುವುದನ್ನು ನಿಖರವಾಗಿ ತಿಳಿಸುವುದಕ್ಕೆ ಸಾಧ್ಯವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾಲ್ಲೂಕು ಮಟ್ಟದಲ್ಲಿ ಉತ್ತುಕೊಂಡು ಬಿಡಿ, ನಾವು ನೋಡಿ ಕೊಳ್ಳುತ್ತೇವೆ ಎಂದು ಕೆಲವರು ನಿಮ್ಮಂಥವರು ಹೇಳುತ್ತಾರೆ. ಅದು ತಮ್ಮ ಅನುಭವದಲ್ಲಿಯೂ ಇದೆ, ನಮಗೂ ಗೊತ್ತಾಗಿದೆ.

9-00 A.M.

Sri SANJEEVANATH AIKALA.—Has it come to the notice of the Government that hundreds of Syrian Christian families from South Travancore have occupied large parts of land in Belthangadi, Uppthangadi and Puttur Taluks of South Canara District during the last four or five years that they have occupied the forest land apart from the revenue land, that the ex-Minister for Revenue assured them that the land occupied by them would be given to them, and that subsequently an order has been issued by the Revenue Board to evict them? What is the position of those Syrian Catholic families ?

Sri M. V. KRISHNAPPA.—This does not relate to the main question. That is a general matter; I know and I am prepared to answer it, if permitted.

Sri SANJEEVANATH AIKALA.—If the Hon'ble Minister knows, let him answer it.

Mr. SPEAKER.—Next question. Question No. 106.

Sri B. D. JATTI.—The Hon'ble Minister is in the Upper House. It may be held over till he comes here.

Sri J. P. SARWESH.—I would like to make a request in regard to this question. Here, division-wise accounts are not maintained. This information also may be made available.

Mr. SPEAKER.—I think so. If I had read the answers before they went to the Press, I would have asked for further particulars. I find that division-wise accounts are not maintained. But, it does not mean figures are not available. Figures could be culled out. If that information is not available, I may hold it over. After all, it is a specific question. Next question.

Constitution of a Vigilance Commission for the State.

*Q.—229. SRI B. CHANNABYRE GOWDA (Hoskote).—

Will the Government be pleased to state :—

(a) whether they are aware of the constitut on of a Vigilance Commission by the Central Government to fight out corruption, nepotism and favouritism in administration ;

(b) if so, the action taken by them to constitute such a Commission for the State ?

A.—SRI B. D. JATTI (Minister for Finance on behalf of SRI S. NIJALINGAPPA (Chief Minister)].—

(a) Yes.
(b) The matter is under consideration of Government.

ಶ್ರೀ ಬಿ. ಚನ್ನಬೈರೇಗೌಡ.—ಆಡಳಿತದಲ್ಲಿ ಎಷ್ಟೊ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇದೆ ಎಂದು ಹೇಳಿದ್ದೀರಿ, ಎಷ್ಟು ದಿವಸ ಆಯಿತು ಈ ವಿಷಯ ಗೊತ್ತಾಗಿದೆಯೇ ?

SRI B. D. JATTI.—From the date the Hon'ble Member began to understand, Government also began to understand.

ಶ್ರೀ ಬಿ. ಚನ್ನಬೈರೇಗೌಡ.—ಗೊತ್ತಿದೆ ಎಂದ ಮೇಲೆ, ಎಷ್ಟು ವರ್ಷ ಆಯಿತು ಗೊತ್ತಾಗಿ ಎಂದು ಕೇಳಿದರೆ ಎಷ್ಟು ಚೆನ್ನಾಗಿ ಉತ್ತರ ಹೇಳುತ್ತೀರಿ ನೋಡಿ; ಗೊತ್ತಾಗಿ ಒಂದು ವರ್ಷ ಆಯಿತೇ, 6 ತಿಂಗಳು ಆಯಿತೇ, 2 ತಿಂಗಳು ಆಯಿತೇ ಎಂಬುದನ್ನು ಹೇಳಿ ?

SRI B. D. JATTI.—When it was known to the public, naturally, Government also knew it, because the public is not different from the Government.

ಶ್ರೀ ಬಿ. ಚನ್ನಬೈರೇಗೌಡ.—ಪರಿಶೀಲನೆಯಲ್ಲಿ ಇದೆ ಎಂದು ಹೇಳಿದ್ದೀರಿ, ಎಷ್ಟು ದಿವಸದಲ್ಲಿ ಈ ಹೈ ಪವರ್ ಕಮಿಟಿಯನ್ನು ರಚಿಸುತ್ತೀರಿ ?

SRI B. D. JATTI.—We are waiting for certain detailed instructions. But the intention of the Government of Mysore is to appoint as early as possible a Vigilance Commission.

SRI S. M. KRISHNA.—Are we to understand by the lethargic manner in which the Government of Mysore has been moving in this direction that the Government is not serious about putting an end or at least making an attempt to put an end to this corruption, favouritism, nepotism, red-tapism and everything ?

SRI B. D. JATTI.—Sir, Government is not only not lethargic, but it is very active. If the Hon'ble Member remembers, last time, it was discussed very seriously in this House and we are taking serious action. So, we are very active.

MR. SPEAKER.—Will Sri Krishna kindly tell me whether red-tapism also comes within the purview of Vigilance Commission ?

SRI S. M. KRISHNA.—Undue delay on the part of Government to move in a particular matter would also inflict serious damage on our admir tration and to that extent

Mr. SPEAKER.—First of all, the Hon'ble Member equaters red-tapism to undue delay and undue delay is linked to some other thing, we will leave it at that.

Sri G. V. GOWDA.—May I know the financial commitment if this Vigilance Commission is to be constituted and whether the Centre is going to assist us ?

Sri B. D. JATTI.—Generally it is taken that no extra expenditure to an appreciable extent should result in constituting the Vigilance Commission.

Sri C. J. MUCKANNAPPA.—Is it a single-man commission or is it a commission with more than one ?

Sri B. D. JATTI.—It will be with a Vigilance Commissioner. That means, he is a single man. By that it does not mean that he will not have other assisting agencies to complete the work.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ವಿಜಿಲೆನ್ಸ್ ಕಮಿಷನ್ ಏನು ನಾಮಕರಣ ಮಾಡಬೇಕೆಂದು ಇದ್ದೀರಿ ಇದಕ್ಕೆ ಮಂತ್ರಿಗಳ ಮೇಲೆ, ಶಾಸನ ಸಭಾ ಸದಸ್ಯರ ಮೇಲೆ ತನಿಖೆ ನಡೆಸುವುದಕ್ಕೆ ಅಧಿಕಾರ ಕೊಡದಿದ್ದ ಪಕ್ಷದಲ್ಲಿ ಅದರ ಕಾರ್ಯ ನಿರ್ವಾಹ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಸರಕಾರ ತಿಳಿದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಹಾಗೆ ತಿಳಿದುಕೊಂಡಿಲ್ಲ.

ಶ್ರೀ ಎಸ್. ಶಿವಪ್ಪ.—ಈ ವಿಜಿಲೆನ್ಸ್ ಕಮಿಷನ್‌ಗೆ ಅಧಿಕಾರಿಗಳನ್ನು ನೇಮಕ ಮಾಡುವುದು ಮೈಸೂರು ಸರಕಾರವೇ ಅಥವಾ ಕೇಂದ್ರ ಸರಕಾರವೇ ?

Sri B. D. JATTI.—As regards the question who will be appointed as Vigilance Commissioner for this State, the Government of India may appoint. But it will consult us, or they may authorise us to appoint.

Sri S. SIVAPPA.—Is the appointment made by the President of India, as in the case of the Chief Justice of Mysore and something like that ? Or is the matter not yet decided finally ?

Sri B. D. JATTI.—As far as the Government of India is concerned, the matter is decided. He will be a Commissioner who will be appointed by the President of India and his position is analogous to the position of the Chairman of the Public Service Commission.

Sri C. J. MUCKANNAPPA.—Unless the Government amend the Civil Service rules, it is rather very difficult even for that Vigilance Commission to put down corruption which is rampant in so many spheres......

Sri B. D. JATTI.—After the appointment of the Vigilance Commission, it may be necessary to re-organise the present Anti-Corruption Department; if necessary, we will have to amend certain rules.

ಶ್ರೀ ಗೋಪಾಲ ಸಾಲೆನ್ನ.—ಅಧಿಕಾರಿಗಳು, ವಿಧಾನ ಸಭಾ ಸದಸ್ಯರು ಮತ್ತು ಮಂತ್ರಿಗಳು ಆಸ್ತಿಪಾಸ್ತಿಗಳನ್ನು ಯಾವ ರೀತಿಯಲ್ಲಿ ಸಂಗ್ರಹ ಮಾಡಿದರು ಎಂಬ ವಿಷಯದಲ್ಲಿ ಸ್ಟೇಟ್‌ಮೆಂಟ್ ಪಡೆಯುವಂತಹ ಅಧಿಕಾರ ಈ ವಿಜಿಲೆನ್ಸ್ ಕಮಿಷನ್‌ಗೆ ಇರಬಹುದೇ ?

ಶ್ರೀ ಬಿ. ಡಿ. ಜತ್ತಿ.—ಅದು ಇದೆ ಎಂದು ನನಗೆ ಕಾಣುವುದಿಲ್ಲ.

Sri S. SIVAPPA.—Will the members of the Vigilance Commission be from the Mysore State or outside the State ?

Sri B. D. JATTI.—Anybody who will be appointed will be a citizen of our country.

Sri S. M. KRISHNA.—Sir, would the Vigilance Commissioner be making periodical reports to the Legislature.

Mr. SPEAKER.—Before I permit that question, may I know what it is?

Sri S. M. KRISHNA.—Would he make periodical reports to the Legislature about the action taken or the activities about the Vigilance Commission?

Sri B. D. JATTI.—Sir, if we look to the pattern of the Government of India, there is a provision that he has to submit reports to the Parliament. If we accept the pattern as it is exactly, it may be necessary for us also to place the report before the Assembly and the Council.

ಶ್ರೀ ಎ. ಜೆ. ದೊಡ್ಡಮೇಟಿ.—ಆದಷ್ಟು ಗಂಭೀರವಾಗಿ ಮತ್ತು ತೀವ್ರವಾಗಿ ಈ ಪ್ರಶ್ನೆಯನ್ನು ಮುಗಿಸುತ್ತೇವೆ ಎಂದು ತಾವು ಹೇಳಿದಿರಿ. ಹಾಗೆಂದರೆ ಇಂತಹ ಕಮಿಷನ್‌ನ್ನು ಎಷ್ಟು ದಿವಸದೊಳಗೆ ನೇಮಕ ಮಾಡಲು ಸರಕಾರದವರಿಗೆ ಸಾಧ್ಯವಾದೀತು ? ಆದಷ್ಟು ಬೇಗ ಎಂದರೆ ಅದು ಬಹಳ ತೊಂದರೆಯ ಶಬ್ದ.

ಶ್ರೀ ಬಿ. ಡಿ. ಜತ್ತಿ.—ಇಂತಹ ದಿವಸದಲ್ಲೇ ಎಂಬುದಾಗಿ ಖಚಿತವಾದ ತಾರೀಖನ್ನು ಹೇಳಲಿಕ್ಕೆ ಬರುವುದಿಲ್ಲ. ಸರ್ವಸಾಮಾನ್ಯವಾಗಿ ಆದಷ್ಟು ಬೇಗನೆ ಮಾಡುತ್ತೇವೆ ಎಂದು ಹೇಳಬಲ್ಲೆ.

Sri G. V. GOWDA.—It was just now said that the Vigilance Commissioner would have agents to assist him, if necessary. May I know whether the Department of Anti-Corruption can also act as an agent to this Vigilance Commissioner?

Sri B. D. JATTI.—If necessary, we may reorganise the present Anti-Corruption Department or the set up.

Sri D. M. SIDDIAH.—While appointing the Vigilance Commissioner, will the Government take into consideration the history of the person, the integrity and character of the person?

Sri B. D. JATTI.—The Vigilance Commissioner will be a very senior officer of the status of the Secretary in the Government of India or a retired Judge of the High Court or such other eminent official or non-official personality, who will be acceptable to most of the people who are honest.

Sri S. SIVAPPA.—Is the Vigilance Commission going to be appointed by a statutory body or by an executive order?

Sri B. D. JATTI.—I have replied previously that details are not yet finalised. We are corresponding with the Home Ministry of the Government of India. Within a week we will finalise the whole thing.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರ ವ್ಯಾಪ್ತಿ ಬರೀ ಅಧಿಕಾರಿಗಳಿಗೆ ಎಂದು ಹೇಳಿದಿರಿ. ನಾನ್ ಅಫಿಷಿಯಲ್ ಬಾಡಿಗಳಲ್ಲಿರುವ ನಾನ್-ಅಫಿಷಿಯಲ್ಸ್‌ನಲ್ಲಿರುವ ಭ್ರಷ್ಟಾಚಾರವನ್ನು ತಪ್ಪಿಸಲು ಅಥವಾ ಹತೋಟಿಗೊಳಿಸಲು ಒಂದು ಬಾಡಿ ಕ್ರಿಯೇಟ್ ಮಾಡಲು ಸರ್ಕಾರ ಯೋಚನೆ ಮಾಡಿದೆಯೇ ?

Sri B. D. JATTI.—As far as non-officials in general are concerned, there are sufficient safeguards to check. If the hon'ble member has any specific information and if he puts a supplementary, I will reply.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಸ್ಟ್ಯಾಟ್ಯೂಟರಿ ಬಾಡಿ ಇರುತ್ತದೆಯೇ ಅಥವಾ ಎಗ್ಜಿಕ್ಯೂಟಿವ್ ನಾಮಿನೇಟ್ ಮಾಡುತ್ತದೆಯೇ ?

Sri B. D. JATTI.—We have not taken any final decision. But, generally, the function of the Government is to follow the pattern followed in the Government of India.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಸಮಿತಿಗೆ ಹೆಣ್ಣುಮಕ್ಕಳನ್ನೂ ಹಾಕುವುದು ಒಳ್ಳೆಯದಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಅವರಿಂದ ಎಷ್ಟುಮಟ್ಟಿಗೆ ಈ ಕೆಲಸವಾಗುತ್ತದೆ ಎಂಬ ವಿಚಾರದಲ್ಲಿ ನನಗಂತೂ ಸಂಶಯವಿದೆ.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಈ ಎಚ್ಚರಿಕೆ-ಆಯೋಗವನ್ನು ರಚಿಸಬೇಕೆಂದು ಕೇಂದ್ರಸರ್ಕಾರದವರು ಭಾರತಾದ್ಯಂತ ಮಾಡಬೇಕೆಂದು ಸೂಚನೆ ಕೊಟ್ಟಮೇಲೆ ನಿರ್ಧಾರ ಮಾಡಿದ್ದೀರೋ ಅಥವಾ ತಾವೇ ಪ್ರತ್ಯೇಕವಾಗಿ ರಚಿಸಲು ವಿಚಾರ ಮಾಡಿದ್ದೀರೋ ?

Sri B. D. JATTI.—The Government of Mysore was also considering it very seriously. At the same time, the Government of India might have thought about it because when there was a conference of the Inspectors-General of Police, they considered this problem very seriously and passed a resolution. On that resolution, perhaps, other things followed.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಹೆಣ್ಣುಮಕ್ಕಳಲ್ಲೂ ದಕ್ಷರೂ ತಜ್ಞರೂ ಇದ್ದಾರೆಂಬುದನ್ನು ಅವರ ಗಮನಕ್ಕೆ ತಂದರೆ ಅವರು ಹೇಳಿದ ಮಾತನ್ನು ವಾಪಸು ತೆಗೆದುಕೊಳ್ಳುವರೇ ?

ಶ್ರೀ ಬಿ. ಡಿ. ಜತ್ತಿ.—ಹೆಣ್ಣುಮಕ್ಕಳಲ್ಲಿ ನಮಗಿಂತ ಗಟ್ಟಿಗರಿಲ್ಲವೆಂದು ನಾನು ಹೇಳಲಿಲ್ಲ, ಗಟ್ಟಿಗರಿದ್ದಾರೆ.

Sri S. SIVAPPA.—Has the Government of India asked the State Government to submit a panel of names for the appointment of Vigilance Commissioner ?

Sri B. D. JATTI.—I do not know whether the names are suggested by the Chief Minister or not.

ಶ್ರೀ ಎ. ಜೆ. ದೊಡ್ಡಮೇಟಿ.—ಭ್ರಷ್ಟಾಚಾರದ ವಿಚಾರವಾಗಿ ಯಾರಿಗೆ ಅನ್ವಯಿಸಲಾಗುತ್ತದೆ ಎಂದು ಖಚಿತವಾಗಿ ಕೇಳಬೇಕೆಂದು ಹೇಳಿದರು. ಶಾಸನಸಭೆ ಸದಸ್ಯರು, ಟಿ. ಡಿ. ಬಿ. ಸದಸ್ಯರು, ಸ್ಕೂಲ್ ಬೋರ್ಡ್ ಛೇರ್‌ಮನ್, ಭ್ರಷ್ಟಾಚಾರ ಸಮಿತಿಯ ಛೇರ್‌ಮನ್, ಸೊಸೈಟಿ ಆಡಳಿತದಲ್ಲಿರುವವರು ಸರ್ಕಾರಿ ಆಡಳಿತದಲ್ಲಿರುವವರು ಇಂಥ ನಾನ್-ಅಫಿಷಿಯಲ್ಸ್ ಬಗ್ಗೆ ವಿಚಾರ ಮಾಡಲು ಆ ಸಮಿತಿ ಸಮರ್ಥವಿದೆಯೆ ? ಇಲ್ಲದಿದ್ದರೆ ಇಂಥವರ ಸಂಬಂಧದ ಭ್ರಷ್ಟಾಚಾರ ನಿರ್ಮೂಲ ಮಾಡಲು ಸರ್ಕಾರ ಏನು ಕ್ರಮ ಕೈಕೊಳ್ಳುವುದು ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಕೇಳಿದ ಉಪಪ್ರಶ್ನೆಗೆ ಮುಕ್ಕಣ್ಣಪ್ಪನವರು ಸ್ವಲ್ಪ ತಿದ್ದುಪಡಿ ಮಾಡಿದರು. ಆ ಎರಡನ್ನೂ ಕೂಡಿಸಿ ಎರಡಕ್ಕೂ ಉತ್ತರ ಹೇಳಿದರೆ ಸರಿಹೋಗುತ್ತದೆ. ಮಂತ್ರಿಗಳ ಬಗ್ಗೆ ಭ್ರಷ್ಟಾಚಾರ ಅಥವಾ ದೂರು ಬಂದರೆ ಮುಖ್ಯ ಮಂತ್ರಿಗಳು ಅದರ ಬಗ್ಗೆ ಜವಾಬ್ದಾರರು! ಅದಕ್ಕೆ ಒಂದು ಮೆಷೀನರಿ ಇದೆ. ಇದರ ಮೂಲಕ ಪರಿಶೀಲಿಸಿ ಹೈಕಮ್ಯಾಂಡಿಗೆ ವರದಿ ಮಾಡಿ ಅದರ ಆದೇಶದಂತೆ ಕ್ರಮ ಕೈಕೊಳ್ಳುತ್ತಾರೆ. ಮುಖ್ಯ ಮಂತ್ರಿಗಳ ವಿರುದ್ಧ ದೂರು ಬಂದರೆ ಅದರ ಸಂಬಂಧದಲ್ಲಿ ಇಂಡಿಯಾ ಸರ್ಕಾರದ ಮೆಷೀನರಿ ಏನಿದೆ ಅದನ್ನು ಉಪಯೋಗಿಸಿಕೊಂಡು ಪ್ರಧಾನ ಮಂತ್ರಿಗಳು ವಿಚಾರಣೆ ಮಾಡಿ ಹೈಕಮ್ಯಾಂಡಿನ ಆದೇಶದಂತೆ ತಕ್ಕ ಕ್ರಮ ಕೈಕೊಳ್ಳುತ್ತಾರೆ. ಉಳಿದ ನಾನ್-ಅಫಿಷಿಯಲ್ಸ್, ಸಂಸ್ಥೆಗಳು ಮುಂತಾದುವುಗಳ ಬಗ್ಗೆ ಸರ್ಕಾರದವರು ಈಗ ಮಾಡಬೇಕೆಂದಿರುವ ಕಮಿಷನ್ ಮೂಲಕ ಅಥವ ಇತರ ಕಾನೂನುಗಳ ಪ್ರಕಾರ ಕ್ರಮ ತೆಗೆದುಕೊಳ್ಳಲು ಅವಕಾಶ ಇದೆ; ಅದರ ಬಗ್ಗೆ ಯೋಚನೆ ಮಾಡಬೇಕಾಗಿಲ್ಲ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ವಿಜಯಲಕ್ಷ್ಮಿ ಪಂಡಿತರು, ಇಂದಿರಾಗಾಂಧಿ ಮುಂತಾದ ಮಹಿಳೆಯರು ಉನ್ನತ ಸ್ಥಾನಗಳಲ್ಲಿದ್ದು ಚೆನ್ನಾಗಿ ಕಾರ್ಯ ನಿರ್ವಹಿಸಿರುವಾಗ ಹೆಣ್ಣುಮಕ್ಕಳೂ ಇಂಥ ಸಮಿತಿಗಳಲ್ಲಿ ಭಾಗವಹಿಸಲು ತೊಂದರೆಯೇನು ?

ಶ್ರೀ ಬಿ. ಡಿ. ಜತ್ತಿ.—ಹೆಣ್ಣುಮಕ್ಕಳನ್ನು ನೇಮಕ ಮಾಡುವುದಿಲ್ಲವೆಂದು ನಾನು ಹೇಳಲಿಲ್ಲ. ಕೇಂದ್ರ ಸರ್ಕಾರ ಕೂಡ ಹಾಗೆ ಹೇಳಿರುವುದಿಲ್ಲ. ತಮ್ಮಂಥ ಗಟ್ಟಿಗರಿದ್ದರೆ ಮಾಡಲು ಅಭ್ಯಂತರವಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಭಾರತದಲ್ಲಿ ಇಂಥ ಎಚ್ಚರಿಕೆ ಆಯೋಗದ ಅಧ್ಯಕ್ಷತೆಯನ್ನು ವಹಿಸಲು ಯೋಗ್ಯ ಅರ್ಹತೆ ಪಡೆದ ಒಬ್ಬರನ್ನು ನಮ್ಮ ರಾಜ್ಯದಿಂದ ಈಗತಾನೆ ತೆಗೆದುಕೊಂಡಿರುವುದರಿಂದ ಅಂಥ ಜನರ ಕೊರತೆ ನಮಗೆ ಬೀಳುವುದಿಲ್ಲ ಅಲ್ಲವೇ ?

Sri B. D. JATTI.—According to me it is a credit to the State of Mysore that we have been able to produce a man who can be a Commissioner at an All-India level.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಮಹಿಳೆಯರಲ್ಲೂ ದಕ್ಷತೆ ಇದೆ. ಅದಕ್ಕೆ ಸಂಶಯವೇಕೆ ? ಸಂಶಯವಿದೆಯೆಂದು ಹೇಳಿದ್ದನ್ನು ರಿಕಾರ್ಡಿನಿಂದ ತೆಗೆದುಹಾಕಬೇಕು.

ಶ್ರೀ ಬಿ. ಡಿ. ಜತ್ತಿ.—ಅವರ ಬಗ್ಗೆ ಸಂಶಯವಿಲ್ಲ, ನಮಗಿಂತ ಗಟ್ಟಿಮುಟ್ಟಾಗಿ ಕೆಲಸ ಮಾಡುತ್ತಾರೆ.

ಶ್ರೀ ಎಸ್. ಶಿವಪ್ಪ.—ಕೇಂದ್ರದಲ್ಲಿ ವಿಜಿಲೆನ್ಸ್ ಕಮಿಷನ್ನಿನಲ್ಲಿ ನೇಮಿಸುವುದಕ್ಕಾಗಿ ಒಬ್ಬ ದಕ್ಷರಾದ ವ್ಯಕ್ತಿಯನ್ನು ಮೈಸೂರು ದೇಶದಿಂದ ಕೊಟ್ಟಿದ್ದೀರಿ, ಮೈಸೂರಿನಲ್ಲಿ ನೇಮಿಸುವ ವಿಜಿಲೆನ್ಸ್ ಕಮಿಷನ್ನಿಗೆ ಇಷ್ಟೇ ದಕ್ಷರಾದ ವ್ಯಕ್ತಿಗಳು ಅಥವಾ ಅದಕ್ಕಿಂತ ಇನ್ನೂ ಹೆಚ್ಚಿನ ದಕ್ಷರಾದ ಮನುಷ್ಯರನ್ನು ನೇಮಕ ಮಾಡಿದ್ದೀರೋ ಹೇಗೆ ?

ಶ್ರೀ ಬಿ. ಡಿ. ಜತ್ತಿ.—ಅಷ್ಟೇ ದಕ್ಷರೂ ಅಥವಾ ಅದಕ್ಕಿಂತ ಇನ್ನೂ ಹೆಚ್ಚು ದಕ್ಷರಾದವರೂ ಸಿಕ್ಕಿದರೆ ಬಹಳ ಸಂತೋಷ.

ಶ್ರೀ ಅಂಗಡಿ ಚನ್ನಬಸಪ್ಪ.—ಇಂತಹ ವಿಜಿಲೆನ್ಸ್ ಕಮಿಷನ್ನನ್ನು ನೇಮಕ ಮಾಡಬೇಕೆಂದು ಕೇಂದ್ರ ಸರಕಾರದಿಂದ ತಮಗೇನಾದರೂ ಆದೇಶ ಬಂದಿತ್ತೇ ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ಇದಕ್ಕೆ ಉತ್ತರ ಕೊಟ್ಟಿದ್ದೆ, ಹಿಂದೆ ಇನ್ಸ್‌ಪೆಕ್ಟರ್-ಜನರಲ್ ಆಫ್ ಪೋಲೀಸರುಗಳು ಒಂದು ಕಾನ್‌ಫರೆನ್ಸ್ ಮಾಡಿ ಇಂತಹ ಕಮಿಷನ್ನನ್ನು ಮಾಡುವುದು ಒಳ್ಳೆಯದು ಎಂದು ಒಂದು ಗೊತ್ತುವಳಿಯನ್ನು ಕಳುಹಿಸಿದ್ದರು. ಅದನ್ನು ನಾವು ಕೇಂದ್ರದ ಗೃಹ ಖಾತೆಗೆ ಕಳುಹಿಸಿದ್ದೆವು. ಅವರೂ ಇದನ್ನು ವಿಚಾರ ಮಾಡಿ ಇವರು ಹೇಳತಕ್ಕದ್ದು ಸರಿಯಾಗಿದೆ ಎಂದು ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲ ಗೌಡ.—ಈ ಆಯೋಗದ ಸಮಿತಿಯನ್ನು ಇನ್ನೂ ಹೆಚ್ಚು ಅಧಿಕಾರಯುತವಾಗಿ ಮಾಡಿ ಆಫಿಷಿಯಲ್ಸ್ ಹಾಗೂ ನಾನ್-ಅಫಿಷಿಯಲ್ಸ್‌ಗಳನ್ನು ಕೂಡಿಕೊಂಡು ಹೊಂದಿಕೊಳ್ಳುವಂತಹ ಎಚ್ಚರಿಕೆಯ ಆಯೋಗವನ್ನು ರಾಜ್ಯಸರಕಾರ ರಚನೆ ಮಾಡುವುದನ್ನೂ ಪರ್ಯಾಲೋಚನೆ ಮಾಡುತ್ತದೆಯೇ ?

Sri B. D. JATTI.—We have not got any set up from any other State. The only set up we have before us is that of the Government of India and according to the recommendation of the Santhanam Committee, the Commission would consist of :

(1) the Directorate-General, Complaint and Redress ;
(2) the Central Police Organisation ; and
(3) the Directorate of Vigilance.

This is the pattern of the Central Government and in our State we have got the Anti-Corruption Department. I have never said that it is the only department that may be made use of. If necessary, it can be reorganised and brought up to the necessary standard.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿವೃತ್ತರಾದ ಹೈಕೋರ್ಟ್ ನ್ಯಾಯಾಧೀಶರೂ ಮತ್ತು ಅಧಿಕಾರದಲ್ಲಿ ಬಹಳ ಉತ್ತಮವಾದ ಆಳವಾದ ಅನುಭವವನ್ನು ಪಡೆದಿರತಕ್ಕ ಮತ್ತು ಎಲ್ಲರಿಗೂ ಒಪ್ಪತಕ್ಕ ನಾನ್-ಆಫಿಷಿಯಲ್ ಅನ್ನು ಮೈಸೂರು ರಾಜ್ಯಕ್ಕೆ ನೇಮಕ ಮಾಡುವಾಗ ನಮ್ಮ ರಾಜ್ಯದಲ್ಲಿ ಆಳವಾದ ಅನುಭವ ಪಡೆದವರೂ ಅಧಿಕಾರದಲ್ಲಿದ್ದವರೂ ಮತ್ತು ಎಲ್ಲರಿಗೂ ಬೇಕಾದ ನಮ್ಮ ಈ ಸಭೆಯ ಅಧ್ಯಕ್ಷರನ್ನು ಏಕೆ ವಿಜಿಲೆನ್ಸ್ ಕಮಿಷನ್ನಿನ ಮೆಂಬರಾಗಿ ನೇಮಕ ಮಾಡಬಾರದು ?

Mr. SPEAKER.—It is disallowed.

Sri V. S. PATIL.—May I know whether the Government is prepared to appoint a Commission which will be outside the purview and influence

of the State Government? It must be directly responsible to the Centre and not to the State Government.

Sri B. D. JATTI.—We have not yet made up our mind as to what should be the set up. If the set up suggested by the Hon'ble Member is acceptable to the State Government and the Government of India, that also will be considered.

ಶ್ರೀ ಆರ್. ಎಣ್. ಲಕ್ಷ್ಮೀಪತಿ.—ಮಂತ್ರಿಗಳ ಮೇಲೆ ಆರೋಪಗಳು ಬಂದಾಗ ಅದನ್ನು ಮುಖ್ಯಮಂತ್ರಿಗಳು ವಿಚಾರಣೆ ಮಾಡುತ್ತಾರೆ ಎಂದು ಹೇಳಿದಿರಿ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಹದಿನಾರು ವರ್ಷಗಳಾದರೂ ಈ ದೇಶದಲ್ಲಿ ಅನೇಕ ಖಾಸಗಿಯವರ ಹಾಗೂ ಮಂತ್ರಿಗಳ ಮೇಲೆ ಭ್ರಷ್ಟಾಚಾರದ ಆರೋಪಗಳಿರುವ ವಿಚಾರ ಗೊತ್ತಾಗಿದ್ದರೂ ಅಂತಹವರ ಮೇಲೆ ಇದುವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅದಕ್ಕೋಸ್ಕರ ಮಂತ್ರಿಗಳ ಮೇಲೆ ತನಿಖೆ ಮಾಡಲು ಶಕ್ತಿಯುತವಾದ ಒಂದು ಪ್ರತ್ಯೇಕವಾದ ಸ್ಟ್ಯಾಟ್ಯೂಟರಿ ಬಾಡಿ ಒಂದನ್ನು ನಿರ್ಮಾಣ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—16 ವರ್ಷಗಳ ಅನುಭವ ಮಾನ್ಯ ಸದಸ್ಯರಿಗಿರಬಹುದು. ಆದರೆ ನಾನು 18 ವರ್ಷಗಳ ಕಾಲದಿಂದ ಲೆಜಿಸ್ಲೇಟರಾಗಿರುವುದರಿಂದ ಮಾನ್ಯ ಸದಸ್ಯರು ಈಗ ಕೇಳಿದಂತಹ ಪ್ರಶ್ನೆಯಂತೆ ಇದಕ್ಕೆ ಮೊದಲು ಧೈರ್ಯದಿಂದ ಯಾರೂ ಪ್ರಶ್ನೆ ಕೇಳಿರಲಿಲ್ಲ. (ನಗು)

Sri V. S. PATIL.—May I know whether the Government is prepared to request the Central Government to amend the Constitution to have a separate body responsible only to the President irrespective of any form of Government that may be functioning?

Sri B. D. JATTI.—The suggestion of the Hon'ble Member will be kept in view while discussing this matter with the Home Minister at the Centre.

Sri V. M. DEO.—May I know whether a roving committee will be appointed to go into the complaints against Government officers, into the accounts of all societies with power to seize books and things like that and recommend to Government the action to be taken? The local bodies can also give adivice on matters coming within their jurisdiction. I spoke on the non-official resolution moved on this subject. May I know whether Government has considered this aspect and if it has considered, what is the result?

Sri B. D. JATTI.—If found neccessary, Government will try to make use of the advice and suggestion of the Hon'ble Member.

ಶ್ರೀ ಎ. ಜೆ. ದೊಡ್ಡಮೇಟಿ.—ಇದರಲ್ಲಿ ರಾಜ್ಯ ಸರಕಾರದ ಜವಾಬ್ದಾರಿ ಏನಾದರೂ ಇದೆಯೇ?

ಶ್ರೀ ಬಿ. ಡಿ. ಜತ್ತಿ.—ನಮ್ಮ ಸ್ಟೇಟನ್ನು ಕನ್‌ಸಲ್ಟ್ ಮಾಡಿ ಮಾಡುವುದಕ್ಕೂ ಆಗುತ್ತದೆ.

ಶ್ರೀ ವಿ. ಎಸ್. ಪಾಟೀಲ್.—ವಿಜಿಲೆನ್ಸ್ ಕಮಿಷನ್ನಿನ ಅಧ್ಯಕ್ಷರನ್ನು ನೇಮಕ ಮಾಡುವಾಗ ಹೊರಗಡೆಯ ರಾಜ್ಯದಿಂದ ಯಾರನ್ನಾದರೂ ತರವುದು ಯೋಗ್ಯ ಎಂದು ಎನಿಸುವುದಿಲ್ಲವೇ?

Sri B. D. JATTI.—When one person from our State has been selected as fit to do the work of the entire country, there may be more persons in our State or there may be a person from another State. It is a matter for consideration when we take the final decision.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇಷ್ಟು ದೀರ್ಘವಾಗಿ ಇಲ್ಲಿ ಚರ್ಚೆಯಾದ ಮೇಲೆ ಇಂತಹ ವಿಜಿಲೆನ್ಸ್ ಕಮಿಷನ್ನು ನೇಮಕ ಮಾಡುವುದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ನೀವು ಎಕ್ಸ್‌ಪೆಕ್ಟ್ ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಹೋದ ಸಾರಿಯು ಈ ಶಾಸನಸಭಾ ಅಧಿವೇಶನದಲ್ಲಿ ಇಂತಹುದೇ ಒಂದು ವಿಚಾರದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡು ಬಂದು ತಮ್ಮಂತಹವರೇ ವಿಚಾರ ಮಾಡಬೇಕೆಂದು ಹೇಳಿದ್ದೀರಿ. ಇವೊತ್ತಿನ ದಿವಸ ಮಾನ್ಯ ಸದಸ್ಯರಾದ ಶ್ರೀಮಾನ್ ರೇವಣ್ಣಸಿದ್ಧಪ್ಪನಂತಹವರು ಪುನಃ ಇದನ್ನು ಚರ್ಚೆ ಮಾಡಿ ಇಂತಹುದನ್ನು ಮಾಡಬಾರದು ಎಂದು ನಿರ್ಣಯ ತಂದರೆ ಬಿಟ್ಟು ಬಿಡೋಣ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

QUESTION FOR ANSWER ON THE DAY

(but not taken up)

Constitution of a Committee other than the Anti-Corruption Department

*Q.—168. SRI E. NARAYANA GOWDA (Bangarpet).—

Will the Government be pleased to state :—

whether they intend to constitute a committee other than the Anti-Corruption Department under the Chairmanship of a retired High Court Judge as has been done by the Government of India to prevent corruption and to increase efficiency in the administration ?

A.—SRI S. NIJALINGAPPA (Chief Minister).—

The question of constituting a Vigilance Commission is under consideration of Government.

Member's Representation.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆ, ಶ್ರೀ ಬಿ. ಡಿ. ಜತ್ತಿಯವರೇ ಮುಖ್ಯಮಂತ್ರಿಗಳಾಗುತ್ತಾರೆಂದೂ, ಈ ಕ್ಯಾಬಿನೆಟ್ ರೀಷಫಲ್ ಆಗುತ್ತದೆಂದು ವರ್ತಮಾನ ಬಂದಿದೆ......

Mr. SPEAKER.—I have no information.

BUDGET ESTIMATES FOR 1964-65

General discussion—(*contd.*)

9-30 A.M.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಅಧ್ಯಕ್ಷರೇ, ಈ ದಿವಸ ದೇಶದಲ್ಲಿ ಭಾರೀ ಪ್ರಮಾಣದ ನೀರಾವರಿ ಯೋಜನೆಗಳ ವರ್ಗಕ್ಕೆ ಸೇರಿರತಕ್ಕ ಡ್ಯಾಮುಗಳ ಪೈಕಿ ಒಂದಾದ ನಾರಾಯಣಪುರ ಮತ್ತು ಆಲಮಟ್ಟಿ ಡ್ಯಾಮುಗಳ ವಿಚಾರದಲ್ಲಿ ಒಂದು ದೊಡ್ಡ ಗೊಂದಲವೆದ್ದು ಈ ಹಿಂದೆ ಆ ಹಾರಂಗಿ ಮತ್ತು ಕಂಬದಕಡ ಡ್ಯಾಮುಗಳ ಬಗ್ಗೆ ಏನೊಂದು ಪರಿಸ್ಥಿತಿಯುಂಟಾಗಿತ್ತೋ ಅದೇ ಪರಿಸ್ಥಿತಿ ಈ ದಿವಸ ಇಲ್ಲಿಯೂ ಉಂಟಾಗುವಂತೆ ನಮಗೆ ಭಾಸವಾಗುತ್ತಿದೆ. ಈ ಬಗ್ಗೆ

ಜನರಲ್ಲಿ ಒಂದು ಕಳವಳ ಹಾಗೂ ಭಯವುಂಟಾಗಿದೆ. ಈ ಹಿಂದೆ ಕೇಂದ್ರ ಸರ್ಕಾರದ ಮಂತ್ರಿಗಳಾದ ರಾವ್ ಅವರು ಮೊದಲು ನಾರಾಯಣಪುರಕ್ಕೆ ಸಂಬಂಧಪಟ್ಟ ಅಂದಾಜು ಮತ್ತು ಪ್ಲಾನುಗಳನ್ನು ತಯಾರಿಸಿ ಕಳುಹಿಸಿಕೊಡಿ ಎಂದು ಹೇಳಿದ್ದನ್ನು, ಈಗ ರಾಜ್ಯ ಸರ್ಕಾರದ ಸಲಹೆಯ ಮೇರೆಗೆ ನಾರಾಯಣ ಪುರಕ್ಕೆ ಅನುಮತಿ ಕೊಟ್ಟಿದೆ, ಎಂದು ಹೇಳಿದ್ದನ್ನು ನೋಡಿದರೆ, ಕೇಂದ್ರ ಸರ್ಕಾರದವರ ಏನೋ ಒಂದು ಉದ್ದೇಶ ಇದ್ದದ್ದು ನಮಗೆ ಭಾಸವಾಗುತ್ತದೆ. ಮೊನ್ನೆತಾನೆ ಶ್ರೀ ವಿದ್ಯಾಧರ ಗುರೂಜಿಯವರು ಬಿಜಾಪುರದಲ್ಲಿ ಒಂದು ಹೊಸ ಸುದ್ದಿಯನ್ನು ಹರಡಿದ್ದಾರೆ. ಅವರು ಹೇಳುವುದೇನೆಂದರೆ ಬಿಜಾಪುರಕ್ಕೆ ಅನುಕೂಲವಾಗಬೇಕಾಗಿದ್ದರೆ ಮೊದಲು ಆಲಮಟ್ಟಿಯ ಬಳಿ ಡ್ಯಾಮನ್ನು ಕಟ್ಟಬೇಕೆಂದು ಮಂತ್ರಿಗಳ ಮುಂದೆ ಅವರ ಒಂದು ವಾದವನ್ನಿಟ್ಟಿದ್ದಾರೆ. ಆಲಮಟ್ಟಿಯಲ್ಲಿ ಆ ಡ್ಯಾಮನ್ನು ಕಟ್ಟಿದರೆ ಬಿಜಾಪುರಕ್ಕಿಂತಲೂ ಅದರ ಉಪಯೋಗ ಗುಲ್ಬರ್ಗಕ್ಕೆ ಹೆಚ್ಚಿಗೆ ದೊರೆಯುತ್ತದೆ. ಇದರಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ಮೂರೂವರೆ ಲಕ್ಷ ಎಕರೆ ತರೀ ಸಾಗುವಳಿಗೆ ಬರುತ್ತದೆ. ಅಂದರೆ ಬಿಜಾಪುರ ಜಿಲ್ಲೆಗೆ ಏನು ಕೊಟ್ಟಹಾಗಾಯಿತು ? ಅಷ್ಟೇ ಅಲ್ಲದೆ ಆಲಮಟ್ಟಿಯ ಹತ್ತಿರ ಇದನ್ನು ಕಟ್ಟಿದರೆ ಅಲ್ಲಿ 30-40 ಹಳ್ಳಿಗಳು ಮುಳುಗಡೆಯಾಗುತ್ತವೆ. ಈ ವಿಚಾರವನ್ನು ನಾನೀಗ ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಇದರ ವಿನಾ ಅವರಿಗೆ ಆ ಡ್ಯಾಮಿನ ಬಗ್ಗೆ ಬೇರೇನೂ ಅನನುಕೂಲವಿಲ್ಲ. ಬಿಜಾಪುರ ಜಿಲ್ಲೆ ಬರಗಾಲದ ಜಿಲ್ಲೆಯಾಗಿದ್ದರೂ ನಮ್ಮ ದೇಶಕ್ಕೆ ಒದಗಿರತಕ್ಕ ಇಂದಿನ ತುರ್ತು ಪರಿಸ್ಥಿತಿಯಲ್ಲಿ ಅವರು ಮಾಡಿರತಕ್ಕ ತ್ಯಾಗ ಬಹಳ ಸ್ವಾಗತಾರ್ಹವಾದುದ್ದಾಗಿದೆ. ನಾನು ಹೇಳುತ್ತಿರುವುದನ್ನು ಯಾರೂ ತಪ್ಪಾಗಿ ಭಾವಿಸಬಾರದು. ಅವರು ತೋರಿಸಿರತಕ್ಕ ತ್ಯಾಗಕ್ಕಾಗಿ ಅವರನ್ನು ನಾವೆಲ್ಲರೂ ತುಂಬಾ ಅಭಿನಂದಿಸಬೇಕಾಗಿದೆ. ಆಲಮಟ್ಟಿಯ ವಿಚಾರದಲ್ಲಿ......

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರಾದ ಶ್ರೀ ಆರ್. ಎಸ್. ಪಾಟೀಲರು ಬಹಳ ಕಷ್ಟಪಟ್ಟು ಮಾತನಾಡುತ್ತಿರುವಂತೆ ಕಾಣುತ್ತಿದೆ. ಇನ್ನು 14—15 ದಿವಸಗಳಲ್ಲೇ ಇದಕ್ಕೆ ಸಂಬಂದಪಟ್ಟ ಮಂತ್ರಿಗಳು ಸ್ಥಳಕ್ಕೇ ಬರತಕ್ಕವರಿದ್ದಾರೆ. ಅವರು ಬಿಜಾಪುರಕ್ಕೇ ಬರುತ್ತಾರೆ. ಆಗ ತಾವು ಅವರಿಗೆ ಈ ವಿಚಾರಗಳನ್ನೆಲ್ಲಾ ತಿಳಿಸಬಹುದು.

ಶ್ರೀ ಆರ್. ಎಸ್. ಪಾಟೀಲ್.—ಈ ಹಿಂದೆ ನಮಗೆ ತಿಳಿದಿದ್ದ ಪ್ರಕಾರ ಕೇಂದ್ರ ಸರ್ಕಾರದ ಮಂತ್ರಿಗಳು ಬಿಜಾಪುರಕ್ಕೆ ಬರುತ್ತಾರೆಂದು ಗೊತ್ತಿತ್ತು. ಆದರೆ ಇತ್ತೀಚೆಗೆ ಅವರು ಬರುವುದಿಲ್ಲವೆಂದು ನಮಗೆ ತಿಳಿದು ಬಂದಿದೆ. ಸರ್ಕಾರದವರು ಈ ವಿಚಾರದಲ್ಲಿ ಧೈರ್ಯವಾಗಿ ಒಂದು ನಿಲುವನ್ನು ತೆಗೆದುಕೊಳ್ಳಬೇಕೆಂದೂ, ಅಂಥ ಅವರ ನಿಲುವಿಗೆ ನಮ್ಮೆಲ್ಲರ ಸಂಪೂರ್ಣ ಬೆಂಬಲ ಇದೆ ಎಂಬುದನ್ನು ಸೂಚಿಸಲು ನಾನೀಗ ಮಾತನಾಡುತ್ತಿದ್ದೇನೆ. ನಮ್ಮ ಸರ್ಕಾರದವರ ಖಚಿತವಾದ ನಿಲುವೇನಿದೆಯೆಂಬುದನ್ನು ತಾವು ಕೇಂದ್ರ ಸರ್ಕಾರಕ್ಕೆ ಸೂಚಿಸಬೇಕೆಂದು ತಿಳಿಸಲು ನಾನೀಗ ಮಾತನಾಡುತ್ತಿದ್ದೇನೆ. ನಾನು ಸರ್ಕಾರವನ್ನು ಟೀಕೆ ಮಾಡುತ್ತಿಲ್ಲ. ಈ ದಿವಸ ಆಲಮಟ್ಟಿಯ ಹತ್ತಿರ ಡ್ಯಾಂ ಹಾಕಿದರೆ ಅಲ್ಲಿ 2 ಲಕ್ಷ ಎಕರೆಗೆ ನೀರುದೊರೆಯುತ್ತದೆ. ಇದನ್ನು ಬಿಟ್ಟು ನಾರಾಯಣಪುರದ ಬಳಿ ಕಟ್ಟೆ ಹಾಕಿದರೆ ನಾವು ಆಂಧ್ರದ ಎರಡು ತಾಲ್ಲೂಕುಗಳಿಗೆ ನೀರನ್ನು ಕೊಡಬೇಕಾಗಿ ಬರುತ್ತದೆ. ಈ ವಿಚಾರವನ್ನೂ ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಆದ್ದರಿಂದ ಈ ವಿಚಾರದಲ್ಲಿ ಬಿಜಾಪುರದ ಜನರಿಗೆ ಒಂದು ಸ್ಪಷ್ಟ ತಿಳಿವಳಿಕೆಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ರಾಜ್ಯದಲ್ಲಿ ಆಗಬೇಕಾಗಿರತಕ್ಕ ಸಣ್ಣ ನೀರಾವರೀ ಯೋಜನೆಗಳನ್ನು ಪ್ರಸ್ತಾಪಮಾಡುವುದಾದರೆ—ದೊಡ್ಡ ನೀರಾವರಿ ಯೋಜನೆಗಳು ನಮಗೆ ಫಲವನ್ನು ನೀಡಬೇಕಾದರೆ ದೀರ್ಘಕಾಲಾವಧಿ ಹಿಡಿಯುತ್ತದೆ. ಅದಕ್ಕಾಗಿ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ನಿಗೆ ಅನುಕೂಲವಿದೆಯೋ ಅಲ್ಲೆಲ್ಲಾ ಪಂಪ್ ಸೆಟ್ಟುಗಳನ್ನು ಕೊಟ್ಟು ಜನರಿಗೆ ಅನುಕೂಲ ಕಲ್ಪಿಸಬೇಕೆಂದು ಹೇಳುತ್ತೇನೆ. ಆದರೆ ಈ ವಿಚಾರದಲ್ಲಿ ಸರ್ಕಾರದವರು ಇಲ್ಲಿಯವರೆಗೆ ಅಷ್ಟು ಹೆಚ್ಚಿನ ಗಮನವನ್ನು ಕೊಟ್ಟಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಆದರೆ ಅಲ್ಲಿ ಈ ಸಣ್ಣ ನೀರಾವರಿಯೋ ಜನಗಳಿಗೆ ಅನುಕೂಲವಾದ ಸನ್ನಿವೇಶಗಳಿದ್ದಾಗ್ಯೂ ಅದು ಕಮ್ಯಾಂಡ್ ಏರಿಯಾ ಎಂದು ಅಲ್ಲಿ ಪಿಕಪ್‌ಗಳನ್ನಾಗಲೀ, ಬಾಂಧಾರಗಳನ್ನಾಗಲೀ, ಹಾಕಬಾರದೆಂದು ಹೇಳಿದ್ದಾರೆ. ನಮಗೆ ಈ ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಂದ ಇನ್ನೂ 20—25 ವರ್ಷಗಳ ಕಾಲ ಯಾವ ಪ್ರತಿಫಲವೂ ಸಿಕ್ಕಲಾರದು. ಅಲ್ಲಿಯವರೆಗೆ ನಾವು ಈ ಸಣ್ಣ ನೀರಾವರಿಗಳ ಅನುಕೂಲವನ್ನೂ ಕೈಬಿಟ್ಟು ಕುಳಿತಲ್ಲಿ ದೇಶದಲ್ಲಿ ಈ ಆಹಾರದ ಬಗ್ಗೆ ಬಹಳ ತೊಂದರೆ ಆಗಬಹುದು. ಈ ವಿಚಾರಕ್ಕೆ ಸರ್ಕಾರ ಸೂಕ್ತ ಗಮನಕೊಡುವುದು ಅತ್ಯಗತ್ಯ. ಆದ್ದರಿಂದ ಅಲ್ಲಲ್ಲೇ ಪಿಕಪ್‌ಗಳನ್ನು ಹಾಕುವುದಕ್ಕೂ ಬಾಂಧಾರಗಳನ್ನು ಕಟ್ಟುವುದಕ್ಕೂ ಅನುಕೂಲಮಾಡಿ ಅದಕ್ಕೆ ಸರಿಯಾಗಿ ಪಂಪ್ ಸೆಟ್ಟುಗಳನ್ನು ಒದಗಿಸಿದರೆ ತುಂಬಾ ಉಪಕಾರವಾಗುತ್ತದೆ. ಈ ಹಿಂದೆ ಇದೇ ಸ್ಕೀಮಿನಲ್ಲಿ 63—64ನೇಯ ಸಾಲಿನಲ್ಲಿ ಬಾವಿಗಳಿಗಾಗಿ ಹೆಚ್ಚು ಹಣವನ್ನು ಒದಗಿಸಿದ್ದರು. ಆಗ

(ಶ್ರೀ ಆರ್. ಎಸ್. ಪಾಟೀಲ್)

36 ಸಾವಿರ ಬಾವಿಗಳ ಯೋಜನೆಯನ್ನು ಮಾಡಲಾಗಿತ್ತು. ಅ ಪೈಕಿ ಈಗಾಗಲೇ 21 ಸಾವಿರ ಬಾವಿಗಳನ್ನು ಪೂರೈಸಿರುತ್ತದೆ. ಆದರೆ ಮುಂದಕ್ಕೆ ಈ ಯೋಜನೆಗೆ ಸಾಕಷ್ಟು ಹಣ ಸಿಕ್ಕುತ್ತದೋ ಇಲ್ಲವೋ ತಿಳಿಯದು. ಅಂತೂ ಸರ್ಕಾರದವರು ಮುಂದೆಯೂ ಹಣವನ್ನೊದಗಿಸುತ್ತಾರೆಂದು ನಾವು ನಿರೀಕ್ಷಣೆಮಾಡಿಕೊಂಡಿದ್ದೇವೆ. ಯಾವ ಪ್ರದೇಶದಲ್ಲಿ ವರ್ಷಕ್ಕೆ 10 15 ಇಂಚು ಮಳೆ ಬರುವುದಿಲ್ಲ, ಅಂಥ ಸ್ಥಳದಲ್ಲಿ ಈ ಹಣವನ್ನು ಉದಾರವಾಗಿ ವಿನಿಯೋಗಮಾಡಬೇಕೆಂದು ಹೇಳುತ್ತೇನೆ. ರಾಮ ದುರ್ಗ ತಾಲ್ಲೂಕಿನಲ್ಲಿ ಘಟಪ್ರಭಾ, ಮಲಪ್ರಭಾ, ದೊಡ್ಡ ದೊಡ್ಡ ನದಿಗಳು ಇದ್ದಾಗ್ಯೂ ಅಲ್ಲಿಯ ಜನರಿಗೇನೂ ಅನುಕೂಲವಾಗಿಲ್ಲ. ಅಲ್ಲಿ ಒಂದು ಎಕರೆ ಕೂಡ ತರಿ ಭೂಮಿ ಇಲ್ಲ. ಈ ಪ್ರದೇಶಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಈ ಪಂಪುಸೆಟ್ಟುಗಳನ್ನು ಒಂದು ತಾಲ್ಲೂಕಿಗೆ 10-20ರಂತೆ ಕೊಟ್ಟರೆ ರೈತರ ಕೊರತೆಗಳನು ನೀಗಿಸುವುದಕ್ಕಾಗುವುದಿಲ್ಲ. ವಿಶೇಷವಾಗಿ ಹೆಚ್ಚಿನ ಪ್ರಮಾಣದಲ್ಲಿ ಹಣ ಕೊಡುವ ವ್ಯವಸ್ಥೆ ಮಾಡ ಬೇಕು. ಉದಾಹರಣೆಗೆ ಹೇಳುವುದಾದರೆ ಈ ವರ್ಷ ನಮ್ಮ ತಾಲ್ಲೂಕಿನೊಳಗೆ ಕೇವಲ 20 ಇಂಜಿನ್ನು ಗಳು ದೊರಕಿವೆ. ಸರ್ಕಾರ ಅಲಾಟ್‌ಮೆಂಟಿನಲ್ಲಿ ಕೇವಲ 20 ಇಂಜಿನ್ನುಗಳು ಸಿಕ್ಕಿದರೆ ಯಾವರೀತಿ ಯಿಂದ ಪರಿಹಾರ ಮಾಡುವುದು ? ಜನಗಳ ಮುಂದೆ ದೊಡ್ಡ ದೊಡ್ಡ ಯೋಜನೆಗಳನ್ನು ಈಗಾಗಲೇ ಸರ್ಕಾರದವರು ಇಟ್ಟಿದ್ದಾರೆ. ಪಂಪುಸೆಟ್ಟುಗಳನ್ನು ಬೇಕಾದಷ್ಟು ಕೊಡುತ್ತೇವೆ, ಬಾವಿ ತೋಡಲು ಬೇಕಾದಷ್ಟು ಹಣ ಕೊಡುತ್ತೇವೆ ಎಂದು ಹೇಳಿದ್ದಾರೆ. ಜನಗಳಿಂದ ಬಂದ ಬೇಡಿಕೆಗಳನು ಪೂರೈಸದಿದ್ದರೆ ಖಂಡಿತವಾಗಿ ನಿರಾಶೆ ಉಂಟಾಗುತ್ತದೆ. ಬರಗಾಲ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಹೆಚ್ಚಿನ ಹಣವನ್ನು ವಿನಿಯೋಗಿಸಬೇಕು. ಹಿಂದೆ ಮಲೆನಾಡು ಅಭಿವೃದ್ಧಿ ಬೋರ್ಡ್ ಇದ್ದಂತೆ ಬರಗಾಲ ಪ್ರದೇಶಗಳ ಅಭಿವೃದ್ಧಿಗಾಗಿ ಒಂದು ಬರಗಾಲ ಪ್ರದೇಶಗಳ ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೆಗೆಯುಸುವುದಕ್ಕಾಗಿ ಪಂಚಾಯಿತಿಗಳ ಸಹಾಯದಿಂದ ಒಂದು ಯೋಜನೆಯನ್ನು ಇಟ್ಟಿದ್ದೀರಿ. ಸಾಮಾನ್ಯವಾಗಿ ಬೆಂಗಳೂರಿಗೆ ನೀರಿನ ಕೊರತೆ ಇದೆಯೆಂದು ಸುದ್ದಿ ಬಂದರೆ ಒಂದು ಗಂಟೆಯಲ್ಲಿ ಇಡೀ ದೇಶದಲ್ಲೇ ಕೋಲಾಹಲವುಂಟಾಗಿ ಕೂಡಲೇ ಅದರ ನಿವಾರಣೆಗೆ ರಿಜರ್ವ್ ಬ್ಯಾಂಕಿನಿಂದಾಗಲಿ ಅಥವಾ ಪರದೇಶ ಗಳಿಂದಾಗಲಿ ಹಣವನ್ನು ಸಂಪಾದನೆ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡುತ್ತಾರೆ. ತಲೆ ತಲಾಂತರಗಳಿಂದ ಅದರಲ್ಲೂ ಸಾವಿರಾರು ವರ್ಷಗಳಿಂದ ಐದಾರು ಮೈಲಿಗಳಿಂದ ಐದಾರು ಕೊಡ ಗಳಲ್ಲಿ ನೀರನ್ನು ತುಂಬಿಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ತರುತ್ತಿದ್ದಾರೆ. ಇದನ್ನು ನೋಡಿದರೆ ನನ್ನ ಮನಸ್ಸಿಗೆ ಬಹಳ ಅಸಮಾಧಾನವುಂಟಾಗುತ್ತದೆ. ಏಕೆಂದರೆ ಸುಮಾರು 30 ಕೋಟಿ ರೂಪಾಯಿಗಳನ್ನು ಸುರಿದು ಬೆಂಗಳೂರಿನ ನೀರಿನ ಸರಬರಾಜಿಗೆ ವ್ಯವಸ್ಥೆ ಮಾಡುತ್ತಿರುವ ಈ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಈ ಯೋಜನೆಯ ಬಗ್ಗೆ ತುಂಬಾ ಅಲಕ್ಷ್ಯ ಮಾಡಿದ್ದಾ ರೆಂದು ನಾನು ಇವತ್ತಿನ ದಿವಸ ಈ ಸಭೆಯಲ್ಲಿ ಹೇಳುತ್ತಿದ್ದೇನೆ. ಇಷ್ಟು ಕೋಟಿ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಈ ಯೋಜನೆಗಾಗಿ ಒದಗಿಸಿಕೊಟ್ಟಿದ್ದೇ ಆದರೆ ಖಂಡಿತವಾಗಿ ಒಂದೇ ವರ್ಷದಲ್ಲಿ ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಬಾವಿಗಳನ್ನು ವ್ಯವಸ್ಥೆ ಮಾಡಿದಂತಾಗುತ್ತದೆ; ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ಕೊರತೆಯನ್ನು ಬಹಳ ಜಾಗ್ರತೆಯಾಗಿ ನೀಗಿಸ ಬಹುದೆಂದು ನಾನು ತಿಳಿಸಬಯಸುತ್ತೇನೆ.

ಕೊನೆಯದಾಗಿ ಹುಬ್ಬಳ್ಳಿಯ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹುಬ್ಬಳ್ಳಿಯಲ್ಲಿ ಒಂದು ಕರ್ಣಾಟಕ ಮೆಡಿಕಲ್ ಕಾಲೇಜು ಇದೆಯೆಂಬುದು ಎಲ್ಲರಿಗೂ ಗೊತ್ತಿರಬೇಕು. ಪ್ರತಿಯೊಂದು ಜಿಲ್ಲೆಗೂ ಒಂದು ಮೆಡಿಕಲ್ ಕಾಲೇಜನ್ನು ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೋ ಏನೋ. ಈಗಿರತಕ್ಕ ಮೆಡಿಕಲ್ ಕಾಲೇಜನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಇಲ್ಲಿರತಕ್ಕ ಜನರು ನಿರಂಕುಶಾಡಳಿತವನ್ನು ನಡೆಸಿದ್ದಾರೆ. ಕಾಲೇಜಿನ ಕಟ್ಟಡ ಕಟ್ಟುತ್ತಾ ಇರುವಾಗ ಮೊದಲನೆಯ ವರ್ಷ ವಿದ್ಯಾರ್ಥಿಗಳ ಅಡ್ಮಿಷನ್ ಆದಾಗ, ಇದು ಯೂನಿಕ್ ಇನ್ ಇಂಡಿಯಾ ಆಗಿ ಏಷಿಯಾದಲ್ಲಿಯೇ ಒಂದು ದೊಡ್ಡ ದವಾಖಾನೆಯಾಗಬೇಕೆಂಬ ಭಾವನೆಯನ್ನು ಇಟ್ಟುಕೊಂಡಿದ್ದೆವು. ಅಲ್ಲಿ ಡಾಕ್ಟರುಗಳು ಹೆಚ್ಚಿಗೆ ತಿರುಗಾಡುವುದಕ್ಕೆ ಬದಲಾಗಿ ನಾಯಿಗಳು ಅಡ್ಡಾಡುವುದನ್ನು ನಾನು ಕಣ್ಣು ತುಂಬ ನೋಡಿದ್ದೇನೆ. ಅದನ್ನೂ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಪಬ್ಲಿಕ್ ಸರ್ವೀಸ್‌ನಲ್ಲಿದ್ದವರನ್ನು ಡೀನ್ ಆಗಿ ಇಟ್ಟಿರುವುದರಿಂದ ಹೀಗೆ ಅವ್ಯವಸ್ಥೆಯಾಗಿದೆ. ಎಂ. ಇ. ಎಸ್ ನಲ್ಲಿರುವವರನ್ನು ಚೀಫ್ ಆಗಿ ಕಳುಹಿಸಿಕೊಡುವುದರಿಂದ ಹೀಗಾಗುವುದೇನು ? ಮೊನ್ನೆ ದಿವಸ ಹೌಸ್ ಸರ್ಜನ್ಸ್ ತಮ್ಮ ಎಂ. ಡಿ. ಮತ್ತು ಎಂ. ಎಸ್.

ಅಭ್ಯಾಸ ಮಾಡಲು ಚುನಾಯಿಸಿದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ಕೊಡುವ ಪ್ರಸಂಗ ಬಂದಾಗ ಡೀನ್ ಅವರು ಕೊಡದೆ ನಿರಾಕರಿಸಿದರು. ವಿದ್ಯಾರ್ಥಿಗಳು ತಮ್ಮ ಅವಧಿಯಲ್ಲಿ ರಜೆಗಳನ್ನು ಪಡೆದ, ಕೊಂಡು ಊರಿಗೆ ಹೋದ ದಿನಗಳನ್ನು ಕೂಡ ಅಟೆಂಡ್ ಮಾಡಿದರೆ ಮಾತ್ರ ಸರ್ಟಿಫಿಕೇಟ್ ಕೊಡುವುದಾಗಿ ಹೇಳಿ ಅದನ್ನೂ ಕೂಡ ನಿರಾಕರಿಸಿದ್ದಾರೆ. ಕರ್ಣಾಟಕ ಮೆಡಿಕಲ್ ಕಾಲೇಜಿನಲ್ಲಿ ಎಂ. ಡಿ. ಮತ್ತು ಎಂ. ಎಸ್. ಅಭ್ಯಾಸ ಮಾಡಲು ಅವರನ್ನು ಹೋಗದ ಹಾಗೆ ವ್ಯವಸೆ ಮಾಡಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಹೌಸ್ ಸರ್ಜನ್ಸ್‌ಗೆ ನೂರು ರೂಪಾಯಿಗಳ ಪರಿಶ್ರಮ ವೇತನವನ್ನು ಕೊಡಬೇಕೆಂದು ಕೇಳಿದಾಗ ಆ ವಿದ್ಯಾರ್ಥಿಗಳ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡರು. ಡೀನ್ ಅವರು ಹುಬ್ಬಳ್ಳಿ ಮೆಡಿಕಲ್ ಕಾಲೇಜಿನಲ್ಲಿ ಕೇವಲ 60 ರೂಪಾಯಿಗಳ ಪರಿಶ್ರಮ ವೇತನವನ್ನು ಕೊಡುತ್ತಿದ್ದಾರೆ. ಮೈಸೂರು, ಬೆಂಗಳೂರು, ಮತ್ತು ಬಳ್ಳಾರಿ ಮೆಡಿಕಲ್ ಕಾಲೇಜುಗಳಲ್ಲಿ ಅಭ್ಯಾಸ ಮಾಡತಕ್ಕ ಹೌಸ್ ಸರ್ಜನ್ನುಗಳಿಗೆ 100 ರೂಪಾಯಿಗಳ ಪರಿಶ್ರಮ ವೇತನವನ್ನು ಕೊಡುತ್ತಿರುವಾಗ ಹುಬ್ಬಳ್ಳಿಯಲ್ಲಿರತಕ್ಕ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಪರಿಶ್ರಮ ವೇತನವನ್ನು 60 ರೂಪಾಯಿಗಳಂತೆ ಕೊಡುವುದು ಯಾವ ನ್ಯಾಯ? ವಿದ್ಯಾರ್ಥಿಗಳು ಸ್ಟ್ರೈಕ್ ಮಾಡಿದಾಗ ಅವರು ಇಲ್ಲಿಗೆ ಬಂದು ಮಂತ್ರಿಗಳನ್ನು ಕಂಡಾಗ ಮಂತ್ರಿಗಳು ಸಂಬಂಧಪಟ್ಟ ಇಲಾಖೆಯಿಂದ ವರದಿಯನ್ನು ಆ ಬಗ್ಗೆ ತರಿಸಿಕೊಂಡಾಗ They are being paid Rs. 100 upto this date ಎಂದ ಹೇಳಿವೆ. ಇಂತಹ ಸುಳ್ಳು ವರದಿಯನ್ನು ಕೊಟ್ಟ ಅಧಿಕಾರಿಗಳ ಮೇಲೆ ಯಾವರೀತಿ ಕ್ರಮವನ್ನು ತೆಗೆದುಕೊಂಡಿದ್ದೀರಿ? ಅದನ್ನು ಈ ಸಭೆಗೆ ಹೇಳಬೇಕೆಂದು ನಾನು ಸರ್ಕಾರದವರನ್ನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಕೌನ್ಸಿಲ್‌ನಲ್ಲಿ ಹೇಳಿಕೆ ಕೊಡುತ್ತಾ ಈ ಕಾಲೇಜುಗಳ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲೂ ತಾರತಮ್ಯ ಮಾಡದೆ ಎಲ್ಲರಿಗೂ 100 ರೂಪಾಯಿಗಳ ಪರಿಶ್ರಮವೇತನ ಕೊಡುತ್ತೇವೆಂಬುದಾಗಿ ಹೇಳಿದರು. ಅದು ಇಲ್ಲಿ ಇದುವರೆಗೂ ಕಾರ್ಯಗತವಾಗಲೇ ಇಲ್ಲ. ಆದರೆ ನಮ್ಮ ಆರೋಗ್ಯ ಮಂತ್ರಿಗಳು ಒಳ್ಳೆಯವರಿದ್ದಾರೆ. ಅವರಿಗೆ ಕೆಟ್ಟ ಹೆಸರನ್ನು ತರುವ ಉದ್ದೇಶದಿಂದೇನಾದರೂ ಈ ರೀತಿ ಇವರು ಮಾಡುತ್ತಿದ್ದಾರೋ ಏನೋ ಎಂದು ನನಗನ್ನಿಸುತ್ತದೆ. ಇದನ್ನು ಸರಿಪಡಿಸಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

ಕೊನೆಯದಾಗಿ ರಾಮದುರ್ಗ, ಗೋಕಾಕ್, ಅಥಣಿ ಮತ್ತು ರಯೋಬಾಗ್ ಮುಂತಾದ ಪ್ರದೇಶಗಳು ಪ್ರತಿವರ್ಷವೂ ಬರಗಾಲಕ್ಕೆ ತುತ್ತಾಗುತ್ತಿರುವುದರಿಂದ ಈ ವಿಷಯದಲ್ಲಿ 195[illegible]ನೇ ಇಸವಿಯಿಂದ ಈ ಸರ್ಕಾರಕ್ಕೆ ಮನವಿಮಾಡಿಕೊಂಡು ಬರುತ್ತಲೇ ಇದ್ದೇವೆ. ಇದುವರೆಗೂ ಒಂದು ವರ್ಷವೂ ಬೆಳೆ ಬಂದುದು ಗೊತ್ತಿಲ್ಲ. ಈ ವರ್ಷ ಭಯಾನಕ ಪರಿಸ್ಥಿತಿ ತಲೆದೋರಿದೆ, ಎಲ್ಲೆಲ್ಲಿ ಬರಗಾಲ ಪ್ರದೇಶಗಳಿವೆಯೋ ಅಲ್ಲಿಗಾಗಿ ಅದಷ್ಟು ಬೇಗ ಪರಿಹಾರ ಕಾಮಗಾರಿಗಳನ್ನು ಶುರು ಮಾಡಬೇಕು. ಕೆರೆ ಕಟ್ಟೆಗಳನ್ನು ಕಟ್ಟುವ ಬಗ್ಗೆ ತೀವ್ರ ರೀತಿಯಿಂದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಅಧ್ಯಕ್ಷರು ಇಷ್ಟು ಹೊತ್ತು ಇಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri V. S. PATIL (Belgaum I).—Before I begin my remarks on the Budget I should like to draw your attention and the attention of this Hon'ble House to Rule No. 163 of our Rules of Procedure and Conduct of Business. Here, the relevant wording is that the Assembly shall be at liberty to discuss the Budget as a whole or any question of principle involved thereon. This is the procedure which we are bound to adopt. When I listened to the last member who spoke, he simply made numerous complaints regarding so many works.

Mr. SPEAKER.—They are also general.

Sri V. S. PATIL.—It cannot come under the wording of the Rule. My further suggestion for this purpose is this: I request you and the office to issue a circular intimating the Hon'ble Members as to how far they can discuss or what point they can raise at the time of general discussion and also on Demands for Grants. This clarification must be made by the Office for Hon'ble Members' guidance and I think if this procedure is followed, then certainly we can curtail the time of discussion and wasting much of the time.

ಇಷ್ಟೇ ಅಲ್ಲದೆ ಈ ಬಡ್ಜೆಟ್ಟಿನಲ್ಲಿ ಇನ್ನೂ ಕೆಲವು ವಿಷಯಗಳನ್ನು ಹೇಳಿದ್ದಾರೆ. ಇದನ್ನು ನೋಡಿದರೆ ಆ ಪ್ರಾಜೆಕ್ಟು ಮಾಡುತ್ತೇನೆ, ಈ ಪ್ರಾಜೆಕ್ಟ್ ಮಾಡುತ್ತೇನೆ ಎಂದು ಮಾನ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಹೇಳುತ್ತಾ ಅಪ್ಪರ್ ಕೃಷ್ಣಾ ಯೋಜನೆಗೆ ಆಲಮಟ್ಟಿ ಹಾಗೂ ನಾರಾಯಣಪುರದಲ್ಲಿ ಶೀಘ್ರದಲ್ಲೇ ಕೆಲಸ ಪ್ರಾರಂಭವಾಗುತ್ತದೆ ಎಂದು ಹೇಳಿದರು. ಇದನ್ನು ಕಟ್ಟುವಾಗ ಇದರಲ್ಲಿರುವ ನಮ್ಮ ಫೈನಾನ್ಷಿಯಲ್ ಪೊಸಿಷನ್ ಏನು ಇನ್ನೂ ಎರಡು ವರ್ಷ ಕೊಟ್ಟರೆ ಇನ್ನೂ 50 ಕೋಟಿಯಷ್ಟು ಬರುತ್ತದೆ. ಇದನ್ನು ತುಂಬಲು ಯಾವ ರೀತಿಯಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ಈಗ 120 ಕೋಟಿಯಷ್ಟನ್ನಿಟ್ಟುಕೊಂಡು ಮೊದಲು ಷುರುಮಾಡೋಣ ಎಂದರೆ ಇದನ್ನು ಹೇಗೆ ಕಂಪ್ಲೀಟ್ ಮಾಡುತ್ತೀರಿ ? ಮೊನ್ನೆ ಶ್ರೀ ಸಿ. ಆರ್. ಬಸಪ್ಪನವರು ಹೇಳಿದರು ನಿಮಗೆ ಟ್ಯಾಕ್ಸ್ ಹಾಕುವುದು ಎಂದರೆ ಕಷ್ಟ. ಇದಕ್ಕೆ ಬದಲಾಗಿ ಇನ್ನೆರಡು ವರ್ಷ ಪ್ರೊಹಿಬಿಷನ್ನು ತೆಗೆದರೆ ನಿಮಗೆ 15 ಕೋಟಿಯಷ್ಟು ಹಣ ಜನ ಕೊಡಲಿಕ್ಕೆ ತಯಾರಿದ್ದಾರೆ. ಪ್ರೊಹಿಬಿಷನ್ನಿನ ಬಗ್ಗೆ ಸರಿಯಾದ ಯಾವ ಸ್ಟಾಟಿಸ್ಟಿಕ್ಸನ್ನು ಇಲ್ಲಿ ಕೊಡದೇ ಇರುವುದರಿಂದ ಅವರಿಗೂ ಹೇಳುವುದು ತೊಂದರೆಯಾಗಿದೆ. ಕುಡಿಯುವವರನ್ನು ಬಿಡಿ ಹೇಗಾದರೂ ಮಾಡಿ ಅವರು ಕುಡಿದೇ ಕುಡಿಯುತ್ತಾರೆ. ಕೆಲವರು ಹರಿಜನ, ಗಿರಿಜನರಾದ ಬಡವರಿಗೆ ಇದರಿಂದ ಅನುಕೂಲವಾಗಿದೆ ಎಂದರು. ಇದರಿಂದ ಏನಾಗಿದೆ ಎಂದರೆ ದುಡ್ಡು ಉಳಿಯುತ್ತಿಲ್ಲ. Country liquors ಹಾಗೂ illicit liquorsಗಳು ಜಾಸ್ತಿಯಾಗುತ್ತಿದೆ. ಅಲ್ಲದೆ Alcoholic poisonous dosapsಗಳನ್ನು ಸೇರಿಸಿ ಜನ ಕುಡಿಯಲಿಕ್ಕೆ ಹತ್ತಿದ್ದಾರೆ. Country liquor bottle 10 ರೂಪಾಯಿ ಇದ್ದರೆ ಅದನ್ನು ಎರಡು ರೂಪಾಯಿಗೇ ಮನೆಬಾಗಿಲಿಗೆ ತಂದು ಮಾರುತ್ತಾರೆ. ಬಡಜನರೇ ಹೆಚ್ಚಾಗಿ ಕುಡಿಯುವುದನ್ನು ಕಲಿಯುತ್ತಿದ್ದಾರೆ. ಇದರಿಂದ ಎಷ್ಟೋ ಜನರ ಪ್ರಕೃತಿ ಕೂಡ ಕೆಟ್ಟಿದೆ. ದೇಶದ ಜನಕ್ಕೆ ರಕ್ಷಣೆ ಕೊಡುತ್ತೇವೆಂದು ಹೇಳಿ ಈ ರೀತಿ ಪಾನನಿರೋಧ ತಂದರೆ ಜನರ ಪ್ರಕೃತಿ ಕೆಟ್ಟು ಅನೀತಿಯು immorality ಜಾಸ್ತಿಯಾಗಲು ಅವಕಾಶಮಾಡಿಕೊಡುತ್ತಿದ್ದೀರಿ. ಕಾಂಗ್ರೆಸ್ಸು ಸರಕಾರ ಸ್ಪಷ್ಟವಾಗಿ ಹೋಗುತ್ತಿದೆ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳನ್ನು ಕೆಲವು ಸ್ಟ್ಯಾಟಿಸ್ಟಿಕ್ಸ್‌ಗಳನ್ನು ಕೇಳಿದರೆ ಅದನ್ನು ಕೂಡ ಕೊಡಲಿಲ್ಲ. ಹಾಗೆ ಕೊಟ್ಟಿದ್ದರೆ ಆಗ ನಾನು ಇದನ್ನು ಒಪ್ಪುತ್ತಿದ್ದೆ.

ಇನ್ನು ಜನಕ್ಕೆ ಮನೆಕಟ್ಟಲು interest free cost ಎಂದು ಕೊಡುತ್ತಿದ್ದೀರಿ.

Sri B. D. JATTI.—Instead of giving subsidy, the benefit should be in the form of interest.

ಶ್ರೀ ಗಂಗಾಧರ ನಾಮೋಷಿ.—ಅಲಾಟ್‌ಮೆಂಟು ಮಾಡುವಾಗ ಶೇಕಡ ಒಂದು ಅಥವಾ ಎರಡರಷ್ಟು ಬಡ್ಡಿಯಂತೆ ಸಾಲಕೊಡಬಹುದು ಕೋ-ಆಪರೇಷನ್ ಶಾಖೆಯಲ್ಲಿ ಹಣ ದುರುಪಯೋಗವಾಗುತ್ತಿದೆ ಎಂದು ವಿವರಗಳನ್ನು ಕೇಳಿದ್ದರೆ ಅದರ ಬಗ್ಗೆ ಇನ್ನೂ ಸ್ವಲ್ಪ ವಿಚಾರ ಮಾಡಲಾಗುತ್ತಿದೆ. ಇನ್ನೂ ಯಾವ ಡಿಸಿಷನ್ ಆಗಿಲ್ಲ. ಕಮಿಟಿ ಮಾಡುತ್ತೇವೆ. This is still under consideration ಎಂದು ಇವೊತ್ತು ಒಂದು, ನಾಳೆ ಒಂದು ಎನ್ನುವಂತೆ ವಿಚಾರ ಮಾಡಬೇಡಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದ ಆಡಳಿತದ ಕೆಲಸಗಳು ತಡವಾಗಿ ನಡೆಯಲು ಕಾರಣವಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರ ಕಾಲದಲ್ಲಿ ದಕ್ಷತೆಯಿಂದ ತಡವಿಲ್ಲದಂತೆ ಕಾಂಗ್ರೆಸ್ ಆಡಳಿತ ನಡೆಸುತ್ತದೆ ಎಂದು ಈಚೆಗೆ ಮಂಗಳೂರು ಕಾಂಗ್ರೆಸ್ಸಿನ ಕಮಿಟಿಯಲ್ಲಿ ಹೇಳಿದಂತೆ ಸರಕಾರ ಇದರ ಕಡೆಗೆ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ.

ಕಡೆಯದಾಗಿ ನಿಮ್ಮ ಪ್ರೊಹಿಬಿಷನ್ನು ತೆಗೆಯುವುದರ ಬಗ್ಗೆ ಪಾರ್ಟಿಯೊಳಗೆ ಸಾಕಾದಷ್ಟು ಚರ್ಚೆಯಾಗಿ ಸೆಂಟ್ರಲ್ ಗೌರ್ನಮೆಂಟ ಆಕ್ಟನ್ನು ತಿದ್ದುಪಡಿ ಮಾಡಲು ಹೇಳಿದಾಗ "it is entirly in the hands of the State Government" ಎಂದು ಹೇಳಿದರೆಂತ ತಿಳಿದು ಬಂದಿದೆ. ನಾವೀಗ ನಿಮ್ಮ ಗಮನಕ್ಕೆ ತರುವುದು ಕಾನ್ಸ್ಟಿಟ್ಯೂಷನ್ನು ಎಂದು ಅಷ್ಟು rigid ಆಗಿರುವುದು ಬೇಡ ಎಂದು ಕೇಂದ್ರದಲ್ಲಿ ಒತ್ತಾಯ ತಂದು ಪ್ರೊಹಿಬಿಷನ್ನನ್ನು ತೆಗೆಯಬೇಕು. ಇದು ಯೋಗ್ಯವಾದ ಪಬ್ಲಿಕ್ ಒಪಿನಿಯನ್ನು ಎನ್ನುವುದನ್ನು ಅವರಿಗೆ ತಿಳಿಸಬೇಕು. ಈಗ ಇದರಿಂದ ಶೇಕಡಾ 50 ರಷ್ಟು ಹಣ ಬರುತ್ತಿದೆ. ಮುಂದೆ ಇದನ್ನು ಪೂರ್ತಿ ತೆಗೆದರೆ ರಾಜ್ಯಕ್ಕೆ ಬೇಕಾದಷ್ಟು ಹಣ ಎಂದರೆ ಸುಮಾರು ಹದಿನೈದು ಕೋಟಿಯಷ್ಟು ಬರುತ್ತದೆ. ಇದರಿಂದ ಬಂದ ಹಣದಲ್ಲಿ ಶೇಕಡಾ ಎಂಬತ್ತಕ್ಕಿಂತಲೂ ಹೆಚ್ಚಾಗಿ ಎಜುಕೇಷನ್ ಸಲುವಾಗಿ ಇಡಿ. ಮುಂದೆ ಪ್ಲಾನಿನಲ್ಲಿ ಬೇಕಾದ ಕೆಲಸಗಳಿಗೆ ಪ್ಲಾನು ಹಾಗೂ ಎಸ್ಟಿಮೇಟುಗಳನ್ನು ತಯಾರು ಮಾಡಬಹುದು. ಈ ವಿಷಯದಲ್ಲಿ ಶೀಘ್ರವಾಗಿ ಒಂದು ತೀರ್ಮಾನಕ್ಕೆ ಸರ್ಕಾರ ತೆಗೆದುಕೊಂಡು ಅದನ್ನು ಇಂಪ್ಲಿಮೆಂಟು ಮಾಡಬೇಕು. ಇಲ್ಲದೇ ಇದ್ದಲ್ಲಿ ಮುಂದೆ unemployment ಪ್ರಾರಂಭವಾಗಲು ಅವಕಾಶವಾಗುತ್ತದೆ.

ಅನಂತರ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು Emotional Integration ವಿಚಾ ಇದರ ಬಗ್ಗೆ ಸಾಕಾದಷ್ಟು ಜನ ಇಲ್ಲಿ ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ಬಸಪ್ಪನವರು ಹಳೆಯ ಮೈಸೂರಿನ ಇಂಟರೆಸ್ಟಿನವರು. ಅವರು ಹೇಳುವಾಗ ಪ್ರತಿಯೊಂದು ಸಾರಿಯೂ ಸಾಲ ಇತ್ಯಾದಿಗಳನ್ನು ಕೊಡುವಾಗ ಉತ್ತರ ಕರ್ನಾಟಕದವರಿಗೆ ಹೊರಗಿನಿಂದ ಬಂದವರು ಎಂದು ಕೊಡುತ್ತಿದ್ದಾರೆ ಎಂದು ಹೇಳುತ್ತಾರೆ. ಹೊರಿಗಿನಿಂದ ಬಂದವರು ನಾವು ಹಳೆಯ ಮೈಸೂರಿನವರು ಎನ್ನುವ ಈ ಮಾತು ಲೆಜಿಸ್ಲೇಚರಿನಲ್ಲಿ ಮೇಧಾವಿಗಳಾಡುವುದು ಒಳ್ಳೆಯದಲ್ಲ. ನನಗೆ ಗೊತ್ತು. ನಾವು ಮೈನಾರಿಟಿಯಲ್ಲಿದ್ದರೂ ಇಲ್ಲಿನ ಸ್ಥಿತಿ ಹೇಗಿದೆ ಎಂದು Hyderabad area undeveloped when compared with other states ಎಂದು ಮಾನ್ಯ ಪಂಡಿತ ಜವಹರಲಾಲ್ ನೆಹರೂರವರೇ ಹೇಳಿದ್ದಾರೆ. ಇದರ ಬಗ್ಗೆ facts and figures ಹೇಳಿದರೆ ತಮಗೆ ತಿಳಿಯುತ್ತದೆ.

For Education there is 9 per cent. Out of which 4 per cent is toward High School and for all merged areas it is from 9 per cent to 10 per cent and in these case of old Mysore it is from 35 per cent to 45 per cent and in this 40 per cent in Bombay area alone.

ಇದನ್ನು ಸರ್ಕಾರದವರು ಜಿಲ್ಲಾವಾರು ಅಂಕಿ ಅಂಶಗಳನ್ನು ಇಟ್ಟು ಕೊಂಡು ಕೆಲಸ ಮಾಡಬೇಕು. ಯಾವುದೇ ಒಂದು ಭಾಗ ಹಿಂದೆ ಬಿದ್ದಿದ್ದರೂ ಅದನ್ನು ಅಭಿವೃದ್ಧಿ ಪಡಿಸಬೇಕೆಂದು ನಾನು ಹೇಳುತ್ತೇನೆ. ಈ ಭಾವನೆ ಎಲ್ಲ ಜನರಲ್ಲೂ ಬರಬೇಕು. ಹಳೇ ಮೈಸೂರಿನಲ್ಲೂ ಕೆಲವು ಬರಗಾಲಕ್ಕೆ ತುತ್ತಾಗತಕ್ಕ ಜಿಲ್ಲೆಗಳಿವೆ. ತುಮಕೂರು, ಕೋಲಾರ ಇವು ಆಗಾಗ್ಗೆ ಬರಗಾಲಕ್ಕೆ ತುತ್ತಾಗತಿವೆ. ಇವುಗಳಿಗೆಲ್ಲಾ ಸೌಲಭ್ಯ ಸಿಗಬೇಕು. ಇದನ್ನು ಬಿಟ್ಟು ಜನರು ಅವರು ಹಳೇ ಮೈಸೂರಿನವರು, ಇವರು ಹೊಸ ಮೈಸೂರಿನವರು, ಇವರು ಬ್ರಾಹ್ಮಣರು, ಇವರು ಒಕ್ಕಲಿಗರು, ಇವರು ಆ ಜಾತಿ, ಈ ಜಾತಿ ಅಂತ ಹೇಳುವುದು ಬೇಡ ಎಂದು ತಮ್ಮೆಲ್ಲರಲ್ಲೂ ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಮನೋಭಾವವನ್ನು ದೇಶದ ಹಿತದೃಷ್ಟಿಯಿಂದ ನಾವೆಲ್ಲರೂ ಬಿಟ್ಟುಬಿಡಬೇಕು. ಇಡೀ ಕರ್ಣಾಟಕವೆಲ್ಲಾ ಒಂದೇ ಎಂಬ ಭಾವನೆ ಸರ್ವರಲ್ಲೂ ಉಂಟಾಗಬೇಕು; ಆ ಭಾವನೆಯಿಂದಲೇ ಎಲ್ಲರೂ ಕೆಲಸ ಮಾಡಬೇಕು ಎಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ತಿಮ್ಮಪ್ಪ ಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ ನಮ್ಮ ಆರ್ಥಿಕ ಸಚಿವರು ಕರಭಾರರಹಿತವಾದ ಆಯವ್ಯಯ ಪಟ್ಟಿಯನ್ನು ಸಭೆಯ ಮುಂದಿಟ್ಟಿದ್ದಾರೆ. ನಾನು ಅದನ್ನು ಸ್ವಾಗತಿಸುತ್ತೇನೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಬಹಳ ಕಠಿಣವಾಗಿದೆ. ಆದಾಗ್ಯೂ ನಮ್ಮ ಆರ್ಥಿಕ ಸಚಿವರು ಹೊಸ ತೆರಿಗೆಗಳನ್ನು ಹಾಕತಕ್ಕ ಧೈರ್ಯ ಮಾಡದೆ ಜನಾಭಿಪ್ರಾಯಕ್ಕೆ ಹೆಚ್ಚಿನ ಮನ್ನಣೆ ಕೊಟ್ಟು ಈ ವರ್ಷ ಅವರು ಯಾವ ತೆರಿಗೆಯನ್ನೂ ವಿಧಿಸಿಲ್ಲ. ಆದರೆ ಇಲ್ಲಿಯವರೆಗೂ ಸರ್ಕಾರದವರೇನು ಒಂದು ಆ. ಸರ್ ಛಾರ್ಜನ್ನು ಹಾಕಿ ಅದರಿಂದ ಸರ್ಕಾರಕ್ಕೆ ಸುಮಾರು 3 ಕೋಟಿ ರೂಪಾಯಿಗಳ ವರಮಾನವನ್ನು ಪಡೆಯಬೇಕೆಂದು ಉದ್ದೇಶಿಸಲಾಗಿತ್ತೋ ಆ ಒಂದು ಉದ್ದೇಶವನ್ನು ಕೂಡ ನಮ್ಮ ಹಣಕಾಸಿನ ಸಚಿವರು ಜನಾಭಿಪ್ರಾಯಕ್ಕೆ ಓಗೊಟ್ಟು ಅದನ್ನೂ ಸಹಾ ಕೈಬಿಟ್ಟಿರುವುದಕ್ಕಾಗಿ ಅವರ ನಿಲುವನ್ನು ನಾನು ತುಂಬಾ ಸ್ವಾಗತಿಸುತ್ತೇನೆ. ನಾವು ನಮ್ಮ ಮೂರನೇ ಪಂಚವಾರ್ಷಿಕ ಯೋಜನೆಯನ್ನು ನೆರವೇರಿಸಬೇಕಾಗಿದ್ದರೆ ನಮಗಿನ್ನೂ 50—60 ಕೋಟಿ ರೂಪಾಯಿಗಳು ಬೇಕು. ಅದಕ್ಕೆಲ್ಲಾ ಹಣದ ಮೂಲವನ್ನು ಕಂಡುಹಿಡಿಯಬೇಕು. ಈ ಯೋಜನೆಗಳಿಗೆಲ್ಲಾ ಹಣವನ್ನು ಎಲ್ಲಿಂದ ತರುತ್ತೀರೆಂದು ಹಿಂದೆ ಮಾತನಾಡಿದ ನನ್ನ ಮಿತ್ರರಾದ ಶ್ರೀ ಬಸಪ್ಪನವರು ಕೇಳಿದಾಗ ಹಣಕಾಸಿನ ಮಂತ್ರಿಗಳು ಕಾಲ ಬಂದಾಗ ಅಂಥ ಪರಿಸ್ಥಿತಿ ಒದಗಿದಾಗ ತೆರಿಗೆಗಳನ್ನು ಹಾಕೋಣ ಎಂದೂ, ಆಗ ನಮ್ಮ ಸಂಪನ್ಮೂಲಗಳೇನೆಂಬದನ್ನು ಕಂಡುಹಿಡಿಯೋಣವೆಂದು ಹೇಳಿದ್ದಾರೆ ಅವರು ಬಹಳ ಚಾಣಾಕ್ಷರು. ತೆರಿಗೆ ಹೊರತಕ್ಕ ಜನರು ಯಾರಿದ್ದಾರೆಂದು ಕಂಡು ಹಿಡಿದು ಅಂಥ ಶಕ್ತಿಯಿರತಕ್ಕ ಜನರ ಮೇಲೆ ತೆರಿಗೆಗಳನ್ನು ಹಾಕೇ ಹಾಕುತ್ತಾರೆ, ಅದಕ್ಕೆ ಯಾವಾಗಲೂ ಅವರಿಗೆ ನಮ್ಮ ಬೆಂಬಲವಿದ್ದೇ ಇದೆ. ಆದರೆ ಕೇಂದ್ರದಲ್ಲಿರತಕ್ಕ ಅಧಿಕಾರಿಗಳಲ್ಲೂ ಮತ್ತು ಪಾರ್ಲಿಯಮೆಂಟಿನಲ್ಲೂ ಮತ್ತು ಯೋಜನೆಯ ಆಯೋಗ ಮಂಡಲಿಯಲ್ಲೂ ಏನು ಒಂದು ಅಭಿಪ್ರಾಯವಿದೆ ಎಂದರೆ ಈ ಹಣವೆಲ್ಲಾ ಹೋಗಿ ಹಳ್ಳಿಗಳಲ್ಲಿ ಅಡಗಿದೆ ಎಂಬ ಒಂದು ಭಾವನೆ ಅವರಲ್ಲಿ ಉಂಟಾಗಿದೆ, ಇದು ಸರಿಯಾದ ಭಾವನೆಯಲ್ಲ. ಆದರೆ ಇಂಥ ಒಂದು ವಿಚಾರವನ್ನು ತಜ್ಞರೂ ಕೂಡ ಮಾತನಾಡುತ್ತಿದ್ದಾರೆ ಎಂದು ನನಗೆ ಸೋಜಿಗವನ್ನುಂಟುಮಾಡಿದೆ. ದೇಶದಲ್ಲಿರತಕ್ಕ ಜನರಲ್ಲಿ ಸುಮಾರು 80 ಭಾಗದ ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಆ ಜನರಲ್ಲಿ ಸುಮಾರು 60—80 ರಷ್ಟು ಜನ ಒಂದು ಎಕರೆಯಿಂದ 5 ಎಕರೆಗಳವರೆಗೆ ಭೂಮಿಯನ್ನು ಇಟ್ಟುಕೊಂಡಿದ್ದಾರೆ. ಒಂದೆಕರೆಯಿಂದ 10 ಎಕರೆವರೆಗೆ ಭೂಮಿಯನ್ನಿಟ್ಟುಕೊಂಡಿರತಕ್ಕ ಜನರು ಶೇ. 80 ರಷ್ಟಿದ್ದಾರೆ. ಇದು ಅತಿಶಯೋಕ್ತಿಯ ವಿಚಾರವಲ್ಲ.

ಇನ್ನು ಶೇಕಡ 20 ಭಾಗದ ಜನರು 10 ಎಕರೆಗಳಿಗೆ ಮೇಲ್ಪಟ್ಟು ಜಮೀನು ಹಿಡುವಳಿದಾರರಾಗಿರುತ್ತಾರೆ. ಅಂತಹವರು ಮಾಡತಕ್ಕ ಸಂಪಾದನೆಯ ಮೇಲೆ ವ್ಯವಸಾಯ ತೆರಿಗೆಯನ್ನು ಹಾಕುವುದಕ್ಕೂ ಕೂಡ ಒಂದು ಕಾನೂನು ಆಗಿದೆ, ಅದಕ್ಕೆ ಅವಕಾಶವಿದೆ. ಶೇಕಡ 70–80ರಷ್ಟು ವ್ಯವಸಾಯಗಾರರು ಏನು ಇದ್ದಾರೆ ಅವರು ನಮಗೆಲ್ಲರಿಗೂ ತಿಳಿದಿರುವ ಹಾಗೆ ಪೂರ್ಣವಾಗಿ ವ್ಯವಸಾಯದಿಂದಲೇ ಜೀವನ ನಡೆಸುತ್ತಾರೆ. ಅವರಿಗೆ ಬೇರೆ ವಿಧವಾದಂಥ ಸಂಪಾದನೆ ಯಾವುದೂ ಇರುವುದಿಲ್ಲ. ಅವರ ಜೀವನ ತಿಳಿದಿರತಕ್ಕವರಿಗೆ ಅಂಥಹವರ ಮೇಲೆ ಯಾವ ವಿಧವಾದ ಸುಂಕ ಅಥವಾ ತೆರಿಗೆ ವಿಧಿಸುವುದಕ್ಕೆ ಅನೇಕ ವರ್ಷಗಳ ಕಾಲ ಅವಕಾಶವಿಲ್ಲವೆಂಬುದಾಗಿ ಈ ಸಂದರ್ಭದಲ್ಲಿ ನಾನು ಸ್ಪಷ್ಟವಾದ ಅಭಿಪ್ರಾಯವನ್ನು ತಮ್ಮ ಮುಂದೆ ಇಡುತ್ತೇನೆ. ಇನ್ನು ಆಯವ್ಯಯಪಟ್ಟಿಯನ್ನು ನಾವು ನೋಡಿದಾಗ ಅನೇಕ ಇಲಾಖೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿದ್ದಾರೆ. ಆದರೆ ವ್ಯವಸಾಯ, ಕೈಗಾರಿಕೆ ಮತ್ತು ಅರಣ್ಯ—ಈ ಇಲಾಖೆಗಳು ಮತ್ತು ಇನ್ನೂ ಇತರ ಇಲಾಖೆಗಳ ಪ್ರಗತಿಯನ್ನು ಅವಲೋಕಿಸಿದರೆ ಸಾಮಾನ್ಯವಾಗಿ ತೃಪ್ತಿಕರವಾಗಿದೆಯೆಂದು ಹೇಳಬಹುದು. ಎಲ್ಲೆಲ್ಲಿ ಹಣವನ್ನು ಇನ್ವೆಸ್ಟ್ ಮಾಡಿದ್ದೇವೋ ಅಲ್ಲೆಲ್ಲಾ ಪ್ರತಿಫಲ ಸಾಮಾನ್ಯ ಮಟ್ಟಿಗಾದರೂ ಕಂಡುಬರುತ್ತಲೇ ಇದೆ. ನೀರಾವರಿ ಯೋಜನೆಗಳಲ್ಲೂ ಕೂಡ ಕೋಟ್ಯಾಂತರ ರೂಪಾಯಿಗಳನ್ನೂ ಕೂಡ ಈಗ ಅದಕ್ಕಾಗಿ ಖರ್ಚುಮಾಡಿದ್ದೇವೆ. ಆದರೆ ಅದರ ಪ್ರತಿಫಲ ದೊರೆಯಬೇಕಾದರೆ ಇನ್ನೂ ಕೆಲವು ಕಾಲ ಬೇಕಾಗುತ್ತದೆ. ಈಗಾಗಲೇ ನಮ್ಮ ಆರ್ಥಿಕ ಮಂತ್ರಿಗಳು ತಿಳಿಸಿರುವ ಹಾಗೆ ಈಗ ತೆರಿಗೆಯನ್ನು ಹೆಚ್ಚು ಹಾಕುವುದಕ್ಕೆ ಅವಕಾಶವಿಲ್ಲದೇ ಇದ್ದರೂ ಕೂಡ ಇನ್ನೂ ತೆರಿಗೆಗಳ ಬಾಕಿ ವಿಶೇಷವಾಗಿ ಸರ್ಕಾರಕ್ಕೆ ಬರಬೇಕಾಗಿದೆ. ಅದನ್ನು ಕಟ್ಟುನಿಟ್ಟಾಗಿ ವಸೂಲು ಮಾಡಬೇಕಾಗಿದೆ. ಅಲ್ಲದೇ ಅನೇಕ ವಿಧವಾದಂಥ ಸಾಲಗಳೂ ಕೂಡಿ ಕೋಟ್ಯಾಂತರ ರೂಪಾಯಿಗಳಷ್ಟು ಸರ್ಕಾರಕ್ಕೆ ಬರಬೇಕಾಗಿದೆ. ಬಹುಶಃ ಇವರುಗಳಿಂದ ಅನೇಕ ವರ್ಷಗಳಿಂದ ವಸೂಲು ಮಾಡದೆ ನಿಂತಿದೆಯೆಂದು ಕಾಣುತ್ತದೆ. ಅದನ್ನೂ ಕೂಡ ನಿರ್ದಾಕ್ಷಿಣ್ಯದಿಂದ ಕಟ್ಟುನಿಟ್ಟಾಗಿ ವಸೂಲು ಮಾಡಬೇಕಾಗಿದೆ. ಆಡಳಿತದಲ್ಲಿ ಅನಾವಶ್ಯಕವಾಗಿ ಆಗತಕ್ಕ ಖರ್ಚು ವೆಚ್ಚಗಳನ್ನೂ ಕೂಡ ಬಹಳ ವಿಜಿಲೆಂಟಾಗಿ, ದಕ್ಷತೆಯಿಂದ ಹೆಚ್ಚಿನ ಗಮನ ಕೊಟ್ಟು ಕಡಿಮೆ ಮಾಡಿಕೊಳ್ಳಬೇಕಾಗಿದೆ. ಅಲ್ಲದೆ ಕೈಗಾರಿಕೆಗಳಲ್ಲಿ ನಾವು ಏನು ಹಣವನ್ನು ಇನ್ವೆಸ್ಟ್ ಮಾಡಿದ್ದೇವೋ ಅದಕ್ಕೆ ತಕ್ಕಷ್ಟು ರೀತಿಯಲ್ಲಿ ಲಾಭ ಅಷ್ಟು ಮಟ್ಟಿಗೆ ದೊರಕುತ್ತಾ ಇಲ್ಲ. ಕೈಗಾರಿಕೆ

(ಶ್ರೀ ತಿಮ್ಮಪ್ಪ ಗೌಡ)

ಗಳೂ ಕೂಡ ಯಶಸ್ವಿಯಾಗಿ ನಡೆಯುವ ಹಾಗೆ ಮಾಡಬೇಕು. ನನಗೆ ಅನ್ನಿಸುತ್ತದೆ ಉಪಮಂತ್ರಿಗಳನ್ನು ಅನೇಕರನ್ನು ನೇಮಕ ಮಾಡಿದ್ದೇವೆಂದು. ಅನಾವಶ್ಯಕವಾಗಿ ಹೆಚ್ಚು ಕೆಲಸವಿಲ್ಲದೆ ಇರತಕ್ಕ ಖಾತೆಗಳನ್ನು ಅವರಲ್ಲಿ ಕೆಲವರಿಗೆ ಕೊಟ್ಟು ಅವರ ಪ್ರತಿಭೆಯನ್ನು ತೋರಿಸುವುದಕ್ಕೆ ಅವಕಾಶ ಮಾಡಿಕೊಟ್ಟು ಅವರ ಸಹಾಯ ನಮಗೆ ಹೆಚ್ಚಿನ ರೀತಿಯಲ್ಲಿ ದೊರಕದೆ ಇರುವ ಹಾಗೆ ಕಾಣುತ್ತಿದೆ. ಆದರೆ ಕೈಗಾರಿಕೆಯ ಮಂತ್ರಿಗಳಿಗೆ ಬಹಳ ಕೆಲಸವಿದೆ. ಕೇವಲ 3–4 ಕೈಗಾರಿಕೆಗಳನ್ನು ಸ್ವಲ್ಪ ದಕ್ಷತೆಯಿಂದ ನೋಡಿದರೆ ಹೆಚ್ಚಿನ ಲಾಭವನ್ನು ನಾವು ಪಡೆಯಬಹುದು. ಆ ಕಡೆಗೆ ಹೆಚ್ಚಿನ ಗಮನವನ್ನು ಕೊಡುವುದು ಬಹಳ ಆವಶ್ಯಕವಾಗಿದೆ. ಕೈಗಾರಿಕೆಗಳಲ್ಲಿ ಒಳ್ಳೆಯ scope ಇದೆ. ಇದರಿಂದ ಇಷ್ಟೆಲ್ಲಾ ಪ್ರಗತಿ ಕಂಡರೂ ಕೂಡ ಈಗಾಗಲೇ ನಮ್ಮ ಸ್ನೇಹಿತರನೇಕರು ತಿಳಿದಿರುವ ಹಾಗೆ ಜನಗಳಲ್ಲಿ ತೃಪ್ತಿಯೇನೂ ಕಾಣುತ್ತಾ ಇಲ್ಲ. ಎಲ್ಲಿ ನೋಡಿದರೂ ಕೂಡ ಅತೃಪ್ತಿ. ಧಾರಣೆವಾಸಿಗಳು ಏರುತ್ತಾ ಇವೆ. ಜೀವನಮಟ್ಟ ಹೆಚ್ಚಾಗಿ ಜನಗಳಲ್ಲಿ ಅಸಮಾಧಾನ ಕೂಡ ಕಂಡುಬರುತ್ತಾ ಇದೆ. ಇದು ಅನಿವಾರ್ಯ. ನಮ್ಮ ಮಾನ್ಯ ಸ್ನೇಹಿತರು ಅರಿತಿರುವ ಹಾಗೆ ನಾವು ಒಂದು ಕಠಿಣವಾದಂಥ ಮತ್ತು ಒಂದು ಗಂಭೀರವಾದ ಪರಿಸ್ಥಿತಿ ಇರತಕ್ಕ ಸನ್ನಿವೇಶದಲ್ಲಿದ್ದೇವೆ. ಏನು ಒಂದು ಕ್ರಿಟಿಕಲ್ ಫೇಸ್ ಎಂದು ಹೇಳುತ್ತೇವೋ ಅಂತಹ ಕಾಲದಲ್ಲಿದ್ದೇವೆ. ಅದರ ಜೊತೆಗೆ ಈ ತುರ್ತು ಪರಿಸ್ಥಿತಿ ಬೇರೆ ದುರಾದೃಷ್ಟವಶಾತ್ ಒದಗಿಬಂತು. ಈ ಎಲ್ಲಾ ಕಾರಣಗಳಿಂದ ಪಂಚವಾರ್ಷಿಕ ಯೋಜನೆಗಳನ್ನು ಯಶಸ್ವಿಯಾಗಿ ಕಾಲಕಾಲಕ್ಕೆ ನೆರವೇರಿಸಿ ಅವುಗಳ ಪ್ರತಿಫಲವನ್ನು ದೇಶ ಪಡೆಯುವುದಕ್ಕೆ ತಕ್ಕ ಅವಕಾಶ, ಸರಿಯಾದಂಥ ಅನುಕೂಲ ಸನ್ನಿವೇಶಗಳು ನಮಗೆ ಒದಗುವುದಕ್ಕೆ ಬದಲಾಗಿ ಬಹಳ ತೊಂದರೆಗಳಿಗೆ ನಾವು ಒಳಗಾಗಬೇಕಾಗಿ ಬಂತು. ಪಂಚವಾರ್ಷಿಕ ಯೋಜನೆಗಳನ್ನು ನಿರ್ವಾಣ ಮಾಡುವ ಕಾಲದಲ್ಲಿ ಇಷ್ಟೆಲ್ಲಾ ತೊಂದರೆಗಳು ನಮ್ಮ ಮುಂದೆ ಇದ್ದರೂ ಕೂಡ ಅವುಗಳನ್ನು ನಾವು ಎದುರಿಸಬೇಕಾದುದು ಅತ್ಯಾವಶ್ಯಕ. ಆದರೆ ಈ ಪಂಚವಾರ್ಷಿಕ ಯೋಜನೆಗಳು ಒಂದು ವೇಳೆ ಯಶಸ್ವಿಯಾಗದೇ ಇದ್ದ ಪಕ್ಷದಲ್ಲಿ ಮುಂದೆ ನಮ್ಮ ದೇಶದ ಭವಿಷ್ಯ ಬಹಳ ಗಾಬರಿಯನ್ನುಂಟುಮಾಡತಕ್ಕ ಸ್ಥಿತಿಯಲ್ಲಿರುತ್ತದೆಂಬುದನ್ನು ನಾವು ಈಗಲೇ ತಿಳಿಯಬೇಕಾಗಿದೆ.

ಇನ್ನೂ ನಮ್ಮ ದೇಶದಲ್ಲಿ ಸಂಪನ್ಮೂಲವಾದಂಥ ಮತ್ತು ಬಹಳ ಮುಖ್ಯವಾದಂಥ ವ್ಯವಸಾಯದ ವಿಚಾರವಾಗಿ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ವ್ಯವಸಾಯ ಎಲ್ಲಾ ದೇಶದ ಸಂಪತ್ತನ್ನು ಕೂಡಿಸುವುದರಲ್ಲಿ ಬಹಳ ಮುಖ್ಯವಾದಂಥ ಇಲಾಖೆಯಾಗಿದೆ. ಯಾವ ರೀತಿಯಲ್ಲಿ ಈ ಇಲಾಖೆ ಕೆಲಸ ಮಾಡಬೇಕಾಗಿತ್ತೋ ವ್ಯವಸಾಯದಿಂದ ತೆರಿಗೆ ರೂಪದಲ್ಲಿ ಬಹುಭಾಗ ದೇಶದ ಸಂಪತ್ತು ಬರಬೇಕಾಗಿತ್ತೋ ಅಷ್ಟು ರೀತಿಯಲ್ಲಿ ಈಗ ಬರುತ್ತಾ ಇಲ್ಲವೆಂದು ನಾನು ಹೇಳುತ್ತೇನೆ. ಈ ಕಾರಣದಿಂದ ನಮ್ಮ ದೇಶದ ಆದಾಯ ಎಷ್ಟು ಹೆಚ್ಚಾಗಬೇಕಾಗಿತ್ತೋ ಅಷ್ಟು ವೇಗದಲ್ಲಿ ಹೆಚ್ಚಿಲ್ಲವೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಮೊದಲನೆಯ ಎರಡು ಯೋಜನೆಗಳಲ್ಲಿ ಏನೊಂದು ನ್ಯೂನತೆಗಳು ಕಂಡುಬಂದುವೋ ಅವನ್ನು ಆಯೋಗದವರು ತೋರಿಸಿದ್ದಾರೆ ಮತ್ತು ಅದನ್ನು ಸರಿಯಾಗಿ ರೆಗ್ಯುಲೇಟ್ ಮಾಡಿ ವ್ಯವಸಾಯಾಭಿವೃದ್ಧಿಗೆ ಹೆಚ್ಚು ಗಮನವನ್ನು ಕೊಡಬೇಕೆಂದು ಹೇಳಿದ್ದಾರೆ. ಅದೇರೀತಿಯಾಗಿ ನಮ್ಮ ಸರ್ಕಾರದವರೂ ಸಹ ಹೆಚ್ಚಿನ ರೀತಿಯಲ್ಲಿ ಗಮನ ಕೊಡುತ್ತಿದ್ದಾರೆ. ಆದರೂ ಕೂಡ ಈ ತುರ್ತುಪರಿಸ್ಥಿತಿಯಲ್ಲಿ ಎಷ್ಟು ತೀವ್ರತೆಯಿಂದ ವ್ಯವಸಾಯಾಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿತ್ತೋ, ಅದರಿಂದ ಬೆಳೆಗಳು ಹೆಚ್ಚಾಗಬೇಕಾಗಿತ್ತೋ ಆ ರೀತಿಯಲ್ಲಿ ನಡೆಯುತ್ತಾ ಇರತಕ್ಕದ್ದು ಕಂಡುಬರುತ್ತಾ ಇಲ್ಲ. ವ್ಯವಸಾಯಾಭಿವೃದ್ಧಿಗೆ ಬಹುಮುಖ್ಯವಾದಂಥ ಸುಧಾರಿತ ಬೀಜಗಳನ್ನು ರೈತರಿಗೆ ಒದಗಿಸುವುದು, ರಾಸಾಯನಿಕ ಗೊಬ್ಬರಗಳನ್ನು ಕೊಡುವುದು, ಆಧುನಿಕ ಉಪಕರಣಗಳನ್ನು ಕೊಡುವುದು, ಬೆಳೆಗಳಿಗೆ ರೋಗ ತಗಲಿರುವುದಕ್ಕಾಗಿ ಬೇಕಾದ ಔಷಧಿಗಳನ್ನು ಕೊಡುವುದು, ನೀರಾವರಿ ಚರಂಡಿ ಸೌಕರ್ಯ ಮಾಡುವುದು, ರೈತರು ಬೆಳೆದಂಥ ಧಾನ್ಯಗಳಿಗೆ ತಕ್ಕ ಬೆಲೆಗಳನ್ನು ನಿಗದಿ ಮಾಡುವುದು–ಇವನ್ನೆಲ್ಲಾ ಮೊದಲೇ ಯೋಚನೆ ಮಾಡಬೇಕು. ವ್ಯವಸಾಯದಲ್ಲಿ ಸಂಶೋಧನೆ ನಡೆಸಿ ಸಂಶೋಧನೆಯ ಫಲ ರೈತನಿಗೆ ನೇರವಾಗಿ ದೊರಕಬೇಕು–ಇಂತಹ ನಾಲ್ಕಾರು ವಿಷಯಗಳು ರೈತನಿಗೆ ದೊರಕಬೇಕಾದದು ಸರಿಯಾದ ಪ್ರಮಾಣದಲ್ಲಿ ಸಕಾಲದಲ್ಲಿ ದೊರೆಯುತ್ತಾ ಇಲ್ಲ, ಆದ್ದರಿಂದ ವ್ಯವಸಾಯ ಎಷ್ಟರಮಟ್ಟಿಗೆ ಅಭಿವೃದ್ಧಿಯಾಗಬೇಕಾಗಿತ್ತೋ ಮತ್ತು ಭೂಸಂಪತ್ತು ಬರಬೇಕಾಗಿತ್ತೋ ಅಷ್ಟು ಆಗುತ್ತಾ ಇಲ್ಲ. ಒಂದು ಉದಾಹರಣೆಯನ್ನು ಹೇಳುತ್ತೇನೆ, ಸುಧಾರಿಸಿದ ಬೀಜಗಳನ್ನು ಕೊಡುವುದರಿಂದ ಹೆಚ್ಚು ಆಹಾರೋತ್ಪತ್ತಿ ಆಗುವುದಕ್ಕೆ ಅವಕಾಶವಾಗುತ್ತದೆಂಬುದಾಗಿ ಅವರೇ ತಮ್ಮ ವರದಿಯಲ್ಲಿ ಹೇಳಿದ್ದಾರೆ. ಇಷ್ಟು ರೂಪಗಳನ್ನು ಒದಗಿಸದೆ ಅಷ್ಟು ಆಗಿರಲಿಕ್ಕಿಲ್ಲ. ರಿಸರ್ಚ್ ಸ್ಟೇಷನ್ನಿನಲ್ಲಿ ಸೀಡ್‌ಫಾರ್ಮ್‌ಗಳಲ್ಲಿ ಒಳ್ಳೆಯ ಬೀಜಗಳನ್ನು ಬೆಳೆದು ರಿಜಿಸ್ಟರ್ಡ್ ಗ್ರೋಯರ್ಸ್‌ಗೆ ಕೊಟ್ಟಿದ್ದಾರೆ. ಅವು ಸಕಾಲದಲ್ಲಿ ರೈತರಿಗೆ ತಲುಪುವ ಹಾಗೆ

ವ್ಯವಸ್ಥೆ ಮಾಡಬೇಕು ಆದರೆ ಶೇಕಡ 5 ಭಾಗದಷ್ಟು ಕೆಲಸವೂ ಇದರಲ್ಲಿ ಆಗಿಲ್ಲ. ವಾಸ್ತವಿಕವಾಗಿ ನೋಡುವುದಾದರೆ ಎಷ್ಟೋ ಸೀಡ್‌ಫಾರಂಗಳಲ್ಲಿ ಸರಿಯಾದ ರೀತಿಯಲ್ಲಿ ಕೆಲಸವಾಗುತ್ತಾ ಇಲ್ಲ. ಹತ್ತಾರುವರ್ಷಗಳಾದರೂ ಸೀಡ್‌ಫಾರಂಗಳನ್ನು ಮಾಡುವುದಕ್ಕೆ ಸರಿಯಾದ ಜಾಗವನ್ನೇ ಆರಿಸಿ ಕೊಂಡಿಲ್ಲ, ಬೆಳೆಯಾಗದಿರುವ ಜಮೀನನ್ನು ಆರಿಸಿಕೊಂಡಿದ್ದಾರೆ. ಭೂಮಿ ಚೆನ್ನಾಗಿದ್ದರೆ ನೀರಿನ ವಸತಿ ಇರುವುದಿಲ್ಲ. ನೀರಿನ ವಸತಿ ಚೆನ್ನಾಗಿದ್ದರೆ ಭೂಮಿ ಇರುವುದಿಲ್ಲ. ಸೀಡ್‌ಫಾರಂಗಳನ್ನು 50-60 ಕಡೆಗಳಲ್ಲಿ ಮಾಡಿದ್ದರೂ ಒಂದೂಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎಲ್ಲಿ ನೋಡಿದರೂ ಬೀಜಗಳೂ ಕೂಡ ಸರಿಯಾಗಿ ದೊರೆಯುತ್ತಾ ಇಲ್ಲ. ರೈತರಿಗೆ ಸಕಾಲದಲ್ಲಿ ಸಿಗುತ್ತಾ ಇಲ್ಲ. ಯಾವ ಸೀಡ್‌ಫಾರಂ ಕೂಡ self-sufficient ಕೂಡ ಇನ್ನೂ ಆಗಿಲ್ಲ. ಅದೇ ರೀತಿಯಲ್ಲಿ ರಿಸರ್ಚ್ ಇಲಾಖೆ ವಿಷಯದ ಬಗ್ಗೆ ಡಿಮ್ಯಾಂಡ್ ಟೈಂನಲ್ಲಿ ಮಾತನಾಡುತ್ತೇನೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

11-30 A.M.

†ಶ್ರೀ ಎಂ.ವಿ. ಶೆಟ್ಟಿ (ಚಿಕ್ಕೋಡಿ).—ಮಾನ್ಯ ಅಧ್ಯಕ್ಷರೇ, ಈ ವರ್ಷದ ಆಯವ್ಯಯದ ಅಂದಾಜು ಪಟ್ಟಿಯ ಚರ್ಚೆಯಲ್ಲಿ ನಾನು ಭಾಗವಹಿಸುತ್ತಾ ಸಮಾಜವಾದ ಮತ್ತು ಸೋಷಿಯಲ್ ವೆಲ್‌ಫೇರ್ ಈ ಎರಡು ತತ್ವಗಳನ್ನು ಇಟ್ಟುಕೊಂಡು ನಮ್ಮ ಆಯವ್ಯಯದ ಅಂದಾಜುಗಳನ್ನು ತಯಾರು ಮಾಡು ತ್ತಿದ್ದಾರೆ. ಸಮಾಜವಾದ ಬಂದರೆ ಲೇಬರ್ ಅಥವಾ ಕೂಲಿಗಾರರೆಂದು ಯಾರು ಇದ್ದಾರೆಯೋ ಅವರಿಗೆ ಪ್ರಾಮುಖ್ಯತೆ ಇರುತ್ತದೆ. ಸೋಷಿಯಲ್ ವೆಲ್‌ಫೇರ್‌ನಲ್ಲಿ ಬಡಜನರ ಕಲ್ಯಾಣವನ್ನು ಸಾಧಿಸುತ್ತಾರೆ. ಮುಖ್ಯವಾಗಿ ಬಡ್ಜೆಟ್ಟಿನಲ್ಲಿ ನೌಕರರಿಗೆ ತಿಂಗಳಿಗೆ 5 ರೂಪಾಯಿ ತುಟ್ಟಿಭತ್ಯ ವನ್ನು ಕೊಡುವುದನ್ನು ಒಪ್ಪಿಕೊಂಡು ಸರ್ಕಾರಿ ನೌಕರರಿಂದ ಶಬ್ಬಾಷ್‌ಗಿರಿಯನ್ನು ಸಂಪಾದಿಸಿ ದ್ದಾರೆ. ಸರ್ಕಾರಿ ನೌಕರರು 100ಕ್ಕೆ 10 ಜನಕ್ಕಿಂತ ಹೆಚ್ಚಿಗೆ ಇರಲಾರರು. ಈ ದೇಶದಲ್ಲಿ 100ಕ್ಕೆ 30ರಷ್ಟು ಜನ ಭೂಹೀನರಿದ್ದಾರೆ. ಆ ಭೂಹೀನರು ಮುಖ್ಯವಾಗಿ ಲೇಬರರುಗಳು. ಸೋಷಲಿಜಂ ಮುಖ್ಯವಾಗಿ ಯಾರಿಗೆ ಸುಖವನ್ನುಂಟು ಮಾಡಬೇಕೆಂದರೆ ತೀರಾ ಬಡವರು ಮತ್ತು ಭೂಮಿ ಇಲ್ಲದೆ ಇರುವವರು ಏನಿದ್ದಾರೆಯೋ ಅವರಿಗೆ ಸುಖವನ್ನು ಕೊಡುವುದು ಬಡ್ಜೆಟ್ಟಿನ ಮೇಲೆ ಅವಲಂಬಿಸಿರು ತ್ತದೆ. 5 ರೂಪಾಯಿ ತುಟ್ಟಿಭತ್ಯವನ್ನು 300 ರೂಪಾಯಿಗಳಿಗಿಂತ ಕಡಿಮೆ ವರಮಾನವಿರುವವರಿಗೆ ಕೊಡಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ. ಈಗಿರುವ ಸಾಮಾಜಿಕ ಪರಿಸ್ಥಿತಿಯಲ್ಲಿ 300 ರೂಪಾ ಯಿಗಳ ಪಗಾರವನ್ನು ಪಡೆಯತಕ್ಕವರು ಸಾಮಾನ್ಯವಾಗಿ 4-6-8 ಎಕರೆ ಭೂಮಿಯನ್ನು ಇಟ್ಟು ಕೊಂಡಿರುತ್ತಾರೆ. ಭೂಹೀನರಾಗಿರತಕ್ಕವರು ಅಧಿಕಾರಿಗಳಾಗುವುದಕ್ಕೆ ಶಕ್ಯವಿದೆಯೇ? ಈಗ ಈ ದೇಶದಲ್ಲಿ ಆಹಾರ ಧಾನ್ಯಗಳ ಬೆಲೆಗಳು ಏರಿಹೋಗಿವೆ. ಬಡಜನರೇನು ಇದ್ದಾರೆಯೋ ಅವರಿಗೆ ಸುಖ ದೊರೆಯುವಂತಿಲ್ಲ. ನಿಜವಾಗಿಯೂ ಅವರಿಗೆ ಸುಖ ದೊರೆಯಬೇಕಾಗಿದ್ದರೆ ಲೇಬರ್ ಮಿನಿಷ್ಟರು ಬಹಳ ಚೆನ್ನಾಗಿ ಕೆಲಸ ಮಾಡಬೇಕಾಗಿದೆ. ಫ್ಯಾಕ್ಟರಿ ಲೇಬರ್, ರೈಲ್ವೆ ಲೇಬರ್, ಸರ್ಕಾರದ ಲೇಬರುಗಳು ಇವರೆಲ್ಲರಿಗಿಂತಲೂ ಮುಖ್ಯವಾಗಿ ಹಳ್ಳಿಗಳಲ್ಲಿರುವಂತಾ ಭೂಹೀನ ಜನರೇನಿದ್ದಾರೆಯೋ ಅವರಿಗೆ ಸುಖವನ್ನು ಒದಗಿಸಬೇಕು. ಅವರಿಗೆ ಸುಖವನ್ನು ಒದಗಿಸಿಕೊಡ ಬೇಕಾದರೆ ಮುಖ್ಯವಾಗಿ ವಕ್ಕಲುತನ ಸುಧಾರಿಸಬೇಕು. ಈ ದೇಶದಲ್ಲಿ ಉತ್ಪತ್ತಿ ಹೆಚ್ಚಾಗಿದೆ ಎಂದು ನಂಬುವುದಕ್ಕೆ ಆಗುವುದಿಲ್ಲ. ದುಡ್ಡು ಹೆಚ್ಚಿಗೆ ಕೊಟ್ಟರೆ ಈ ಪ್ರದೇಶದಲ್ಲಿರತಕ್ಕ ನೌಕರರಿಗೆ ಹೆಚ್ಚು ಧಾನ್ಯ ಸಿಕ್ಕುವುದಿಲ್ಲ. 100ಕ್ಕೆ 30 ಜನ ಇರತಕ್ಕ ಭೂಹೀನರಿಗೆ ಸುಖವನ್ನು ಕೊಡಬೇಕು. utilisation of labour in the rural areas ಎನ್ನತಕ್ಕ ಒಂದು ಯೋಜನೆಯನ್ನು ಇಟ್ಟು ಕೊಂಡು ಆ ಹಳ್ಳಿಯ ಕೂಲಿಗಾರರಿಗೆ ಹಳ್ಳಿಗಳಲ್ಲಿ ಅವರಿಗೆ ಒಂದೂ ಕಾಲು ಅಥವಾ ಒಂದೂವರೆ ರೂಪಾಯಿ ಕೂಲಿಯನ್ನು ಕೊಡುತ್ತಿದ್ದರೆ ಅದನ್ನು 2 ರೂಪಾಯಿ ಮಾಡುವುದಕ್ಕೆ ಸರ್ಕಾರದವರಿಗೆ ಶಕ್ಯವಿದೆಯೇ? ಅಥವಾ ಒಂದೂ ಮುಕ್ಕಾಲು ರೂಪಾಯಿ ಮಾಡುವುದಕ್ಕೆ ಶಕ್ಯವಿದೆಯೇ ಎಂದರೆ ಅದು ಇವರಿಗೆ ಶಕ್ಯವಿಲ್ಲ. ಆದ್ದರಿಂದ ಮುಖ್ಯವಾಗಿ ದೇಶದಲ್ಲಿ ಸರ್ಕಾರದವರು ತೀರಾ ಬಡವರಿಗೆ ಉದ್ಯೋಗವನ್ನು ಕಲ್ಪಿಸಿಕೊಡಬೇಕು.

ಇನ್ನೊಂದು ಬಹಳ ಮುಖ್ಯ ವಿಚಾರ ಏನೆಂದರೆ ಮಹಾತ್ಮ ಗಾಂಧೀಜಿಯವರು ಭಂಗೀ ಜನ ಗಳು ಮಾಡತಕ್ಕ ಕೆಲಸ ಏನಿದೆ ಅದನ್ನು ತಪ್ಪಿಸಬೇಕೆಂದು ಹೇಳುತ್ತಿದ್ದರು. ಆದ್ದರಿಂದ ಸರ್ಕಾರ ದವರು ಭಂಗೀ ಜನಗಳು ಮಾಡತಕ್ಕ ಕೆಲಸವನ್ನು ತಪ್ಪಿಸುತ್ತಾರೆಂದು ನಾನು ಆಶೆ ಮಾಡುತ್ತೇನೆ. ಬರುವ 5-10 ವರ್ಷಗಳಲ್ಲಿ ಅದರ ಬಗ್ಗೆ ಒಂದು ನಿಶ್ಚಿತವಾದ ಯೋಜನೆಯನ್ನು ಹಾಕಿಕೊಂಡು ಭಂಗೀ ಜನಗಳನ್ನು ಮಾಡತಕ್ಕ ಕೆಲಸವನ್ನು ತಪ್ಪಿಸಬೇಕು. ಈ ಯೋಜನೆಯನ್ನು ಸೋಷಿಯಲ್ ಬ್ಯಾಕ್‌ವರ್ಡ್ ವೆಲ್‌ಫೇರ್ ಎಂದು ಮಾಡಿಕೊಂಡು ಒಂದು ವರ್ಷಕ್ಕೆ 10 ಜನ ಆದರೂ ಅವರು ಆ ಕೆಲಸವನ್ನು ಬಿಡುವಂತೆ ಮಾಡಿ ಅವರಿಗೆ ಬೇರೆ ಉದ್ಯೋಗವನ್ನು ಕಲ್ಪಿಸಿಕೊಡಬೇಕು. ಆ ಭಂಗೀ

(ಶ್ರೀ ಎಂ. ವಿ. ಶೆಟ್ಟಿ)

ಜನಗಳು ಮಾಡುವಂಥಾ ಕೆಲಸ ರಾಷ್ಟ್ರದ ಗೌರವದ ದೃಷ್ಟಿಯಿಂದ, ಮನುಷ್ಯನ ಗೌರವದ ದೃಷ್ಟಿಯಿಂದ ಅದು ಯೋಗ್ಯವಾಗಲಾರದು. ಅವರು ಮಾಡತಕ್ಕ ಕೆಲಸದಲ್ಲಿ ಒಂದು ಕೀಳುತನವಿದೆ. ಹಿಂದೆ ಮುಂಬೈ ಸರ್ಕಾರದವರು ಭಂಗೀ ಜನರ ಉದ್ಯೋಗ ಪರಿಸ್ಥಿತಿ ಮತ್ತು ಸ್ಥಿತಿಗತಿಗಳನ್ನು ಕುರಿತು ಪರಿಶೀಲನೆ ಮಾಡುವುದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಿದ್ದರು. ಅದು ಆ ಬಗ್ಗೆ ಯಾವ ಕೆಲಸವನ್ನೂ ಮಾಡದೆ ಹಾಗೆಯೇ ಉಳಿದಿದೆ. ಕರ್ನಾಟಕದಲ್ಲಿ ಅನೇಕ ಮಂದಿ ಭಂಗಿ ಜನಗಳು ಇದ್ದಾರೆ. ಅವರು ಮಾಡತಕ್ಕ ಕೆಲಸದಲ್ಲಿ ಮೂಗು ಮುಚ್ಚಿಕೊಳ್ಳುತ್ತಾರೆ. ಆದ್ದರಿಂದ ಅವರು ಆ ಕೆಲಸವನ್ನು ಮಾಡುವುದು ಬೇಡ. ಆ ಬಗ್ಗೆ ನಿಗದಿಯಾದ ಒಂದು ಯೋಜನೆಯನ್ನು ಮಾಡಿಕೊಂಡು ಅವರಿಂದ ಆ ಕೆಲಸವನ್ನು ಬಿಡಿಸುತ್ತಾ ಹೋಗಬೇಕು. ಭಂಗೀ ಜನಗಳ ಹೊಸ ತರುಣರು ಈ ಕೆಲಸವನ್ನು ಮಾಡುವುದು ಬೇಡ. ಅವರಿಗೆ ಬೇರೆ ಉದ್ಯೋಗಗಳನ್ನು ಒದಗಿಸಿಕೊಡಬೇಕು. ಇನ್ನು ಹತ್ತು ವರ್ಷಗಳಲ್ಲಿ ಭಂಗೀಪಾಯಖಾನೆಗಳನ್ನು (ಎತ್ತುವ ಕಕ್ಕಸುಗಳನ್ನು) ಬಂದ್ ಮಾಡಬೇಕು. ಹೊಸ ರೀತಿಯ ಕಕ್ಕಸುಗಳನ್ನು ಕಟ್ಟಿಸುತ್ತಾ ಬರಬೇಕು. ವರ್ಷೇ ವರ್ಷೇ ಅವುಗಳ ಸಂಖ್ಯೆಯನ್ನು ಜಾಸ್ತಿ ಮಾಡುತ್ತಾ ಬರಬೇಕು. ಹಳೆಯ ರೀತಿಯ ಕಕ್ಕಸುಗಳನ್ನು ಕಡಿಮೆ ಮಾಡುತ್ತಾ ಬರಬೇಕು. ಈ ರೀತಿ ಮಾಡುತ್ತಾ ಬಂದರೆ ಹತ್ತಾರು ವರ್ಷಗಳಲ್ಲಿ ಇಂಥಾ ಕೆಲಸವನ್ನು ಭಂಗೀ ಜನಗಳು ಮಾಡುವ ಪರಿಸ್ಥಿತಿ ಬರುವುದಿಲ್ಲ. ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ಭಂಗೀ ಜನರನ್ನು ಅವರು ಮಾಡುತ್ತಿರುವ ಕೆಲಸದಿಂದ ಮುಕ್ತರನ್ನಾಗಿ ಮಾಡಿದರೆ ಆಗ ಸೋಷಿಯಲ್ ವೆಲ್‌ಫೇರ್ ಆಗುತ್ತದೆ. ಅಗ್ರಿಕಲ್‌ಚರಲ್ ಲೇಬರುಗಳಿಗೆ ಸುಖವನ್ನು ಕೊಡುವುದರ ಸಲುವಾಗಿ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಬೇಕು. ಅವರಿಗೆ ಸೋಷಲಿಜಂ ಸುಖ ಸಿಕ್ಕುವಂತೆ ಮಾಡಬೇಕು. ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಹೆಚ್ಚಾಗಬೇಕಾದರೆ ಅಗ್ರಿಕಲ್‌ಚರಲ್ ಇಲಾಖೆಯಲ್ಲಿರತಕ್ಕ ಆಫೀಸರುಗಳ ಸೀನಿಯಾರಿಟಿ ಲಿಸ್ಟನ್ನು ಬೇಗ ಇತ್ಯರ್ಥಮಾಡಬೇಕು. ಆ ಇಲಾಖೆಯಲ್ಲಿರತಕ್ಕ ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ಅಧಿಕಾರಿಗಳ ಸೀನಿಯಾರಿಟಿ ಲಿಸ್ಟ್ ಈಗ ೮ ವರ್ಷಗಳಿಂದಲೂ ಇತ್ಯರ್ಥವಾಗದೆ ಹಾಗೆಯೇ ಉಳಿದಿದೆ. ಈಗಲಾದರೂ ಅದು ಇತ್ಯರ್ಥವಾಗಬಹುದೆಂದು ಆ ಇಲಾಖೆಯ ಅಧಿಕಾರಿಗಳು ಆಶೆಪಟ್ಟಿದ್ದಾರೆ. ತಮ್ಮ ಕೈಯ್ಯಲ್ಲಿ ಆದದ್ದನ್ನು ಮಾಡದೆ ಇರುವಂಥಾ ಪಾಪಕ್ಕೆ ಸಿಕ್ಕದೆ ಆದಷ್ಟು ಜಾಗ್ರತೆ ಅದನ್ನು ಇತ್ಯರ್ಥ ಮಾಡಬೇಕು. ಇಂಟರ್-ಸೀನಿಯಾರಿಟಿ ಲಿಸ್ಟನ್ನು ಇತ್ಯರ್ಥ ಮಾಡತಕ್ಕಂಥ ಶಕ್ತಿ ತಮಗೆ ಇದ್ದರೂ ಕೂಡ ಅದನ್ನು ಇಂದು ಮಾಡುತ್ತೇನೆ ನಾಳೆ ಮಾಡುತ್ತೇನೆ ಎಂದು ಮುಂದುವರಿಸಿಕೊಂಡು ಹೋಗದೆ ಅಗ್ರಿಕಲ್‌ಚರಲ್ ಪ್ರೊಡಕ್ಷನ್ ದೃಷ್ಟಿಯಿಂದಲಾದರೂ ಇದನ್ನು ಬೇಗ ಇತ್ಯರ್ಥಮಾಡಬೇಕು.

ಇನ್ನು ಹರಿಜನ ವಿದ್ಯಾರ್ಥಿಗಳೇನಿದ್ದಾರೆ ಅವರು ಪ್ರತಿವರ್ಷ ತಾನು ಇಂಥಾ ಜಾತಿಯವನು ಎಂದು ಒಂದು ಸರ್ಟಿಫಿಕೇಟನ್ನು ಪಡೆದುಕೊಂಡು ಹೋಗಬೇಕು. ಒಂದು ವರ್ಷದಲ್ಲಿ ಒಬ್ಬ ಹರಿಜನ ವಿದ್ಯಾರ್ಥಿ ಫೀ ಕನ್‌ಸೆಷನ್ ಫಾರಂ ಭರ್ತಿಮಾಡುವಾಗ, ಸ್ಕಾಲರ್‌ಷಿಪ್ ಫಾರಂ ಭರ್ತಿ ಮಾಡುವಾಗ ಒಂದು ವರ್ಷದಲ್ಲಿ ಮೂರು ಸಲ ಮಾಮಲೇದಾರರ ಕಛೇರಿಗೋ ಅಥವಾ ಎಂ.ಎಲ್.ಎ. ಅಥವಾ ಎಂ.ಎಲ್.ಸಿ. ಗಳ ಹತ್ತಿರಕ್ಕೋ ಹೋಗಿ ಅವರಿಂದ ಸರ್ಟಿಫಿಕೇಟನ್ನು ಪಡೆಯಬೇಕು. ಇದು ಸರಿಯಲ್ಲ. ಒಂದು ವರ್ಷದಲ್ಲಿ ಒಂದು ಸಲ ಸರ್ಟಿಫೈ ಮಾಡಿದರೆ ಸಾಕು. ಅದು ಮೂರು ಸಂದರ್ಭಗಳಿಗೂ ಅನ್ವಯವಾಗುತ್ತದೆ. ಹೈಸ್ಕೂಲಿನಲ್ಲಿ ಒಂದು ಸಾರಿ ಸರ್ಟಿಫೈ ಮಾಡಿದರೆ ಸಾಕು. ಅದು ಹೈಸ್ಕೂಲು ಮುಗಿಯುವತನಕ ಕಂಟಿನ್ಯೂ ಆಗಬೇಕು. ವರ್ಷೇ ವರ್ಷೇ ಹರಿಜನ ವಿದ್ಯಾರ್ಥಿಗಳು ಸರ್ಟಿಫಿಕೇಟನ್ನು ತೆಗೆದುಕೊಂಡು ಹೋಗುವ ಅಭ್ಯಾಸವನ್ನು ಬಿಡಿಸಬೇಕು. ಅದು ಒಳ್ಳೆಯದಲ್ಲ. ಹಳ್ಳಿಗಳಲ್ಲಿ ಗ್ರಾಮಾಭಿವೃದ್ಧಿ ಮತ್ತು ಅಗ್ರಿಕಲ್ಚರಲ್ ಕಮಿಟಿಗಳು ಎಂದು ಇವೆ. ಈ ಕಮಿಟಿಗಳಿರುವುದರಿಂದ ಇನ್ನೂವರೆಗೆ ಏನೂ ಕಾರ್ಯವಾಗಿಲ್ಲ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ, ಹೋದಸಲವೂ ಹೇಳಿದೆ: ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳ ಕಾರ್ಯದ ಜೊತೆಗೆ ಅಗ್ರಿಕಲ್ಚರಲ್ ಖಾತೆಯನ್ನೂ ವಹಿಸಿಕೊಳ್ಳಬೇಕು ಎಂದು. ಈ ಇಲಾಖೆಗೆ ಒಂದು ಪ್ರಾಮುಖ್ಯತೆ ಬರಬೇಕಾದರೆ ಅದನ್ನು ಹೊಂದಿರುವ ವ್ಯಕ್ತಿಯನ್ನು ಅವಲಂಬಿಸಿದೆ. ಆದರೆ ಈಗ ಆ ಖಾತೆಗೆ ಅಷ್ಟು ಪ್ರಾಮುಖ್ಯತೆ ಈ ದೇಶದಲ್ಲಿಲ್ಲ. Man maketh a ministry, minister maketh a ministry. ಅಗ್ರಿಕಲ್ಚರಲ್ ಖಾತೆಗೆ ಪ್ರಾಮುಖ್ಯತೆ ಬರುವವರೆಗೂ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಅಗ್ರಿಕಲ್ಚರಲ್ ಖಾತೆ ಎಂದು ಹೇಳುವಾಗ ನಾನು ಭೂಮಿಗೆ ಸಂಬಂಧಪಟ್ಟದ್ದಕ್ಕೆ ಮಾತ್ರ ಅನ್ವಯಿಸಿ ಹೇಳುತ್ತಿದ್ದೇನೆ. ತೋಟಗಾರಿಕೆ, ಮೀನುಗಾರಿಕೆ ಇವುಗಳನ್ನು ಕುರಿತು ಹೇಳುತ್ತಿಲ್ಲ. ಭೂಮಿಯಿಂದ ಉತ್ಪತ್ತಿ ನೂರಕ್ಕೆ 60 ಇರುತ್ತದೆ. ವ್ಯವಸಾಯ ಖಾತೆಯನ್ನು ಮಾನ್ಯ ಮುಖ್ಯಮಂತ್ರಿಗಳು ವಹಿಸಿಕೊಂಡು ಬಂದು ನಿಜಲಿಂಗಪ್ಪ ಪ್ಲಾನ್ ಮಾಡಬೇಕೆಂದು ಹೇಳುತ್ತೇನೆ.

ಕಾಮರಾಜ್ ಪ್ಲಾನ್ ಎಂದು ಏನು ಹೇಳುತ್ತಾರೆಯೋ ಅದೇ ರೀತಿ ವ್ಯವಸಾಯ ಖಾತೆಗೆ ಸಂಬಂಧ ಪಟ್ಟಂತೆ ಶ್ರೀ ನಿಜಲಿಂಗಪ್ಪ ಪ್ಲಾನ್ ಎಂದು ಮಾಡಿ ವ್ಯವಸಾಯಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯು ವಂತೆ ಮಾಡುವುದು ಬಹಳ ಅಗತ್ಯವಿದೆ. ಇಲ್ಲದೆ ಹೋದರೆ ಸರ್ಕಾರದವರು ಕೊಟ್ಟ ಐದು ರೂಪಾಯಿಗಳಿಂದ ಏನೇನೂ ಪ್ರಯೋಜನವಾಗುವುದಿಲ್ಲ. ಸರ್ಕಾರಿ ನೌಕರರಿಗೆ ಮತ್ತು ಇತರ ಕೆಲವರಿಗೆ ಮಾತ್ರ ಈ ಐದು ರೂಪಾಯಿಗಳ ಸೌಲಭ್ಯ ದೊರೆಯುತ್ತದೆ. Un-organised labour, unprotected labour, ಭೂಹೀನರು, ವ್ಯವಸಾಯ ಕಾರ್ಮಿಕರು ಇವರಿಗೆಲ್ಲ ಏನೂ ಸಹಾಯವಾಗುವುದಿಲ್ಲ. ಆದ್ದರಿಂದ ವ್ಯವಸಾಯದಲ್ಲಿ ಉತ್ಪತ್ತಿ ಜಾಸ್ತಿಯಾಗುವಂತೆ ಮಾಡದ ಹೊರತು ಅವರು ಕೊಡುವ ದುಡ್ಡಿನಿಂದ ಏನೇನೂ ಆಗುವುದಿಲ್ಲ. ವ್ಯವಸಾಯಕ್ಕೆ ಮಹತ್ವ ಸಿಕ್ಕಬೇಕು. ಈಗಾಗಲೇ ನಮ್ಮ ಕಡೆ ಚೀಲ ಜೋಳಕ್ಕೆ 40-50 ರೂಪಾಯಿ ಇದೆ. ಅದು 60 ರೂಪಾಯಿ ಕೂಡ ಆಗಬಹುದು? ಹೀಗಾದರೆ ಬಡವರು ಕಾಳನ್ನು ಕೊಳ್ಳುವುದಕ್ಕೆ ಆಗುವುದಿಲ್ಲ. ಮೊದಲೂ ಹೇಳಿದ್ದೇನೆ, ಈಗಲೂ ಹೇಳಿದ್ದೇನೆ. ಮಂತ್ರಿಮಂಡಲದ ಭವಿಷ್ಯ ಅದರ ಅಂಕಿಯ ಮೇಲೆ ಅವಲಂಬಿಸಿಲ್ಲ, ಅದು ಸಮಾಜಕ್ಕೆ ಕೊಡುವ ಸುಖದಮೇಲೆ ಅವಲಂಬಿಸಿದೆ. ಮಾನ್ಯ ಮುಖ್ಯ ಮಂತ್ರಿಗಳು ಇತ್ತಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಲೇಬರ್ ಮಂತ್ರಿಗಳು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಚೇರ್ಮನ್ನರೂ ಆಗಿದ್ದಾರೆ. ಅದರಲ್ಲಿ ಲೇಬರ್ ಕೇಸುಗಳಿರುತ್ತವೆ. ಅದರಿಂದ, ಕಾರ್ಮಿಕರ ಹಿತದೃಷ್ಟಿಯಿಂದ ಲೇಬರ್ ಮಂತ್ರಿಗಳು ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿನ ಚೇರ್‌ಮನ್ ಆಗಿರಕೂಡದು. ಈಗ ಮೂರು ವರ್ಷದಿಂದ ಅದರಲ್ಲಿನ ಕೆಲಸಗಾರರಿಗೆ ಬೋನಸ್ ಸಿಕ್ಕಿದ್ದಿಲ್ಲ. ಅವರಿಗೆ ಕೊಡ ಬೇಕಾದ ಸಮವಸ್ತ್ರ ಇಂದು ಕೊಡಬೇಕಾಗಿದ್ದರೆ ಇನ್ನು ಒಂದು ವರ್ಷದಮೇಲೆ ಸಿಕ್ಕಲಿಕ್ಕೆ ಹತ್ತಿದೆ. ಕೆಲವೊಂದು ಡಿವಿಜನ್‌ಗಳಲ್ಲಿ ಹಾನಿಯಾಗುತ್ತಿದೆ, ಕೆಲವೊಂದು ಡಿವಿಜನ್‌ಗಳಲ್ಲಿ ಲಾಭವಾಗುತ್ತಿದೆ. ಅದರಲ್ಲಿನ ಕೆಲಸಗಾರರಿಗೆ ಸಿಕ್ಕಬೇಕಾದ ಬೋನಸ್ ಮತ್ತು ಇತರ ಸೌಕರ್ಯಗಳು ಸರಿಯಾಗಿ ಸಿಕ್ಕಬೇಕಾದರೆ ಲೇಬರ್ ಮಂತ್ರಿಗಳು ಅದರ ಚೇರ್ಮನರಾಗಿ ಇರುವುದನ್ನು ಬಿಟ್ಟು ಬೇರೆಯವರಿಗೆ ಕೊಡುವುದು ಯೋಗ್ಯ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯ ಗೌಡ (ರಾಮನಗರ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಹಣಕಾಸಿನ ಮಂತ್ರಿವರ್ಯರಾದ ಶ್ರೀಮಾನ್ ಜತ್ತಿ ಅವರು ಮಂಡಿಸಿರುವ ಆಯವ್ಯಯ ಪಟ್ಟಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವವನಾಗಿದ್ದೇನೆ. ಇದು ಕೇವಲ ಉಳಿತಾಯದ ಆಯವ್ಯಯ ಪಟ್ಟಿಯಾಗಿದೆ, ಈ ಸಲ ಯಾವ ವಿಧವಾದ ತೆರಿಗೆಯನ್ನೂ ಹೊರಿಸಿಲ್ಲ, ಎನ್ನುವಷ್ಟ ರಿಂದಲೇ ಇದು ಸ್ವಾಗತಾರ್ಹ ಎನ್ನುವ ಮಾತಲ್ಲದೆ ಇನ್ನೂ ಕೆಲವು ವಿಷಯಗಳನ್ನೂ ಪ್ರಸ್ತಾಪ ಮಾಡಿ ಆ ಕಾರಣದಿಂದಲೂ ಕೂಡ ಇದು ಸ್ವಾಗತಾರ್ಹವಾಗಿದೆ ಎಂದು ಪುಷ್ಟೀಕರಿಸುವುದಕ್ಕೆ ನಾನು ಹೊರಟಿದ್ದೇನೆ.

ಈ ಸಲ ನಮ್ಮ ಮುಂದೆ ಇರತಕ್ಕ ಆಯವ್ಯಯ ಪಟ್ಟಿಯಲ್ಲಿ ಸಮಾಜ ಕಲ್ಯಾಣಕ್ಕೆ ಅವಶ್ಯಕ ವಾಗಿ ಬೇಕಾದಂಥ, ಸಮಾಜದ ಉದ್ಧಾರಕ್ಕೆ ಅವಶ್ಯಕವಾಗಿ ಬೇಕಾದಂಥ ಕೆಲವು ಇಲಾಖೆಗಳಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿದ್ದಾರೆ. ಉದಾಹರಣೆಗಾಗಿ ವಿದ್ಯಾಭ್ಯಾಸಕ್ಕೋಸ್ಕರ ಹೋದ ವರ್ಷಕ್ಕಿಂತ ಈ ವರ್ಷ ಸುಮಾರು ನಾಲ್ಕೈದು ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಒದಗಿಸಿ ದ್ದಾರೆ. ಹಾಗೆಯೇ ಕೃಷಿ ಮತ್ತು ಜಾನುವಾರುಗಳ ಬಗ್ಗೆ, ಸಹಕಾರ ಶಾಖೆಗೆ, ಪಬ್ಲಿಕ್ ವರ್ಕ್ಸ್‌ಗೆ, ಮೆಡಿಕಲ್, ಪಬ್ಲಿಕ್ ಹೆಲ್ತ್, ಸೋಷಿಯಲ್ ಅಂಡ್ ಡೆವಲಪ್‌ಮೆಂಟಲ್ ಆರ್ಗನೈಜೇಷನ್ ಇತ್ಯಾದಿಗಳಿಗೆಲ್ಲ ಹೆಚ್ಚಿಗೆ ಹಣವನ್ನು ಒದಗಿಸಿದ್ದಾರೆ. ಆದರೂ ಸಹ ಉಳಿತಾಯದ ಆಯವ್ಯಯ ಪಟ್ಟಿಯನ್ನು ಸರ್ಕಾರದವರು ತಯಾರು ಮಾಡಿದ್ದಾರೆ. ಕೇವಲ ಆಯವ್ಯಯ ಉಳಿತಾಯವಾಯಿತು ಎನ್ನುವುದರಿಂದಲೇ ಪ್ರೀತಿಯಾಯಿತು ಎಂದಲ್ಲ. ಏಕೆಂದರೆ ಅವರು ಮನಸ್ಸು ಮಾಡಿ ಇನ್ನೂ ಕೆಲವು ಇಲಾಖೆಗಳಿಗೆ ಹತ್ತಾರು ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಮಾಡಿದ್ದರೆ ಖೋತಾ ಆಯವ್ಯಯ ಪಟ್ಟಿಯನ್ನು ಮಾಡಬಹುದಾಗಿತ್ತು. ಆಯವ್ಯಯ ಪಟ್ಟಿಯಲ್ಲಿ ಉಳಿತಾಯವು ಅಗತ್ಯ ಎನ್ನುವುದರಲ್ಲಿ ಹೆಚ್ಚಿಗೆ ಮಹತ್ವ ಇರಲಾರದು. ಇದನ್ನು ಇಲಾಖೆಯವರು ಮಾಡತಕ್ಕ ಒಂದು ಯಕ್ಷಿಣಿ. ಒಟ್ಟಿನಲ್ಲಿ ಆಯವ್ಯಯದಲ್ಲಿ ಹೆಚ್ಚು ಹೆಚ್ಚು ಅಭಿವೃದ್ಧಿ ಕಾರ್ಯಗಳಿಗೋಸ್ಕರ ಹಣವನ್ನು ಒದಗಿಸಿರುವುದು ಮತ್ತು ಕೆಲವು ಇಲಾಖೆಗಳು ಬಹಳ ತೃಪ್ತಿಕರವಾಗಿ ಕೆಲಸ ಮಾಡುತ್ತಾ ಇರುವುದು ಈ ಆಯವ್ಯಯ ಪಟ್ಟಿಯಿಂದ ಗೊತ್ತಾಗುತ್ತದೆ. ಇದು ಸ್ವಾಗತಾರ್ಹ ಎಂದು ನಾನಾದರೂ ಸಂತೋಷದಿಂದ ಹೇಳುತ್ತಿದ್ದೇನೆ. ಹಾಗೆಂದ ಮಾತ್ರಕ್ಕೆ ಸರ್ಕಾರಿ ಕೆಲಸಕಾರ್ಯಗಳೆಲ್ಲ ತೃಪ್ತಿಕರವಾಗಿ ನಡೆಯುತ್ತವೆ, ಯಾವ ವಿಧವಾದ ಟೀಕೆ ಟಿಪ್ಪಣಿಗಳಿಗೂ ಅವಕಾಶವಿಲ್ಲ ಎಂದು ಹೇಳಲು ನಾನು ಅಪೇಕ್ಷೆ ಪಡುವುದಿಲ್ಲ. ನಮ್ಮ ವಿರೋಧಪಕ್ಷದವರು ಹೇಳಿದಹಾಗೆ ಸರ್ಕಾರದವರು ಏನು ಮಾಡಿದರೂ ಅದೆಲ್ಲ

(ಶ್ರೀ ಟಿ. ಮಾದಯ್ಯ ಗೌಡ)

ತಪ್ಪೇ ಎನ್ನುವ ಮಾತನ್ನೂ ನಾನು ಅಂಗೀಕರಿಸುವುದಿಲ್ಲ ಅಥವಾ ಸರ್ಕಾರದಲ್ಲಿ ಏನು ನಡೆಯುತ್ತದೆ ಅದೆಲ್ಲ ಸರಿ ಎಂದರೆ ಅದು ಕೂಡ ಅಕ್ಷಮ್ಯ ಅಪರಾಧವಾಗುತ್ತದೆ. ಟೀಕೆ ಟಿಪ್ಪಣಿಗಳಿಗೆ ಅವಕಾಶವಿದ್ದೇ ಇದೆ. ಈ ಟೀಕೆ ಟಿಪ್ಪಣಿಗಳಲ್ಲಿ ಕೆಲವು ಅಂಶಗಳನ್ನು ಈ ಸಂದರ್ಭದಲ್ಲಿ ನಾವು ಎತ್ತಿ ತೋರಿಸಿದರೆ ಅದು ಅನುಚಿತ ಎಂದು ನಾನಾದರೂ ಭಾವಿಸುವುದಿಲ್ಲ.

ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯ ಹೇಳಬೇಕಾದರೆ ಅಧಿಕಾರಿಗಳಲ್ಲಿ, ಸಣ್ಣಪುಟ್ಟ ಅಧಿಕಾರಿಗಳಲ್ಲಿಯೂ ಕೂಡ ಪೂರ್ಣ ತೃಪ್ತಿ ಇದೆ ಎಂದು ನಾನು ಭಾವಿಸುವುದಿಲ್ಲ. ಸಚಿವರೇನೋ ಈ ಸಲ ಕೃಪೆಮಾಡಿ ನಾನ್-ಗೆಜೆಟೆಡ್ ನೌಕರರಿಗೆ ಕೊಂಚ ಹಣವನ್ನು ಹೆಚ್ಚು ಮಾಡಿದ್ದಾರೆ. ಅಷ್ಟು ಮಾತ್ರಕ್ಕೆ ಅವರಿಗೆ ತೃಪ್ತಿಯಾಗುತ್ತದೆ ಎಂದು ನಾನಾದರೂ ಭಾವನೆ ಮಾಡುವುದಿಲ್ಲ. ಏರಿರತಕ್ಕ ದವಸಧಾನ್ಯಗಳ ಸ್ಥಿತಿಗತಿಯ ರೂಪದಿಂದ ನೋಡುವುದಾದರೆ ಎಲ್ಲ ವಿಧದಲ್ಲಿಯೂ ಕೂಡ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಜಾಸ್ತಿ ಆಗಿರತಕ್ಕ ಸಂದರ್ಭದಲ್ಲಿ ಐದು ರೂಪಾಯಿ ಜಾಸ್ತಿ ಮಾಡಿದ ಮಾತ್ರಕ್ಕೆ ಹೆಚ್ಚಿನ ಪ್ರಯೋಜನವಾಯಿತು ಎಂದು ನಾನಾದರೂ ಭಾವನೆ ಮಾಡುವುದಿಲ್ಲ. ಅವರನ್ನು ಸಂಪೂರ್ಣವಾಗಿ ತೃಪ್ತರಾಗಿಡಬೇಕಾದುದು ಸರಕಾರದ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಅತೃಪ್ತಿಗೆ ಈ ಮಧ್ಯೆ ಮತ್ತೊಂದು ಕಾರಣವಿದೆ. ನೌಕರರ ಸೀನಿಯಾರಿಟಿ ಲಿಸ್ಟು ತಯಾರಾಗುವುದು ನಿಧಾನವಾಗಿದೆ. ಎಂಟು ಹತ್ತು ವರ್ಷಗಳಾದರೂ ಇನ್ನೂ ಪೂರ್ಣವಾಗಿಲ್ಲ. ಅನೇಕ ಇಲಾಖೆಗಳಲ್ಲಿ ಯಾವ ಯಾವ ಅಧಿಕಾರಿಗಳಿಗೆ ಅವರವರ ಸೀನಿಯಾರಿಟಿ ಪ್ರಕಾರ ಯಾವ ಯಾವ ಸ್ಥಾನಗಳು ದೊರಕಬೇಕೋ ಅದು ದೊರೆಯದೆ ಅವರು ಪೇಚಾಡುತ್ತಿದ್ದಾರೆ. ಇದು ಸರಕಾರಕ್ಕೆ ಕೀರ್ತಿ ತರುವ ವಿಚಾರವೆಂದು ನಾನು ಭಾವಿಸುವುದಿಲ್ಲ. ಪ್ರತಿ ವರ್ಷವೂ ಕೂಡ ಈ ಸಭೆಯಲ್ಲಿ ಸೀನಿಯಾರಿಟಿ ಪಟ್ಟಿಯ ವಿಚಾರ ಬಂದು ಚರ್ಚೆಯಾಗುತ್ತಿದೆ. ಸರಕಾರ ಉತ್ತರವನ್ನೂ ಕೊಡುತ್ತಿದೆ. ಆದರೂ ಕೂಡ ಎಂದಿಗೆ ಈ ಸೀನಿಯಾರಿಟಿ ಪ್ರಶ್ನೆಯನ್ನು ಬಗೆಹರಿಸುವ ಕರ್ತವ್ಯ ಸಂಪೂರ್ಣವಾಗಿ ನಿರ್ವಹಿಸುತ್ತಾರೋ ಎಂದು ಕಾತುರರಾಗಿದ್ದಾರೆ. ಹೊಟ್ಟೆಗೆ ಸಾಕಷ್ಟಿಲ್ಲದಿರುವುದು ಒಂದು ಕಡೆ ಅತೃಪ್ತಿಯನ್ನುಂಟು ಮಾಡಿದೆ. ತಮಗೆ ತಕ್ಕ ಸ್ಥಾನಮಾನ ದೊರಕಲಿಲ್ಲ ಎಂಬುದೊಂದು ಕಡೆ ಈ ಅನೇಕ ಕಾರಣಗಳಿಂದ ಅಧಿಕಾರಗಳಲ್ಲಿರುವವರಲ್ಲಿ ದಕ್ಷತೆ ಕಡಮೆಯಾಗುತ್ತಿದೆ. ಮೇಲ್ಪಟ್ಟ ಅಧಿಕಾರಿಗಳಲ್ಲಿ ದಕ್ಷತೆ ಕಡಮೆಯಾಗುತ್ತಿದೆ ಎಂದು ಭಾವಿಸುವವರಲ್ಲಿ ನಾನೂ ಒಬ್ಬ. ಎಂದ ಮಾತ್ರಕ್ಕೇ ಎಲ್ಲರಲ್ಲಿಯೂ ಮೈಗಳ್ಳತನ ಇದೆ ಎಂದು ನಾನು ಭಾವಿಸುವುದಿಲ್ಲ. ಶೇಕಡ ನೂರಕ್ಕೆ ನೂರರಷ್ಟು ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳು ನಮ್ಮಲ್ಲಿದ್ದಾರೆ. ಆದರೆ ಈ ದಿವಸ ನಾವು ನೋಡಿದರೆ ಹಿಂದೆ ಎಷ್ಟು ಮಂದಿ ದಕ್ಷತೆಯಿಂದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರೋ ಅಷ್ಟು ಮಂದಿ ಈಗ ನಿರ್ವಹಿಸುತ್ತಿಲ್ಲವೆಂದು ಕಂಡು ಬರುತ್ತದೆ. ಇದು ಎದ್ದು ಕಾಣುತ್ತಿರುವುದಕ್ಕೆ ಇನ್ನೊಂದು ಕಾರಣವಿದೆ. ಜಾತೀಯತೆ ಮತ್ತು ಪ್ರಾಂತೀಯ ಭಾವನೆ ಈ ಕೊಳಕು ಭಾವನೆಗಳು ಹೆಚ್ಚಿವೆ. ಅದರಲ್ಲಿಯೂ ಇದು ಸಣ್ಣ ಪುಟ್ಟ ಅಧಿಕಾರಿಗಳಲ್ಲಿ ವಿಶೇಷವಾಗಿ ಅವರಿಸಿಕೊಂಡಿದೆ. ಮೇಲ್ಪಟ್ಟ ಅಧಿಕಾರಿಗಳಲ್ಲಿಯೂ ಇದೇ ಭಾವನೆಯಿದೆ. ಆದಕಾರಣ ತಾವೂ ಹಾಗೆಯೇ ನಡೆಯುತ್ತಿದ್ದೇವೆಂದು ಕೆಳಗಿನ ಅಧಿಕಾರಿಗಳಲ್ಲಿ ಅಭಿಪ್ರಾಯವಿರುವಂತೆ ಕಾಣುತ್ತದೆ. ಎಲ್ಲಿಯವರೆಗೆ ನಮ್ಮ ಅಧಿಕಾರಿಗಳಲ್ಲಿ ಈ ಪ್ರಾಂತಾಭಿಮಾನ ಮತ್ತು ಜಾತ್ಯಾಭಿಮಾನ ಹೋಗುವುದಿಲ್ಲವೋ ಅಲ್ಲಿಯವರೆಗೆ ಸರಕಾರ ಯಶಸ್ವಿಯಾಗಿ ಕೆಲಸ ಮಾಡುತ್ತದೆ, ಅದಕ್ಕೆ ಕೀರ್ತಿ ಬರುತ್ತದೆ ಎಂದು ನಾನು ಭಾವಿಸುವುದಿಲ್ಲ. ಈಚೆಗೆ ಮತ್ತೊಂದು ಪ್ರವೃತ್ತಿ ನೌಕರರಲ್ಲಿ ಕಂಡು ಬರುತ್ತಿದೆ. ತಮ್ಮ ಮೇಲ್ಪಟ್ಟ ಅಧಿಕಾರಿಗಳು ತಮ್ಮ ಪ್ರದೇಶದವರಾದರೆ ಅವರಲ್ಲಿ ಹೋಗಿ ತಮ್ಮ ವರ್ಗ ಅಥವಾ ಬಡ್ತಿ ವಿಚಾರದಲ್ಲಿ ತಾವೂ ಆ ಜಿಲ್ಲೆಯವರು ತಮಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತಾರೆ. ಅಥವಾ ತಮ್ಮ ಅಧಿಕಾರಿಗಳು ತಮ್ಮ ಜಾತಿಗೆ ಸೇರಿದವರಾಗಿದ್ದರೆ, ಅವರಲ್ಲಿ ಹೋಗಿ ತಮ್ಮ ಜಾತಿಯ ಲಾಂಛನವನ್ನು ತೋರಿಸಿ ತಾವು ಅವರ ಜಾತಿಯವರೇ ಎಂಬುದನ್ನು ಅವರ ಗಮನಕ್ಕೆ ತಂದು ತಮ್ಮ ಕೆಲಸ ಮಾಡಿಸಿಕೊಳ್ಳುವುದು. ಇಂತಹ ಕೆಲವು ದೋಷಗಳಿವೆ. ಈ ನಾನಾ ಕಾರಣಗಳಿಂದಾಗಿ ಸರಕಾರಿ ಕೆಲಸ ಎಷ್ಟು ತ್ವರಿತವಾಗಿ ನಡೆಯಬೇಕೋ ಅಷ್ಟು ತ್ವರಿತವಾಗಿ ನಡೆಯದೆ ಸರಕಾರದ ಯಂತ್ರ ಸಾವಕಾಶವಾಗಿ ನಡೆಯುತ್ತಿರುವುದು ನಮ್ಮ ಗಮನಕ್ಕೆ ಬರುತ್ತಿದೆ. ಹೀಗಾಗಬಾರದು. ಸರಿಯಾದ ಹತೋಟಿಯಿಂದ ದಕ್ಷತೆಯಿಂದ ಸರಕಾರಿ ಕೆಲಸ ಕಾರ್ಯಗಳು ನಡೆಯಬೇಕಾದರೆ ಯಾವ ರೀತಿ ಈ ಯಂತ್ರವನ್ನು ಸರಿಪಡಿಸಿಕೊಂಡು ಕೆಲಸ ಮಾಡಬೇಕೋ ಅದನ್ನು ಮಾಡದಿದ್ದರೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಯೋಜನೆಗಳನ್ನು ಮಾಡಿದರೂ ನಮ್ಮ ಸರಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ,

ಈಗ ವಿದ್ಯಾ ಇಲಾಖೆಯ ಸಂಬಂಧವಾಗಿ ಏನು ಕೆಲವು ತತ್ವಗಳನ್ನು ಪ್ರತಿಪಾದನೆ ಮಾಡುತ್ತಿದ್ದಾರೋ ಅವುಗಳಿಂದ ದೇಶದ ಪ್ರಗತಿಯಾಗಿಲ್ಲವೆಂದು ಹೇಳಬಯಸುತ್ತೇನೆ. ಕಡ್ಡಾಯ ಪ್ರಾಥಮಿಕ ಶಿಕ್ಷಣವೆಂದು ಜಾರಿ ಮಾಡಿದ್ದಾರೆ. ಇದರಿಂದ ಶೇಕಡ 90ರಷ್ಟು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಸೇರಿದ್ದಾರೆಂದು ಹೇಳುತ್ತಾರೆ. ನಾನು ಕೆಲವು ಶಾಲೆಗಳನ್ನು ನೋಡಿದ್ದರಲ್ಲಿ ನನಗೆ ಆ ಭಾವನೆ ಬರುವುದಕ್ಕೆ ಸಾಧ್ಯವಿಲ್ಲ. ಮಕ್ಕಳ ಹೆಸರನ್ನು ರಿಜಿಸ್ಟರ್ ಮಾಡಿದ್ದಾರೆ, ಎಷ್ಟು ಜನ ಮಕ್ಕಳು ಬರಬೇಕೋ ಅಷ್ಟು ಜನರ ಹೆಸರನ್ನು ರಿಜಿಸ್ಟರ್ ಮಾಡಿದ್ದರೂ ಆ ಶಾಲೆಗಳಿಗೆ ಹೋಗಿ ನೋಡಿದರೆ ಅದರ ಅರ್ಧದಷ್ಟು ಮಕ್ಕಳೂ ಕೂಡ ಬರುತ್ತಿಲ್ಲ. ಇದನ್ನು ನೋಡಿಕೊಳ್ಳುವುದಕ್ಕೆ ಸರಿಯಾದ ಅಧಿಕಾರವರ್ಗವಿಲ್ಲ. ರಿಜಿಸ್ಟರಿನಲ್ಲಿರುವ ಮಕ್ಕಳು ಶಾಲೆಗೆ ಬರದೇ ಹೋದರೆ ಏಕೆ ಬರಲಿಲ್ಲ, ನೋಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಸೆಕೆಂಡರಿ ಮತ್ತು ಇನ್ನೂ ಮೇಲಿನ ತರಗತಿಗಳಲ್ಲಿ ಕಡ್ಡಾಯ ಶಿಕ್ಷಣದ ದೆಸೆಯಿಂದ ಸ್ವಲ್ಪ ಮಟ್ಟಿಗೆ ಹೆಚ್ಚು ಮಕ್ಕಳು ಬಂದರೂ ಕೂಡ, ಸಂಖ್ಯೆ ಹೆಚ್ಚಿದ್ದರೂ ಕೂಡ ಶಿಕ್ಷಣದ ಕ್ವಾಲಿಟಿ, ಎಂದರೆ ಗುಣ ಎಷ್ಟಿರಬೇಕೋ ಅಷ್ಟಿಲ್ಲ. ಯಾವ ರೀತಿ ವಿದ್ಯಾಭ್ಯಾಸ ನಡೆಯಬೇಕು, ಯಾವ ರೀತಿಯ ಶಿಕ್ಷಣಕೊಟ್ಟರೆ ಸತ್ಪ್ರಜೆಗಳಾಗುತ್ತಾರೆ, ಮುಂದಿನ ಜನಾಂಗ ಅಭಿವೃದ್ಧಿ ಸ್ಥಿತಿಗೆ ಬರುತ್ತದೆ ಎಂಬುದನ್ನು ಯೋಚಿಸಿ ಶಾಸ್ತ್ರೀಯವಾದ ಶಿಕ್ಷಣ ಕೊಡಬೇಕೆಂಬುದನ್ನು ಸರಕಾರ ಆಲೋಚನೆ ಮಾಡುವಂತೆ ನನಗೆ ಕಂಡು ಬರುವುದಿಲ್ಲ. ಹೀಗೆ ಶಾಸ್ತ್ರೀಯ ರೀತಿಯ ಶಿಕ್ಷಣ ನೀಡದೇ ಹೋದರೆ ಭಾವೀ ಪ್ರಜೆಗಳು ಯಾವ ರೀತಿ ಯಾಗುತ್ತಾರೆ ಮುಂದಿನ ತಲೆಮಾರಿನಲ್ಲಿ ಏನಾಗುತ್ತದೆ? ಎಂದು ಯೋಚನೆ ಮಾಡಿದರೆ ನಮಗೆ ಭೀತಿ ಬರುತ್ತದೆ. ಇಂತಹ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಬದಲು ಹುಡುಗರನ್ನು ತಂದೆ ತಾಯಿಗಳು ತಮ್ಮ ಹತ್ತಿರ ಇಟ್ಟುಕೊಂಡು ತಮ್ಮ ಕಸಬನ್ನು ಅವರಿಗೆ ಹೇಳಿಕೊಟ್ಟು ಕಲಿಸಿದರಾದರೂ ಒಳ್ಳೆಯದೇನೋ ಎನಿಸುತ್ತದೆ. ಒಳ್ಳೆಯ ನಡತೆ, ಒಳ್ಳೆಯ ವಿದ್ಯೆ ಬಾರದೇ ಹೋದರೆ ಮಕ್ಕಳನ್ನು ಮನೆಗಳಲ್ಲಿಟ್ಟುಕೊಳ್ಳುವುದೇ ಯೋಗ್ಯವೆಂದು ನಾನು ಭಾವಿಸಿದ್ದೇನೆ, ಅನೇಕವೇಳೆ ಇದನ್ನು ಹೇಳಿದ್ದೇನೆ.

ಇಷ್ಟು ಹೇಳಿ, ನನಗೆ ಇಷ್ಟು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

12-00 NOON.

Sri G. V. GOWDA (Palayam).—Mr. Speaker, Sir, at the outset I wish to submit that the financial position of the State is neither bright nor satisfactory. No one much less our Finance Minister, himself, could claim that the finances of our State are either stable or sound. It has been very gloomy for the last 3 years and even the budgt estimates for 1964-65 are also not realistic. I am not without any valid reason in support of my view. The recent Review made by the Statistics and Finance Department has pointed out that so far as 1963-64 though it is claimed by the Finance Minister that we will have about Rs. 220.74 lakhs revenue surplus, there would be a deficit of Rs. 40.13 lakhs. An examination of these budgets for the four years from 1957-58 will make this clear. In 1958-59 we had Rs. 10 crores revenue surplus In 1960-61 it was to Rs. 2.27 crores. For the first time in 1961-62 we had a higher gap of Rs. 4.66 lakhs revenue deficit and in 1962-63 the revenue deficit was Rs. 208 lakhs. According to the review, even 1963-64 also would end in deficit. So far as 1964-65 is concerned, the other day while presenting the Supplementary Demands the Finance Minister said that it will be surplus, but according to my scrutiny it will not be so. Such being the case there would definitely be a deficit even in respect of the 1964-65 budget on the revenue side. In 1962-63 there was a shortfall both in revenue and expenditure and the decrease in non-tax revenue rose to the extent of Rs. 8 crores and the expenditure on economic development was also less by Rs. 708.35 lakhs compared to the budget

(SRI G. V. GOWDA)

estimates on non-development expenditure which were higher by Rs. 172.22 lakhs. If we examine the relative position of the taxes we will realise in what way we are sailing so far as the finances of our State are concerned. So far as the direct taxes levied by the Central Government are concerned, from 1958-59 we have risen from Rs. 451 lakhs to Rs. 698 lakhs showing an increase of 40 per cent. So far as the State direct taxes are concerned, we have increased nearly to the extent of 60 per cent and if we take indirect taxes levied by the Centre that has taken us nearly hundred per cent from 1958-59 to 1963-64. So the indirect taxes of the State have taken us forward by 105 per cent. Taking an over-all picture of indirect taxes, there is an average increase of 100 per cent from 1958-59 to 1963-64 and the relationship between direct and indirect taxes on both the State and the Central level is roughly 1 : 2. Look at the quantum of capital expenditure we have incurred for all these years. It has reached to Rs. 700 crores. After spending Rs. 700 crores what is the ultimate result to the common man is the first question that we have to answer. A general survey of the economic trend, as pointed out by the review, will show that the agricultural sector has been at a standstill and the industrial picture also is no brighter. In terms of targets fixed, the achievements during the last three years of the third plan cannot be claimed to be wholly satisfactory. Determined efforts have got to be made to have a higher and more ambitious rate of economic growth. Unless it is more rapid than the growth of population, there is no salvation so far as the economic growth or the betterment of the lot of the common people is concerned and we cannot hope to have a fillip in that direction. It is claimed that we are having a *per capita* income of Rs. 24.50 per month. That speaks of the position of the common man, whether he has been able to develop any purchasing capacity or make both ends meet. It is humanly impossible for him to do that.

Having said this, let me invite the attention of the House to the way in which the State Government is trying to increase revenue. So far as taxes dues, and other principal heads of revenue are concerned, for the last two or three years we have been able to increase by about Rs. 10 crores. In the administrative services we have been able to increase revenue by about Rs. 4 lakhs. So far as expenditure is concerned, to raise an income of Rs. 4 lakhs more, we are spending Rs. 88 lakhs more. That bears no relationship with the revenue that is derived and the expenditure that we are incurring both on revenue account and in respect of debt services is also mounting. We have been saying year after year that the Government of Mysore should have made a strong case before the Government of India and also the Finance Commission and the Centre for some sort of relaxation of the terms and conditions in this matter. As you are aware, we have got hundreds and hundreds of various types of loans given to us under various terms and conditions. The rates of interest in respect of them are also different and it has become

impossible for us to pay the rate of interest prescribed. and make repayment of principal. But we have got to pay as per the agreement under which the sums have been borrowed. When we have got to pay all these things; naturally we find less money for developmenta activities. Unless the Finance Commission are convinced that they have got to make easier the terms and conditions of these various loans, unles they are convinced that there is need for consolidation of all these debts into at least 8 or 10 debts, it is impossible for us to find the money to push through our developmental activities. Inthe near future the fourth Finance Commission is going to be constituted and definitely it will come here and meet the Government of Mysore. I would suggest that the Government should make it a point to see that the Commission is convinced about this matter. The Commission must be apprised that we can pay the Government of India interest on the loans only when the productive works on which they are invested start giving yield. Unless that is done there is no hope for us to pass through the critical days ahead. This is one of the most important things that the Government have to do and see that these several debts which are due to the Government of India are rationalised and consolidated and the terms and conditions are made easier.

It has been said that we are taking steps for recovery of arrears as early as possible. I invite attention to page 102 of the Bubget Speech Part II and it will disclose that we ary yet to realise more than Rs. 10 crores. Out of the Mysore Sales of Motor Spirit Taxation Act from 1958-59 to 1962-63 there is an outstanding of Rs. 10 lakhs, from the Mysore Entertainment Tax Act from 1958-59 to 1962-63 there is an outstanding of Rs. 12.77 lakhs and from the Mysore Agricultural Income Tax Act from 1958-59 to 1962-63 there is an outstanding of Rs. 123.99 lakhs and under the Mysore Sales Tax Act from 1958-59 to 1962-63 there is an outstanding of Rs. 940 lakhs. This is apart from the Central Sales Tax Act under which there is a clear balance of nearly Rs. 78 to 80 lakhs. This is apart from the Central Tax. There is a clear balance of nearly Rs. 70 to Rs. 80 lakhs and the persons that are yet to be assessed are nearly 79,000 people and the Government have not taken any steps to bring these people within the purview of various assess ments. Unless steps are taken to realise all these outstanding amounts and unless all these persons are brought under assessment and assessment collected, I do not see there is any hope to undertake these developmental activities. The Finance Minister says that it has become practically difficult to cope with the plan. So far as the Third Plan is concerned, he says that he needs nearly Rs. 50 to Rs. 60 crores to fill up the gap. I invite the attention of the House to the speech he has made in the last years Budget. He says:

> "As against the total Third Plan provision of Rs. 110 crores of which Rs. 42 crores has to be found by additionl taxation. As we could not implement taxation measures in the first year, the total yield from all such measures including rationalisation

(SRI G. V. GOWDA)

of water rate and tax on electricity consumption, may not exceed Rs. 28 to Rs. 29 crores in the plan period. Due to the tempo of expenditure, increases outgoings towards repayments of loan borrowed from Government of India, and effect of rise in the emoluments of non-gazetted employees, there will be a total shortfall of Rs. 4o to 45 crores."

For the very same purpose, because we wanted to have the internal resources raised, Sales Tax Act was amended; Motor Vehicles Tax was amended; Land Revenue Surcharge Act was adopted; Entertainment Tax Act was amended and also economy measures as recommended by the A. G. Ramachandra Rao Committee were given effect to as claimed by the Finance Minister; He himself conceded that we will be able to realise an additional taxation of nearly Rs. 25 crores for a period of three years. Such being the case, I do not know where that money has gone or whether that money was utilised in non-developmental activities. According to me they should have realised extra Rs. 6 crores from sales-tax at the rate of Rs. 2 crores per year; from Forest Department they claimed an additional income of Rs. 2 crores for each year and the Government would be in a position to realise Rs. 6 crores; by giving effect to economy measures, they would have saved another Rs. 3 crores at the rate of one crore per year. So we would be in a position to realise nearly Rs. 25 crores during the third, fourth and fifth year of the Third Five Year Plan. Such being the case, we were all under the hope that we would have raised internal sources of Rs. 42 crores that were required for plan activities. But now to say we want another Rs. 50 to Rs. 60 crores to meet the development activities is something beyond any stretch of reasoning. Even mid-apprisal of Third Plan has definitely shown that there are 60 to 70 per cent shortfalls in achievement in that direction. If I were to refer to some of the paragraphs of the Finance Minister's speech, that would definitely show how we have thoroughly failed in implementing plan schemes. So far as small savings scheme is concerned, the Finance Minister claimed that it has proved to be a very successful one. No doubt so far as the target is concerned, we have achieved success. But what is the primary object of this small savings scheme? It is to make as far as possible the middle class, upper middle class and upper poor class people save something and invest it in the schemes. Has it been done? Who are the investors here? Except the labourers in Bhadravathi Factory, the other investors happen to be only the rich people who would as well also invest if the Government were to float a public loan.

SRI B. D. JATTI.—Recently I had been to Gulburga. There it is the villagers who invested in this, and not the rich people. We are not enamoured of rich people.

SRI G. V. GOWDA.—Let the Hon'ble Minister get a list of those persons. To my knowledge except the factory workers of Bhadravathi

and elsewhere where this scheme has been introduced and where amounts have been deducted out of the wages, the small saving scheme is thoroughly a failure. Then who are the people that are able to invest ? It is the rich class in society. If the Government were to announce public loans, they are prepared to invest in public loan also.

SRI B. D. JATTI.—In Gulburga Jail I collected Rs. 8,000 from the people who are convicts. Then what more does he want ? Are there any other persons who are poorer than convicts ?

SRI G. V. GOWDA.—Collecting Rs. 8,000 or Rs. 5,000 is not the criterion. The amount collected now is nearly Rs. 15 crores. What percentage of this, the upper poorer class people have contributed ? That is the criterion by which we have got to see whether the scheme has been successful. If it is not successful, why do you adopt this scheme ? You can float a loan and get it from the Banks and rich people. It is claimed that the *per capita* income is about 80 naya paise per day. Such being the case, when the consumer price is going up, is it humanly possible for anybody to make an investment ? From that point of view, this scheme is a thorough failure. Who are those people who have contributed ? There must be people who have got money which is not accounted for. In my opinion there are a very large number of people who can find money and who have got money still unaccounted for. It may come to Rs. 20 to 25 crores. What steps have the Government taken to check it ? This morning I read that the Hon'ble Education Minister has made a statement in the Council that the Government is going to introdue XI standard in some of the selected schools. I wish to ask one question whether the Government have got qualified personnel to teach XI standard which is equivalent to Pre-University Class and whether they have got the required equipment, required laboratory and the required finance atleast. Already we have allotted Rs. 22 crores for Education and in the face of these things, how could Education Minister introduce XI standard when the University is doing the same ? The University Syndicate has taken a decision that they want to introduce two year Pre-University Course from 1965-66. Such being the case, the Government should have given thought over this matter. The standard has already deteriorated. By introducing the 11th standard without qualified personnel, it will further deteriorate. How many M. A. and M. Sc. graduates are there ? Are they having necessary science and laboratory equipment ? Without all these things, it becomes a farce to say that they could have introduce the XI standard. The Universities are there to open colleges and they well take care of it ; unless it is settled whether P. U. C. is one year or two-year course, to say that examination is to be conducted by the University and control will be exercised by the Education Department, is something ridiculous. Therefore, I am saying it has got to be postponed. One sentence with regard to Federal University. It is said that there is need for Federal University. But where is the money ? When we want so much of amount for other developmental works, especially irrigation, we have got to give.

(SRI G. V. GOWDA)

much more attention to medium and minor irrigation, even the Planning Commission has been advising time and again that we must bestow attention on medium projects which will give us quick returns, there is no use of diverting funds in the name of Federal University. I hope something better will be done to see that revenues are improved.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಣಕಾಸಿನ ಮಂತ್ರಿಗಳು ಮಂಡಿಸಿರುವ 1964-65 ನೆಯ ಸಾಲಿನ ಆಯವ್ಯಯದ ಅಂದಾಜುಗಳನ್ನು ಸ್ವಾಗತಿಸುತ್ತಾ, ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸರಕಾರ ಸ್ವಲ್ಪಮಟ್ಟಿಗೆ ಆಹಾರ ಉತ್ಪಾದನೆ ಯೋಜನೆಗಳಿಗೆ, ಕೈಗಾರಿಕೆಗಳಿಗೆ ಮತ್ತು ಅಲ್ಪಸ್ವಲ್ಪ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನಕೊಟ್ಟಂತೆ ಕಾಣುತ್ತದೆ. ಚಿಕ್ಕಪುಟ್ಟ ನೀರಾವರಿ ಕಾಂಗಾರಿಗಳಿಗೆ ಭಾರತ ಸರ್ಕಾರದ ನೆರವಿನಿಂದ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಆದರೆ ಇನ್ನೂ ಹೆಚ್ಚಿನ ಹಣ ಈ ಬಾಬಿಗೆ ಒದಗಿಸಬೇಕಾಗಿತ್ತು. ಮತ್ತು ಜನರಲ್ಲಿ ವ್ಯವಸಾಯದ ಬಗ್ಗೆ ಮೂಡಿರುವ ಉತ್ಸಾಹವನ್ನು ಇನ್ನೂ ಜಾಸ್ತಿ ಉಪಯೋಗಿಸಕೊಳ್ಳಬೇಕಾಗಿತ್ತು.

ನಮ್ಮ ಮೊದಲನೆಯ ಸಮಸ್ಯೆ ಎಂದರೆ ಆಹಾರದ ಸಮಸ್ಯೆ. ಆಹಾರದ ಉತ್ಪಾದನೆಗೆ ಹೆಚ್ಚು ಹಣವನ್ನು ಖರ್ಚುಮಾಡಲು ಸರ್ಕಾರ ಹಿಂದೆಮುಂದೆ ನೋಡಬಾರದು. ಹತ್ತಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟತಕ್ಕ ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಂದ ನಮಗೆ ಪ್ರತಿಫಲ ಬರಬೇಕಾದರೆ ಅನೇಕ ವರ್ಷಗಳು ಬೇಕು. ಅದರಿಂದ ಲಕ್ಷಾಂತರ ಎಕರೆ ಸಾಗುವಳಿಗೆ ಬರುತ್ತದೆ. ಆದರೆ ಅಂತಹ ಪ್ರಾಜೆಕ್ಟುಗಳು ಇಲ್ಲದೆ ಇರುವ ಕಡೆಗಳಲ್ಲಿ, ಹೊಸ ಕೆರೆಗಳನ್ನು ನಿರ್ಮಿಸುವುದರಿಂದ, ಹಳ್ಳ ಕೆರೆಗಳನ್ನು ರಿಪೇರಿ ಮಾಡುವುದರಿಂದ ಮತ್ತು ಪಿಕ್-ಅಪ್ ಹೆಚ್ಚು ಮಾಡುವುದರಿಂದ, ರೈತರಿಗೆ ನೀರಾವರಿ ಬಾವಿಗಳನ್ನು ತೆಗೆಸಲು ಹಣವನ್ನು ಒದಗಿಸುವುದರಿಂದ ಆಹಾರದ ಕೊರತೆಯನ್ನು ನಿವಾರಿಸಬಹುದು. ಹೊಸ ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೆ ತಗಲುವ ಹಣದಲ್ಲಿ ಶೇಕಡ 25 ಭಾಗವನ್ನು ರೈತರು ಮುಂಗಡವಾಗಿ ಕೊಡಲು ಮುಂಚೆ ಬಂದಿರುವುದು ಒಂದು ಸಂತೋಷದ ಸುದ್ದಿ. ನಮ್ಮ ತಾಲ್ಲೂಕಿನಲ್ಲಿ ಕೆಲವು ಭಾಗದಲ್ಲಿ ಆ ರೀತಿ ಹಣವನ್ನು ಮುಂಗಡವಾಗಿಕೊಡಲು ಮುಂದುಬಂದಿದ್ದಾರೆ. ಅಂತಹ ಸಂದರ್ಭದಲ್ಲಿ ಆ ಕೆಲಸಗಳನ್ನು ಅತಿ ಶೀಘ್ರವಾಗಿ ಸಂಬಂಧಪಟ್ಟ ಇಲಾಖೆಯವರು ತೆಗೆದುಕೊಳ್ಳಬೇಕೆಂದು ಸರಕಾರದವರು ಆದೇಶ ನೀಡಬೇಕೆಂದು ನಾನು ವಿನಂತಿಸುತ್ತೇನೆ. ಮತ್ತು ನೀರಾವರಿ ಬಾವಿಗಳಿಗಾಗಿ ರೈತರಿಗೆ ಹೆಚ್ಚು ಹೆಚ್ಚು ಸಾಲವನ್ನು ಕೊಡಬೇಕು. ಸಾಲ ಕೊಡುವಾಗಲೂ ಕೂಡ ಯಾರು ನಿಜವಾಗಿಯೂ ಬಾವಿಗಳನ್ನು ತೆಗೆಸುತ್ತಾರೋ ಅಥವಾ ಅದರಿಂದ ಪ್ರಯೋಜನವನ್ನು ಮಾಡಿಕೊಳ್ಳಬಲ್ಲರೋ ಅಂತಹ ರೈತರಿಗೆ ಮಾತ್ರ ಆ ಸಾಲಸಿಕ್ಕಬೇಕು. ಕಂಟ್ರಾಕ್ಟರುಗಳಿಗಾಗಲಿ, ಅಥವಾ ಅವರ ಮಕ್ಕಳ ಮದುವೆ, ಮುಂಜಿಗಾಗಲಿ ಆ ಸಾಲ ದೊರೆಯಬಾರದು. ಎರಡನೆಯದಾಗಿ ಎರಡು ವರ್ಷಗಳಿಂದ 8,400 ಪಂಪ್ ಸೆಟ್ಟುಗಳನ್ನು ಒದಗಿಸಿರುವುದಾಗಿ ತಿಳಿಸಿದ್ದಾರೆ, ಆದರೆ ಅವು ಕೆಲಸ ಮಾಡುವಂತಹ ವಿದ್ಯುಚ್ಛಕ್ತಿಯನ್ನು ಸರಕಾರದವರು ಒದಗಿಸಿರುವುದಿಲ್ಲ. ಎಲೆಕ್ಟ್ರಿಕ್ ವೈರ್ ಇಲ್ಲ ಎಂದು ಹೇಳುವುದು ಒಂದು ದೊಡ್ಡ ಸಮಸ್ಯೆಯಾಗಿದೆ, ಆದ್ದರಿಂದ ಆಹಾರ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಸರಕಾರದವರು ಆದಷ್ಟು ಜಾಗ್ರತೆ ಎಲೆಕ್ಟ್ರಿಕ್ ವೈರನ್ನು ತರಿಸಲು ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕಂದಾಯ ಮತ್ತು ಸರ್‌ಛಾರ್ಜ್ ಮುಂತಾದುವನ್ನು ವಸೂಲು ಮಾಡುವಂತೆ ರೈತನ ಅಭಿವೃದ್ಧಿಕಾರ್ಯಗಳಿಗೆ ಸರಕಾರದವರು ಹೆಚ್ಚು ಗಮನಕೊಡಬೇಕು. ಸರಕಾರದವರು ಮಾಡುವಂತಹ ಕಡ್ಡಾಯ ತೀರ್ಮಾನಗಳನ್ನಾಗಲಿ, ಕಾನೂನನ್ನು ರೈತ ಉಪಯೋಗಿಸುವಂತಿಲ್ಲ. ವಿದ್ಯಾರ್ಥಿಗಳು, ಕಾರ್ಮಿಕರು ಅಥವಾ ಇತರೇ ನೌಕರರು ವಿರೋಧಿಸಿ ಮುಷ್ಕರ ಹೂಡುವಂತೆ ರೈತ ಮುಷ್ಕರ ಹೂಡಿದ್ದೇ ಆದರೆ ದೇಶದ ಆಹಾರದ ಉತ್ಪಾದನೆ ಬಹಳ ಕಡಿಮೆಯಾಗುವ ಸ್ಥಿತಿ ಬರುತ್ತದೆ. ದೇಶವೇ ತಲೆಕೆಳಕಾಗಬೇಕಾಗುತ್ತದೆ. ಆದ್ದರಿಂದ ದೇಶದ ಬೆನ್ನು ಮೂಳೆ ಎಂದು ಹೇಳತಕ್ಕ ರೈತನ ಹಿತ ಪ್ರಪ್ರಥಮವಾಗಿ ಸಾಧನೆಯಾಗಬೇಕು. ನೀರಾವರಿ ಬಾವಿಗಳನ್ನು ತೆಗೆಯಲು ಕೊಡುವ ಹಣ ರೈತನಿಗೆ ನವಂಬರ್ ತಿಂಗಳಿನಲ್ಲಿ ಅಥವಾ ಡಿಸೆಂಬರ್ ತಿಂಗಳಿದಲ್ಲಿ ಮುಟ್ಟಬೇಕು, ಅದಕ್ಕೆ ಬದಲು ಮಾರ್ಚಿ, ಏಪ್ರಿಲ್ ತಿಂಗಳಿನಲ್ಲಿ ಕೊಟ್ಟರೆ ಮೇ, ಜೂನ್ ತಿಂಗಳಿನಲ್ಲಿ ಮುಂಗಾರು ಮಳೆ ಪ್ರಾರಂಭವಾಗುತ್ತದೆ, ಕೇವಲ ಎರಡು ತಿಂಗಳಿನಲ್ಲಿ ಬಾವಿ ತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂದಿನ ವರ್ಷಕ್ಕೆ

ಅರ್ಧಂಬರ್ಧ ಬಿಟ್ಟರೆ ಸರಕಾರದವರು ಕೊಡುವ 300 ರೂಪಾಯಿಗಳ ಜೊತೆಗೆ ಇನ್ನೂ 3,000 ರೂಪಾಯಿಗಳನ್ನು ಒದಗಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಪುನಃ ಬೇರೆ ಕಡೆಯಿಂದ ಸಾಲ ತೆಗೆದು ಕೊಳ್ಳಬೇಕೆಂದರೆ ಸಾಧ್ಯವಿಲ್ಲ. ಏಕೆಂದರೆ ಭೂಮಿಯನ್ನು ಅವನು ಸರಕಾರದವರಿಗೆ ಅಡವಾಗಿ ಇಟ್ಟಿರುತ್ತಾನೆ. ಬೇರೆಯವರು ಸಾಲಕೊಡುವುದಿಲ್ಲ. ಹಣ ಸಿಕ್ಕಿದ ಹೊರತು ರೈತ ಬಾವಿ ಕೆಲಸ ಮುಗಿಸುವ ಹಾಗಿಲ್ಲ, ಬೆಳೆ ಬೆಳೆಯುವ ಹಾಗಿಲ್ಲ, ಅಷ್ಟೇ ಅಲ್ಲದೆ ಸರಕಾರದವರಿಂದ ತೆಗೆದುಕೊಂಡ ಸಾಲದ ಹಣವನ್ನು ಅವನು ವಾಪಸು ಮಾಡುವ ಹಾಗಿಲ್ಲ. ಆದ್ದರಿಂದ ಸಕಾಲಕ್ಕೆ ರೈತನಿಗೆ ಹಣ ಒದಗಿಸಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಬೆಳೆಗಳಿಗೆ ರೋಗ ತಗುಲಿದರೆ ಆ ಸುದ್ದಿ ತಿಳಿದ ತಕ್ಷಣ ಪರಿಹಾರ ಕ್ರಮ ತೆಗೆದುಕೊಳುವುದಕ್ಕೆ' ಅದಕ್ಕೆ ಬೇಕಾದ ಔಷಧಿ ಮತ್ತು ಸ್ಪ್ರೇಯರ್‌ಗಳನ್ನು ಒದಗಿಸುವುದಕ್ಕೆ ಸಂಬಂಧಪಟ್ಟ ಇಲಾಖೆಯವರು ಸಿದ್ಧವಾಗಿರಬೇಕು, ಕೆಲವು ಕಡೆ ಬೆಳೆಗಳೆಲ್ಲಾ ನಾಶವಾದ ಮೇಲೆ ಔಷಧಿ ಮತ್ತು ಸ್ಪ್ರೇಯರ್‌ಗಳನ್ನು ಒದಗಿಸಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಇಲ್ಲ ಆ ರೀತಿ ಆಗಿಲ್ಲ, ಟೆಲಿಗ್ರಾಂ ಮೂಲಕ ಆರ್ಡರ್ಸ್ ಕೊಟ್ಟಿದ್ದೇವೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ತೆಂಗು, ಅಡಿಕೆ ಇಂತಹ ಬೆಳೆಗಳಿಗೆ ಖಾಯಿಲೆ ಬಂದು ಸಸಿ ನಾಶವಾದ ಮೇಲೆ ಔಷಧಿಕೊಡುತ್ತಾರೆ. ಆದ್ದರಿಂದ ರೈತರಿಗೆ ಸಬ್ಸಿಡಿ ರೇಟ್‌ನಲ್ಲಿ ಸ್ಪ್ರೇಯರ್‌ಗಳನ್ನು ಒದಗಿಸಬೇಕು, ಆ ರೀತಿ ಮಾಡಿದರೆ ಅವರು ರೋಗ ತಗುಲಿದ ತಕ್ಷಣ ಆ ಬೆಳೆಗಳಿಗೆ ತಗಲ ತಕ್ಕ ರೋಗವನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

1964-65 ನೇ ಇಸವಿಗೆ ಕಾಂಟೂರ್ ಬಂಡಿಂಗ್ ಹಾಕತಕ್ಕ ಕೆಲಸಕ್ಕೆ ಸಂಬಂಧಪಟ್ಟಂತೆ ತಿಳಿಸುತ್ತಾ, ಇದು 1.43 ಲಕ್ಷ ಎಕರೆ ಭೂಮಿಗೆ ಅನ್ವಯಿಸುತ್ತದೆ ಎಂದು ಹೇಳಿದ್ದೀರಿ. ಬಾವಿಗಳಿಗೆ ಯಾವ ರೀತಿಯಲ್ಲಿ ಸಬ್ಸಿಡಿ ರೂಪದಲ್ಲಿ ಹಣವನ್ನುಕೊಡುತ್ತೀರೋ ಅದೇ ರೀತಿಯಲ್ಲಿ ಕಂಟೂರ್ ಬಂಡಿಂಗ್ ಹಾಕುವುದಕ್ಕೂ ಸಬ್ಸಿಡಿಕೊಟ್ಟಿದ್ದೇ ಆದರೆ ಈ ಯೋಜನೆ ಶೇಕಡ 25 ರಷ್ಟು ಸಫಲವಾಗಬಹುದು ಎಂದು ನನ್ನ ಭಾವನೆ.

ಫ್ಲಡ್ ರಿಲೀಫ್ ವರ್ಕ್ಸ್‌ಗೆ ಸಂಬಂಧಪಟ್ಟ ಹಾಗೆ ಬೆಳಿಗ್ಗೆ ಒಂದು ಪ್ರಶ್ನೆ ಕೇಳಿದೆ. ನಮ್ಮ ಕಡೆ ಬಹಳ ಜಮೀನು ಹಾಳಾಗಿ ಹೋಗಿದೆ, ರೈತನು ತನ್ನ ಜಮೀನನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿ ಇದ್ದಾನೆ. ಆದ್ದರಿಂದ ಖಂಡಿತವಾಗಿಯೂ ಫ್ಲಡ್ ರಿಲೀಫ್ ಕಾರ್ಯಕ್ರಮವನ್ನು ಸಂಬಂಧಪಟ್ಟ ಇಲಾಖೆಯವರು ಶೀಘ್ರವಾಗಿ ತೆಗೆದುಕೊಳ್ಳುವಂತೆ ಸರಕಾರನವರು ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಸ್ವಾಮಿ, ಮೂರನೆಯ ಬಾರಿ ಸರಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತಾ ಇದ್ದೇನೆ. ನಮ್ಮ ತುಮಕೂರು ಜಿಲ್ಲೆ ಹೆಚ್ಚು ಹಳ್ಳಿಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ನಮ್ಮ ಸಂಸ್ಥಾನಕ್ಕೆ ಎರಡನೆಯದಾಗಿದೆ. ಅಲ್ಲಿ ನೂರಕ್ಕೆ 90 ಭಾಗ ವ್ಯವಸಾಯಗಾರರು ಇದ್ದಾರೆ, ಇಂತಹ ತುಮಕೂರು ಜಿಲ್ಲೆಗೆ ಒಂದು ವ್ಯವಸಾಯದ ಕಾಲೇಜನ್ನುಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತೊಮ್ಮೆ ಮುಂದಿನ ಬಡ್ಜೆಟ್ ಭಾಷಣದಲ್ಲಿ ನನ್ನಿಂದ ಅದಕ್ಕಾಗಿ ಕೃತಜ್ಞತಾ ವಂದನೆಗಳನ್ನು ಸಲ್ಲಿಸಿಕೊಳ್ಳುತ್ತೀರಿ ಎಂದು ನಾನು ನಂಬಿದ್ದೇನೆ.

ಗ್ರಾಮಾಂತರ ನೀರು ಸರಬರಾಯಿ ಮತ್ತು ಗ್ರಾಮ ನೈರ್ಮಲ್ಯ ಇವುಗಳಿಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಿದ್ಧ ಪಡಿಸಿದಾಗ ಕೊಟ್ಟ 50 ಲಕ್ಷ ರೂಪಾಯಿಗಳ ಹಣವನ್ನು 100 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದ್ದೀರಿ. ಇದು ಒಂದು ಸಂತೋಷದ ಸಂಗತಿ. ಪ್ರತಿಯೊಂದು ಗ್ರಾಮದಲ್ಲೂ ಕುಡಿಯುವ ನೀರಿನ ಬಾವಿಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮುಗಿಸಿಕೊಡುತ್ತೇನೆ ಎಂದು ಹೇಳಿದ್ದೀರಿ ಆದರೆ ನಮ್ಮ ತಾಲ್ಲೂಕಿನಲ್ಲಿ ಸುಮಾರು 78 ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳು ಇಲ್ಲ ಎಂಬುದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿದ್ದೇನೆ. ಮತ್ತು ಕೆಲವು ಕಡೆ ಚರಂಡಿಯ ವ್ಯವಸ್ಥೆಯೂ ಕೂಡ ಇಲ್ಲ. ಇವುಗಳಿಗೆ ಹೆಚ್ಚು ಹಣ ಒದಗಿಸಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿಂಡ್ ಮಿಲ್ ಮುಖಾಂತರ ನೀರನ್ನು ಒದಗಿಸುವ ಯೋಜನೆಯನ್ನು ಸರಕಾರದವರು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಸಕ್ಕರೆ ಹಂಚಿಕೆ ಬಗ್ಗೆ ಕೆಲವು ವಿಷಯಗಳನ್ನು ಸರಕಾರದವರ ಗಮನಕ್ಕೆ ತರಬೇಕೆಂದು ಇದ್ದೇನೆ. ನಮ್ಮ ಜಿಲ್ಲೆಯಲ್ಲಿ ಸಕ್ಕರೆ ಸಿಕ್ಕುವುದು ಕಷ್ಟವಾಗಿದೆ. ಚಿಲ್ಲರೆ ವ್ಯಾಪಾರಸ್ಥರಿಗೆ ಸಕ್ಕರೆ ಕೋಟಾ ಕೊಡದೇ ಇರುವುದೇ ಇದಕ್ಕೆ ಕಾರಣ ಎಂದು ತಿಳಿಯುತ್ತೇನೆ. ಚಿಲ್ಲರೇ ವ್ಯಾಪಾರಸ್ಥರ ಹತ್ತಿರ ಸಕ್ಕರೆ ಇಲ್ಲದಿದ್ದರೆ ಬೇರೆ ದಿನಸಿ ವ್ಯಾಪಾರ ಆಗುವುದಿಲ್ಲ. ಅದಕ್ಕೇ ಅವರು ಬ್ಲಾಕ್ ಮಾರ್ಕೆಟ್‌ನಲ್ಲಿ ಸಕ್ಕರೆ ತಗೆದು

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ಕೊಂಡು ಬರುತ್ತಾ ಇದ್ದಾರೆ. ಆದ್ದರಿಂದ ಚಿಲ್ಲರೆ ವ್ಯಾಪಾರಸ್ಥರಿಗೆ ನಾಲ್ಕೈದು ಮೂಟೆಗಳಷ್ಟು ಸಕ್ಕರೆಯನ್ನು ಒಟ್ಟಿಗೆ ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲದೇ ಇರುವುದರಿಂದ ವಾರಕ್ಕೆ 50 ಕೆ. ಜಿ. ಅಥವಾ ಒಂದು ಮೂಟೆಯಷ್ಟು ಸಕ್ಕರೆಯನ್ನು ಕೊಟ್ಟರೆ ಅವರು ಬ್ಲಾಕ್ ಮಾರ್ಕೆಟ್‌ನಲ್ಲಿ ಕೊಂಡು ತಂದು ಮಾರಾಟ ಮಾಡುವುದು ನಿಲ್ಲುತ್ತದೆ ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಕೋಟಾ ತೆಗೆದುಕೊಂಡಿರತಕ್ಕವರು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡುತ್ತಾ ಇದ್ದಾರೆಯೇ, ಇಲ್ಲವೇ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು, ಅನಿರೀಕ್ಷಿತ ಭೇಟಿಕೊಟ್ಟು ಪರೀಕ್ಷೆಮಾಡಬೇಕೆಂದು ತಿಳಿಸುತ್ತೇನೆ.

ಗ್ರಾಮ ಕೈಗಾರಿಕೆಗಳ ಸಲುವಾಗಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸ್ವಲ್ಪ ಹಣ ಒದಗಿಸಿದ್ದಾರೆ. ಆದರೆ ಕೆಲವು ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹವಿಲ್ಲ. ಉದಾಹರಣೆಗೆ ತುಮಕೂರು ತಾಲ್ಲೂಕಿನಲ್ಲಿ ಬಾಚಣಿಗೆ ತಯಾರಿಸುವುದು ಪ್ರಸಿದ್ಧವಾದ ಗೃಹ ಕೈಗಾರಿಕೆಯಾಗಿದೆ. ಅದಕ್ಕೆ ಯಾವ ಪ್ರೋತ್ಸಾಹವೂ ಇಲ್ಲ. ಈ ಕೆಲಸಗಾರರಿಗೆ ಬೇಕಾದ ಊಬಲ ಮತ್ತು ಕಡಬಲ ಎರಡು ಜಾತಿಯ ಮರಗಳನ್ನು ಅರಣ್ಯ ಇಲಾಖೆಯಲ್ಲಿ ರಿಸರ್ವ್ ಮಾಡಿಡಬೇಕು. ಸೌದೆಗಾಗಿ ಆ ಮರಗಳನ್ನು ಕಡಿಯದಂತೆ ನಿರ್ಬಂಧ ಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ವಂಶಪಾರಂಪರವಾಗಿ ಬಂದಿರುವ ಈ ಕೈಗಾರಿಕೆ ಕುಂಠಿತವಾಗದಂತೆ ಈ ಕೈಗಾರಿಕೆಗೆ ಲೋಪ ಬರದಂತೆ ಸರಕಾರ ಸಹಾಯ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಇನ್ನೂ ಆರೋಗ್ಯ ಇಲಾಖೆಯ ವಿಷಯವಾಗಿ ಎರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಂದು ಆರೋಗ್ಯ ಖಾತೆಗೆ 730 ಲಕ್ಷ ರೂಪಾಯಿಗಳು ಖರ್ಚಾಗಬಹುದೆಂಬ ಅಂದಾಜಿದೆ. ಅಷ್ಟು ಖರ್ಚು ಮಾಡಿದರೂ ಸರಿಯಾದ ಆರೋಗ್ಯ ಲಾಭವಾಗುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಸಾಕಷ್ಟು ಡಾಕ್ಟರುಗಳಿಲ್ಲ, ಇಂಜೆಕ್ಷನ್ ಟ್ಯೂಬುಗಳು, ಪಿಲ್ಸ್ ಮುಂತಾದುವು ಕಾಳಸಂತೆಯಲ್ಲಿ ಖಾಸಗಿ ಅಂಗಡಿಗಳಿಗೆ ಹೋಗುತ್ತಿವೆ. ಇದನ್ನು ನಿಲ್ಲಿಸಲು ಸಂಬಂಧಪಟ್ಟ ಮಂತ್ರಿಗಳು ಈ ಕಡೆ ಗಮನಕೊಡಬೇಕು. ಈ ಇಲಾಖೆ ಬಹಳ ಮಂದಗತಿಯಿಂದ ನಡೆಯುತ್ತಿದೆ. ಆದುದರಿಂದ ಇದನ್ನು ಸಂಬಂಧಪಟ್ಟ ಮಂತ್ರಿಗಳು ತೀವ್ರವಾಗಿ ಗಮನಿಸಿ ಅದಷ್ಟು ಸರಿಪಡಿಸಬೇಕು. ವೈದ್ಯರಲ್ಲಿ ದಯೆ; ಕರುಣೆ ಮತ್ತು ಶಾಂತಿ ಬಹಳವಾಗಿರಬೇಕು, ರೋಗಿ ಒಂದು ಕಡೆ ಹೀಗಿಂದರೆ, ವೈದ್ಯರು ಒಂದು ಕಡೆ ಹೀರುವಂತಾಗಿದೆ. ಆಸ್ಪತ್ರೆಗಳು ಬಿಸಿನೆಸ್ ಜಾಗವಾಗಿ ಸಾರ್ವಜನಿಕರಿಗೆ ಉಪಕಾರವಾಗಿ ಹಿತವಾಗಬೇಕು. ತುಮಕೂರಿನಲ್ಲಿ ಟಿ. ಬಿ. ಕ್ಲಿನಿಕ್ ಇದೆ. ಅಲ್ಲಿ ರೋಗಿಗಳಿಗೆ ಪ್ರವೇಶಾವಕಾಶ ದೊರೆಯಬೇಕಾದರೆ ಕನಿಷ್ಠಪಕ್ಷ 50 ರೂಪಾಯಿಗಳನ್ನಾದರೂ ಕೊಡಬೇಕು. ಸಂಬಂಧಪಟ್ಟ ಮಂತ್ರಿಗಳು ಇದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಿ ಸರಿಪಡಿಸುತ್ತಾರೆಂದು ನಂಬಿ ಇಷ್ಟು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ಉಳಿದ ವಿಷಯಗಳನ್ನು ಡಿಮ್ಯಾಂಡುಗಳ ಮೇಲೆ ಮಾತನಾಡುವಾಗ ಸೂಚಿಸುತ್ತೇನೆಂದು ತಿಳಿಸಿ ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—The House will now adjourn and meet again at 12-30 P.M. on Monday ?

The House adjourned at Thirty Minutes past Twelve of the Clock to meet again at Thirty Minutes past Twelve of the Clock on Monday, the 9th March 1964.

WD 2487—GPB—900—20-5-1964

MYSORE LEGISLATIVE ASSEMBLY

TENTH DAY.

Monday, 9th March 1964.

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Co-operative Farming Societies working in North Kanara District.

*Q.—22. Sri S. P. PHAYADE (Ankola).—

Will the Government be pleased to state :—

(*a*) the number of Co-operative Farming Societies that are working in North Kanara District (Talukwise information may be furnished) ;

(*b*) whether there are any proposals pending from the registration of such societies in this District and if so, Talukwise information may be furnished ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) Thirteen.

Name of Taluk.	*No. of Co-operative Farming Societies workin*
1 Kumta ...	5
2 Sirsi ...	2
3 Siddapur ...	1
4 Haliyal ...	2
5 Bhatkal ...	1
6 Honavar ...	1
7 Mundgod ...	1

(*b*) Two proposals are pending as shown below :—

Name of Taluk	*No.*
1 Sirsi ...	1
2 Siddapur ...	1

ಶ್ರೀ ಎಸ್. ಪಿ. ಫಾಯದೆ.—ಸ್ವಾಮಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಇನ್ನೂ ಅನೇಕ ಅರ್ಜಿಗಳನ್ನು ಕಳಿಸಿದ್ದಾರೆ. ಅವು ಈ ಉತ್ತರದಲ್ಲಿ ಏಕೆ ಬರಲಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಡಿಪಾರ್ಟಮೆಂಟಿನ ಮುಂದೆ ರಿಜಿಸ್ಟ್ರೇಷನ್ನಿಗಾಗಿ ಪೆಂಡಿಂಗ್ ಕೇಸೆಸ್ ಇವೆಯೇ ಎಂದು ಕೇಳಿದ ಪ್ರಶ್ನೆಗೆ ಕೊಡುವ ಉತ್ತರದಲ್ಲಿ ಅರ್ಜಿಗಳು ಎಷ್ಟು ಬಂದಿವೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಪಿ. ಫಾಯದೆ.—ಸಾಗುವಳಿಗೆ ಫಾರೆಸ್ಟ್ ಜಮೀನನ್ನು ಬಿಡುಗಡೆ ಮಾಡಿಕೊಡಬೇಕೆಂದು ಫಾರೆಸ್ಟ್ ಇಲಾಖೆಗೆ ಅರ್ಜಿ ಮಾಡಿಕೊಂಡಿದ್ದಾರೆ. ಕಳೆದ ಎರಡು ವರ್ಷಗಳಿಂದ ನಿರ್ಣಯ ಬಂದಿಲ್ಲ. ಇದನ್ನು ಬೇಗ ನಿರ್ಣಯ ಮಾಡಿ ಜಮೀನು ಬಿಡುಗಡೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಕೋ-ಆಪರೇಟಿವ್ ಫಾರ್ಮಿಂಗ್ ಸ್ಥಾಪನೆ ಮಾಡಲು ಯಾರು ಜಮೀನು ಇಟ್ಟುಕೊಂಡಿದ್ದಾರೆಯೋ ಯಾರ ಕೈಯಲ್ಲಿ ಜಮೀನು ಇದೆಯೋ ಅಂಥ ವಿಚಾರದಲ್ಲಿ ರಿಜಿಸ್ಟ್ರೇಷನ್ ಮಾಡಲು ಅರ್ಜಿ ಹಾಕಿಕೊಂಡರೆ ರಿಜಿಸ್ಟರ್ ಮಾಡುತ್ತಾರೆ. ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿ ಮಾಡುತ್ತೇವೆ; ಫಾರೆಸ್ಟ್ ಡಿಪಾರ್ಟಮೆಂಟಿನಿಂದ ಸಾಗುವಳಿಗೆ ಜಮೀನು ಕೊಡಬೇಕೆಂದು ಕೇಳಿದರೆ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಪಿ. ಫಾಯದೆ.—ಕಾರವಾರ್ ಜಿಲ್ಲೆಯಲ್ಲಿ 92 ಪರ್ಸೆಂಟ್ ಫಾರೆಸ್ಟ್ ಇದೆ, 8 ಪರ್ಸೆಂಟ್ ಜಮೀನು ಸಾಗುವಳಿಯಾದುದು ಇದೆ. ಈ ರೀತಿ ಇರುವಾಗ್ಗೆ ಫಾರೆಸ್ಟ್ ಜಮೀನನ್ನು ಕೊಡದೇ ಇದ್ದರೆ ಜಮೀನು ಸಾಗುವಳಿ ಮಾಡಿ ಹೆಚ್ಚು ಆಹಾರ ಉತ್ಪತ್ತಿ ಮಾಡುವುದು ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—ಹಾಗಲ್ಲ. ಸಾಗುವಳಿಗೆ ಲಾಯಖ್ ಆದ ಜಮೀನು ಫಾರೆಸ್ಟ್ ಇಲಾಖೆಯಲ್ಲಿ ಇದ್ದುದು ವಿಸ್ತಾರವಾಗಿದ್ದರೆ ಮತ್ತು ಕೋ-ಆಪರೇಟಿವ್ ಬೇಸಿಸ್ ಮೇಲೆ ಸಾಗುವಳಿ ಮಾಡುವುದಾದರೆ ಜಮೀನು ಕೊಡಬೇಕೆಂಬ ಉದ್ದೇಶ ಸರಕಾರದ್ದಿದೆ. (ಸುಮಾರು 10 ಸಾವಿರ ಎಕರೆ ಜಮೀನು ಸಾಗುವಳಿ ಮಾಡಬೇಕೆಂಬ ಉದ್ದೇಶ ಇದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ 13 ಸೊಸೈಟಿಗಳು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿವೆ ?

ಶ್ರೀ ರಾಮಕೃಷ್ಣ ಹೆಗಡೆ.—ಕಳೆದ 3 ವರ್ಷಗಳಿಂದ ಈಚೆಗೆ ಸ್ಥಾಪನೆಯಾಗಿವೆ.

ಶ್ರೀ ಎಸ್. ಪಿ. ಫಾಯದೆ.—ಕೆಲಸ ಮಾಡುವುದನ್ನು ಖುದ್ದಾಗಿ ನೋಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಖುದ್ದಾಗಿ ನೋಡಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಸೊಸೈಟಿಗಳಿಗೆ ಒಂದು ವರ್ಷಕ್ಕೆ ಕೊಡತಕ್ಕಂಥ ಸಬ್‌ಸೀಡಿ ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಒಂದು ಉದ್ದವಾದ ಲಿಸ್ಟ್ ಇದೆ. ಅದನ್ನು ಓದುವುದಕ್ಕೆ ಹೆಚ್ಚು ಸಮಯ ಆಗುತ್ತದೆ.

Mr. SPEAKER.—If it is a long list, it may be placed on the Table of the House.

Sri SIDDAIAH KASHIMATH.—I do not want the entire list, Sir. Whether they are giving any subsidy equally or not—that is all I want.

Sri RAMAKRISHNA HEGDE.—All these societies have been given medium term and long term loans to the extent of Rs. 4,000 per society. Subsidy varies from society to society—from Rs. 400 to Rs. 1,200.

Sri GANJI VEERAPPA.—May I know what is the total extent of land that has come under the co-operative farming in the State ?

Sri RAMAKRISHNA HEGDE.—That information is not with me now, because the question relates only to North Kanara District.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಈ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳಿಗೆ ಫೈನಾನ್ಷಿಯಲ್ ಅಸಿಸ್ಟೆನ್ಸ್ ಏನೇನು ಕೊಡುತ್ತೀರಿ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ರಾಮಕೃಷ್ಣ ಹೆಗಡೆ.—ಗೋಡೌನ್ ಕಟ್ಟಲಿಕ್ಕೆ 5,000 ರೂಪಾಯಿ ಲೋನ್ ಕೊಡುತ್ತೇವೆ. ಆ ಮೇಲೆ ದೀರ್ಘಾವಧಿ ಅಲ್ಪಾವಧಿ ಸಾಲ, ಸಬ್‌ಸಿಡಿ, ಷೇರ್ ಕ್ಯಾಪಿಟಲ್ ಹೀಗೆ 12,000 ರೂಪಾಯಿಗಳಷ್ಟು ಒಂದು ಸೊಸೈಟಿಗೆ ಕೊಡುತ್ತೇವೆ.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಈ ಸೊಸೈಟಿಗಳ ಸ್ಥಾಪನೆಯಿಂದ ಹೆಚ್ಚು ಆಹಾರ ಬೆಳೆಯಬೇಕೆಂಬ ಉದ್ದೇಶ ಸಫಲವಾಗಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಹೇಳುವುದು ಕಷ್ಟವಾಗುತ್ತದೆ. It depends upon the individual society's performance.

Sri GANJI VEERAPPA.—Have the Government received any complaints that most of the societies are not strictly working on co-operative lines ?

Sri RAMAKRISHNA HEGDE.—I could not comprehend it.

Sri GANJI VEERAPPA.—May I know whether some of the societies are not working on co-operative lines and that individual share-holders do not bring their produce to a common pool ? Have you received any such complaints in Chitradurga District ?

Mr. SPEAKER.—The case of Chitradurga District does not arise.

Sri RAMAKRISHNA HEGDE.—I have no information about the Chitradurga District. But I may inform the Hon'ble Member that there are two categories of co-operative societies—one is collective farming society and second, Co-operative farming society. So far as the first category is concerned, all lands will have to be pooled and the lands will stand in the name of society itself. With regard to the other category, it is not necessary that all land should be pooled in the name of the society. Cultivators can have their land in their own name but they join together for certain specific purposes.

Sri S. SIVAPPA.—Whether these societies in North Kanara are formed under the joint farming co-operative societies or collective farms?

Sri RAMAKRISHNA HEGDE.—Both.

Sri S. SIVAPPA.—Has it come to the notice of the Government that the several societies in North Kanara, which are working under both systems specially under the collective farms are in fact none other than certain individuals under certain landlords, and that they share all these things ? Is it nota fact that cattle is brought under the cattle farm account.

Mr. SPEAKER.—I am not able to follow the question. Will the member kindly repeat and make it clear ? He seems to be saying that the cattle that are brought by the landlords and tenants, are brought into the co-operative society's account ; the owner is not a member of the society. Under the guise of the tenant, it is bought and it is entered in the societies accounts and money is taken. Is that the members idea.

Sri S. SIVAPPA.—Yes, Sir.

Sri RAMAKRISHNA HEGDE.—That may be the opinion of the Hon'ble Leader of the Opposition. I have no such information.

Mr. SPEAKER.—Is there any specific instance ?

Sri S. SIVAPPA.—There are several such instances.

Mr. SPEAKER.—The member may kindly mention one name.

Sri S. SIVAPPA.—In 10 to 12 societies, these things are happening. Will the Government be pleased to enquire into these cases since allegations have been made?

Mr. SPEAKER.—Would not the enquiry be facilitated if individual instances are given?

Sri S. SIVAPPA.—We are prepared to give details.

Number of N. E. S. Blocks in the State.

Q.—116. Sri M. N. NAGHNOOR (Sampagaon-II).—

Will the Government be pleased to state :—

(*a*) whether the whole State has been covered by the N.E.S. Blocks now ;

(*b*) the number of Blocks in the State at present ;

(*c*) the total expenditure on the functioning of these Blocks per annum ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) Yes.

(*b*) 268.

(*c*) The expenditure varies from year to year. Expenditure incurred during 1962-63 was Rs. 252.14 lakhs. The estimated expenditure as provided in the Budget for 1963-64 is Rs. 261.27 lakhs.

Sri M. N. NAGHNOOR.—Would it be advisable to reduce the number of blocks in the State both from the administrative point of view and the economical point of view ?

Sri RAMAKRISHNA HEGDE.—It is not advisable to reduce the number of blocks. We shall stand to lose if we reduce the number of blocks. If the Hon'ble Member means reduction in the establishment, then it is different.

Sri M. N. NAGHNOOR.—Even within the taluks would it be advisable to reduce the number of blocks and reduce the expenditure ?

Mr. SPEAKER.—If the Hon'ble Member refers to the reduction in the staff, perhaps that can be considered.

Sri M. N. NAGHNOOR.—The same B.D.O. could look after the increased area.

Sri RAMAKRISHNA HEGDE.—That question is under the consideration of Government and the Hon'ble Member may perhaps remember that the recommendation made by the Kondajji Basappa Committee is also on those lines and we are thinking whether we should have more than 2 blocks in the same Taluk in the sense that two B.D.Os. and all establishment should continue and if so, to what extent.

ಶ್ರೀ ಸಿದ್ದಯ್ಯ ಕಾಶೀಮಠ.—ರಾಜ್ಯದಲ್ಲಿರತಕ್ಕಂಥ ಡಬಲ್ ಬ್ಲಾಕುಗಳಿಗೆ ಸರಿಯಾದ ಸಿಬ್ಬಂದಿಯನ್ನು ಒದಗಿಸಿರುವುದಿಲ್ಲ. ಈಗ ಎಮರ್ಜನ್ಸಿ ಎಂದು ಹೇಳಿ 2 ಜೀಪು ಇದ್ದುದನ್ನು ಒಂದು ಮಾಡಿದ್ದಾರೆ. ಆದ್ದರಿಂದ ಒಂದು ಬ್ಲಾಕನ್ನು 2 ತಾಲ್ಲೂಕುಗಳಿಗೆ ಮಾಡಿ ಅವಶ್ಯವಿದ್ದಷ್ಟು ಸಿಬ್ಬಂದಿ, ಜೀಪುಗಳನ್ನು ಒದಗಿಸಲು ಯೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ 2 ತಾಲ್ಲೂಕುಗಳಿಗೆ ಒಂದೆ ಬ್ಲಾಕನ್ನು ಮಾಡುವಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಈ ರೀತಿ ಮಾಡಿದರೆ ನಮಗೆ ಸಿಗತಕ್ಕಂಥ ಹಣದ ಸೌಕರ್ಯವನ್ನು ಕಳೆದುಕೊಳ್ಳುತ್ತೇವೆ. ಒಂದು ತಾಲ್ಲೂಕಿನಲ್ಲಿ 2 ಬ್ಲಾಕುಗಳಿಗಿಂತ ಹೆಚ್ಚಿದ್ದರೆ ಬೇರೆ ತರಹ ವ್ಯವಸ್ಥೆ ಮಾಡಬೇಕೆ ಎಂಬ ವಿಷಯವು ಸರಕಾರದ ವಿಚಾರದಲ್ಲಿದೆ ಮತ್ತು ಈಗ ಎಲ್ಲಾ ಕಡೆ ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಹೇಳುವ ವಾದವನ್ನು ಒಪ್ಪುವುದಿಲ್ಲ. ಅನೇಕ ಕಡೆ ಈಗಾಗಲೆ ತಕ್ಕ ಕ್ರಮವನ್ನು ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಡೆಪ್ಯುಟಿ ಬಿ. ಡಿ. ಒ. ಇಲ್ಲವೋ ಅಲ್ಲಿ ಹೊಸದಾಗಿ ನೇಮಿಸಿದ್ದೇವೆ. ಚೀಫ್ ಎಕ್ಸಿಕ್ಯೂಟಿವ್ ಆಫೀಸರನ್ನು ಇನ್-ಚಾರ್ಜ್ ಬಿ. ಡಿ. ಒ. ಎಂದು ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸಮುದಾಯ ಅಭಿವೃದ್ಧಿ ಕೇಂದ್ರಗಳಿಗೆ ಒದಗಿಸತಕ್ಕಂಥ ಹಣದಲ್ಲಿ ಹೆಚ್ಚಿನ ಪಾಲು ಹಣ ನೌಕರರ ಸಂಬಳಸಾರಿಗೆಗೆ ಖರ್ಚಾಗಿ ಅವರ ಅಭಿವೃದ್ಧಿ ಜಾಸ್ತಿಯಾಗುತ್ತಿದೆ, ಸಮುದಾಯ ಅಭಿವೃದ್ಧಿ ಕಡಿಮೆಯಾಗುತ್ತಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಪುನಃ ಪುನಃ ಸರಿಯಾದ ತಿಳಿವಳಿಕೆ ಇಲ್ಲದೆ ಮಾಡುವ ವಾದ ಇದು. ನಾವು ಏನು ಸಿಬ್ಬಂದಿಯನ್ನು ನೇಮಕ ಮಾಡುತ್ತೇವೆ—ಅದು ಕೇವಲ ಕಮ್ಯೂನಿಟಿ ಡೆವಲಪ್‌ಮೆಂಟ್ ಕೆಲಸ ಮಾಡುವುದಕ್ಕೇ ಇಲ್ಲ. ಅದು ಎಲ್ಲಾ ತಾಲ್ಲೂಕು ಬೋರ್ಡ್ ಡೆವಲಪ್‌ಮೆಂಟ್ ಕೆಲಸ ಮಾಡುವುದಕ್ಕೆ ಇರುತ್ತದೆ. ಆದ್ದರಿಂದ ಅವರ ಜವಾಬ್ದಾರಿ ಹೆಚ್ಚಿಗೆ ಇರುತ್ತದೆ. ಅದನ್ನು ಗಮನಕ್ಕೆ ತೆಗೆದುಕೊಂಡರೆ ಸಂಬಳದ ಮೇಲೆ ಕೊಡುವ ದುಡ್ಡು ಹೆಚ್ಚು ಎನ್ನುವುದನ್ನು ಒಪ್ಪುವುದಿಲ್ಲ.

Sri S. SIVAPPA.—Out of the Rs. 261 lakhs allotted for the N.E.S. blocks in the budget, may I know what is the percentage of the amount spent on the staff employed in the blocks ?

Sri RAMAKRISHNA HEGDE.—I have to repeat my answer. It is not only the amount that has been earmarked for block development that is expended by the blocks. It is the amount allotted for agriculture development under various departmental programmes. When we pool all these resources and compare the expenditure that is incurred upon the establishment, I must say that it is much less than what the Hon'ble Member thinks.

Sri GANJI VEERAPPA.—Do the Government agree that there is scope to minimise the expenditure that is incurred on unnecessary and superficial staff in the N.E.S. department ?

Sri RAMAKRISHNA HEGDE.—I do not agree with the Hon'ble Member that there is unnecessary and superficial staff, in the first place. Actually, there is a demand on the part of the Taluk Boards that there is need to increase the number of gramasevaks who are actually engaged in the agricultural production programme and therefore, the contention of the Hon'ble Member is not correct.

ಶ್ರೀ ಡಿ. ಎಂ. ಸಿದ್ದಯ್ಯ.—ಸರಕಾರ ಒಂದು ಬ್ಲಾಕಿಗಿಂತ ಹೆಚ್ಚು ಇರುವ ಕಡೆ 2-3 ನೆಯ ಬ್ಲಾಕುಗಳಲ್ಲಿ ಡೆಪ್ಯುಟಿ ಬಿ.ಡಿ.ಒ. ಗಳ ಹೆಡ್ ಕ್ವಾರ್ಟರ್ಸ್ ಇಟ್ಟುಕೊಂಡಿದ್ದರು. ಅದನ್ನು ಯಾವ ಉದ್ದೇಶದಿಂದ ತಾಲ್ಲೂಕು ಹೆಡ್‌ಕ್ವಾರ್ಟರಿಗೆ ವರ್ಗ ಮಾಡಿದ್ದಾರೆ ? ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೀಗೆ ಮಾಡಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಹಾಗೆ ಮಾಡಿಲ್ಲ. ಹಾಗೆ ಎಲ್ಲಿಯಾದರೂ ಒಂದೆರಡು ಕಡೆ ಆಗಿದ್ದರೆ ಯಾವ ಕಾರಣದಿಂದ ಆಗಿದೆ ಎಂದು ನೋಡಿ ಹೇಳಬೇಕು. ಈಗ ಎಮರ್ಜನ್ಸಿ ಬಂದಿರುವುದರಿಂದ ಬ್ಲಾಕು ಬಿಲ್ಡಿಂಗುಗಳನ್ನು ಹೊಸದಾಗಿ ಕನ್‌ಸ್ಟ್ರಕ್ಟ್ ಮಾಡಕೂಡದು ಎಂದು ಮಾಡಿದೆ.

ಶ್ರೀ ಬಿ. ಚೆನ್ನಬೈರೇಗೌಡ.—ಈ ವ್ಯವಸಾಯ ಅಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಾ ಇದ್ದರೆ ಸರಕಾರದವರು ಯಾವ ಯಾವ ಬ್ಲಾಕುಗಳಲ್ಲಿ ನಡೆಸುತ್ತಾ ಇದ್ದಾರೆ ? ಏಕೆಂದರೆ ಈ 10 ವರ್ಷಗಳಲ್ಲಿ ವ್ಯವಸಾಯ ಸಾಮಾನುಗಳು ಹೆಚ್ಚಾಗಿ ಉತ್ಪತ್ತಿಯಾಗುತ್ತಿಲ್ಲ.

Mr. SPEAKER.—All over the States or outside the State ? What kind of a question is this Member putting ? It must be more precise.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ನನ್ನ ಹತ್ತಿರ ಬಂದರೆ ಅವರಿಗೆ ಓದಲಾರ ದಷ್ಟು ಲಿಟರೇಚರ್ ಅನ್ನು ಒದಗಿಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನಾನು ತಿಳುವಳಿಕೆ ಇಲ್ಲದೆ ಹೇಳಿದ್ದೇನೆಂದರು. ಹೋದ ವರ್ಷ 1963-64ರಲ್ಲಿ ಒಂದು ಬ್ಲಾಕಿಗೆ 90 ಸಾವಿರ ರೂಪಾಯಿ ಅಲಾಟ್‌ಮೆಂಟ್ ಇದ್ದರೆ ಅದರಲ್ಲಿ 50-60 ಸಾವಿರ ರೂಪಾಯಿ ಸಂಬಳ ಸಾರಿಗೆಗೆ ಖರ್ಚಾಗಿರು ವುದು ತಮ್ಮ ಗಮನಕ್ಕೆ ಬಂದಿದೆಯೇ ? ತಿಳುವಳಿಕೆ ಇದ್ದೇ ಹೇಳುತ್ತೇನೆ ಈ ಮಾತನ್ನು.

ಶ್ರೀ ರಾಮಕೃಷ್ಣ ಹೆಗಡೆ.—ಪುನಃ ನಾನು ಅದೇ ಮಾತನ್ನು ಹೇಳಬೇಕಾಗಿದೆ. ಪುನಃ ಇದೇ ಪ್ರಶ್ನೆಯನ್ನು ಕೇಳಿರುವುದೇ ತಿಳಿವಳಿಕೆ ಇಲ್ಲದೆ ಇರುವುದನ್ನು ತೋರಿಸುತ್ತದೆ. ಸಿಬ್ಬಂದಿಯವರು ತಾಲ್ಲೂಕು ಬೋರ್ಡಿನ ಎಲ್ಲಾ ಕೆಲಸವನ್ನೂ ಮಾಡುತ್ತಾರೆ ಎಂಬುದನ್ನು ಗಮನಕ್ಕೆ ತೆಗೆದು ಕೊಂಡರೆ ಅದು ಕಡಮೆ ಇದೆಯೋ ಹೆಚ್ಚಿದೆಯೋ ಅನ್ನುವುದು ಅವರಿಗೇ ಗೊತ್ತಾಗುತ್ತದೆ.

ಶ್ರೀ ಎಂ. ಎಚ್. ಕೃಷ್ಣಸಿಂಗ್.—ಎರಡನೇ ಬ್ಲಾಕಿನ ಹೋಬಳಿ ಹೆಡ್‌ಕ್ವಾರ್ಟರನ್ನು ಯಾವ ಆಧಾರದ ಮೇಲೆ ತೀರ್ಮಾನ ಮಾಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ತಾಲ್ಲೂಕು ಬೋರ್ಡಿನ ಶಿಫಾರಿಸಿನ ಮೇಲೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಾವು ಸಿಬ್ಬಂದಿ ಜಾಸ್ತಿ ಇಲ್ಲವೆಂದು ಹೇಳಿದಿರಿ. ಹಿಂದೆ ತಾಲ್ಲೂಕು ಅಮಲ್ದಾರರಾಗಿದ್ದವರು ಒಂದು ವಾಹನದ ಸೌಕರ್ಯವಿಲ್ಲದೆ ವ್ಯವಸಾಯದ ಇಲಾಖೆ, ಫಿಷರೀಸ್, ವೆಟರ್ನರಿ, ಎಲ್ಲ ಕೆಲಸ ಮಾಡುತ್ತಿದ್ದರು. ಈಗಲೂ ಎಚ್. ಇ. ಎಸ್. ಕೆಲಸವನ್ನು ಅಮಲ್ದಾರರಿಗೇ ವಹಿಸಿದರೆ ಅವರು ಹೆಚ್ಚು ದಕ್ಷತೆಯಿಂದ ನಿರ್ವಹಿಸಬಲ್ಲರು.........

Mr. SPEAKER.—It is not a supplementary, but a big comment and speech.

ಶ್ರೀ ಡಿ. ಎಂ. ಸಿದ್ದಯ್ಯ.—2-3ನೇ ಬ್ಲಾಕುಗಳಲ್ಲಿ ಬಿಲ್ಡಿಂಗುಗಳನ್ನು ಒದಗಿಸುತ್ತೇವೆಂದರೆ, ಡೆಪ್ಯುಟಿ ಬಿ.ಡಿ.ಒ. ಗಳನ್ನು ಅಲ್ಲಿಯೇ ಇರಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಸರಕಾರದವರು ಡೆಪ್ಯುಟಿ ಬಿ.ಡಿ.ಒ. ಗಳು ಇರಬೇಕೆ ಬೇಡವೆ ಎಂಬ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಈಗ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಇಟ್ಟಿದ್ದೇವೆ. ಅವರ ಬಗ್ಗೆ ಕೊನೆಯ ತೀರ್ಮಾನವನ್ನು ತೆಗೆದುಕೊಂಡಿಲ್ಲ.

Sri SANJEEVANATH AIKALA.—Would the Government agree with the opinion of experts in social welfare that the Jeep and the Woman Social Worker are the real impediments in the progress of N.E.S. activities ?

Sri RAMAKRISHNA HEGDE.—I cannot say anything about the experience of Hon. Member.

ಶ್ರೀ ಎಚ್. ಡಿ. ದೇವೇಗೌಡ.—ಎಚ್.ಇ.ಎಸ್. ಬ್ಲಾಕ್‌ನಲ್ಲಿರತಕ್ಕ ಕಾಂಪೋಸ್ಟ್ ಇನ್‌ಸ್ಪೆಕ್ಟರ್ ಎನ್ನುವವರನ್ನು ವಿಲೇಜ್ ಲೆವೆಲ್ ವರ್ಕರ್ಸ್ ಎಂದಾಗಲಿ ಗ್ರಾಮ ಸೇವಕರು ಎಂದಾಗಲಿ ಪುನರ್ ವ್ಯವಸ್ಥೆ ಮಾಡತಕ್ಕ ಅಥವಾ ಪುನರ್‌ನೇಮಕ ಮಾಡತಕ್ಕ ಆಲೋಚನೆ ಸರಕಾರದ ಮುಂದೆ ಇದೆಯೇ?

ಅಧ್ಯಕ್ಷರು.—ಆ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

Grant of Old Age Pension in the State.

*Q.—198. Sri P. F. D'MELLOW (Nominated).—

Will the Government be pleased to state :—

(a) whether any decision has now been taken to bring the State in line with other States where old age pensions are granted ;

(b) whether they have any proposal or scheme to introduce some form of social security to the aged citizen, who is unable to work, in the State ;

(c) whether they would call for the opinion and suggestions from voluntary organisations which have undertaken the care of the aged, as a special service, before finalising the State Government Plan these matters ?

A.—Sri B. D. JATTI (Minister for Finance).—

(a) and (b) Reference is invited to page 31 of the Fina e Minister's Budget Speech.

(c) Does not arise in view of reply to (a) and (b) above.

Grant of Old Age Pension in the State.

*Q.—272. Sri B. NANJAPPA (Cubbonpet).—

Will the Government be pleased to state :—

(a) whether they would consider the grant of Old Age Pension in the State ; and if so, from when ;

(b) what is the quantum and what are the age limits proposed to be covered ?

A.—Sri B. D. JATTI (Minister for Finance).—

(a) and (b) Reference is invited to Page 31 of Finance Minister's Budget Speech.

Sri P. F. D'MELLOW.—As the greater and larger of beneficiaries of the scheme announced by the Hon. Finance Minister are likely to be individuals who are either illiterate or semi-literate, will the Government be pleased to consider making the rules and procedure for submitting applications as simple as possible particularly in the matter of production of proof of age ?

Sri B. D. JATTI.—The suggestion made by the Hon. Member will be taken into consideration and Government will do its level best to see that the rules are framed early and that they are brought into force as early as possible.

Sri B. NANJAPPA.—Will the Government consider the question of reducing the age limit from 70 to 60 ?

Sri B. D. JATTI.—We want to stick on to whatever has been announced.

Sri P. F. D'MELLOW.–In view of the fact that the quantum of relief intended to be sanctioned is very small, will the Government be pleased to consider the question of framing rules inviting voluntary agencies to come forward and admit these people with a view to helping them and avoiding the possibility of exploitation ?

Sri B. D. JATTI.—This supplementary consists of two parts. For the first part my answer is that looking to the financial position of this State, we have declared that Rs. 15 will be the pension and I am not in a position to say whether it is possible for the Government in the future to increase it from 15 to 16 or 20. For the second part, I would say that if there are voluntary agencies who have experience—I know the Hon. Member has better experience—we will take their advice and if they are going to be useful, we will accept them.

Sri B. NANJAPPA.—Will the Finance Minister tell me as to what the neighbouring States are giving to the old people ?

Sri B. D. JATTI.—There are 2 neighbouring States. In one State, it is 70 years and in another it is 60. We have accepted 70 because it suits us best.

Sri ANNARAO GANAMUKHI.—Do Government intend extending this concession to physically handicapped persons ?

Sri B. D. JATTI.—The word used in the budget speech is 'destitutes'. Those persons who cannot get any help from any of their relatives, come under the category of destitutes. We can define it precisely while framing the rules.

ಶ್ರೀ ಬಿ. ಎಲ್. ಗೌಡ.—ಸರಕಾರದವರು ಒಂದು ಎಣಿಕೆ ಮಾಡಿಸಿ ಎಷ್ಟು ಜನ ಈ ಯೋಜನೆಯ ಪ್ರಕಾರ ಸಹಾಯ ಹೊಂದುತ್ತಾರೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆಯೇ?

Sri B. D. JATTI.—For the first time in the history of this State, Government is making an announcement in this regard. We have to frame rules and call for applications. How can we know how many applications would come at this stage ?

Sri A. KRISHNA SHETTY.—Will the Government consider the question of providing shelters to the destitutes ?

Sri B. D. JATTI.—The announcement is only regarding payment of a pension of Rs. 15 ; nothing more, nothing less.

———

Construction of a Bridge across river Varada near Joladagudde in Chandragatte Hobli, Sorab Taluk.

*Q.—219. Sri V. S. LAKSHMIKANTHAPPA (Sagar).—

Will the Government be pleased to state :—

(a) the date of sanction of the bridge across the river Varada near Joladagudde in Chandragatte Hobli, Sorab Taluk ;

(b) the amount spent so far ;

(c) the probable time required to complete the construction of the same ?

A.—Sri G. B. SHANKAR RAO (Parliamentary Secretary to the Minister for Public Works).—

(a) July 1957.

(b) Rs. 67,843.

(c) About 2 years.

Mr. SPEAKER.—There is a small mistake for which I must apologise. The Member who put the question is Sri Lakshmikanthappa and not Sri Lakshmipathi.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಉತ್ತರವನ್ನು ಹೇಳುವಾಗ 67,843 ರೂಪಾಯಿ ಎಂದು ಹೇಳಿದ್ದೀರಿ. ಈ ಹಣದಿಂದ ಈ ಸೇತುವೆಯ ಕೆಲಸ ಏನಾದರೂ ಆಗಿದೆಯೇ? ಆಗತಕ್ಕದ್ದು ಉಪಯೋಗವಾಗಿದೆಯೇ ಎಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಬಿ. ಶಂಕರ ರಾವ್.—ಈ ಸೇತುವೆಯ ಕೆಲಸವನ್ನು ಪೂರೈಸಿಲ್ಲ. ಇದರ ಕೆಲಸ ಪ್ರಾರಂಭವಾದ ಮೇಲೆ ಫೌಂಡೇಷನ್ ಲೆವೆಲ್‌ನಲ್ಲಿ ಹಾರ್ಡ್ ರಾಕ್ ಸಿಕ್ಕಲಿಲ್ಲ ಎಂದು ಪುನಃ ಎಸ್ಟಿಮೇಟ್ ಮಾಡಿದ್ದರಿಂದ ಪೂರ್ತಿ ಕೆಲಸವಾಗಿಲ್ಲ. ಈ ಕೆಲಸಕ್ಕೆ 1957ನೇ ಇಸವಿಯಲ್ಲಿ ಜುಲೈ ತಿಂಗಳು ಫೌಂಡೇಷನ್ ಆಯಿತು, ಕೆಲಸ ಪ್ರಾರಂಭವಾದ ಮೇಲೆ ಫೌಂಡೇಷನ್ ಲೆವೆಲ್‌ನಲ್ಲಿ ಹಾರ್ಡ್ ರಾಕ್ ಸಿಕ್ಕದೇ ಇದ್ದುದರಿಂದ ಎಸ್ಟಿಮೇಟ್ ಮಾಡಿಫೈ ಮಾಡಬೇಕಾಗಿ ಬಂತು. ಇದಕ್ಕೆ ಸಿ. ಆರ್. ಎಫ್. ಅಲೋಕೇಷನ್‌ನಲ್ಲಿ ಹಣ ತೆಗೆದುಕೊಂಡದ್ದರಿಂದ ಪುನಃ ಕೇಂದ್ರ ಸರಕಾರದವರಿಗೆ ರಿವೈಸ್ ಮಾಡಿದ ಅಂದಾಜನ್ನು ಅವರ ಒಪ್ಪಿಗೆಗೆ ಕಳುಹಿಸಿದ್ದೇವೆ, ಆದ್ದರಿಂದ ನಿಧಾನವಾಗಿದೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—7 ವರ್ಷಗಳಿಂದ ಈ ಕೆಲಸಕ್ಕೆ ಫೌಂಡೇಷನ್ ಸಿಕ್ಕಲಿಲ್ಲ ಎಂದು ನಿಧಾನವಾಗಿದೆಯೇ? ಅಥವಾ ಇಲಾಖೆಯವರು ಬಹಳ ನಿರ್ಲಕ್ಷಿಸಿರುವುದರಿಂದ ಸರಕಾರದವರೇ ಇದರ ಬಗ್ಗೆ ನಿರ್ದೇಶನ ಕೊಟ್ಟು ಇದನ್ನು ನಿಲ್ಲಿಸಲಾಗಿದೆಯೇ?

ಶ್ರೀ ಜಿ. ಬಿ. ಶಂಕರ ರಾವ್.—ಆಗಲೇ ಉತ್ತರ ಹೇಳಿದ್ದೇನೆ. ರಿವೈಸ್ಡ್ ಎಸ್ಟಿಮೇಟ್‌ನ್ನು ಕೇಂದ್ರ ಸರಕಾದವರ ಒಪ್ಪಿಗೆಗೆ ಕಳುಹಿಸಿರುವುದರಿಂದ ಅದನ್ನು ನಿಲ್ಲಿಸಲಾಗಿದೆ.

ಶ್ರೀ ಬಿ. ಚನ್ನಬೈರೇಗೌಡ.—ಹಾರ್ಡ್ ರಾಕ್ ಎಲ್ಲಿ ಸಿಕ್ಕುತ್ತದೆ ಎಂಬುದನ್ನು ಟೆಸ್ಟ್ ಮಾಡಿ ಎಸ್ಟಿಮೇಟ್ ಮಾಡುತ್ತಾರೆಯೇ ಅಥವಾ ಮನಬಂದಂತೆ ಎಸ್ಟಿಮೇಟ್ ಮಾಡುತ್ತಾರೆಯೇ?

ಶ್ರೀ ಜಿ. ಬಿ. ಶಂಕರ ರಾವ್.—ಹಾಗೆ ಮಾಡುವುದಿಲ್ಲ. ಮೊದಲು 22 ಫುಟ್ ಕೆಳಗೆ ಹಾರ್ಡ್ ರಾಕ್ ಸಿಕ್ಕುತ್ತದೆ ಎಂದು ಅಂದಾಜು ಮಾಡಲಾಗಿತ್ತು, ಕೆಲಸ ಪ್ರಾರಂಭವಾದ ಮೇಲೆ 22 ಅಡಿ ಕೆಳಗೆ ಹಾರ್ಡ್ ಸ್ಟ್ರಾಟಾ ಸಿಕ್ಕುವುದಿಲ್ಲ, 70 ಅಡಿ ಕೆಳಗೆ ಸಿಕ್ಕುತ್ತದೆ ಎಂದು ಗೊತ್ತಾಯಿತು, ಆದ್ದರಿಂದ ಎಸ್ಟಿಮೇಟ್‌ನ್ನು ರಿವೈಸ್ ಮಾಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಮಂಜೂರಾತಿ ಕೊಡುವಾಗ ಎಸ್ಟಿಮೇಟ್ ಎಷ್ಟಾಗಿತ್ತು? ರಿವೈಸ್ ಆದನಂತರ ಎಷ್ಟಾಗಿದೆ?

ಶ್ರೀ ಜಿ. ಬಿ. ಶಂಕರರಾವ್.—ಒರಿಜಿನಲ್ ಎಸ್ಟಿಮೇಟ್ 3 ಲಕ್ಷ ಚಿಲ್ಲರೆ ಆಗಿತ್ತು. ರಿವೈಸ್ಡ್ ಎಸ್ಟಿಮೇಟ್ 6 ಲಕ್ಷದ 80 ಸಾವಿರ ರೂಪಾಯಿ ಆಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸೇತುವೆ ಅಲ್ಲದೇ, ವರದಾ ನದಿಗೆ ಇನ್ನೂ ಎಷ್ಟು ಸೇತುವೆಗಳನ್ನು ಕಟ್ಟಲಾಗಿದೆ?

Sri G. B. SHANKAR RAO.—I cannot readily answer this question.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಈ ಸೇತುವೆಗೆ, ಮೊದಲಿನ, ಕಾಂಟ್ರ್ಯಾಕ್ಟ್‌ದಾರರಿಗೆ 67,843 ರೂಪಾಯಿಗಳನ್ನು ಕೊಟ್ಟಿದ್ದೀರಿ. ಅವರಿಗೆ ಇನ್ನೂ ಕೊಡತಕ್ಕ ಹಣ ಕೊಡದೇ ಮುಂದೆ ಪುನಃ ಕೆಲಸ ಪ್ರಾರಂಭಮಾಡುವುದಕ್ಕಾಗಲಿ, ಟೆಂಡರ್ ಕರೆಯುವುದಕ್ಕಾಗಲಿ ತೊಂದರೆಯಾಗಿದೆ. ಅಷ್ಟಕ್ಕೋಸ್ಕರ ಕೆಲಸ ನಿಂತಿದೆ ಎಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಬಿ. ಶಂಕರ ರಾವ್.—ಹಾಗೇನೂ ಆಗಿಲ್ಲ ಎಂಬುದನ್ನು ವಿಶದಪಡಿಸಿದ್ದೇನೆ. ಕಂಟ್ರಾಕ್ಟರು ಎಷ್ಟು ಹಣವನ್ನು ಖರ್ಚು ಮಾಡಿದ್ದಾರೋ ಅಷ್ಟು ಹಣವನ್ನು ಕೊಟ್ಟಿದೆ. ಕಂಟ್ರಾಕ್ಟರರು 87 ಸಾವಿರ ರೂಪಾಯಿ ಮೆಟೀರಿಯಲ್ಸ್ ಜಮಾ ಮಾಡಿದ್ದಾರೆ. ಒಟ್ಟು 67,843 ರೂಪಾಯಿಗಳನ್ನು ಕೊಟ್ಟು ಆಗಿದೆ.

ಶ್ರೀ ಟಿ. ಜಿ. ಸತ್ಯನಾರಾಯಣ.—ಒಂದು ಸಲ ಪಿ. ಡಬ್ಲ್ಯು. ಡಿ. ಅವರು ಎಸ್ಟಿಮೇಟ್ ಮಾಡಿ ಕೆಲಸ ಪ್ರಾರಂಭ ಆಗುವ ಕಾಲಕ್ಕೂ ಕೆಲಸ ಪೂರ್ತಿಯಾಗುವ ಹೊತ್ತಿಗೂ ಶೇಕಡ 20–25 ರಷ್ಟು ರೇಟ್ ಹೆಚ್ಚಾಗಿರುತ್ತದೆ, ಅದಕ್ಕೆ ಕಾರಣವೇನು?

ಶ್ರೀ ಜಿ. ಬಿ. ಶಂಕರ ರಾವ್.—ರೇಟ್ಸ್ ಹೆಚ್ಚಾದಂತೆ ಎಸ್ಟಿಮೇಟ್ ಕೂಡ ಹೆಚ್ಚು ಕಡಮೆ ಆಗುತ್ತದೆ.

ಶ್ರೀ ಬಿ. ಚನ್ನಬೈರೇಗೌಡ.—ಒರಿಜಿನಲ್ ಎಸ್ಟಿಮೇಟು 3 ಲಕ್ಷರೂಪಾಯಿಗಳಿಗೆ ಆಗಿದೆ, ರಿವೈಸ್ಡ್ ಎಸ್ಟಿಮೇಟು 3 ಲಕ್ಷ ರೂಪಾಯಿ ಆಗಿದೆ ಒಟ್ಟು 6 ಲಕ್ಷ ರೂಪಾಯಿ ಆಯಿತು ಎಂದು ಹೇಳಿದರು. ಇದಕ್ಕೆ ಕಾರಣವೇನು ಎಂಬುದರ ತನಿಖೆ ನಡೆಸಲಾಗಿದೆಯೇ ಎಂಬುದನ್ನು ಹೇಳುತ್ತೀರಾ?

ಅಧ್ಯಕ್ಷರು.—ಬಂಡೆ ಕಲ್ಲು ಎಣಿಸಿದ್ದು ಸಿಕ್ಕಲಿಲ್ಲ ಎಂದು ಉತ್ತರ ಹೇಳಿದರಲ್ಲ?

1-P.M.

ಶ್ರೀ ಟಿ. ಜಿ. ಸತ್ಯನಾರಾಯಣ.—ಪ್ರತಿಯೊಂದು ಸಲವೂ ಅಂದಾಜು ಬೆಲೆ ಹೆಚ್ಚಾಗುವುದಕ್ಕೆ ಕಾರಣವೇನು ?

ಶ್ರೀ ಜಿ. ಬಿ. ಶಂಕರರಾವ್.—ಪ್ರತಿಯೊಂದು ಸಲವೂ ಹಾಗಾಗುವುದಿಲ್ಲ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಕೇಂದ್ರ ಸರ್ಕಾರದಿಂದ ಎಷ್ಟು ದಿವಸಗಳಲ್ಲಿ ಪರವಾನಗೆ ದೊರೆಯಬಹುದು ? ಎಷ್ಟು ದಿವಸಗಳಲ್ಲಿ ಈ ಕೆಲಸವನ್ನು ಮುಗಿಸಲು ಸಾಧ್ಯ ಎಂಬುದನ್ನು ಖಚಿತವಾಗಿ ಹೇಳಬಲ್ಲಿರಾ ?

ಶ್ರೀ ಜಿ. ಬಿ. ಶಂಕರರಾವ್.—ಕೇಂದ್ರಸರ್ಕಾರದಿಂದ ಇಷ್ಟೇ ದಿವಸಗಳಲ್ಲಿ ಅನುಮತಿ ದೊರೆಯುತ್ತದೆಂದು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಕೆಲಸ ಪ್ರಾರಂಭವಾದ ಮೇಲೆ ಎರಡು ವರ್ಷಗಳಲ್ಲಿ ಮುಗಿಸಬಹುದು ಎಂದು ಭರವಸೆ ಕೊಡಬಲ್ಲೆ.

Damage to the Causeway between Dhoopdal and Konnur Villages in Gokak Taluk.

*Q.—269. Sri R. S. PATIL (Ramdurg).—

Will the Government be pleased to state :—

(a) whether it is a fact that the causeway between Dhoopdal and Konnur Villages in Gokak Taluk on Ghataprabha River has been badly damaged ;

(b) whether they have received any representations in the matter from the people of that area ; and if so, what are the steps taken in that regard ;

(c) is it due to the negligence of the Gokak Mills who undertook to raise it for their use ;

(d) whether the Government or the Ex. D.L.B. administration claimed any compensation from the Mill ?

A.—Sri G. B. SHANKAR RAO (Parliamentary Secretary to the Minister for Public Works).—

(a) Yes.

(b) Yes, the causeway with its approaches has been ordered to be taken over to P. W. D. for its regular maintenance and special repairs.

(c) It has not been established whether the damages occurred due to the negligence of the Mill authorities or lack of proper supervision of D.L.B. or floods.

(d) No.

ಶ್ರೀ ಆರ್. ಎಸ್. ಪಾಟೀಲ್.—ಈ ಒಡ್ಡುದಾರಿಯನ್ನು ಡಿ.ಎಲ್.ಬಿ. ನವರು ಗಿರಣಿಯವರ ಮೇಲ್ವಿಚಾರಣೆಗೆ ವಹಿಸಿದ್ದರೆ ?

ಶ್ರೀ ಜಿ. ಬಿ. ಶಂಕರರಾವ್.—ಮೇಲ್ವಿಚಾರಣೆ ವಹಿಸಿರಲಿಲ್ಲ, ಮಿಲ್ಲಿನವರು ರೈಸ್ ಮಾಡುವುದಕ್ಕೆ ಮಾತ್ರ ಡಿ.ಎಲ್.ಬಿ. ನವರು ಅನುಮತಿ ನೀಡಿದ್ದರು.

Sri M. N. NAGHNOOR.—Has any thorough enquiry been made to know the person who is responsible for causing this damage ?

Sri G. B. SHANKAR RAO.—No enquiry could be instituted because immediately after the work was completed, it was damaged by floods.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಲಂಬಾಣಿ ಜನರಿಗೆ ಕೊಟ್ಟಿದ್ದ ಜಮೀನನ್ನು ಮಂಜೂರು ಮಾಡಿ ಆ ಮೇಲೆ ಅವರು ಎವಿಕ್ಟ್ ಮಾಡಲು ಕಾರಣವೇನು ?

Sri B. D. JATTI.—Because the inam village was taken over by Government as per the Bill passed and which became an Act.

ಶ್ರೀ ಬಿ. ಎಲ್. ಗೌಡ.—ಇನಾಂ ರದ್ದಿಯಾತಿ ಆಕ್ಟ್ ಪ್ರಕಾರ ಗೇಣಿದಾರರನ್ನು ಖಾಯಂಮಾಡಬೇಕು, ಅವರನ್ನು ಬಿಡಿಸಬಾರದು ಎಂದೇ ಇದೆ ಅದನ್ನೇಕೆ ಈ ಸಂಬಂಧದಲ್ಲಿ ಅನ್ವಯಿಸಲಿಲ್ಲ ?

ಶ್ರೀ ಬಿ. ಡಿ. ಜತ್ತಿ.—ಅವರು ಲಾಯರಾಗಿದ್ದರೆ ಅವರಿಗೇ ಆ ವಿಚಾರ ಗೊತ್ತಿರಬೇಕು, ಅವರು ಕಾನೂನನ್ನು ಮರೆತಿರಬೇಕು.

Sri GANJI VEERAPPA.—In the case of landless persons, if they have cultivated the land for more than three years, the title is cofirmed. Why not do it in this case also ?

Sri B. D. JATTI.—The question of three years does not arise here.

ಶ್ರೀ ಟಿ. ಜಿ. ಸತ್ಯನಾರಾಯಣ.—ಲಂಬಾಣಿ ಜನರ ವಿಚಾರವಾದ್ದರಿಂದ ಮತ್ತೆ ಲೋಪವನ್ನು ಸರಿಪಡಿಸಿ ಕೊಡಲು ಬರುವುದಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಅದು ಇಲ್ಲಿ ಬರುವುದಿಲ್ಲ.

ಶ್ರೀ ಬಿ. ಎಲ್. ಗೌಡ.—ಇನಾಂ ರದ್ದಿಯಾತಿ ಕಾನೂನಿನಲ್ಲಿ ಗೇಣಿದಾರರಿಗೆ, ಗುತ್ತಿಗೆದಾರರಿಗೆ, ಅನುಭವ ಇರುವವರಿಗೆ ಕೊಡಬೇಕೆಂದು ಕಾಯಿದೆ ಇರುವುದನ್ನು ಏಕೆ ಅನ್ವಯಿಸಲಿಲ್ಲ ?

Sri B. D. JATTI.—Sir, under the Inam Abolition Act, even the Tahsildar was not legally authorised to grant land. He committed a mistake and it was a *bona fide* mistake and so, it was rectified later.

ಶ್ರೀ ಎ. ಕೃಷ್ಣಶೆಟ್ಟಿ.—ಯಾವ ರೂಲ್ಸ್ ಪ್ರಕಾರ ಅವರಿಗೆ ಜಮೀನನ್ನು ಕೊಡಲಾಯಿತು ? ಹೆಚ್ಚು ಆಹಾರ ಬೆಳೆಯುವ ಯೋಜನೆಯ ಪ್ರಕಾರ ಕೊಡಲಾಯಿತೆ ಅಥವಾ ಬೇರೆ ರೂಲ್ಸ್ ಪ್ರಕಾರ ಕೊಡಲಾಯಿತೆ ?

ಶ್ರೀ ಬಿ. ಡಿ. ಜತ್ತಿ.—ಎಲ್ಲರಿಗೂ ಜಮೀನು ಹಂಚುವಂತೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ.

Sri R. N. LAKSHMIPATHY.—Sir, you accept that it was a *bona fide* mistake. Even now is it not morally binding on the Government to give that land to those people ?

Sri B. D. JATTI.—Moral questions are not discussed in courts and Government. They are discussed elsewhere.

Sri GANJI VEERAPPA.—Do Government think of regularising the grant ?

Sri B. D. JATTI.—That is a different question.

ಶ್ರೀ ಭೀಮಣ್ಣ.—ಈ ಜಮೀನು ಯಾವ ತರಹ ಇನಾಂಗೆ ಸಂಬಂಧಪಟ್ಟಿತ್ತು ಎಂಬುದನ್ನು ಹೇಳುತ್ತೀರಾ ?

Sri B. D. JATTI.—I do not know the nature of the inam ; but it was in an inam village.

ಶ್ರೀ ಬಿ. ಎಲ್. ಗೌಡ.—ನನ್ನ ಪ್ರಶ್ನೆ ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಇನಾಂ ರದ್ದಿಯಾತಿ ಆಕ್ಟ್ ಪ್ರಕಾರ ಗುತ್ತಿಗೆದಾರರಿಗೆ ಖಾಯಂ ಮಾಡುವುದಕ್ಕೆ ಅವಕಾಶವಿದೆಯೋ ಅಥವಾ ಇಲ್ಲವೇ ?

Mr. SPEAKER.—It is not a question of testing the knowledge of the Minister at the moment. It was part of an inam village and the land has been granted under the normal rules. So, it was cancelled.

ಶ್ರೀ ಭೀಮಣ್ಣ.—ಹಾಗಾದರೆ ಇನಾಂ ಜಮೀನನ್ನು ಹೇಗೆ ಕೊಟ್ಟರು ?

ಅಧ್ಯಕ್ಷರು.—ಕಾನೂನಿನ ಪ್ರಕಾರ ಕೊಡಬಾರದಾಗಿತ್ತು, ಸರಿಯಾಗಿ ನೋಡದೆ ಕೊಟ್ಟಿದ್ದರಿಂದ ಮತ್ತೆ ವಾಪಸು ಪಡೆಯಬೇಕಾಯಿತು.

Sri D. PARAMESHWARAPPA.—May I know whether the rules framed under the Tenancy Act apply or not in the inam villages ?

Sri S. M. KRISHNA.—Did the mill authorities obtain permission of Government to raise this causeway ?

Sri G. B. SHANKAR RAO.—This causeway was under the management and so there is no question of permission.

ಶ್ರೀ ಆರ್. ಎಸ್. ಪಾಟೀಲ್.—ಮಂತ್ರಿಗಳೇ ಖುದ್ದಾಗಿ ಸ್ಥಳಕ್ಕೆ ಹೋಗಿ ಧಕ್ಕೆಯಾಗಿರುವುದನ್ನು ಪ್ರತ್ಯಕ್ಷವಾಗಿ ಪರಿಶೀಲಿಸಿದರೇ ?

ಶ್ರೀ ಜಿ. ಬಿ. ಶಂಕರರಾವ್.—ಡ್ಯಾಮೇಜ್ ಆಗಿದೆಯೆಂದು ತಿಳಿದಮೇಲೆ ಸಾಧ್ಯವಾದಷ್ಟು ಬೇಗ ಅದನ್ನು ಸರಿಪಡಿಸಬೇಕೆಂದು ಅಂದಾಜು ಮಾಡಿಸಿ ಅದಕ್ಕೆ ಮಂಜೂರಾತಿಯನ್ನು ನೀಡಿದ್ದೇವೆ.

Grant of land for Cultivation to the people of Lambane Community in Hullikatte Village of Davangere Taluk.

*Q.—318. Sri M. N. KRISHNA SINGH (Jagalur).—

Will the Government be pleased to state :—

(a) whether it is a fact that lands have been granted for cultivation to the people of Lambane community in Hüllikatte village, Davangere Taluk, in the year 1959 ;

(b) if so, whether they are aware that T.T. fines are being collected from these people ;

(c) whether they are aware that the local officers are compelling these people to return saguvali chits ;

(d) if so, the action they intend to take in this behalf ;

(e) whether they intend to issue suitable orders to refund the amount collected by way of T.T. from these people ?

A.—Sri B. D. JATTI (Minister for Finance) [on behalf of SRI M. V. KRISHNAPPA (Minister for Revenue)].—

(a) Lands were granted in Hullikatte village to the members of the Lambane community in the year 1956-57 (and not in the year 1959) but these grants were subsequently cancelled in 1957.

(b) Yes.

(c) Yes.

(d) No action need be taken against the local officers as what they are doing is correct in the light of the fact that the grants made have been cancelled.

(e) No.

ಶ್ರೀ ಎಂ. ಎನ್. ಕೃಷ್ಣ ಸಿಂಗ್.—ಮಂಜೂರು ಮಾಡಿದ್ದಕ್ಕೂ ವಜಾವಾಡಿದ್ದಕ್ಕೂ ಮಧ್ಯೇ ಎಷ್ಟು ಕಾಲ ಉಳಿದಿತ್ತು ?

Sri B. D. JATTI.—Sir, originally it was an inam village. When inams were abolished, it was brought to the notice of Government that the Tahsildar has granted some land and he had committed a *bona fide* mistake. So, it was rectified by an order of the Governor.

ಶ್ರೀ ಎಂ. ಎನ್. ಕೃಷ್ಣ ಸಿಂಗ್.—ಯಾವ ತಾರೀಖಿನಲ್ಲಿ ವಜಾ ಮಾಡಲಾಯಿತು ?

Sri B. D. JATTI.—18th September 1957.

Sri B. D. JATTI.—That question does not arise here. It was a *bona fide* mistake committed by the Tahsildar.

Sri D. PARAMESHWARAPPA.—The idea in asking this question is this. The Finance Minister replied that all those people who were in possession of land could be evicted there.

Mr. SPEAKER.—The question of eviction is wrongly put in a wrong direction. It was granted thinking that it was a Government land. That was not Government land but it was an inam land. Therefore, it was cancelled. The Member must know the details and not put hypothetical questions.

Sri N. O. SAMAJI.—(Marathi)

Sri B. D. JATTI.—Sir, his question is whether the officer who granted the land was entitled to make such grant or not. He was not entitled to grant the land ; it was a mistake legally. After the abolition of the inam lands, they had no right to ask for the lands again. But, if the Government regrant, there is no objection ; there is no bar. No question has come up to the Government and we have not considered it.

Supply of Refrigerators to Ministers

*Q.—398. Sri ANNA RAO GANAMUKHI (Afzalpur).—

Will the Government be pleased to state:—

(*a*) whether all the Ministers have been supplied with refrigerators ;

(*b*) if so, the number, their price and the firm that supplied them ;

(*c*) the Department which initiated the proposal ?

A.—Sri VEERENDRA PATIL (Minister for Public Works).—

(*a*) No.

(*b*) Out of 21 refrigerators purchased, 20 were purchased from M/s. Refrigerator and Home Appliances (Mysore) Agencies, Bangalore, at Rs. 1,98,205 each, and one was purchased from M/s. Prospect House, Bangalore, at a cost of Rs. 2,518-75.

(*c*) General Administration Department.

Sri ANNA RAO GANAMUKHI.—May I know how many Ministers have been supplied with Refrigerators ,kindly give their names, and who are those Ministers who have not been supplied with Refrigerators ?

Mr. SPEAKER.—What is the importance in knowing the names ?

† Sri VEERENDRA PATIL.—I have got a lengthy list. If the Hon'ble Member so desires, I am prepared to place it on the Table of the House.

---

†Indicates that the remarks or speeches have not been revised by the member concerned.

Mr. SPEAKER.—The list may be placed on the Table of the House.

Sri ANNA RAO GANAMUKHI.—May I know whether at any time previously Refrigerators were purchased in the previous Ministry for Ministers' use?

Mr. SPEAKER.—The Hon'ble Member may kindly see the rules; there are definite rules which have been in force for a long time. It is a matter of discretion. I am entitled to have the Refrigerator, but I have not taken. That does not mean that there are no rules.

Sri ANNA RAO GANAMUKHI.—I want to know whether the previous Ministry also used the Refrigerators?

Sri VEERENDRA PATIL.—If the purpose is to know...

Mr. SPEAKER.—Why does the Minister doubt the purpose? He is entitled to ask for the individual circumstances and to know whether he was in the Cabinet or not.

Sri VEERENDRA PATIL.—I could not correctly understand the question.

Mr. SPEAKER.—Barring himself, have others also been supplied with such Refrigerators.

Sri VEERENDRA PATIL.—We have purchased only 21 new Refrigerators. We have supplied some old Refrigerators also to our Ministers and the Hon'ble Member wants to know whether the Ministers in the old regime were also supplied with the Refrigerators. I do not have the details here, I can tell the House that we have supplied one Refrigerator to the Minister for Education and it is an old Refrigerator which has been continued. We have supplied one Refrigerator to the Minister for Home. It is also an old Refrigerator we have continued and it was at the residence of the ex-Chief Minister or the then Chief Minister.

ಶ್ರೀ ಎಸ್. ಎಂ. ಕೃಷ್ಣ.—ಮೈಸೂರು ಸರಕಾರದ ವಶದಲ್ಲಿ ಎಷ್ಟು ರಿಫ್ರಿಜರೇಟರುಗಳು ಇವೆ, ಸ್ವಾಮೀ?

Mr. SPEAKER.—How does it arise? All Refrigerators belonging to the Government need not necessarily be in the houses of the Ministers. It can be in a Pravasi Mandir, in a Guest House and so many other places.

ಶ್ರೀ ಎಸ್. ಎಂ. ಕೃಷ್ಣ.— ಇಲ್ಲಿ ಹೇಳಿರುವ 21 ರಿಫ್ರಜರೇಟರುಗಳನ್ನು ಯಾವ ಏಜನ್ಸಿಯ ಮೂಲಕ ಕೊಂಡುಕೊಂಡಿದ್ದೀರಿ?

ಅಧ್ಯಕ್ಷರು.—ಉತ್ತರದಲ್ಲೇ ಹೇಳಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಮಂತ್ರಿಗಳಿಗೆ ಒದಗಿಸಿರತಕ್ಕ ಈ ಶೀತಲ ಯಂತ್ರಗಳನ್ನು ಅವರುಗಳು ಹೊರಬಂದಮೇಲೆ ಅವರ ಮನೆಗಳಿಗೇ ಕೊಟ್ಟುಬಿಡುತ್ತೀರಾ?

(ನಗು)

Mr. SPEAKER.—It is disallowed.

ಶ್ರೀ ಬಿ. ಎಲ್. ಗೌಡ.—ಒಂದಕ್ಕಿಂತ ಹೆಚ್ಚಿಗೆ ರಿಫ್ರಿಜರೇಟರುಗಳನ್ನು ಎಷ್ಟು ಜನ ಮಂತ್ರಿಗಳಿಗೆ ಒದಗಿಸಿದ್ದೀರಿ?

Mr. SPEAKER.—Is he aware of any instance? Under the rules they are entitled to one and one is given.

Sri GANGADHAR NAMOSHI.—May I know the dates as to when these Refrigerators were supplied?

Mr. SPEAKER.—What is the importance of the dates ?

Sri GANGADHAR NAMOSHI.—They are talking so much about the emergency. How can they spend so much amount on the purchase of Refrigerators during the emergency ?

Sri VEERENDRA PATIL.—I do not know the exact dates. However, I may say that they were purchased before the emergency because we had ordered the purchase on 5th July 1962.

ಶ್ರೀ ಎ. ಕೃಷ್ಣ ಶೆಟ್ಟಿ.—ಉತ್ತರದಲ್ಲಿ ಇದರ ಬೆಲೆಯು ಬಗ್ಗೆ 1,982—05 ಹಾಗೂ ಒಂದಕ್ಕೆ 2,518—75 ಎಂದು ಇಷ್ಟು ವ್ಯತ್ಯಾಸ ಬರಲಿಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಕಂಪನಿಗಳು ಬೇರೆ ಬೇರೆಯಾಗಿರುವುದರಿಂದ 20 ರೆಫ್ರಿಜರೇಟರುಗಳು ಅಲ್ವಿನ್ ಕಂಪನಿಗೆ ಸೇರಿದವು ಮತ್ತು ಇನ್ನೊಂದು ಮತ್ತೊಂದು ಕಂಪನಿಯ ಮೂಲಕ ವ್ಯಾಪಾರ ಮಾಡಿದುದು.

ಶ್ರೀ ಎಸ್. ಎಂ. ಕೃಷ್ಣ.—ಬೇಸಿಗೆ ಕಾಲದಲ್ಲಿ ಮಂತ್ರಿಗಳನ್ನು ತಂಪಾಗಿಡಬೇಕೆಂದು ಮತ್ತು ಅವರ ಮನೆಗಳಲ್ಲಿ ತಂಪಾದ ಜೀವನ ನಡೆಸುವಂತೆ ಸರಕಾರದ ಅಧೀನದಲ್ಲಿರುವ ಕಟ್ಟಡಗಳಲ್ಲಿ ಇದನ್ನು ಇಡಲು ಆಲೋಚನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—21 ರೆಫ್ರಿಜರೇಟರುಗಳನ್ನು ಹಿಂದೆ ಸಪ್ಲೈ ಮಾಡಿದ್ದಾಗ ನಾಲ್ಕು ಜನ ಮಂತ್ರಿಗಳು ಹಾಗೂ ಡೆಪ್ಯೂಟಿ ಮಂತ್ರಿಗಳು ನಮಗೆ ಬೇಕಾಗಿಲ್ಲ ಎಂದು ಅವರು ಅದನ್ನು ತಾವಾಗಿಯೇ ಸರೆಂಡರು ಮಾಡಿದ್ದಾರೆ. ಅದನ್ನು ಈಗಾಗಲೇ ಬೇರೆ ಕಡೆಗೆ ಕೊಟ್ಟಿದ್ದಾರೆ.

Sri S. SIVAPPA.—May I know how many Ministers have not got Refrigerators to-day ?

Sri VEERENDRA PATIL.—I have already said that I will place the list on the Table of the House.

Sri S. SIVAPPA.—In view of the fact that the Ministers should have protected foods, will you think of supplying Refrigerators to all the Ministers ?

Mr. SPEAKER.—It is disallowed.

ಶ್ರೀ ಎನ್. ಬಿ. ಸಾಮಾಜಿ.—ಮರಾಠಿ

(ಉತ್ತರವಿಲ್ಲ)

ಶ್ರೀ ಗಂಗಾಧರ ನಾಮೋಷಿ.—ಮಂತ್ರಿಗಳಿಗೆ ಸಿಕ್ಕತಕ್ಕ ಎಲ್ಲಾ ಸೌಲಭ್ಯಗಳೂ ಈ ಸಭಾಧ್ಯಕ್ಷರಿಗೂ ಸಿಕ್ಕಲೇಬೇಕು. ಆದ್ದರಿಂದ ನಮ್ಮ ಅಧ್ಯಕ್ಷರಿಗೆ ಸಿಕ್ಕಿದೆಯೋ ಇಲ್ಲವೋ ತಿಳಿಸಬೇಕು ?

Mr. SPEAKER.—It is disallowed.

ಶ್ರೀ ಎಸ್. ಗೋಪಾಲಗೌಡ.—ಈ ಹಿಂದೆ ನಾಲ್ಕಾರು ಮಂತ್ರಿಮಂಡಲಗಳು ಹೋದುವು ಅವು ಹಾಗೆ ಹೋಗುವಾಗ ಈ ಸಾಮಾನುಗಳೂ ಬೇರೆ ಬೇರೆ ಕಡೆಗೆ ಹೋಗಿರಬಹುದು. ನನಗೆ ಬಂದಿರತಕ್ಕ ವರದಿಯ ಪ್ರಕಾರ ಹಿಂದೆ ಇದ್ದ ಮಂತ್ರಿಮಂಡಲಗಳು ಹೋಗುವ ಗಲಾಟೆಯಲ್ಲಿ ಸರ್ಕಾರದ ಹಣದಿಂದ ಕೊಂಡಿದ್ದ ರೆಫ್ರಿಜರೇಟರ್ಸ್, ರೇಡಿಯೋ, ಮಂಚ ಇತ್ಯಾದಿಗಳು ಆ ಮಂತ್ರಿಗಳ ಜೊತೆಯಲ್ಲೇ ಹೋಗಿಬಿಟ್ಟವು ಎಂದು......

ಅಧ್ಯಕ್ಷರು.—ಮಾನ್ಯ ಸದಸ್ಯರು ಯಾವ ಆಧಾರವನ್ನೂ ಕೊಡದೆ, ಹೆಸರನ್ನೂ ತಿಳಿಸದೆ ಹೀಗೆ ಇನ್‌ಸಿನ್ಯುಯೇಷನ್ ಮಾಡುತ್ತಾ ಹೊರಟರೆ ಅದಕ್ಕೆ ಉತ್ತರ ಕೊಡಲು ಅವಕಾಶವಿಲ್ಲ. Is he prepared to substantiate by pointing out the name and give it in writing? I will not allow such insinuations to be made unless the Hon'ble Member is prepared to substantiate the same.

Raising the Age limit of Retirement from 55 Years to 58 Years.

*Q.—273. Sri B. NANJAPPA (Cubbonpet).—

Will the Government be pleased to state :—

whether they would take steps to raise age limit of retirement in Mysore Government service from 55 years to 58 years as has been done in the case of Central Government employees ?

A.—Sri S. NIJALINGAPPA (Chief Minister).—

No.

ಶ್ರೀ ಬಿ. ನಂಜಪ್ಪ.—ಈ ಪ್ರಶ್ನೆಯನ್ನು ಹಿಂದೆಯೇ ಮುಖ್ಯಮಂತ್ರಿಗಳು ಕನ್‌ಸಿಡರ್ ಮಾಡುವುದಾಗಿ ತಿಳಿಸಿದ್ದರಲ್ಲವೇ ?

† ಎಸ್. ನಿಜಲಿಂಗಪ್ಪ.—ಹೌದು. ಈಗ ಅಲ್ಲರ್ಲೇ ಎಲ್ಲಾ ರಾಜ್ಯ ಸರ್ಕಾರಗಳೂ ಮಾಡುತ್ತಿವೆ. ಆದ್ದರಿಂದ ನಾವೂ ಮಾಡತಕ್ಕ ಕಾಲ ಬರಬಹುದು. ಬಂದಾಗ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಸಂಜೀವನಾಥ ಐಕ್ಳ.—ಕೆಲವು ಮಂದಿಗೆ ರಿಟೈರ್ ಆದಮೇಲೆ ಮತ್ತೆ ರೀ-ಎಂಪ್ಲಾಯಮೆಂಟ್ ಕೊಟ್ಟು, ಇನ್ನು ಕೆಲವರಿಗೆ ಕೊಡದಿರುವುದರಿಂದ, ಈ ವಯೋಮಿತಿಯನ್ನು 58ಕ್ಕೆ ಏಕೆ ಏರಿಸಬಾರದು ? After 55 some of these officers are taken on a contract basis. Taking officers on contract after 55 is what I call a back-door method.

Mr. SPEAKER.—The question is not allowed.

ಶ್ರೀ ಆರ್. ಎನ್. ಲಕ್ಷ್ಮೀಪತಿ.—55 ವರ್ಷಕ್ಕೇ ಇವರಷ್ಟು ಬುದ್ಧಿಮಂಕರಾಗುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದ ಒಂದು ನಿಯಮವನ್ನು ಬದಲಾವಣೆ ಮಾಡಬೇಕಾದರೆ ಸರ್ಕಾರ ಅನೇಕ ವಿಚಾರಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಅದನ್ನು ಮಾಡುತ್ತಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ರೀ-ಎಂಪ್ಲಾಯ್ ಮಾಡಿಕೊಳ್ಳುವ ಬದಲು 58ರ ವರೆಗೆ ಈ ವಯೋಮಿತಿಯನ್ನೇಕೆ ಏರಿಸಬಾರದು ?

Mr. SPEAKER.—These two points must be kept apart. One is giving of extensions and the other is re-entertainment after retirement.

Sri SIDDIAH KASIMAT.—Already some people about to retire are given extensions. I, thefore, say that once for all, let them be continued up to 58 years.

Sri S. M. KRISHNA.—The suggestion was made by the Central Government since the emergency was promulgated in this country. We were under the impression that the State Government had taken a decision not to raise the age limit of State employees. Is there any change in the attitude of the Government with reference to this particular question ?

Sri S. NIJALINGAPPA.—No change.

Allocation of Cost of Tungabhadra Right Bank Low Level Canal.

*Q.—399. Sri ANNA RAO GANAMUKHI (Afzalpur).—

Will the Government be pleased to state :—

(*a*) whether the Andhra Pradesh Government have recently again raised the question of allocation of cost of Tungabhadra Right Bank

Low Level Canal on the basis of quantity of water used by the respective States;

(b) whether they are aware that the stand taken by the Mysore Government all along on cusec mile basis is the only scientific and equitable basis;

(c) whether it is a fact that by agreeing to the Andhra Pradesh Government's unscientific and unequitable basis, Mysore State will incur an approximate loss of one crore?

A.—Sri VEERENDRA PATIL (Minister for Public Works) [on behalf of SRI S. NIJALINGAPPA (Chief Minister)].—

(a) Yes.

(b) Yes.

(c) Yes. If Andhra proposal is accepted it would mean a loss of more than a crore of rupees.

Sri ANNA RAO GANAMUKHI.—May I know, Sir, whether at any time previously the Andhra Government had raised this question?

†Sri VEERENDRA PATIL.—Yes, Sir.

Sri ANNA RAO GANAMUKHI.—What happened to it?

Sri VEERENDRA PATIL.—These details are not available with me

Sri ANNA RAO GANAMUKHI.—May I know whether the selfsame demand was raised by the Andhra Government and it was negatived by the previous Ministry?

Sri VEERENDRA PATIL.—So far we have not accepted their proposal. They have been pressing for that from the very beginning.

Sri ANNA RAO GANAMUKHI.—May I know whether the Andhra Government has recently addressed a letter to the Chief Minister of Mysore to fix a date to discuss this question along with other questions like handing over the control over the headworks of RAJOLIBANDA and others?

Sri VEERENDRA PATIL.—I do not have that information with me.

Construction of Manchanabele Project across Arkavathi River.

*Q.—77. Sri B. J. LINGE GOWDA (Channapatna).—

Will the Government be pleased to state:—

the action taken by Government for constructing 'Manchanabele Project' across river Arkavathi to ensure supply of sufficient water to Kanva Reservoir and also to bring large extent of lands under irrigation in Ramanagaram Taluk?

A.—Sri S. NIJALINGAPPA (Chief Minister).—

Detailed investigation of the Project has been taken up.

†Sri S. NIJALINGAPPA.—Sir, if you kindly permit me, I will make a statement.

This Manchanabele Project is a very important project. It was first taken up and considered to irrigate 800 acres and it was estimated to cost Rs. 9.95 lakhs. It was said that KANVA required more water and there would be a feeder channel. Then again the project was considered and 2,000 acres under Kanva was to be given the supply and another scheme was thought of. Then it was said that it was not quite feasible and again a third attempt has been made not only to feed Kanva but also to see that more area of these dry parts is brought under cultivation. Therefore, the third project is now being considered at a cost of about Rs. 45 lakhs; and that will not only have a feeder channel to Kanva but it will also irrigate large areas in Ramanagaram taluk; and what is more, I feel it is very necessary because Ramanagaram is rather shallow area and just 2 years before, it had suffered the flood havoc. In order to relieve this flood havoc, this scheme has been under consideration. This can irrigate fairly large areas. We do not know exactly how much it is. It is under very active investigation of the Department.

1-30 P.M.

ಶ್ರೀ ಸಿ. ಆರ್. ರಂಗೇ ಗೌಡ.—ಈ ಯೋಜನೆಯನ್ನು ನಿರ್ಮಾಣ ಮಾಡುವುದರಿಂದ ರಾಮನಗರ ತಾಲ್ಲೂಕಿನಲ್ಲಿ ಹೆಚ್ಚಿನ ಜಮೀನುಗಳನ್ನು ನೀರಾವರಿಗೊಳಿಸಲು ಅವಕಾಶವಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲೆಲ್ಲಿ ಅವಕಾಶವಿದೆಯೋ ಅಲ್ಲೆಲ್ಲಾ ನೀರಾವರಿಗೆ ಅನುಕೂಲ ಮಾಡಿಕೊಡುತ್ತೇವೆ.

ಶ್ರೀ ಸಂಜೀವನಾಥ ಐಕಳ.—ತಿಪ್ಪಗೊಂಡನ ಹಳ್ಳಿಯಿಂದ ಬೆಂಗಳೂರಿಗೆ ನೀರು ಬರುತ್ತದೆಂದು ಹೇಳಿದ್ದಾರೆ. ಬಹಳ ಉದ್ದವಾಗಿರತಕ್ಕ ಮೆಯಿನ್ ಲೈನ್ ಹಾಕಿದರೆ ಏನಾದರೂ ತೊಂದರೆಯಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಏನೂ ತೊಂದರೆಯಾಗುವುದಿಲ್ಲ. ಬೆಂಗಳೂರು ವಾಟರ್ ಸಪ್ಲೈ ಸ್ಕೀಮ್ ಬೇರೆ ಬರುತ್ತದೆ. ಆ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಭಯ ಬೇಡ.

Mr SPEAKER.—Question hour is over.

———

QUESTION FOR ANSWER ON THE DAY

(but not taken up)

Cultivable land belonging to Government laying waste in Bangarpet Taluk.

**Q.*—265. Sri S. RAJAGOPAL (K. G. F.).—

Will the Government be pleased to state:

(*a*) the area and extent of cultivable land belonging to Government that is laying waste in Bangarpet taluk;

(*b*) the number of landless agriculturists belonging to the Scheduled Castes in the said taluk;

(*c*) the number of persons belonging to the Scheduled Castes to whom such cultivable land has been granted under 'Social Welfare Scheme in the above Taluk, since 1960?

A.— Sri M. V. KRISHNAPPA (Minister for Revenue).—

(*a*) 2,577 acres.
(*b*) 1,250 (except K. G. F. area).
(*c*) 101.

Business of the House.

Mr. SPEAKER.—Now I wish to inform the House that up till now 28 members have participated in the Debate on the Budget.

Sri S. M. KRISHNA (Maddur).—According to the schedule, the debate will have to conclude to-morrow. I do not know if there are quite a few more who are willing to participate in the debate. So may I submit that the whole of to-morrow may be untilised by the members and the reply to the debate could be made the day after to-morrow?

Mr. SPEAKER.—If the Hon'ble Members feel so, we will have a morning and evening session to-morrow.

Sri A. KRISHNA SHETTY (Mangalore II).—It will be heavy on us.

Mr. SPEAKER.—Let us try. I do not want to shut out if I can possibly do it. But let the Hon'ble Members remember that when the Business Advisory Committee allocates time, it should be adhered to and if we have to throw it to the winds every time, that is not proper.

GENERAL DISCUSSION ON THE BUDGET ESTIMATES FOR 1964-65

(*continued.*)

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, 1964–65ನೇ ಸಾಲಿನ ಆಯವ್ಯಯ ಅಂದಾಜನ್ನು ಮಾನ್ಯ ಅರ್ಥಿಕ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಜಾಣತನದಿಂದ.........

Sri A. P. APPANNA (Virajpet).—Mrs. Gopala Gowda is in the Ladies' Gallery. If feel that Sri Gopala Gowda cannot effectively make speech.

Mr. SPEAKER.—I not only over-rule that but say that it is a very good ground for Sri. Gopala Gowda to participate. He will feel inspired and we will have one of the best orations. (*Laughter*)

ಶ್ರೀ ಎಸ್. ಗೋಪಾಲಗೌಡ.—ಶ್ರೀಮಾನ್ ಜತ್ತಿಯವರು ಈ ಸಾಲಿನ ಆಯವ್ಯಯ ಪಟ್ಟಿಯನ್ನು ಬಹಳ ಕೌಟಿಲ್ಯತನದಿಂದ ಮಂಡಿಸಿದ್ದಾರೆ.

Sri J. H. SHAMSUDDIN (Deputy Minister for Electricity).—On a point of information Sri Gopala Gowda does not seem to have the same former vigour which we used to see in the beginning of his speech.

Mr. SPEAKER.—All that could be reserved for the evening, not now. (*Laughter*)

ಶ್ರೀ ಎಸ್. ಗೋಪಾಲಗೌಡ.—ನಾನು ನಮ್ಮ ಅರ್ಥಿಕ ಸಚಿವರಾದ ಶ್ರೀಮಾನ್ ಜತ್ತಿಯವರು ಮಂಡಿಸಿರುವ 1964–65ನೇ ಸಾಲಿನ ಆಯವ್ಯಯಪಟ್ಟಿ ಸುಮಾರು 7 ಲಕ್ಷ ರೂಪಾಯಿಗಳಷ್ಟು ರೆವಿನ್ಯೂ ಹೆಚ್ಚುವರಿಯದಾಗಿದೆ ಎಂದು ಕೇಳಿದಾಗ ರಾಜ್ಯಕ್ಕೆ ಹಣಕಾಸಿನ ವಿಷಯದಲ್ಲಿ ಒಂದು ಒಳ್ಳೆಯ ಕಾಲ ಬಂತೋ ಏನೋ ಎಂಬ ಭ್ರಮೆಯಿಂದ ಇದ್ದೆ. ಆದರೆ ಅದನ್ನು ಒಳಹೊಕ್ಕು ನೋಡಿದರೆ ಇದು ಅಂಕಿ ಸಂಖೆಗಳನ್ನು ಜೋಡಿಸುವ ವಿಷಯದಲ್ಲಿ ನಡೆದಿರತಕ್ಕಂಥ ಕೈಚಳಕವೆಂದು

(ಶ್ರೀ ಎಸ್. ಗೋಪಾಲಗೌಡ)

ನನಗೆ ಗೊತ್ತಾಯಿತು. ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸಮೀಕ್ಷೆಮಾಡುವಾಗ, ವಿಚಾರ ಮಾಡುವಾಗ ನಾವು ಕೇಂದ್ರದ ಹಣಕಾಸಿನ ಪರಿಸ್ಥಿತಿಯನ್ನು ಯಾವತ್ತೂ ಗಮನದಲ್ಲಿಟ್ಟುಕೊಂಡೇ ವಿಚಾರ ಮಾಡುವುದು ಅಗತ್ಯ ಮತ್ತು ಅವಶ್ಯಕ. ಕಾಂಗ್ರೆಸ್ ಈಚೆಗೆ ಭುವನೇಶ್ವರದಲ್ಲಿ ಸಮಾಜ ವಾದವನ್ನೇ ತನ್ನ ಗುರಿಯನ್ನಾಗಿ ಏನು ಅಳವಡಿಸಿ ಕೊಂಡಿದೆಯೋ ಆ ವಿಷಯವನ್ನು ಮತ್ತು ಆ ಒಂದು ಆದರ್ಶವನ್ನು ಕಾರ್ಯಗತ ಮಾಡುವ ವಿಷಯದಲ್ಲಿ ರಾಷ್ಟ್ರದ ಅಥವಾ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಏನಾದರೂ ಪರಿಣಾಮಕಾರಿಯಾದ ಬದಲಾವಣೆಗಳನ್ನು ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆಯೇ ಎನ್ನುವ ದೃಷ್ಟಿಯನ್ನು ನಾವು ಇಟ್ಟುಕೊಂಡು ಕೇಂದ್ರ ಹಾಗೂ ರಾಜ್ಯದ ಈ ಸಾಲಿನ ಆಯವ್ಯಯಪಟ್ಟಿಗಳನ್ನು ನೋಡುವುದಾದರೆ ಅಂತಹ ಯಾವ ಬದಲಾವಣೆಗಳೂ ಆಗಲಿಲ್ಲವೆಂದು ಸ್ಪಷ್ಟವಾಗಿ ಕಂಡುಬರುತ್ತಾ ಇದೆ.

ಇನ್ನೊಂದು ವಿಷಯ. ಈ 1964ನೆಯ ಇಸವಿಯನ್ನು ಲೀಪ್ ಇಯರ್ ಎಂದು ಹೇಳುತ್ತಾರೆ. ಅಧಿಕಮಾಸ ಬಂದಿದೆ. ದುರ್ಭಿಕ್ಷದಲ್ಲಿ ಅಧಿಕಮಾಸ ಬಂದ ಹಾಗೆ ಕ್ರೋಧಿ ನಾಮ ಸಂವತ್ಸರದ ಆಯವ್ಯಯವನ್ನು ದೇಶದ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಹಾಗೆ ಮತ್ತು ರಾಜ್ಯ ಸರ್ಕಾರದವರು ಹೇಳಿರುವ ಪ್ರಕಾರ 1964—65ನೇ ಸಾಲು ಮತ್ತು 1965—66ನೇ ಸಾಲುಗಳಲ್ಲಿ ಅತಿ ಕಷ್ಟಕರವಾದ ಆರ್ಥಿಕ ಪರಿಸ್ಥಿತಿಯನ್ನು ಈ ಸರ್ಕಾರ ಮಾತ್ರವಲ್ಲ, ಕೇಂದ್ರ ಸರ್ಕಾರ ಹಾಗೂ ರಾಷ್ಟ್ರ ಎದುರಿಸುವ ಪರಿಸ್ಥಿತಿ ಇದೆ ಮತ್ತು ಅನೇಕ ವಲಯಗಳಲ್ಲಿ ಪ್ರಗತಿ ಕುಂಠಿತವಾಗತಕ್ಕ ಮತ್ತು ಆರಂಭಮಾಡಿರತಕ್ಕ ಕೆಲಸಗಳನ್ನು ನಿಲ್ಲಿಸುವ ಪರಿಸ್ಥಿತಿ ಇದೆಯೆಂಬುದನ್ನು ಈ ಸಂದರ್ಭದಲ್ಲಿ ನಾವು ಮನಗಾಣಬೇಕಾಗುತ್ತದೆ.

ಸ್ವಾಮಿ, ಸಮಾಜವಾದ ಘೋಷಣೆಯನ್ನು ಮಾಡಿರುವ ಕಾಂಗ್ರೆಸ್ ಸರ್ಕಾರಗಳು ಪ್ರತಿಕ್ಷಣದಲ್ಲೂ ಈಗಲೂ ಕೂಡ ದೇಶದಲ್ಲಿ ಶೋಷಿತ ವರ್ಗಕ್ಕೆ ಎಲ್ಲಾ ರೀತಿಯ ಅಭಯಗಳನ್ನು ಕೊಡುತ್ತಾ ಬರುತ್ತಾ ಇದ್ದಾರೆ. ಚೇಂಬರ್ ಆಫ್ ಕಾಮರ್ಸ್ ಫೆಡರೇಷನ್ನಿನ ಸಮಾರಂಭಕ್ಕೆ ಹೋಗಿ ಕೇಂದ್ರದ ಮಂತ್ರಿಗಳು, ಅಲ್ಲಿನ ಶ್ರೀಮಾನ್ ಭರತ್‌ರಾಮ್ ಮತ್ತು ಶ್ರೀಮಾನ್ ಗೋಯಂಕ ಅವರಿಗೆ ಸಮಾಜವಾದದ ಆರ್ಥಿಕ ವ್ಯವಸ್ಥೆಯನ್ನು ಯಾವರೀತಿ ರೂಢಿಸಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಅವರಿಗೆ ಅಂತರಂಗವಾಗಿ ಮತ್ತು ಬಹಿರಂಗವಾಗಿ ಆಶ್ವಾಸನೆಗಳನ್ನು ಕೊಡುತ್ತಿದ್ದಾರೆ. ಅವರ ಭಾರೀ ಉದ್ಯಮಗಳಿಗೆ ರಕ್ಷಣೆಯನ್ನೂ ಸಹ ಕೊಡುತ್ತಿದ್ದಾರೆ.

ಇದನ್ನು ನಾವು ಸರ್ಕಾರದ ಆರ್ಥಿಕ ನೀತಿಯಲ್ಲಿ ನೋಡಬಹುದು. ಆದ್ದರಿಂದ ರಾಜ್ಯ ಸರ್ಕಾರದವರು ತಮ್ಮ ಇಳುವರಿಯನ್ನು ಕೊರತೆಯನ್ನು ತುಂಬಿಕೊಳ್ಳುವುದಕ್ಕೆ ತಮ್ಮ ಕೆಲಸಕಾರ್ಯಗಳನ್ನು ನಡೆಸಿಕೊಂಡುಹೋಗುವುದಕ್ಕೆ ಯಾವೊತ್ತೂ ಕೇಂದ್ರದಕಡೆ ಕೈಚಾಚುವ ಪರಿಸ್ಥಿತಿ ಇರುವಾಗ ಕೇಂದ್ರದವರ ಹಣಕಾಸಿನ ಪರಿಸ್ಥಿತಿ ಏನಿದೆ ಎಂದರೆ ಅವರು ಜಗತ್ತಿನ ಎಲ್ಲಾಕಡೆಗಳಲ್ಲಿಯೂ ಕೈಚಾಚಿ ನಿಂತಿರುತ್ತಾರೆ. ಅವರು ದೊಡ್ಡ ಭಿಕ್ಷುಕರಾಗಿದ್ದಾರೆ. ಮುಖ್ಯವಾದ ಘೋಷಣೆಯನ್ನು ಮಾಡಿದರೂ ತಮ್ಮ ಆರ್ಥಿಕ ವ್ಯವಸ್ಥೆಯನ್ನು ಸಮಾಜವಾದದ ರೀತಿನೀತಿಗಳನ್ನು ಅನುಸರಿಸಿ ಬದಲಾವಣೆಮಾಡುವ ಶಕ್ತಿಯಾಗಲೀ ಮನಸ್ಸಾಗಲೀ ಅವರು ಹೊಂದಿಲ್ಲ ಎನ್ನುವುದು ಈ ಆಯವ್ಯಯಗಳನ್ನು ನೋಡಿದಾಗ ಗೊತ್ತಾಗುತ್ತದೆ. ಇವೊತ್ತು ಬ್ಯಾಂಕುಗಳ ರಾಷ್ಟ್ರೀಕರಣ ಆಗಬೇಕು ಎನ್ನುವ ಬೇಡಿಕೆ ಇದೆ. ನಾವು ಒತ್ತಾಯಪೂರ್ವಕವಾಗಿ ಎಲ್ಲಾ ಖಾಸಗೀ ಬ್ಯಾಂಕುಗಳ ವ್ಯವಹಾರವನ್ನೂ ಸರ್ಕಾರ ವಶಪಡಿಸಿಕೊಳ್ಳಬೇಕು ಎಂದು ಒತ್ತಾಯಮಾಡುತ್ತಿದ್ದೇವೆ. ಆದರೆ ಕೇಂದ್ರದವರು ಇನ್ನೂ ಡೋಲಾಯಮಾನವಾಗಿದ್ದಾರೆ. ರಾಜ್ಯಸರ್ಕಾರದವರಂತೂ ಕೆಲವು ಖಾಸಗೀ ಬ್ಯಾಂಕುಗಳೊಡನೆ ವ್ಯವಹರಿಸುದಾಗ ಆ ಬ್ಯಾಂಕುಗಳ ಮರೆಹೊಕ್ಕಂತೆ ಕಾಣುತ್ತದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಶ್ರೀಮಾನ್ ಜತ್ತಿಯವರು ಹೇಳಿರುವ ಹಾಗೆ ವಿದ್ಯುಚ್ಛಕ್ತಿ ಬೋರ್ಡಿನಲ್ಲಿ ಈಗ ಇರತಕ್ಕ ಇಬ್ಬರು ಖಾಸಗೀ ನಿರ್ದೇಶಕರು ಇಲ್ಲದೇ ಹೋಗಿದ್ದರೆ ನಮ್ಮ ವ್ಯವಹಾರ ನಡೆಯುತ್ತಾ ಇರಲಿಲ್ಲ ಎಂದು ಒಮ್ಮೆ ಹೇಳಿದ್ದಾರೆ. ಅವರು ಅಲ್ಲಿ ಕೋಟಿಗಟ್ಟಲೆ ಹಣವನ್ನು ಕಾಲ್ ಡಿಪಾಜಿಟ್‌ನಲ್ಲಿ ಇಟ್ಟಿದ್ದಾರೆ. ಸರ್ಕಾರದವರು ಸಾಲವನ್ನು ಎತ್ತುವ ಸಂದರ್ಭದಲ್ಲಿ ಎರಡುಮೂರು ಕೋಟಿ ರೂಪಾಯಿಗಳು ಈ ಮೂಲಗಳಿಂದಲೇ ಸರ್ಕಾರಕ್ಕೆ ದೊರೆಯುತ್ತದೆ. ಆದರಿಂದ ಇಷ್ಟುಮಾತ್ರ ನಮಗೆ ಗೊತ್ತಾಗುತ್ತದೆ. ಇಂಥಾ ಒಂದು ಆರ್ಥಿಕ ವ್ಯವಸ್ಥೆಯಲ್ಲಿ ಜನಸಾಮಾನ್ಯರಿಗೆ ಯಾವ ಒಂದು ಸ್ಥಾನಮಾನಗಳಾಗಲೀ ಏಳಿಗೆಯಾಗಲೀ ದೊರೆಯುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಸ್ಪಷ್ಟವಾಗಿ ಈ ನೀತಿಯಿಂದ ಗೊತ್ತಾಗುತ್ತದೆ. ಆದ್ದರಿಂದ ಇವೊತ್ತು ರಾಜ್ಯಸರ್ಕಾರದವರು ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಕೇಂದ್ರದ ಒತ್ತಾಯವನ್ನು ತರಬೇಕು. ಶ್ರೀಮಾನ್ ನಿಜಲಿಂಗಪ್ಪನವರು ಭುವನೇಶ್ವರದಿಂದ ಬರುವ ದಾರಿಯಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಬೇಕಾಗಿಲ್ಲ ಎಂದು

ಹೇಳಿದಹಾಗೆ ನಾನು ಪತ್ರಿಕೆಯಲ್ಲಿ ಓದಿದ ನೆನಪು ಉಂಟು. ಭುವನೇಶ್ವರದ ತೀರ್ಮಾನಕ್ಕೆ ತದ್ವಿರುದ್ಧವಾಗಿ ಅವರು ಹೇಳಿಕೆಯನ್ನು ನೀಡಬಹುದೇ? ಸಮಾಜವಾದದ ಘೋಷಣೆ ಬರುವುದನ್ನು ಸಮಾಜ ಆಶಿಸಿದರೆ ಅದು ಬರತಕ್ಕಂಥಾದ್ದಲ್ಲ. ಸಮಾಜದಲ್ಲಿ ಖಾಸಗೀಯವರು ಬಂಡವಾಳವನ್ನು ದೇಶದಲ್ಲಿ ಬೆಳೆಸಿದ್ದಾರೆ. ಆ ಬೆಳೆಯನ್ನು ದರಿದ್ರರಿಗೆ ಹಂಚುವುದರ ಮೂಲಕ ಸಮಾಜವಾದ ಬರತಕ್ಕದ್ದಲ್ಲ. ಅಥವಾ ಮುಂದುವರಿದಿರತಕ್ಕ ಅಮೇರಿಕಾ ಮತ್ತು ರಷ್ಯಾ ಮುಂತಾದ ರಾಷ್ಟ್ರಗಳಿಂದ ಸಾಮಾನುಗಳನ್ನಾಗಲೀ ಯಂತ್ರೋಪಕರಣಗಳನ್ನಾಗಲೀ, ಆಹಾರವಸ್ತುಗಳನ್ನಾಗಲೀ ಅಥವಾ ನೇರವಾಗಿ ಹಣವನ್ನಾಗಲೀ ತಂದು ನಮ್ಮ ದೇಶದಲ್ಲಿರತಕ್ಕ 45 ಕೋಟಿ ದರಿದ್ರರಿಗೆ ಹಂಚಿ ಊಟದ ವ್ಯವಸ್ಥೆ ಮಾಡುವುದರಿಂದ ಈ ದೇಶವನ್ನು ಸಮಾಜವಾದದ ರಾಷ್ಟ್ರವನ್ನಾಗಿ ಮಾಡಿ ಆರ್ಥಿಕಾಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಚೆನ್ನಾಗಿ ಮನಗಾಣಬೇಕಾಗಿದೆ. ಇವೊತ್ತು ಖಾಸಗೀ ಉದ್ಯಮಗಳನ್ನು ರಾಷ್ಟ್ರೀಕರಣ ಮಾಡತಕ್ಕ ಕಾರ್ಯವನ್ನು ಕೈಗೊಳ್ಳುವುದಕ್ಕೆ ಕೇಂದ್ರದವರು ಮುಂದೆ ಬರುತ್ತಾ ಇಲ್ಲ. ಈಗ ಮೂಲತಃ ಮೂರು ಯೋಜನೆಗಳನ್ನು ಮಾಡಿದ್ದಾರೆ. ಅದರಲ್ಲಿ ಈ ವರ್ಷದ ಮಾರ್ಚಿತಿಂಗಳಿನ ಆಖ್ಯೆರಿನಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷವನ್ನು ಮುಕ್ತಾಯಮಾಡುವ ಕಾಲದಲ್ಲಿ ಅದನ್ನು ಸಮೀಕ್ಷೆಮಾಡಿ, ಈ ಯೋಜನೆಯ ಫಲ ದೊರೆತಿದೆಯೇ ಎನ್ನುವುದನ್ನು ಅವರು ಹೇಳುವಾಗ ಕಾಂಗ್ರೆಸ್‌ನವರ ಆಳ್ವಿಕೆಯಲ್ಲಿ ಪ್ರಗತಿ ಕುಂಟಿತವಾಗಿದೆ ಎನ್ನುವುದನ್ನು ನಾವು ನೋಡುತ್ತೇವೆ. ಇದಕ್ಕೆ ಕಾರಣವೇನೆಂದರೆ ನಾಗಪುರದಲ್ಲಿ ಕಾಂಗ್ರೆಸ್‌ನವರು ಕೆಲವು ಮಹತ್ವದ ತೀರ್ಮಾನಗಳನ್ನು ತೆಗೆದುಕೊಂಡಿದ್ದು, ನಾವು ಸಹಕಾರ ಕ್ಷೇತ್ರದಲ್ಲಿ ಸಹಕಾರ ಪದ್ಧತಿಯಲ್ಲಿ ಬೇಸಾಯವನ್ನು ಆಚರಣೆಗೆ ತರುತ್ತೇವೆ ಎಂದು ಹೇಳಿದ್ದು ಮತ್ತು ಆಹಾರಧಾನ್ಯಗಳ ವ್ಯಾಪಾರವನ್ನು ಸರ್ಕಾರದವರು ವಹಿಸಿಕೊಂಡು ಸ್ಟೇಟ್ ಟ್ರೇಡಿಂಗ್ ಮಾಡುತ್ತೇವೆಂದು ಹೇಳಿದ್ದು. ಆಗ ಸ್ಟೇಟ್ ಟ್ರೇಡಿಂಗ್ ಮಾಡುವುದಕ್ಕೆ ಹೋದ ಶ್ರೀ ಅಜಿತ್ ಪ್ರಸಾದ್ ಜೈನ್ ಅವರು ತಮ್ಮ ಆಹಾರ ಖಾತೆಯನ್ನು ಕಳೆದುಕೊಂಡರು. ಕೊನೆಗೆ ಅವರು ದೇಷಭ್ರಷ್ಟರಾಗಿ ತುಮಕೂರಿಗೆ ಬಂದು ಅಲ್ಲಿ ಚುನಾವಣೆಗೆ ನಿಂತು ಪಾರ್ಲಿಮೆಂಟಿಗೆ ಹೋಗುವ ಸ್ಥಿತಿ ಬಂತು. ಆಗ ಆಹಾರಧಾನ್ಯವನ್ನು ಕೊಂಡು ವ್ಯಾಪಾರ ಮಾಡುವುದಕ್ಕೆ ಸರ್ಕಾರದವರ ಹತ್ತಿರ ದುಡ್ಡು ಇರಲಿಲ್ಲ. ಹಣವನ್ನು ಕೊಡತಕ್ಕ ಅಧಿಕಾರ ರಿಜರ್ವ್ ಬ್ಯಾಂಕಿನವರ ಕೈಯಲ್ಲಿತ್ತು. ಆದರೆ ರಿಜರ್ವ್ ಬ್ಯಾಂಕಿನವರು ಆಗ ಸರ್ಕಾರದವರಿಗೆ ಆಹಾರಧಾನ್ಯವನ್ನು ಕೊಂಡು ಸ್ಟೇಟ್ ಟ್ರೇಡಿಂಗ್ ಮಾಡುವುದಕ್ಕೆ ಹಣವನ್ನು ಕೊಡುವುದಕ್ಕೆ ತಯಾರು ಇರಲಿಲ್ಲ. ಆದ್ದರಿಂದ ಸರ್ಕಾರದವರು ಸ್ಟೇಟ್ ಟ್ರೇಡಿಂಗ್ ವ್ಯಾಪಾರವನ್ನು ಮಾಡಲಿಲ್ಲ. ಅದನ್ನು ಹಾಗೆಯೇ ಕೈಬಿಟ್ಟರು. ಆಮೇಲೆ ಕೂಡೊಕ್ಕಲು ಪದ್ಧತಿಯ ವ್ಯವಸಾಯವನ್ನು ಜಾರಿಗೆ ತರುತ್ತೇವೆ ಎಂದು ಹೇಳಿ ನಾಗಪುರದ ಅಧಿವೇಶನದಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದರು. ಅದನ್ನು ಜಾರಿಗೆ ತರಲಿಲ್ಲ. ಆ ಕೆಲಸವೂ ಹಾಗೆಯೇ ಕಾಗದದಮೇಲೆ ಉಳಿದಿದೆ. ಆಳುವ ಪಕ್ಷ ಇದರಕಡೆ ಗಮನವನ್ನು ಕೊಟ್ಟಿಲ್ಲ.

ಆಮೇಲೆ ಭೂಸುಧಾರಣೆಯನ್ನು ಜಾರಿಗೆ ತರದೆ ವಿಳಂಬ ಮಾಡಿದ್ದಾರೆ. ಭೂಸುಧಾರಣೆಯನ್ನು ಜಾರಿಗೆ ತಂದು ಉಳುಮೆ ಮಾಡತಕ್ಕ ರೈತನಿಗೆ ಭೂಮಿಯನ್ನು ಹಂಚಿ ಹಿಡುವಳಿದಾರರಿಗೆ ಹಣಸಹಾಯವನ್ನು ಒದಗಿಸಿ, ನೀರಿನ ಸೌಕರ್ಯವನ್ನು ಒದಗಿಸಿಕೊಟ್ಟು ಬೀಜ ಗೊಬ್ಬರ ಮುಂತಾದ ವ್ಯವಸಾಯ ಸಾಮಗ್ರಿಗಳನ್ನು ಒದಗಿಸಿಕೊಟ್ಟರೆ ರೈತ ಹೆಚ್ಚಿಗೆ ಬೆಳೆದರೆ ದೇಶದಲ್ಲಿ ಹೆಚ್ಚು ಆಹಾರೋತ್ಪಾದನೆ ಆದೀತು. ಆದರೆ ಇವೊತ್ತು ದುಡಿಯುವ ರೈತರಿಗೆ ಗೇಣಿಮಾಡತಕ್ಕ ರೈತರಿಗೆ ಬೇಕಾದ ಸೌಕರ್ಯವನ್ನು ಒದಗಿಸುವ ಕಡೆ ಸರ್ಕಾರ ಲಕ್ಷ್ಯವನ್ನು ಕೊಟ್ಟಿಲ್ಲ. ಇವೊತ್ತಿನ ದಿವಸ ಭೂಮಾಲೀಕರು ಗೇಣಿದಾರರನ್ನು ಅಧಿಕ ಸಂಖ್ಯೆಯಲ್ಲಿ ಭೂಮಿಯಿಂದ ಹೊರಗೆ ಹಾಕುತ್ತಿದ್ದಾರೆ. ಅವರನ್ನು ದೇಶಾದ್ಯಂತ ಹೊರದೂಡುತ್ತಿದ್ದಾರೆ. ಅವರಿಗೆ ಹೊಟ್ಟೆಗೆ ಇಲ್ಲ ಬಟ್ಟೆಗೆ ಇಲ್ಲ. ಇವೊತ್ತಿನ ದಿವಸ ಎಲ್ಲಾ ಕಡೆಗಳಲ್ಲೂ ಆ ಒಂದು ಚಿತ್ರವನ್ನು ನಾವು ನೋಡಬಹುದು. ಹಳ್ಳಿ ಹಳ್ಳಿಗಳಲ್ಲಿ ಜನ ಗುಳೆಕಟ್ಟಿಕೊಂಡು ಕುಟುಂಬ ಬೇಟೆಗೆ ಹೊರಡುತ್ತಿದ್ದಾರೆ. ಈಗ ದೇಶದಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು ದೊಡ್ಡ ನೀರಾವರಿ ಕಾಮಗಾರಿಗಳು ಇವುಗಳಿಗೋಸ್ಕರವಾಗಿ ಲಕ್ಷಗಟ್ಟಲೇ ಕೋಟಿಗಟ್ಟಲೇ ಹಣವನ್ನು ಖರ್ಚುಮಾಡುತ್ತಿದ್ದರೂ ಕೂಡ ವಾಸ್ತವವಾಗಿ 1962-63ನೇ ಸಾಲಿನಲ್ಲಿ ದೇಶಾದ್ಯಂತ ಎಲ್ಲಾ ಬೆಳೆಗಳೂ ಬತ್ತಿಹೋಗಿವೆ ಎನ್ನುವುದು ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಇಂಥಾ ಒಂದು ದುಷ್ಕಾಲದಲ್ಲಿ ಕೂಡ 45 ಕೋಟಿ ಜನಸಂಖ್ಯೆ ಇರತಕ್ಕ ಈ ದೇಶದಲ್ಲಿ 30 ಕೋಟಿ ಎಕರೆ ಜಮೀನಿನಲ್ಲಿ ಬೆಳೆಯನ್ನು ಬೆಳೆಯತಕ್ಕ ಅವಕಾಶವಿದ್ದರೂ ಕೂಡ 45 ಕೋಟಿ ಜನಗಳಿಗೆ ಎರಡು ಹೊತ್ತು ಊಟವನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 15 ವರ್ಷಗಳಾಗಿದ್ದರೂ ಕೂಡ ಇಂಥಾ ಒಂದು ಕೆಲಸವನ್ನು ಮಾಡತಕ್ಕ ಶಕ್ತಿಯನ್ನು ನಮ್ಮ ಸರ್ಕಾರ ಪಡೆದಿಲ್ಲ. ಎಂದು ಹೇಳಿದರೆ ಇದಕ್ಕಿಂತ ಅವಮಾನಕರ

(ಶ್ರೀ ಎಸ್. ಗೋಪಾಲಗೌಡ)

ವಾದ ಪರಿಸ್ಥಿತಿ ಜಗತ್ತಿನಲ್ಲಿ ಬೇರೊಂದಿಲ್ಲ ಎಂದು ನಾನು ಹೇಳುತ್ತೇನೆ. ನಮ್ಮಲ್ಲಿ ದುಡಿಯತಕ್ಕ ರೈತರಿದ್ದಾರೆ, ಒಳ್ಳೆಯ ಫಸಲು ಕೊಡತಕ್ಕ ಭೂಮಿ ಇದೆ, ಎಲ್ಲಿ ನೋಡಿದರೆ ಅಲ್ಲಿ ನೀರು ಬರತಕ್ಕ ನೀರಿನ ಆಶ್ರಯಗಳಿವೆ. ಇವುಗಳನ್ನು ನಾವು ಕರಗತ ಮಾಡಿ ಅನ್ನ ಬೆಳೆಯುವುದಕ್ಕೆ ಸಾಧ್ಯ ವಾಗದೆ, ಯಾರೋ ಅಮೇರಿಕದಿಂದ ಕಣಜವನ್ನು ತಂದು ನಮ್ಮಲ್ಲಿ ಕಟ್ಟುತ್ತಾರೆ, ಇನ್ನೊಬ್ಬರು ಮತ್ತೊಂದು ಸಹಾಯವನ್ನು ಮಾಡುತ್ತಾರೆ ಎಂದು ನಾವು ಮೂಲತಃ ಆಗಬೇಕಾದ ಭೂಸುಧಾರಣೆ ಯನ್ನು ಜಾರಿಗೆ ತರದೆ ಹೆಚ್ಚು ಬೆಳೆ ಬೆಳೆಯಿರಿ ಎಂದು ಚಳುವಳಿಗಳನ್ನು ಮಾಡಿದರೆ, ಕ್ಯಾಂಪೇನ್ ಮಾಡಿದರೆ, ಪ್ರಚಾರ ಮಾಡಿದರೆ ಅದರಿಂದ ಹೆಚ್ಚು ಬೆಳೆ ಬೆಳೆಯುತ್ತೇವೆಯೆ ಎಂದು ತಾವು ಪುನರ್ವಿಮರ್ಶೆ ಮಾಡಬೇಕು.

ಸಮಾಜವಾದವು ಖಾಸಗಿ ದೊಡ್ಡ ಬ್ಯಾಂಕುಗಳಿಂದ, ದೊಡ್ಡ ಉದ್ಯಮಗಳಿಂದ ಕೋಟ್ಯಾಧೀಶ ರಿಂದ, ಬೆಂಗಳೂರು, ಬೊಂಬಾಯಿ, ಕಲ್ಕತ್ತ ಇಂಥ ಕಡೆ ಇರುವ ಷೇರು ಮಾರುಗಟ್ಟೆಗಳಿಂದ ಬರು ವುದಿಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ನಾವು ತಿಳಿಯಬೇಕು. ಸಮಾಜವಾದ ಬರುವುದಾದರೆ ದಷ್ಟ ಪುಷ್ಟವಾಗಿರತಕ್ಕ ದುಡಿಮೆ ಮಾಡತಕ್ಕ ರೈತ ಸಮೂಹ ಹಾಗೂ ಯಾವುದಾದರೂ ಕಾರ್ಖಾನೆ ಗಳಲ್ಲಿ ಕಷ್ಟಪಟ್ಟು ದುಡಿಯುತಕ್ಕ ಕಾರ್ಮಿಕರ ಬೆಂಬಲದಿಂದ ಮಾತ್ರ ಒಂದು ದೇಶದಲ್ಲಿ ಅಭಿವೃದ್ಧಿ ಯನ್ನು ಸಾಧಿಸುವುದಕ್ಕೆ ಸಾಧ್ಯ. ಆದರೆ ನಮ್ಮ ದೇಶದಲ್ಲಿ ಆಳತಕ್ಕವರು ಒಂದು ಭ್ರಮೆ ಹೋದ ಹಾಗೆ ಕಾಣುತ್ತದೆ. ಬಿರ್ಲಾಗಳು, ಚೆಟ್ಟಿಯಾರರು ಇಂಥವರೆಲ್ಲ ನಮಗೆ ಬೆಂಬಲವನ್ನು ಕೊಟ್ಟರೆ ಅವರ ಬೆಂಬಲದಿಂದ ದೇಶದಲ್ಲಿ ಸಮಾಜವಾದವನ್ನು ತರುವುದಕ್ಕೆ ಸಾಧ್ಯವಾಗುತ್ತದೆ, ಅವರನ್ನು ಎದುರು ಹಾಕಿಕೊಳ್ಳಬಾರದು, ಅವರ ಮರ್ಜಿಯನ್ನು ಹಿಡಿಯಬೇಕು, ಅವರು ಏನು ಕೇಳಿದರೆ ಅದಕ್ಕೆ ಮೊದಲು ಜಾಗ ಕೊಡಬೇಕು, ಅವರಿಗೆ ಮೊದಲು ವಿದ್ಯುಚ್ಛಕ್ತಿಯನ್ನು ಒದಗಿಸಬೇಕು, ಹಣದ ಸೌಲಭ್ಯ ಒದಗಿಸಬೇಕು, ಅವರಿಗೆ ರಕ್ಷಣೆಯನ್ನು ಕೊಡಬೇಕು, ಅವರು ನಮ್ಮ ದೇಶದಲ್ಲಿ ಸಮಾಜವಾದವನ್ನು ತರುತ್ತಾರೆ, ಸಮಾನತೆಯನ್ನು ತರುತ್ತಾರೆ. ಸುಭಿಕ್ಷವನ್ನು ತರುತ್ತಾರೆ ಎಂದು ಮಿಶ್ರವಾಗಿರತಕ್ಕ ಪದ್ಧತಿಯನ್ನು ನಡೆಸಿಕೊಂಡು ಹೋಗುತ್ತಾರೆ. ಇದು ಶೋಚನೀಯ ಸ್ಥಿತಿ. ಇದು ಆಳತಕ್ಕ ಪಕ್ಷ ತಾನಾಗಿ ತಾನು ಮೋಸಪಡಿಸಿಕೊಳ್ಳತಕ್ಕ ಸ್ಥಿತಿ ಎಂದು ಈ ಸಂದರ್ಭದಲ್ಲಿ ಬಹಳ ವಿಷಾದದಿಂದ ಹೇಳಬಯಸುತ್ತೇನೆ.

ಸರ್ಕಾರದವರೇ ಒಪ್ಪುತ್ತಾರೆ, ಯೋಜನೆಯ ಅವಧಿಯಲ್ಲಿ ಸ್ವಾತಂತ್ರ್ಯ ಬಂದನಂತರ ಹಣದ ಉಬ್ಬರವಾಗುವುದಕ್ಕೆ ಹೊಸ ನೋಟುಗಳನ್ನು ಚಲಾವಣೆಗೆ ತಂದಿರುವುದೂ ಕಾರಣ ಎಂದು. ಅದಕ್ಕನುಸಾರವಾಗಿ ಅಂತರ್ರಾಷ್ಟ್ರೀಯ ಬೆಲೆಗಳ ಮಟ್ಟದಲ್ಲಿ ನಾವು ಬಂಗಾರವನ್ನು ಇಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಅವರು ಒಪ್ಪುತ್ತಾರೆ. ಹೊಸ ನೋಟುಗಳ ಚಲಾವಣೆ ಮತ್ತು ಸಾಲಗಳು ಅದಕ್ಕೆ ಕೊಡತಕ್ಕ ಬಡ್ಡಿ ಹಾಗೂ ಇವತ್ತು ಯೋಜನೆಗಳ ಹೆಸರಿನಲ್ಲಿ ಮಾಡಿರತಕ್ಕ ಖರ್ಚು ಇವು ಗಳಿಂದಾಗಿ ಜೀವನಾವಶ್ಯಕ ವಸ್ತುಗಳ ಬೆಲೆಗಳು ಒಂದೇ ಸಮನೆ ಏರುತ್ತ ಹೋಗುತ್ತಿವೆ. ಶ್ರೀಮಾನ್ ಜತ್ತಿಯವರೂ ಸಹ ಒಪ್ಪಿದ್ದಾರೆ, ಬೆಂಗಳೂರಿನಂತಹ ಊರಿನಲ್ಲಿ ಒಂದು ವರ್ಷದಲ್ಲ 16 ಪಾಯಿಂಟುಗಳಷ್ಟು ಬೆಲೆ ಏರಿದೆ ಎಂದು. ಅವರೇ ಇದನ್ನು ಹೇಳುತ್ತ ಏನು ಪರಿಹಾರ ಕೊಟ್ಟಿ ದ್ದಾರೆ ಎಂದರೆ 300 ರೂಪಾಯಿಗಿಂತ ಕೆಳಗಡೆ ಸಂಬಳ ದೊರಕತಕ್ಕವರಿಗೆ ಐದು ರೂಪಾಯಿ ಗಳ ಪರಿಹಾರ. ಯಾವುದಕ್ಕೆ ಏನು ಸಂಬಂಧ: 16 ಪಾಯಿಂಟುಗಳಷ್ಟು ಜೀವನದ ವೆಚ್ಚ ದಲ್ಲಿ ಹೆಚ್ಚಿದೆ ಎಂದು ಹೇಳುವಾಗ 5 ರೂಪಾಯಿ ಪರಿಹಾರದಿಂದ ಏನು ಅವರು ಜೀವನವನ್ನು ನಡೆಸುವುದಕ್ಕೆ ಸಾಧ್ಯ ಎನ್ನುವುದನ್ನು ಯೋಚಿಸಬೇಕು. ಕೇಂದ್ರ ಸರ್ಕಾರದವರು ತುಟ್ಟಿಭತ್ಯ ವನ್ನು ಹೆಚ್ಚಿಸಿದ್ದಾರೆ. ಆದರೆ ನಮ್ಮ ಸರ್ಕಾರದವರು ಪ್ರತಿವರ್ಷವೂ ಈ ಐದು ರೂಪಾಯಿಗಳನ್ನು ಮೂಗಿಗೆ ತುಪ್ಪ ಸವರುವುದು ಎನ್ನುವ ಹಾಗೆ ಐದೈದು ರೂಪಾಯಿಗಳ ಪ್ರಕಾರ ಹೆಚ್ಚಿಸಿಕೊಂಡು ಹೋಗುತ್ತಿದ್ದಾರೆ. ಆದರೆ ಹಾಗೆ ಹೆಚ್ಚಿಸಿರುವುದಾದರೂ ಮಾತಿನಲ್ಲಿ ಅಷ್ಟೇ ಹೊರತು ಇನ್ನೂ ಕಾರ್ಯಗತವಾಗ ಬೇಕಾದರೆ ಸರ್ಕಾರದ ತೀರ್ಮಾನಗಳಾಗಬೇಕಾಗಿವೆ. ಅದಕ್ಕೆ ಈ ಆಯವ್ಯಯ ದಲ್ಲಿ ಹಣವನ್ನೂ ಒದಗಿಸಿಲ್ಲ.

ಸ್ವಾಮಿ ಬೆಲೆಗಳನು ಸ್ಥಿರೀಕರಣ ಮಾಡುವ ವಿಷಯದಲ್ಲಿ ನಾವು ಹಣ ಸಹಾಯ ಮಾಡಿ ಬತ್ತವನ್ನು ಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದೆವು ಎಂದು ಹೇಳಿದರು. ಈ ವರ್ಷದ ಆಖೈರಿನಲ್ಲಿ ಆ ವ್ಯವಸ್ಥೆಗೆ ಹತ್ತು ಲಕ್ಷ ರೂಪಾಯಿ ಮನಬಂದಂತೆ ಹಂಚುತ್ತಾರೆ ಅಷ್ಟೆ. ಈ ವರ್ಷ ಇನ್ನೂ ಸೊಸೈಟಿಗಳಿಗೆ ಹಣ ಮುಟ್ಟಿದೆಯೋ ಇಲ್ಲವೋ ಗೊತ್ತಿಲ್ಲ. ಫೆಬ್ರವರಿ ಆಖೈರಿನಲ್ಲಿ ನಾನು ಇಲ್ಲಿಗೆ ಬರುವವರೆಗೂ ಇನ್ನೂ ಮುಟ್ಟಿರಲಿಲ್ಲ. ಆ ವೇಳೆಗೇ ವ್ಯಾಪಾರವಾಗುತಿತ್ತು. ಗೋಡೌನ್ ಇರುತ್ತದೆ. ಅದಕ್ಕೆ ಬೇರೆ ತರಹ ಏರ್ಪಾಡು ಮಾಡಿ ಅಲ್ಲಿ ಬತ್ತವನಿಟ್ಟು ದುಡ್ಡು ತೆಗೆದುಕೊಂಡು

ಹೋಗುತ್ತಾರೆ. ಸುಗ್ಗಿಯ ಕಾಲದಲ್ಲಿ ಖಾಸಗಿ ಜನರಿಂದ ಬೆಲೆಗಳು ಬಿದ್ದುಹೋದಾಗ ಏನು ಲೂಟಿ ನಡೆಯುತ್ತದೆ ಆ ಲೂಟಿಗೆ ನೀವು ಹೆಚ್ಚಿನ ಸಹಾಯವನ್ನು ಮಾಡಿದಂತಾಯಿತು ಲೂಟಿ ಮಾಡುವವರಿಗೆ ಬೆಲೆಗಳನ್ನು ಸ್ಥಿರೀಕರಿಸಬೇಕು ಎನ್ನುವ ತತ್ವವನ್ನು ಒಪ್ಪಿಕೊಳ್ಳುವ ಸರ್ಕಾರ ಇವತ್ತು ಮೂಲ ಅಗತ್ಯ ವಸ್ತುಗಳ ವ್ಯಾಪಾರವನ್ನು ಕೈಕೊಳ್ಳಬೇಕಾದ್ದು ಬಹಳ ಅವಶ್ಯಕ. ಹಾಗೂ ಯಾರ ದುಡಿಮೆ ಅಥವಾ ಸಂಬಳ ಒಂದು ನಿಯಮ ಒಂದು ಲಿಮಿಟ್ ಆಗಿ ಇರುತ್ತದೆಯೋ ಅವರು ಏರುತ್ತಿರುವ ಬೆಲೆಗಳಲ್ಲಿ ವರ್ಷಕ್ಕೆ ಎರಡು ಸಲ ಏರತಕ್ಕ ಬೆಲೆಗಳ ಜೊತೆಯಲ್ಲಿ ಸೆಣಸಾಟವಾಡಿ ತಮ್ಮ ಜೀವನವನ್ನು ನಡೆಸುವುದಕ್ಕಾಗುವುದಿಲ್ಲ ಎಂದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಆದುದರಿಂದ ತುಟ್ಟಿಭತ್ಯವನ್ನು ಕೊಡುವಾಗ ಬೆಲೆಗಳು ಹಿಡಿತದಲ್ಲಿ ಇರಬೇಕು ಅಥವಾ ಏರುತ್ತಿರುವ ಬೆಲೆಗಳಿಗೆ ಮತ್ತು ಹೆಚ್ಚು ಮಾಡುವ ತುಟ್ಟಿಭತ್ಯಕ್ಕೆ ನಿಗದಿಯಾದ, ನೇರವಾದ ಸಂಬಂಧವಿರಬೇಕು. ಇಲ್ಲದೆ ಹೋದರೆ ಇದು ಕಣ್ಣು ಒರೆಸತಕ್ಕ ಪರಿಹಾರವಾಗುತ್ತದೆ. ಅದರಿಂದ ಯಾರೂ ಜೀವನವನ್ನು ನಡೆಸಿಕೊಂಡು ಹೋಗುವುದಿಲ್ಲ. ಬೆಲೆಗಳನ್ನು ಸ್ಥಿರೀಕರಿಸಬೇಕು ಎನ್ನುವ ವಿಷಯದಲ್ಲಿ ಇದು ಕೇವಲ ರಾಜ್ಯದ ಒಂದು ಕೆಲಸವಾಗುವುದಿಲ್ಲ. ಅದಕ್ಕೆ ಕೇಂದ್ರದವರ ಸಹಾಯ ಬೇಕು ಎಂದು ಹೇಳುತ್ತೇನೆ. ಅನೇಕ ಮೂಲವಸ್ತುಗಳ ವ್ಯಾಪಾರವನ್ನು ಸರ್ಕಾರ ತೆಗೆದುಕೊಳ್ಳುವ ನಿರ್ಧಾರವನ್ನು ಕೇಂದ್ರ ತೆಗೆದುಕೊಳ್ಳಬೇಕು, ರಾಜ್ಯ ಸರ್ಕಾರಗಳಿಗೆ ಆದೇಶ ಕೊಡಬೇಕು, ಅದರಂತೆ ನಡೆಸಿಕೊಂಡು ಹೋಗಬೇಕು. ಹಿಂದೆ ಕೃಷ್ಣಪ್ಪನವರು ಹೇಳಿದರು, ಈಗ ಮಾನ್ಯ ಜತ್ತಿಯವರು ಹೇಳುತ್ತಿದ್ದಾರೆ; ನಾವು ವ್ಯಾಪಾರ ಮಾಡುವುದಕ್ಕೆ ಆಗುವುದಿಲ್ಲ ಕೇಂದ್ರದವರು. ಮಾಡಬೇಕು ಎಂದು. ಬ್ಯಾಂಕುಗಳ ರಾಷ್ಟ್ರೀಕರಣವನ್ನು ಕೇಂದ್ರದವರು ಮಾಡಬೇಕು ಎಂದು ಹೇಳುತ್ತೇನೆ. ಅವರ ಪಕ್ಷ ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತದೆಯೋ ಅದನ್ನು ಜಾರಿಗೆ ತರುವಂಥ ಪರಿಣಾಮಕಾರಿಯಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮಕ್ಕಿಕಾಮಕ್ಕಿ ಎಂದು ಹೇಳುವಂತೆ 25 ಕೋಟಿ ರೂಪಾಯಿಗಳ ಮುಂಗಡ ಹಣವನ್ನು ತೆಗೆದು ಮತ್ತೊಂದು ಕಡೆ ತುಂಬುವ ಒಂದು ವಿಷವೃತ್ತ ಆಗಿದೆ; ಲೆಕ್ಕದ ಜಗ್ಲರಿಯಾಗುತ್ತದೆ. ಒಂದು ಭದ್ರವಾದ ವ್ಯವಸ್ಥೆಯ ಮೇಲೆ ನಾವು ನಿಂತುಕೊಂಡು ವ್ಯವಹಾರ ಮಾಡುತ್ತಿದ್ದೇವೆ ಎಂದು ಧೈರ್ಯವಾಗಿ ಹೇಳಬಲ್ಲೆವು, ಇಂಥ ಕೆಲಸವನ್ನು ಮಾಡೆಯೇ ಮಾಡುತ್ತೇವೆ ಇಂಥಕಾಲಕ್ಕೆ ಮಾಡುತ್ತೇವೆ ಎಂದು ಹೇಳತಕ್ಕ ಒಂದು ಸನ್ನಿವೇಶ ಈ ಆರ್ಥಿಕ ಪರಿಸ್ಥಿತಿಯಲ್ಲಿಲ್ಲ.

ಒಟ್ಟಿನಲ್ಲಿ ಶ್ರೀಮಾನ್ ಜತ್ತಿಯವರು ಒಪ್ಪಿಕೊಂಡಿರುವಂತೆ ಇದು ಏಳು ಲಕ್ಷ ರೂಪಾಯಿಗಳ ಹಚ್ಚುವರಿ ಇರತಕ್ಕ ಮುಂಗಡ ಪತ್ರವಲ್ಲ. ಇದು ಒಟ್ಟಿನಲ್ಲಿ ಖೋತಾ ಇರತಕ್ಕ ಮುಂಗಡಪತ್ರ. 25 ಕೋಟಿ ರೂಪಾಯಿಗಳನ್ನು ಅವರಿಗೆ ಹಿಂದಕ್ಕೆ ಕೊಡಬೇಕಾಗಿದೆ, ಇನ್ನೂ 8 ಕೋಟಿ ರೂಪಾಯಿಗಳಷ್ಟು ಖೋತಾ ಬೇರೆ ಬೀಳುತ್ತದೆ. ಒಟ್ಟಿನಲ್ಲಿ ಬಂಡವಾಳದ ವೆಚ್ಚಕ್ಕೆ ಎಲ್ಲಿಂದ ಹಣವನ್ನು ತರಬೇಕು ಎನ್ನುವುದು ದೊಡ್ಡ ಸಮಸ್ಯೆಯಾಗಿದೆ.

ಸಾಮಾನ್ಯವಾಗಿ ಒಂದು ವಿಷಯದ ಬಗ್ಗೆ ಅಭಿನಂದನೆಯನ್ನ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ ವೃದ್ಧಾಪ್ಯ ವೇತನದ ತತ್ವವನ್ನು ತತ್ವಶಃ ತಾವು ಅಂಗೀಕರಿಸಿದ್ದೀರಿ. ಆದರೆ 70 ವರ್ಷದವರು ಅದರಲ್ಲಿಯೂ ನಿರ್ಗತಿಕರಾದ (ಡೆಸ್ಟಿಟ್ಯೂಟ್ಸ್) ಮುದುಕರಿಗೆ ಕೊಡುತ್ತೇವೆ ಎಂದು. 70 ವರ್ಷದ ಮಿತಿಯನ್ನು ಗೊತ್ತು ಮಾಡುವುದಾದರೆ ಸಾಮಾನ್ಯವಾಗಿ ಎಲ್ಲರಿಗೂ ಕೊಡಬಹುದು. 70 ವರ್ಷದವರು ಬಹಳ ಕಡಮೆ ಜನ ಸಿಕ್ಕುತ್ತಾರೆ. ವೃದ್ಧಾಪ್ಯ ವೇತನ ಕೊಡುವುದನ್ನು ನಾವು ತತ್ವಶಃ ಒಪ್ಪಿದ್ದರೂ ಕೂಡ ವಯಸ್ಸಿನ ಮಿತಿಯನ್ನು ಐದು ವರ್ಷ ಕಡಮೆ ಮಾಡಿ 65ಕ್ಕೆ ಇಳಿಸಿದರೆ ಮತ್ತು 15 ರೂಪಾಯಿಗಳನ್ನು ಕೊಡುವ ಕಡೆ 30 ರೂಪಾಯಿಗಳನ್ನು ಕೊಟ್ಟರೆ ಏನೋ ಒಂದು ಒಳ್ಳೆಯ ಕೆಲಸವನ್ನು ಮಾಡಿದಂತಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

2-00 P.M.

ಹೋದಸಾರಿ ಪೆನ್‌ಷನ್‌ದಾರರಿಗೇನಾದರೂ ಪರಿಹಾರ ಕೊಡಬೇಕೆಂದು ಕೇಳಿದಾಗ ಶ್ರೀಮಾನ್ ಜತ್ತಿಯವರು, ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರು. ಆದರೆ ಈ ಸಾರಿ ಅವರಿಗೆ ಐದು ರೂಪಾಯಿ ಕೊಟ್ಟಿದ್ದಾರೆ, ಇದು ಅಭಿನಂದನೀಯವಾದ ವಿಚಾರ. ಪೆನ್‌ಷನ್ ದಾರರ ಬೇಡಿಕೆಗಳು ಇನ್ನೂ ಕೆಲವಿವೆ. ಅವುಗಳನ್ನೂ ಸರಕಾರ ಸಹಾನುಭೂತಿಯಿಂದ ವಿಚಾರ ಮಾಡಬೇಕೆಂದು ಹೇಳುತ್ತೇನೆ. ವೃದ್ಧಾಪ್ಯವೇತನಕ್ಕಾಗಿ 25 ಲಕ್ಷ ರೂಪಾಯಿ ಮತ್ತು ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸುವುದಕ್ಕಾಗಿ 125 ಲಕ್ಷ ರೂಪಾಯಿ ಒಟ್ಟು 150 ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅದನ್ನು ಇಲ್ಲಿ ತೋರಿಸಿಲ್ಲ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಏಕೆ ತೋರಿಸಿಲ್ಲವೆಂದರೆ, ಸೇಲ್ಸ್ ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್‌ನಿಂದ 175 ಲಕ್ಷ ರೂಪಾಯಿ ಬಾಕಿ ವಸೂಲು ಮಾಡುವುದರಿಂದ ಬರುತ್ತದೆ. ಅದ ಕಾರಣ ಅದನ್ನು ಇಲ್ಲಿ ತೋರಿಸಲಿಲ್ಲ. ಬಾಕಿ ವಸೂಲಾಗುತ್ತದೆಯಾದ ಕಾರಣ ಬಡ್ಜೆಟ್‌ನಲ್ಲಿ ಖೋತ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಈ ಆಯವ್ಯಯದ ಮುಂಗಡ ಪತ್ರದಲ್ಲಿ ಅದಕ್ಕೆ ಹಣವನ್ನೇನೂ ಒದಗಿಸಿಲ್ಲ. ಶರಾವತಿಗೆ ಬಂದಾಗ ಶ್ರೀಮಾನ್ ನಿಜಲಿಂಗಪ್ಪನವರು ಅಲ್ಲಿನ ಮುಳುಗಡೆ ಜಮೀನುದಾರರಿಗೂ ಗೇಣಿದಾರರಿಗೂ ಪರಿಹಾರ ಕೊಡಿಸುವುದಾಗಿ ಹೇಳಿದ್ದರು. ಆ ವಿಷಯವನ್ನು ಅರ್ಥಮಂತ್ರಿಗಳಿಗೆ ತಿಳಿಸಿದ್ದಾರೋ ಇಲ್ಲವೊ ಗೊತ್ತಿಲ್ಲ.

ಶ್ರೀ ಬಿ. ಡಿ. ಜತ್ತಿ.—ಆ ವಿಷಯ ಇದರಲ್ಲಿ ಬರುವುದಿಲ್ಲ. It is a different Project altogether. Whatever amount we spend, whether it is compensation or giving facilities, that will come under the project head and it is not necessary to mention it in the Budget. So, the Chief Minister has not asked me to mention it in the Budget.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರು ಸುಮ್ಮನೆ ಇದ್ದರೆ ಅವರಿಗೇನುಬೇಕೋ ಅದನ್ನು ಮಾಡಿಕೊಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ನಮ್ಮ ಆರ್ಥಿಕ ನೀತಿ ಬಹಳ ಪರಿವರ್ತನೆಯಾಗಬೇಕಾಗಿದೆ. ಸರಕಾರದವರು ಸಾರ್ವಜನಿಕವಲಯದಲ್ಲಿ ಹೆಚ್ಚು ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ಕೇಂದ್ರ ಸರಕಾರದ ಸಹಾಯವನ್ನು ಪಡೆಯಬೇಕು. ಸಂಪನ್ಮೂಲಗಳನ್ನು ಇತರರಿಗೆ ಬಿಟ್ಟು ಕೊಡತಕ್ಕ ನೀತಿಯನ್ನು ಕೈಬಿಡಬೇಕೆಂದು ಈ ಸಂದರ್ಭದಲ್ಲಿ ಸರಕಾರದವರಿಗೆ ಹೇಳುತ್ತೇನೆ.

†ಶ್ರೀ ಅಣ್ಣಾರಾವ್ ಗಣಮುಖಿ (ಅಫಸಲ್‌ಪುರ).—ಅಧ್ಯಕ್ಷರೆ, ಈ ದಿವಸ ಮಾನ್ಯ ಅರ್ಥಮಂತ್ರಿಯವರಾದ ಶ್ರೀಮಾನ್ ಜತ್ತಿಯವರ ಪರಿಸ್ಥಿತಿಯ ಬಗ್ಗೆ ನಾವು ಬಹಳ ಕನಿಕರ ಪಡಬೇಕಾಗಿದೆ. ಅವರು ದಿವಾಳಿಗಾರರಾಗುವ ದಾರಿಯಲ್ಲಿ ಹೋಗುತ್ತಿದ್ದಾರೊ ಏನೋ ಎನಿಸುತ್ತದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಹೆಚ್ಚು ಸಾಲ ಪಡೆಯುವುವರ ಜೊತೆಗೆ ಅವಕ್ಕೆ ಬಡ್ಡಿಯನ್ನು ಕೂಡ ಕೊಡುವ ಶಕ್ತಿ ಅಳಿದು ಹೋಗಿದೆ. ಮುಂದೆ ಸಾಲ ಪಡೆಯತಕ್ಕ ಪರಿಸ್ಥಿತಿ ಏನು ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಈ ಪರಿಸ್ಥಿತಿಯನ್ನು ಈಗಿನಿಂದಲೇ ಹಿಡಿತದಲ್ಲಿ ತರದೇಹೋದರೆ ಮುಂದೆ ಬರತಕ್ಕ ಹಣಕಾಸಿನ ಸಚಿವರಿಗೆ ಸಾಧ್ಯವಾಗದೇಯಿರಬಹುದೆಂದು ನನಗನಿಸುತ್ತದೆ. ಇಂತಹ ಗಂಡಾಂತರ ಪರಿಸ್ಥಿತಿಯಲ್ಲಿ ಹಣಕಾಸಿನ ಸಚಿವರಿರುತ್ತಾರೆ. ಹಿಂದೆ ನನಗೆ ಅನುಭವವಿತ್ತು. ಈಗ ಶರಾವತಿಯಲ್ಲಿ ಮತ್ತು ಇತರ ಎಲ್ಲ ಯೋಜನೆಗಳಲ್ಲಿಯೂ ಖರ್ಚು ಮಾಡತಕ್ಕ ವ್ಯವಹಾರಗಳನ್ನು ನೋಡಿದರೆ ಅಲ್ಲಿ ಬಹಳ ದುರ್ವ್ಯಯ ನಡೆದಿವೆ ಎಂದು ಖಂಡಿತವಾಗಿ ಹೇಳಬೇಕಾಗುತ್ತದೆ. ಶರಾವತಿ ಸಂಬಂಧವಾದ ಶ್ವೇತ ಪತ್ರವನ್ನು ನೋಡಿದರೆ, 32ನೆಯ ಪ್ಯಾರಾದಿಂದ ಮುಂದೆ ನೋಡಿದರೆ ಹಳಿ ಬಿಟ್ಟು ಕೆಳಗೆ ಹೋಗುತ್ತಿದೆ. ರಾಕ್‌ಫಿಲ್ ಏಜೆನ್ಸಿ ಗೊತ್ತು ಮಾಡುವ ಕಾಲದಲ್ಲಿ ಹಳಿಯ ಕೆಳಗೆ ಇಳಿದುಹೋದನಂತರ ಮುಂದೆ ನಡೆಯುವುದಕ್ಕೆ ಸಾಧ್ಯವಿಲ್ಲ, ಬೀಳುತ್ತದೆಯೋ ಏನೋ ಸರಕಾರದ ರಥ ಎನ್ನುವ ಅನುಮಾನ ಬರುತ್ತದೆ. ಯಾವ ಸಂಶಯವೂ ಬಾರದೇಯಿರುವ ಅಂಶಗಳನ್ನು ಇದರಲ್ಲಿ ಹಾಕಿದ್ದರೆ ಚೆನ್ನಾಗಿತ್ತು. 27 ಮತ್ತು 28ನೆಯ ಕ್ಲಾಜುಗಳ ವಿಚಾರ ಪ್ರಸ್ತಾಪಿಸಿದ್ದಾರೆ. ಮಣ್ಣಿನ ಡ್ಯಾಮ್ ಬದಲಾಯಿಸಿ ಬೇರೆ ಡ್ಯಾಮ್ ಹಾಕಬೇಕಾಯಿತೆಂದು ಹೇಳಿದ್ದಾರೆ. ಒಪ್ಪಂದದ 27 ಮತ್ತು 28ನೆಯ ಕ್ಲಾಜುಗಳಲ್ಲೇನಿದೆ ಎಂಬುದನ್ನು ಇಲ್ಲಿ ಹೇಳಿಲ್ಲ. ಒಪ್ಪಂದದ ಪ್ರಕಾರ ಅದೇ ಕಂಟ್ರಾಕ್ಟರಿಗೆ ಮೇಸನರಿ ಡ್ಯಾಮು ಕೆಲಸವನ್ನು ಒಪ್ಪಿಸಿದರು. ಮುಂದೆ ತಿರುಗು ಮುರುಗು ಮಾಡಿ ಸರಕಾರದ ಅಧಿಕಾರವಿಲ್ಲ ಕಂಟ್ರಾಕ್ಟರದು ಅಧಿಕಾರ ಎಂದು ತೋರಿಸುವುದಕ್ಕೆ ಪ್ರಯತ್ನ ನಡೆದಿದೆ. 32ನೆಯ ಕ್ಲಾಸ್‌ನ ಮುಂದೆ ನೋಡಿದರೆ ಎಲ್ಲರಿಗಿಂತ ಹೆಚ್ಚಾಗಿ ಕಂಟ್ರಾಕ್ಟರದೇ ಅಧಿಕಾರವಾಗಿದೆ ಎಂದು ತೋರುತ್ತದೆ. ಏಕೆಂದರೆ, ಈ ಕೆಲಸವನ್ನು ಅವರಿಗೆ ಕೊಡುವಾಗ ಏನು ಒಪ್ಪಂದ ಮಾಡಿದ್ದಾರೋ ಅದರಲ್ಲಿ ಕೆಲವು ಜವಾಬ್ದಾರಿಗಳು ಕಂಟ್ರಾಕ್ಟರಿಗೂ ಇದೆ ಅಧಿಕಾರಿಗಳಿಗೂ ಇದೆ, ಸರಕಾರಕ್ಕೂ ಇವೆ. 32ನೆಯ ಕ್ಲಾಜಿಗಿಂತ ಮೊದಲು ಒಂದು ಪ್ಯಾರಾ ಬರುತ್ತದೆ, ಅದರಲ್ಲಿ ಸರಕಾರ ಚೆನ್ನಾಗಿ ಅಧಿಕಾರ ಚಲಾಯಿಸಿರುವುದು ಕಂಡುಬರುತ್ತದೆ. ಹೀಗಿರುವಾಗ ಮುಂದೆ ಹೋಗಿ ಈ ಅಧಿಕಾರವನ್ನು ಏಕೆ ಚಲಾಯಿಸಲಿಲ್ಲ

ಎಂದು ಎಲ್ಲರೂ ವಿಚಾರ ಮಾಡಬೇಕಾಗುತ್ತದೆ. 6ನೆಯ ಪುಟದ 13ನೆಯ ಪ್ಯಾರಾವನ್ನು ಗಮನಿಸಿದರೆ

> "...The question of consideration was, whether Government could invite fresh tenders for this altered work or whether the terms and conditions of the agreement for Sections V and VI required Government to entrust the substituted work to the same contractors to whom the original work was awarded. Opinion of the Legal Department was obtained and the matter was further considered by Civil Engineering Sub-Committee at its meeting held on 7th, 8th and 9th January 1960 and subsequently by the Hydro Electric Construction Projects Board. After full examination of the implications involved, tho Board recommended and the Government accepted the recommendation that in accordance with Clauses 27 and 28 of the Agreement entered into with the contractors,..."

ಎಂದಿದೆ. ಎಂದರೆ ಒಂದು ಕೆಲಸಕ್ಕೆ ಬದಲಾಗಿ ಯಾವ ಕೆಲಸವೇ ಇರಲಿ ಅದನ್ನು ಮೊದಲು ಯಾರು ಮಾಡುತ್ತಿದ್ದಾರೋ ಅವರೇ ಮಾಡುವುದು ಅವರ ಜವಾಬ್ದಾರಿ. ಆದರೆ ಇದನ್ನು ಕಂಟ್ರಾಕ್ಟರಿಗೆ ಹೆಚ್ಚಿನ ಅಧಿಕಾರ ಕೊಡಲು ಉಪಯೋಗ ಮಾಡಲಾಗಿದೆ. ಕಂಟ್ರಾಕ್ಟರಿಗೆ ಅನುಕೂಲವಾಗುವಂತೆ ಮಾಡಿದೆಯೇ ವಿನಾ ಸರಕಾರದ ಹಕ್ಕನ್ನು ಉಪಯೋಗ ಮಾಡಿಲ್ಲ. ಆದುದರಿಂದ ಹೆಚ್ಚು ಹಣ ಪೋಲಾಗಿದೆ ಎನ್ನುವುದು ಒಪ್ಪತಕ್ಕ ಮಾತಾಗಿದೆ. ಮತ್ತು ಆ ಒಪ್ಪಂದವೇನಿದೆಯೋ ಅದು ಸರಿಯಾದ ಒಪ್ಪಂದವಲ್ಲ ಯಾರೋ ಕಂಟ್ರಾಕ್ಟರ್ ಉಪಯೋಗಕ್ಕಾಗಿದೆ ಎನ್ನುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಸರಕಾರಕ್ಕೆ ಏನೂ ಅಧಿಕಾರವಿಲ್ಲ, ಕಂಟ್ರಾಕ್ಟರು ಬೇಕಾದರೆ ಕೆಲಸ ಬೇಡ ಎನ್ನಬಹುದು ಅಥವಾ ಮಾಡುತ್ತೇನೆ ಎನ್ನಬಹುದು. ಹಿಂದೆಯೂ ಇದು ನಾನಿದ್ದಾಗ ಚರ್ಚೆಗೆ ಬಂದಿತ್ತು, ನಾನು ಓತ್ ಆಫ್ ಸೀಕ್ರಸಿ ತೆಗೆದುಕೊಂಡಿರುವುದರಿಂದ ಆಗ ಏನು ಚರ್ಚೆ ನಡೆಯಿತೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆಗ ಮುಖ್ಯ ಮಂತ್ರಿಯಾಗಿದ್ದವರು ಯಾವ ಅಭಿಪ್ರಾಯ ಪಟ್ಟರು ಎನ್ನುವುದು ಗೊತ್ತಿದೆ. ಸರಕಾರಕ್ಕೆ ಅನುಕೂಲವಾಗುವ ಅಥವಾ ಆಗಬೇಕಾದ ಒಪ್ಪಂದ ಕಂಟ್ರಾಕ್ಟರಿಗೆ ಅನುಕೂಲವಾಗುವಂತಿದೆ. ಊಂಟ್‌ರೇ ಊಂಟ್ ತೇರಿ ಕೊನಸಿ ಕಲ್ ಸೀಧೀ? ಎಂದು ಉರ್ದುವಿನಲ್ಲಿ ಒಂದು ಗಾದೆ ಇದೆ. ಅದರ ಅರ್ಥ ಇಷ್ಟೇ. ಎಲೆ ಒಂಟೆಯೇ ನಿನ್ನ ಯಾವ ಅವಯವ ಸೀಧಾ ಇದೆ? (ನಗು) ಒಂಟೆಯ ಯಾವ ಅವಯವವೂ ಸರಳವಾಗಿಲ್ಲ. ಅಂಕುಡೊಂಕಾಗಿದೆ. ಅದೇ ರೀತಿಯಾಗಿ ಇಲ್ಲಿಯೂ ಕೂಡ ಎಲ್ಲ ಕೆಲಸ ಕಾರ್ಯಗಳು ಅಂಕುಡೊಂಕಾಗಿವೆ. ಯಾವುದೂ ಸಹಜವಾದ ರೀತಿಯಲ್ಲಿ ಮಾಡಿರುವುದಿಲ್ಲ. ಮಣ್ಣು ಕೆಲಸ ರಾಕ್ ಫಿಲಿಂಗ್ ಈ ಕೆಲಸ ಮಾಡಬೇಕಾದುದು ಕಂಪನಿಯ ಜವಾಬ್ದಾರಿಯಾಗಿತ್ತು. ಅದಕ್ಕೆ ಒಂದು ಅಗ್ರಿಮೆಂಟ್ ಇದೆ. ಇದು ನಿರ್ದಿಷ್ಟವಾಗಿ ಗೊತ್ತಾಗುತ್ತದೆ. 'ಇಂಥಿಂಥ ಕೆಲಸ ಪೂರ್ತಿಮಾಡಲೇ ಬೇಕು ಎಂದು ಸರಕಾರ ಅವರಿಗೆ ಹೇಳಬಹುದಾಗಿತ್ತು. ಒಂದು ವೇಳೆ ಕಂಟ್ರಾಕ್ಟರ್ ಮಾಡದೇ ಹೋದರೆ ಆರ್ಬಿಟ್ರೇಷನ್ನಿಗೆ ಹೋಗಬಹುದು ಎಂದು ಸಹ ಅಗ್ರಿಮೆಂಟಿನಲ್ಲಿದೆ. ಇದಲ್ಲದೆ ಹೈಡ್ರೋ ಇಲೆಕ್ಟ್ರಿಕ್ ಪ್ರಾಜೆಕ್ಟ್ ಬೋರ್ಡ್ ಇದ್ದರೂ ಕೂಡ ಹೊಸದಾಗಿ ಟೆಂಡರ್ಸ್ ಕಾಲ್‌ಫಾರ್ ಮಾಡಿದಿರಿ. ಈ ರೀತಿ ಸರಕಾರ ಒಂದು ಧರ್ಮಛತ್ರ ನಡೆಸಬಾರದು, ಚೌಲ್ಟ್ರಿ ಇಡಬಾರದು. ಅರ್ತ್ ವರ್ಕ್ ಕೆಲಸದಲ್ಲಿಯೂ ಕೂಡ ರೇಟ್ ಜಾಸ್ತಿ ಮಾಡಿದಿರಿ. ಹಾಗಾದರೆ ಅಗ್ರಿಮೆಂಟ್ ಮಾಡಿಕೊಂಡದ್ದು ಏತಕ್ಕೆ? ನಿಮಗೆ ಬೇಕಾದವರಾದ ಯಾರಿಗೋ ಒಬ್ಬರಿಗೆ ಫೇವರ್ ಮಾಡಲು ಹೀಗೆ ರೇಟ್ ಜಾಸ್ತಿ ಮಾಡಿದ್ದೀರಿ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಒಂದು ನಿರ್ದಿಷ್ಟ ಉದ್ದೇಶ ಇಟ್ಟುಕೊಂಡು ಹೈಡ್ರೋ ಇಲೆಕ್ಟ್ರಿಕ್ ಕನ್‌ಸ್ಟ್ರಕ್ಷನ್ ಬೋರ್ಡ್ ಸ್ಥಾಪನೆ ಮಾಡಿದೆ. ಈ ಬೋರ್ಡಿನಲ್ಲಿ ನಾಲ್ಕು ಜನ ರಿಟೈರ್ಡ್ ಚೀಫ್ ಎಂಜನಿಯರ್ಸ್ ಇದ್ದಾರೆ, ಪ್ಲಾನಿಂಗ್ ಸೆಕ್ರೆಟರಿ ಇದ್ದಾರೆ, ಫೈನಾನ್ಸ್ ಸೆಕ್ರೆಟರಿ ಇದ್ದಾರೆ, ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಗಳು ಇದ್ದಾರೆ ಇದರಲ್ಲಿ ಎಲ್ಲರೂ ಇದ್ದಾರೆ. ಕೋಟಿಗಟ್ಟಲೆ ಹಣ ಖರ್ಚು ಮಾಡಿ ಕೆಲಸ ಮಾಡಬೇಕಾಗಿರುವುದರಿಂದ ಎಲ್ಲ ಉನ್ನತ ಅಧಿಕಾರಿಗಳೂ ಇದ್ದಾರೆ ಹೀಗೆ ಇದ್ದರೂ ಕೂಡ ಈ ಬೋರ್ಡ್ ಹುಟ್ಟಿದಂದಿನಿಂದ ಒಂದಾದರೂ ಕೆಲಸ ಮಾಡಿದ ನಿದರ್ಶನ ತೋರಿಸಬೇಕು. ನಾನು ಅಧಿಕಾರದಲ್ಲಿದ್ದಾಗ ಎಲ್ಲ ಕೆಲಸ ಎಕ್ಸ್‌ಪರ್ಟ್ ಮುಂದೆ ಹೋಗಿದೆ. ಟೆಂಡರ್ ಕಾಲ್‌ಫಾರ್ ಮಾಡಿದೆ. ಮೀಟಿಂಗ್ ತಾರೀಖು

(ಶ್ರೀ ಅಣ್ಣಾರಾವ್ ಗಣಮುಖಿ)

ಗೊತ್ತು ಮಾಡಲಾಗಿತ್ತು. ಹಾಗು ಹೊಸ ಟೆಂಡರ್ ಬೋರ್ಡ್ ಮುಂದೆ ಇದ್ದರೂ ಕೂಡ ಮೀಟಿಂಗ್ ಪೋಸ್ಟ್‌ಪೋನ್ ಮಾಡಿದ್ದೀರಿ. ಇದು ವೈಟ್-ಪೇಪರ್‌ನಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. 2,62,00,000 ರೂಪಾಯಿ ವೆಚ್ಚದಿಂದ ಆಗಬೇಕಾದ ಕೆಲಸವನ್ನು - ನಾವೇ ಮಾಡುತ್ತೇವೆ ಎಲ್ಲ ಕೆಲಸದಲ್ಲಿಯೂ ನಾವೇ ಎಕ್ಸ್‌ಪರ್ಟ್ ಆಗಿದ್ದೇವೆ ಎಂಬ ಭಾವನೆ ನಿಮಗೆ ಇದೆ ಮತ್ತು ಇದರಲ್ಲಿ ಏನೋ ಮಾಡಿದ್ದೀರಿ ಎಂಬ ಸಂಶಯ ಬರುತ್ತದೆ. ವೈಟ್ ಪೇಪರ್ ಪ್ರಕಟವಾಗುವವರೆಗೆ ನಾನು ಬಾಯಿ ತೆರೆದು ಯಾವ ಅಪಾದನೆ ಮಾಡಿದ್ದಿಲ್ಲ. ಈಗ ವೈಟ್ ಪೇಪರ್ ಬಂದ ಮೇಲೆ ಇದನ್ನು ಹೇಳಬೇಕಾಯಿತು. ಒಂದು ಅಂಶ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಿಜವಾಗಿಯೂ ಎಷ್ಟು ಹಣ ಪೋಲು ಆಗಿದೆ ಎಂಬುದು ಈಗ ಗೊತ್ತಾಗುತ್ತದೆ. ವೈಟ್ ಪೇಪರ್ ಹೊರಗೆ ಬಂದ ಮೇಲೆ ಅದನ್ನು ನೋಡಿ ಸಂಶಯ ಬಂದ ಮೇಲೆ ಈ ರೀತಿ ಹೇಳುತ್ತಿದ್ದೇನೆ. ದೇಶದಲ್ಲಿ ಇಂದು ಕಂಡು ಬರುತ್ತಿರುವ ದುರಾಚಾರ ಭ್ರಷ್ಟಾಚಾರ ಹೋಗಬೇಕು, ಹಾಗು ಸದಾಚಾರ ಸ್ಥಾಪನೆ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಈ ಬೋರ್ಡ್ ಮೀಟಿಂಗ್ ಎತಕ್ಕೆ ಪೋಸ್ಟ್‌ಪೋನ್ ಮಾಡಿದರು? ಅಂಥ ಕಾರಣ ಏನಿತ್ತು? ಇನ್ನೊಂದು ಸಲ ಏಳು ದಿವಸಗಳಲ್ಲಿ ಒಂದು ಎಮರ್ಜನ್ಸಿ ಮೀಟಿಂಗ್ ಕರೆದಿದ್ದೀರಿ. ಹೀಗಿದ್ದರೂ ಕೂಡ ಈ ಮೀಟಿಂಗ್ ಏಕೆ ಮುಂದಕ್ಕೆ ಹಾಕಲಾಯಿತು? ತಾವೇ ಅಧಿಕಾರ ತೆಗೆದುಕೊಳ್ಳುವುದೇ ಇದರ ಉದ್ದೇಶ ಎಂದು ಹೇಳುತ್ತೇನೆ. ಇದರ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಹೈಡ್ರೋ ಇಲೆಕ್ಟ್ರಿಕ್ ಬೋರ್ಡಿಗೆ ಅಧಿಕಾರ ವಹಿಸಿಕೊಟ್ಟ ಮೇಲೆ ನೀವೇ ಎಲ್ಲ ಕೆಲಸ ಮಾಡುತ್ತೇವೆ ಎಂದು ಹೇಳುವುದು ತಪ್ಪು. ಹೀಗೆ ಮಾಡಬಾರದಾಗಿತ್ತು. 7—7—60ನೇ ದಿನ ಇನ್ನೊಂದು ಮೀಟಿಂಗ್ ಕರೆದಿದ್ದೀರಿ. ಅಗ್ಗೆ ಅದು ಸಾಧ್ಯವಾಗಿತ್ತು. ಆದರೆ ಮುಂದೆ ಏತಕ್ಕೆ ಸಾಧ್ಯವಾಗಲಿಲ್ಲ? ನಿಮಗೆ ಮೇ ತಿಂಗಳಿನಲ್ಲಿ ಕೆಲಸ ಮಾಡಿಸಬೇಕಾಗಿತ್ತು.

ಒಬ್ಬ ಚೀಫ್ ಇಂಜನಿಯರೂ, ಇನ್ನೂ ಎಷ್ಟೋ ಚೀಫ್ ಇಂಜನಿಯರುಗಳೂ ಕೆಲಸಮಾಡುತ್ತಾ ಇದ್ದಾರೆ, ಇಡೀ ಇಂಡಿಯ ದೇಶದಲ್ಲಿಯೇ ದೊಡ್ಡ ದೊಡ್ಡ ಕಾರ್ಯಕ್ರಮ ಮಾಡುತ್ತಾ ಇದ್ದರು. ಅಂಥವರಿಗೆ 3 ತಿಂಗಳಲ್ಲಿ ಮಳೆಗಾಲ ಇರುತ್ತದೆ. ಮೆ, ಜೂನ್, ಜುಲೈ ತಿಂಗಳುಗಳಲ್ಲಿ ಕೆಲಸ ಕಾರ್ಯ ಮಾಡುವುದಕ್ಕಾಗುವುದಿಲ್ಲವೆಂದು ಗೊತ್ತಿರಬೇಕು. ಅಂತಹುದರಲ್ಲೂ 31ರೊಳಗೆ ಕೆಲಸ ಪ್ರಾರಂಭವಾಗಬೇಕಾಗಿತ್ತೆಂದು ಹೇಳುತ್ತಾರೆ. ಇದು ಕುಂಟು ನೆವ ತೋರಿಸುತ್ತಿದ್ದಾರೆನ್ನುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ವೈಟ್ ಪೇಪರಿನಲ್ಲಿ ಭದ್ರವಾದ ಕಾರಣಗಳನ್ನು ತೋರಿಸಿದ್ದರೆ ಚೆನ್ನಾಗಿರುತ್ತಿತ್ತು; ತೋರಿಸಿಲ್ಲ.

ಇದೆಲ್ಲಾ ಆದರೂ ಮತ್ತೆ ಟೆಂಡರುಗಳನ್ನು ಕಾಲ್ ಮಾಡಿದ್ದಾರೆ. ಯಾವ ಯಾವ ಜನರು ಟೆಂಡರು ಹಾಕಿದ್ದಾರೆ ಅವುಗಳನ್ನು ನಾವು ನೋಡಿದರೆ ಇದರಲ್ಲಿ ಸಾಧಾರಣವಾಗಿ ಯಾರ ಟೆಂಡರ್ ಲೋಯೆಸ್ಟ್ ಇದೆಯೆಂದರೆ 3ನೇ ಕಾಲಮ್ಮಿನಲ್ಲಿರುವವರು, ಅವರು ಎಂ. ಎಸ್. ರಾಮಯ್ಯನವರು. ಅವರದು ಎಲ್ಲರಿಗಿಂತಲೂ ಕಡಿಮೆ ಇದೆಯೆಂದು ಕಾಣುತ್ತದೆ. ಪೇಜು 42, 9ನೇ ಕಾಲಮ್ಮು. ಅವರದು ಲೋಯೆಸ್ಟ್ ಇದೆ. ಟೆಂಡರ್ ಕಾಲ್ ಮಾಡುವುದು ರೇಟ್ ಕಾಂಪಿಟಿಟಿವ್ ಇರಬೇಕೆಂತ. ಈಗ ಇಲ್ಲಿ ಆಗಿರುವುದು ಜಗತ್ತಿನಲ್ಲಿ ಯಾವ ಕಾಲದಲ್ಲಿಯೂ ಆಗಿಲ್ಲ. ಟೆಂಡರ್ ಓಪನ್ ಮಾಡಿದ ನಂತರ ವೈರ್ ಬರುತ್ತದೆಂದರೆ ಆಶ್ಚರ್ಯವಾಗುತ್ತದೆ. In words also, 40 ಅಂತ ಬರೆದು, ಅದು ತಪ್ಪು ಆಗಿದೆಯೆಂದರೆ ಆಶ್ಚರ್ಯವಾಗುತ್ತದೆ. 100 ಇರಬೇಕು ಎಂದು ಆಮೇಲೆ ಹಾಕಿದ್ದಾರೆ. ನಾನು ಈ ಸಂಬಂಧದಲ್ಲಿ ಇನ್ನೊಂದು ಹೇಳಬಯಸುತ್ತೇನೆ. ಒಂದು ವೇಳೆ ರೂ. 40 ಇದ್ದರೂ ಇದು ಅನ್‌ವರ್ಕಬಲ್ ಹೇಗೆ? ರಾಕ್-ಫಿಲ್ಲಿಂಗ್ ವರ್ಕು 2 ಫೇಸಿನಲ್ಲಿ ಆಗುತ್ತದೆ. ಒಂದು ಫೇಸಿನಲ್ಲಿ 108, 2ನೇ ಫೇಸಿನಲ್ಲಿ 40 ಆಗುತ್ತದೆ. ಎರಡೂ ಒಂದೇ ಕೆಲಸ. ಎರಡನ್ನೂ ಕೊಟ್ಟಿದ್ದಾರೆ. ಅವರೇಜ್ ಮಾಡಿದರೆ ಅವರಿಗೆ 74 ರೂಪಾಯಿ ಪರ್ ಯೂನಿಟ್ ಬೀಳುತ್ತದೆ. ಆ ಪ್ರಕಾರ ಅವರೇಜ್ ಮಾಡಿದರೆ, ಕಂಟ್ರಾಕ್ಟರ್ ಟೆಂಡರು 2 ಕೋಟಿ 60 ಲಕ್ಷ ರೂಪಾಯಿ ಆಗುತ್ತದೆ. 40 ರೂಪಾಯಿ ಹಾಕಿದ್ದು ಅವರು ತಪ್ಪು ಎಂದು ಹೇಳುವುದು ಅಪರಾಧ. ಇಂಥ ಅಂಡರ್ ಕೋಟಿಂಗ್ ಮಾಡಿದರೆ, ಕಟ್-ಥ್ರೋಟ್ ಕಾಂಪಿಟಿಶನ್ ಮಾಡಿದರೆ, ರೂಲ್ಸ್ ಆಫ್ ರೆಜಿಸ್ಟ್ರೇಶನ್ ಪ್ರಕಾರ ಅವರನ್ನು ಬ್ಲಾಕ್ ಲಿಸ್ಟ್ ಮಾಡಬೇಕು ಎಂದಿದೆ. ಅಂಥವರಿಗೆ ಬ್ಲಾಕ್‌ಲಿಸ್ಟ್ ಮಾಡುತ್ತಾ ಇಲ್ಲ. ಒಂದು ಟೆಂಡರ್ ತಪ್ಪಿದ್ದರೆ next highest tender ನೋಡಬಹುದಾಗಿತ್ತು. 7 ಮಂದಿ ಕಂಟ್ರಾಕ್ಟರುಗಳು ಟೆಂಡರು ಹಾಕಿದ್ದರೆ, ಎಲ್ಲರನ್ನೂ ಇನ್‌ವೈಟ್ ಮಾಡಬೇಕು. ಅದು ಬಿಟ್ಟು 4 ಮಂದಿಗೆ ಮಾತ್ರ ಕೆಲಸ ಕೊಟ್ಟು ಬಾಕಿ ಮೂರು ಮಂದಿಗೆ ಕರೆಯದ ಬಿಡುವುದೆಂದರೆ ಇದರಲ್ಲಿ ಬಹಳ ಸಂಶಯ ಬರುತ್ತದೆ. ಆದರಿಂದ ಇಂಥ ಸಂಶಯವನ್ನು ಹೇಗೆ ನಿವಾರಣೆ ಮಾಡುವುದು? ಸಂಶಯ ನಿವಾರಣೆ ಆಗುತ್ತಿಲ್ಲ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅದ್ದರಿಂದ ಜುಡಿಶಿಯಲ್ ಎನ್‌ಕ್ವಯರಿ ಮಾಡಬೇಕು ಅಂತ ಹೇಳುತ್ತೀರ ?

ಶ್ರೀ ಅಣ್ಣಾರಾವ್ ಗಣಮುಖಿ.—ಮುಂದೆ ಇದೇ ಪ್ರಕಾರವಾಗಿ ಎಷ್ಟೋ ಕೆಲಸಕಾರ್ಯಗಳ ನಡೆದು ಹೋಗುತ್ತವೆ. ಪ್ರತಿಯೊಂದು ಸಲ ಗವರ್ನಮೆಂಟಿಗೆ ಅಧಿಕಾರವಿದೆ. ಅದನ್ನು ಅಡ್ವೊಕೇಟ್ ಮಾಡಿದ್ದಾರೆ. ಲಾ ಡಿಪಾರ್ಟಮೆಂಟಿನವರು ಅಗ್ರಿಮೆಂಟ್ ಪ್ರಕಾರ ಕೋರ್ಟಿಗೆ ತರಬೇಕು ಎಂಬ ಲಯಬಿಲಿಟಿ ಇದೆ ಎಂದು ಹೇಳುತ್ತಾರೆ, ಮತ್ತೆ ಒಪಿನಿಯನ್ ತೆಗೆದುಕೊಂಡರೆ, ಲಾ ಸೆಕ್ರೆಯಟ್ಟಿನಲ್ಲಿ ಸೆಕ್ರೆಟರಿಗಳು ಯಾರು ಯಾರೊ ಏನೇನೊ ಒಪಿನಿಯನ್ ಕೊಟ್ಟಿದ್ದಾರೆ. ಅದು ನನಗೆ ಅರ್ಥವಾಗುತ್ತಿಲ್ಲ. ಶ್ರೀ ತುಕೋಲ್‌ರವರು ಅಬ್ಲಿಗೇಶನ್ ಇದೆ ಅಂತ ಹೇಳಿದ್ದಾರೆ. ಯಾವ ಸೆಕ್ರೆಟೇರಿಯಲ್ ಒಪಿನಿಯನ್ನೂ ಗೊತ್ತಾಗವುದಿಲ್ಲ. ನಮಗೆ ಇನ್ನೂ ಕ್ಲಾರಿಫಿಕೇಶನ್ ಕೊಡಬೇಕಾಗಿತ್ತು ; ಈ ಸಂಬಂಧದಲ್ಲಿ ಎಲ್ಲಾ ಡಾಕ್ಯುಮೆಂಟುಗಳನ್ನೂ ಇಟ್ಟಿದ್ದರೆ ಚೆನ್ನಾಗಿರುತ್ತದೆ. ರೇಟು ವಿಚಾರದಲ್ಲಿ ಅಗ್ರಿಮೆಂಟಿಗೆ ಬಿಟ್ಟಿದ್ದಾರೆ. ಮುಂದೆ ಈ ರೇಟುಗಳು ಟ್ರಿಬ್ಯುನಲ್ಲಿಗೆ ಹೋಗುವುದಕ್ಕೆ ಕಾರಣವಿಲ್ಲ, ಇದು ಅರ್ಬಿಟ್ರರಿ ಪಾಯಿಂಟಲ್ಲ ಅಂತ ಎಲ್ಲರೂ ಒಪಿನಿಯನ್ ಕೊಟ್ಟಿದ್ದಾರೆಂದು ಕೇಳಿದೆ. ಲಾ ಸೆಕ್ರೆಟೇರಿಯಟ್ಟಿನಲ್ಲಿ ಆಮೇಲೆ ಏನು ಒಪಿನಿಯನ್ ಕೊಟ್ಟರೊ. ಅರ್ಬಿಟ್ರೇಟರ್ ಹತ್ತಿರ ಹೋದಾಗ ಅಡ್ವೊಕೇಟ್-ಜನರಲ್ ಇದೇ ರೀತಿ, ಜೂರಿಸ್ಡಿಕ್ಷನ್ ಇಲ್ಲ ಅಂತ ಆರ್ಗುಮೆಂಟ್ ಮಾಡಿ ನಿರ್ಣಯವಾಗಿದೆ. ರೇಟುಗಳು ಫಿಕ್ಸ್ ಆದಮೇಲೆ ಆರ್ಬಿಟ್ರೇಶನ್ನಿಗೆ ಹೋಗುವುದಕ್ಕೆ ಬರುವುದಿಲ್ಲ. ಜೂರಿಸ್ಡಿಕ್ಷನ್ ಇಲ್ಲದೆ ಹೋದರೆ ಹೇಗೆ ಅವಾರ್ಡ್ ಕೊಟ್ಟರು ? ಜಜ್ಮೆಂಟ್ ಕಾಪಿ ಕಾಣುವುದಿಲ್ಲ. ಇದು ಎಂತಹ ಜಜ್‌ಮೆಂಟು ? ಯಾವ ಎಕ್ಸ್‌ಪ್ಲನೇಶನ್ನೂ ಇಲ್ಲದೆ ಇರುವುದರಿಂದ ಯಾವುದೂ ತಿಳಿಯುವುದಕ್ಕೆ ಆಗುವುದಿಲ್ಲ. ಒಂದೇ ಮಾತಿನಲ್ಲಿ ಹೇಳಿಬಿಟ್ಟರು—13 ಲಕ್ಷ ರೂಪಾಯಿ ಅವರಿಗೆ ಕೊಡಬೇಕು ಅಂತ. 13,97,585 ರೂಪಾಯಿ ಎಷ್ಟೊಂದು ಐಟಮ್ಮುಗಳಿಗೆ ಕೊಡಬೇಕೆಂದು ಹೇಳಿಲ್ಲ. ಅಡ್ವೋಕೇಟ್-ಜನರಲ್ಲರು ಅವರಿಗೆ ಜೂರಿಸ್ಡಿಕ್ಷನ್ ಇಲ್ಲ ಅಂತ ಆರ್ಗ್ಯೂ ಮಾಡಿದರು. ಈಗ ಕೋರ್ಟಿಗೆ ಹೋಗಬಾರದು ಅಂತ ಹೇಗೆ ಒಪಿನಿಯನ್ ಕೊಟ್ಟರೊ ನನಗೆ ಗೊತ್ತಾಗುವುದಿಲ್ಲ. ಬೋರಯ್ಯ-ಬಸವಯ್ಯ ನವರ ವಿಷಯದಲ್ಲಿ ಶಿವಮೊಗ್ಗ ಕೋರ್ಟಿಗೆ ಹೋಗಿದ್ದರು. ಇದರಲ್ಲಿಯೂ ಕೂಡ 13 ಲಕ್ಷ ರೂಪಾಯಿ ಕೊಡತಕ್ಕಂಥ ಪ್ರಶ್ನೆಯನ್ನು ಕೋರ್ಟಿಗೆ ತಾವು ತೆಗೆದುಕೊಂಡು ಹೋದರೆ ಏನಾಗುತ್ತದೆ. ಕೋರ್ಟಿಗೆ ಹೋಗುವ ಪ್ರಶ್ನೆಯನ್ನೆ ಕೈ ಬಿಟ್ಟಿರುತ್ತಾರೆ. ಅಡ್ವೋಕೇಟ್ ಜನರಲ್ ಮತ್ತು ಲಾ ಸೆಕ್ರೆಟರಿ ಒಪಿನಿಯನ್ ಕೊಟ್ಟು, ಆರ್ಬಿಟ್ರೇಷನ್ನಿನಲ್ಲಿ ಯಾವಾಗ ವಾದ ಮಾಡಿದ್ದಾರೊ, ಆ ವಾದಕ್ಕೆ ವಿರುದ್ಧವಾಗಿ ಹಣ ಕೊಟ್ಟದ್ದು ಶುದ್ಧ ಅನ್ಯಾಯ. ಕಂಟ್ರಾಕ್ಟರು, ಸರಕಾರದವರು ಕೂಡಿ ಜನತೆಗೆ ಹಜಾಮತ್ ಮಾಡಿದ ಹಾಗಾಗಿದೆ.

Sri C. J. MUCKANNAPPA.—Is it parliamentary ?

Mr. SPEAKER.—The Hon,ble Member Sri C. J. Muckannappa, asks whether the word used by him is parliamentary or not. What is his opinion ?

ಶ್ರೀ ಅಣ್ಣಾರಾವ್ ಗಣಮುಖಿ.—ಇಬ್ಬರ ಮಧ್ಯದಲ್ಲಿ ಜನತೆಯ ಹಣ (ಎಂದರೆ ಪೀಪಲ್ಸ್ ಮನಿ) ಮುಂಡನವಾಗಿದೆ.

ಅದರಿಂದಾಗಿ ತಾರಾಪುರವಾಲಾ ಅವರೊಡನೆ ನೆಗೊಷಿಯೇಟ್ ಮಾಡುವುದಕ್ಕೆ ಯಾರಿಗೆ ಅಧಿಕಾರ ಕೊಟ್ಟಿರಿ, ಯಾವ ತಳಹದಿಯ ಮೇಲೆ ನೆಗೋಷಿಯೇಟ್ ಮಾಡುವುದಕ್ಕೆ ಅಧಿಕಾರ ಕೊಟ್ಟಿರಿ, ಏನಾದರೂ ಮಾಡಬೇಕಾದರೆ ಇಂತಿಂತಹ ತಳಹದಿಯ ಮೇಲೆ ಮಾಡಿರಿ ಎಂದು ಹೇಳಿದಿರಾ ? ಅದೆಲ್ಲಾ ಬಿಟ್ಟು ಬರೀ ಚೀಫ್ ಇಂಜನಿಯರು ನೆಗೊಸಿಯೇಟ್ ಮಾಡಿದರು ಅದಕ್ಕೆ ನೀವು ಸಿಗ್ನೇಚರ್ ಹಾಕಿದಿರಿ. ಇಂತಹ ಪರಿಸ್ಥಿತಿ ಎಲ್ಲೂ ಇಲ್ಲ. ಅದ್ದರಿಂದ ಈ ವೈಟ್ ಪೇಪರ್ ಸಮಾಧಾನಕರವಾಗಿ ಇಲ್ಲ ಎಂದು ಹೇಳಬಯಸುತ್ತೇನೆ.

2-30 P.M.

†ಶ್ರೀ ಸಿದ್ಧಯ್ಯ ಕಾಶೀಮಠ್ (ಶಿರಹಟ್ಟಿ).—ಅಧ್ಯಕ್ಷರೇ, ಈ ಸಭೆಯ ಮುಂದೆ 1964-65ನೆ ಇಸವಿಯ ಈ ಆಯವ್ಯಯದ ಅಂದಾಜನ್ನು ಆರ್ಥಿಕ ಮಂತ್ರಿಗಳು ಮಂಡಿಸಿದ್ದಾರೆ. ಈ ಆಯವ್ಯಯವನ್ನು ಮಂಡಿಸುವಾಗ ಅಥವಾ ಇದನ್ನು ತಯಾರು ಮಾಡುವಾಗ ಆರ್ಥಿಕ ಮಂತ್ರಿಗಳು ತಮ್ಮದೇ ಆದ ಒಂದು ಮಾದರಿಯನ್ನು ಇದರಲ್ಲಿ ತೋರಿಸಿದ್ದಾರೆ. ಇದರಲ್ಲಿ ರಾಜ್ಯದಲ್ಲಿ ಆಗಿರತಕ್ಕ ಎಲ್ಲಾ ಆಗು ಹೋಗುಗಳನ್ನೂ ಕೂಡ ಅಂಕಿ ಅಂಶಗಳ ಮುಖಾಂತರವಾಗಿ ಈ ಸಭೆಗೆ ತೋರಿಸಿ

(ಶ್ರೀ ಸಿದ್ದಯ್ಯ ಕಾಶೀಮಠ)

ಕೊಟ್ಟಿದ್ದಾರೆ. ಇದೂ ಅಲ್ಲದೇ ಈ ವರ್ಷ ತಮ್ಮ ಚಾತುರ್ಯದಿಂದ 7 ಲಕ್ಷ ರೂಪಾಯಿಗಳ ಹೆಚ್ಚುವರಿಯನ್ನು ತೋರಿಸಿಕೊಟ್ಟಿದ್ದಾರೆ. ಮೊಟ್ಟ ಮೊದಲನೆಯದಾಗಿ ಇದು ಒಂದು ಸಂತೋಷದ ಸಂಗತಿ ಎಂದು ಅಂದುಕೊಂಡಿದ್ದೆ. ಆದರೆ ವಿಶ್ರಾಂತಿ ವೇತನ ಪಡೆಯುತ್ತಿರುವವರಿಗೆ, ಕಡಿಮೆ ಸಂಬಳದ ನೌಕರರಿಗೆ ಮತ್ತು ಕುಟುಂಬ ವಿಶ್ರಾಂತಿ ವೇತನಕ್ಕೆ ಇದರಲ್ಲಿ ಅವಕಾಶ ಮಾಡಿಕೊಟ್ಟಿರುವುದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇಲ್ಲಿ ಕೊಟ್ಟಿರುವ ಪರಿಹಾರಕ್ಕಿಂತಲೂ ಇನ್ನೂ ಹೆಚ್ಚಿನ ಪರಿಹಾರ ಕೊಡಬೇಕೆಂದು ಅವರಿಗೆ ಎಷ್ಟೇ ಕನಿಕರ ಇದ್ದರೂ ಕೂಡ ರಾಜ್ಯದ ಆರ್ಥಿಕ ಮುಗ್ಗಟ್ಟಿನ ಸಲುವಾಗಿ ಅದನ್ನು ಮುಂದಕ್ಕೆ ಹಾಕಿದ್ದಾರೆ. ಈ ಮೂರು ಸೌಲಭ್ಯಗಳನ್ನೂ ಕೊಟ್ಟಿರುವುದರಿಂದ ಇದಕ್ಕಾಗತಕ್ಕ ಖರ್ಚನ್ನು ಈ ಬಡ್ಜೆಟ್‌ನಲ್ಲಿ ಸೇರಿಸಿದರೆ ಇದು ಒಂದು ಖೋತಾ ಬಡ್ಜೆಟ್ ಆಗುತ್ತದೆ, ಇದನ್ನು ಯಾವ ಲೆಕ್ಕದಲ್ಲಿ ಸೇರಿಸುತ್ತಾರೆಯೋ ಗೊತ್ತಿಲ್ಲ. ಅವರ ಭಾಷಣದಲ್ಲಿ ಈ ವರ್ಷ ಯಾವ ತೆರಿಗೆಯನ್ನೂ ಹಾಕುವುದಿಲ್ಲ ಎಂದು ಹೇಳಿದರು.

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ನಾನು ಎಕ್ಸ್‌ಪ್ಲನೇಷನ್ ಕೊಡುತ್ತೇನೆ. ಸೇಲ್ಸ್ ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್ ಇವೇಷನ್ ಮಾಡುತ್ತಾ ಇದ್ದಾರೆ ಅಲ್ಲಿ ಚೆಕ್ ಪೋಸ್ಟ್ಸ್ ಹಾಕುವುದರಿಂದ ತಿಂಗಳು ಒಂದಕ್ಕೆ ಸುಮಾರು 3 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಬೆಂಗಳೂರು ಒಂದರಲ್ಲಿ ಬರುತ್ತದೆ, ಅದೇ ರೀತಿ ಬೆಳಗಾಂ, ಮಂಗಳೂರು, ಹುಬ್ಬಳ್ಳಿ ಮುಂತಾದ ಕಡೆಗಳಲ್ಲೂ ಸಹ ಕಲೆಕ್ಷನ್ ಎನ್‌ಫೋರ್ಸ್‌ಮೆಂಟ್ ಬಿಗಿ ಮಾಡಿದರೆ ಇನ್ನೂ ಹೆಚ್ಚು ವರಮಾನ ಬರುತ್ತದೆ. 9 ಕೋಟಿ ರೂಪಾಯಿ ಕಮರ್ಷಿಯಲ್ ಟ್ಯಾಕ್ಸ್ ಇದ್ದದ್ದು ಹೋದ ಸಲ 11 ಕೋಟಿ ರೂಪಾಯಿ ಆಯಿತು. ಈ ಸಲ 13 ಕೋಟಿ ರೂಪಾಯಿ ಆಗಬಹುದು. ಅಲ್ಲಿಗೆ ಹೆಚ್ಚು ಕಡಿಮೆ ಒಂದೂವರೆ ಕೋಟಿ ರೂಪಾಯಿ ಬರುತ್ತದೆ ಎಂದು ಇದೆ ಆದ್ದರಿಂದ ಸಂಶಯ ಪಡುವ ಕಾರಣ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಈಗ ಮಾನ್ಯ ಅರ್ಥಿಕ ಮಂತ್ರಿಗಳು ಹೇಳಿದ ಹಾಗೆ ಹೊಸ ತೆರಿಗೆ ಹಾಕದೆ, ಈಗಿರುವುದನ್ನೇ ಅಮಲಿನಲ್ಲಿ ತಂದರೆ ಬೇಕಾದಷ್ಟು ಹಣ ಬರುತ್ತದೆ, ಅದು ಒಂದು ಸಂತೋಷದ ಸಂಗತಿ ಎಂದು ಹೇಳುತ್ತೇನೆ.

ಮೊಟ್ಟ ಮೊದಲನೆದಾಗಿ ಕೋರ್ಟುಗಳ ಬಗ್ಗೆ ಹೇಳಬೇಕಾಗಿದೆ. ಈಗಾಗಲೇ ಸರಕಾರದವರು ಮೈಸೂರು ಹೈಕೋರ್ಟ್‌ನ 15 (ಎ) ರೂಲನ್ನು ರಿಪೀಲ್ ಮಾಡಿರುವುದರಿಂದ ಈಗಿರತಕ್ಕ ಮುನ್‌ಸೀಫರನ್ನು ಹೈಕೋರ್ಟಿನವರು ಟೆಂಪೊರರಿಯಾಗಿ ನೇಮಕ ಮಾಡಿದ್ದಾರೆ. ಈಗ ಇರತಕ್ಕ ಸ್ವಲ್ಪ ಜಾಗದಲ್ಲಿ ಮುನ್‌ಸೀಫರುಗಳನ್ನು ತುಂಬುವುದು ಬಹಳ ಕಠಿಣವಾಗಿರುವುದರಿಂದ ಅದಷ್ಟು ಮಟ್ಟಿಗೆ ಈಗ ಇದ್ದ ಮುನ್‌ಸೀಫರನ್ನೇ ಪಿ. ಎಸ್. ಸಿ. ಅವರು ಲಿಸ್ಟ್ ಮಾಡಿ ಅದನ್ನು ಸರಕಾರದವರಿಗೆ ಕಳುಹಿಸಿ ಅವರನ್ನು ಸರಕಾರದವರು ನೇಮಕ ಮಾಡಿ ಅಲ್ಲಿ ಆಗಿರತಕ್ಕ ತೊಂದರೆಯನ್ನು ನೀಗಿಸಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ಬರಗಾಲದ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ 5-6 ವರ್ಷಗಳಿಂದ ಬರಗಾಲ ಪರಿಸ್ಥಿತಿ ಮೇಲಿಂದ ಮೇಲೆ ಬರುತ್ತಾ ಇದೆ ಇದೇನೂ ಹೊಸದಲ್ಲ. ಬರಗಾಲದ ಸಲುವಾಗಿ ಇವತ್ತಿನ ದಿವಸ ತಾವು ಒಂದು ಯೋಜನೆಯನ್ನು ಕೈಕೊಂಡಿದ್ದೀರಿ ಮತ್ತು ಸರ್ವೇ ವಗೈರೆಗಳನ್ನು ಮಾಡಿಸಿದ್ದೀರಿ. ಯಾವ ಭಾಗದಲ್ಲಿ ಇವತ್ತಿನ ದಿವಸ ಬರಗಾಲ ಹೆಚ್ಚುತ್ತಾ ಇದೆ ಅಂತಹ ಪ್ರದೇಶದಲ್ಲಿ ಬರಗಾಲದ ಕಾಮಗಾರಿಗಳನ್ನು ತೆಗೆದುಕೊಂಡು ಯಾವ ರೀತಿಯಲ್ಲಿ ಅದು ಶಾಶ್ವತವಾಗಿ ಬರದ ಹಾಗೆ ಮಾಡಲು ಕ್ರಮಗಳನ್ನು ತಗೆದು ಕೊಂಡಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ಅದಕ್ಕೆ ತಾವು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುತ್ತಾ ಇದ್ದೇವೆ ಎಂದು ಹೇಳುತ್ತೀರಿ. ಅಂತಹ ಪ್ರಾಜೆಕ್ಟುಗಳನ್ನು ಇವತ್ತು ಪ್ರಾರಂಭಮಾಡಿ ಮುಗಿಸಬೇಕಾದರೆ 10-18 ವರ್ಷಗಳು ಬೇಕಾಗುತ್ತವೆ. ಅಲ್ಲಿಯವರೆಗೂ ಜನರ ಪರಿಸ್ಥಿತಿ ಏನಾಗುತ್ತದೆ ಎಂಬ ವಿಚಾರವನ್ನೂ ಕೂಡ ಆಲೋಚನೆ ಮಾಡಬೇಕಾಗಿದೆ. ಆದ್ದರಿಂದ ಬರಗಾಲ ಪೀಡಿತ ಪ್ರದೇಶದಲ್ಲಿ ಆದಷ್ಟು ಮಟ್ಟಿಗೆ ಏನು ಮಾಡಬೇಕೋ ಅದನ್ನು ಈಗಿನಿಂದಲೇ ಸರ್ವೇ ಮಾಡಿಸಿ ಅದಷ್ಟು ಮಟ್ಟಿಗೆ ಅಲ್ಲಿನ ಜನರಿಗೆ ಬರಗಾಲದ ಕಾಮಗಾರಿಗಳನ್ನು ಒದಗಿಸಿಕೊಟ್ಟು ಅಥವಾ ಯಾವ ತರಹದಲ್ಲಿ ಬರಗಾಲವನ್ನು ಹೋಗಲಾಡಿಸಬೇಕೆಂಬುದನ್ನು ಯೋಚನೆ ಮಾಡಿ ಅವರಿಗೆ ಜೀವದಾನ ಮಾಡಲಿಕ್ಕೆ ಏನು ಬೇಕೋ ಆ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ನಾನು ಸರಕಾರದವರನ್ನು ಕೇಳಿಕೊಳ್ಳುತ್ತೇನೆ. ಅವಕ್ಕೆ ತಾವು ಅನೇಕ ವಿಧವಾದ ಯೋಜನೆಗಳನ್ನು ಮಾಡುತ್ತಾ ಇದ್ದೇವೆ, ನೀರಾವರಿ ಬಾವಿಗಳನ್ನು ತೋಡಿಸಿ ಅದರ ಮುಖಾಂತರ ನೀರಾವರಿಗೆ ಸಹಾಯ ಮಾಡುತ್ತಾ ಇದ್ದೇವೆ ಎಂದು ಹೇಳಬಹುದು.

ಧಾರವಾಡ ಜಿಲ್ಲೆಯಲ್ಲಿ ಅನೇಕ ಕಡೆ ಹೊಳೆಗಳು ಹರಿಯುತ್ತಾ ಇವೆ. ಹೊಳೆಗಳು ಹರಿಯುತ್ತಾ ಇದ್ದರೂ ಕೂಡ ಅವುಗಳಿಂದ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಸರಿಯಾದ ಅನುಕೂಲಗಳು ಇಲ್ಲ. ಹಾಗಿರುವಾಗ ಯಾವ ರೀತಿ ಬರಗಾಲವನ್ನು ತಪ್ಪಿಸುತ್ತೀರೋ ಗೊತ್ತಾಗುವುದಿಲ್ಲ. ಮೇಲಿಂದ ಮೇಲೆ ಹೇಳುತ್ತಾ ಇದ್ದೇನೆ ಧಾರವಾಡ ಜಿಲ್ಲೆಯಲ್ಲಿ ನಾಲ್ಕಾರು ತಾಲ್ಲೂಕುಗಳಲ್ಲಿ ಆಗಿಂದಾಗ್ಗೆ ಬರಗಾಲ ಬರುತ್ತಾ ಇದೆ. 7–8 ವರ್ಷಗಳಿಂದ ಇದೇ ಸಭೆಯಲ್ಲಿ ಹೇಳುತ್ತಾ ಬಂದಿದ್ದಾರೆ! ತುಂಗಭದ್ರಾ, ಮಲಪ್ರಭಾ ನದಿಗಳಲ್ಲಿ ಹರಿಯುವ ನೀರು ಸುಮ್ಮನೆ ಯಾವ ಪ್ರಯೋಜನಕ್ಕೂ ಬಾರದೆ ಸಮುದ್ರಕ್ಕೆ ಸೇರುವ ಪರಿಸ್ಥಿತಿ ಬಂದಿದೆ. ಆ ನದಿಗಳಿಂದ ಧಾರವಾಡ ಜಿಲ್ಲೆಗೆ ಯಾವ ತರಹ ಸಾರ್ಥಕವಾಗಿದೆ ಎಂದು ಕೇಳುತ್ತೇನೆ. ಆದ್ದರಿಂದ ಈ ಬರಗಾಲವನ್ನು ತಡೆಗಟ್ಟಲಿಕ್ಕೆ ಒಂದು ಉಪಾಯ ಅಥವಾ ದೊಡ್ಡ ಸ್ಕಿಂ ಮಾಡದೇ ಇದ್ದರೂ ಪರವಾಗಿಲ್ಲ ಸಣ್ಣ ಸಣ್ಣ ಯೋಜನೆಗಳನ್ನಾದರೂ ಮಾಡಿ ಎಂದು ನಾನು ಹೇಳುತ್ತೇನೆ. ಈಗ ತಾವು ಕೊಡುತ್ತಾ ಇರುವ ಪಂಪ್ ಸೆಟ್ಟು ಮುಂತಾದುವುಗಳು ಪತ್ರಿಕೆಗಳಲ್ಲಿ ಬಹಳವಾಗಿ ಪ್ರಚಾರವಾಗಿದೆ. ಮಂತ್ರಿಗಳು ಹೋದ ಕಡೆಯಲ್ಲೆಲ್ಲಾ ಪಂಪ್ ಸೆಟ್ಟುಗಳನ್ನು ಕೊಡುತ್ತೇವೆ, ಸಾವಿರಾರು ಬಾವಿಗಳನ್ನು ತೋಡಿಸುತ್ತೇವೆ ಎಂಬ ವಿಚಾರವನ್ನು ಮೇಲಿಂದ ಮೇಲೆ ಪ್ರಚಾರ ಮಾಡುತ್ತಾ ಇರುವುದರಿಂದ ಹಳ್ಳಿಗಳಲ್ಲಿ ಅಲ್ಲಿನ ಜನರು ಆ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಒತ್ತಾಯವಾಗಿ ಕೇಳುತ್ತಾ ಇದ್ದಾರೆ. ಇದರ ಬಗ್ಗೆ ಯಾವ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ ಎಂಬುದನ್ನು ಹೇಳಬೇಕೆಂದು ತಿಳಿಸುತ್ತೇನೆ. ಕಾರವಾರದಲ್ಲಿ ಹೇಳಿದ್ದಾರೆ, ಹುಬ್ಬಳ್ಳಿಯಲ್ಲಿ ಹೇಳಿದ್ದಾರೆ, ಹಾವೇರಿಯಲ್ಲಿ ಹೇಳಿದ್ದಾರೆ. ಈ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಳ್ಳಲು ಹಾಕಿದ ಅರ್ಜಿಗಳು ಏನಾದವು ಎಂಬ ಬಗ್ಗೆ ಯಾವ ಆಫೀಸಿನಲ್ಲಿ ಕೇಳಿದರೂ ಕೂಡ ಸರಿಯಾದ ಮಾಹಿತಿ ಇಲ್ಲ, ಇದನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತಾ ಇದ್ದೇನೆ.

ಇವತ್ತು ಹುಬ್ಬಳ್ಳಿ ಡಿವಿಜನ್ನಿದೆ, ಅಲ್ಲಿನವರು ಯೋಜನೆಗಳನ್ನು ಸರಿಯಾಗಿ ಕಾರ್ಯಗತ ಮಾಡುತ್ತಿಲ್ಲ. ಉದಾಹರಣೆಗೆ ಚಿತ್ರದುರ್ಗ ಮತ್ತು ಹುಬ್ಬಳ್ಳಿ ಡಿವಿಜನ್‌ಗಳಿಗೆ ಪತ್ರ ಬರೆದರೆ ಜವಾಬೂ ಇಲ್ಲ, ಸರಿಯಾಗಿ ಕ್ರಮ ತೆಗೆದುಕೊಳ್ಳುತ್ತಲೂ ಇಲ್ಲ, ಸಿಗ್ಗಾಂವಿಂದ ಲಕ್ಷ್ಮೇಶ್ವರದಿಂದ ಮ್ಯೇನ್‌ಲೈನ್ ಹಾಕುವುದಕ್ಕೆ ಎಷ್ಟು ದಿವಸ ಬೇಕೆಂದು ಕೇಳಿದೆವು. ಚಿತ್ರದುರ್ಗದವರನ್ನು ಕೇಳಿದರೆ 6 ತಿಂಗಳು ಬೇಕೆಂದು ಹೇಳುತ್ತಾರೆ, ಹುಬ್ಬಳ್ಳಿ ಡಿವಿಜನ್ನಿನವರನ್ನು ಕೇಳಿದರೆ 3 ವರ್ಷ ಬೇಕೆನ್ನುತ್ತಾರೆ. ಎರಡು ಕಡೆ ಇರುವವರೂ ಟೆಕ್ನಿಕಲ್ ಹ್ಯಾಂಡ್ಸ್, ಒಂದೇ ವಿಧವಾದ ಅರ್ಹತೆಯುಳ್ಳವರು. ಹೀಗಿರುವಾಗ ಒಬ್ಬೊಬ್ಬರು ಒಂದೊಂದು ಹೇಳಿದರೆ ಇದರಿಂದೇನು ಅರ್ಥವಾಗುತ್ತದೆ? ನಾವು ಎರಡು ಡಿವಿಜನ್ನುಗಳ ಮಧ್ಯ ಸಿಕ್ಕಿಕೊಂಡು ಒದ್ದಾಡುತ್ತಿದ್ದೇವೆ. ಡಿವಿಜನ್ನಿನಿಂದ 11 ಮೈಲಿಗಳಿರುವ ಗುಡಿಗೇರಿಗೆ ಲೈನ್ ಹಾಕಿ 6 ಮೈಲಿ ಇರುವ ಕಡೆಗೆ ಮುಟ್ಟಿಲ್ಲ ಎಂದು ಹೇಳಿದರೆ ಕಾರ್ಯ ಯಾವರೀತಿ ನಡೆಯುತ್ತಿದೆ ಎಂಬುದು ಅರ್ಥವಾಗುತ್ತದೆ. ಚೀಫ್ ಇಂಜನಿಯರು ಮತ್ತು ಸೂಪರಿಂಟೆಂಡಿಂಗ್ ಇಂಜನಿಯರುಗಳ ಆಫೀಸಿಗೆ ಎಷ್ಟೋ ಪತ್ರಗಳನ್ನು ಬರೆದರೂ ಒಂದಕ್ಕೂ ಉತ್ತರ ಕೊಡಲಿಲ್ಲ ಎಂದರೆ ಹೇಗಿದೆ ಆಡಳಿತ ಎಂಬುದು ಗೊತ್ತಾಗುತ್ತದೆ. ಹೀಗಾದರೆ ಏನು ಕ್ರಮ ಕೈಕೊಂಡರು ಎಂಬುದು ನಮಗೆ ಗೊತ್ತಾಗುವುದು ಹೇಗೆ? ಹುಬ್ಬಳ್ಳಿ ಡಿವಿಜನ್ ಸರಿಯಾಗಿ ನಿಗಾವಹಿಸದಿದ್ದರೆ ರೈತರಿಗೆ ಉಪಯೋಗವಾಗುವುದಿಲ್ಲ ಎಂದು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ನಾನೇ ಸ್ವತಃ 78 ಪಂಪ್‌ಸೆಟ್ಟುಗಳಿಗೆ ಡಿಪಾಜಿಟ್ ಕೊಡಲು ಆಫೀಸಿಗೆ ಹೋದರೆ ಅಲ್ಲಿ ಮಾಹಿತಿ ಕೊಡುವವರೇ ಇಲ್ಲ. ಈ ರೀತಿ ನೌಕರರಿದ್ದರೆ ರೈತರು ಯಾವ ರೀತಿ ಸಮಾಚಾರ ತಿಳಿದುಕೊಳ್ಳಬೇಕೋ ಗೊತ್ತಿಲ್ಲ. ಸಂಬಂಧಪಟ್ಟ ಮಂತ್ರಿಗಳು ಈ ಕಡೆ ಗಮನಕೊಟ್ಟು ಸೂಕ್ತ ಕ್ರಮ ಕೈಕೊಳ್ಳಬೇಕು.

ಇನ್ನು ಮೇಲಿಂದಮೇಲೆ ಹೇಳುವುದು ಲಂಚದ ವಿಚಾರ. ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಹಗಲು ದರೋಡೆ ನಡೆಯುತ್ತಿದೆ. ಅಲ್ಲಿ ಒಂದು ಕಾಗದ ನೋಂದಣಿ ಮಾಡಬೇಕಾದರೆ ಸೇಕಡ 10 ರಷ್ಟು ರೊಕ್ಕ ಕೊಡಬೇಕು. ಇದು ರಾಜ್ಯದಲ್ಲಿ ಎಲ್ಲರಿಗೂ ಗೊತ್ತು. ಇದನ್ನು ಈ ಇಲಾಖೆಯ ಮುಖ್ಯಾಧಿಕಾರಿಗಳಾದವರಿಗೆ ತಿಳಿಸಿದರೆ ಅವರೂ ಸೇರಿಕೊಂಡು ಲಂಚ ತೆಗೆದುಕೊಳ್ಳುತ್ತಿದ್ದಾರೋ ಏನೋ—ಏನೂ ಪ್ರಯೋಜನವಾಗಿಲ್ಲ. ಲಂಚ ನಿರ್ಮೂಲವಾಡಬೇಕು, ಭ್ರಷ್ಟಾಚಾರ ಹೋಗಬೇಕು ಎಂದು ಹೇಳುತ್ತಿದ್ದಾರೆ. ಒಬ್ಬ ಸಬ್ ರಿಜಿಸ್ಟ್ರಾರರು ಲಂಚದ ಅಪಾದನೆ ಅಥವ ಇತರ ಅಲಿಗೇಷನ್ಸ್ ಅವರ ಮೇಲಿದ್ದುದರಿಂದ ರಾಜೀನಾಮೆ ಕೊಡುವಂತೆ ಅವರಿಗೆ ಸರ್ಕಾರ ತಿಳಿಸಿ ಅವರ ರಾಜೀನಾಮೆಯನ್ನು ಅಂಗೀಕರಿಸಿತು. ಅದರ ವಿಮರ್ಶೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು. ಆದರೆ 3 ವರ್ಷಗಳಾದಮೇಲೆ ಅವರು ಅಪ್ಲಿಕೇಷನ್ನು ಕೊಟ್ಟರು, ಸರ್ಕಾರ ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಂಡಿತು. ಎಷ್ಟೋ ಅಲಿಗೇಷನ್ಸ್ ಅವರ ಮೇಲೆ ಇದ್ದರೂ ಪುನಃ ನೇಮಕ ಮಾಡಿಕೊಂಡರು. ಕೇಸು ಮತ್ತೆ ಪರಿಶೀಲನೆ ಆಗಬೇಕೆಂದು ಹೇಳಿದರು. ಒಮ್ಮೆ ಒಂದು ಕ್ರಮ ತೆಗೆದುಕೊಂಡಮೇಲೆ ಮತ್ತೆ ರೀ ಓಪನ್ ಮಾಡುವುದು ಹೇಗೆ? ಕೋರ್ಟಿಗೆ ಹೋಗುವುದು ಹೇಗೆ?

(ಶ್ರೀ ಸಿದ್ದಯ್ಯ ಕಾಶೀಮಠ್)

ಎಷ್ಟೋ ಮಂದಿಗೆ ಹೀಗೆ ಮಾಡಿದ್ದಾರೆ. 3 ವರ್ಷಗಳಾದ ನಂತರ ರೀ ಇನ್‌ಸ್ಟೇಟ್ ಮಾಡುವುದು ಭ್ರಷ್ಟಾಚಾರವಲ್ಲವೇ ? ಹೀಗಾದರೆ ಬೇಕಾದ ರೀತಿ ಮಾಡಬಹುದು ಎಂದು ಇಲಾಖಾ ನೌಕರರು ಮನಬಂದಂತೆ ನಡೆಯಲು ಪ್ರಾರಂಭಿಸುತ್ತಾರೆ. ಒಂದು ಇಲಾಖೆಯಲ್ಲಿ ಈ ರೀತಿ ಮಾಡುವುದು ಇನ್ನೊಂದು ಇಲಾಖೆಯಲ್ಲಿ ಸರಿಯಾದ ಟೆಕ್ನಿಕಲ್ ಅರ್ಹತೆ ಇರುವವರಿದ್ದರೂ ಅವರನ್ನು ಬೇಡ ಎಂದು ಹೇಳುವುದು ಸರಿಯೇ ? ಈ ರೀತಿಯಾಗದಂತೆ ಸರ್ಕಾರ ನೋಡಿಕೊಂಡು ಆದಷ್ಟು ಮಟ್ಟಿಗೆ ಭ್ರಷ್ಟಾಚಾರ ಸರ್ಕಾರಿ ಮಟ್ಟದಲ್ಲಿ ನಡೆಯದಂತೆ ಮೊದಲು ನೋಡಿಕೊಂಡರೆ ಉಳಿದವರಿಗೆ ಆಮೇಲೆ ಅನ್ವಯಿಸಿದರೆ ಸರಿಹೋಗುತ್ತದೆ. ಮೊನ್ನೆ ವಿಜಿಲೆನ್ಸ್ ಕಮಿಟಿಗೆ ರಿಟೈರ್ಡ್ ಅಫಿಷಿಯಲ್ಸ್ ಹಾಕುವುದಾಗಿ ಗೃಹ ಸಚಿವರು ಹೇಳಿದರು ; ನಾನ್-ಅಫಿಷಿಯಲ್ಸ್ ಆದಷ್ಟು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಹೇಗಾದರೂ ಮಾಡಿ ಇರುವ ಲೋಪದೋಷಗಳನ್ನು ಸರಿಪಡಿಸಬೇಕು.

ಇನ್ನು ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆಗಳ ಬಗ್ಗೆ ಸ್ವಲ್ಪ ಹೇಳುತ್ತೇನೆ. ಈ ಎರಡು ಇಲಾಖೆಗಳನ್ನು ಅಮಲ್ಗಮೇಟ್ ಮಾಡುವುದಾಗಿ 3 ವರ್ಷಗಳಿಂದ ಹೇಳುತ್ತಿದ್ದರೂ ಇನ್ನೂ ಮಾಡಿರುವುದಿಲ್ಲ, ಅವು ಬೇರೆಬೇರೆ ಇರುವುದರಿಂದ ಹೆಚ್ಚು ಖರ್ಚಾಗುತ್ತಿದೆ. ಬಡ್ಜೆಟ್ ಖೋತಾ ಆಗಲು ಇದೂ ಒಂದು ಕಾರಣ. ವೈದ್ಯಕೀಯ ಇಲಾಖೆಯಲ್ಲಿ ಇರುವ ಲೋಪದೋಷಗಳನ್ನು ಅನೇಕವೇಳೆ ಗಮನಕ್ಕೆ ತಂದಿದ್ದೇವೆ. ನಮ್ಮ ಭಾಗದಲ್ಲಿ ಕೆ.ಎಂ.ಸಿ. ಆಸ್ಪತ್ರೆ ಎಂಬುದೊಂದಿದೆ; ಅಲ್ಲಿಗೆ ಯಾರಾದರೂ ಹೋದರೆ 8 ದಿವಸಗಳಲ್ಲಿ ಸಾಯುವವರು 4 ದಿವಸಗಳಲ್ಲೇ ಸಾಯುತ್ತಾರೆ. ಈ ರೀತಿ ಇದೆ. 250 ಮಂದಿ ಡಾಕ್ಟರುಗಳಿದ್ದಾರೆ, 500 ಜನ ನರ್ಸುಗಳಿದ್ದಾರೆ. ಯೂನಿಸೆಫ್‌ನಿಂದ ಔಷಧಿಗಳನ್ನು ತರುತ್ತಿದ್ದಾರೆ. ಏನೇ ಆದರೂ ಜನರಿಗೆ ನೆಮ್ಮದಿಯಿಲ್ಲ, ಇದಕ್ಕೆ ಗಮನ ಕೊಡಬೇಕು.

ಇನ್ನು ಕಟ್ಟಡಗಳ ವಿಚಾರ. 4 ಅಂತಸ್ತುಗಳ ಕಟ್ಟಡ ಕಟ್ಟಿದ 2-3 ವರ್ಷಗಳಲ್ಲಿ ಸೀಳು ಬಿಟ್ಟಿದೆ. ಹೀಗಾದರೆ ಪಬ್ಲಿಕ್ ವರ್ಕ್ಸ್ ಇಲಾಖೆ ಸಾಮರ್ಥ್ಯವನ್ನು ಏನೆಂದು ಹೇಳೋಣ. ಈ ವರ್ಷ ಮಳೆ ಬಂದರೆ ಆ ಕಟ್ಟಡ ಏನಾಗುತ್ತದೋ ಎಂಬ ಭೀತಿ ಬರುತ್ತಿದೆ. ಲೋಕೋಪಯೋಗಿ ಇಲಾಖೆ ಏನು ಮಾಡಿದರೂ ಕೇಳುವವರೇ ಇದ್ದಂತಿಲ್ಲ, ಡಿ.ಎಂ.ಎಸ್. ಯಾರು ಫೋನ್ ಮಾಡಿದರೂ ಕ್ರಮ ತೆಗೆದುಕೊಳ್ಳುವುದಿಲ್ಲ. ಇದು ನನ್ನ ಸ್ವಂತ ಅನುಭವ. ಈ ವಿಚಾರದಲ್ಲಿ ಒಂದೂವರೆ ವರ್ಷಗಳ ಕೆಳಗೆ ಆರೋಗ್ಯ ಮಂತ್ರಿಗಳಿಗೆ ದೂರು ಕೊಟ್ಟರೂ ಇನ್ನೂ ಏನೂ ಕ್ರಮಕೈಕೊಂಡಿಲ್ಲ. ಮಂತ್ರಿಗಳು ಯಾರು ಫೋನ್ ಮಾಡಿದರೂ ಗಮನ ಕೊಡುವುದಿಲ್ಲ, ಈಗಿರುವಂಥ ನೌಕರರನ್ನಿಟ್ಟುಕೊಂಡು ಯಾವ ರೀತಿ ಮುಂದುವರಿಯುತ್ತೀರಿ ? ಜನರ ಪ್ರತಿನಿಧಿಗಳ ಮಾತಿಗೇ ಗಮನ ಕೊಡದೆ ಈ ರೀತಿ ಅನ್ಯಾಯ ಮಾಡಿದರೆ ಹೇಗೆ ಲೋಪಗಳನ್ನು ಸರಿಪಡಿಸಲು ಸಾಧ್ಯ ? ಫೋನ್ ಮಾಡಿದರೆ ಉತ್ತರ ಕೊಡದಿದ್ದರೆ ಮಾಹಿತಿ ನೀಡದಿದ್ದರೆ ಏನು ಮಾಡಬೇಕೋ ತಿಳಿಯದು. ಅಷ್ಟೇ ಅಲ್ಲ, ಪ್ರೈಮರಿ ಹೆಲ್ತ್ ಯೂನಿಟ್ಟುಗಳಿಗೆ ಕೊಡುವ ಔಷಧ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಕೇರ್ ಸಂಸ್ಥೆಯವರು ಕೊಟ್ಟಿರುವ ಹಾಲಿನಪುಡಿ, ಸೋಜಿ ಮುಂತಾದುವು, ದಾನವಾಗಿ ಬಂದಿರುವ ವಸ್ತುಗಳು ಹೊರಗೆ ಹೋಗಿ ದುರುಪಯೋಗವಾಗುತ್ತಿದ್ದರೆ ಏನು ಕ್ರಮ ಕೈಕೊಂಡಿದ್ದೀರಿ ! ಹಿಂದೆ, ಇದನ್ನು ತಡೆಗಟ್ಟಲು ಕಾನೂನನ್ನು ರಚಿಸಿ ದಂಡ ವಿಧಿಸುತ್ತೇವೆಂದು ಹೇಳಿದ್ದರು. ಸರಕಾರದವರು ಆಸ್ಪತ್ರೆಗಳಿಗಾಗಿ ಬೇಕಾದಷ್ಟು ಹಣ ಖರ್ಚು ಮಾಡುವಾಗ ಈ ರೀತಿ ಔಷಧಿಗಳು ದುರುಪಯೋಗವಾಗುತ್ತಿದ್ದರೆ ಇದರಿಂದ ಜನಕ್ಕೆ ಪ್ರಯೋಜನ ಹೇಗೆ ಸಿಗಬೇಕು. ಇಂತಹ ಕೆಲಸಕಾರ್ಯಗಳನ್ನೆಲ್ಲಾ ಗಮನಿಸಿ ತಕ್ಕ ಕ್ರಮಗಳನ್ನು ಸರಕಾರ ಕೈಗೊಳ್ಳಬೇಕೆಂದು ಇಲ್ಲಿ ಹೇಳುತ್ತೇನೆ. ಅಲ್ಲದೆ ನಮ್ಮ ಸರಕಾರದವರು ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳು ಸುಳ್ಳು ಎಂದು ನಾನು ಹೇಳುತ್ತಿಲ್ಲ. ಅವರು ಕೊಟ್ಟಿರುವುದು ನಿಜವೇ. ಆದರೆ ಅಂಕೆ ಅಂಶಗಳನ್ನು ಕೊಡುವಾಗ ಆಯಾ ಇಲಾಖೆಗಳು ಸರಿಯಾಗಿ ಖರ್ಚು ಮಾಡಿದೆಯೇ ಇಲ್ಲವೇ ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡಬೇಕು. ನಾವು ವಿರೋಧ ಪಕ್ಷದ ಸದಸ್ಯರು ಸುಮ್ಮನೆ ಸರಕಾರದವರನ್ನು ಟೀಕೆಮಾಡುವುದಕ್ಕಾಗಿ ಮಾಡುತ್ತಿದ್ದಾರೆಂದು ಸರ್ಕಾರ ಭಾವಿಸಬಾರದು. ನಾವುಗಳು ಅಲ್ಲಲ್ಲಿ ನಡೆಯುತ್ತಿರುವ ಕೆಲಸಗಳನ್ನು ನೋಡಿಕೊಂಡು ಇಲ್ಲಿ ಸರಕಾರದ ಗಮನವನ್ನು ತರುತ್ತಿದ್ದೇವೆ. ಇದನ್ನು ಸರಿಪಡಿಸಲಿಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದುದು ಅಗತ್ಯ ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಶ್ರೀ ಎಸ್. ಪಿ. ಘಾಯಾಡೆ (ಅಂಕೋಲ).—ಸ್ವಾಮಿ, ಈ ಸಭೆಯ ಮುಂದಿಟ್ಟಿರುವ ಆಯವ್ಯಯದ ಅಂದಾಜುಪತ್ರಗಳನ್ನು ಸ್ವಾಗತಿಸುತ್ತೇನೆ.

ಈ ಸಮಯದಲ್ಲಿ ನಾನು ನನ್ನ ಜಿಲ್ಲೆಯ ಮುಟ್ಟಿಗಿರುವ ಕೆಲವು ಸಮಸ್ಯೆಗಳನ್ನು ತಮ್ಮ ಮೂಲಕ ಸರಕಾರಕ್ಕೆ ತಿಳಿಸ ಬಯಸುತ್ತೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹುಪಾಗಿ ಕಾಡಿನ ಭಾಗಗಳೇ ಹೆಚ್ಚು. ಸಾಧಾರಣವಾಗಿ ಶೇಕಡ 84ರಷ್ಟು ಅರಣ್ಯ ಪ್ರದೇಶವಿದೆ. ಅದರಲ್ಲೂ ನಮ್ಮ ಯಲ್ಲಾಪುರ ಒಂದು ತಾಲ್ಲೂಕಿನಲ್ಲೇ ಶೇಕಡ 92ರಷ್ಟು ಅರಣ್ಯಪ್ರದೇಶ ಇದೆ. ಇದರಿಂದ ನಮ್ಮ ಭಾಗದ ಜನಕ್ಕೆ ಇಲ್ಲಿ ವ್ಯವಸಾಯ ಮಾಡಲು ಭೂಮಿ ಸಿಗದೆ ಬಹಳ ನೋವುಂಟುಮಾಡುತ್ತಿದೆ. ಉದಾಹರಣೆಯಾಗಿ ನನ್ನ ಕಾನ್ಸ್‌ಟಿಟುಯನ್ಸಿ ಬಗೆಗೇ ಹೇಳುವುದಾದರೆ, ಯಲ್ಲಾಪುರ ಹಾಗೂ ಮುಂಡಗೋಡ ಈ ಭಾಗದಲ್ಲಿ ಫಾರೆಸ್ಟು ಭಾಗ ಬಹಳವಾಗಿದೆ ಇದರಲ್ಲಿ ಕೆಲವು ಭಾಗಗಳನ್ನು ಜನಕ್ಕೆ ಸಾಗುವಳಿ ಮಾಡಬೇಕೆಂದರೂ ಸಿಗುತ್ತಿಲ್ಲ. 1956-57ನೇ ಇಸವಿಯಲ್ಲೇ ಅರಣ್ಯದ ಭೂಮಿಯನ್ನು ನೋಟಿಫಾಯ್ ಮಾಡಿದ್ದರೂ ಸಹ ಸಣ್ಣ ಪುಟ್ಟ ರೈತರಿಗಾಗಿ ಬೆಳೆ ಮಾಡಲು ಕೂಡಲೇ ಸಿಗುತ್ತಿಲ್ಲ. ಜಮೀನು ಪಡೆಯಬೇಕಾದರೆ ಯಾವ ನೀತಿ ಅನುಸರಿಸಬೇಕು ಎಂದು ಹಿಂದೆ ಈ ಮಾನ್ಯ ಸಭೆಯಲ್ಲಿ ಸರಕಾರವನ್ನು ಕೇಳಿದಾಗ ಸರಕಾರ ಅರಣ್ಯಭಾಗದ ಜಮೀನುಗಳನ್ನು ಬಿಡಿಸುವುದಕ್ಕಾಗಿ ಒಂದು ಕಮಿಟಿ ಮಾಡಲಾಗಿದೆ; ಆ ಕಮಿಟಿಯವರು-ಭೂಮಿಯನ್ನು ಆದಷ್ಟು ತೀವ್ರವಾಗಿ ಕೊಡುತ್ತಾರೆಂದು ಹೇಳಿದ್ದರೂ ಇದುವರೆಗೂ ಆ ಕಮಿಟಿಯವರು ಯಾವ ನಿರ್ಣಯಕ್ಕೂ ಬರಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಆಹಾರಧಾನ್ಯಗಳನ್ನು ಹೆಚ್ಚಾಗಿ ಬೆಳೆಯಬೇಕೆಂದು ಹೇಳುತ್ತಿರುವ ಈ ಕಾಲದಲ್ಲಿ ಇದನ್ನು ಹಂಚುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ನಿಜವಾಗಿಯೂ ಆಹಾರಧಾನ್ಯಗಳನ್ನು ಬೆಳೆಸಬೇಕೆಂದಿರುವ ಈ ಕಾಲದಲ್ಲಿ ನೂರಕ್ಕೆ 92 ಭಾಗ ಫಾರೆಷ್ಟು ಏರಿಯಾ ಇರುವ ನಮ್ಮ ತಾಲ್ಲೂಕಿನ ಕೆಲವು ಭಾಗಗಳನ್ನಾದರೂ ಸಾಗುವಳಿಗೇಕೆ ಕೊಡಬಾರದು ಎಂದು ನನಗೆ ತಿಳಿಯುತ್ತಿಲ್ಲ. ಈ ಬಗ್ಗೆ ಒಂದು ಪ್ರಶ್ನೆ ಸರಕಾರದಲ್ಲಿ ಕೇಳಿದಾಗ ಭೂಮಿಗಾಗಿ ನಮ್ಮ ಭಾಗದಲ್ಲಿ 74835 ಅರ್ಜಿಗಳು ಪೆಂಡಿಂಗ್‌ನಲ್ಲಿವೆ ಎಂದು ಉತ್ತರ ಕೊಟ್ಟಿದ್ದಾರೆ. ನನ್ನಕಡೆ ಇರುವ ಮಾಹಿತಿ ಪ್ರಕಾರ ಸಿರಸಿ ತಾಲ್ಲೂಕಿನಲ್ಲಿ 2728 ಎಕರೆಗಳಷ್ಟು ಭೂಮಿ ಇದೆ. ಮುಂಡಗೋಡ ತಾಲ್ಲೂಕಿನಲ್ಲಿ 11411 ಎಕರೆಗಳಿವೆ, ಹಳಿಯಾಳದ ತಾಲ್ಲೂಕಿನಲ್ಲಿ 3041 ಎಕರೆಗಳಿವೆ, ಅಂಕೋಲದಲ್ಲಿ 740 ಎಕರೆಗಳು ಇವೆ. ಪ್ರತಿಯೊಂದು ಕಡೆಯಲ್ಲೂ ವಿಚಾರಮಾಡಿ ಸ್ವಲ್ಪ ಭೂಮಿಯನ್ನು ಆಹಾರಧಾನ್ಯ ಬೆಳಸಲಿಕ್ಕೆ ಕೊಡದೆ ಸರಕಾರ ವಿಳಂಬ ಮಾಡುತ್ತಾ ಹೋದರೆ ಆಹಾರಧಾನ್ಯಗಳನ್ನು ಬೆಳೆಸಲು ಸಾಧ್ಯವಾಗುವುದಿಲ್ಲ. ಇದರಿಂದ ಸರಕಾರಕ್ಕೂ ಹಾನಿ, ಜನತೆಗೂ ಹಾನಿಯುಂಟಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸರಕಾರ ಈ ವಿಚಾರವನ್ನು ಪರಿಶೀಲನೆ ಮಾಡಲು ಮಾನ್ಯ ಸಭೆಯಲ್ಲಿರುವ ಕಂದಾಯ ಸಚಿವರು ಹಾಗೂ ಅರಣ್ಯದ ಸಚಿವರು ಕೂಡಿಕೊಂಡು ಸಾಕಷ್ಟು ಭೂಮಿಯನ್ನು ಬೆಳೆ ಮಾಡಲಿಕ್ಕೆ ಬಿಡಿಸಿಕೊಡುತ್ತೀರೆಂದು ಆಶಿಸುತ್ತೇನೆ.

ಇನ್ನು ನೀರಾವರಿ ಯೋಜನೆಗಳ ಪ್ರಸಂಗದ ಬಗ್ಗೆ ಇಲ್ಲಿ ಹೇಳಬೇಕಾಗಿದೆ. ನಮ್ಮ ಭಾಗ Grasery of Kanara ಎಂದರೆ ಉತ್ತಮವಾದ ಭತ್ತ ಬೆಳೆಯುವ ಪ್ರದೇಶ ಎಂದು ಹೇಳುತ್ತಾರೆ. ಕಾರವಾರ ನಮ್ಮ ಜಿಲ್ಲೆಗೆ ಬಹಳ ಹೆಸರುವಾಸಿಯಾದುದು. ಆದರೆ ಇಲ್ಲಿ ಉತ್ತಮವಾದ ನೀರಾವರಿ ಯೋಜಗಳನ್ನು ಇಲ್ಲಿ ಕೈಕೊಳ್ಳದೇ ಇರುವುದು ನೋಡಿ ಬಹಳ ದುಃಖವಾಗಿದೆ. ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಕಡೆಗೆ ನೋಡುತ್ತಿರುತ್ತಾರೆ. ಈ ಬಡ್ಜೆಟ್ಟು ಭಾಷಣದಲ್ಲಿ ಹೇಳಿರುವಂತೆ 32 ಮೇಜರು ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದಾರೆ ಇದರಲ್ಲಿ 9 ಮೇಜರು ಪ್ರಾಜೆಕ್ಟುಗಳು, 23 ಮೈನರು ಪ್ರಾಜೆಕ್ಟುಗಳು ಎಂದು ಇದೆ. ಆಹಾರಧಾನ್ಯಗಳನ್ನು ಬೆಳೆಸಲು ಚಿಕ್ಕ ಪ್ರಾಜೆಕ್ಟುಗಳನ್ನೂ ಕೈಗೊಳ್ಳಬೇಕು. ಇದೂಕೂಡ ಮಾಡುವುದನ್ನು ವಿಳಂಬ ಮಾಡುತ್ತಿದ್ದಾರೆ ಎಂದು ದುಃಖದಿಂದ ಹೇಳಬೇಕಾಗಿದೆ. ನಮ್ಮ ಹಳಿಯಾಳದ ತಾಲ್ಲೂಕಿನಲ್ಲಿ ಗಡಿಯಾಳ ಪ್ರಾಜೆಕ್ಟು ಎನ್ನುವುದು ಬಹಳ ದಿವಸದಿಂದ ಇದ್ದರೂ ಅದು ಕಾರ್ಯಗತವಾಗದೇ ಹಾಗೇ ಇದೆ. ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಬಂದರೂ ಸರಕಾರದ ಕಡೆಯಿಂದ ವಿಳಂಬವಾಗಲಿಕ್ಕೆ ಕಾರಣವಾಗಿದೆ. ಇಂತಹ ಮೈನರು ಪ್ರಾಜೆಕ್ಟುಗಳನ್ನು ಮಾಡಲಿಕ್ಕೆ ಸಾಧ್ಯವಿದೆ. ಈಗಲಾದರೂ ಇಂತಹ ಮೈನರು ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕು. ಸಣ್ಣ ಸಣ್ಣ ಕೆರೆಗಳನ್ನು ದುರಸ್ತು ಮಾಡಿ ನೀರಾವರಿ ಯೋಜನೆಗಳ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಈ ಭಾಗ ಬಹು ಹಿಂದುಳಿದಿದೆ. ಆಹಾರದ ಉತ್ಪತ್ತಿಯನ್ನು ಮಾಡಲು ಇಲ್ಲಿ ತಕ್ಕ ಕ್ರಮ ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ. ಇಲ್ಲಿ ಸರಕಾರ ಸ್ವಲ್ಪವೇ ಖರ್ಚುಮಾಡಿದರೂ ಉತ್ಪನ್ನ ಹೆಚ್ಚಿಗೆ ಬರುತ್ತದೆ. ಇದರ ಬಗ್ಗೆ ಗಮನ ಕೊಟ್ಟು ಆಹಾರದ ಉತ್ಪತ್ತಿಗೆ ಅನುಕೂಲ ಮಾಡಿಕೊಡತಕ್ಕದ್ದು ಅಗತ್ಯ. ಇಂತಹ ಇರಿಗೇಷನ್ನುಗಳನ್ನು ಇಲ್ಲಿ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಕ್ಕೆ ನೀರು ಸರಬರಾಜು ಮಾಡುವುದರ ಬಗ್ಗೆ ಎಂದರೆ protected water Supply ನಮ್ಮ ಜಿಲ್ಲೆಯಲ್ಲಿ ಇಲ್ಲವೆಂದು ದುಃಖದಿಂದ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿನ ಒಂದು ತಾಲ್ಲೂಕಿನಲ್ಲೂ ಪೈಪಿನ ಮೂಲಕ ಒಳ್ಳೆಯ ನೀರಿನ ಸರಬರಾಜು ಇಲ್ಲ.

(ಶ್ರೀ ಎಸ್. ಪಿ. ಘಾಯಿಟೆ)

ಇದು ಇಲ್ಲಿಗೆ ಅತ್ಯಗತ್ಯವಾಗಿ ಆಗಬೇಕಾದದ್ದು. ಹಳಿಯಾಳ ತಾಲ್ಲೂಕಿನಲ್ಲಿ ನೀರಿನ ಕೊರತೆ ಬಹಳವಾಗಿದ್ದರೂ ಸರಕಾರದ ಕಣ್ಣಿಗೊಂದೂ ಕಾಣಿಸುತ್ತಿಲ್ಲ. ಈ ತಾಲ್ಲೂಕಿನಲ್ಲಿ 10-12 ಸಾವಿರ ಜನಸಂಖ್ಯೆ ಇರುವ ಭಾಗಕ್ಕೆ ಒಂದೇ ಒಂದು ಕುಡಿಯುವ ನೀರಿನ ಬಾವಿ ಇದೆ. ಇದರಿಂದ ನೀರನ್ನು ತೆಗೆದು ಕುಡಿಯುವುದು ಕಷ್ಟ. ಬೇರೆ ಪ್ರಾಜೆಕ್ಟುಗಳಿಗೆ ಹಣ ಒದಗಿಸುವಂತೆ ವಾಸ್ತವವಾಗಿ ನೀರಿನ ಕೊರತೆ ಇರುವ ಈ ಭಾಗಕ್ಕೆ ನೀರನ್ನು ಬೇಗನೆ ಒದಗಿಸಬೇಕು. ಇಷ್ಟು ಕೊರತೆ ಇರುವ ಜಿಲ್ಲೆಯ ಈ ಭಾಗಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಕಡೆಗೆ ಲಕ್ಷ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಿ.ಡಬ್ಲ್ಯು.ಡಿ. ವರ್ಕ್ಸ್‌ಗಳ ಕಡೆ ನೋಡಿದರೆ ನಮ್ಮ ಕಡೆಯಲ್ಲಿ ಏನು ಕೆಲಸಗಳೇ ಆಗುತ್ತಿಲ್ಲ ಸೆಂಟ್ರಲ್ ಗವರ್ನಮೆಂಟಿನವರು ಈಚೆಗೆ ಸ್ವಲ್ಪ ಸಹಾಯ ಮಾಡಿದ್ದಾರೆಂದು ಅಲ್ಲಿ, ಇಲ್ಲಿ ಕೆಲವು ಟಾರ ರೋಡುಗಳಾಗಿವೆ. ಇನ್ನೂ ಬೇಕಾದಷ್ಟು ಕೆಲಸಗಳಾಗಬೇಕಾಗಿವೆ. 61ನೇ ಇಸವಿಯಲ್ಲಿ ಪ್ರವಾಹ ಬಂದಿದ್ದಾಗ ಅಂಕೋಲ ತಾಲ್ಲೂಕಿನಲ್ಲಿ ಗುಂಡಬಾಳು ಪೂಲು ಕೊಚ್ಚಿಹೋಯಿತು. ಅದರಿಂದ ಇಲ್ಲಿನ ಜನಕ್ಕೆ ಬಹಳ ತೊಂದರೆಯಾಗಿದೆ. ಫ್ಲಡ್ ರಿಲೀಫ್ ವರ್ಕುಗಳನ್ನು ತೆಗೆದುಕೊಳ್ಳಬೇಕೆಂದಿದ್ದರೂ ಅದಕ್ಕೆ ಸರಕಾರ ಮಂಜೂರಾತಿ ಕೊಡುವುದರಲ್ಲಿ ವಿಳಂಬವಾಗಿ ಅದರಿಂದ ಕಷ್ಟಗಳಾಗಿದೆ ಜನಕ್ಕೆ ಹೆಚ್ಚಿನ ತೊಂದರೆಯಾಗಿದೆ. ಇಂತಹ ಕೆಲಸಗಳನ್ನು ಈಗಲಾದರೂ ಸ್ವಲ್ಪ ತೆಗೆದುಕೊಂಡು ಜನತೆಗೆ ಅನುಕೂಲಮಾಡಿಕೊಡಲು ಈ ಕೆಲಸಗಳನ್ನು ಪಟ್ಟಿಯಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶರಣಪ್ಪ ವಸ್ತ್ರದ (ಬಿಜಾಪುರ).—ಸನ್ಮಾನ್ಯ ಸಭಾಪತಿಗಳೇ, ನಾನು ಈ ದಿವಸ ಬಡ್ಜೆಟ್ಟಿನ ವಿಷಯದಲ್ಲಿ ಹೇಳಬೇಕೆಂದರೆ, ಜಿಲ್ಲೆಯ ಹಾಗೂ ಪ್ರಾಂತದ ಜನತೆಯ ಮೇಲೆ ಕರಭಾರವಿಲ್ಲದ ಹಾಗೂ ಸ್ವಲ್ಪ ಉಳಿತಾಯದ ಬಡ್ಜೆಟ್ಟನ್ನು ನಮ್ಮ ಅರ್ಥಿಕ ಸಚಿವರು ನಮ್ಮ ಮುಂದಿಟ್ಟಿದ್ದಾರೆ. ಅದಕ್ಕಾಗಿ ನಾನು ಅವರನ್ನು ಸಂಪೂರ್ಣವಾಗಿ ಅಭಿನಂದಿಸಬೇಕಾಗಿದೆ. ಆದರೆ ಈ ಸಂದರ್ಭದಲ್ಲಿ ನಾನು ನಾಲ್ಕಾರು ಸಂಗತಿಗಳನ್ನು ಈ ಸಭೆಯ ಮುಂದೆ ಮಾತನಾಡಬೇಕಾಗಿದೆ.

3-00 P.M.

ಇಂದು ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಡೋಣಿ ನದಿ ಇದೆ. ಈ ದಿವಸ ಆ ಜಿಲ್ಲೆಯಲ್ಲಿ ಸುಮಾರು 28,352 ಎಕರೆ ಭೂಮಿ ಸೌಳು ಹಿಡಿದು ಬೆಳೆಗೇಡಾಗಿದೆ. ಹೀಗಾಗಿರುವುದು ಕೇವಲ ಒಂದು ತಾಲ್ಲೂಕಿನಲ್ಲಲ್ಲ. ಹೀಗೆ 7 ತಾಲ್ಲೂಕಿನಲ್ಲಿ ಭೂಮಿ ಸೌಳು ಹಿಡಿದು ಬೆಳೆಗೇಡಾಗಿದೆ. ಜನರು ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗಿದ್ದಾರೆ. ಇದಕ್ಕಾಗಿ ಇಂದು ನಮ್ಮ ಜಿಲ್ಲೆಯ ಅಗ್ರಿಕಲ್ಚರಲ್ ಇಲಾಖೆಯವರು ಒಂದು ಸ್ಕೀಮನ್ನು 14 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ತಯಾರುಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇದನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿರುತ್ತೆಂದು ನಮಗೆ ತಿಳಿದು ಬಂದಿದೆ. ಇದನ್ನು ಸರ್ಕಾರದವರು ಬೇಗ ಕಾರ್ಯಗತಮಾಡಬೇಕೆಂದು ನಾನು ಅವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಹೀಗೆ ನಮ್ಮಲ್ಲಿ ಪ್ರತೀ ವರ್ಷ 28 ಸಾವಿರ ಎಕರೆಭೂಮಿ ಯಾವ ಬೆಳೆಯನ್ನೂ ಕೊಡದೆ ಹಾಳುಬೀಳುತ್ತಿದೆ. ನಮ್ಮಲ್ಲಿ ಹಿರಿಯರು ಒಂದು ಗಾದೆ ಮಾತನ್ನು ಹೇಳುತ್ತಾರೆ—ಅದೇನೆಂದರೆ: ದೋಣಿ ದಂಡೆಯಲ್ಲಿರತಕ್ಕ ಜಮೀನು ಯಾವಾಗಲೂ ಫಲವತ್ತಾಗಿರುತ್ತದೆ. ಆದ್ದರಿಂದ ದೋಣಿ ದಂಡೆಯಲ್ಲಿ ಬೆಳೆಯಾದರೆ ಓಣಿಯಲ್ಲಾ ಜೋಳ ಎಂದು. ನಾವು ಈ ದಿವಸ ಎಕರೆಗೆ ಎರಡು ಚೀಲ ಜೋಳದಂತೆ ಇಟ್ಟುಕೊಂಡರೂ 28 ಸಾವಿರ ಎಕರೆಗೆ 56 ಸಾವಿರ ಚೀಲ ಜೋಳವಾಯಿತು. ಇದಕ್ಕೆ ನಾವು ಕಿಮ್ಮತ್ತು ಕಟ್ಟಿದರೇ ಚೀಲಕ್ಕೆ 50 ರೂಪಾಯಿಗಳಂತೆ ಬೆಲೆ ಇಟ್ಟುಕೊಂಡರೂ 28 ಲಕ್ಷ ರೂಪಾಯಿಗಳ ಆಯಿತು. ಈ ದಿವಸ ಇಂಥ ಆಹಾರಕ್ಕೆ ಕುಗ್ರಾಮವಿರತಕ್ಕ ಕಾಲದಲ್ಲಿ ವರ್ಷಂಪ್ರತಿ 28—‌0 ಲಕ್ಷ ರೂಪಾಯಿ ಬೆಲೆಬಾಳತಕ್ಕ ಧಾನ್ಯವನ್ನು ರೈತನು ಹಾಳು ಮಾಡಿಕೊಳ್ಳುತ್ತಿದ್ದಾನೆ. ಹೀಗಾಗಿ ದೇಶಕ್ಕೆ ಬರತಕ್ಕ ವರಮಾನ ತಪ್ಪಿರುವುದಲ್ಲದೆ, ದೇಶದಲ್ಲಿಯ ಆಹಾರ ಪರಿಸ್ಥಿತಿ ಹದಗೆಡುತ್ತಿದೆ, ರೈತ ಹಾಳಾಗುತ್ತಿದ್ದಾನೆ. ಇಷ್ಟು ಕಷ್ಟನಷ್ಟಗಳಾಗುತ್ತಿವೆ. ಆದ್ದರಿಂದ ಆದಷ್ಟು ಬೇಗ ಸರ್ಕಾರದವರು ಇದರ ಬಗ್ಗೆ ಗಮನ ವಹಿಸಿ ಜನರಿಗೆ ಅನುಕೂಲ ಉಂಟು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಈ ನದಿಗೆ ಹೊನವಾಡದ ಹತ್ತಿರ ಒಂದು ಬ್ರಿಡ್ಜ್ ಆಗಬೇಕಾಗಿದೆ ಇದನ್ನು ಮಾಡಿದರೆ ಭೂಮಿ ಸೌಳಾಗತಕ್ಕದ್ದೂ ಕೂಡ ಕಡಮೆಯಾಗುತ್ತದೆ. ಭೂಮಿಯು ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಈ ವಿಚಾರವನ್ನು ನಾವು ಮಾನ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ನಮ್ಮ ಜಿಲ್ಲೆಗೆ ಬಂದಿದ್ದಾಗ ತೋರಿಸಿದ್ದೇವೆ. ಈ ವಿಚಾರ ಸರ್ವ ಮಂತ್ರಿಗಳಿಗೂ ತಿಳಿ

ದ್ದಾಗಿದೆ. ಇದರ ಖರ್ಚೆಲ್ಲಾ ಸುಮಾರು 14—15 ಲಕ್ಷ ಮಾತ್ರ. ಇದನ್ನು ಜಾಗ್ರತೆ ಮಾಡ ಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಮೇಲಾಗಿ ನಮ್ಮ ಬಿಜಾಪುರ ಜಿಲ್ಲೆಗೆ ಯಾವ ನೀರಾವರಿ ಯೋಜನೆಗಳೂ ಬರುವಹಾಗಿಲ್ಲ. ಇಲ್ಲಿ ಏನಿದ್ದರೂ ಬರಿ ಕೆರೆ, ಬಾವಿಗಳ ಅನುಕೂಲತೆಯನ್ನು ಜನರಿಗೆ ಒದಗಿಸಬೇಕಾಗಿದೆ. ಇದಕ್ಕೆ ಮೊದಲು ಇಲ್ಲಿ ಸೌಳಿನಿಂದ ಹಾಳಾಗುತ್ತಿರುವ 28 ಸಾವಿರ ಎಕರೆ ಭೂಮಿಯನ್ನು ಉಳಿಸಬೇಕು.

ಇನ್ನು ಕುಷ್ಠರೋಗಿಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನಾಡಬೇಕಾಗಿದೆ. ಈ ರೋಗ ದಿಂದ ಎಷ್ಟು ಜನರು ನರಳುತ್ತಿದ್ದಾರೆಂಬುದನ್ನು ಹೇಳಲು ಸಾಧ್ಯವಿಲ್ಲ. ನಮ್ಮ ಬಿಜಾಪುರದ ಸುತ್ತ ಮುತ್ತಲಿನಲ್ಲೇ ಸುಮಾರು 2,000ಕ್ಕೂ ಮೇಲ್ಪಟ್ಟು ಈ ರೋಗದಿಂದ ನರಳತಕ್ಕ ಜನಗಳಿದ್ದಾರೆಂದು ನಾನು ತಿಳಿಸಬಲ್ಲೆ. ಈ ರೋಗವನ್ನು ಕೆಲವು ಮಂದಿ ಡಾಕ್ಟರು ಸಾಂಸರ್ಗಿಕ ರೋಗವೆಂದೂ, ಇನ್ನು ಕೆಲವರು ಅಲ್ಲವೆಂದೂ ಹೇಳುತ್ತಿದ್ದಾರೆ. ಬಿಜಾಪುರ ಜಿಲ್ಲೆಯಾದರೂ ಒಂದು ಐತಿಹಾಸಿಕ ಪಟ್ಟಣ. ಅಲ್ಲಿಯ ಜನರು ತಿರುಗಾಡುವುದನ್ನು ಹೊರಗಿನವರಾರಾದರೂ ನೋಡಿದರೆ ಬಹಳ ಕರುಣೆ ಬರುವಂಥಾದ್ದಾಗಿರುತ್ತದೆ. ಹೀಗಿರುವುದು ಸರಿಯಲ್ಲ. ಇದರ ನಿವಾರಣೆಗೆಂದು ಸರ್ಕಾರದವರು 10 ಸಾವಿರ ರೂಪಾಯಿಗಳ ಒಂದು ಗ್ರಾಂಟನ್ನು ಕೊಟ್ಟಿದ್ದಾರೆ. ಆದರೆ ಇದು ಏನೇನೂ ಸಾಲದು ಇದನ್ನಿನ್ನೂ ಜಾಸ್ತಿ ಮಾಡಬೇಕು. ಹಾಗೂ ಇದರ ಒಂದು ಸರ್ವೆಯನ್ನು ಕರ್ಣಾಟಕಾದ್ಯಂತವೂ ಕೈಗೊಳ್ಳಬೇಕೆಂದು ಹೇಳುತ್ತೇನೆ. ಈ ವಿಚಾರವನ್ನು ನಾವು 1—2 ಆವರ್ತಿ ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದ್ದಾಗಿದೆ. ಇದನ್ನು ಇನ್ನಾದರೂ ಬೇಗ ನಿರ್ಮೂಲಮಾಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ. ಈ ಬಗ್ಗೆ ಜನರಿಂದ ಏನು ಸಹಾಯ ಬೇಕಾದರೂ ಕೊಡುವುದಕ್ಕೆ ನಾವು ತಯಾರಾಗಿ ದ್ದೇವೆ. ಈಗಾಗಲೇ ಕೆಲವು ಮಂದಿ ಜನರು ತಾವಾಗೇ ಮುಂದೆ ಬಂದು ಸಹಾಯ ನೀಡುತ್ತಿದ್ದಾರೆ. ಈಗ ಸರ್ಕಾರದವರು ಈ ಬಗ್ಗೆ ಕೂಡಲೇ ತ್ವರಿತವಾಗಿ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಈ ಐತಿಹಾಸಿಕ ಪಟ್ಟಣದಲ್ಲಿ ಈ ರೋಗವನ್ನು ಸಂಪೂರ್ಣವಾಗಿ ತೊಡೆದು ಹಾಕಲು ಕೆಲವು ಜನರು ಮುಂದೆ ಬಂದು ಒಂದೊಂದು ಚೀಲ ಜೋಳವನ್ನು ಕೊಡಲಿಕ್ಕೆ ಹತ್ತಿ ದ್ದಾರೆ. ಈಗಾಗಲೇ ಶ್ರೀ ಬಿ. ಎಂ. ಪಾಟೀಲರೂ, ಜಿ. ಎನ್. ಪಾಟೀಲರೂ ಒಂದೊಂದು ಚೀಲ ಜೋಳವನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ಡಾಕ್ಟರ ಕಡೆಗೆ ಕೊಡಲಾಗುತ್ತಿದೆ.

ಇನ್ನು ಬಿಜಾಪುರದಲ್ಲಿರತಕ್ಕ ದವಾಖಾನೆ ಬಹಳ ಚಿಕ್ಕದಿದೆ. ಆಪರೇಷನ್ ವಗೈರೆ ಚಿಕಿತ್ಸೆ ನಡೆ ಸಲು ಅಲ್ಲಿ ಅವಕಾಶವಿಲ್ಲ. ದುಡ್ಡುಸ್ಥರಾದರೆ ದೂರಹೋಗಿ ಚಿಕಿತ್ಸೆ ಮಾಡಿಕೊಳ್ಳಬಲ್ಲರು. ಬಡವರಿಗೆ ದೂರಹೋಗಲು ಸಾಧ್ಯವಿಲ್ಲ. ಮೇಲಾಗಿ ಹೇಳುವುದು ಇದೊಂದು ದೊಡ್ಡ ಐತಿಹಾಸಿಕ ಪಟ್ಟಣ ಎಂದು ಬೇರೆ. ಆದ್ದರಿಂದ ಸರ್ಕಾರದವರು ಇಲ್ಲಿ ಒಂದು ದೊಡ್ಡ ದವಾಖಾನೆಯನ್ನು ಏರ್ಪಾಡು ಮಾಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ಜಿಲ್ಲೆಯಲ್ಲಿ ನೀರಾವರಿ ಪಂಪು ಸೆಟ್ಟುಗಳ ಬಗ್ಗೆ ಸಹಸ್ರಾರು ಅರ್ಜಿಗಳು ಪೆಂಡಿಂಗ್‌ನಲ್ಲಿವೆ. ಸರ್ಕಾರಕ್ಕೆ ನಮಗೆ ಅವನ್ನು ಮುಫತ್ತಾಗಿ ಕೊಡ ಬೇಕೆಂದು ಕೇಳಿದ್ದೇವೆ. ಸರ್ಕಾರದವರು ಕೊಟ್ಟ ಹಣದಿಂದ ರೈತರು ಈ ಯೋಜನೆಯನ್ನು ಅಮಲ ನಲ್ಲಿ ತರಬೇಕಾದರೆ ಹಾಗೂ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕಾದರೆ ನಮ್ಮ ಜಿಲ್ಲೆಯ ಡೆಪ್ಯುಟಿ ಕಮಿಷನರ್ ಮತ್ತಷ್ಟು ಹಣ ಸಹಾಯವನ್ನು ಸರ್ಕಾರದವರು ಕೊಡುವುದಕ್ಕೆ ವಿಚಾರ ಮಾಡಬೇಕು. ಸುಮಾರು 1,600 ಅರ್ಜಿಗಳು ಪಂಪ್‌ಸೆಟ್ಟುಗಳಿಗಾಗಿ ಬಾಕಿ ಇದ್ದರೆ, ಕಳೆದ ಸಾರಿ ಕೇವಲ 400 ಜನ ರೈತರಿಗೆ ಮಾತ್ರ ಕೊಟ್ಟಿದ್ದಾರೆ. ಆ ರೀತಿಯಾಗಿ ಮಂಜೂರು ಮಾಡಿದ್ದಾರೆ. ಆದ್ದರಿಂದ ಈ ಯೋಜನೆಯನ್ನು ಪೂರೈಸುವುದಕ್ಕಾಗಲಿಲ್ಲ. ರೈತರು ಮಾಡತಕ್ಕ ಸ್ವರ ಇದು ಎಂದು ಅನಾದರಣೆಮಾಡಿದೆ ಅಮಲಿನಲ್ಲಿ ತಂದಕೂಡಲೆ ಸರ್ಕಾರದವರು ಹಣವನ್ನು ಒದಗಿಸಬೇಕು. ಇದ ರಿಂದ ರೈತರಿಗೆ ಅನುಕೂಲವಾಗಬೇಕು.

ಇನ್ನು ಕೆರೆಗಳ ಯೋಜನೆ. ಇದರ ಬಗ್ಗೆ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಸಿಂಧಗಿ ತಾಲ್ಲೂಕಿನಲ್ಲಿ ಎರಡು ಕೆರೆಗಳ ಸ್ಕೀಮನ್ನು ಹಾಕಿ ಕೊಂಡಿದ್ದಾರೆ. ಇಲ್ಲಿ ಅನೇಕ ಕೆರೆಗಳ ಪ್ಲಾನು ಎಸ್ಟಿಮೇಟುಗಳು ತಯಾರಾಗಿದ್ದರೂ ಅವು ಸರ್ಕಾರದ ಹತ್ತಿರವಿದ್ದರೂ ಎಷ್ಟೋ ಕೆರೆಗಳ ಕೆಲಸ ಆಗಬೇಕಾದ ಅವಶ್ಯಕತೆ ಇದೆ. ಆ ಕೆರೆಗಳ ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ಕೂಡಲೆ ಸರ್ಕಾರ ಕೈಗೆ ತೆಗೆದುಕೊಂಡು ನೀರಾವರಿ ಕೆಲಸ ಕಾರ್ಯಗಳನ್ನು ಜಾಗ್ರತೆ ಮಾಡಬೇಕು. ಈ ಬಾಬಿಗೆ ಕೊಟ್ಟ ಹಣವನ್ನು ಪೂರ್ತಿಯಾಗಿ ಉಪಯೋಗಮಾಡಿಕೊಳ್ಳಬೇಕೆಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ.

ಇನ್ನು ಬಂಡಿಂಗ್ ವಿಷಯ: ಇದು ಬಹಳ ಯೋಗ್ಯವಾದ ಕೆಲಸ. ಜಮೀನಿನಲ್ಲಿ ಈ ಬಂಡಿಂಗ್ ಹಾಕಿ ರೈತರಿಗೆ ಸ್ವಲ್ಪಮಟ್ಟಿಗಾದರೂ ಅನುಕೂಲತೆಗಳನ್ನು ಸರ್ಕಾರದವರು ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಅವರು ಸೂಕ್ತವಾಗಿ ಅಭಿನಂದನಾರ್ಹರು ಆಗಿದ್ದಾರೆ. ಕೇವಲ ಒಂದು ಜಮೀನು ಕಿಮ್ಮತ್ತು 1,120 ರೂಪಾಯಿಗಳಾದರೆ ಬಂಡಿಂಗ್ ಹಾಕಿರುವ ಭೂಮಿಯ ಕಿಮ್ಮತ್ತು 1,400 ರೂಪಾ

(ಶ್ರೀ ಶರಣಯ್ಯವಸ್ತ್ರದ)

ಯಿಗಳಾಗಿದೆ. ಇದರಲ್ಲಿ ತಿದ್ದುಪಡಿ ಆಗಬೇಕು. ಏಕೆಂದರೆ ರೈತರಿಂದ ತೆರಿಗೆ ವಸೂಲು ಮಾಡುವು ದರಲ್ಲಿ ತುಂಬಾ ಅನ್ಯಾಯವನ್ನು ಮಾಡುತ್ತಿದ್ದಾರೆಂಬುದಾಗಿ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇದನ್ನು ಸರ್ಕಾರದವರು ಕೂಡಲೇ ಪರಾಂಬರಿಸಿ ರೈತರಿಗೆ ಉಂಟಾಗಿರತಕ್ಕ ಅನಾನುಕೂಲತೆಯನ್ನು ಪರಿಹಾರ ಮಾಡಬೇಕು.

ಇನ್ನು ರಾಜಕೀಯ ಸಂತ್ರಸ್ತರ ವಿಷಯ ಸರ್ಕಾರದವರು ಇವರ ಬಗ್ಗೆ ಪರಿಹಾರ ಕೊಡುವ ಅಂಶವನ್ನು ವಿಚಾರ ಮಾಡಬೇಕು. ಏಕೆಂದರೆ ದೇಶ ಒಂದು ಸ್ವಾತಂತ್ರ ರಂಗದಲ್ಲಿ ಅನೇಕ ರೀತಿಯಲ್ಲಿ ಕಷ್ಟಪಟ್ಟು ಸ್ವಾತಂತ್ರ ಚಳುವಳಿಯಲ್ಲಿಯೂ ಭಾಗವಹಿಸಿ ಅನೇಕ ವಿಧದಲ್ಲಿ ಅಲ್ಲಿಯೂ ಕಷ್ಟಗಳಿಗೀಡಾದಂತಹವರು ಅನೇಕ ಜನರು ಇದ್ದಾರೆ. ಇವರಲ್ಲಿ ಕೆಲವರು ಉದ್ಯೋಗಿಗಳಾಗಿದ್ದಾರೆ ಮತ್ತೆ ಕೆಲವರು ನಿರುದ್ಯೋಗಿಗಳಾಗಿದ್ದಾರೆ. ಇಂತಹ ಕಷ್ಟಪಡುತ್ತಿರುವ ಅನೇಕ ಜನರ ಸ್ಥಿತಿಗತಿಗಳನ್ನು ನೋಡಿದವರಿಗೆ ಗೊತ್ತಾಗುತ್ತದೆ. ಅನೇಕ ಸಾರಿ ಮಂತ್ರಿಗಳು ಮತ್ತು ಉಪಮಂತ್ರಿಗಳೂ ಸಹ ಇದನ್ನು ಗಮನಿಸಿದ್ದೂ ಉಂಟು. ಆದರೆ ಇದರ ಬಗ್ಗೆ ಸರ್ಕಾರದವರು ಒಂದು ಸಮಿತಿಯನ್ನು ರಚಿಸಿ ಅವರಿಗೆ ಅನುಕೂಲ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರೂ ಆ ದೃಷ್ಟಿಯ ಕಡೆ ಇದುವರೆಗೂ ವಿಚಾರ ಮಾಡಲಿಲ್ಲ. ಇದು ನಮ್ಮ ಜಿಲ್ಲೆಗೆ ಮಾತ್ರವಲ್ಲ. ಇಡೀ ದೇಶದಲ್ಲಿ ಕರ್ಣಾಟಕ ಪ್ರಾಂತದಲ್ಲಿ ಎಷ್ಟು ಜನ ರಾಜಕೀಯ ಸಂತ್ರಸ್ತರು ಇದ್ದಾರೆ, ಅವರ ಸ್ಥಿತಿಗತಿಗಳೇನು, ಅವರಿಗೆ ಪರಿಹಾರ ಯಾವ ರೀತಿ ಸಿಗಬೇಕು. ಅದಕ್ಕಾಗಿ ಯಾವ ರೀತಿಯಾದಂಥ ಸ್ಕೀಮು ಮಾಡಬೇಕೆಂಬುದನ್ನು ಯೋಚಿಸಿ ಕೂಡಲೇ ಅವರಿಗೆ ಖಾಯಂ ಪರಿಹಾರವನ್ನು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

ಇನ್ನು ಮುಂಬೈ ರಾಜ್ಯದಲ್ಲಿ ಬಳಿಗಿರಿ ತಾಲ್ಲೂಕಿನಲ್ಲಿ ಲಫ್ಟ್ ಇರ್ರಿಗೇಷನ್ ಸ್ಕೀಂ ಎಂದು ಇತ್ತು ಅದು ಈಗ ಬಂದು ಆಗಿದೆ. ಅದು ಎಂಟು ಹತ್ತು ಲಕ್ಷ ರೂಪಾಯಿಗಳ ಯೋಜನೆ. ಇದರಿಂದ ಸಹಸ್ರಾರು ಎಕರೆಗಳಷ್ಟು ಭೂಮಿಗೆ ನೀರಾವರಿ ಸೌಕರ್ಯವುಂಟಾಗುತ್ತದೆ. ಆದ್ದರಿಂದ ಸರ್ಕಾರದವರು ತಾವೇ ಮುಂದಾಗಿ ಬಂದು ಈ ಕಾರ್ಯವನ್ನು ತೆಗೆದುಕೊಂಡು ಅದು ಅಮಲನಲ್ಲಿ ಬರುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ದುಷ್ಕಾಲ ಪರಿಸ್ಥಿತಿ ಮಳೆಯಿಂದಾಗಿದೆ. ಅಕ್ಕಪಕ್ಕ ಗ್ರಾಮಗಳಲ್ಲಿ ಮಳೆ ಸರಿಯಾಗಿ ಬಾರದೆಹೋಗಿದೆ. ಕೆರೆ ರಸ್ತೆ ಮತ್ತು ಬಾವಿಗಳ ಕಾಮಗಾರಿಗಳು ಸಹ ನಿಂತುಹೋಗಿವೆ. ಇದರಿಂದ ಅನೇಕರು ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಕೆರೆ, ರಸ್ತೆ ಮತ್ತು ಬಾವಿಗಳ ನಿರ್ಮಾಣ ಕೆಲಸ ಕಾರ್ಯಗಳನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕು.

ಇನ್ನು ಆಲಮಟ್ಟಿ ಯೋಜನೆಯನ್ನು ಲೋಕೋಪಯೋಗಿ ಶಾಖಾ ಮಂತ್ರಿಗಳು ಬಿಜಾಪುರದಲ್ಲಿ ಕೈಗೊಳ್ಳುವುದರಿಂದ ಜನತೆಗೆ ಏನೊಂದು ಅನ್ಯಾಯವಾಗುವುದಿಲ್ಲವೆಂದು ಹೇಳಿದ್ದಾರೆ. ಆಲಮಟ್ಟಿ ಮತ್ತು ನಾರಾಯಣಪುರ—ಈ ಎರಡು ಯೋಜನೆಗಳನ್ನು ಇಲ್ಲಿ ಕಟ್ಟುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಇನ್ನು ನಮ್ಮ ಜಿಲ್ಲೆಯ 3 ಜನರು ಮಹಾ ಮಂತ್ರಿಗಳಾಗಿದ್ದಾರೆ. ಶ್ರೀಮಾನ್ ಕಂಠಿ, ಶ್ರೀಮಾನ್ ಜತ್ತಿ ಮತ್ತು ಶ್ರೀಮಾನ್ ನಿಜಲಿಂಗಪ್ಪ ಇವರು ಮೂವರು ನಮ್ಮ ಜಿಲ್ಲೆಯ ಪರವಾಗಿರುವುದರಿಂದ ನಮಗೆ ಅದು ಒಂದು ಹೆಮ್ಮೆ. ಆದರೂ ನಮ್ಮ ಜಿಲ್ಲೆಯಲ್ಲಿರತಕ್ಕ ಬೇಡಿಕೆಗಳನ್ನು ಅನೇಕ ರೀತಿಯಲ್ಲಿ ಅವರನ್ನು ಬೇಡುತ್ತಿದ್ದರೂ ಜನರ ಕಷ್ಟಗಳನ್ನು ನೋಡುತ್ತಿದ್ದರೂ ಇನ್ನು ಸಾಕಷ್ಟು ಸಹಾಯ ಮಾಡಲಿಲ್ಲ. ಅವರು ನಮ್ಮ ಜಿಲ್ಲೆಯ ಬಗ್ಗೆ ಹೆಚ್ಚು ಸಹಾಯ ಮಾಡಬೇಕೆಂದು ಕೇಳಿಕೊಂಡು ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೀರಭದ್ರಪ್ಪ (ಯಲ್ಬುರ್ಗ).—ಮಾನ್ಯ ಸಭಾಧ್ಯಕ್ಷರೇ, 1964-65 ನೇ ಇಸವಿಯ ಮುಂಗಡ ಪತ್ರದ ಮೇಲೆ ಮಾತನಾಡುತ್ತಾ ಕೆಲವೊಂದು ಅಂಶಗಳನ್ನು ಸರ್ಕಾರಕ್ಕೆ ತಿಳಿಯಪಡಿಸಬೇಕೆಂದಿದ್ದೇನೆ. ನಮ್ಮ ದೇಶದಲ್ಲಿ ಬಹು ಮುಖ್ಯವಾದಂಥ ಪ್ರಶ್ನೆಯೆಂದರೆ ಒಂದು, ಅದು ರೈತರ ಪ್ರಶ್ನೆ. ದೇಶಕ್ಕೆ ಬೆನ್ನೆಲುಬು ರೈತ. ಇವರ ಬಗ್ಗೆ ಸರ್ಕಾರದವರು ಹೆಚ್ಚಿನ ವಿಚಾರಣೆಗೆ ಅವಕಾಶ ಕೊಡುತ್ತಿರುವ ಹಾಗೆ ಕಾಣುವುದಿಲ್ಲ ಏಕೆಂದರೆ ರೈತರು ನಮ್ಮ ದೇಶಕ್ಕೆ ಸ್ವತ್ತು ಇದ್ದಹಾಗೆ. ಆದರೆ ಅವರ ಬೆನ್ನೆಲುಬು ಮುರಿದುಹೋಗುವ ಹಾಗೆ ಕೆಲಸ ಮಾಡುತ್ತಾರೆ. ಆಹಾರ ಒದಗಿಸುತ್ತಾರೆ ಎಲ್ಲಿಯವರೆಗೆ ಅವನು ಸಾಲದಿಂದ ಮುಕ್ತನಾಗುವುದಿಲ್ಲವೋ ಅಲ್ಲಿಯವರೆಗೆ ಆರಂಭ ಮಾಡುವುದ

ಕ್ಕಾಗಲೀ, ದೇಶದ ಪ್ರಗತಿಗಾಗಲೀ ತನ್ನ ಕಾರ್ಯಗಳನ್ನು ಮಾಡುವುದಕ್ಕೆ ಅವನಿಂದ ಸಾಧ್ಯವಾಗುವುದಿಲ್ಲ. ಸಾಲವೇ ಶೂಲವೆಂದು ಹೇಳುವ ಹಾಗೆ ಯಾರು ಸಾಲಗಾರರು ಆಗಿರುತ್ತಾರೋ ಅಂತಹವರು ಸೇವೆ ಮಾಡುವುದಕ್ಕೆ ವಿಚಾರ ಮಾಡುವುದಕ್ಕೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ. ಇದನ್ನು ಎಲ್ಲರೂ ಬಲ್ಲರು. ಈ ದೃಷ್ಟಿಯಿಂದ ಸರ್ಕಾರದವರು ರೈತರ ಮೇಲೆ ಎಷ್ಟು ಸಾಲವಿದೆ, ಅವನನ್ನು ಯಾವ ರೀತಿ ಸಾಲದಿಂದ ವಿಮುಕ್ತನನ್ನಾಗಿ ಮಾಡಬೇಕು, ಅವನು ಒಕ್ಕಲುತನ ಮಾಡುವುದಕ್ಕಾಗಿ ಏನೇನು ಉಪಕರಣಗಳನ್ನು ಮತ್ತು ಸುಲಭ ಕಂತುಗಳಲ್ಲಿ ಸಾಲವನ್ನು ಮತ್ತು ಯಾವ ರೀತಿ ಬೀಜ ಮತ್ತು ಗೊಬ್ಬರ ಮುಂತಾದುವನ್ನು ಒದಗಿಸಬೇಕು—ಇವನ್ನೆಲ್ಲಾ ಚೆನ್ನಾಗಿ ವಿಚಾರ ಮಾಡಬೇಕು. ಈ ರೀತಿಯಾದಂಥ ಸೌಲಭ್ಯಗಳನ್ನು ರೈತರಿಗೆ ಒದಗಿಸುವುದರಲ್ಲಿ ಸರ್ಕಾರದವರು ಸ್ವಲ್ಪಮಟ್ಟಿಗೆ ಅಲಕ್ಷ್ಯಮಾಡುತ್ತಿದ್ದಾರೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಎರಡನೆಯದಾಗಿ ಇನ್ನು ಕೂಲಿಗಾರರ ವಿಷಯ. ಇವರೇ ದೇಶದಲ್ಲಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಕಡುಬಡವರಾಗಿರುತ್ತಾರೆ. ಆದರೆ ಅವರು ದರಿದ್ರತನ ಅಜ್ಞಾನಗಳಿಂದ ಇರುತ್ತಾರೆ. ಅಂತಹವರ ಅಜ್ಞಾನತನದಿಂದ ಅವರನ್ನು ನಿವಾರಣೆ ಮಾಡುವುದಕ್ಕೋಸ್ಕರ ಸರ್ಕಾರದವರು ಇದುವರೆಗೆ ಏನು ಪ್ರಯತ್ನಗಳನ್ನು ಮಾಡಲಿಲ್ಲವೆಂದು ಕಾಣುತ್ತದೆ. ಸಮಾಜವಾದವನ್ನು ನಾವು ಅನುಸರಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಆ ಒಂದು ದೃಷ್ಟಿಯಿಂದ ಇದ್ದಾರೆಯೇ ಎಂದು ನೋಡಿದಾಗ ಆ ವಿಚಾರವನ್ನು ಅವರು ಹೆಚ್ಚಿಗೆ ಪ್ರಸ್ತಾಪ ಮಾಡಿದಹಾಗೆ ಕಾಣುವುದಿಲ್ಲ. ಸರ್ಕಾರದಲ್ಲಿ ನಾಲ್ಕನೆಯ ದರ್ಜೆ ಎಂದು ಏನಿದೆ ಆ ದರ್ಜೆಯ ನೌಕರರೇ ಬಹು ಸಂಖ್ಯಾತರಾಗಿದ್ದಾರೆ. ಸರ್ಕಾರದಲ್ಲಿ ಹೆಚ್ಚು ಜವಾಬ್ದಾರಿಯನ್ನು ಹೊರತಕ್ಕವರೇ ಅವರು. ಅಂತಹವರಿಗೆ ಹೆಚ್ಚು ವೇತನ ಡಿ. ಎ. ಕೊಡದೇ ಹೋದರೆ, ನೌಕರ ವರ್ಗದಲ್ಲಿ ಒಂದು ಸಮಾನತೆ ಮಾಡದೇ ಹೋದರೆ ಅವರಲ್ಲಿ ತಮ್ಮ ಕೆಲಸಕಾರ್ಯಗಳಲ್ಲಿ ಹೆಚ್ಚಿಗೆ ಅತೃಪ್ತಿ ಹುಟ್ಟುತ್ತದೆ. ಸಾಧಾರಣವಾಗಿ ಒಂದಕ್ಕೆ ಹತ್ತರಷ್ಟು ಅಥವಾ 10 ಕ್ಕೆ ನೂರರಷ್ಟು ಸಂಬಳ ಸಾರಿಗೆಗಳಲ್ಲಿ ವ್ಯತ್ಯಾಸವಿದ್ದರೆ ನೌಕರ ವರ್ಗದವರಲ್ಲಿ ಎಲ್ಲಿ ನೆಮ್ಮದಿ ಸಿಕ್ಕುತ್ತದೆ, ರಾಜ್ಯದಲ್ಲಿ ಹೆಚ್ಚು ಸೇವೆ ಮಾಡುವುದಕ್ಕೆ ಎಲ್ಲಿ ಅವಕಾಶ ಸಿಕ್ಕುತ್ತದೆ? ಅದೂ ಅಲ್ಲದೆ ಈಗ ದೇಶದಲ್ಲಿ ಜೀವನ ಮಾಡತಕ್ಕಂಥವನಿಗೆ ಬೇಕಾದ ಆಹಾರ ಪದಾರ್ಥಗಳ ಬೆಲೆಗಳು ವಿಪರೀತವಾಗಿ ಹೆಚ್ಚಿವೆ. ಅದೇ ಒಂದು ಮುಖ್ಯ ಕಾರಣ. ಆದ್ದರಿಂದ ಸರ್ಕಾರದವರು ಇನ್ನುಮುಂದೆ ಹೊಸ ಕರಗಳನ್ನು ಹಾಕಕೂಡದು. ಇದರ ಬಗ್ಗೆ ಮಹಾತ್ಮ ಗಾಂಧಿಯವರು ಇತಿಹಾಸ ಪ್ರಸಿದ್ಧವಾದ ದಾಂಡಿಉಪ್ಪಿನ ಸತ್ಯಾಗ್ರಹ ಒಂದು ನಿದರ್ಶನವನ್ನು ಸ್ಪಷ್ಟವಾಗಿಟ್ಟಿದ್ದಾರೆ. ಯಾವಾಗಲೂ ಜೀವನ ಪದಾರ್ಥಗಳ ಮೇಲೆ ವಿಶೇಷವಾಗಿ ಕರ ಹಾಕಕೂಡದು ಮತ್ತು ಅದರ ಮೇಲೆ ಆ ರೀತಿ ತೆರಿಗೆ ಹಾಕದಹಾಗೆ ಪ್ರಾಂತ ಸರ್ಕಾರಗಳು ನೋಡಿಕೊಳ್ಳಬೇಕಾಗಿತ್ತೆಂದು ಹೇಳಿದ್ದಾರೆ. ಆದರೆ ನಮ್ಮ ಸರ್ಕಾರದವರು ಈ ವಿಷಯದಲ್ಲಿ ಅಲಕ್ಷ್ಯ ಮಾಡಿದ್ದಾರೆ. ಇನ್ನು ಅಭಿವೃದ್ಧಿ ಕಾರ್ಯಗಳಿಗೆ ಕೆಲವೊಂದು ಹಣವನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಎಲ್ಲಿ ಬರಗಾಲ ಪ್ರದೇಶಗಳು ಹೆಚ್ಚಾಗಿವೆಯೋ ಅಲ್ಲಿ ಮುಖ್ಯವಾಗಿ ಬಾವಿ ಮತ್ತು ಕೆರೆ ಮೊದಲಾದುವುಗಳನ್ನು ತೋಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಆ ದೃಷ್ಟಿಯಿಂದ ನಾನು ಹೇಳಬೇಕಾದರೆ ನಮ್ಮ ರಾಯಚೂರು ಜಿಲ್ಲೆಯಲ್ಲಿ ನಾಲ್ಕೈದು ತಾಲ್ಲೂಕುಗಳು ಎಂದರೆ ಲಿಂಗಸುಗೂರ, ಕುಷ್ಟಗಿ, ಯಲಬುರ್ಗಿ, ಸಿಂಧನೂರು ಮತ್ತು ಕೊಪ್ಪಳ, ಗಂಗಾವತಿ ಈ ಪ್ರದೇಶಗಳು ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತಿವೆ. ಆದ್ದರಿಂದ ಈ ಪ್ರದೇಶಗಳಲ್ಲಿ ಹೆಚ್ಚಿಗೆ ನೀರಾವರಿ ಯೋಜನೆಗಳನ್ನು ಕೈಗೊಂಡು ಅಲ್ಲಿನ ಜನಗಳಿಗೆ ನೀರಾವರಿ ಸೌಲಭ್ಯಗಳನ್ನು ದೊರಕಿಸಿಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಶಿಕ್ಷಣದ ವಿಷಯವಾಗಿ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಇನ್ನೂ ಅನೇಕ ಗ್ರಾಮಗಳಲ್ಲಿ ಶಾಲೆಗಳು ಆಗಬೇಕಾದ ಪ್ರಸಂಗ ಇದೆ. ಕೆಲವು ಕಡೆ ಶಾಲೆಗಳು ಆಗಿದ್ದರೂ ಕೂಡ ಹೆಚ್ಚು ಸಂಖ್ಯೆಯಲ್ಲಿ ಶಿಕ್ಷಕರ ಅಭಾವ ಇದೆ. ಕೆಲವು ಕಡೆ ಶಿಕ್ಷಕರಿದ್ದರೆ ಕಟ್ಟಡದ ಕೊರತೆ ಇದೆ. ಕೆಲವು ಕಡೆ ಕಟ್ಟಡಗಳಿದ್ದರೆ ಶಿಕ್ಷಕರ ಅಭಾವ ಇದೆ. ಆದ್ದರಿಂದ ಕಟ್ಟಡಗಳ ಕೊರತೆಯನ್ನೂ ಮತ್ತು ಶಿಕ್ಷಕರ ಕೊರತೆಯನ್ನೂ ಹೋಗಲಾಡಿಸುವುದಕ್ಕೆ ಶಿಕ್ಷಣ ಖಾತೆಯವರು ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ದವಾಖಾನೆಗಳ ವಿಷಯ. ಈ ದವಾಖಾನೆಗಳು ನಮ್ಮ ಜಿಲ್ಲೆಯಲ್ಲಿ ಒಂದು ತಾಲ್ಲೂಕಿಗೆ ಒಂದೊ ಎರಡು ಈ ರೀತಿ ಇವೆ. ಹೀಗಿದ್ದರೂ ಇರುವ ದವಾಖಾನೆಗಳಲ್ಲೂ ಸಹ ಡಾಕ್ಟರುಗಳ ಸಂಖ್ಯೆ ಕಡಿಮೆ ಇದೆ. ಕೆಲವು ಕಡೆ ಡಾಕ್ಟರುಗಳಿದ್ದರೆ ಔಷಧಿಗಳಿಲ್ಲ. ಇಂಥಾ ಅವ್ಯವಹಾರ ಏನಿದೆಯೋ ಅದನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

(ಶ್ರೀ ವೀರಭದ್ರಪ್ಪ)

ಇನ್ನೊಂದು ವಿಷಯ. ನಮ್ಮ ಕೊಪ್ಪಳ ತಾಲ್ಲೂಕಿನಲ್ಲಿ 35–40 ಹಳ್ಳಿಗಳು ತುಂಗಭದ್ರಾ ಅಣೆಕಟ್ಟಿನಲ್ಲಿ ಮುಳುಗಡೆಯಾದುವು. ಆ ಹಳ್ಳಿಗರಿಗೆ ಸರಿಯಾದ ಪರಿಹಾರ ಈ ವರಿಗೂ ದೊರೆಕಿಲ್ಲ. ಈಗ ತುಂಗಭದ್ರಾ ಅಣೆಕಟ್ಟಿನಲ್ಲಿ 27 ಸಾವಿರ ಕಿಲೋವಾಟ್ಸ್ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತದೆ. ಈಗ ಅದರಲ್ಲಿ ರಾಯಚೂರು ಜಿಲ್ಲೆಯಲ್ಲಿ 10 ಸಾವಿರ ಕಿಲೋವಾಟ್ಸನ್ನು ಮಾತ್ರ ಉಪಯೋಗ ಮಾಡುತ್ತಿದ್ದಾರೆ. ಕೊಪ್ಪಳ, ಯಲಬುರ್ಗಿ, ಲಿಂಗಸುಗೂರು ಈ ಪ್ರದೇಶದ ರೈತರು ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಬೇಡುತ್ತಿದ್ದಾರೆ. ಸುಮಾರು 700–800 ಜನಗಳು ಆ ಬಗ್ಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಆದರೆ ಆ ಬಗ್ಗೆ ಸರ್ಕಾರದವರು ಅಲಕ್ಷ್ಯ ಮಾಡಿದ್ದಾರೆ. ಅದರ ಸರ್ವೆಯನ್ನು ಕೂಡ ಮಾಡಿಲ್ಲ. ಇದರಿಂದ ಆ ಪ್ರದೇಶದ ಜನಗಳಿಗೆ ಅಸಮಾಧಾನ ಉಂಟಾಗಿದೆ. ಆದ್ದರಿಂದ ಅದನ್ನು ಪರಿಶೀಲನೆ ಮಾಡಿ ಆ ಪ್ರದೇಶದ ಜನಗಳಿಗೆ ವಿದ್ಯುಚ್ಛಕ್ತಿ ದೊರೆಯುವಂತೆ ಏರ್ಪಾಡು ಮಾಡಿದರೆ ಆಹಾರದ ಕೊರತೆ ಇರುವ ಇಂಥಾ ಕಾಲದಲ್ಲಿ ಹೆಚ್ಚು ಆಹಾರಧಾನ್ಯವನ್ನು ಉತ್ಪನ್ನ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ದೇಶದಲ್ಲಿರತಕ್ಕ ಭ್ರಷ್ಟಾಚಾರದ ಮಟ್ಟಿಗೆ ಕೆಲವೊಂದು ಮಾತನ್ನು ಹೇಳಬೇಕೆಂದಿದ್ದೇನೆ. ಈ ಮಾತನ್ನು ನಾನು ಪದೇ ಪದೇ ಹೇಳುತ್ತಲೇ ಇದ್ದೇನೆ. ಸರ್ಕಾರದವರು ಅದನ್ನು ಕೇಳುತ್ತಲೇ ಇದ್ದಾರೆ. ಆದರೆ ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಅವರು ಯಾವುದೋ ಒಂದು ಪ್ರಭಾವದಿಂದ ಕೆಲಸ ಮಾಡುತ್ತಿದ್ದಾರೆಂದು ನಾನು ಹೇಳುವಲ್ಲೆ. ಅದಕ್ಕೆ ಸಂಬಂಧಪಟ್ಟ ಹಾಗೆ ನಾನು ಸರ್ಕಾರಕ್ಕೆ ಸುಮಾರು 15 ಪ್ರಕರಣಗಳನ್ನು ಕಳುಹಿಸಿದ್ದೇನೆ. ಅವುಗಳ ಬಗ್ಗೆ ಯಾವುದನ್ನೂ ಇದುವರೆಗೂ ವಿಚಾರ ಮಾಡಿ ಉತ್ತರವನ್ನು ಕೊಟ್ಟ ಹಾಗೆ ಕಾಣಲಿಲ್ಲ, ಅವುಗಳನ್ನು ವಿಚಾರಣೆ ಮಾಡುವ ಹೊತ್ತಿಗೆ ಅದಕ್ಕೆ ಸಂಬಂಧಪಟ್ಟವರು ಕೈಲಾಸವನ್ನು ಕಾಣಬಹುದು ಎಂದು ಕಾಣುತ್ತದೆ. ಆದ್ದರಿಂದ ಸರ್ಕಾರದವರು ಅಂಥಾ ಪ್ರಕರಣಗಳನ್ನು ತೀವ್ರವಾಗಿ ತೆಗೆದುಕೊಂಡು ವಿಚಾರಣೆ ಮಾಡಬೇಕು. ಭ್ರಷ್ಟಾಚಾರದ ಪ್ರಕರಣಗಳೇನಿವೆ ಅವುಗಳನ್ನು ತೀವ್ರವಾಗಿ ವಿಚಾರಣೆ ಮಾಡಬೇಕು. ಈ ಪ್ರಕರಣಗಳ ಪೈಕಿ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂಥವುಗಳು ಇವೆ; ರೆವಿನ್ಯೂ ಖಾತೆಗೆ ಸಂಬಂಧಪಟ್ಟಂಥವುಗಳು ಇವೆ. ರಕ್ಷಣಾ ನಿಧಿಗೆ, ದಾನವಾಗಿ ಕೊಟ್ಟ ಹಾಲಿನ ಮಡಿಗೆ ಸಂಬಂಧಪಟ್ಟವುಗಳು ಇರುವುವು, ಇವುಗಳ ಬಗ್ಗೆ ವಿಚಾರಣೆಯನ್ನು ಏತಕ್ಕೆ ಮಾಡಲಿಲ್ಲ ಎಂದು ಕೇಳಿದರೆ ಈಗ ಅವುಗಳನ್ನು ವಿಚಾರಣೆ ಮಾಡಲಿಕ್ಕೆ ಹತ್ತಿದ್ದೇವೆ ಎಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ವಿಚಾರಣೆ ಮಾಡಿಲ್ಲ. ಅವುಗಳನ್ನು ಆದಷ್ಟು ಜಾಗ್ರತೆ ವಿಚಾರಣೆ ಮಾಡಬೇಕೆಂದು ನಾನು ಆಗ್ರಹದಿಂದ ಹೇಳುತ್ತೇನೆ.

ಇನ್ನು ನಮ್ಮ ರಾಯಚೂರು ಜಿಲ್ಲೆಯಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಯನ್ನು ಅನಧಿಕೃತವಾಗಿ ಸಂಗ್ರಹ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಪ್ರಕರಣಗಳು ಕೆಲವು ಇವೆ. ಅವುಗಳ ಬಗ್ಗೆಯೂ ಕೂಡ ಸರ್ಕಾರದವರು ವಿಚಾರಣೆ ಮಾಡಿಲ್ಲ. ಆದ್ದರಿಂದ ಅವುಗಳನ್ನು ಸಹ ವಿಚಾರಣೆ ಮಾಡಬೇಕು.

ಇನ್ನು ಪೋಲೀಸು ಇಲಾಖೆಯಲ್ಲಿ ಲಂಚಗುಳಿತನದ ಬಗ್ಗೆ ಒಂದೆರೆಡು ಮಾತುಗಳನ್ನು ಹೇಳಬಯಸುತ್ತೇನೆ. ಪೋಲೀಸು ಇಲಾಖೆಯಲ್ಲಿ ಈಗ ಏನಾಗಿದೆ ಎಂದರೆ ಯಾರಾದರೂ ಪೋಲೀಸಿನವರಿಗೆ ಒಂದು ಅರ್ಜಿಯನ್ನು ಕೊಟ್ಟರೆ ಅದು ಪೋಲೀಸ್ ಸ್ಟೇಷನ್ನಿನಲ್ಲಿ ರಿಜಿಸ್ಟರಾಗಬೇಕಾದರೆ ಅವರಿಗೆ ಲಂಚವನ್ನು ಕೊಟ್ಟರೆ ಅರ್ಜಿಯನ್ನು ರಿಜಿಸ್ಟರು ಮಾಡಿಕೊಳ್ಳುತ್ತಾರೆ, ಇಲ್ಲದೆ ಹೋದರೆ ಅವರು ಅರ್ಜಿಯನ್ನು ರಿಜಿಸ್ಟರು ಮಾಡಿಕೊಳ್ಳುವುದಿಲ್ಲ. ಕೆಲವು ಸಂದರ್ಭದಲ್ಲಿ ಕೆಲವು ಕೇಸುಗಳಲ್ಲಿ ಎರಡು ಪಾರ್ಟಿಗಳಿಂದಲೂ ಲಂಚವನ್ನು ತೆಗೆದುಕೊಳ್ಳುತ್ತಾರೆ. ಅವರೇನಾದರೂ ಕೋರ್ಟಿಗೆ ಹೋದರೆ ಯಾರು ಹೆಚ್ಚು ರೊಕ್ಕವನ್ನು ಕೊಡುತ್ತಾರೆಯೋ ಅಂಥವರ ಬಗ್ಗೆ ಹೆಚ್ಚು ಅಪರಾಧಗಳ ಮಹತ್ವವನ್ನು ಕಡಿಮೆ ಮಾಡತಕ್ಕ ಕಲಮುಗಳನ್ನು ಹಚ್ಚಿ ಅವರಿಗೆ ಅನುಕೂಲವಾಗುವಂತೆ ಮಾಡುತ್ತಾರೆ. ಈ ರೀತಿಯಾವಂತಹ ಕೃತ್ಯಗಳು ಪೋಲೀಸು ಇಲಾಖೆಯಲ್ಲಿ ನಡೆಯುತ್ತಿವೆ. ಇದನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಪೋಲೀಸಿನವರಲ್ಲಿ ಸಣ್ಣ ಪೋಲೀಸಿನವರು, ಶಿಪಾಯಿಗಳೇನಿದ್ದಾರೆಯೋ ಅವರಿಗೆ ಬಹಳ ಕಡಿಮೆ ಪಗಾರವನ್ನು ಕೊಡುತ್ತಿದ್ದಾರೆ. ಆದ್ದರಿಂದ ಅವರು ಒಂದು ರೂಪಾಯಿ ಎರಡು ರೂಪಾಯಿ ಲಂಚ ತೆಗೆದುಕೊಳ್ಳುತ್ತಾರೆ. ಸಬ್ ಇನ್‌ಸ್ಪೆಕ್ಟರು ಮುಂತಾದ ದೊಡ್ಡ ದೊಡ್ಡ ಪೋಲೀಸು ಆಫೀಸರುಗಳೇನಿದ್ದಾರೆಯೋ ಅವರು ಸ್ವಲ್ಪ ಹೆಚ್ಚು ಲಂಚವನ್ನು ತೆಗೆದುಕೊಳ್ಳತಕ್ಕ ಸಂದರ್ಭಗಳು ಇವೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಹೆಚು ಲಕ್ಷ್ಯವನ್ನು ಕೊಡಬೇಕು. ಮತ್ತು ಪೋಲೀಸು ಇಲಾಖೆಯಲ್ಲಿರತಕ್ಕ ಸಣ್ಣ ಸಣ್ಣ ಪೋಲೀಸ್

ಕಾನ್‌ಸ್ಟೇಬಲ್‌ಗಳೇನಿದ್ದಾರೆಯೋ ಅವರಿಗೆ ಹೆಚ್ಚಿಗೆ ಪಗಾರವನ್ನು ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಲೆ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, 1964-65ನೇ ಸಾಲಿನ ಬಜೆಟ್ಟನ್ನು ಅನುಮೋದಿಸುತ್ತಾ ನಾನು ಒಂದೆರಡು ಸಲಹೆಗಳನ್ನು ಹೇಳಲಿಚ್ಛಿಸುತ್ತೇನೆ. ಸರ್ಕಾರದವರು ಬೇಕಾದಷ್ಟು ಕಾನೂನುಗಳನ್ನು ಮಾಡಿ ಪ್ರತಿವರ್ಷ ಪಂಚವಾರ್ಷಿಕ ಯೋಜನೆಯಲ್ಲಿ ಮಾಡತಕ್ಕ ಕೆಲಸಕಾರ್ಯಗಳಿಗೆ ಸಾಕಷ್ಟು ಹಣವನ್ನು ಸರ್ಕಾರದವರು ಮಂಜೂರು ಮಾಡುತ್ತಾರೆ. ಆದರೆ ಸರ್ಕಾರದ ಕಾನೂನು ಬರುವುದು ಒಂದು ಮಾಡುವುದು ಮತ್ತೊಂದು. ಹೀಗಾಗಿ ಡಿಸ್ಟ್ರಿಕ್ಟ್ ಆಫೀಸರು ಕಾನೂನು ಅಮಲಬಜಾವಣಿಯನ್ನು ಸರಿಯಾಗಿ ಮಾಡುವುದಿಲ್ಲ ಎಂದು ನನಗನ್ನಿಸುತ್ತದೆ. ಇವೊತ್ತು ಸರ್ಕಾರದವರು ವಿದ್ಯಾ ಇಲಾಖೆಯಲ್ಲಾಗಲೀ, ಹೆಲ್ತ್ ಇಲಾಖೆಯಲ್ಲಾಗಲೀ, ವ್ಯವಸಾಯ ಇಲಾಖೆಯಲ್ಲಾಗಲೀ ಪ್ರತಿಯೊಂದು ಯೋಜನೆಯಲ್ಲಿಯೂ ಸಹ ಸರ್ಕಾರದವರು ಸಾಕಷ್ಟು ಹಣವನ್ನು ಖರ್ಚುಮಾಡುತ್ತಾರೆ. ಆದರೆ ನಮ್ಮ ಡಿಸ್ಟ್ರಿಕ್ಟಿಗೂ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ದವಾಖಾನೆಗಳಿಗೆ ಕೊಟ್ಟಿದ್ದಾರೆ. ಆದರೆ ಅವುಗಳಲ್ಲಿ ಏನಾಗಿದೆ ಎಂದರೆ ನರ್ಸುಗಳು ಇದ್ದರೆ ಡಾಕ್ಟರುಗಳಿರುವುದಿಲ್ಲ, ಡಾಕ್ಟರುಗಳಿದ್ದರೆ ನರ್ಸುಗಳು ಇರುವುದಿಲ್ಲ. ಹೀಗಾಗಿ ರೋಗಿಗಳಿಗೆ ಸರಿಯಾಗಿ ಔಷಧಿಗಳು ಸಿಕ್ಕುತ್ತಿಲ್ಲ. ಈ ರೀತಿ ಆದರೆ ಸರ್ಕಾರದವರು ಹಣವನ್ನು ಒದಗಿಸಿದ್ದರೂ ಸಹ ಅದರ ಪ್ರಯೋಜನ ದೊರೆಯದೇ ಹೋದರೆ ಅದರಿಂದ ಪ್ರಯೋಜನವೇನು ? ಈ ರೀತಿಯಾಗಿ ಸರ್ಕಾರದವರು ಮಾಡಿರತಕ್ಕ ಕಾನೂನುಗಳನ್ನು ಸರ್ಕಾರದ ಅಧಿಕಾರಿಗಳು ಸರಿಯಾಗಿ ಅಮಲಬಜಾವಣಿ ಮಾಡದೇ ಹೋದರೂ ಕೂಡ ಅಂಥವರ ಮೇಲೆ ಯಾವರೀತಿಯ ಕ್ರಮವನ್ನೂ ಕೂಡ ತೆಗೆದುಕೊಂಡಿಲ್ಲ. ಹೀಗೆ ಅನ್ಯಾಯ ಆಗಲಿಕ್ಕೆ ಹತ್ತಿದೆ. ಈ ದೆಸೆಯಿಂದ ಸರ್ಕಾರದ ಮೇಲೆ ಅಪಪ್ರಚಾರ ಆಗಲಿಕ್ಕೆ ಹತ್ತಿದೆಯೇನೋ ಎಂದು ನನಗನ್ನಿಸುತ್ತದೆ. ಆದ್ದರಿಂದ ಸರ್ಕಾರದವರು ಇಂಥಾ ಕೇಸುಗಳಿಗೆ ಸಂಬಂಧಪಟ್ಟ ಇನ್‌ಫರ್‌ಮೇಷನ್ನು ತರಿಸಿಕೊಂಡು ಅವರಮೇಲೆ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ ಶಾಲೆಗಳಲ್ಲಿ ಮಕ್ಕಳಿಗೆ ಮಿಡ್-ಡೇ ಮೀಲ್ಸ್ ಎಂದು ಕೊಡುತ್ತಿದ್ದಾರೆ. ಈ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ ಈ ಮಿಡ್-ಡೇ ಮೀಲ್ಸ್‌ಗೆ ಹಣವನ್ನು ಕೂಡಿಸುವುದಕ್ಕೋಸ್ಕರ ಮಕ್ಕಳ ಕೈಯ್ಯಲ್ಲಿ ಒಂದು ಡಬ್ಬಿಯನ್ನು ಕೊಟ್ಟು ಓಣಿ ಓಣಿಯಲ್ಲಿ ಜನಗಳಿಂದ ದುಡ್ಡನ್ನು ವಸೂಲು ಮಾಡುವುದಕ್ಕೆ ಮಕ್ಕಳನ್ನು ಕಳುಹಿಸುತ್ತಾರೆ. ಅದರಲ್ಲಿ ವಸೂಲುಮಾಡಿದ ಹಣ 5 ರೂಪಾಯಿ ಕೂಡ ಆಗುವುದಿಲ್ಲ. ಸರ್ಕಾರದವರು ಇಷ್ಟೊಂದು ದೊಡ್ಡ ದೊಡ್ಡ ಯೋಜನೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವಾಗ ಶಾಲೆಯಲ್ಲಿ ಮಕ್ಕಳಿಗೆ ಮಧ್ಯಾನ್ಹದ ವೇಳೆಯಲ್ಲಿ ಕೊಡತಕ್ಕ ಉಪಹಾರಕ್ಕೋಸ್ಕರ ಮಕ್ಕಳ ಕೈಯಲ್ಲಿ ಡಬ್ಬಿಯನ್ನು ಕೊಟ್ಟು ಜನಗಳಿಂದ 5 ರೂಪಾಯಿಗಳನ್ನು ವಸೂಲು ಮಾಡತಕ್ಕ ಅವಶ್ಯಕತೆ ಇದೆಯೇ ಎಂದು ನನಗನ್ನಿಸುತ್ತದೆ. ಅದೂ ಅಲ್ಲದೆ ವಿದ್ಯಾಭ್ಯಾಸಕ್ಕಾಗಿ ನಾವು ಸಾಕಷ್ಟು ಹಣವನ್ನು ಖರ್ಚುಮಾಡುವಾಗ ಮಕ್ಕಳ ಕೈಯಲ್ಲಿ ಡಬ್ಬಿಯನ್ನು ಕೊಟ್ಟು ಹಣವನ್ನು ವಸೂಲುಮಾಡುವುದು ಸರಿಯಲ್ಲ ಎಂದು ನನಗನ್ನಿಸುತ್ತದೆ. ಅದರಲ್ಲೂ ಇಂಥಾ ದುಡ್ಡನ್ನು ವಸೂಲುಮಾಡತಕ್ಕ ಡಬ್ಬಿಗಳನ್ನು ಹರಿಜನರ ಮಕ್ಕಳ ಕೈಯ್ಯಲ್ಲೇ ಕೊಡುತ್ತಿದ್ದಾರೆ. ಇದು ಬಹಳ ಅನ್ಯಾಯ. ಬೇರೆಯವರ ಮಕ್ಕಳ ಕೈಯಲ್ಲಿ ಏತಕ್ಕೆ ಅಂಥಾ ಡಬ್ಬಿಗಳನ್ನು ಕೊಡುತ್ತಿಲ್ಲ ? ಹೀಗಾದರೆ ಹರಿಜನರನ್ನು ಇನ್ನೂ ಕೆಳಮಟ್ಟಕ್ಕೆ ಒಯ್ಯುವುದಕ್ಕೆ ಅವಕಾಶವನ್ನು ಮಾಡಿದಂತಾಗುತ್ತದೆ. ಆದ್ದರಿಂದ ಆ ರೀತಿ ಮಾಡಬಾರದು ಎಂದು ನಾನು ಹೇಳುತ್ತೇನೆ. ಮಿಡ್-ಡೇ ಮೀಲ್ಸ್‌ಗಾಗಿ ಸರ್ಕಾರದವರು ಹೆಚ್ಚು ಹಣವನ್ನು ಮಂಜೂರು ಮಾಡಬೇಕು. ಇಲ್ಲದೆ ಇದ್ದರೆ ಅದನ್ನು ಬಂದ್ ಮಾಡಿ ಅದಕ್ಕಾಗಿ ಕೊಡತಕ್ಕ ಹಣವನ್ನು ಮಕ್ಕಳ ಬಟ್ಟೆ ಮತ್ತು ಪಠ್ಯಪುಸ್ತಕಗಳು ಮತ್ತು ಸ್ಕಾಲರ್‌ಷಿಪ್ ರೂಪದಲ್ಲಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನೀರಾವರಿಯ ಸೌಕರ್ಯವನ್ನು ಒದಗಿಸುವ ಸಲುವಾಗಿ ಮತ್ತು ವಿದ್ಯುಚ್ಛಕ್ತಿಯ ಸಲುವಾಗಿ ನಮ್ಮ ಸರ್ಕಾರದವರು ಸಾಕಷ್ಟು ದೊಡ್ಡ ದೊಡ್ಡ ಶರಾವತಿ ಮುಂತಾದ ಯೋಜನೆಗಳನ್ನೇನೋ ಮಾಡಿದ್ದಾರೆ. ಇದು ಸಂತೋಷದ ಸಂಗತಿ. ಆದರೆ ನೀರಾವರಿಯ ಸಲುವಾಗಿ ಪಂಪುಸೆಟ್ಟುಗಳನ್ನು ಒದಗಿಸತಕ್ಕ ವಿಷಯದಲ್ಲಿ ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸುವ ಸಲುವಾಗಿ ನಮ್ಮ ಭಾಗದಲ್ಲಿ ಸಾಕಷ್ಟು ಅನುಕೂಲವಾಗಿದೆ ಎಂದು ನನಗೆ ಅನಿಸುವುದಿಲ್ಲ. ಹೋದವರ್ಷ ಎಂದರೆ 1963-64ನೇ ಸಾಲಿನ ಬಜೆಟ್ಟಿನಲ್ಲಿ 19 ಲಕ್ಷ ರೂಪಾಯಿಗಳನ್ನು ನೀರಾವರಿ ಪಂಪುಸೆಟ್ಟುಗಳ ಸಲುವಾಗಿ ಸರ್ಕಾರದವರು ಮಂಜೂರು ಮಾಡಿದ್ದಾರೆ. ಆದರೆ ಅದನ್ನು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ತಂದಿದ್ದಾರೆ ಎಂದು ನನಗಾದರೂ ಅನಿಸುತ್ತದೆ. ಆ ಸೌಕರ್ಯ ಜನತೆಗೆ ಸರಿಯಾದ ರೀತಿ

(ಶ್ರೀಮತಿ ಚಂಪಾಬಾಯ್ ಭೋಗಲೆ)

ಯಲ್ಲಿ ಸಿಕ್ಕದೇ ಹೋದರೆ ಹೆಚ್ಚು ಆಹಾರೋತ್ಪಾದನೆಯನ್ನು ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ರೈತರಿಗೆ ಬೇಕಾದ ತಗಾಯಿ ಸಾಲವನ್ನು ಕೊಡುವುದು ಬಾವಿಯನ್ನು ತೆಗೆಯವುದಕ್ಕೆ ಹಣವನ್ನು ಕೊಡುವುದು ಇತ್ಯಾದಿ ಸೌಲಭ್ಯಗಳನ್ನು ಒದಗಿಸದೇ ಹೋದರೆ ಅವರು ಯಾವರೀತಿ ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯ ಎಂಬುದನ್ನು ಸರ್ಕಾರದವರು ದಯವಿಟ್ಟು ಯೋಚನೆ ಮಾಡಬೇಕು.

3-30 P.M.

ಶ್ರೀ ಬಿ. ಡಿ. ಜತ್ತಿ.—ಪಂಪ್‌ಸೆಟ್ ಮತ್ತು ಬಾವಿಗಳ ಬಗ್ಗೆ ಹೇಳುತ್ತಿದ್ದಾರೆ. ಎಲ್ಲ ಜಿಲ್ಲೆಗಳಲ್ಲಿಯೂ ಒಂದೇ ಒಂದು ಕಡೆಯಿಂದ ಎಂದರೆ ಸರ್ಕಾರದಿಂದ ಸಹಾಯವನ್ನು ತೆಗೆದುಕೊಂಡರೆ ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರದ ಕಡೆಯಿಂದ ತೆಗೆದುಕೊಂಡು ಮಾಡುತ್ತಿದ್ದಾರೆ, ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿನಿಂದ ತೆಗೆದುಕೊಂಡಿದ್ದಾರೆ, ಉಗಾರ್ ಸಕ್ಕರೆ ಕಂಪೆನಿಯಿಂದ ತೆಗೆದುಕೊಂಡಿದ್ದಾರೆ. 19 ಲಕ್ಷ ಮಾತ್ರವಲ್ಲ. ಅದಕ್ಕಿಂತ ಹೆಚ್ಚಿಗೆ ತೆಗೆದುಕೊಂಡಿದ್ದಾರೆ. ಲೆಕ್ಕ ಮಾಡಿ ನೋಡಿದರೆ ಗೊತ್ತಾಗುತ್ತದೆ.

ಶ್ರೀಮತಿ ಚಂಪಾಬಾಯಿ ಭೋಗಲೆ.—ನಾನು ಒಂದು ಮಾತನ್ನು ಹೇಳುತ್ತೇನೆ. ಕೋ-ಆಪರೇಟಿವ್ ಬ್ಯಾಂಕಿನಿಂದ ಕೊಟ್ಟ ಹಣಕ್ಕೆ ರೈತನಿಗೆ ಏನು ಬಡ್ಡಿ ದರ ಬೀಳುತ್ತದೆ ಎನ್ನುವುದನ್ನು ನೋಡಬೇಕು. ಸರ್ಕಾರದವರು ಸ್ವಂತ ಪಂಪುಸೆಟ್ಟನ್ನು ಕೊಟ್ಟರೆ ಆಹಾರ ಧಾನ್ಯಗಳ ಬೆಳೆಯನ್ನು ಕೊಡಿಸುವ ಕಾಲಕ್ಕೆ ಸರಿಯಾದ ಯೋಜನೆಯನ್ನು ಹಾಕಿ ಅವರಿಗೆ ಇರುವ ಸಮಸ್ಯೆಯನ್ನು ಬಿಡಿಸಿ, ಅವನಿಗೆ ಆಗುವ ತೊಂದರೆಯನ್ನು, ಕಷ್ಟವನ್ನು ದೂರ ಮಾಡಬೇಕು. ಅವರಿಗೆ ಪಂಪ್‌ಸೆಟ್ ಮತ್ತು ನೀರಾವರಿ ಬಾವಿಗಳನ್ನು ಒದಗಿಸಬೇಕಾದ್ದು ಸರ್ಕಾರದ ಕೆಲಸ; ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ.

ಹರಿಜನರಿಗೆ ನಾಲ್ಕು ಎಕರೆ ಭೂಮಿ ಇದ್ದರೂ ಅವರಿಗೆ ಬಾವಿಯನ್ನು ಕೊಡಲಿಕ್ಕೆ ಗತಿ ಇಲ್ಲ. ಹರಿಜನರಿಗೆ ನೂರಕ್ಕೆ 18 ಭಾಗ ಸಹಾಯವನ್ನು ಕೊಡಬೇಕೆಂದು ಇದೆ. ಆದರೆ ಒಕ್ಕಲುತನದಲ್ಲಿ ಆ ರೀತಿ ಏಕೆ ಕೊಟ್ಟಿಲ್ಲ? ಆ ಜನರಿಗೆ ನ್ಯಾಯ ದೊರತಿಲ್ಲ. ಆ ಜನರಿಗೆ ಬಾವಿಯನ್ನು ಕೊಡುವುದರಲ್ಲಿ ಚೌಕಾಸಿ ಕೂಡ ಮಾಡುತ್ತಿಲ್ಲ; ಹರಿಜನರಿಗೆ ಸಂಬಂಧಪಟ್ಟ ಯೋಜನೆಗಳು ಡೆವಲಪ್‌ಮೆಂಟ್, ರೆವೆನ್ಯೂ, ಎಜುಕೇಷನ್ ಹೀಗೆ ಎಲ್ಲ ಎಲ್ಲ ಇಲಾಖೆಗಳಿಗೂ ಸೇರಿವೆ. ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಹಣವನ್ನು ಕಡಮೆ ಮಾಡಿದ್ದೀರಿ ಎಂದು ಕೇಳಿದರೆ ಪ್ರತಿಯೊಂದು ಇಲಾಖೆಗೆ ಸೇರಿದ ಯೋಜನೆಗಳಲ್ಲಿಯೂ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಇದರಿಂದ ನಮಗೆ ಹೆಚ್ಚು ಉಪಯೋಗ ಆಗುತ್ತ ಇಲ್ಲ. ಹೀಗೆ ಮಾಡದೆ ಪ್ರತಿಯೊಂದು ಜಿಲ್ಲೆಗೂ ಉಪಯೋಗವಾಗುವಂತೆ ಹರಿಜನರಿಗಾಗಿಯೇ ಹಣವನ್ನು ಒದಗಿಸಬೇಕು. ಈಗ ಜಿಲ್ಲಾಮಟ್ಟದಲ್ಲಿ ಅಮಲ್‌ಬಜಾವಣಿ ಮಾಡುವ ಕೆಲಸದಲ್ಲಿ ಅಧಿಕಾರಿಗಳು ಹರಿಜನರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದನ್ನೆಲ್ಲ ಸರಿಪಡಿಸಬೇಕೆಂದು ಹೇಳುತ್ತೇನೆ. ಜವಹರಲಾಲ್ ನೆಹರೂ ಅವರು ಇತ್ತೀಚೆಗೆ ಏಳುಸಾವಿರ ಜನ ಕಸ ಗುಡಿಸುವವರನ್ನು ಉದ್ದೇಶಿಸಿ ಡೆಲ್ಲಿಯಲ್ಲಿ ಮಾತನಾಡುತ್ತ ಹರಿಜನರ ಉದ್ಧಾರ ಆಗಿಲ್ಲ, ಅದು ಆಗಬೇಕು ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಸಹಕಾರದ ವಿಚಾರಕ್ಕೆ ಬಂದರೆ ಕೋಆಪರೇಟಿವ್ ಫಾರ್ಮಿಂಗ್, ಕೋ-ಆಪರೇಟಿವ್ ಜಾಯಿಂಟ್ ಫಾರ್ಮಿಂಗ್ ಮಾಡಿ ಏನೇನೋ ಮಾಡುತ್ತಿದ್ದಾರೆ. ಆದರೆ ಹದಿನೈದು ವರ್ಷಗಳ ಮೇಲಾದರೂ ಹರಿಜನರಿಗೆ ವ್ಯವಸಾಯದ ಸಲುವಾಗಿ ಬಾವಿಯನ್ನು ತೆಗೆದುಕೊಟ್ಟಿದ್ದರೆ ಆಗ ಸರ್ಕಾರ ಹೇಳಿದುದನ್ನು ಕೇಳಲಿಕ್ಕೆ ನಾನು ತಯಾರಿದ್ದೇನೆ. ನಮ್ಮ ಸರ್ಕಾರದವರೇನೋ ಎಲ್ಲ ಅನುಕೂಲವನ್ನೂ ಮಾಡುತ್ತಾರೆ. ಜಿಲ್ಲಾ ಮಟ್ಟದೊಳಗೆ ನ್ಯಾಯ ದೊರೆಯುವುದಿಲ್ಲ ಎಂದು ನಾನು ಹೇಳುವುದಕ್ಕೆ ಹೊರಟಿದ್ದೇನೆ. ಸರ್ಕಾರದವರು ಹಣವನ್ನು ಕೊಟ್ಟು ಉಪಯೋಗ ಮಾಡಿರಿ ಎಂದು ಹೇಳಿದರೂ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ಮಲತಾಯಿ ಧೋರಣೆಯನ್ನು ತಾಳಿದ್ದಾರೆ ಎಂದು ಹೇಳಬೇಕಾಗಿದೆ. ಅದನ್ನು ಸರಿಪಡಿಸಬೇಕು, ಯೋಗ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ನಾನು ಏಳು ವರ್ಷಗಳಿಂದ ಹೀಗೆ ಅನ್ಯಾಯವಾಗಲಿಕ್ಕೆ ಹತ್ತಿದೆ ಎಂದು ಪ್ರತಿ ವರ್ಷವೂ ಹೇಳುತ್ತಿದ್ದೇನೆ. ಇಂಥವರ ಮೇಲೆ ಯೋಗ್ಯಕ್ರಮ ತೆಗೆದುಕೊಳ್ಳಿರಿ ಮತ್ತು ಹರಿಜನರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿರಿ ಎಂದು ಹೇಳಬೇಕಾಗಿದೆ.

ಗೋಕಾಕ ತಾಲ್ಲೂಕ ಮತ್ತು ಸೌಂದತ್ತಿ ತಾಲ್ಲೂಕಿನ ಪೂರ್ವಭಾಗದಲ್ಲಿ ದುಷ್ಕಾಲ ಪರಿಸ್ಥಿತಿ ಇದೆ. ಆ ಭಾಗಕ್ಕೆ ಅನುಕೂಲವಾಗುವ ಹಾಗೆ ಬಡ್ಜೆಟ್ಟಿನಲ್ಲಿ ಏನೂ ಕಾಣುವುದಿಲ್ಲ. ದಯವಿಟ್ಟು ಅದಕ್ಕೆ ಹಣವನ್ನು ಬಡ್ಜೆಟ್ಟಿನೊಳಗೆ ಸೇರಿಸಬೇಕು ಎಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಇಡೀ ರಾಜ್ಯಕ್ಕೆ ನಾವು ಹಣವನ್ನು ಇಟ್ಟಿರುತ್ತೇವೆ. ಬೇರೆ ಬೇರೆ ತಾಲ್ಲೂಕಿಗೆ ತೋರಿಸುವುದಿಲ್ಲ.

ಶ್ರೀಮತಿ ಚಂಪಾಬಾಯಿ ಭೋಗಲೆ.—ಬರಗಾಲದ ಕಾಮಗಾರಿ ಮಾಡಬೇಕಾದರೆ ಇಂತಿಷ್ಟು ಹಣ ಎಂದು ಕೊಟ್ಟಿಲ್ಲ. ಅದನ್ನು ಕೊಡಬೇಕು ಎಂದು ಹೇಳುತ್ತೇನೆ.

ಹಳ್ಳಿಗಳ ಕಡೆ ರಸ್ತೆಗಳನ್ನು ಸರ್ಕಾರದವರು ತೆಗೆದುಕೊಳ್ಳುವಾಗ ಒಂದು ಯೋಜನೆಯನ್ನು ಹಾಕಿ ಐದು ಮೈಲಿ ರಸ್ತೆಯನ್ನು ಮಾಡಬೇಕು ಎಂದು ತೆಗೆದುಕೊಳ್ಳುತ್ತಾರೆ. ಆದರೆ ಐದು ಮೈಲಿ ರಸ್ತೆಯನ್ನು ಮಾಡುವುದರೊಳಗೆ ಹಿಂದೆ ಮಾಡಿದ್ದ ರಸ್ತೆ ರಿಪೇರಿಯಾಗಬೇಕಾಗುತ್ತದೆ. ರಸ್ತೆ ಮಾಡುವುದಕ್ಕೆ ಕೊಟ್ಟ ದುಡ್ಡೆಲ್ಲ ರಿಪೇರಿ ಮಾಡುವುದಕ್ಕೇ ಹೋಗುತ್ತದೆ. ದಯವಿಟ್ಟು 25 ಮೈಲಿಯಾದರೂ ರಸ್ತೆ ರಿಪೇರಿ ಮತ್ತು ರಸ್ತೆ ಮಾಡುವುದನ್ನು ತೆಗೆದುಕೊಳ್ಳಬೇಕು, ಆ ರೀತಿ ಯೋಜನೆಯಲ್ಲಿ ಸೇರಿಸಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ಸರ್ಕಾರ ಪ್ರತಿಸಲವೂ ಒಳ್ಳೆಯ ಬೀಜವನ್ನು ಕೊಡುತ್ತದೆ, ಸಾಕಷ್ಟು ಹಣವನ್ನೂ ಕೊಡುತ್ತದೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅದಕ್ಕಾಗಿ ಯಾವ ಯಾವ ಆಫೀಸರ ಕಡೆ ರೈತರು ಓಡಾಡಬೇಕೋ ತಿಳಿಯುವುದಿಲ್ಲ. ತಹಸೀಲ್ದಾರರ ಕಡೆಗೆ ಹೋಗಬೇಕೇ, ಅಸಿಸ್ಟೆಂಟ್ ಕಮಿಷನರ ಕಡೆಗೆ ಹೋಗಬೇಕೇ, ಡೆಪ್ಯುಟಿ ಕಮಿಷನರ ಕಡೆಗೆ ಹೋಗಬೇಕೇ ಎನ್ನುವುದು ನಮಗೆ ತಿಳಿಯುವುದಿಲ್ಲ. ಇದೆಲ್ಲ ತಿಳಿದು ಅಲ್ಲಿಂದ ಕಾಗದ ಪತ್ರಗಳು ಬರಬೇಕಾದರೆ ಅವಧಿ ಮುಗಿಯುತ್ತದೆ. ಅವರಿಗೆ ಗೊಬ್ಬರ ಸಿಕ್ಕುವ ಹಾಗೆ ಇಲ್ಲ, ಬೀಜ ಸರಿಯಾಗಿ ಸಿಕ್ಕುವ ಹಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ಆಹಾರದ ಉತ್ಪನ್ನ ಕಡಮೆಯಾಗುತ್ತದೆ. ಅದಕ್ಕೆ ಒಂದು ಸ್ಪೆಷಲ್ ಸ್ಕೀಮನ್ನು ಮಾಡಿ ತಾಲ್ಲೂಕು ಮಟ್ಟದಲ್ಲಿ ರೈತನಿಗೆ ಬೇಕಾಗುವ ಬೀಜ, ಗೊಬ್ಬರ ಇವು ಸಿಕ್ಕುವಂತೆ ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ರೈತರು ತಾಲ್ಲೂಕು ಮತ್ತು ಡಿಸ್ಟ್ರಿಕ್ಟುಗಳಿಗೆ ಬರಬೇಕು ಎಂದರೆ ನೂರಾರು ರೂಪಾಯಿ ಖರ್ಚು ಬೀಳುತ್ತದೆ. ಅಗಲೂ ಕೂಡ ಜನರಿಗೆ ಉತ್ತರ ಕೊಡುವುದಿಲ್ಲ. ಇದು ಬಹಳ ಕೆಡಕು ಎನಿಸುತ್ತದೆ. ಹೀಗಾಗುವುದರಿಂದ ರೈತನು ಆಫೀಸಿಗೆ ತಿರುಗುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ತಾಲ್ಲೂಕು ಮಟ್ಟದಲ್ಲಿ ಅಥವಾ ಪಂಚಾಯಿತಿಗಳಲ್ಲಿ ಈ ಕಾರ್ಯವನ್ನು ಮಾಡುವಂತೆ ಸರ್ಕಾರ ಏರ್ಪಡಿಸಿದರೆ ಅನುಕೂಲವಾಗುತ್ತದೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಪಂಚಾಯಿತಿಗಳಿವೆ. ಅದಕ್ಕೆ ಇಂತಿಷ್ಟು ಬೀಜ, ಗೊಬ್ಬರ ಕೊಡುತ್ತೇವೆ ಎಂದರೆ ರೈತರು ಅಲ್ಲಿಗೆ ಅರ್ಜಿ ಹಾಕಿಕೊಂಡು ಅಲ್ಲಿಂದ ಅವರಿಗೆ ಬೇಕಾದ ಬೀಜ, ಗೊಬ್ಬರ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈಗ ಇರುವಂತೆ ಜಿಲ್ಲಾಮಟ್ಟದಲ್ಲಿ ಇದ್ದರೆ ಸರಿಯಾಗಿ ನಡೆಯುವುದಿಲ್ಲ. ದಯವಿಟ್ಟು ಈ ರೀತಿ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಹರಿಜನರ ಹಾಸ್ಟೆಲ್ ವಿಚಾರದಲ್ಲಿ ನಾನು ಮಾತನಾಡಬೇಕಾಗಿದೆ. ಈಗ ಇರುವಂಥ ಪದ್ಧತಿಯಿಂದ ನಮ್ಮ ಜಿಲ್ಲಾ ಮಟ್ಟದಲ್ಲಿ ಮಲತಾಯಿ ಧೋರಣೆ ಕಾಣುತ್ತಿದೆ. ಇದನ್ನೆಲ್ಲ ದೇವರೇ ಪಾರು ಮಾಡಬೇಕು ಎಂದು ಕಾಣುತ್ತದೆ.? ಒಂದೊಂದು ಹಾಸ್ಟಲನಲ್ಲಿ 25 ಹುಡುಗರಿಗೆ ಅವಕಾಶ ಇರಬೇಕು ಎಂದು ಸರ್ಕಾರದವರು ಮಾಡಿದ್ದಾರೆ. ಇದು ಏನೇನೂ ಸಾಲದು. ಅದರಿಂದ ಹರಿಜನರಿಗೆ ಸಹಾಯವಾಗುವುದಿಲ್ಲ. ಆದ್ದರಿಂದ ಪ್ರತಿಯೊಂದು ಹಾಸ್ಟೆಲ್‌ನಲ್ಲಿ ಪ್ರತಿವರ್ಷ ಹುಡುಗರನ್ನಾದರೂ ಹೆಚ್ಚಿಗೆ ತೆಗೆದುಕೊಳ್ಳಲು ಅವಕಾಶ ಮಾಡಬೇಕು. ಅವರು ಯಾವ ಉದ್ಯಮವನ್ನೂ ಮಾಡುವುದಕ್ಕೆ ಸಮರ್ಥರು. ಬೆಳಗಾಂ ಜಿಲ್ಲೆಯಲ್ಲಿ ಹತ್ತು ತಾಲ್ಲೂಕುಗಳಿವೆ. ಜಿಲ್ಲೆಯಲ್ಲಿ ಸರ್ಕಾರದವರು ನಡೆಸತಕ್ಕ ಒಂದು ಹಾಸ್ಟಲಿಲ್ಲ; ಒಂದು ಸಂಸ್ಥೆ ಇಲ್ಲ. ದಯವಿಟ್ಟು ನೂರು ಮಂದಿಗೆ ಆಗುವಂಥ ಹಾಸ್ಟಲನ್ನು ತೆಗೆಯುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಕೇಂದ್ರ ಸರಕಾರದವರು ತಿಂಗಳಿಗೆ 40 ರೂಪಾಯಿಗಳನ್ನೂ, ರಾಜ್ಯ ಸರಕಾರದವರು 25 ರೂಪಾಯಿಗಳನ್ನೂ ಹರಿಜನ ವಿದ್ಯಾರ್ಥಿಗಳಿಗೆ ವೇತನವಾಗಿ ಕೊಡುತ್ತಿದ್ದಾರೆ. 25 ರೂಪಾಯಿಗಳಲ್ಲಿ ಬಡ ಹರಿಜನ ವಿದ್ಯಾರ್ಥಿಗಳು ಕಾಲೇಜು ಮಟ್ಟದಲ್ಲಿ ಕಲಿಯಲು ಕಷ್ಟವಾಗುತ್ತದೆ. ಆದಕಾರಣ ಅವರು ಕೇಂದ್ರ ಸರಕಾರದ ವಿದ್ಯಾರ್ಥಿ ವೇತನ ತೆಗೆದುಕೊಳ್ಳುತ್ತಾರೆ. ತತ್ಪರಿಣಾಮವಾಗಿ ರಾಜ್ಯ ಸರ್ಕಾರದ ವಿದ್ಯಾರ್ಥಿವೇತನ ಲ್ಯಾಪ್ಸ್ ಆಗುತ್ತದೆ. ಎಂಭತ್ತು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬೆಳಗಾವಿಯಲ್ಲಿ ವಿದ್ಯಾರ್ಥಿಗಳಿಗೆ ಹಾಸ್ಟೆಲು ಕಟ್ಟಡವನ್ನು ಕಟ್ಟಿ

(ಶ್ರೀಮತಿ ಚಂಪಾಬಾಯಿ ಭೋಗಲೆ)

ದ್ದಾರೆ, ಆದರೆ ಅಲ್ಲಿ 107 ಜನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ಅವಕಾಶವಿಲ್ಲ. ಆದುದರಿಂದ ಅಲ್ಯಾಪ್ಸ್ ಆಗುವ ಹಣದಿಂದ ದಯವಿಟ್ಟು ಒಂದು ಪ್ರತ್ಯೇಕ ಹರಿಜನರ ಹಾಸ್ಟೆಲನ್ನು ಅಲ್ಲಿ ಪ್ರಾರಂಭ ಮಾಡಬೇಕೆಂದು ಹಣಕಾಸಿನ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಹರಿಜನರ ಮನೆಗಳ ವಿಷಯದಲ್ಲಿ, ಸರಕಾರದವರು ಸಹಾನುಭೂತಿಯುಂದಿದ್ದಾರೆ. ಇವರಿಗಾಗಿ ಮನೆಗಳನ್ನು ಸಹಕಾರ ಸಂಘಗಳ ಮೂಲಕ ಕಟ್ಟಬೇಕೆಂದು, ಆ ಸಂಘಗಳಿಗೆ ಸೇಕಡ 90ರಷ್ಟು ಷೇರು ಬಂಡವಾಳ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ಇದಕ್ಕಾಗಿ ಸರಕಾರದವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಸಂಬಂಧವಾಗಿ ಸಾಲಗಳನ್ನು ಕೊಡುವುದು ನಿಧಾನವಾಗಿದೆ, ಇದನ್ನು ಬೇಗನೆ ಕೊಡುವಂತೆ ಸರಿಯಾದ ಏರ್ಪಾಡು ಮಾಡಬೇಕು. ಪ್ರತಿ ತಾಲ್ಲೂಕಿನಲ್ಲಿಯೂ ಬೇಗ ಅದಷ್ಟು ಹೆಚ್ಚು ಮನೆಗಳನ್ನು ಕಟ್ಟುವುದಕ್ಕೆ ಅವಕಾಶಮಾಡಬೇಕು. ಸಹಕಾರ ಸಂಘಗಳಿಗೆ ಹಣ ಸಿಕ್ಕಿಲ್ಲ ಅದು ಬೇಗ ದೊರಕುವಂತೆ ವ್ಯವಸ್ಥೆ ಮಾಡಬೇಕು.

ಉತ್ತರ ಕರ್ನಾಟಕ ಜಿಲ್ಲಾ ಅಧಿಕಾರಿಗಳ ಬಗ್ಗೆ ಮಲತಾಯಿ ಧೋರಣೆಯಿಂದ ನೋಡುತ್ತಿರುವಂತೆ ಕಾಣುತ್ತದೆ. ಅಲ್ಲಿನ ವ್ಯವಸಾಯ ಇಲಾಖೆಯ ಅಧಿಕಾರಿಗಳಿಗೆ ಅನ್ಯಾಯವಾಗಿದೆ. ಅವರ ಸೀನಿಯಾರಿಟಿಯ ಪ್ರಕಾರ ಅವರಿಗೆ ಬಡ್ತಿ ದೊರಕುವಂತೆ ಮಾಡಿ ಅವರಿಗೆ ನ್ಯಾಯ ದೊರಕಿಸಬೇಕು. ದಯೆಯಿಟ್ಟು ಹೊರಗಿನಿಂದ ಬಂದಿದ್ದಾರೆಂದು ಅವರ ಬಗ್ಗೆ ಮಲತಾಯಿ ಧೋರಣೆ ಇರಬಾರದು. ಸೀನಿಯಾರಿಟಿ ವಿಷಯದಲ್ಲಿ ಕೆಲವರಿಗೆ ಬಹಳ ಅನ್ಯಾಯವಾಗಿರುವುದನ್ನು ಸರಿಪಡಿಸಬೇಕು. ಅದರಲ್ಲಿಯೂ ಹರಿಜನರಿಗೆ ನ್ಯಾಯ ದೊರಕಿಸಬೇಕು. ಸುಪ್ರೀಮ್ ಕೋರ್ಟಿನಲ್ಲಿ ಮೂರು ನಾಲ್ಕು ವರ್ಷಗಳ ಹಿಂದೆ ತೀರ್ಮಾನವಾಗಿದ್ದರೂ ಇನ್ನೂ ತನಕ ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. ಈ ಸಾರಿಯಾದರೂ ಅದನ್ನು ಕಾರ್ಯಗತ ಮಾಡಿ ಅವರಿಗೆ ನ್ಯಾಯ ದೊರಕಿಸಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಹರಿಜನರ ಸಂಬಂಧವಾದ ಪ್ರತಿಯೊಂದು ಯೋಜನೆಯನ್ನೂ ಯಶಸ್ವಿಯಾಗಿ ಕಾರ್ಯಗತ ಮಾಡಬೇಕು. ಅವರಿಗೆ ವ್ಯವಸಾಯ ಮತ್ತು ಬೇರೆ ಬಾಬುಗಳಲ್ಲಿ ಹಣ ಕೊಟ್ಟಿದ್ದೇವೆಂದು ಹೇಳಬಾರದು. ಇವರ ಅಭಿವೃದ್ಧಿಗಾಗಿ ವಿಶೇಷ ಯೋಜನೆ ಮಾಡಿ ಅದಕ್ಕೆ ಬೇಕಾದ ಹಣವನ್ನು ಸೋಷಿಯಲ್ ವೆಲ್‌ಫೇರ್ ಇಲಾಖೆಯ ಮೂಲಕ ಮಂಜೂರು ಮಾಡಿ ಇವರನ್ನು ಉದ್ಧಾರ ಮಾಡಬೇಕೆಂದು ಹೇಳಿ ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—May I know how much time will be required by the Hon'ble Minister for his reply? I find a large number of Members desirous of participating. I would like to adjust the work.

Sri B. D. JATTI.—I would require $1\frac{1}{2}$ hours, Sir. On behalf of all the Ministers I will be replying to the general debate. When individual demands are taken, the other Ministers will participate.

Mr. SPEAKER.—I find that there are many Members desirous of participating. I am suggesting that we will sit to-morrow at 8.30 A.M. and also at 3.00 P.M.

Sri B. D. JATTI.—The Members must be considerate.

Sri ANGADI CHANNABASAPPA (Hadagalli).—I want to know whether it is possible for the Finance Minister to keep the House—to maintain quorum?

Sri B. D. JATTI.—It depends upon all the Members and also of us.

Mr. SPEAKER.—It is not the responsibility of any one individual member. I find that many members are desirous of participating. If they are sincere, I want to put it to the test.

Sri ANGADI CHANNABASAPPA.—It is the duty of the Government to keep the quorum.

Mr. SPEAKER.—I can co-operate with the Members. I will ask the House to assemble in the morning. If there is no quorum, I will go. Then I will know what to do in future. I will go through the experiment. If the members assemble and maintain quorum I will carry on the business of the House. We will assemble to-morrow at 8-30 A.M.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ನಮ್ಮ ಮುಂದೆ ಮಂಡಿಸಲ್ಪಟ್ಟಿರುವ ಈ ಆಯವ್ಯಯದ ಪಟ್ಟಿಯ ವಿಚಾರದಲ್ಲಿ ಇದುವರೆಗೆ ನನ್ನ ಮಾನ್ಯ ಮಿತ್ರರನೇಕರು ಮಾತನಾಡಿದ್ದಾರೆ. ನನಗೆ ಕೊಟ್ಟಿರತಕ್ಕ ಕಾಲ ಬಹಳ ಸ್ವಲ್ಪವಾದುದರಿಂದ, ಇದರ ಬಗ್ಗೆ ಏನು ಮಾತನಾಡಬೇಕು, ಏನನ್ನು ಬಿಡಬೇಕು ಎಂಬುದನ್ನು ತೀರ್ಮಾನಿಸಿ ಮಾತನಾಡಲು ನಮಗೆ ಕಷ್ಟವಾಗುತ್ತದೆ. ಆದರೂ ಕೂಡ ನನಗೆ ಕೊಟ್ಟಿರುವ ಕಾಲದಲ್ಲಿ ಕೆಲವು ವಿಷಯಗಳನ್ನು ಮಾತ್ರ ಸಭೆಯ ಗಮನಕ್ಕೆ ತಂದು ಮಿಕ್ಕ ವಿಷಯಗಳನ್ನು ನನ್ನ ಸ್ನೇಹಿತರಿಗೆ ಬಿಡಬೇಕೆಂದಿಚ್ಛಿಸಿದ್ದೇನೆ.

ಸರಕಾರದವರು ಸ್ವಲ್ಪ ವ್ಯಯದಲ್ಲಿ ಹೆಚ್ಚು ಉತ್ಪತ್ತಿ ಮಾಡತಕ್ಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆಂದು ಹೇಳಿದ್ದಾರೆ. ದಿನ ದಿನಕ್ಕೆ ದೇಶದಲ್ಲಿ ಅನ್ನದ ಪ್ರಶ್ನೆ ನಮಗೆ ಬಹಳ ಕಷ್ಟವಾಗುತ್ತಿದೆ. ಹೆಚ್ಚು ಬೆಳೆಯುವುದು ಹಾಗಿರಲಿ ಬೆಳೆಯುತ್ತಿರುವ ಬೆಳೆ ಕೂಡ ನಮ್ಮ ಕೈಸೇರದೆ ರೈತನಿಗೆ ಬಹಳ ತೊಂದರೆಯಾಗುತ್ತಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆಂದು ತಿಳಿದುಕೊಂಡಿದ್ದೇನೆ. ಈಗ ತಾನೆ ಮಾತನಾಡಿದ ಶ್ರೀಮತಿ ಚಂಪಾಬಾಯಿ ಭೋಗಲೆಯವರು ಹರಿಜನರಿಗೂ ಮತ್ತು ಗಿರಿಜನರಿಗೂ ವಿಶೇಷ ಸೌಲಭ್ಯಗಳನ್ನೊದಗಿಸಬೇಕೆಂದು ಹೇಳಿದರು. ಈ ಹರಿಜನ ಗಿರಿಜನರಿಗೆ ಯಾವ ರೀತಿ ಸರಕಾರದವರು ಅನುಕೂಲ ಮಾಡುತ್ತಿದ್ದಾರೋ ಅದೇ ರೀತಿ ಆಹಾರವನ್ನು ಬೆಳೆಯುವ ರೈತನಿಗೂ ಅನುಕೂಲ ಮಾಡಬೇಕು. ಹಾಗೆಯೇ ವಿಶೇಷ ಸೌಲಭ್ಯಗಳನ್ನು ರೈತರಿಗೆ ಒದಗಿಸಿಕೊಡಬೇಕು. ಹಾಗೆ ಉತ್ತೇಜನ ಕೊಡದೇಹೋದರೆ ಇನ್ನು ಸ್ವಲ್ಪ ಕಾಲದಲ್ಲಿ ಅನ್ನದ ಪ್ರಶ್ನೆ ಬೃಹದಾಕಾರವಾಗಿ ಬೆಳೆಯುತ್ತದೆಂದು ಹೇಳುತ್ತೇನೆ. ರೈತರಿಗಿರುವ ವ್ಯವಸಾಯ ಕಸಬಿನ ಜೊತೆಗೆ ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಪ್ರತಿ ಹೋಬಳಿಯ ಮಟ್ಟದಲ್ಲಿಯೂ ಮಾಡಲೂ ಸರಕಾರ ಮುಂದೆ ಬಂದು ಅವರಿಗೆ ಅಗತ್ಯವಾದ ಬಂಡವಾಳ ಮತ್ತು ಕೆಲಸ ಕಲಿಸತಕ್ಕ ಟೆಕ್ನಿಕಲ್ ಜನರನ್ನು ಒದಗಿಸಿ ಅವರು ಸ್ವಲ್ಪಮಟ್ಟಿಗೆ ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಏನು ಸಾಮಾಜಿಕ ಯೋಜನೆಗಳನ್ನು ಅಥವಾ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರೂ ಕೂಡ ರೈತರ ಸ್ಥಿತಿ ಸುಧಾರಿಸುವುದಿಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಶಿಕ್ಷಣ ವಿಚಾರದಲ್ಲಿ ನಾವು ಎಷ್ಟು ಹೇಳಿದರೂ ಕೂಡ ಅದು ಕಡಮೆ ಎಂದು ಅನಿಸುತ್ತದೆ. ಕಡ್ಡಾಯ ಶಿಕ್ಷಣ ಜಾರಿಗೆ ಬಂದಿದೆ. ಸ್ಕೂಲುಗಳ ಸಂಖ್ಯೆ ಜಾಸ್ತಿಯಾದರೂ ಕೂಡ ಶಿಕ್ಷಣ ಪಡೆಯತಕ್ಕ ಮಕ್ಕಳು ಇಲ್ಲದೇ ಇರತಕ್ಕ ಪರಿಸ್ಥಿತಿ ಇದೆ, ಒಂದು ವೇಳೆ ಸ್ಕೂಲು ಮಕ್ಕಳು ಇದ್ದರೂ ಕೂಡ ಉಪಾಧ್ಯಾಯರು ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಇವತ್ತು ಬೇಕಾದಷ್ಟು ಇದೆ. ಕಡ್ಡಾಯ ಶಿಕ್ಷಣ ಯೋಜನೆ ಯಶಸ್ವಿಯಾಗಬೇಕಾದರೆ ಸಿಬ್ಬಂದಿ, ಸ್ಕೂಲು ಕಟ್ಟಡ ಒದಗಿಸಿಕೊಡಬೇಕೆಂದು ಈ ಸಮಯದಲ್ಲಿ ಸರಕಾರಕ್ಕೆ ಸೂಚಿಸಲು ಇಚ್ಛೆಪಡುತ್ತೇನೆ.

ನಮ್ಮ ಹಣಕಾಸಿನ ಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ಈ ವರ್ಷದ ಬಜೆಟ್ ಮಂಡಿಸಿದ್ದಾರೆ. ಕೆಲವು ಉತ್ಪತ್ತಿ ಬರತಕ್ಕಂಥ ಬಾಬುಗಳ ವಿಚಾರದಲ್ಲಿ ಹೇಳುವುದಾದರೆ ಎಲ್ಲರಿಗೂ ಗೊತ್ತಿರುವ ಹಾಗೆ ಪಾನ ನಿರೋಧ ಯೋಜನೆಯನ್ನು ತೆಗೆದುಹಾಕಿ ಅದರಿಂದ ಬರತಕ್ಕಂಥ ಕೋಟ್ಯಾಂತರ ರೂಪಾಯಿ ಹಣವನ್ನು ಪಡೆದು ಅದಲ್ಲದೆ ಇದಕ್ಕಾಗಿ ವೆಚ್ಚಮಾಡತಕ್ಕಂಥ ಹಣವನ್ನು ಉಳಿಸಿ, ನಮ್ಮ ಅಭಿವೃದ್ಧಿ ಯೋಜನೆಗಳನ್ನು ಕೈಕೊಳ್ಳಲು ಪ್ರಯತ್ನ ಮಾಡಬೇಕೆಂದು ಅವರನ್ನು ನಾನು ಕೇಳಿಕೊಳ್ಳುತ್ತೇನೆ. ಇದಲ್ಲದೆ ನ್ಯಾಷನಲೈಜೇಷನ್ ಆಫ್ ಟ್ರಾನ್ಸ್‌ಪೋರ್ಟ್ ರೀತಿ ನೀತಿ ಸರಿಯಾಗಿಲ್ಲ ಅದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ನನ್ನ ಭಾವನೆ. ಆದುದರಿಂದ ರಾಷ್ಟ್ರೀಕರಣ ಮಾಡತಕ್ಕಂಥ ಒಂದು ಮಾರ್ಗವನ್ನು ಆದಷ್ಟು ಬೇಗ ಬಿಟ್ಟು ಕೊಡಬೇಕು. ಇರತಕ್ಕಂಥ ಟ್ಯಾಕ್ಸ್ ಸರಿಯಾದ ರೀತಿಯಲ್ಲಿ ವಸೂಲ್ಮಾಡತಕ್ಕ ಕ್ರಮಗಳನ್ನು ಅನುಸರಿಸಬೇಕು ಅಂದರೆ ಹೊಸ ತೆರಿಗೆ ಹಾಕದೆ ಹೆಚ್ಚು ಉತ್ಪತ್ತಿ ಸಂಪಾದನೆ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ. ಯಾಕೆಂದರೆ ನ್ಯಾಷನಲೈಜೇಷನ್ ಆಫ್ ಟ್ರಾನ್ಸ್‌ಪೋರ್ಟ್ ಏನೇನೂ ಯಶಸ್ವಿಯಾಗಲಾರದು. ಆದುದರಿಂದ ಖಾಸಗಿಯವರಿಗೆ ವಹಿಸಿಕೊಟ್ಟು ಅವರ ಉತ್ಪತ್ತಿಯ ಮೇಲೆ ತೆರಿಗೆ ಹಾಕಿ

(ಶ್ರೀ ಟಿ. ಎನ್. ಮಾದಪ್ಪಗೌಡ)

ಇನ್‌ಕಂಟ್ರ್ಯಾಕ್ಟ್ ತೆಗೆದುಕೊಳ್ಳುವುದರಿಂದ ಹೆಚ್ಚು ಉತ್ಪತ್ತಿ ಬರುತ್ತದೆ. ಸಿಬ್ಬಂದಿ ವೆಚ್ಚ ವ್ಯಯವಾಗುವುದು ಉಳಿತಾಯವಾಗುತ್ತದೆ ಮತ್ತು ಸರಕಾರಕ್ಕೆ ಹಣ ಉಳಿಯುತ್ತದೆ. ಈ ರೀತಿ ಮಾಡುವುದರಿಂದ ಹೊಸ ತೆರಿಗೆ ಹಾಕುವ ಪ್ರಮೇಯವೇ ಬರುವುದಿಲ್ಲ.

ಇನ್ನು ರಸ್ತೆ ರಚನೆಯ ವಿಚಾರ. ಸಂಸ್ಥಾನಾವುಳೆ ಹೊಸ ಹೊಸ ರಸ್ತೆಗಳನ್ನು ಮಾಡಿದ್ದರೂ ಕೂಡ ನಮ್ಮ ತಾಲ್ಲೂಕಿನಲ್ಲಿ 180 ಮೈಲಿ ರಸ್ತೆ ರಚನೆ ಕೆಲಸ ತೆಗೆದುಕೊಂಡಿದ್ದಾರೆ. ಇದಕ್ಕೆ ಹಣ ಖರ್ಚುಮಾಡಿದ್ದರೂ ಕೂಡ ಅರ್ಧದಷ್ಟು ರಸ್ತೆ ಆಗಿರುವುದರಿಂದ ಕೆಲಸ ಪೂರ್ತಿಯಾಗದೇ ವ್ಯಯ ಮಾಡಿದ ಹಣ ನಿಷ್ಪ್ರಯೋಜನವಾಗಿದೆ. ಉಳಿದಿರತಕ್ಕಂಥ ರಸ್ತೆ ಕೆಲಸ ಪೂರ್ತಿಮಾಡಲು ಹಣ ಒದಗಿಸಿಕೊಡಬೇಕೆಂದು ಹಣಕಾಸಿನ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕಮ್ಯೂನಿಟಿ ಡೆವಲಪ್‌ಮೆಂಟ್ ಎನ್. ಇ. ಎಸ್. ಇವುಗಳನ್ನು ಆಡಂಬರಕ್ಕಾಗಿ ಇಟ್ಟುಕೊಂಡಿರತಕ್ಕ ವಿಚಾರ ಎಂದು ನಾನು ಬಹಳ ನಿರ್ದಾಕ್ಷಿಣ್ಯವಾಗಿ ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಇದಕ್ಕೆ ಬದಲಾಗಿ ಪಂಚಾಯಿತಿ ರಾಜ್ಯ ನಿರ್ಮಾಣ ಮಾಡಬೇಕೆಂದು ಮಾಡಿದ್ದೀರಿ, ತಾಲ್ಲೂಕ್ ಬೋರ್ಡ್ ಮಾಡಿದ್ದೀರಿ, ಜಿಲ್ಲಾಪರಿಷತ್ತು ಮಾಡಿದ್ದೀರಿ, ಇವು ಅಸ್ತಿತ್ವದಲ್ಲಿ ಬರುತ್ತದೆ. ಕೊಂಡಜ್ಜಿ ಬಸಪ್ಪನವರ ರಿಪೋರ್ಟ್ ಪ್ರಕಾರ ಈ ಕೆಲಸ ಅವರಿಗೆ ವಹಿಸಿಕೊಟ್ಟಿದ್ದೀರಿ. ಅವು ಉತ್ತಮ ರೀತಿಯಿಂದ ನಡೆಯುತ್ತವೆ. ವ್ಯರ್ಥವಾಗಿ ಖರ್ಚಾಗತಕ್ಕಂಥ ಲಕ್ಷಾಂತರ ರೂಪಾಯಿ ಹಣ ಉಳಿತಾಯವಾಗುವುದರಲ್ಲಿ ಸಂಶಯವಿಲ್ಲ. ಇದಕ್ಕೆ ಹೆಚ್ಚು ಮನಸ್ಸು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯ. ಕೆಲವು ಸ್ನೇಹಿತರು ಮಾತನಾಡುತ್ತಾ ಒಂದು ವಿಷಯ ಹೇಳಿದರು. ಹಳೇ ಮೈಸೂರು, ಹೊಸ ಮೈಸೂರು ಎಂಬ ಈ ವಿಚಾರ ಅನಾವಶ್ಯಕವಾಗಿ ಈ ಸಭೆಯಲ್ಲಿ ತರುತ್ತಿದ್ದೀರಿ ಎಂದು ಹೇಳಿದರು. ಇದಕ್ಕೆ ಒಂದು ನಿದರ್ಶನ ಹೇಳುತ್ತೇನೆ. ಒಂಬತ್ತು ವರ್ಷದ ಕೆಳಗೆ ಕೆಲಸಕ್ಕೆ ಸೇರಿದ ಒಬ್ಬ ಮನುಷ್ಯ ಇದ್ದಕಿದ್ದಂತೆ ಇಂದು 149 ಜನರ ಮೇಲೆ ಸೀನಿಯಾರಿಟಿಯಲ್ಲಿ ಬಂದು ಉನ್ನತ ಪದವಿಗೆ ಹೋಗುವ ಏರ್ಪಾಡು ನಡೆದಿದೆ. ಅವರ ಹೆಸರು ಹೇಳು ಅಂದರೆ ಹೇಳಲು ತಯಾರಿದ್ದೇನೆ. ಇಂಜಿನಿಯರಿಂಗ್ ಇಲಾಖೆಯಲ್ಲಿ ಕೊಡಗು ಸರ್ವಿಸಿನಲ್ಲಿ ಸೇರಿಕೊಂಡು ಇಲ್ಲಿಗೆ ಬಂದವರಾಗಿದ್ದಾರೆ. ಈ ರೀತಿ ಮಾಡುವುದಾದರೆ ನಮ್ಮ ಹಳೇ ಮೈಸೂರಿನ ಜನ ಏನು ಪಾಪ ಮಾಡಿದ್ದಾರೆ ? ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅದೇ ರೀತಿ ಫಾರೆಸ್ಟ್ ಇಲಾಖೆಯಲ್ಲಿಯೂ ಕೂಡ 20-25 ವರ್ಷ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಆಗಿದ್ದವರ ಮೇಲೆ ಹೊಸದಾಗಿ ಕೆಲಸಕ್ಕೆ ಸೇರಿದ ಹೈದರಾಬಾದ್ ಬೊಂಬಾಯಿಯಿಂದ ಬಂದಿರತಕ್ಕ ಜನ ಮೇಲೆ ಬಂದಿದ್ದಾರೆ. ಇಂಟಿಗ್ರೇಷನ್ ಕಾಲದಲ್ಲಿ ಅವರಿಗೆ ಪ್ರಮೋಷನ್ ಕೊಟ್ಟು ಸಂಬಳ ಜಾಸ್ತಿ ಮಾಡಿ ಇಲ್ಲಿಗೆ ಕಳಿಸಿಕೊಟ್ಟಿದ್ದಾರೆ. ಹಳೇಮೈಸೂರು ಜನಕ್ಕೆ ಬಹಳ ಪಕ್ಷಪಾತವಾಗುತ್ತದೆ. ಹಳೇಮೈಸೂರಿನ ಜನರ ಮನಸ್ಸಿಗೆ ಇದರಿಂದ ಬಹಳ ನೋವು ಆಗುತ್ತಿದೆ. ಇದಲ್ಲದೆ ಮೂದಲಿಸತಕ್ಕಂಥ ಜನ ಉತ್ತರ ಕರ್ನಾಟಕದಿಂದ ಬಂದಿರತಕ್ಕಂಥ ಅಧಿಕಾರಿಗಳಲ್ಲಿ ಇದ್ದಾರೆ. ಇದನ್ನು ಕೇಳಿ ಬೇಜಾರಾಗಿದೆ. ಹಿಂದಕ್ಕೆ ಹಳೇ ಮೈಸೂರಿನಲ್ಲಿ ಬುದ್ಧಿವಂತರು ಇರಲಿಲ್ಲವೇ ? ನಮ್ಮ ಹಳೇ ಮೈಸೂರಿನಲ್ಲಿ ಮೇಧಾವಿ ಆಡಳಿತಗಾರರು ಇದ್ದಾರೆ. ಪ್ರತಿಭಾನ್ವಿತರು ಇದ್ದಾರೆ. ಇವರ ಮೇಲೆ ಆಪಾದನೆ ಮಾಡತಕ್ಕಂಥ ಹೊರಗಿನಿಂದ ಬಂದಿರತಕ್ಕಂಥವರು ಏನು ಮಹಾ ಬೃಹಸ್ಪತಿಗಳಾಗಿದ್ದಾರೆಯೇ ? ಅವರ ರೀತಿ ನೀತಿ ಎಳ್ಳಷ್ಟೂ ಒಪ್ಪುವುದಿಲ್ಲ. ಇದಕ್ಕೆ ಒಂದು ಪರಿಹಾರ ಹೇಳುತ್ತೇನೆ. ತುಂಗಭದ್ರಾ ನದಿಯ ಮೇಲೆ ಇರತಕ್ಕಂಥ ಪ್ರದೇಶ ಮತ್ತು ತುಂಗಭದ್ರಾ ನದಿಯ ಕೆಳಗೆ ಇರತಕ್ಕಂಥ ಪ್ರದೇಶ ಈ ಎರಡು ಪ್ರದೇಶಗಳು ಎರಡು ರಾಜ್ಯಗಳಾಗಿ ಆಗಲೇ ಬೇಕು. ನಮ್ಮ ಹಳೇ ಮೈಸೂರು ಜನರ ಮನಸ್ಸಿನಲ್ಲಿ ಇರುವುದನ್ನು ಹೇಳಲು ನಾನು ಇಷ್ಟಪಡುತ್ತೇನೆ.

4 P.M.

ಅಲ್ಲದೆ, ಈ ವಿಶ್ವವಿದ್ಯಾನಿಲಯದಲ್ಲಿ ಆಗತಕ್ಕಂಥ ರೀತಿ ನೀತಿಗಳನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಧರ್ಮಬೋಧನೆ ಮಾಡುತ್ತಾರೆ ನಮಗೆ. ಆದರೆ ಪುರಾಣ ಹೇಳುವುದು ಬದನೇಕಾಯಿ ತಿನ್ನುವುದು ಆಗುತ್ತಾ ಇದೆ. ನಮ್ಮದು ಜಾತ್ಯಾತೀತ ರಾಷ್ಟ್ರ ಅಂತ ಅವರು ಹೇಳುತ್ತಾರೆ. ನಾವು ಎಷ್ಟೇ ವಿಶಾಲ ಹೃದಯದಿಂದ ನಡೆದುಕೊಂಡರೂ ಸಹ, ಅವರು ಒಂದೇ ಒಂದು ಕೋಮಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ನಡೆದುಕೊಂಡಂಥ ನಿದರ್ಶನಗಳು ಒಂದಲ್ಲ, ಬೇಕಾದಷ್ಟಿವೆ. ಅಧ್ಯಕ್ಷ

ರಿಗೆ ಅವುಗಳನ್ನು ಬರೆದುಕೊಡುವುದಕ್ಕೆ ತಯಾರಾಗಿದ್ದೇನೆ. ಅವರು ಇತರರಿಗೆ ಹೇಳುವ ಬದಲು ಅವರೇ ಕಾಯಾವಾಚ ಮನಸ ಅವರ ಆತ್ಮವನ್ನು ಕೇಳಿಕೊಳ್ಳಲಿ; ಸರಿಯಾಗಿ ನಡೆಯುತ್ತಿದ್ದೇವೆಯೆ ಎಂದು. ಬೇರೆಯವರಿಗೆ ಅನ್ಯಾಯ ಮಾಡಬೇಡಿ ಎಂದು ಹೇಳುವುದಕ್ಕಿಂತ, ಅಧಿಕಾರದಲ್ಲಿರತಕ್ಕಂಥವರು ಅವರ ವಿವೇಚನೆಯಿಂದ ಯೋಚನೆ ಮಾಡಿದರೆ ಅವರಿಗೆ ತಕ್ಕ ಉತ್ತರ ಹೊಳೆಯುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಈ ಇಬ್ಬಂದಿ ಏನಿದೆ, ಇದು ಹೋಗಬೇಕು. ಈ ದೇಶ ಎರಡಾಗಿ ಆಗಬೇಕು, ಅದು ಕಡ್ಡಾಯವಾಗಿ ಆಗಬೇಕು, ಆದಷ್ಟು ಬೇಗ ಆಗಬೇಕೆಂದೇ ಹೇಳುತ್ತೇನೆ.

ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಆಡಲು ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ಬೈರೇಗೌಡ (ಯಶವಂತಪುರ).—ಮಾನ್ಯ ಸಭಾಪತಿಗಳೆ, ಇಂದು ನಮ್ಮ ಮುಂದೆ ನಮ್ಮ ಆರ್ಥಿಕ ಮಂತ್ರಿಗಳು ಮಂಡಿಸಿರತಕ್ಕಂಥ 1964-65ನೆ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸ್ವಾಮಿ, ಆರ್ಥಿಕ ಮಂತ್ರಿಗಳು ಅವರ ಭಾಷಣದ 2ನೆ ಪೇಜಿನಲ್ಲಿ ವ್ಯವಸಾಯದ ಭಾಗಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟು ಪ್ರಸ್ತಾಪ ಮಾಡಿದ್ದಾರೆ. ಪ್ರಪಂಚದಲ್ಲಿ ಯಾವ ರಾಜ್ಯವೇ ಆಗಲಿ ಸರಿಯಾಗಿ ಬೆಳೆಯಬೇಕಾದರೆ, ಅದು ಸರಿಯಾದ ರೀತಿಯಲ್ಲಿ ಹೋಗಬೇಕಾದರೆ, ವ್ಯವಸಾಯ ಬಹಳ ಪ್ರಾಮುಖ್ಯ ಎಂದು ಎಲ್ಲರೂ ಅರಿತುಕೊಂಡಿದ್ದಾರೆ. ಅದನ್ನು ತಿಳಿದುಕೊಂಡು ಈ ವಿಷಯವನ್ನು ಮೊದಲೇ ಪ್ರಸ್ತಾಪಮಾಡಿರುವುದು ಬಹಳ ಸಂತೋಷದ ವಿಷಯ. ಅದರಲ್ಲಿಯೂ ಈ ಮನೆಯಲ್ಲಿ ಶೇಕಡ 75 ಭಾಗದ ಜನ ವ್ಯವಸಾಯಗಾರರನ್ನು ಪ್ರತಿನಿಧಿಸುವ ಸಂದರ್ಭದಲ್ಲಿ, ನಮಗೆ ಸ್ವಾತಂತ್ರ್ಯ ಬಂದಮೇಲೆ, ನಮ್ಮ ಅಭಿವೃದ್ಧಿ ಯೋಜನೆಗಳು ಬಂದಮೇಲೆ, ಈ ವ್ಯವಸಾಯಗಾರರ ಪರಿಸ್ಥಿತಿ ಮತ್ತು ಅವರ ಸ್ಥಿತಿಗಳು ಉತ್ತಮವಾಗತಕ್ಕಂಥ ಅಂಕಿ ಅಂಶಗಳು ಬಹಳ ಮುಖ್ಯವಾದುವು. ಸಾಧಾರಣವಾಗಿ ಇಲಾಖೆಯವರು ಕೊಟ್ಟಿರುವ ಅಂಕಿ ಅಂಶಗಳಲ್ಲಿ ಆಹಾರ ಉತ್ಪತ್ತಿ ಜಾಸ್ತಿಯಾಗುತ್ತಾ ಇದೆಯೆಂದು ತೋರಿಸುತ್ತಾ ಇದ್ದಾರೆ. ಆದರೆ ಇದುವರೆಗೆ ದೇಶದಲ್ಲಿ ಆಹಾರದ ಕೊರತೆ ಇರತಕ್ಕಂಥ ಕೂಗು ಒಂದೇ ಸಮನೆ ಎದ್ದು ಕಾಣುತ್ತಿದೆ. ಇದಕ್ಕೆ ಮೂಲಭೂತವಾದ ಕಾರಣಗಳಿವೆ. ಇವುಗಳ ನಿವಾರಣೆಗೆ ಸರಕಾರ ಸರಿಯಾದ ವ್ಯವಸ್ಥೆಮಾಡಬೇಕು. ಅದಿಲ್ಲದೆ ಎಷ್ಟೇ ಹಣ ಖರ್ಚುಮಾಡಿದರೂ ಸ್ವಯಂಪೂರ್ಣತೆ ಆಹಾರದಲ್ಲಿ ಆಗುವುದಿಲ್ಲ ಎಂಬ ಶಂಕೆ ಬರುತ್ತದೆ. ಪ್ರತಿವರ್ಷವೂ ಈ ಒಂದು ವ್ಯವಸಾಯಗಾರರ ಕುಟುಂಬಗಳಲ್ಲಿ ಏನು ಹುಡುಗರು ವಿದ್ಯಾವಂತರಾಗುತ್ತಿದ್ದಾರೆ ಅವರು ನೇರವಾಗಿ ಪುನಃ ವ್ಯವಸಾಯವೃತ್ತಿಗೆ ಸೇರಿಕೊಳ್ಳಲು ಅಷ್ಟು ಕಾತುರರಾಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಬಹುಶಃ ಪ್ರಪಂಚದ ಇತರ ರಾಜ್ಯಗಳಲ್ಲಿ, ಅದರಲ್ಲಿಯೂ ಅಮೇರಿಕವನ್ನು ತೆಗೆದುಕೊಂಡರೆ ಶೇಕಡ 13 ರಷ್ಟು ಜನ ವ್ಯವಸಾಯ ಮಾಡಿಕೊಂಡು ಇಡೀ ದೇಶಕ್ಕೆ ಸಾಕಾಗುವಷ್ಟು ಆಹಾರವನ್ನು ಸರಬರಾಜುಮಾಡಿ, ಮತ್ತೆ ಬಾಕಿ ದೇಶಗಳಿಗೆ ಕೊಡಬೇಕಾದರೆ, ಅಲ್ಲಿರತಕ್ಕಂಥ ಪರಿಸ್ಥಿತಿ ಏನು ಎಂದು ಆಲೋಚನೆಮಾಡಿ ತಿಳಿದುಕೊಳ್ಳಬೇಕು. ಅಲ್ಲಿ ಸಾಕಾದಷ್ಟು ಸಬ್‌ಸಿಡಿ ರೂಪದಲ್ಲಿ ಅನುಕೂಲತೆಯನ್ನು ಕೊಟ್ಟಿದ್ದಾರೆ. ಅವರು ವ್ಯವಸಾಯ ಉತ್ಪತ್ತಿಯನ್ನು ಸಾಕಾದಷ್ಟು ಮಾಡುತ್ತಿದ್ದಾರೆಂದು ಎದ್ದು ಕಾಣುತ್ತಿದೆ. ನಮ್ಮ ವ್ಯವಸಾಯ ಇಲಾಖೆಯ ಪರಿಸ್ಥಿತಿಯನ್ನು ತೆಗೆದುಕೊಂಡರೆ ಸುಮಾರು 125 ಫಸ್ಟ್‌ಕ್ಲಾಸ್ ಮತ್ತು ಸೆಕೆಂಡ್‌ಕ್ಲಾಸ್ ಜಾಗಗಳನ್ನು 2-3 ವರ್ಷದಿಂದ ಹಾಗೆಯೇ ಖಾಲಿ ಇಟ್ಟುಕೊಂಡು ಬಂದಿದ್ದಾರೆ. ಇದನ್ನು ನೋಡಿದರೆ ಅಭಿವೃದ್ಧಿ ಯೋಜನೆಗಳನ್ನು ಹಾಗೆಯೇ ಇಟ್ಟುಕೊಂಡು ಬರೀ ಮಾತಿನೊಳಗೇ ಕೆಲಸ ಮುಗಿಸಬೇಕೆಂದಿದ್ದಾರೊ ಎಂದು ಕೂಡ ಸಂಶಯ ಬರುತ್ತದೆ. ಈ ರೀತಿ ವೇಕೆನ್ಸಿಗಳನ್ನು ಇಡದೆ ಉತ್ಸಾಹಶಾಲಿಗಳಾದ ಸ್ಪೆಶಲಿಸ್ಟ್‌ಗಳು ಏನಿದ್ದಾರೆ ಅವರಿಗೆ ಅವಕಾಶಕೊಟ್ಟು ಆಹಾರವನ್ನು ಹೆಚ್ಚು ಬೆಳೆಯಲು ಮತ್ತು ರೈತರ ಸ್ಥಿತಿ ಉತ್ತಮವಾಗಲು ಪ್ರಯತ್ನ ಮಾಡಬೇಕು. ಇಲ್ಲದೇಹೋದರೆ ಹೆಚ್ಚಿಗೆ ಆಹಾರ ಬೆಳೆಯಲು ಸಾಧ್ಯವಿಲ್ಲ.

ಒಂದೇಸಮನೆ ಈ ಇಲಾಖೆಯಲ್ಲಿ ಟ್ರಾಕ್ಟರುಗಳ ವಿಲೇವಾರಿ ಬಗ್ಗೆ ಪ್ರಸ್ತಾಪ ನಡೆಯುತ್ತಿದೆ. ಜಪಾನಿನಿಂದ ಸಣ್ಣ ಟ್ರಾಕ್ಟರುಗಳು ಒದಗುತ್ತಾ ಇವೆ. ಅವುಗಳನ್ನು ಒದಗಿಸಲು ಇಲಾಖೆಯವರಾಗಲಿ, ಸರಕಾರದವರಾಗಲಿ ಇನ್ನೂ ಏನೂ ಪ್ರಯತ್ನ ಮಾಡಿಲ್ಲ. ಈ ಬೇರೆ ಟ್ರಾಕ್ಟರುಗಳನ್ನು ಉಪಯೋಗಮಾಡಿಕೊಂಡು ಆಹಾರವನ್ನು ಹೆಚ್ಚಾಗಿ ಬೆಳೆಯಲು ಸ್ವಲ್ಪಮಟ್ಟಿಗೆ ತೊಂದರೆಯಾಗುತ್ತಾ ಇದೆ. ಮತ್ತು ಪ್ರತಿವರ್ಷವೂ ಒಂದೇಸಮನೆ ಟ್ರಾಕ್ಟರುಗಳ ಬೆಲೆ ಏರುತ್ತಾ ಇದೆ. ಜಪಾನಿನಿಂದ ಬರತಕ್ಕಂಥ ಸಣ್ಣ ಟ್ರಾಕ್ಟರುಗಳು 5-6 ಸಾವಿರರೂಪಾಯಿಗೆ ಸಿಗುತ್ತವೆ. ಸಾಧಾರಣವಾಗಿ

(ಶ್ರೀ. ಕೆ. ಎ. ಬೈರೇಗೌಡ)

ರೈತರುಗಳು ಅವುಗಳನ್ನು ಇಟ್ಟುಕೊಂಡು ಉಪಯೋಗಮಾಡಲು ಅವಕಾಶವಿದೆ. ಅದನ್ನು ತ್ವರಿತವಾಗಿ ತರಿಸಿಕೊಡಬೇಕು.

ಹಾಗೆಯೇ ಸಾಯಿಲ್ ಕನ್‌ಸರ್ವೇಶನ್ ಕಡೆಗೆ ಎಷ್ಟು ಗಮನ ಕೊಡಬೇಕೋ ಅಷ್ಟು ಕೊಟ್ಟಿಲ್ಲವೆಂದರೆ ತಪ್ಪಾಗಲಾರದು. ನ್ಯಾಶನಲ್ ಹೈವೇಸ್ ಮತ್ತಿತರ ಮುಖ್ಯ ಬೀದಿಗಳ ಪಕ್ಕದಲ್ಲಿಮಾತ್ರ ಕಾಂಟೂರ್ ಬಂಡಿಂಗ್ ಮಾಡಿದ್ದಾರೆ. ಇಂಟೀರಿಯರ್ ಮಾಡದೆ ಬಿಟ್ಟಿರುತ್ತಾರೆ. ಇದು ಸರಿಯಲ್ಲ. ಇದನ್ನು ಪ್ರಸಾದಕ್ಕೋಸ್ಕರ ಮಾಡಬೇಕಾಗಿಲ್ಲ. ಇದೂ ಒಂದು ದೇಶದ ಕೆಲಸ, ವ್ಯವಸಾಯಗಾರರಿಗೆ ಮುಖ್ಯವಾಗಿ ಬೇಕಾದ ಕೆಲಸ ಅಂತ ತಿಳಿದು ಸಾಯಿಲ್ ಕನ್‌ಸರ್ವೇಶನ್ ಮತ್ತು ಕಾಂಟೂರು ಬಂಡಿಂಗ್ ಕೆಲಸಗಳಿಗೆ ಬಹಳ ಪ್ರಾಮುಖ್ಯತೆ ಕೊಡಬೇಕು. ನಾವು ಬಜೆಟ್ಟಿನಲ್ಲಿ ಎಷ್ಟು ಖರ್ಚು ಮಾಡಬೇಕೆಂದು ಇಟ್ಟಿದ್ದೇವೋ ಅಷ್ಟು ಖರ್ಚು ಮಾಡಿದರೆ ಕೆಲಸ ಮಾಡಿದಂತೆ ಆಗಲಿಲ್ಲ. ಅಷ್ಟರಲ್ಲಿಯೆ ಭೂಮಿಯ ಒಂದು ಶಕ್ತಿಯನ್ನು, ಸಾರವನ್ನು ಉಳಿಸಲು ಸಾಧ್ಯವಿಲ್ಲ. ಇತ್ತೀಚೆಗೆ ಪದೇಪದೇ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಮುಖ್ಯವಾದ ಕಾರ್ಯ ಸಾಯಿಲ್ ಕನ್‌ಸರ್ವೇಶನ್ ಕಾರ್ಯ, ಅದೇ ಮಾಡದೆ ಇರತಕ್ಕಂಥ ಕಾರ್ಯ. ಆ ಕೆಲಸವನ್ನು ಮಾಡಲು ಇಲಾಖೆಯವರು ಸಾಕಾದಷ್ಟು ಮನಸ್ಸು ಕೊಡಬೇಕು.

ಹಾಗೆಯೆ ವ್ಯವಸಾಯಗಾರರ ಉತ್ಪನ್ನಕ್ಕೆ ತಕ್ಕ ಒಂದು ಬೆಲೆಯ ವಿಷಯದಲ್ಲಿ ಪದೇಪದೇ ಪ್ರಸ್ತಾಪ ಮಾಡುತ್ತಾ ಇದ್ದೇವೆ. ಇದುವರೆಗೆ ಸಹಕಾರ ಇಲಾಖೆಯಾಗಲಿ ವ್ಯವಸಾಯ ಇಲಾಖೆಯಾಗಲಿ ಏನೊಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲವೆಂದರೆ ತಪ್ಪಾಗಲಾರದು. ಮಧ್ಯವರ್ತಿಗಳ ಕೈಗೆ ವ್ಯವಸಾಯಗಾರರು ಸಿಕ್ಕಿಹಾಕಿಕೊಂಡು ಅವರು ಬೆಳೆದುದಕ್ಕೆ ಸರಿಯಾದ ಬೆಲೆ ಸಿಗುತ್ತಾ ಇಲ್ಲ. ಯಾರು ಕಷ್ಟಪಟ್ಟು ಬೆಳೆಯುತ್ತಾರೆಯೊ, ಯಾರು ಬೆಳೆಕೆದಾರರೊ ಅವರ ಪರಿಸ್ಥಿತಿ ಉತ್ತಮವಾಗಲಿಲ್ಲ. ಅವರ ಸ್ಥಿತಿಯನ್ನು ಮಾಡಬೇಕಾದಂಥದ್ದು ಸಹಕಾರಸಂಘದ ಒಂದು ಮುಖ್ಯ ಕರ್ತವ್ಯ. ವ್ಯವಸಾಯಗಾರರಿಗೆ ವ್ಯವಸಾಯ ಇಲಾಖೆಯಿಂದಲೂ ಸಹ ಪ್ರಯೋಜನವಾಗುತ್ತಿಲ್ಲ. ವ್ಯವಸಾಯಗಾರರು ಏನೇನು ಬೆಳೆಗಳನ್ನು ಬೆಳೆಯುತ್ತಾರೆ, ಅವುಗಳಿಗೆ ಯಾವ ಬೆಲೆಯನ್ನು ಕೊಟ್ಟರೆ ಸರಿಯೆಂದು ನೋಡಿ ಆ ಉತ್ತಮವಾದ ಬೆಲೆಯನ್ನು ನಿರ್ಧರಿಸಿ, ತಿಳಿಸಿ, ಸಿಗುವಂತೆ ಮಾಡಬೇಕು.

ಈ ಇಲಾಖೆಯಲ್ಲಿ ಹಾರ್ಟಿಕಲ್ಚರ್ ಭಾಗ ಪ್ರತ್ಯೇಕವಾಗಿದೆ. ಅದು ಬಹಳ ಮುಖ್ಯವಾದ ಪಾತ್ರ ವಹಿಸಲು ಒಳ್ಳೆಯ ಕಾಲ ಬಂದಿದೆ. ಜನಗಳು ಹಾರ್ಟಿಕಲ್ಚರ್ ಇಲಾಖೆಯಿಂದ ಪ್ರಯೋಜನ ಪಡೆಯುವಂತಾಗಬೇಕು. ಜನಗಳಿಗೆ ಮತ್ತು ನರ್ಸರಿಗಳಲ್ಲಿ ಕೆಲಸಮಾಡತಕ್ಕವರಿಗೆ ಒಳ್ಳೆಯ ಬೀಜ ಮುಂತಾದುವುಗಳನ್ನು ಸರಬರಾಜುಮಾಡಿ, ಅವರಿಗೆ ಸೌಕರ್ಯಗಳನ್ನು ಒದಗಿಸಿದರೆ, ಅವರು ಹಣ್ಣುಹಂಪಲುಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಎಲ್ಲ ವಿಧವಾದ ಹಣ್ಣುಗಳನ್ನು ಬೆಳೆಯಲು ಅವಕಾಶವಿದೆ. ಹಣದ ಜೊತೆಗೆ ನೀರಿನ ಬಾವಿಗಳು, ಪಂಪು ಮತ್ತು ಪವರಿನ ಅನುಕೂಲತೆಗಳನ್ನು ಕಲ್ಪಿಸಬೇಕು. ಪವರಿನ ಕೊರತೆ ಇದೆ, ಅದಕ್ಕೆ ಸಾಕಾದಷ್ಟು ಗಮನ ಕೊಡಬೇಕು. ತರಕಾರಿ, ಹಣ್ಣು ಹಂಪಲುಗಳನ್ನು ಬೆಳೆಯಲು ಸರಕಾರದವರು ನೀರಾವರಿ ಮುಂತಾದ ಎಲ್ಲ ಅನುಕೂಲಗಳನ್ನು ಮಾಡಿಕೊಟ್ಟರೆ, ಆಹಾರ ಕೊರತೆಯನ್ನು ಸ್ಥಿಮಿತಗೊಳಿಸಲಿಕ್ಕೆ ಸಹಾಯವಾಗುತ್ತದೆ.

ಪ್ಯಾಕೇಜು ಪ್ರೋಗ್ರಾಮನ್ನು 2-3 ಡಿಸ್ಟ್ರಿಕ್ಟುಗಳಲ್ಲಿ ಮಾತ್ರ ತೆಗೆದಿರುತ್ತಾರೆ. ಅದು ದೇಶದ ಎಲ್ಲ ಭಾಗಗಳಿಗೂ ಬರಬೇಕು, ಇಡೀ ಸಂಸ್ಥಾನಕ್ಕೇ ಅದರ ಪ್ರಯೋಜನವನ್ನು ಹಂಚಬೇಕು.

ಅನಿಮಲ್ ಹಸ್ಬೆಂಡರಿ ಇಲಾಖೆಯಲ್ಲಿ ಸಹ ನಮಗೆ ಅನುಕೂಲತೆಗಳು ತ್ವರಿತವಾಗಿ ಸಿಗುತ್ತಿಲ್ಲ. ಮೊನ್ನೆತಾನೆ ಒಂದು ದೃಷ್ಟಾಂತವಾಗಿದೆ. ಮಿಲಟರಿ ಡೈರಿ ಫಾರಮ್ಮಿನವರು ಸತ್ತ ದನಗಳನ್ನು ಹೆಬ್ಬಾಳದ ಹತ್ತಿರ ಹೂತುದರ ಫಲವಾಗಿ ಸುತ್ತಮುತ್ತಲ ಪ್ರದೇಶದಲ್ಲಿದ್ದ ದನಗಳಿಗೆ ಸತ್ತ ದನಗಳಿಗಿದ್ದ ರೋಗ ತಗುಲಿ, ಸುಮಾರು 1 ಲಕ್ಷ ಬೆಲೆಬಾಳುವ ದನಗಳು ಸತ್ತುಹೋದುವು, ಅದರಿಂದ ಗ್ರಾಮಸ್ಥರಿಗೆ ಬಹಳ ನಷ್ಟವಾಗಿದೆ. ಇಲಾಖೆಯವರೂ ಪ್ರಯತ್ನಪಟ್ಟರು ರೋಗವು ಹಬ್ಬದಂತೆ ನಿಲ್ಲಿಸಲಿಕ್ಕಾಗಲಿಲ್ಲ. ಏಕೆಂದರೆ ಔಷಧಿಗಳ ಕೊರತೆಯಿಂದ ಅವರು ತಡಮಾಡಿದರು. ಈ ಇಲಾಖೆಯನ್ನೇ ಜಾನುವಾರುಗಳನ್ನಿಟ್ಟುಕೊಂಡಿರುವ ಜನರು ನಂಬಿಕೊಂಡಿದ್ದಾರೆ. ಆದ್ದರಿಂದ ಅವರು ತಡಮಾಡದೆ ಜನಗಳು ನಷ್ಟಕ್ಕೊಳಗಾಗದಂತೆ ನೋಡಿಕೊಳ್ಳಬೇಕು.

ಈ ಒಂದು ಕೋ-ಆಪರೇಟೀವ್ ಇಲಾಖೆಯಿಂದ ಇವತ್ತು ಸಾಕಾದಷ್ಟು ಸಹಾಯವನ್ನು ಕೊಡುತ್ತಾ ಇದ್ದೇವೆಂದು ಹೇಳುತ್ತಿದ್ದಾರೆ. ಆದರೆ ರೈತನು ಉತ್ಪತ್ತಿ ಮಾಡಿದಂಥ ವಸ್ತುಗಳಿಗೆ

ಸರಿಯಾದ ಬೆಲೆ ಸಿಗದೆಹೋದರೆ ತೊಂದರೆಯಾಗುತ್ತದೆ. ಈ ತೊಂದರೆ ನಿವಾರಣೆಯಾಗಬೇಕು. ಒಂದೇಒಂದು ಏಜನ್ಸಿ ಎಂದರೆ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್, ಅದರ ಮುಖಾಂತರ ಮಾರ್ಕೆಟಿಂಗ್ ಕೆಲಸ ಮಾಡಬೇಕಾಗಿದೆ.

ವ್ಯವಸಾಯದ ಅಭಿವೃದ್ಧಿ ಕಾರ್ಯವಾಗದೇ ದೇಶ ಮುಂದುವರಿಯುವದಕ್ಕೆ ಸಾಧ್ಯವಾಗುವುದಿಲ್ಲ, ಅದರಿಂದ ನಿಶ್ಚಿತವಾದ ಉತ್ಪನ್ನ ಬಂದಿದೆ. ಆದ್ದರಿಂದ ಕೈಗಾರಿಕೆಯ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ವ್ಯವಸಾಯಗಾರರು ಏನಿದ್ದಾರೆ ಅವರ ಅರ್ಧಭಾಗದಷ್ಟು ಜನ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಪ್ರಪಂಚದ ಇತರ ಭಾಗಗಳಲ್ಲಿ ಯಾವ ರೀತಿ ಕೈಗಾರಿಕೆ ಮುಂದುವರಿದಿದೆ ಅದೇರೀತಿ ನಮ್ಮ ದೇಶದಲ್ಲೂ ಸಹ ಕೈಗಾರಿಕೆ ಮುಂದುವರಿಯಬೇಕಾದರೆ ಅದಕ್ಕೆ ಹೆಚ್ಚಿನ ಉತ್ತೇಜನ ಕೊಡಬೇಕು. ಇವತ್ತಿನ ದಿವಸ ನಮ್ಮ ದೇಶದಲ್ಲಿ ಎಷ್ಟೋ ಜನ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂದೆ ಬಂದಿದ್ದಾರೆ, ಆದರೆ ಅವರಿಗೆ ಸರಕಾರದ ವತಿಯಿಂದ ಅಥವಾ ಇಲಾಖೆಯ ವತಿಯಿಂದ ಏನು ಅನುಕೂಲತೆ ಒದಗಬೇಕು ಅದು ಒದಗುವುದು ನಿಧಾನವಾಗಿ ಇಲ್ಲಿ ಪ್ರಾರಂಭವಾಗಬೇಕಾಗಿದ್ದ ಒಂದು ಕೈಗಾರಿಕೆ ಬೇರೆ ಕಡೆಗೆ ಹೋಯಿತು. ಅಂತಹ ಒಂದು ಪರಿಸ್ಥಿತಿ ಇವತ್ತು ನಮ್ಮ ದೇಶದಲ್ಲಿ ಉಂಟಾಗಿದೆ, ಅದಕ್ಕೆ ಅವಕಾಶ ಕೊಡಕೂಡದು. ನಮ್ಮಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿಯ ಅನುಕೂಲ ಇರುವಾಗ ಬಹಳ ಪ್ರಾಮುಖ್ಯವಾದ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಜನ ಮುಂದೆ ಬಂದಂಥ ಸಂದರ್ಭದಲ್ಲಿ ಅದನ್ನು ಹೊರಗಡೆಗೆ ಹೋಗಲು ಬಿಡದೇ ಇಲ್ಲಿಯೇ ಪ್ರಾರಂಭಮಾಡಲು ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಆ ರೀತಿ ಮಾಡಿದರೆ ಜನಗಳಿಗೂ ಸಹ ಉದ್ಯೋಗ ದೊರೆತು ಅವರ ಜೀವನೋಪಾಯಕ್ಕೆ ಒಂದು ಮಾರ್ಗವಾಗುತ್ತದೆ. ಅದಕ್ಕೇ ಕೇಂದ್ರ ಸರಕಾರದವರು ಭಾರಿ ಕೈಗಾರಿಕೆಗಳನ್ನು ಬೆಂಗಳೂರಿನ ಸುತ್ತುಮುತ್ತಲೂ ಪ್ರಾರಂಭಮಾಡಿದ್ದಾರೆ. ಅದರಲ್ಲೂ ಕೂಡ ನಮ್ಮ ಜನಗಳಿಗೆ ಹೆಚ್ಚು ಉದ್ಯೋಗಗಳು ದೊರಕುವಂತೆ ಮಾಡಲು ಪ್ರಯತ್ನಮಾಡಬೇಕು. ಕೇಂದ್ರಸರ್ಕಾರದವರು ಪ್ರಾರಂಭ ಮಾಡಿರತಕ್ಕ ಕೈಗಾರಿಕೆಗಳಲ್ಲಿ ಶೇಕಡ 60 ಭಾಗಕ್ಕಿಂತ ಹೆಚ್ಚಾಗಿ ಹೊರಗಿನವರೇ ಇದ್ದಾರೆ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನೋಡಿದರೆ ಇವತ್ತಿನ ದಿವಸ ನೂರಾರು ಜನ ನಮ್ಮ ಯುವಕರು ಕೆಲಸಕ್ಕಾಗಿ ನಿಂತಿರುತ್ತಾರೆ. ಸಹಸ್ರಾರು ಜನ ಹುಡುಗರು ವಿದ್ಯಾವಂತರು, ತರಬೇತು ಆದವರು ನಮ್ಮಲ್ಲೇ ಇರುವಾಗ ಹೊರಗಿನವರಿಗೆ ಏಕೆ ಅವಕಾಶ ಕೊಡಬೇಕೋ ಅರ್ಥವಾಗುತ್ತಾ ಇಲ್ಲ.

ಕಡೆಯದಾಗಿ ಮಾನ್ಯ ಹಣಕಾಸಿನ ಮಂತ್ರಿಗಳು ಹೆಚ್ಚು ಹಣ ಬೇಕೆಂದು ಹೇಳುತ್ತಾರೆ; ಆದರೂ ಈ ಸಮಯದಲ್ಲಿ ಯಾವ ಹೊಸ ತೆರಿಗೆಯನ್ನೂ ಹಾಕದೇ ಇರುವುದು ಒಂದು ಸಂತೋಷದ ವಿಷಯವೇ ಆದರೂ ಕೂಡ ಸರಕಾರದವರು ಈಗಾಗಲೇ ಹಾಕಿರತಕ್ಕ ತೆರಿಗೆಗಳ ಪೈಕಿ ಇನ್‌ಕಂ ಟ್ಯಾಕ್ಸ್, ಸೇಲ್ಸ್-ಟ್ಯಾಕ್ಸ್ ಮತ್ತು ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಈ ನಾಲ್ಕೈದು ಬಾಬುಗಳಿಂದ ಬರತಕ್ಕ ಹಣವನ್ನು ವಸೂಲು ಮಾಡಲು ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ಕೆಲವು ಮಾತುಗಳನ್ನು ಹೇಳಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದಯಾನಂದ ಆರ್ ಕಳ್ಳಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯ ಒಂದು ಚಿತ್ರವನ್ನು ಮಾನ್ಯ ಆರ್ಥಿಕ ಮಂತ್ರಿಗಳು ಸುಂದರ ರೂಪದಲ್ಲಿ ಮೆರುಗು ಹಾಕಿ ನಮ್ಮ ಮುಂದೆ ಇಟ್ಟಿದ್ದಾರೆ. ಕೇವಲ ಅಂಕಿ ಅಂಶಗಳ ಸೃಷ್ಟಿಯ ಹಿನ್ನೆಲೆಯಲ್ಲಿ ಮಾನ್ಯ ಹಣಕಾಸಿನ ಸಚಿವರು ತಯಾರು ಮಾಡಿರುವ ಈ ಆಯವ್ಯಯ ಪಟ್ಟಿಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದರೆ ಇದಕ್ಕಿಂತ ಇನ್ನು ಹೆಚ್ಚಿಗೆ ಸಾಧನೆ ಮಾಡಲಿಕ್ಕೆ ಆಗಲಾರದೇ ಎಂದು ನನಗೆ ಅನಿಸುತ್ತದೆ. ಅಭಿವೃದ್ಧಿಯ ವಿಷಯದಲ್ಲಿ ನಮಗೆ ಸ್ವಲ್ಪ ಅನುಮಾನ ಬಂದಿದೆ. 1963-64 ನೇ ಸಾಲಿನ ರೆವಿನ್ಯೂ ಅಂದಾಜುಗಳಲ್ಲಿ 220.74 ಲಕ್ಷ ರೂಪಾಯಿಗಳು ಉಳಿದು ಬಂದಿದೆ. 1964-65 ರಲ್ಲಿ 7 ಲಕ್ಷ ರೂಪಾಯಿ ಹೆಚ್ಚುವರಿ ಕಂಡುಬರುತ್ತದೆ ಎಂದು ಹೇಳಿದ್ದಾರೆ. ಅವರು ಸೂಚಿಸಿರುವಂತೆ ಈ ವರ್ಷದಲ್ಲಿ ಪ್ರಾರಂಭದ ಶಿಲ್ಕು—272.87 ಮತ್ತು ಅಖೈರು ಶಿಲ್ಕು—881.87 ಎಂದು ಹೇಳಿ ಸಮಗ್ರ ಜೋತಾದಲ್ಲಿಯೇ ನಮ್ಮ 1964-65ರ ಆಯವ್ಯಯ ಪರ್ಯವಸಾನವಾಗುವ ನಿರೀಕ್ಷೆ ಇದೆ. ಈಗ ಮೂರನೆಯ ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷ ಕಳೆದು - ನಾಲ್ಕನೆಯ ವರ್ಷದಲ್ಲಿ ನಾವು ಕಾಲು ಇಡುತ್ತಾ ಇದ್ದೇವೆ. ನಮ್ಮ ರಾಜ್ಯಪಾಲರು ಹೇಳಿರುವಂತೆ 250 ಕೋಟಿ ರೂಪಾಯಿಗಳ ಯೋಜನೆಗೆ ಈ ಮಧ್ಯಾವಧಿಯಲ್ಲಿ 110 ಕೋಟಿ ರೂಪಾಯಿಗಳು ವೆಚ್ಚವಾಗಿದೆ ಎಂದು ತಿಳಿದು ಬರುತ್ತದೆ. ಆದರೆ ನಮ್ಮ ಮಾನ್ಯ ಆರ್ಥಿಕ ಮಂತ್ರಿಗಳು ಕೊಟ್ಟ ವಿವರಣೆಯಿಂದ ಅದಕ್ಕೆ ನಾವು ಯಾವ ರೀತಿಯಿಂದಲೂ 60 ಕೋಟಿ ರೂಪಾಯಿಗಳಿಗಿಂತ ಹೆಚ್ಚು ನಿರೀಕ್ಷೆ ಮಾಡುವ ಹಾಗಿಲ್ಲ ಎಂದು ಹೇಳಿದ್ದಾರೆ, ಎಂದರೆ ಇನ್ನು ಎರಡು ವರ್ಷಗಳಲ್ಲಿ ಆಗಬೇಕಾದ ಯೋಜನೆಗೆ ನಾವು ಕೇಂದ್ರ

(ಶ್ರೀ ದಯಾನಂದ ಆರ್ ಕಳ್ಳಿ)

ಸರಕಾರದ ನೆರವನ್ನು ಕಾಯಬೇಕು. ಅವರು ನಾವು ನಿರೀಕ್ಷಿಸುವಂತೆ ನಮಗೆ ವಿಶೇಷ ಸಹಾಯ, ಸಾಲದ ಸೌಲಭ್ಯವನ್ನು ಕೊಟ್ಟರೆ ಮಾತ್ರ ಆ ಯೋಜನೆಗಳನ್ನು ಮುಂದುವರಿಸುವುದಕ್ಕೆ ಸಾಧ್ಯವೇ ಹೊರತು ಇಲ್ಲದೇ ಇದ್ದರೆ ಅದನ್ನು ಕೈಬಿಡಬೇಕಾಗುತ್ತದೆ. ಎಂದರೆ ನಾವು ನಮ್ಮ ಕಾಲ ಮೇಲೆ ನಿಂತಿಲ್ಲ. ನಮ್ಮ ಸರಕಾರ ಇವತ್ತು ದಿವಾಳಿತನದ ದಾರಿಯಲ್ಲಿ ಇದೆ. ನಮ್ಮ ಯೋಜನೆಗಳು ಕೈಗೂಡಬೇಕಾದರೆ ನಮ್ಮ ಕಾಲ ಮೇಲೆ ನಾವು ನಿಲ್ಲುವಂತಹ ಪರಿಸ್ಥಿತಿಯಲ್ಲಿದ್ದರೆ ಮಾತ್ರ ಸಾಧ್ಯವೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ. ನಮ್ಮ ಆರ್ಥಿಕ ಸಚಿವರು ಇಟ್ಟಿರುವ ಈ ಹಣಕಾಸಿನ ಪರಿಸ್ಥಿತಿಯನ್ನು ನೋಡಿದರೆ 60 ಕೋಟಿ ರೂಪಾಯಿಗಳ ಕೊರತೆ ನಮಗೆ ಬರುವ ಸ್ಥಿತಿ ಇದೆ, ಇಂತಹ ಸಂದರ್ಭದಲ್ಲಿ ನಾವು ಮುಂದಿನ ಕಾರ್ಯಕ್ರಮಗಳನ್ನು ಯಾವ ರೀತಿ ನಿಯೋಜಿಸಬೇಕು ಯಾವ ಸಂಪರ್ಕಮೂಲಗಳಿಂದ ಹಣವನ್ನು ಬರಮಾಡಿಕೊಳ್ಳಬಹುದು ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಮತ್ತು ಜನರನ್ನು ಈ ವಿಷಯದಲ್ಲ ಸಮಾಧಾನ ಪಡಿಸಬೇಕಾಗುತ್ತದೆ. ವಿಶ್ರಾಂತಿ ವೇತನ, ಕಡಿಮೆ ಸಂಬಳದ ನೌಕರರಿಗೆ 5 ರೂಪಾಯಿ ಡಿಯರ್‌ನೆಸ್ ಅಲೋಯನ್ಸ್ ಮತ್ತು ಪೆನ್‌ಷನ್ ದಾರರುಗಳಿಗೆ 5 ರೂಪಾಯಿ ಡಿ. ಎ. ಇವುಗಳನ್ನು ಕೊಟ್ಟಿರುವುದೇನೋ ಒಳ್ಳೆಯದೇ ಆದರೆ ಇದಕ್ಕೆ ತಗಲತಕ್ಕ ಎರಡು ಕೋಟಿ ರೂಪಾಯಿಗಳ ಹೆಚ್ಚಿನ ವೆಚ್ಚವನ್ನು ಯಾವ ಬಾಬಿನಿಂದ ಒದಗಿಸುತ್ತೀರಿ ಎಂಬುದನ್ನು ಇದರಲ್ಲಿ ನಮೂದು ಮಾಡಿಲ್ಲ.

ಆಹಾರ ಧಾನ್ಯಗಳ ಬೆಲೆ ದಿನದಿನಕ್ಕೆ ಹೆಚ್ಚುತ್ತಿರುವಂತಹ ಈ ಸಂದರ್ಭದಲ್ಲಿ ಅದನ್ನು ಸ್ಥಿಮಿತಕ್ಕೆ ತರುವಂತಹ ಅಥವಾ ಅದನ್ನು ನಿಯಂತ್ರಿಸುವ ಬಗ್ಗೆ ಯಾವ ಒಂದು ಸೂಚನೆಯೂ ಈ ಆಯವ್ಯಯ ಪಟ್ಟಿಯಲ್ಲಿ ಕಾಣುತ್ತಾ ಇಲ್ಲ. ದಿನದಿನಕ್ಕೆ ಹೆಚ್ಚುತ್ತಿರುವ ಆಹಾರ ಧಾನ್ಯಗಳ ಬೆಲೆಯನ್ನು ಸ್ಥಿಮಿತಕ್ಕೆ ತರದಿದ್ದರೆ, ಒಂದು ನಿಯಂತ್ರಣವನ್ನು ಮಾಡದಿದ್ದರೆ ಬಡ ಜನರು ಮತ್ತು ಮಧ್ಯಮ ವರ್ಗದ ಜನರು ಯಾವ ರೀತಿ ಜೀವನ ಮಾಡಬೇಕಾಗುತ್ತದೆ ಎಂಬುದನ್ನು ನಾವು ಬಹಳ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ.

ಶಾಲೆಗಳ ಶಿಕ್ಷಣ ಶುಲ್ಕವನ್ನು ಪರಿಶೀಲನೆ ಮಾಡುವುದಕ್ಕೋಸ್ಕರ ಒಂದು ಸಮಿತಿಯನ್ನು ನೇಮಕ ಮಾಡಿದ್ದೀರಿ, ಅದರಲ್ಲೂ ಕೂಡ ಒಂದು ವಿಚಿತ್ರ ಎಂದರೆ ಮದರಾಸಿನಲ್ಲಿ ನಡೆಯತಕ್ಕ ಕಮಿಟಿ ಮೀಟಿಂಗಿಗೆ ಯಾರಾದರೂ ಏನಾದರೂ ವಿಷಯಗಳನ್ನು ತಿಳಿಸಬೇಕಾಗಿದ್ದರೆ ಅವರ ಸ್ವಂತ ಖರ್ಚಿನಲ್ಲಿ ಮದರಾಸಿಗೆ ಹೋಗಿ ಬರಬೇಕಾಗುತ್ತದೆ. ಇದು ಎಷ್ಟುಮಟ್ಟಿಗೆ ಸಾಧ್ಯವಾದುದು ಮತ್ತು ಸಾಧುವಾದುದು ಎಂಬುದು ಎಲ್ಲರಿಗೂ ಗೊತ್ತಿದೆ.

ಈ ಕಮಿಟಿಯಲ್ಲಿ ನೇಮಕವಾದವರೆಲ್ಲ ಒಳ್ಳೆಯ ಪರಿಣತರು ಇದ್ದಾರೆ, ಆದರೆ ವಿದ್ಯಾರ್ಥಿಗಳಿಗೆ ಅಲ್ಲಿ ಒಂದು ಪ್ರಾತಿನಿಧ್ಯವಿಲ್ಲದೇ ಇರುವುದು ಬಹಳ ಆಶ್ಚರ್ಯದ ಸಂಗತಿ. ಈಗಲೂ ಕೂಡ ತಡವಾಗಿಲ್ಲ, ವಿದ್ಯಾರ್ಥಿಗಳಿಗೆ ಅದರಲ್ಲಿ ಪ್ರಾತಿನಿಧ್ಯವನ್ನು ಕೊಟ್ಟು ಅವರ ಬೇಡಿಕೆಗಳನ್ನು ಆ ಸಮಿತಿಯ ಮುಂದೆ ಇಡುವುದಕ್ಕೆ ಒಂದು ಅವಕಾಶ ಮಾಡಿಕೊಡುವುದು ಸೂಕ್ತ ಎಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ವಿಚಾರವಾಗಿ ಮಾನ್ಯ ಸದಸ್ಯರು ಅನೇಕರು ಹೇಳಿದ್ದಾರೆ. ಅಂತಹ ಸ್ಥಾನಕ್ಕೆ ಯಾವಾಗಲೂ ಈ ರೀತಿ ಹೊರಗಿನವರನ್ನು ಆಮದು ಮಾಡುವ ಹವ್ಯಾಸವನ್ನು ಸರಕಾರದವರು ಬಿಡಬೇಕು. ನಮ್ಮ ದೇಶದಲ್ಲಿ ವಿದ್ಯಾವಂತರು ಇಲ್ಲವೇ, ಬುದ್ಧಿವಂತರು ಇಲ್ಲವೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ನಾವು ಈ ರೀತಿ ಹೇಳಿದ್ದೇ ಆದರೆ ಮಾನ್ಯ ಮಂತ್ರಿಗಳು ವಿಶಾಲ ಮನೋದೃಷ್ಟಿ ಇಟ್ಟುಕೊಳ್ಳಬೇಕು, ಭಾವ ಐಕ್ಯತೆಗೆ ನೆರವು ಆಗಬೇಕೆಂದು ಹೇಳುತ್ತಾರೆ. ಆದರೆ ಆ ರೀತಿ ಭಾವ ಐಕ್ಯತೆ ವಿಶಾಲ ಮನೋಭಾವಕ್ಕೆ ಈ ರೀತಿ ಮಾಡುತ್ತಾ ಹೋಗುವುದರಿಂದ ಅವಕಾಶ ಎಲ್ಲಿದೆ ? ಯಾವಾಗ ಭಾಷಾವಾರು ಪ್ರಾಂತಕ್ಕೆ ಅನುಮತಿಕೊಟ್ಟೆವೋ ಅಂದೇ ಇದಕ್ಕೆ ತಿಲಾಂಜಲಿಯನ್ನು ಕೊಟ್ಟಂತೆ ಆಯಿತು. ಈಗ ವಿಶಾಲ ಮನೋಭಾವನೆಯಿಂದ ನೋಡಬೇಕು, ಅಲ್ಲಿಯವರು ಇಲ್ಲಿಯವರು ಎಂದು ಹೇಳಬಾರದು ಎಂದು ಹೇಳುತ್ತಾ ಇದ್ದೇವೆ. ಅವರಿಗೆ ಒಂದು ಬೆಲೆ ಕೊಡಬೇಕು. ಮೇಧಾವಿಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಅಂಥವರ ನೆರವು ಪಡೆಯುವುದು ಒಳ್ಳೆಯದು. ಯಾವಾಗಲೂ ಹೊರಗಡೆಯವರನ್ನು ತೆಗೆದುಕೊಳ್ಳುವ ಹವ್ಯಾಸಕ್ಕೆ ಹೋಗಬಾರದು. ಇದು ನನ್ನ ನಮ್ರ ಸೂಚನೆ.

ಈಗ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 5 ಲಕ್ಷ ಮಕ್ಕಳಿಗೆ ಉಪಾಹಾರ ಒದಗಿಸುವ ಕಾರ್ಯಕ್ರಮ ಇದೆ; ಸಂತೋಷ. ಆದರೆ ನಿಜವಾಗಿಯೂ ಉಪಹಾರ ಒದಗಿಸುವುದು ಸರಿಯಾಗಿ ವಿನಿಯೋಗವಾಗುತ್ತಿದೆಯೆ, ಅದೂ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಹಳ್ಳಿಗಳಲ್ಲಿ ಸಿಕ್ಕುತ್ತಿದೆಯೋ ಎಂಬ ಸಂಶಯ ಇದೆ. ಈಗಾಗಲೆ ಹಾಲಿನ ಪುಡಿ ದುರುಪಯೋಗವಾಗುತ್ತಿರುವ ಪ್ರಕರಣಗಳು

ನಮ್ಮ ಗಮನಕ್ಕೆ ಬಂದಿವೆ. ಹೊರ ದೇಶದವರು ಮತ್ತು ಇತರರು ನಮ್ಮ ಬಡ ಮಕ್ಕಳಿಗೆ ನೆರವಾಗ ಬೇಕೆಂದು ಕೋಟಿಗಟ್ಟಲೆ ಬೆಲೆ ಬಾಳುವ ಹಾಲಿನ ಪುಡಿ, ರವೆ ಮತ್ತು ಇತರ ವಸ್ತುಗಳನ್ನು ದಾನ ವಾಗಿ ಕೊಟ್ಟಿದ್ದಾರೆ. ಅದು ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ ಅಥವಾ ಬೇರೆ ರೀತಿಯಲ್ಲಿ ವಿನಿಯೋಗವಾಗುತ್ತಿದೆ ಎಂಬುದು ದಾನಿಗಳಿಗೆ ಗೊತ್ತಾದರೆ ಪಾಶ್ಚಾತ್ಯ ದೇಶಗಳಲ್ಲಿ ನಮ್ಮ ಘನತೆಗೆ ಯಾವ ರೀತಿ ಬೆಲೆ ಬರಬಹುದು ಎಂಬುದನ್ನು ಆಲೋಚಿಸಬೇಕು. ಅವನ್ನು ಸದ್ವಿನಿಯೋಗ ಮಾಡ ಬೇಕಾಗಿದೆ. ಈ ವಿಷಯವನ್ನು ಬಹಳ ಸೂಕ್ಷ್ಮವಾಗಿ ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಹಳ್ಳಿಗಳ ಮಕ್ಕಳಿಗೂ ಇದರ ಸೌಕರ್ಯ ದೊರೆಯುವಂತೆ ಪ್ರಯತ್ನ ಮಾಡುವುದು ಒಳ್ಳೆಯದು. ಈ ಕಾರ್ಯಕ್ರಮ ಯಾವ ರೀತಿ ನಿರ್ವಹಿಸುತ್ತಿದ್ದೀರಿ ಎಂಬ ವಿಚಾರದಲ್ಲಿ ನಮಗೆ ಸ್ವಲ್ಪ ಅನುಮಾನಕ್ಕೆ ಕಾರಣವಾಗಿದೆ. ಕಳುಹಿಸಿದ ಪದಾರ್ಥಗಳು ಯಾವರೀತಿ ಮಕ್ಕಳಿಗೆ ದೊರೆತು ಸಹಾಯವಾಗುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ನೋಡಬೇಕು. ಕೆಲವು ಹಳ್ಳಿಗಳಲ್ಲಿ ನಾವು ನೋಡಿದಂತೆ ಮಕ್ಕಳಿಂದ ತಿಂಗಳಿಗೆ ಒಂದು ರೂಪಾಯಿನಂತೆ ವಸೂಲು ಮಾಡುತ್ತಿದ್ದಾರೆ. ಕಾರಣ ಕೇಳಿದರೆ ಕಂಟಿಂಜೆನ್ಸಿ ಗ್ರ್ಯಾಂಟ್ ಕೊಟ್ಟಿಲ್ಲ, ನಮ್ಮ ಕೈಯಿಂದ ಖರ್ಚು ಮಾಡಬೇಕು ಎಂದು ಹೇಳುತ್ತಾರೆ. ಈ ರೀತಿ ಮಾಡ ಬಾರದು. ದುರುಪಯೋಗವಾಗುವ ಸಂದರ್ಭ ಬಹಳವಿರುವುದರಿಂದ ಅದಕ್ಕೆ ಅವಕಾಶವಿಲ್ಲದಂತೆ ನೋಡಿಕೊಂಡು ಸದುಪಯೋಗ ವಾಗುವಂತೆ ಮಾಡಬೇಕು.

ಹಣದ ಕೊರತೆಯಿರುವಾಗ ನಮ್ಮ ಆಯುವ್ಯಯ ಪಟ್ಟಿ ಕೊರತೆಯ ಪಟ್ಟಿಯಾಗಿರುವಾಗ ಹಣ ಬರುವ ಮಾರ್ಗವನ್ನು ನಾವು ಕಂಡುಹಿಡಿಯಬೇಕಾಗಿದೆ. ಇದಕ್ಕಾಗಿ ನಾನು ಈಗ ಹೇಳುವುದು ಹೊಸ ಸಲಹೆಯೇನಲ್ಲ. ಪಾನನಿರೋಧವನ್ನು ಸಡಿಲ ಮಾಡಿದರೆ ನಿಜವಾಗಿಯೂ ಸುಮಾರು 15 ಕೋಟಿ ರೂಪಾಯಿಗಳು ಬರಬಹುದು. ಮಹಾರಾಷ್ಟ್ರದಲ್ಲಿ ಇದನ್ನು ಪರಿಶೀಲಿಸುತ್ತಿದ್ದಾರೆ, ಮುಂದಿನ ವರ್ಷ ಕಾರ್ಯರೂಪಕ್ಕೆ ತರುವವರಾಗಿದ್ದಾರೆ. ಹಾಗಿರುವಾಗ ನಾವೂ ಸಹ ಆಲೋ ಚನೆ ಮಾಡಬೇಕು. ಬರೀ ಫಾಲ್ಸ್ ಪ್ರೆಸ್ಟೀಜ್ ಇದ್ದರೆ ಪ್ರಯೋಜನವಿಲ್ಲ, ಪಾನನಿರೋಧ ಯಾವರೀತಿ ನಡೆದಿದೆ, ಯಶಸ್ವಿಯಾಗಿದೆಯೇ ಎಂಬುದು ಗೊತ್ತಿದೆ. ಪ್ರತಿಯೊಬ್ಬರೂ ಆತ್ಮ ಪರಿಶೋಧನೆ ಮಾಡಿ ಕೊಳ್ಳಲಿ, ನಿಜವಾಗಿಯೂ ಯಶಸ್ವಿಯಾಗಿಲ್ಲ. ಪಕ್ಷದ ಶಿಸ್ತಿನಿಂದ ಮನಸ್ಸಿಲ್ಲದಿದ್ದರೂ ಅದನ್ನು ಮುಂದುವರೆಸುವುದು ಸರಿಯಲ್ಲ. ಧೈರ್ಯದಿಂದ ದೇಶದ ಮುಂದಿರುವ ಸಮಸ್ಯೆಗಳನ್ನೆದುರಿಸಬೇಕು. ಪಾನನಿರೋಧದಿಂದ ಜನರಿಗೆ ಒಳ್ಳೆಯದಾಗಿದೆಯೆ ಅವರ ನೈತಿಕಮಟ್ಟ ಹೆಚ್ಚಾಗಿದೆಯೇ ಎಂಬುದನ್ನು ನೋಡಬೇಕು. ಇದರಿಂದ ಬರಬೇಕಾದ ಹಣ ಕೆಲವು ಸಮಾಜ ಘಾತಕರ ಮತ್ತು ಕಂಟಕರ ಕೈಸೇರಿ ಬ್ಲಾಕ್‌ಮನಿಯಾಗಿ ಒಂದೇ ಕಡೆ ಶೇಖರಣೆಯಾಗುತ್ತಿದೆ. ಇದರಿಂದ ದೇಶಕ್ಕೆ ಗಂಡಾಂತರವಿದೆ ಇದು ಎಲ್ಲರಿಗೂ ತಿಳಿದ ವಿಷಯ. ಇದಕ್ಕೆಲೆಕ್ಕವಿಲ್ಲ. ಇಂಥ ಸಮಾಜಕಂಟಕರ ಕೈಗೆ ರಾಜ್ಯ ಸಿಕ್ಕುವ ಸಂಭವವಿದೆ. ಮುಂದಿನ ಚುನಾವಣೆಯಲ್ಲಿ ಇಂಥ ಸಮಾಜಕಂಟಕರು ಚುನಾಯಿತರಾಗಿ ಬಂದು ರಾಜ್ಯಾಳಿತದ ನಡೆಸಬಹುದು. ಅವರ ಸಹಾಯದಿಂದ ಕೆಲವರು ಮುಂದೆ ಬರುತ್ತಿದ್ದಾರೆ. ಹಾಗಿರು ವಾಗ ಮುಖ್ಯಮಂತ್ರಿಗಳು ದೆಹಲಿ, ಬೊಂಬಾಯಿ ಮುಂತಾದ ಕಡೆಗಳಿಗೆ ಹೋದಾಗ ಸಿಕ್ಕುತ್ತಿಲ್ಲ ವೆಂದು ಹೇಳುತ್ತಾರೆ. ಪಾನನಿರೋಧದ ವಿಷಯದಲ್ಲಿ ಪುನರ್ಪರಿಶೀಲನೆ ಮಾಡಬೇಕಾಗಿದೆ ಎಂದು ಮುಖ್ಯ ಮಂತ್ರಿಗಳು ಹೇಳಿ ಮನೆಗೆ ಬಂದಾಗ ಅದರ ವಿಚಾರವನ್ನೇ ಮರೆತುಬಿಡುತ್ತಾರೆ. ಹೀಗಾ ದರೆ ಪ್ರಯೋಜನವಿಲ್ಲ, ನಮ್ಮ ನಾಯಕರು ಧೈರ್ಯದಿಂದ ಮುಂದುವರೆಯಬೇಕು. ಸ್ವಾಮಿ, ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾದರೆ ಪಾನನಿರೋಧ ಜಾರಿಗೆ ಬಂದಮೇಲೆ ಹಿಂದೆ ಪಾನ ನಿರೋಧ ಜಾರಿಗೆ ಬಂದಮೇಲೆ ಹಿಂದೆ ಪಾನಮಾಡಲು ಅವಕಾಶವಿದ್ದಾಗ ಆ ಕೆಲಸದಲ್ಲಿ ತೊಡಗಿ ಅದನ್ನೇ ನೆಚ್ಚಿಕೊಂಡಿದ್ದ ಜನಾಂಗಕ್ಕೆ ಬಹಳ ತೊಂದರೆಯಾಗಿದೆ. ಪಾನನಿರೋಧದಿಂದ ಸಂತ್ರಸ್ತ ರಾದವರಿಗೆ ಸರ್ಕಾರ ಸರಿಯಾದ ನೆರವನ್ನೇನೂ ಕೊಟ್ಟಿರುವುದಿಲ್ಲ. ಕುಲಕಸುಬಾಗಿಟ್ಟುಕೊಂಡಿದ್ದ ವರು ಇಂದು ಜೀವನ ಮಾಡಲು ಬೇರೆ ಮಾರ್ಗವಿಲ್ಲದೆ ನಿರ್ಗತಿಕರಾಗಿದ್ದಾರೆ. ಅವರಿಗೆ ಯಾವ ಸಹಾಯವೂ ಮಾಡಿಲ್ಲ. ಅದೇ ಹೋದವರ್ಷ ಬಂಗಾರದ ಕಂಟ್ರೋಲ್ ಬಂದಾಗ ಒಂದು ಸಮಿತಿ ಯನ್ನು ಮಾಡಿ ಅದರಿಂದ ತೊಂದರೆ ಗೊಳಗಾದ ಅಕ್ಕಸಾಲಿಗರಿಗೆ ಬೇಕಾದ ಸೌಲತ್ತನ್ನು ಕೊಟ್ಟರು, ಭೂಮಿಯನ್ನು ಹಂಚಿದರು, ತಾಂತ್ರಿಕ ಕೆಲಸ ಕೊಟ್ಟರು. ಆದೇ ಪಾನನಿರೋಧದಿಂದ ಸಂತ್ರಸ್ತರಾದವರಿಗೆ ಯಾವ ಪರಿಹಾರವನ್ನೂ ಒದಗಿಸಿರುವುದಿಲ್ಲ. ಪ್ರತಿಯೊಬ್ಬರಿಗೂ ತೊಂದರೆ ಗೊಳಗಾದಾಗ ನೆರವು ನೀಡಬೇಕಾದ್ದು ಅವಶ್ಯಕ, ಕೆಲವರಿಗೆ ನೀಡಿರುವುದು ಸಂತೋಷಕರ. ಹಾಗೆ ಯೇ ಪಾನನಿರೋಧದಿಂದ ಸಂತ್ರಸ್ತರಾದವರಿಗೂ ಕೂಡ ಯಾವರೀತಿ ಸಹಾಯ ನೀಡಬೇಕೆಂಬುದನ್ನು ಯೋಚಿಸಬೇಕು. ಅವರು ನಿರ್ಗತಿಕರಾಗಿ ಅಲೆದಾಡುತ್ತಿದ್ದಾರೆ. ಅವರಿಗೆ ಹರಿಜನ, ಗಿರಿಜನಗಿರುವ ಸೌಲಭ್ಯ ಕೂಡ ಇಲ್ಲ. ಅವರನ್ನು ಕೇಳುವವರೇ ಇಲ್ಲ. ಈ ಸಂಬಂಧದಲ್ಲಿ ಒಂದು ಸೂಚನೆ ಮಾಡುವು ದೇನೆಂದರೆ ಇಂದು ಆ ಜನಾಂಗ ಎಚ್ಚೆತ್ತಿದೆ, ಸರ್ಕಾರದ ಮುಂದೆ ತಮ್ಮ ಬೇಡಿಕೆ ಇಡದಿದ್ದರೆ. ಚಳುವಳಿ ಮಾಡದಿದ್ದರೆ ಖಂಡಿತ ಸರ್ಕಾರ ತಮ್ಮ ಕಡೆ ನೋಡುವುದಿಲ್ಲ, ಕ್ರಾಂತಿ ಮಾಡಬೇಕು ಎಂಬ

(ಶ್ರೀ ದಯಾನಂದ ಆರ್ ಕಳ್ಳಿ)

ಮನೋಭಾವ ಅವರಲ್ಲಿ ಉಂಟಾಗಿದೆ. ಅದಕ್ಕೆ ಅವಕಾಶ ಕೊಡಬಾರದು, ಸಮತಾವಾದ ಜಾರಿಗೆ ತರಬೇಕೆಂದಿರುವಾಗ ಪ್ರತಿಯೊಬ್ಬರೂ ಬದುಕಬಾಳುವುದಕ್ಕೆ ನೆರವಾಗುವುದು ಸರ್ಕಾರದ ಕರ್ತವ್ಯ, ಅವರಿಗೆ ಸರಿಯಾದ ನೆರವು ನೀಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

ಶ್ರೀಮತಿ ಸಿದ್ದಮ್ಮ ಮೈಲಾರ (ಬ್ಯಾಡಗಿ).—ಸ್ವಾಮಿ, 1964—65 ನೆ ಸಾಲಿನ ಬಜೆಟ್ಟನ್ನು ಸ್ವಾಗತ ಮಾಡುತ್ತಾ ಕೆಲವಾರು ಸೂಚನೆಗಳನ್ನು ತಿಳಿಸಬೇಕು ಮತ್ತು ನಮ್ಮ ತಾಲ್ಲೂಕಿನ ಬಗ್ಗೆ ಆಗಬೇಕಾದ ಕೆಲವು ಕಾರ್ಯಗಳನ್ನು ತಿಳಿಸಬೇಕೆಂದು ನಿಂತಿದ್ದೇನೆ.

ಇವೊತ್ತು ಸರ್ಕಾರವನ್ನು ಬಯ್ಯುವವರು ಹೊರಗೂ ಹಾಗೂ ಒಳಗೂ ಬಯ್ಯುತ್ತಲೇ ಇದ್ದಾರೆ. ಹೀಗೇಕೆ ಬಯ್ಯುತ್ತಾರೋ ನನಗೆ ಕಾರಣ ತಿಳಿಯಲೊಲ್ಲದು. ಇದನ್ನು ಕಂಡು ಹಿಡಿಯಲು ಈಗ ಆಡಳಿತವನ್ನು ನಡೆಸುತ್ತಿರುವವರು ಮೊದಲು ತಮ್ಮ ನೀತಿ ಹಾಗೂ ನಮ್ಮ ನಡತೆ ಸರಿಯಾಗಿದೆಯೋ ಇಲ್ಲವೋ ಎನ್ನುವುದನ್ನು ಪ್ರತಿಯೊಬ್ಬ ಅಸೆಂಬ್ಲಿ ಮೆಂಬರೂ ಮೊದಲು ತಿಳಿದುಕೊಳ್ಳಬೇಕು. ಇವೊತ್ತು ನಮ್ಮ ಕೈಯಲ್ಲಿರುವ ಐದು ಬೆರಳುಗಳೂ ಒಂದೇ ಸಮನಾಗಿರುವುದಿಲ್ಲ. ಒಂದು ಮನೆಯಲ್ಲಿ ಹತ್ತು ಜನರಿರುತ್ತಾರೆ. ಆ ಹತ್ತು ಜನರಲ್ಲಿ ಹತ್ತು ವಿಚಾರಗಳಿರುತ್ತವೆ. ಇದೇ ಪ್ರಕಾರ ನಮ್ಮ ಸರ್ಕಾರದಲ್ಲಿಯೂ ಅನೇಕ ಕುಂದುಕೊರತೆಗಳು ಇವೆ. ಇದನ್ನು ನಾವು ಸರಿಯಾಗಿ ನೋಡಿದರೆ ಆಡಳಿತದಲ್ಲಿರುವವರು ಅವರಿಗಿರುವಷ್ಟು ಬುದ್ಧಿಯಿರುವ ಪ್ರಕಾರ ನಡೆಯುತ್ತಲೇ ಹೋಗುತ್ತಿದ್ದಾರೆ. ಬಯ್ಯಿಸಿಕೊಂಡು ಕೆಲಸ ಮಾಡುವುದೂ ಕಷ್ಟ. ಆದರೆ ಇವೊತ್ತು ಏನಾದರೂ ಕೆಲಸವಾಗಬೇಕಾದರೂ ಕೂಡ ನಾವೇ ಅವರ ಹತ್ತಿರ ಹೋಗಿ ಇವನು ನನ್ನ ಅಣ್ಣ, ಇದು ನನ್ನ ಕೆಲಸ, ಮಾಡಿಕೊಡಿ ಎಂದರೆ ಹೇಗೆ? ಈ ಕೆಲಸವನ್ನು ಬಿಡುವುದು ಎಂದು ಸರ್ಕಾರದಲ್ಲಿರುವವರು ಮಾಡಲು ಏನಾದರೂ ಒತ್ತಾಯ ಮಾಡುತ್ತಾರೆ. ಇದರಲ್ಲಿ ತಾವೇನು ಮಾಡಬೇಕು ಎಂದು ಅಸೆಂಬ್ಲಿ ಮೆಂಬರು ಹೇಳಿದ್ದರಿಂದ ಕೆಲಸ ಮಾಡಲೇಬೇಕು, ಹೇಳಿದ್ದನ್ನು ಕೇಳಲೇಬೇಕು. ಈ ಸರ್ಕಾರದಲ್ಲಿ ತಪ್ಪಿಲ್ಲ ಎಂದು ನಾನು ಹೇಳುವುದಿಲ್ಲ. ಇದೆ. ಆ ತಪ್ಪನ್ನು ತಿದ್ದಬೇಕಾದರೆ ನೀವು ಅದಕ್ಕೆ ಮಾರ್ಗ ತೋರಿಸಬೇಕು. ಮನೆಯಲ್ಲೂ ಕೂಡ ಇವೊತ್ತು ಒಂದು ಒಳ್ಳೆಯ ಕೆಲಸ ಎಂದು ಶುರುಮಾಡುತ್ತೇವೆ. ಆ ಕೆಲಸವನ್ನು ಮನೆಯಲ್ಲಿರುವ ಕೆಲವರು ಬೇಡ ಎನ್ನುತ್ತಾರೆ. ಒಳ್ಳೆಯ ಕೆಲಸ ಮಾಡುವ ಕಾಲಕ್ಕೆ ಬೇಡ ಎನ್ನುವುದು ಬೇಡ ಎಂದು ಕೆಲವರು ಮಾಡಲೇಬೇಕು ಎಂದು ಹೇಳುತ್ತಾರೆ. ಆ ಪ್ರಕಾರ ನಮ್ಮ ಸರ್ಕಾರದ ಗೋಳಾಗಿದೆ: ಇಲಾಖೆಯೊಳಗೆ ಲಂಚ ತೆಗೆದುಕೊಳ್ಳುತ್ತಾರೆ; ಶಿಸ್ತಿನಿಂದ ನಡೆಯುತ್ತಿಲ್ಲ. ಆಸ್ತಿ ಮಾಡಿಕೊಳ್ಳುತ್ತಾರೆ ಎನ್ನುತ್ತಾರೆ. ಇವೊತ್ತು ನಾನಿಲ್ಲಿ ಹೇಳುತ್ತೇನೆ. ಸರ್ಕಾರದಲ್ಲಿರುವ ಅಧಿಕಾರಿಗಳೇನೋ ಸತ್ಯದಿಂದ ತಮ್ಮ ವರಮಾನದಲ್ಲಿ ಉಳಿತಾಯಗೊಳಿಸಿ ಏನಾದರೂ ಆಸ್ತಿ ಮಾಡಿಬಿಟ್ಟರೆ ಅಂತಹವರು ಲಂಚತೆಗೆದುಕೊಂಡು ಆಸ್ತಿ ಮಾಡಿದ್ದಾರೆಂದು ಇಲ್ಲಿ ಹೇಳಿದರೆ ಸರ್ಕಾರ ಏನು ಮಾಡಬೇಕು ? ಅಂತಹ ಅಧಿಕಾರಿಯ ಪಗಾರವೇನು, ಅವನ ದಿನಚರಿ ವೆಚ್ಚ ಎಷ್ಟಿದೆ, ಅವನು ಲಂಚ ತೆಗೆದುಕೊಂಡಿದ್ದನೋ ಇಲ್ಲವೋ ಎನ್ನುವುದನ್ನೆಲ್ಲಾ ವಿಚಾರ ಮಾಡಬೇಕು, ಇದನ್ನು ಸರ್ಕಾರ ತನಿಖೆ ಮಾಡಬೇಕು. ಈಗ ನಾನು ನಮ್ಮ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇದು ಪ್ರಜಾರಾಜ್ಯ. ಪ್ರಜೆಗಳು ಹೇಳುವ ಕೂಗನ್ನು ಕಿವಿಯಲ್ಲಿ ಹಾಕಿಕೊಂಡು ಅದರ ಸಾರಾಸಾರವನ್ನು ವಿಚಾರಮಾಡಿ ತಕ್ಕ ತೀರ್ಮಾನವನ್ನು ತೆಗೆದುಕೊಂಡು ನಡೆಯುವುದೊಳ್ಳೆಯದು, ಎಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನನ್ನ ತಾಲ್ಲೂಕಿನ ಪರಿಸ್ಥಿತಿ ಚಿತ್ರವನ್ನು ಈ ಸಭೆಯ ಮುಂದಿಟ್ಟು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳಬೇಕೆಂದು ಆಸೆಮಾಡುತ್ತೇನೆ. ನಾಲ್ಕು ವರ್ಷಗಳಿಂದ ಸರಿಯಾದ ಮಳೆ ಬೆಳೆಯಿಲ್ಲದೆ ಅರ್ಧ ಬೆಳೆ ಕೂಡ ಜನಕ್ಕೆ ಸಿಗದೆ ಬಹಳ ನೊಂದಿದ್ದಾರೆ. ಈ ವರ್ಷವೂ ಅಷ್ಟು ಬೆಳೆಬಂದಿಲ್ಲ. ಈಗ ಇಲ್ಲಿ ಜನಕ್ಕೆ ಒಪ್ಪತ್ತು ಊಟ ಮಾಡಲಿಕ್ಕೆ ಕಾಳು ಸಿಗುತ್ತಿಲ್ಲ. ಅಕ್ಕಿ, ಜೋಳ ತೆಗೆದುಕೊಳ್ಳಬೇಕೆಂದು ನಮ್ಮ ತಾಲ್ಲೂಕಿನಲ್ಲಿ ಎಲ್ಲಿ ಕೇಳಿದರೂ ಸಿಗುತ್ತಿಲ್ಲ. ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದು ಬರಗಾಲವಿರುವ ಪ್ರತಿಯೊಂದು ಏರಿಯಾದಲ್ಲೂ ಸರ್ಕಾರದವರೇ ಒಂದೊಂದು ಕಾಳಿನ ಅಂಗಡಿಯನ್ನು ಶುರುಮಾಡಿ ಜನರಿಗೆ ಕಾಳು ಸಿಗುವಂತೆ ವ್ಯವಸ್ಥೆ ಮಾಡಬೇಕು.

ನೀರಾವರಿ ಸಲುವಾಗಿ, ಬಾವಿಯ ಸಲುವಾಗಿ ಸಾಲಗಳನ್ನು ಅವರ ಸ್ಥಿತಿಗನುಗುಣವಾಗಿ ಎಲ್ಲ ಸಹಾಯಗಳನ್ನು ಕೊಡುತ್ತಿದ್ದಾರೆ. ಆದರೆ ಅದು ಸರಿಯಾಗಿ ಹಂಚಿಕೆಯಾಗುತ್ತಿಲ್ಲ. ಏಕೆಂದರೆ ನಮ್ಮ ತಾಲ್ಲೂಕಿನಲ್ಲಿ ಯಾರು ಶ್ರೀಮಂತರಿದ್ದಾರೋ ಅವರಿಗೆ ಸಿಗುತ್ತವೆ. ಅವರುಗಳಿಗಾಗಿ

ಸಾವಿರಾರು ರೂಪಾಯಿಗಳಷ್ಟು ದುಡ್ಡು ಖರ್ಚಾಗುತ್ತಿದೆಯೇ ವಿನಾ ಬಡ ಜನರಿಗೆ ಸಿಗುತ್ತಿಲ್ಲ. ಪ್ರತಿಯೊಬ್ಬ ಬಡರೈತನ ಸ್ಥಿತಿಗನುಗುಣವಾಗಿ ಸಿಗುವಂತೆ ಮಾಡಬೇಕೆಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಪಿ. ಡಬ್ಲ್ಯು. ಡಿ. ಯ ಬಗ್ಗೆ ಹೇಳುವುದಾದರೆ, ಪ್ರತಿವರ್ಷವೂ ಎರಡು ಮೂರು ರಸ್ತೆಗಳಾಗಬೇಕೆಂದು ಇಲ್ಲಿ ಹೇಳುತ್ತಿದ್ದರೂ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಬೇರೆ ಕಡೆಗೆ ಎಷ್ಟೋ ರಸ್ತೆಗಳನ್ನು ಈಗಾಗಲೇ ಮಾಡುತ್ತಿದ್ದಾರೆ. ಈ ಸಾರಿಯಾದರೂ ನಮ್ಮ ಭಾಗ ಬರಗಾಲಕ್ಕೆ ಆಗಾಗ್ಗೆ ಸಿಗುತ್ತಿರುವುದರಿಂದ ಇಲ್ಲಿನ ಜನಕ್ಕೆ ಕೆಲಸಗಳು ಸಿಗಲನುಕೂಲವಾಗುವಂತೆ 'ರಿಲೀಫ್ ವರ್ಕ್ಸ್' ಗಳನ್ನು ತೆಗೆದುಕೊಂಡು ಷುರು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ರೈತರಿಗೆ ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾಗಿರುವ ಬೀಜಗಳು ಮತ್ತು ಔಷಧಿಗಳು ಇದು ಸಿಗುತ್ತಿಲ್ಲ ನಿಜ. ಇದನ್ನು ಯಾರಲ್ಲಿ ಕೇಳಬೇಕೋ ತಿಳಿಯಲೊಲ್ಲದು. ತಹಶೀಲುದಾರರನ್ನೋ, ಬಿ.ಡಿ.ಓ. ರವರನ್ನೋ ಅಥವಾ ಕಲೆಕ್ಟರನ್ನೋ ಯಾರನ್ನು ಕೇಳಬೇಕೋ ಯಾವುದೂ ಗೊತ್ತಾಗುತ್ತಿಲ್ಲ. ಇದಕ್ಕಾಗಿ ರೈತರು ಪರದಾಟ ಪಡಬೇಕಾಗುತ್ತದೆ. ಮಳೆಗಾಲಕ್ಕೆ ಮುಂಚೆ ಬಿತ್ತನೆ ಮಾಡಬೇಕು. ಮಳೆಗಾಲ ಅಷ್ಟರಲ್ಲಿ ಹೋದರೆ ಬೀಜ ಸಿಗದಿದ್ದರೆ ಇವರೇನು ಮಾಡಬೇಕು ಇದಕ್ಕಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಸೊಸೈಟಿಗಳನ್ನೋ ಅಥವ ಒಂದೊಂದು ಹಳ್ಳಿಯಲ್ಲಿ ಒಂದೊಂದು ಸೊಸೈಟಿಯನ್ನೋ ಮಾಡಿ ಅದರ ಮೂಲಕ ಒಳ್ಳೆಯ ಬಿತ್ತನೆ ಬೀಜ ದೊರಕುವ ವ್ಯವಸ್ಥೆಯನ್ನು ಸರಿಯಾಗಿ ಮಾಡಿ ಎಲ್ಲರಿಗೂ ಸಿಗುವಂತೆ ಮಾಡಬೇಕು, ಎಂದು ಆಸೆ ಮಾಡುತ್ತೇನೆ.

ಹರಿಜನರ ಸಲುವಾಗಿ ಬೇಕಾದಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ನಮ್ಮ ಮಾನ್ಯ ಸದಸ್ಯೆಯರಾದ ಚಂಪಾಬಾಯಿಯವರು ಹೇಳಿದಂತೆ ಇಷ್ಟು ವರ್ಷಗಳಾದರೂ 'ನಮ್ಮ ಈ ಜನಕ್ಕೆ ಸುಧಾರಣೆ ಮಾಡಲಿಕ್ಕೆ ಆಗಲಿಲ್ಲ, ಇಷ್ಟಾದರೂ ಏನೂ ಆಗದೇ ಇರುವುದರಿಂದ 'ನಮ್ಮ ಹರಿಜನ ಬಾಂಧವರಲ್ಲಿ ನಾನೂ ವಿನಂತಿ ಮಾಡಿಕೊಳ್ಳುವುದು ಹರಿಜನರ ಮುಂದಾಳುಗಳು ಎಂದು ಯಾರಿದ್ದಾರೋ ಪ್ರತಿಯೊಬ್ಬರೂ 'ತಮ್ಮ ದಿನದಲ್ಲಿ ಎರಡು ತಾಸು ಹರಿಜನರಿಗಾಗಿ ಸೇವೆ ಸಲ್ಲಿಸಬೇಕು.' ಹಾಗೆ ಮಾಡಿದರೆ ಹರಿಜನರ ಉದ್ಧಾರವಾಗಬಹುದು. ಹಾಗಿಲ್ಲದೆ ಬಾಯಲ್ಲಿ ಉದ್ಧಾರ ಮಾಡುತ್ತೇವೆಂದು ಹೇಳಿದರೆ ಅವರನ್ನು ಮುಂದಕ್ಕೆ ತರುವುದು ಸಾಧ್ಯವಿಲ್ಲ ಎಂದು ನಾನಿಲ್ಲಿ ತಿಳಿಯಬಯಸುತ್ತೇನೆ.

ನಮ್ಮ ಹಣಕಾಸಿನ ಸಚಿವರಾದ ಮಾನ್ಯ ಜತ್ತಿಯವರಿಗೆ ಬೆಳಗಾಂ ಜಿಲ್ಲೆ ಬರಗಾಲಕ್ಕೆ ಸಿಕ್ಕಿರುವುದು ತಿಳಿದಿದೆ. ಅಲ್ಲಿನ ಜನರಿಗೆ 'ಸ್ಕೇರ್ಸಿಟಿ' ಕಲಸಗಳನ್ನು ತೆಗೆದುಕೊಂಡು ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ಸೂಚನೆ ಜನರ ನಿಂದೆಗೆ ಒಳಗಾಗದಂತೆ ನಮ್ಮ ಸರ್ಕಾರದವರು ಪ್ರಜೆಗಳ ಕೂಗನ್ನು ಕೇಳಿ ಅವರಿಗೆ ಅನುಕೂಲ ಮಾಡಿಕೊಡುತ್ತಾರೆಂದು ಆಸೆಮಾಡಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸುತ್ತೇನೆ.

†Sri S. M. KRISHNA (Maddur).—Sir, I am reminded of a saying by Disreily, who said that there are three categories of lies, the lie, the black lie and the statistics. The Budget proposals of Sri Jatti for 1964-65 contains all the three categories, Sir. The Government has truly reflected its *status quo* mentality in the budget proposals. There are no innovations as such. There are a couple of imitations—imitations of ideas, from either Madras or Maharashtra Governments. The Government is trying to play a trick on the people of Mysore. It was said that it was a surplus budget, but when we go deep into the proposals as such, it is plain as daylight that by no stretch of imagination can this be called a surplus budget in the real sense of the term. The Government is somehow trying to hoodwink the people and there are enough reasons for the people of Mysore to get perturbed over the State of economy of the Mysore State. Either the Government is not coming out with the whole truth and it has raised a confusion over figures, percentages and what not. I would like to draw the attention of the Hon'ble Finance

(SRI S. M. KRISHNA)

Minister to the Governor's Address in which the Governor makes a reference to the price situation in the State. There it is said :

> "It is gratifying to note that the prices of foodgrains have generally remained under check and there has been no abnormal increase in the case of food-stuffs".

Coming to the Budget speech of Mr. Jatti, he also makes a reference to the price situation and says there has been a slight increase.

SRI B. D. JATTI.—In the beginning they were coming down, but again they were going up.

SRI S. M. KRISHNA.—Sir, by now all of us know and I hope the Government also, that Bangalore City has the sole distinction of being the costliest city in India ! Does it bring credit to the Government ? Why is it that the prices are soaring so high in Mysore State and particularly in Bangalore ? What has the Government done to control the soaring prices in Bangalore City ? So it raised a clear doubt in our mind as to how far the Government has been able to appreciate the problems involving this price situation in the State, and the meagre rise of the dearness allowance for the lowly paid employees. Sir, we have got to be realistic in assessing the needs of the lowly paid employees and even the low income-group people in this State are the worst sufferers under Sri Jatti. Last year Sir, I made a reference to the *per capita* income and again I have got to make a reference to the *per capita* income. Last year it was said, at 1957-58 prices the per capita income of Mysore State was 289 or something like that. This year the Finance Minister quotes the *per capita* income and he calculates the *per capita* according to current prices. I just cannot understand the logic of the situation : why is it in 1963-64 you calculate the *per capita* based on 1957-58 and why is it in 1964-65 you calculate on the current prices ? Thereby you are not giving a clear picture of the *per capiat* income. Taking your figures of the all-India average is 330. At current prices, the Mysore *per capita* income would be just 290. When are you going to catch up with the all-India average ? This is a very pertinent question which the Finance Minister will have to answer. The gap is widening and the gap was less last year. Why is it ? There is something wrong with the way in which the State Government is conducting its activities. Otherwise, it will have to be reflected in the *per capita*. That is the measuring rod. This is the standard by which we judge the activities of the State Government. Simply juggling with figures will not lead the State anywhere.

Even with reference to food production, it can be said that we have gone back to the level of 1959. There has not been any perceptible increase in our food production. What was declared in 1961-62 and 1962-63 and the next year, we go back to 1959 level of food production.

This is indeed a very sad commentary on your performance even on the agricultural front. I wish I had a little more time to go into this.

About the Public Debt system, well it is an accepted principle of sound economics that it will be necessary for the Government to raise certain loans in order to invest in certain productive ventures. The Mysore Government unfortunately has got a big debt position. It has been one of the biggest borrowers of the land. We owe the Central Government monies to the tune of 129 crores. And the total public debt is 290 crores as given by the Finance Minister. We will have to find out what is the percentage of this money that has been utilised for productive ventures and what is the dead weight that is with the Government? When we go into details of even the public debt system of the Government, I am constrained to observe that much of the monies that we have borrowed has gone into certain areas from which we cannot expect certain economic returns and as a student of economics, one does not fail to understand that this is not a sound policy that can be pursued by the Government.

Sir, in this connection, I would like to point out the report of the Finance Commission. I remember sometime ago that a statement was made that all projects which will be over 10 crores, there, is a request that the Central Government may take over.

Sri B. D. JATTI.—It may be financed.

Sri S. M. KRISHNA.—Now, I do not know how far it is practicable. The State Government is mainly responsible for all the projects that are undertaken by them and naturally we will have to look to the Centre for financial assistance. The Third Finance Commission presided over by Mr. Chanda, in its report makes a very pertinent observation with reference to the Central Assistance to take up river valley projects and other projects undertaken by the State Governments. I believe even the World Bank, the U.S.A. and various other foreign Governments, when they give loans to India, they have accepted this principle and that is to fix some sort of a moratorium on interest. Right now the practice that is prevailing in our country, no sooner the Central Government gives us the financial assistance by way of loan to State Government interest calculation starts right from the day when the monies are drawn. And if the recommendations of the Finance Commission were to be stressed and impressed upon the Central Government, and if they accept, then interest starts accruing after ten years or after 12 years.

Sri B. D. JATTI.—After the production of the project begins.

Sri S. M. KRISHNA.—If it is Sharavathi, then probably after all the units are commissioned. So this would be a very welcome arrangement which the State Government will do well to impress on the Central Government. I am sure the Finance Minister is well aware of the practicality of this solution and in the next Finance Ministers'

(SRI S. M. KRISHNA)

conference, he can impress on the Central Government regarding this matter.

Sri B. D. JATTI.—With regard to what my friend has just suggested, I have discussed it in the Last Finance Ministers' Conference. We have stressed it and we are stressing it further also.

Sri S. M. KRISHNA.—Even in may last budget speech, I did make mention about the gap that is going to be with reference to our plan commitments. Last year, I drew the attention of the Finance Minister that there would be a clear deficit of Rs. 60 crores and it has been partly conceded by the Finance Minister when he says that we would have to find resources to fulfil our plan commitments. I have said before and I say it again that the plans that have been drawn by the Government of Mysore and the resources that have been mentioned in the Five-Year Plan, the way we are going to fulfil our financial commitments, it was unrealistic.

Sri B. D. JATTI.—It was not unrealistic because the Government of Mysore committed to have Rs. 42 crores in a period of five years, but we have been told to tax and get additional income of Rs. 8½ crores per year, but the difficulty is, we could not get from the beginning; one year was election year and in the second year change of ministry. Instead of Rs. 45 crores, we are in a position to produce Rs. 32 crores. But in our attempt in taxing, we have not failed. That should be taken into consideration by the Government of India.

Sri S. M. KRISHNA.—In your Five-Year Plan document you said that certain local bodies like municipalities owed certain moneys to Government. From that head you get Rs. 12 crores...

Sri B. D. JATTI.—We will not get that money.

Sri S. M. KRISHNA.—But still you say that in five-year plan you are going to allot this money for plan commitment.

Sri B. D. JATTI.—That is true, but if all the local bodies are keen and if all the legislators are interested in pressing them to pay, I am given the hope of getting the money, but I am sure all of us will not press them to pay the entire over-dues. That is my difficulty.

Sri S. M. KRISHNA.—Let us join in the hopes of my friend that it will be possible according to the money that they have loaned to the municipalities. A school to a village, adequate water facility and then an approach road—these are, in my humble view, the national minimum and after 17 years have we fulfilled that national minimum. There are hundreds of villages in Mysore State itself which do not have—my friend amends, thousands—which do not have an approach road, a school building, some drinking water facilities. So I think a Government which professes by socialism and which goes on amending its own function of

socialism every year according to its convenience, should undertake to fulfil this national minimum requirement of the people.

Coming to the general administration, I have to submit through you to this House that the Mysore administration has never been so hopeless as it is to-day. There is no grip in the administration. This administration, this Congress Government has created little *Samanths* in every district. In every district nothing moves without the concurrence of the little *Samanth*. The Samanth might be the white capped one. ಹಿಂದಿನ ಕಾಲದಲ್ಲಿ ಸಾಮಂತರಾಜರು ಎಂದು ಜಿಲ್ಲೆಗಳಲ್ಲಿ ಇರುತ್ತಿದ್ದರು. I was talking about the white caps. I found a very interesting definition of this white cap in the Chamber's Dictionary. Before I go into this definition, I would with great respect single out the Speaker's cap because this does not apply to the Speaker's white cap.

Mr. SPEAKER.—My cap will never go into a Dictionary. My cap is always on my head.

Sri S. M. KRISHNA.—I was pretty amused and it struck to me that it relates to the present day situation in our country as a whole. Here it says :

> "A member of a self-constituted vigilance committee who under the guise of purifying the morales of the community deal violently with persons of whom they disapprove."

Mr. SPEAKER.—That is how the British Government understood it.

Sri S. M. KRISHNA.—And how admirably the definition fits into many many of the members.

I will confine myself to one other point, that is regarding the State Government's policy of education. I again have to refer to the Education Minister. It is no pleasure for me to attack a particular Minister, but the State Government recently constituted a committee go into the fee structures of the two Universities. I reliably understand that Dr. Lakshmanaswami Mudaliar who was appointed Chairman of the Committee, has resigned. He has resigned because he did not see eye to eye with the policy of the State Government in appointing Dr. Srimali as Vice-Chancellor of the Mysore University. Do the Government deny this ? Anyway, that shows that educationists acknowledged as experts are not able to appreciate the Government's point of view. I fully sympathise with the Stat Government.

Mr. SPEAKER.—What has the Committee to do with the appointment of a Vice-Chancellor ? I am unable to understand the connection at all.

Sri S. M. KRISHNA.—It strengthens our accusations. It supports our grievances. It only highlights the deficiencies of the State Government.

Mr. SPEAKER.—All premises ; hypothetical. The best thing would be to write a letter to the gentleman concerned. The gentleman will give a reply. With that, he may come before the House.

Sri S. M. KRISHNA.—We will get an explanation very soon. I just did not want to wait. I wanted to put it to Sri Jatti who is all smiles. With these few words, without taking more time of this House, I close my speech.

5-00 P.M.

ಶ್ರೀಮತಿ ನಾಗಮ್ಮ (ಕಲ್ಮಲ).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಹಣಕಾಸಿನ ಸಚಿವರು ನಮ್ಮ ಮುಂದಿಟ್ಟಿರುವ ಬಡ್ಜೆಟ್ಟಿನ ಮೇಲೆ ನಾಲ್ಕೈದು ಮಾತುಗಳನ್ನು ಆಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದುವರೆಗೂ ನಮ್ಮ ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಸರ್ಕಾರದವರು ಹಣವನ್ನು ಕೊಟ್ಟಿಲ್ಲ. ಮೊದಲು 1961–62ನೇ ಇಸವಿಯಲ್ಲಿ ಹರಿಜನರು ಮನೆ ಕಟ್ಟಿಕೊಳ್ಳಲು ಒಂದು ಮನೆಗೆ 400 ರೂಪಾಯಿಗಳನ್ನು ಕೊಡುತ್ತಿದ್ದರು. ಇತ್ತೀಚೆಗೆ ಅದನ್ನು ಬಂದ್ ಮಾಡಿದರು. ಈಗ ಅವರಿಗೆ ಯಾವ ಹಣ ಸಹಾಯವನ್ನೂ ಕೊಡುತ್ತಿಲ್ಲ. ನಮ್ಮ ಸೋಷಿಯಲ್ ವೆಲ್‌ಫೇರ್ ಶಾಖೆಯ ಮಂತ್ರಿಗಳನ್ನು ಇದುವರೆಗೂ ಯಾವುದನ್ನು ಕೇಳಿದರೂ ದುಡ್ಡು ಇಲ್ಲ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಅದು ಅಪಜಯದ ಮಾತು. ಆ ರೀತಿ ಅವರ ಬಾಯಲ್ಲಿ ಬರಬಾರದು ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸೋಷಿಯಲ್ ವೆಲ್‌ಫೇರ್ ಮಂತ್ರಿಗಳು ಯಾವ ಒಂದು ಕೆಲಸವನ್ನೂ ಮಾಡುವುದಿಲ್ಲ. ಯಾವ ಜಿಲ್ಲೆಯಲ್ಲಿ ಏನು ಏನು ಕೆಲಸವಾಗಿದೆ ಎಂದು ಯಾರನ್ನಾದರೂ ಕೇಳಿದರೆ ಪ್ರತಿಯೊಬ್ಬರೂ ನಮ್ಮ ಜಿಲ್ಲೆಯಲ್ಲಿ ಏನೂ ಕೆಲಸವಾಗಿಲ್ಲ ಎಂದು ಹೇಳುತ್ತಾರೆ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಸಂಬಂಧಪಟ್ಟಂತೆ ಇದುವರೆಗೂ ಯಾವ ಕೆಲಸವೂ ಆಗಿಲ್ಲ. ನಮ್ಮ ಭಾಗ ಬಹಳ ಹಿಂದುಳಿದ ಭಾಗವಾಗಿದೆ. ಅಲ್ಲಿ ವಿದ್ಯಾಭ್ಯಾಸ ಹೆಚ್ಚಾಗಿಲ್ಲ. ಅಲ್ಲಿ ಜನಗಳಿಗೆ ಅಷ್ಟು ತಿಳುವಳಿಕೆ ಇಲ್ಲ, ಬಹಳ ಬಡತನದ ದೇಶ. ಮಂತ್ರಿಗಳೊಬ್ಬರೂ ಅಲ್ಲಿನ ಅಭಿವೃದ್ಧಿಯ ಕಡೆ ಗಮನ ಕೊಡುತ್ತಿಲ್ಲ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಅನೇಕ ಕಡೆ ಶಾಲಾ ಕಟ್ಟಡಗಳಿಲ್ಲ. ನಾವು ಹೇಳಬೇಕಾದರೆ ನಮ್ಮ ಪಬ್ಲಿಕ್‌ವರ್ಕ್ಸ್ ಮಂತ್ರಿಗಳು ಮತ್ತು ಆರೋಗ್ಯಶಾಖೆಯ ಮಂತ್ರಿಗಳು ಹೇಳುತ್ತಾರೆ, ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಿದ್ದೇವೆ ಎಂದು. ಆಸ್ಪತ್ರೆಗಳಲ್ಲಿ ನರ್ಸುಗಳಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ನರ್ಸುಗಳು ಇದ್ದರೆ ಲೇಡಿ ಡಾಕ್ಟರು ಇರುವುದಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ನರ್ಸುಗಳೂ ಇಲ್ಲ, ಲೇಡಿ ಡಾಕ್ಟರೂ ಇಲ್ಲ. ಈ ರೀತಿಯಾಗಿ ಅಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿಲ್ಲ. ಆದ್ದರಿಂದ ನಮ್ಮ ಆರೋಗ್ಯ ಮಂತ್ರಿಗಳು ಆ ಕಡೆ ಗಮನ ಕೊಟ್ಟು ಅಲ್ಲಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಅಲ್ಲಿ ಕೆಲಸ ಚೆನ್ನಾಗಿ ನಡೆಯುವಂತೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ರಾಯಚೂರಿನಲ್ಲಿ ಎಷ್ಟೋ ಹಣವನ್ನು ಖರ್ಚುಮಾಡಿ ಆಸ್ಪತ್ರೆಯನ್ನು ಕಟ್ಟಿಸಿದ್ದೀರಿ, ಅದರ ಮೇಲ್ಗಡೆ ಇನ್ನೊಂದು ಕಟ್ಟಡವನ್ನು ಕಟ್ಟಿಸಿದರೆ ಬಹಳ ಚೆನ್ನಾಗಿರುತ್ತದೆ ಎಂದು ನಾನು ಹೇಳುತ್ತೇನೆ. ಇದುವರೆಗೆ ನಮ್ಮ ಆರೋಗ್ಯ ಮಂತ್ರಿಗಳು ಯಾವ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದ್ದರೋ ಅದನ್ನು ಪೂರ್ತಿ ಕಟ್ಟಿಸಿ ಮುಗಿಸಿಕೊಡಬೇಕೆಂದು ನಾನು ಆರೋಗ್ಯಶಾಖೆಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ನಮ್ಮ ಹಣಕಾಸಿನ ಮಂತ್ರಿಗಳಿಗೆ ಎಲ್ಲಾ ದೃಷ್ಟಿಯಿಂದಲೂ ಕೂಡ ಸ್ವಲ್ಪ ಎಲ್ಲಾ ಕಡೆಗಳಲ್ಲೂ ಅವರ ದೃಷ್ಟಿ ಇರಬೇಕಾಗುತ್ತದೆ. ಅವರು ಎಲ್ಲಾ ಕಡೆಗಳಲ್ಲೂ ದೃಷ್ಟಿಯನ್ನು ಹಾಕಿದರೆ ಆಗ ಎಲ್ಲಾ ಕೆಲಸಕಾರ್ಯಗಳೂ ಆಗುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಒಂದು ಕಡೆ ದೃಷ್ಟಿ ಕಡಿಮೆ, ಇನ್ನೊಂದು ಕಡೆ ದೃಷ್ಟಿ ಹೆಚ್ಚು ಬಿದ್ದರೆ ಕೆಲಸಗಳು ಆಗುವುದಿಲ್ಲ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಸರ್ಕಾರದವರು ಹೌಸಿಂಗ್ ಸೊಸೈಟಿಯನ್ನು ಮಾಡಿ ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನು ಕೊಡುತ್ತೇವೆಂದು ಹೇಳಿದರು. ಆದರೆ ಇದುವರೆಗೂ ಅವರಿಗೆ ದುಡ್ಡನ್ನು ಕೊಟ್ಟಿಲ್ಲ. ಮೊದಲು ಒಂದು ಮನೆಗೆ 400 ರೂಪಾಯಿಗಳನ್ನು ಕೊಡುತ್ತಿದ್ದರು. ಅದನ್ನೂ ಬಂದ್ ಮಾಡಿದರು. ಆದರೆ ಅವರಿಗೆ ಮನೆ ಕಟ್ಟಿಕೊಳ್ಳಲು ಯಾವ ಸಹಾಯವನ್ನೂ ಸರ್ಕಾರದವರು ಮಾಡುತ್ತಿಲ್ಲ. ಮನೆಗಳನ್ನು ಕಟ್ಟಿಸುವುದಕ್ಕೋಸ್ಕರ 5 ಲಕ್ಷ 6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಆ ಹಣ ಯಾವ ಕಡೆಗೆ ಹೋಯಿತೋ ನನಗೆ ಗೊತ್ತಾಗಲಿಲ್ಲ. ಈಗ ಹೌಸಿಂಗ್ ಸೊಸೈಟಿ ಎಂದು ಮಾಡಿದ್ದಾರೆ. ಅದಕ್ಕೆ ರೊಕ್ಕವನ್ನು ಕೊಡುತ್ತಾರೆ. ಏನಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಆ ಕಡೆ ಗಮನ ಕೊಟ್ಟು ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ತೀವ್ರವಾಗಿ ಹಣವನ್ನು ಮಂಜೂರು ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಅರಣ್ಯಶಾಖೆಯ ಮಂತ್ರಿಗಳಲ್ಲಿ ಒಂದು ಪ್ರಾರ್ಥನೆಯನ್ನು ಮಾಡಿಕೊಳ್ಳಬೇಕಾಗಿದೆ. ಅದೇನೆಂದರೆ ಅರಣ್ಯಖಾತೆಗೆ ಸಂಬಂಧಪಟ್ಟ ಹಾಗೆ ಯಾವುದಾದರೂ ಜಮೀನು ಇದ್ದು ಅದನ್ನು ವ್ಯವಸಾಯಕ್ಕೆ ಕೊಡುವ ಪಕ್ಷದಲ್ಲಿ ಅಂಥಾ ಜಮೀನನ್ನು ಹರಿಜನರಿಗೆ ಕೊಡಬೇಕೆಂದು ನಾನು ನಮ್ಮ ಅರಣ್ಯ ಶಾಖಾ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ವಿದ್ಯಾಖಾತೆಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಏನೆಂದರೆ ನಮ್ಮ ರಾಯಚೂರು ಜಿಲ್ಲೆಯಲ್ಲಿ ಅನೇಕ ಕಡೆ ಪಾಠಶಾಲೆಗಳಿಲ್ಲ, ಅಲ್ಲಿಗೆ ಪಾಠಶಾಲೆಗಳನ್ನು ಮಂಜೂರು ಮಾಡಿಕೊಡಬೇಕು, ಮತ್ತು ರಾಯಚೂರಿನಲ್ಲಿ ಒಂದು ದೊಡ್ಡ ಶಾಲೆ ಇದೆ, ಅದರ ಹೆಸರು ಬಾಪೂಜಿ ಪಾಠಶಾಲೆ. ಅದಕ್ಕೆ ಬೇಕಾದ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ರಾಯಚೂರು ಜಿಲ್ಲೆಯಲ್ಲಿರತಕ್ಕ ಹರಿಜನರೆಲ್ಲರೂ ಬಡವರೇ ಇದ್ದಾರೆ. ಅದು ಬಹಳ ಹಿಂದುಳಿದ ಪ್ರದೇಶ. ಆದ್ದರಿಂದ ಹರಿಜನರು ಮುಂದಕ್ಕೆ ಬರಲು ಏನೇನು ಸೌಲಭ್ಯವನ್ನು ಒದಗಿಸಬೇಕೋ ಅದೆಲ್ಲವನ್ನೂ ಸರ್ಕಾರದವರು ಒದಗಿಸಬೇಕು, ಮತ್ತು ಆ ಪ್ರದೇಶದ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹಿಂದುಳಿದವರನ್ನೂ ಮತ್ತು ಹಿಂದುಳಿದ ಪ್ರದೇಶವನ್ನೂ ಮುಂದಕ್ಕೆ ತರಬೇಕೆಂದು ಬಾಯಲ್ಲಿ ಹೇಳಿದರೆ ಸಾಲದು, ಅದು ಆಗತಕ್ಕದ್ದಲ್ಲ. ಅವರಿಗೆ ಏನು ಸೌಲಭ್ಯವನ್ನು ಕೊಡಬೇಕೆಂಬುದನ್ನು ವಿಚಾರಮಾಡಿ ಅದನ್ನು ಕೊಟ್ಟು ಅವರು ಮುಂದಕ್ಕೆ ಬರುವಂತೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಸೀನಿಯಾರಿಟಿ ಲಿಸ್ಟನ್ನು ತಯಾರುಮಾಡುವುದು ಮತ್ತು ಪ್ರಮೋಷನ್ ಕೊಡುವ ಸಲುವಾಗಿ ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುವುದು ಏನೆಂದರೆ, ಪ್ರತಿಯೊಬ್ಬರಿಗೂ ಸೀನಿಯಾರಿಟಿಯ ಪ್ರಕಾರವೇ ಪ್ರಮೋಷನ್ ಕೊಡಬೇಕು. ಹಿಂದೆ ಇದ್ದವರನ್ನು ಮುಂದೆ ಹಾಕುವುದಾಗಲೀ ಮುಂದೆ ಇದ್ದವರನ್ನು ಹಿಂದೆ ಹಾಕುವುದಾಗಲೀ ಮಾಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ನಾನು ಎಲ್ಲಾ ಜನಗಳ ಪರವಾಗಿಯೂ ಕೇಳಿಕೊಳ್ಳುತ್ತೇನೆ. ಈ ಸೀನಿಯಾರಿಟಿ ವಿಷಯದಲ್ಲಿ ಯಾರಿಗೂ ಯಾವ ವಿಧವಾದ ಅನ್ಯಾಯ ಆಗದಂತೆ ಎಲ್ಲರಿಗೂ ಒಂದೇ ರೀತಿಯಾಗಿ ಹೆಚ್ಚಿನ ಗಮನ ಕೊಟ್ಟು ಅವರಿಗೆ ಕೊಡಬೇಕಾದ ಪ್ರಮೋಷನ್ ಮತ್ತು ಸಂಬಳ ಇತ್ಯಾದಿಗಳನ್ನು ಕೊಡಬೇಕೆಂದು ನಾನು ಕಳಕಳಿಯಿಂದ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಈಗ ಸರ್ಕಾರದ ನೌಕರರಿಗೆ ಕೊಡತಕ್ಕ ಸಂಬಳ ಸಾಕಾಗುವುದಿಲ್ಲ. ಆದ್ದರಿಂದ ಅವರಿಗೆ ದಯವಿಟ್ಟು ಸಂಬಳವನ್ನು ಜಾಸ್ತಿ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಂತೂ ಒಟ್ಟಿನಲ್ಲಿ ನಮ್ಮ ರಾಯಚೂರು ಜಿಲ್ಲೆ ಬಹಳ ಹಿಂದುಳಿದ ಪ್ರದೇಶ. ಆದ್ದರಿಂದ ಅದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕು. ನಮ್ಮ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳಲ್ಲಿ ಅನೇಕರು ಒಳ್ಳೆಯವರಿದ್ದಾರೆ ಅವರೆಲ್ಲರೂ ಸಹ ಜನತೆಗೆ ಅನೇಕ ರೀತಿಯಿಂದ ಸವಲತ್ತುಗಳನ್ನು ಒದಗಿಸಿಕೊಡುತ್ತಿದ್ದಾರೆ. ಅವರು ಏನೂ ಮಾಡುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ರೆವಿನ್ಯೂ ಮಂತ್ರಿಗಳು ಒಳ್ಳೆಯವರಿದ್ದಾರೆ. ಅವರೂ ಅನೇಕ ರೀತಿಯಿಂದ ಜನತೆಗೆ ಬೇಕಾದ ಅನುಕೂಲತೆಯನ್ನು ಒದಗಿಸಿಕೊಡುತ್ತಿದ್ದಾರೆ. ನಮ್ಮ ರಾಯಚೂರು ಜಿಲ್ಲೆಯಲ್ಲಿರತಕ್ಕ ಡೆಪ್ಯುಟಿ ಕಮೀಷನರು, ಇಂಜಿನಿಯರು, ತಹಶೀಲ್ದಾರರು ಎಲ್ಲರೂ ಒಳ್ಳೆಯವರು. ಅವರೆಲ್ಲರೂ ಸಹ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ.

ಇನ್ನು ನಮ್ಮ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳಲ್ಲಿ ಒಂದು ವಿಷಯವನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ನಮ್ಮ ರಾಯಚೂರು ಜಿಲ್ಲೆಯ ಮುನಿಸಿಪಾಲಿಟಿಗಳ ಕಡೆ ಸ್ವಲ್ಪ ಗಮನ ಕೊಡಬೇಕೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಹಣಕಾಸಿನ ಸಚಿವರಾದ ಶ್ರೀಮಾನ್ ಜತ್ತಿಯವರು ಅವರ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ ಈ ವರ್ಷದ ಬಡ್ಜೆಟ್ಟನ್ನು ಪೂರ್ತಿ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಮತ್ತು ಅವರ ಭಾಷಣದಲ್ಲಿ ಐಟಮ್ ನಂಬರ್ 83 ರಲ್ಲಿ "The expenditure involved by the introduction of the old-age pension scheme and grant of further relief to pensioners and the low-paid staff, is not provided for in the Budget. It will therefore be necessary to find out resources to meet the expenditure on the above accounts. I now commend the Budget Estimates for the consideration of the House ಎಂದು

(ಶ್ರೀ ಪಿ. ಎಂ. ದೇವ್)

ಹೇಳಿದ್ದಾರೆ. ಅದಕ್ಕೆ ವಿವರಣೆಯನ್ನು ಬಾಯಿಮಾತಿನಲ್ಲೇ ಹೇಳಿದ್ದಾರೆ. ನನಗೆ ಒಟ್ಟಿನಲ್ಲಿ ಅನಿಸುತ್ತದೆ. ನಾವು ಈ ಸಭೆಗೆ ಚುನಾಯಿತರಾಗಿ ಬಂದಮೇಲೆ ಇದು ಮೂರನೆಯ ಸಲದ ಬಡ್ಜೆಟ್ ಚರ್ಚೆ ನಡೆಯುತ್ತಿದೆ. ಈ ವರ್ಷದ ಬಡ್ಜೆಟ್ಟನ್ನು ನೋಡಿದರೆ ಇದು ತುಂಬಾ ನೀರಸವಾಗಿದೆ. ಏನೋ ಒಂದು ತರಹ ಇದೆ. ಈ ವರ್ಷ ಸರ್ಕಾರದವರು ಹಾಕಿರತಕ್ಕ ಕಾರ್ಯಕ್ರಮಗಳು ಅಷ್ಟು ಸಮಂಜಸವಾಗಿಲ್ಲ. ಈ ವರ್ಷ ಈ ಸಭೆಯಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ನೋಡಿದರೆ ಏನೋ ಒಂದು ತರಹ ಮಂಕು ಕವಿದಿದೆ ಎಂದು ಕಾಣುತ್ತದೆ.

ನಮ್ಮ ಮುಂದೆ ಇಟ್ಟಿರುವ ಬಡ್ಜೆಟ್ಟನ್ನು ವಿಶಾಲ ದೃಷ್ಟಿಯಿಂದ ನೋಡಿಲ್ಲವೆಂದು ನನಗೆ ಒಟ್ಟಿನಲ್ಲಿ ಕಾಣಿಸುತ್ತದೆ. ಹಣಕಾಸಿನ ಮಂತ್ರಿಗಳು ಎಂಟನೆಯ ಪ್ಯಾರಾದಲ್ಲಿ ಒಂದು ಮಾತನ್ನು ಹೇಳಿದ್ದಾರೆ.

> "Compared to 1961–62, the production of pig iron increased by 2.3 per cent, and the output of finished steel, by 0.6 per cent."

ಆದರೆ ಅಂಕಿ ಅಂಶಗಳನ್ನು ಕೊಟ್ಟಿರುವುದರಲ್ಲಿ ನೋಡಿದರೆ ಬಹಳ ಚೆನ್ನಾಗಿ ಗೊತ್ತಾಗುತ್ತದೆ ಬೇಸಿಕ್ ಇಂಡಸ್ಟ್ರೀಸ್‌ನಲ್ಲಿ ಓವರ್ ಆಲ್ ಪ್ರೊಡಕ್ಷನ್ ಕಡಿಮೆಯಾಗಿದೆ. ಬರೆಯುವುದರಲ್ಲಿ ಹೇಗೆ ಬರೆದರೂ ಪರವಾಯಿಲ್ಲ ಎನ್ನುವ ದೃಷ್ಟಿ ಇರುವಂತೆ ಕಂಡುಬರುತ್ತದೆ. ಈ ತರಹ ಬುದ್ಧಿ ಏಕೆ ಓಡಿತು ಎಂದು ನಾನು ನೇರವಾಗಿ ಯೋಚನೆ ಮಾಡಿದೆ. ಇವರು ಒಂದಾನೊಂದು ಕಾಲದಲ್ಲಿ ಒಂದು ಇಂಡಿಯನ್ ಸ್ಟೇಟಿನಲ್ಲಿ ದಿವಾನರಾಗಿದ್ದರು ಎಂದು ಕೇಳಿದ್ದೇನೆ. ಮೈಸೂರು ದೇಶವನ್ನು ಬಿಟ್ಟರೆ ಇತರ ಎಲ್ಲ ದೇಶೀಯ ಸಂಸ್ಥಾನಗಳೂ ಸ್ವಲ್ಪ ಹಿಂದೆ ಇದ್ದುವು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಅಂಥದ್ದರಲ್ಲಿ ಚಲಾವಣೆಗೆ ಬರಬೇಕಾದರೆ ಇಂಥ ವಸ್ತು ಬರಬೇಕು. ಆದ್ದರಿಂದ ಇಂಥ ಭಾಷೆಯನ್ನು ಬರೆದಿದ್ದಾರೋ ಏನೋ ಗೊತ್ತಿಲ್ಲ. ಅವರಿಗೆ ಸರಿಯಾಗಿ ನಿರೂಪಣೆ ಕೊಡುವುದಕ್ಕೆ ಬರುತ್ತದೆ.

ಹಣಕಾಸಿನ ಮಂತ್ರಿಗಳು 70ನೆ ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ:

> "So far as the State Plan is concerned, it may be seen that while the progress on the financial side has kept pace with the target, there have been shortfalls in physical targets in certain sectors."

ಹಣವೇನೋ ಖರ್ಚಾಯಿತು, ಕೆಲಸ ಮಾತ್ರ ಆಗಲಿಲ್ಲ ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಆ ಪ್ಯಾರಾ ಬಹಳ ದೊಡ್ಡದಾಗಿದೆ. ಅದರಲ್ಲಿ ಬಹಳ ಮುಖ್ಯವಾದ ಅಂಶವನ್ನು ಒಂದೊಂದೇ ಮಾತಿನಲ್ಲಿ ಹೇಳಿದ್ದಾರೆ. ನಾವು ಇಂಡಿಯಾ ದೇಶದ ಮಿಡ್ ಟರ್ಮ್ ಪ್ಲಾನಿಗೆ ಹೋಲಿಸಿ ನೋಡಿದರೆ ಒಂದು ಅಂಶ ಬಹಳ ಚೆನ್ನಾಗಿ ಗೊತ್ತಾಗುತ್ತದೆ. ಕೇಂದ್ರದಲ್ಲಿ ಸ್ಟೇಟ್ ಸೆಕ್ಟಾರಿನಲ್ಲಿ ಪ್ರೈವೇಟ್ ಸೆಕ್ಟಾರಿಗಿಂತ ಚೆನ್ನಾಗಿ ಪ್ರಗತಿ ಆಗಿದೆ, ಅದರಲ್ಲಿಯೂ ಬೇಸಿಕ್ ಇಂಡಸ್ಟ್ರೀಸ್‌ನಲ್ಲಿ. ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುವ ಕಾಲದಲ್ಲಿ ಆ ವಿಚಾರ ಬಂತು. ಇಲ್ಲಿ ಏನಾಗಿದೆ ಎಂದರೆ ಹಿಂದು ಮುಂದಾಗಿದೆ. ಅದನ್ನೇ ಹೋಲಿಕೆ ಮಾಡಿ ನೋಡುವಾಗ ಅಷ್ಟೋ ಇಷ್ಟೋ ಬೇಸಿಕ್ ಇಂಡಸ್ಟ್ರಿಯಲ್ ಸೆಕ್ಟಾರಿಗಿಂತ ಪಬ್ಲಿಕ್ ಸೆಕ್ಟಾರಿನಲ್ಲಿ ಜಾಸ್ತಿ ಅಭಿವೃದ್ಧಿಯಾಗಿದ್ದರೂ ಕೂಡ ನಾವು ತತ್ತರಿಸಿಹೋಗಿದ್ದೇವೆ. ಅಗ್ರಿಕಲ್ಚರಲ್ ಸೆಕ್ಟಾರಿನಲ್ಲಿ ಏನೂ ಚೆನ್ನಾಗಿ ಆಗಿಲ್ಲ ಎನ್ನುವ ಮಾತನ್ನು ಅವರೇ ಹೇಳುತ್ತಿದ್ದಾರೆ. ಇದರಲ್ಲಿ ಒಂದು ಅನ್ನಿಸುತ್ತದೆ. ಈವಾಗ ಬೇಸಿಗೆ ಬಂದು ಉತ್ತರದ ಗಡಿಯಲ್ಲಿ ನಿಜವಾಗಿಯೂ ಅಪಾಯಕಾರಕವಾದ ಸ್ಥಿತಿ ಬಂದಿದೆ; ಆದರ ಜೊತೆಗೆ ಕೆಲವು ನೀರಾವರಿ ವಿಚಾರಗಳಲ್ಲಿ ಕಂಬದಕಡ, ಹಾರಂಗಿ, ಹೇಮಾವತಿ ಮುಂತಾದ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕಾಗಿರುವುದು, ನಿರುದ್ಯೋಗದ ಸಮಸ್ಯೆ, ಕಮಿಟಿಗಳನ್ನು ಮಾಡುತ್ತಿರುವುದು ಇವನ್ನೆಲ್ಲ ನೋಡಿದರೆ ಒಂದೆರಡು ವಿಷಯಗಳು ಮನಸ್ಸಿಗೆ ಬರುತ್ತವೆ. ಈ ಪರಿಸ್ಥಿತಿ ಇಷ್ಟು ಗುರುತರವಾಗಿದೆ ಎನ್ನುವುದರ ಸರಿಯಾದ ಅರಿವು ಇಲ್ಲ ಎಂದು ಗೊತ್ತಾಗುತ್ತದೆ. ಇನ್ನೊಂದು ಮೊನ್ನೆ ವಿದ್ಯಾರ್ಥಿಗಳ ಮುಷ್ಕರವಾದಾಗ ಶ್ರೀ ಗೋಪಾಲ ಗೌಡರು ಮಾನ್ಯ ಮುಖ್ಯಮಂತ್ರಿಗಳನ್ನು ಕಂಡು ಮಾತನಾಡಿದಾಗ ಒಂದು ವಿಷಯ ಹೇಳಿದರು, ಒಂದು ಕಮಿಟಿ ಮಾಡಬೇಕೆಂದಿದ್ದೇವೆ ಎಂದು. ಯಾವ ಕಾರಣಕ್ಕಾಗಿ ಕಮಿಟಿಯನ್ನು

ಮಾಡಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ಇದಕ್ಕೆ ಒಂದು ಉದಾಹರಣೆಯಾಗಿ ಎಕಾನಮಿ ಅಂಡ್ ರಿಸೋರ್ಸಸ್ ಕಮಿಟಿಯನ್ನು ಹೇಳಬಹುದು ಎಂದು ಅವರು ಹೇಳಿದರು. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆ ಎಂದರೆ ಅದಕ್ಕೆ ಮುಖ್ಯವಾದ ಕಾರಣವಿಷ್ಟೆ. ನೀವು ಒಂದು ಪಕ್ಷಕ್ಕೆ ಸೇರಿದ್ದೀರಿ. ಆ ಪಕ್ಷದ ಧ್ಯೇಯದ ಹೆಸರಿನಲ್ಲಿ ಚುನಾವಣೆಗಳಲ್ಲಿ ಗೆದ್ದು ಬಂದಿದ್ದೀರಿ. ಆದರೆ ಆ ಧ್ಯೇಯದಲ್ಲಿ ನಿಮಗೆ ಅಚಲವಾದ ನಂಬಿಕೆ ಇದ್ದರೆ ಅದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡು ದೇಶದ ಗಂಡಾಂತರ ಸ್ಥಿತಿಯನ್ನು ಕಳೆಯುವುದಕ್ಕೆ ಪ್ರಯತ್ನ ಮಾಡುತ್ತೀರೋ ಇಲ್ಲವೋ ಎನ್ನುವುದು ಮುಖ್ಯವಾದ ಪ್ರಶ್ನೆ. ಈ ಒಂದು ಮಾತು ಬಂದಿದೆ.

ಮೈಸೂರು ದೇಶದ ಆರ್ಥಿಕ ಸ್ಥಿತಿ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದಕ್ಕೂ ನಮ್ಮ ಕೇಂದ್ರ ಸರ್ಕಾರದ ಆರ್ಥಿಕ ಸ್ಥಿತಿ ಯಾವ ಕಡೆಗೆ ಹೋಗುತ್ತಿದೆ ಎನ್ನುವುದಕ್ಕೂ ಖಂಡಿತ ಹೊಂದಾಣಿಕೆ ಇಲ್ಲ. ಇನ್ನೊಂದು ಯಾವುದೆಂದರೆ, ಉದ್ಯೋಗದ ಪರಿಸ್ಥಿತಿ (ಎಂಪ್ಲಾಯ್‌ಮೆಂಟ್ ಪೋಜಿಷನ್). ಈ ವಿಚಾರದಲ್ಲೇ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಏನೆಂದರೆ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಎಂದರೆ ಏನಾಗಬೇಕು ? ನಮ್ಮ ದೇಶದಲ್ಲಿ ಇವತ್ತಿನ ದಿವಸ ಎಷ್ಟು ಕೆಲಸ ಇರಬೇಕಾಗಿತ್ತು ಎಂದರೆ, ಜನ ಇಲ್ಲ, ಕೆಲಸ ಇದೆ ಎನ್ನುವ ಮಾತು ಹೊರಡಬೇಕಾಗಿತ್ತು. ಆದರೆ ಆ ಮಾತು ಸಂಪೂರ್ಣವಾಗಿ ಸೊನ್ನೆಯಾಗಿದೆ. ಅದಕ್ಕೆ ಬದಲಾಗಿ ನಿರುದ್ಯೋಗ ಸಮಸ್ಯೆಯನ್ನು ನಾವು ಇಲ್ಲಿ ನೋಡುತ್ತಿದ್ದೇವೆ.

ಇನ್ನೊಂದು ವಿಷಯವೇನೆಂದರೆ ಯಾವತ್ತಿಗೆ ಪಬ್ಲಿಕ್ ಸೆಕ್ಟಾರಿನಲ್ಲಿ ಕೆಲಸ ಜಾಸ್ತಿಯಾಗುತ್ತ ಹೋಗುತ್ತದೆ ಆವಾಗ ಮಾತ್ರ ನಿರುದ್ಯೋಗ ಸಮಸ್ಯೆಯನ್ನು ನಿರ್ಮೂಲ ಮಾಡುವುದಕ್ಕೆ ಸಾಧ್ಯ ಎನ್ನುವುದು ಸಿದ್ಧಾಂತವಾಗಿರುವ ಮಾತು. ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ಯಾರೂ ಕೆಲಸ ವನ್ನು ಮಾಡುವುದಿಲ್ಲವಾದ್ದರಿಂದ ನಾವೇ ಇಲಾಖೆಯಿಂದ ಕೆಲಸ ಮಾಡಿಸುತ್ತೇವೆ ಎಂದು ಇಲಾಖೆಯ ಅಧಿಕಾರಿಗಳು ಹೇಳಿದರು ಎಂಬುದಾಗಿ ನಮ್ಮ ತಾಲ್ಲೂಕಿನಲ್ಲಿ ಜನಗಳು ಮಾತನಾಡುವುದನ್ನು ನಾನು ಕೇಳಿದೆ. ಅದು ಎಷ್ಟು ನಿಜವೋ ಎಷ್ಟು ಸುಳ್ಳೋ ಗೊತ್ತಿಲ್ಲ ? ಆದರೆ ಇಲಾಖೆಯ ಅಧಿಕಾರಿಗಳೂ ಕೂಡ ಅವರು ಹೇಳಿದ್ದನ್ನು ಜಾರಿಗೆ ಕೊಡುತ್ತ ಇಲ್ಲ. ನಾನು ಅದೇ ವಿಚಾರವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ದೊಡ್ಡ ದೊಡ್ಡ ಇಂಜಿನಿಯರುಗಳನ್ನು ಮಾತನಾಡಿಸಿ ನೀವು ಇಲಾಖೆಯಿಂದ ಕೆಲಸ ಗಳನ್ನು ಏಕೆ ಶುರು ಮಾಡಬಾರದು ಎಂದು ಕೇಳಿದೆ. ಅದಕ್ಕೆ ಅವರು ನಮ್ಮ ದೇಶದಲ್ಲಿ ಇವತ್ತು ಎಷ್ಟು ಜನ ಇಂಜಿನಿಯರುಗಳಿದ್ದಾರೆಯೋ ಎಷ್ಟು ಜನ ಡಿಪ್ಲೊಮೊ ಹೋಲ್ಡರುಗಳಿದ್ದಾರೆಯೋ ಎಷ್ಟು ಜನ ನಿರುದ್ಯೋಗಿಗಳಿದ್ದಾರೆಯೋ ಅವರಿಗೆಲ್ಲ ಕೆಲಸ ಸಿಕ್ಕಿ ಇನ್ನೂ ಜನ ಕಡಮೆ ಬೀಳುತ್ತಾರೆ ಎನ್ನುವಂಥ ಮಾತನ್ನು ಹೇಳಿದರು. ಹಾಗೆ ಮಾಡುವುದರಿಂದ ಏನಾಗುತ್ತದೆ ಎಂದರೆ ಪ್ರತಿಫಲ ನಮಗೆ ತಕ್ಷಣ ಸಿಕ್ಕುವುದಕ್ಕೆ ಅನುಕೂಲವಾಗುತ್ತದೆಂದೂ ಹೇಳಿದರು. ಈ ಮಾತನ್ನು ನಾನು ಅನೇಕ ಸಲ ಹೇಳಿದ್ದೇನೆ. ವಿರೋಧ ಪಕ್ಷದ ನಾಯಕರೂ ಅನೇಕ ಸಲ ಹೇಳಿದ್ದಾರೆ. ಆದರೆ ಈ ರೀತಿ ಯಾವ ಕಾಲಕ್ಕೆ ಆಗುತ್ತದೆ ಎಂದು ನಾನು ಹೇಳಲಾರೆ. ಹಾಗೆ ಮಾಡದೆ ಇದ್ದರೆ ನಾವು ಸುಮ್ಮನೆ ಧ್ಯೇಯವನ್ನು ಹೇಳಿಕೊಂಡು, ಇಂಥ ಪಕ್ಷಕ್ಕೆ ಸೇರಿದ್ದೇವೆ ಎಂದು ಹೇಳಿಕೊಳ್ಳುವುದಾದರೆ ಅದು ಬೂಟಾಟಿಕೆಯಾಗುತ್ತದೆ. ಅದರಲ್ಲಿ ನಿಜವಾದ ತಿರುಳು ಕಂಡುಬರುವುದಿಲ್ಲ. ಇದರಿಂದ ದೇಶಕ್ಕೆ ಖಂಡಿತ ಬಹಳ ಹಾನಿಯಾಗುತ್ತದೆ.

[MR. DEPUTY SPEAKER in the Chair]

ಕೇಂದ್ರದಲ್ಲಿ ಒಂದು ಅರಿವು ಬಂದಿರುವುದು ಎಂದರೆ ವ್ಯವಸಾಯ ಅದಷ್ಟು ಬೇಗ ಅಭಿವೃದ್ಧಿಗೆ ಬರದೆ ಇದ್ದರೆ ಅದರಿಂದ ನಮ್ಮ ದೇಶದ ಪರಿಸ್ಥಿತಿ ಅಪಾಯಕಾರಕವಾಗಿರುತ್ತದೆ ಎಂಬುದನ್ನು ಒಪ್ಪಿಕೊಂಡಿರುವುದು. ಆ ದಿಶೆಯಲ್ಲಿ ನಾವು ಏನು ಮಾಡಿದ್ದೇವೆ ? ಈ ಅರಿವು ನಮ್ಮ ಸರ್ಕಾರಕ್ಕೆ ಸರಿಯಾಗಿದ್ದು ಏನು ಮಾಡುತ್ತಿದ್ದೇವೆ ಎಂದು ಯೋಚನೆ ಮಾಡೋಣ. ಫರ್ಟಿಲೈಸರ್ ಕೈಗಾರಿಕೆ ಗಳಿಗೆ ಪಬ್ಲಿಕ್ ಸೆಕ್ಟಾರಿನಲ್ಲಿ ಪ್ರಾರಂಭ ಮಾಡಲು ಆದ್ಯತೆಯನ್ನು ಕೊಡುತ್ತಿದ್ದೇವೆ. ಇಲಾಖೆಯಿಂದ ಕೆಲಸಕಾರ್ಯಗಳನ್ನು ಮಾಡುವುದರ ಜೊತೆಗೆ ಪಶ್ಚಿಮದ ಕಡೆ ಹರಿಯುವ ನದಿಗಳ ನೀರನ್ನು ಪೂರ್ವ ದಿಕ್ಕಿನಲ್ಲಿರುವ ಭಾಗಗಳಿಗೆ ತಿರುಗಿಸಿದರೆ ಅಲ್ಲಿ ಮಳೆ ಎಷ್ಟು ಬೀಳುತ್ತದೆಯೋ ಅದರ ಜೊತೆಗೆ ಇನ್ನೂ ಸ್ವಲ್ಪ ನೀರು ಜಾಸ್ತಿಯಾಗಿ ದೊರೆತು ಅದರಿಂದ ಹೆಚ್ಚು ಲಾಭ ಬರುವಹಾಗೆ ಆಗುತ್ತದೆ. ಅದಕ್ಕೆ ಬದಲಾಗಿ ಈಗ ಏನಾಗಿದೆ ಎಂದರೆ ವ್ಯವಸಾಯ ಮಾತ್ರ ಬಹಳ ನಿರಾಶಾದಾಯಕವಾಗಿದೆ. ಹೇಮಾವತಿ, ಹಾರಂಗಿ, ಕಂಬದಕಡ ಈ ಪ್ರಾಜೆಕ್ಟ್‌ಗಳ ವಿಚಾರದಲ್ಲಿ ನಮ್ಮ ದೇಶದಲ್ಲಿ ಬಹಳ ಚಳು ವಳಿ ನಡೆಯುತ್ತಿದೆ. ಆದರೂ ನಾನು ಒಂದು ಮಾತನ್ನು ಹೇಳುತ್ತೇನೆ. ನಮ್ಮ ದೇಶ ಹೇಗಿದೆ

(ಶ್ರೀ ವಿ. ಎಂ. ದೇವ್)

ಎಂದರೆ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ಹೀಗಿರಬೇಕಾದರೆ ಪಶ್ಚಿಮದಿಂದ ಪೂರ್ವಕ್ಕೆ ನೀರನ್ನು ತರುವುದಕ್ಕೆ ಸಾಧ್ಯ. ಆದರೂ ಕೂಡ ಪ್ರಾಜೆಕ್ಟ್‌ಗಳನ್ನು ಕಟ್ಟುವುದರಲ್ಲಿ ಆತುರವಿಲ್ಲ. ತಜ್ಞರು ಏನು ಬೇಕಾದರೂ ಹೇಳಲಿ, ನಿಮ್ಮ ಪಕ್ಷದಲ್ಲಿರುವ ಕೆಲವು ಜನರ ದಾಕ್ಷಿಣ್ಯಕ್ಕೆ ನೀವು ಒಳಗಾಗಿದ್ದೀರಿಯೇ ಹೊರತು ಕೆಲಸವನ್ನು ತೆಗೆದುಕೊಳ್ಳುವುದರ ಕಡೆ ಗಮನವನ್ನು ಕೊಡುತ್ತ ಇಲ್ಲ. ಕಟ್ಟೆಗಳನ್ನು ಕಟ್ಟುವ ಸ್ಥಳವನ್ನು ಸ್ಥಳಾಂತರಿಸಿದ್ದೀರಿ. ಇದರಿಂದ ಖಂಡಿತವಾಗಿ ದೇಶಕ್ಕೆ ಒಳ್ಳೆಯದಾಗುವುದಿಲ್ಲ.

ನಿಜವಾಗಿಯೂ ವ್ಯವಸಾಯ ನಮ್ಮ ದೇಶದಲ್ಲಿ ಮುಂದಕ್ಕೆ ಬರಬೇಕಾಗಿದ್ದರೆ ಯಾವ ದೇಶದಲ್ಲಿಯೇ ಆಗಲೀ ಮುಂದೆ ಬರಬೇಕಾಗಿದ್ದರೆ ಎರಡು ವಿಷಯ ಮುಖ್ಯ. ಒಂದು ನೀರಾವರಿ, ಇನ್ನೊಂದು ರಾಸಾಯನಿಕ ಗೊಬ್ಬರಗಳು. ಫರ್ಟಿಲೈಸರ್ ಕೈಗಾರಿಕೆಯನ್ನು ಪಬ್ಲಿಕ್ ಸೆಕ್ಟಾರಿನಲ್ಲಿ ಪ್ರಾರಂಭ ಮಾಡುವುದಕ್ಕೆ ಬಹಳ ತ್ವರಿತದಿಂದ ಕೆಲಸ ಮಾಡಬೇಕು, ಈ ಕಾರ್ಖಾನೆಗಳನ್ನು ಜಾಸ್ತಿ ಮಾಡಬೇಕು. ನೀರಾವರಿಯನ್ನು ಸಮಗ್ರವಾಗಿ ಪರಿಗಣಿಸಿ ಅದಕ್ಕೆ ತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. 'ಸೋಷಿಯಲಿಸಂ ಎನ್ನುವ ತತ್ವವನ್ನು ಆಚರಿಸುತ್ತೇವೆಂದು ಬಾಯಲ್ಲಿ ಮಾತ್ರ ಹೇಳುತ್ತೀರಿ. ಅದನ್ನು ಕಾರ್ಯದಲ್ಲಿ ತರಬೇಕು. ಹಾಗೆ ಮಾಡದೆ ಇದ್ದರೆ ನೈತಿಕವಾಗಿ ನೋಡಿದರೂ ಕೂಡ ಸರ್ಕಾರ ನಡೆಸುವುದಕ್ಕೆ ಹಣ ಎಲ್ಲಿಂದ ಬರುತ್ತದೆ? ನಮ್ಮ ದೇಶದ ಎಲ್ಲ ವರ್ಗದ ಜನರೂ ಕೂಡ ಕೊಟ್ಟ ತೆರಿಗೆ ನಿಮಗೆ ಬರುತ್ತದೆಯೇ ಹೊರತು ಇನ್ನು ಯಾವುದರಿಂದಲೂ ಬರುವುದಿಲ್ಲ. ಈ ಹಣವನ್ನು ತೆಗೆದುಕೊಂಡು ಖಾಸಗಿ ಜನಗಳಿಗೆ ಕೊಡುತ್ತೇವೆ ಎಂದರೆ ಅದು ನಿಮ್ಮಲ್ಲಿದ್ದ ಒಂದು ನಂಬಿಕೆಯನ್ನು, ನೀತಿಯನ್ನು ಜನತೆಯಲ್ಲಿ ಸಡಿಲಗೊಳಿಸಿದ ಹಾಗೆ ಆಗುತ್ತದೆ.

ಈ ಮಾತನ್ನು ತಾವು ಗಮನದಲ್ಲಿಟ್ಟುಕೊಂಡು ನಿಮ್ಮ ಗುರಿ ಒಂದು ಕಡೆ ಇರಬೇಕು. ಡೆಮೋಕ್ರ್ಯಾಟಿಕ್ ಸೋಷಿಯಲಿಸಂನ ವೈಶಿಷ್ಟ್ಯವೇನೆಂಬುದನ್ನು ಪಂಡಿತ ನೆಹರು ಅವರು ಹೇಳಿದ್ದಾರೆ.

ಉತ್ಪತ್ತಿ ಹೆಚ್ಚಿ ಆರ್ಥಿಕಾಭಿವೃದ್ಧಿ ಆಗದೇಯಿರುವುದು ಏನು ತೋರಿಸುತ್ತದೆ ಎಂದರೆ ಅಧಿಕಾರದಲ್ಲಿರುವವರು, ಆಡಳಿತ ನಡೆಸುತ್ತಿರುವವರು ಬರಿಯ ಮಾತನಾಡುತ್ತ ಸ್ವಾರ್ಥದಲ್ಲಿ ಮುಳುಗಿ ಕೊಟ್ಟ ಮಾತನ್ನು ಉಳಿಸಿಕೊಳ್ಳುವುದಿಲ್ಲ ಎಂಬುದು ಖಂಡಿತವಾಗಿ ಗೊತ್ತಾಗುತ್ತದೆ.

ಇನ್ನೊಂದು ವಿಚಾರ ಮೇಜರ್ ನೀರಾವರಿ ಯೋಜನೆಗಳಲ್ಲಿ ಎಲ್ಲ ಜಮೀನೂ ಒಂದೇ ಸಾರಿ ಅಚ್ಚುಗಟ್ಟಿಗೆ ಬಂದು ಬೆಳೆಯಾಗುವುದಿಲ್ಲವಾದುದರಿಂದ ಪ್ರತಿಫಲ ತಕ್ಷಣ ಬಂದಿಲ್ಲವೆಂದು ಹೇಳಿದರು. ಇದನ್ನು ಹೇಗೆ ಉತ್ತಮಗೊಳಿಸಬೇಕೆಂಬ ವಿಚಾರದಲ್ಲಿ ಒಂದು ಸಮಗ್ರವಾದ ಯೋಜನೆ ಸರಕಾರದಲ್ಲಿ. ರೈತ ಅಂತಹ ಕಡೆ ಹೋಗಿ ಬೇಸಾಯ ಮಾಡಬೇಕೆಂದರೆ ಕಷ್ಟ. ನೂರಾರು ಮೈಲಿ ಹೋಗಿ ಬೆಳೆಯುವುದಕ್ಕೆ ಸಾಧ್ಯ ಎಂದರೆ ಅವನಿಗೆ ದನಕರುಗಳಿರಬೇಕು, ವಾಸ ಮಾಡುವುದಕ್ಕೆ ಮನೆ ಬೇಕು. ಆದ ಕಾರಣ ಸರ್ಕಾರ ರೈತರಿಗೆ ಅಲ್ಲಿ ಒಕ್ಕಲಿರುವುದಕ್ಕೆ ಅನುಕೂಲ ಮಾಡಿ ಕೊಟ್ಟರೆ ಬೆಳೆಯಲು ಅನುಕೂಲವಾಗುತ್ತದೆ; ಆಗ ದೊಡ್ಡ ನೀರಾವರಿ ಯೋಜನೆಗಳಿಂದ ಬೇಗ ಸಾಕಷ್ಟು ಪ್ರತಿಫಲ ಬರುತ್ತದೆ. ಆದರೆ ಹಾಗೆ ಮಾಡಿಲ್ಲ—ದುರ್ವ್ಯವಹಾರವಾಗುತ್ತಿದೆ, ರೈತನಿಗೆ ಯಾವ ಆಧಾರವೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಯಾರದು ದುರ್ವ್ಯವಹಾರ?

ಶ್ರೀ ವಿ. ಎಂ. ದೇವ್.—ಆಡಳಿತ ಪಕ್ಷದ ದುರ್ವ್ಯವಹಾರ.

ಇನ್ನು ದೊಡ್ಡ ಕೈಗಾರಿಕೆಗಳ ವಿಚಾರವನ್ನು ಹೇಳುತ್ತೇನೆ. ಭದ್ರಾವತಿ ಕಾರ್ಖಾನೆಯ ಬಗ್ಗೆ ಸರಿಯಾದ ಅಂಕಿ ಅಂಶಗಳನ್ನು ಕೊಟ್ಟಿಲ್ಲ, ಸಿಮೆಂಟ್ ಮತ್ತು ಕಾಗದದ ಕಾರ್ಖಾನೆಯ ವಿಷಯವೂ ಹೀಗೆಯೇ. ಸಾರ್ವಜನಿಕ ಕ್ಷೇತ್ರದಲ್ಲಿ—ಎಂದರೆ ಪಬ್ಲಿಕ್ ಸೆಕ್ಟಾರಿನಲ್ಲಿ ದೊಡ್ಡ ಕೈಗಾರಿಕೆಗಳನ್ನು ಹೆಚ್ಚು ಮಾಡಿದ್ದರೆ ನಮಗೆ ಹೆಚ್ಚು ಲಾಭ ಬರುತ್ತಿತ್ತು. ಅದು ಬಿಟ್ಟು ತೆರಿಗೆ ಹಾಕುತ್ತೇವೆಂದು ಹೇಳಿ ತೆರಿಗೆ ಹಾಕಿ ವಂಚನೆ ಮಾಡಿದ್ದಾರೆ. ಎಲ್ಲವನ್ನೂ ನಾವೇ ನಡೆಸುತ್ತೇವೆಂದು ಯಾವ ದೇಶ ಹೇಳುತ್ತದೆಯೋ ಆ ದೇಶ ಪ್ರಾಮಾಣಿಕರನ್ನು ಕಡಿಮೆ ಮಾಡಿ ಅಪ್ರಾಮಾಣಿಕರನ್ನು ಹೆಚ್ಚು ಮಾಡುತ್ತೇವೆಂದು ಹೇಳತ್ತಾರೆ. ಅದೇನೇ ಇರಲಿ, ಸರ್ಕಾರದಲ್ಲಿ ಕೈಗಾರಿಕೆಗಳನ್ನು ಹೆಚ್ಚು ಮಾಡಿ ಅದರಿಂದ ಹೆಚ್ಚು ಹಣವನ್ನು ಸಂಪಾದನೆ ಮಾಡಿ ಪ್ರಾಮಾಣಿಕ ದೇಶವನ್ನು ಮಾಡಬೇಕು. ಅದು ಬಿಟ್ಟು ತೆರಿಗೆಗಳನ್ನೂ ಹಾಕುತ್ತೇವೆಂದು ಹೇಳಿ ತೆರಿಗೆಗಳನ್ನು ಹೆಚ್ಚು ಮಾಡುವುದರಲ್ಲಿ ಅವರ ಉದ್ದೇಶವೇನೆಂದು ತಿಳಿದು ಕೊಳ್ಳುವುದು ಕಷ್ಟವಾಗಿದೆ. ನಾನು ಹೇಳುತ್ತೇನೆ, ಸರಕಾರದ ಹಣದಲ್ಲಿ ಆದಷ್ಟು ಹೆಚ್ಚು ಕೈಗಾರಿಕೆಗಳನ್ನು ಪ್ರಾರಂಭ ಮಾಡಿ ಎಂದು. ನ್ಯಾಷನಲೈಸ್ ಮಾಡುವುದಕ್ಕೆ ಬದಲು ಅದಕ್ಕೆ ತೆರಿಗೆ, ಇದಕ್ಕೆ ತೆರಿಗೆ ಎಂದು ಹಾಕಿ ಜನರಿಂದ ಬೈಸಿಕೊಳ್ಳುತ್ತಾರೆ. ಅಲ್ಲದೆ ದೇಶದಲ್ಲಿ ಅಪ್ರಾಮಾಣಿ

ಕತೆಯನ್ನು ಹೆಚ್ಚಿಸುತ್ತಾರೆ. ದೇಶಕ್ಕೆ ಬಂದಿರುವ ಗಂಡಾಂತರ ಮತ್ತು ಜನರ ಕಷ್ಟ ಇವರಿಗೆ ಅರಿವಾದಂತೆ ಕಾಣುವುದಿಲ್ಲ. ಈ ದೃಷ್ಟಿಯಿಂದ ನಾನು ಈ ಬಡ್ಜೆಟ್ಟನ್ನು ಪರಿಶೀಲನೆ ಮಾಡಿರುವುದರಲ್ಲಿ ನನಗನಿಸುತ್ತದೆ, ಇವರಿಗೆ ರಾಜಕೀಯದಲ್ಲ ಸಧ್ಯದಲ್ಲಿ ಪರಿಪಕ್ವತೆ ಬರುತ್ತದೆ ಎಂಬ ಆಸೆ ತೋರಿಲ್ಲ. ಇನ್ನೂ ಶೈಶವಾವಸ್ಥೆಯಲ್ಲಿದ್ದಾರೆ, ಯೌವನಾವಸ್ಥೆಗೆ ಬರುತ್ತಾರೋ ಇಲ್ಲವೋ ಎನಿಸುತ್ತದೆ. ಆದರೂ ಒಂದೆರಡು ಆಶಾಕಿರಣಗಳಿವೆ. ಅಭ್ಯಾಸ ಬಲದಿಂದ ಹೀಗೆ ಅವರು ಮಾಡುತ್ತಿದ್ದಾರೆ. ಜಾಣತನದಿಂದ ಮಾಡುವುದಕ್ಕೆ ಸಾಧ್ಯವಿದೆ. ದೇಶವನ್ನು ಇನ್ನೂ ಅಭಿವೃದ್ಧಿ ಮಾಡಿ ಮುಂದೆ ತರಲೆಂದು ಆಶಿಸುತ್ತೇನೆ. ಈ ದೃಷ್ಟಿಯಿಂದ ನಾನು ಹೇಳುವುದಿಷ್ಟೇ. ಹೆಚ್ಚು ವೇಗದಲ್ಲಿ ಆರ್ಥಿಕಾಭಿವೃದ್ಧಿ ಸಾಧಿಸುತ್ತೇವೆಂಬ ಮಾತನ್ನು ಉಳಿಸಿಕೊಳ್ಳದಿದ್ದರೆ, ತೆರಿಗೆಯ ಹೊರೆಯನ್ನು ಕಡಿಮೆ ಮಾಡದಿದ್ದರೆ ರಾಷ್ಟ್ರದಲ್ಲಿ ಕಷ್ಟವಾಗುತ್ತದೆ. ರಾಷ್ಟ್ರದ ಅಪಾಯ ಕಾಲದಲ್ಲಿ ಎಲ್ಲರೂ ಸಹಕರಿಸುತ್ತಾರೆ. ಒಂದು ಸಮಿಯನ್ನು ನೇಮಕ ಮಾಡಬೇಕೆಂದು ಕಳಕಳಿಯಿಂದ ಕೇಳುತ್ತೇನೆ. ತಾತ್ವಿಕವಾಗಿ ಯಾವ ರೀತಿ ಮಾಡುವುದೆಂಬುದನ್ನು ಯೋಚಿಸಿ ನೋಡಿ ಮಾಡಲಿ. ಅವರ ತತ್ವದಲ್ಲಿ ಅವರಿಗೆ ನಿಜವಾದ ನಂಬಿಕೆ ಬರುವವರೆಗೆ ಏನೂ ಆಗುವುದಿಲ್ಲ; ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ಕುಳಿತುಕೊಳ್ಳುತ್ತೇನೆ.

Sri G. DUGGAPPA (Holalkere).—Mr. Speaker, Sir, I rise to support the Budget before the House and must congratulate the Finance Minister for his real ability to bring forth such a Budget. At the same time, I must also congratulate Mr. C. J. Muckannappa, who is not here at the moment, who was very sober in his speech this time because there were no personal attacks. I must also congratulate the Hon'ble the Leader of the Opposition. But one point which I would like to say is that there were mere criticisms and no constructive suggestions.

Speaking about the Budget, I should say that this is the best of the Budget. These are the times when we find a number of High schools coming up.

Sri B. L. GOWDA (Challakere).—At whose cost?

Sri G. DUGGAPPA.—At the cost of the exchequer. In the rural parts, we have been able to organise so many private High Schools. Sir, I must say there must be some reason why my friends on this side have made so much criticism. I also join with them but not to the extent they go but to the extent we can support by actual facts.

5-30 P.M.

Sri B. L. GOWDA.—to the extent your party permits.

Sri G. DUGGAPPA.—Whatever Party Government may be, things happen. But how do these things happen? We are not worried about the Chief Minister or any of the Ministers who are so good. Our Dr. Alva the Public Health Minister is such a good man. Now, he is too much worried. I am really very sorry because he is too good a man. Before becoming Minister, he was such a popular and kind and good man. Now, I am really sorry, he is so much worried.

Sri C. J. MUCKANNAPPA (Sira).—......and now he has become a woman; is it?

Sri G. DUGGAPPA.—Sir, I never interefered with him when he was speaking. He must listen with patience. But good as the Ministers and Chief Minister are, I am getting a little anxious about the local Chief

(SRI G. DUGGAPPA)

Ministers and super-Chief Ministers who have sprung up in many places and who are responsible for so much criticism. Confining myself to the Chitradurga district, our Chief Minister as such is a good man. We are not worried about him at all. He is mostly concerned with his work. But the local chief minister weildes so much influence over the eecutive officers at the district level, that there are such instances wherein orders were written in the office of some advocates and these order copies were written by the heuds of Revenue Department at the district level. An officer who was presiding over the transport authority has simply obeyed the orders of some of these local Chief Ministers and so he is reaping the benefits. That officer is now occupying a coveted-job and getting more emoluments in addition to usual pay and keeping his lien in the Revenue Department.

SRI K. P. REVANNA SIDDAPPA.—One clarification. Who are these local Chief Ministers and what are their pay and allowances?

SRI A. P. APPANNA.—Does it pertain only to your district or does it extend to the entire State?

SRI G. DUGGAPPA.—So far as my knowledge goes, I am telling of these activities in my district. If there are such agencies in other places, you are most welcome to expose your local chief ministers and their activities if they are in your District. I also request my other friends to similarly expose the chief ministers in their local areas. I am proud of my Government doing so many deeds. But at the same time, I must say with all the vehemence at my command, I must decry the activities of these local Chief Ministers who bring disgrace to our Government. I am proud of my Government, the Government constituted by my Party.

I told you that I would quote certain instances. In the Medical Department in Chitradurga, we have 2 NES blocks. The Government of India pattern health Centre was sanctioned to Secound Block. The Talk Board, the Deputy Commissioner of District, the District Health Officer, the Director of Public Health, the Division Commissioner Bangalore Division—all these five authorities have unanimously given the opinion that the Government of India pattern Health Centre sanctioned to Chitradurga District should be located in a particular place. One fine morning, one gentleman from my Taluk comes here, gives a representation to the Chief Minister and orders are issued without obtaining the opinion of this five local authorities who are responsible for the conduct of the Government of India Type Health Centre, and orders are issued much against the recorded opinion of these five authorities changing the location to somewhere else, just to please somebody. This is really very bad.

SRI K. NAGAPPA ALVA (Minister for Health).—It is not like that Sir. So much correspondence had taken place.

SRI G. DUGGAPPA.—If the Hon'ble Minister were to interfere at this stage, I want that the Minister should be armed with facts and figures which he can pleace on the Table of the House.

Sri K. NAGAPPA ALVA.—I only want to explain the position Sir, this kind of a rabid criticism is going on without any facts and it is not correct.

Sri G. DUGGAPPA.—I know the facts and I am responsible for my statements.

Sri K. NAGAPPA ALVA.—The Hon'ble Members criticism for the begnning of this speech is so rabid......

Sri ANNA RAO GANAMUKHI.—Every Member is required to speak from his seat. Now, the Health Minister is sitting somewhere else. He must go to his seat and then speak. The same rule I think applies equally to Members and Ministers.

Sri K. NAGAPPA ALVA.—I want to say only this much Sir, that the decision by the Chief Minister on the representation of some individual whoever it is, was not taken. Enough time was given to that. There was so much correspondence and the opinion of the people and others were taken. Then only that dseision was taken. Now the Hon'ble Member wants to make it appear as though there is something irregular...

Sri G. DUGGAPPA.—Sir, I must be very thankful to the Hon'ble Minister. He is right in saying that the opinion of so many people was taken. May I know whether the opinion of the authorities I mentioned namely of the Deputy Commissioner, the Taluk Board, the District Health Officer, the Director of Health, the Divisional Commisioner for Bangalore Division—I submit Sir, very humbly that they were definitely in favour of locating the Government of India Health Centre at the place selected namely Hireguntanur and not for shifting it to some other place.

That apart, I must congratulate our Education Department and the Hon'ble Minister in charge of the portfolio. He is responsible for the introduction of so many new things. I must say a good word whenever we find a good thing done by the Minister and give him the share of credit At the same time sir, I must say that one primary school teacher was transferred. Some gentlemen come to Bangalore and a representation is given: look here; I am the Patel of a certain village. There are two parties in that village and if this primary school teacher is there, he will prove inconvenient to me; may I request you Sir, kindly to see that this teacher is transferred? The D. P. I.—the poor man it is his duty to safeguard the interest of thousands of teachers working under him. But instructions go to him on this matter that he may be transferred. The representation given by the poor teacher is ignored. Seven teachers of a particular community who are all primary school teachers in my constituency have been transferred at this time of the year to some places far away as a measure of punishment.

I request Government through you to just hold an enquiry as to why such things are happening. Why I am bringing these things to the notice of the House is that such things should not happen in future. My friend Sri Veerendra Patil is here. He was good enough to select 5, 6, 7 miles of inter-village communication roads to be taken over by the

(SRI G. DUGGAPPA)

Public Works Department for maintenance. Alas! it was most unfortunate that not even an inch of mile of inter-village communications was taken over by the Public Works Department for maintenance in my constituency. He has promised and written to me a letter that in futnre Government would take some more miles, which is not a certainty because under the circumstances we see that Government may not be able to take any number of roads in the future, at least in the very near future.

Coming to the Social Welfare Department, the Minister who holds that portfolio is well known for her great service in the field of social work. I am seeing from my high school days that she has been rendering this service for the welfare of the Scheduled Castes and Scheduled Tribes and to our credit, she holds that portfolio. But the pity of it is, the officers tell me Sir, we have done so much of good work in this department that the plan provision made for the Third Five-Year Plan has been exhausted. That only shows how very active this department is and I must congratulate the Minister who holds that portfolio, but I must humbly submit that having done so, having done good work and having such a good record of service behind her, she must now quit the Cabinet and devote her full time and do more good work for the betterment of these classes of people.

Sri B. D. JATTI.—That is the result of your congratulation!

Sri G. DUGGAPPA.—It is because she will be able to do good work and better work, not being fettered by this officialdom. The Minister in the Cabinet, Mr. B. Rachiah is a very good friend of mine. The most unfortunate thing of it is that the man is there in the name of Scheduled Castes and Tribes; it is well known that he would not find a place in the Cabinet but for the fact that he belongs to the Scheduled Caste.

ಶ್ರೀ ಬಿ. ಭಾಸ್ಕರ ಶೆಟ್ಟಿ.—Point of order ಕಾನ್ಸ್ಟಿಟ್ಯೂಷನ್ ಪ್ರಕಾರ ಇದು ಜಾತ್ಯತೀತ ರಾಷ್ಟ್ರ. ಮಿನಿಸ್ಟರುಗಳನ್ನು ಜಾತಿ ಪ್ರಕಾರ ತೆಗೆದುಕೊಳ್ಳುತ್ತಾರೆ?

Sri G. DUGGAPPA.—What all the good work he has done in the name of community, caste and all these does not apply in the case of Scheduled Castes and Scheduled Tribes. This is not a question of castes. This is a problem of one-fifth of the population. A man who is in the Cabinet in the name of the Scheduled Castes and Tribes is not allowed to take the portfolio which deals with the problems of these people.

Sri K. NAGAPPA ALVA.—Without taking that portfolio he can do service.

Sri G. DUGGAPPA.—Only the wearer knows where the shoe pinches. I humbly submit that the person who is there to serve the interests of the people whom he represents must be allowed to do things over which he has bestowed his thought, at least to put into work while in office. Otherwise, he may have so many plans and schemes, but he cannot implement them. A person in office will be able to do something.

I request that he may be given that portforlio so that he may be able to implement the ideas which he has in mind. The members of the Scheduled Castes and Tribes are like a cow:

ಗೋವಿನ ಕಥೆಯಲ್ಲಿ ಹೇಳಿದಂತೆ:

ಖಂಡವಿದೆಕೋ ಮಾಂಸವಿದೆಕೋ ಚಂಡ ವ್ಯಾಘ್ರನೆ ನೀನಿದೆಲ್ಲವ।
ಉಂಡು ಸಂತಸದಿಂದಿರು ।

ಅಂದ ಹಾಗಾಗಿದೆ—ಗೋವಿನ ಕಥೆಯಲ್ಲಿರುವ ಗೋವಿನ ಹಾಗೆ ಇದ್ದೇವೆ.

In the same way, we are all at the mercy of the Government. What has happened to the 17 gazetted officers of these unfortunate Scheduled Castes and Scheduled Tribes. Now they have become?

ಹಸು ಕರುವಿಗೆ ಹೇಳಿದ ಹಾಗೆ:

ತಬ್ಬಲಿಯು ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಿತು ಕಂದನ.

That is the fate of the 17 officers. I thank you for the opportunity given to me to speak.

†ಶ್ರೀ ಬಿ. ಎಂ. ಪಾಟೀಲ್ (ತಿಕೋಟ).—ಮಾನ್ಯ ಸಭಾಪತಿಗಳೇ, 1964-65ನೆಯ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾನ್ಯ ಅರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿದ್ದನ್ನು ನಾನು ಅನುಮೋದಿಸಿ ಸ್ವಾಗತಿಸುತ್ತೇನೆ. ಅವರು ಉಳಿತಾಯ ಆಯವ್ಯಯ ಅಂದಾಜುಗಳನ್ನು ಈ ವರ್ಷ ಈ ಸಭೆಯ ಮುಂದೆ ಇರಿಸಿದ್ದಾರೆ. ಅದರ ಬಗ್ಗೆ ಅನೇಕ ಸದಸ್ಯರು ತಮ್ಮ ಅಭಿಪ್ರಾಯ ಮತ್ತು ತಮ್ಮ ವಾದವನ್ನು ಇಟ್ಟಿದ್ದಾರೆ. ಅದರಲ್ಲಿರುವ ಮುಖ್ಯ ಲಕ್ಷಣವನ್ನು ವೀಕ್ಷಿಸಿದಾಗ, ಮೊದಲನೆಯದಾಗಿ ಕಾಣುವುದು ವೃದ್ಧಾಪ್ಯ, ವಿಶಾಂತ್ರಿವೇತನ ಮತ್ತು ಕುಟುಂಬ ವಿಶ್ರಾಂತಿ ವೇತನ. ಅದೇ ರೀತಿ ತಿಂಗಳಿಗೆ 300 ರೂಪಾಯಿಗಿಂತ ಆದಾಯ ಕಡಿಮೆ ಇರುವ ಮತ್ತು 300 ರೂಪಾಯಿವರೆಗೆ ಆದಾಯವಿರುವ ನೌಕರರಿಗೆ ತುಟ್ಟಿಭತ್ಯ ಐದು ರೂಪಾಯಿ ಹೆಚ್ಚಿಗೆ ಕೊಡಬೇಕೆಂದು ತಮ್ಮ ಯೋಜನೆಯನ್ನು ಇಟ್ಟಿದ್ದಾರೆ. ಅದೇ ರೀತಿ 100 ರೂಪಾಯಿಗಿಂತ ಕಡಿಮೆ ಮತ್ತು 100 ರೂಪಾಯಿ ವಿಶ್ರಾಂತಿ ಪಡೆಯುವವರಿಗೆ ಐದು ರೂಪಾಯಿ ಹೆಚ್ಚಿಗೆ ತುಟ್ಟಿಭತ್ಯ ಕೊಡಬೇಕೆಂದು ಅಂದಾಜು ಮಾಡಿ ಈ ವರ್ಷದ ಬಡ್ಜೆಟ್ಟಿನಲ್ಲಿ ತೋರಿಸಿಕೊಟ್ಟಿದ್ದಾರೆ. ಇದೇ ರೀತಿಯಾಗಿ ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ಅನೇಕ ಅಡಚಣೆಗಳನ್ನು ಎದುರಿಸಬೇಕಾಗಿದ್ದರೂ ಸಹ, ಕಡಿಮೆ ಆದಾಯವಿರುವವರಿಗೆ, ವೇತನವಿರುವವರಿಗೆ ಸಹಾಯ ಮಾಡಲು ಸರಕಾರ ಮುಂದೆ ಬಂದುದನ್ನು ನಾವು ಅಭಿನಂದಿಸಬೇಕಾಗುತ್ತದೆ.

ಅದೇ ರೀತಿಯಾಗಿ, ಆಯವ್ಯಯ ಅಂದಾಜುಗಳ ಮೇಲೆ ಮಾತನಾಡುತ್ತಾ ಸರಕಾರದ ಧೋರಣೆಯನ್ನು ಅನೇಕರು ಎರಡು ವಿಧವಾಗಿ ಟೀಕೆ ಮಾಡಿದ್ದಾರೆ. ಈ ಆಯವ್ಯಯ ಅಂದಾಜನ್ನು ಸಿದ್ಧಪಡಿಸಿದ ಸರಕಾರ ಪ್ರಜಾಸತ್ತೆಯ ಧೋರಣೆಯನ್ನು ಬಿಟ್ಟು, ಬ್ರಿಟಿಷ್ ರಾಜಕಾರಣಿಗಳು ಯಾವ ಒಂದು ಧೋರಣೆಯನ್ನು ಇಟ್ಟುಕೊಂಡು ಮಾಡುತ್ತಿದ್ದರೊ, ಅದೇ ರೀತಿ ಸಿವಿಲ್ ಸರ್ವೆಂಟುಗಳು ತಯಾರು ಮಾಡಿದ ಅಂದಾಜಿನ ರೀತಿಯಲ್ಲಿರಬೇಕಾಗಿತ್ತು ಎಂಬ ವಾದವನ್ನು ಮುಂದೆ ಇಟ್ಟಿದ್ದಾರೆ.

ಸರ್ಕಾರದವರು ಸಾಕಾದಷ್ಟು ತೆರಿಗೆಗಳನ್ನು ಜನರ ಮೇಲೆ ಹೊರಿಸಿದ್ದಾರೆ. ಅದಕ್ಕನುಗುಣವಾಗಿ ಯಾವ ವಿಧವಾದ ಸರ್ವೀಸನ್ನು ಕೊಟ್ಟಿದ್ದಾರೆ ಎಂದು ನಮ್ಮ ಕೆಲವು ಮಾನ್ಯ ಸ್ನೇಹಿತರು ವಾದ ಮಾಡಿದರು. ಅವರು ಅಂಕಿ ಅಂಶಗಳನ್ನು ತೆಗೆದುಕೊಂಡು ನೋಡಿದರೆ ಅವರಿಗೇ ಗೊತ್ತಾಗುತ್ತದೆ. ರಾಜ್ಯದ ಆದಾಯ 56-57ರಲ್ಲಿ 489.18 ಕೋಟಿ ರೂಪಾಯಿ ಇದ್ದುದು 1960-61ರಲ್ಲಿ 670 ಕೋಟಿ ರೂಪಾಯಿಗಳಿಗೆ ಹೆಚ್ಚಾದುದು ಕಂಡುಬರುತ್ತದೆ. ಇದರ ಪ್ರಕಾರ ಒಟ್ಟು ವ್ಯಕ್ತಿಯ ಆದಾಯ 22.7 ಆಯಿತು. ಈ ಪ್ರಕಾರ ಮೂರು ಪಂಚವಾರ್ಷಿಕ ಯೋಜನೆಗಳನ್ನು ಮಾಡಿದ್ದರಿಂದ ಎಷ್ಟೋ ಪ್ರಗತಿಯಾಗಿದೆ ಎಂಬುದನ್ನು ಸ್ಪಷ್ಟವಾಗಿ ಕಾಣಬಹುದು. ನಮ್ಮ ಮಾನ್ಯ ಸ್ನೇಹಿ

(ಶ್ರೀ ಬಿ. ಎಂ. ಪಾಟೀಲ್)

ತರು ಆಹಾರ ಧಾನ್ಯದ ಪರಿಸ್ಥಿತಿಯ ವಿಷಯದಲ್ಲಿ ಅನೇಕ ಟೀಕೆಗಳನ್ನು ಮಾಡಿದ್ದಾರೆ, ಇದರ ಒಂದು ಅಂಕಿ ಅಂಶಗಳನ್ನು ನೋಡಿದ್ದೇ ಆದರೆ 1963-64ರ ಒಟ್ಟು ಉತ್ಪನ್ನ ಹೆಚ್ಚಾಗಿರುವುದು ಕಂಡು ಬರುತ್ತದೆ, ಅಕ್ಕಿ, ರಾಗಿ, ಗೋಧಿ, ಸಿಮೆಂಟು; ಕಾಗದ ಇವುಗಳೆಲ್ಲದರಲ್ಲೂ ಕೂಡ ಹೆಚ್ಚುವರಿ ಬಂದಿದೆ. ಇದೇ ಪ್ರಕಾರ ವೆಲ್‌ಫೇರ್ ಸ್ಟೇಟ್‌ನಲ್ಲಿ ಬಹಳ ಮುಖ್ಯವಾದ ಜನರಿಗೆ ಉದ್ಯೋಗವನ್ನು ಒದಗಿಸಿಕೊಡತಕ್ಕ ಕೆಲಸದಲ್ಲಿ ನಮ್ಮ ಸರ್ಕಾರ ಎಷ್ಟರಮಟ್ಟಿಗೆ ಮುಂದುವರಿದಿದೆ ಎಂಬುದನ್ನು ಹೇಳಬೇಕಾದರೆ 1961-62ರಲ್ಲಿ ಸುಮಾರು 29,474 ಸ್ಥಳಗಳಿಗೆ ಅಭ್ಯರ್ಥಿಗಳನ್ನು ಕರೆದಿದ್ದಕ್ಕೆ 23,070 ಜನಗಳಿಗೆ ಉದ್ಯೋಗಗಳನ್ನು ಒದಗಿಸಿಕೊಟ್ಟಿದ್ದಾರೆ. 1962-63ರಲ್ಲಿ 37,212 ಜನರು ಉದ್ಯೋಗವನ್ನು ಬೇಡಿದ್ದಕ್ಕೆ 24,348 ಜನರಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿದ್ದಾರೆ. ಈ ವಿಷಯದಲ್ಲೂ ಸಹ ಸರಕಾರದವರು ಸಾಕಾದಷ್ಟು ಕೆಲಸ ಮಾಡಿದ್ದಾರೆ ಎಂಬುದನ್ನು ಇದರಿಂದಲೇ ತಿಳಿದುಕೊಳ್ಳಬಹುದಾಗಿದೆ.

ಇನ್ನು ಆರೋಗ್ಯದ ಸಲುವಾಗಿ ಹೇಳುವುದಾದರೆ, ಸಿಡುಬು ನಿರ್ಮೂಲನ, ಮಲೇರಿಯಾ ನಿರ್ಮೂಲನ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಆರೋಗ್ಯ ಕೇಂದ್ರಗಳನ್ನು ಹೆಚ್ಚಾಗಿ ತೆಗೆದು ಜನರಿಗೆ ಬೇಕಾಗತಕ್ಕ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಟ್ಟಿದ್ದಾರೆ. ಈ ರಂಗದಲ್ಲಿ ನೂರಕ್ಕೆ ನೂರು ಅಲ್ಲದಿದ್ದರೂ ಕೂಡ ಪ್ರಗತಿ ಪಥದಲ್ಲಿ ಮುಂದುವರಿದಿದ್ದಾರೆ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಾಗುತ್ತದೆ.

ಇನ್ನು ಶಿಕ್ಷಣ ರಂಗದಲ್ಲಿ ಏನು ಸಾಧನೆಯಾಗಿದೆ ಎಂಬುದನ್ನು ಹೇಳಬೇಕಾದರೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಶಿಕ್ಷಣವನ್ನಾಗಿ ಮಾಡಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 100ಕ್ಕೆ 90 ಭಾಗ ಕಾರ್ಯಗತವಾಗಬೇಕೆಂದು ಗೊತ್ತು ಮಾಡಿರುವ ಸಮಯದಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷ ಮುಗಿಯುವುದರಲ್ಲಿ ನೂರಕ್ಕೆ 87 ಭಾಗ ಸಾಧಿಸುವುದರಲ್ಲಿ ಇದ್ದಾರೆ. ಉಳಿದ ಭಾಗವನ್ನು ಸಾಧಿಸುವುದು ಅಷ್ಟೇನೂ ದುಸ್ತರವಾದ ಕೆಲಸವಲ್ಲ. ಮಾಧ್ಯಮಿಕ ಶಿಕ್ಷಣದಲ್ಲಿ ನಾವು ಎಲ್ಲರಿಗಿಂತಲೂ ಮುಂದುವರಿದಿದ್ದೇವೆ, ನಮ್ಮಲ್ಲಿ ಚೆನ್ನಾಗಿ ನಡೆದಿದೆ ಎಂದು ನಾನು ಹೇಳಬಲ್ಲೆ. 2,400 ರೂಪಾಯಿ ವರಮಾನ ಬರುವಂತಹವರ ಮಕ್ಕಳಿಗೆ ಅಲ್ಲಿಯವರೆಗೂ ಉಚಿತ ಶಿಕ್ಷಣವನ್ನು ಕೊಡಲಾಗುತ್ತದೆ. ಈ ಸಾರಿ ನಮ್ಮ ಸರ್ಕಾರದವರು ಅದಕ್ಕಿಂತ ಹೆಚ್ಚಿನ ಸಹಾಯವನ್ನು ಕೊಡಬಹುದು ಎಂದು ನಾನು ಆಶಿಸುತ್ತೇನೆ.

ಕಾಲೇಜು ವಿದ್ಯಾರ್ಥಿಗಳಿಗೆ ಫ್ರೀಷಿಪ್, ಸ್ಕಾಲರ್‌ಷಿಪ್ ಇವುಗಳನ್ನು ಯಾವ ರೀತಿ ಕೊಡಬೇಕು ಎಂಬುದನ್ನು ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಅವರು ಒಂದು ದೃಢವಾದ ನಿರ್ಧಾರವನ್ನು ತೆಗೆದುಕೊಂಡ ಮೇಲೆ ಅದರಂತೆ ಮುಂದುವರಿಯಲು ಸರ್ಕಾರದವರು ಒಂದು ನಿರ್ಧಾರವನ್ನು ಕೈಕೊಂಡಿದ್ದಾರೆ. ಅದು ಒಂದು ಸಂತೋಷದ ಸಂಗತಿ ಎಂದು ಹೇಳಬೇಕಾಗುತ್ತದೆ. ಈ ರೀತಿ ಸರ್ಕಾರದವರು ಜನತೆಯ ಹಿತಸಾಧನೆ ಮಾಡುವುದರಲ್ಲಿ ಸಾಕಾದಷ್ಟು ಮುಂದುವರಿದಿದೆ. ನಮ್ಮ ಮಾನ್ಯ ಅರ್ಥಿಕ ಮಂತ್ರಿಗಳು ಸೇಲ್ಸ್-ಟ್ಯಾಕ್ಸ್, ಇನ್‌ಕಂ-ಟ್ಯಾಕ್ಸ್ ಇವುಗಳೆಲ್ಲೆಲ್ಲಾ ಸಾಕಾದಷ್ಟು ಪ್ರಯತ್ನ ಮಾಡಿ ಅವುಗಳಿಂದ ಬರಬೇಕಾದ ಆದಾಯವನ್ನು ವಸೂಲು ಮಾಡುತ್ತೇವೆ ಎಂದು ಹೇಳಿದ್ದಾರೆ. ಅವರು ಹೇಳಿರುವ ಪ್ರಕಾರ ಟ್ಯಾಕ್ಸ್ ಕಲೆಕ್ಷನ್ ನಡೆದರೆ ನಮ್ಮ ಆರ್ಥಿಕ ಪರಿಸ್ಥಿತಿ ಆಶಾದಾಯಕವಾಗಿದೆ, ಅಂತಹ ದುಸ್ತರವಾದ ಪರಿಸ್ಥಿತಿ ಏನೂ ಬರಲಿಕ್ಕೆ ಇಲ್ಲ ಎಂಬುದು ಅವರು ಕೊಟ್ಟಿರತಕ್ಕ ಅಂಕಿ ಅಂಶಗಳು ತೋರಿಸಿಕೊಡುತ್ತವೆ.

ವಿಜಾಪುರ ಜನತೆಯ ಜೀವಾಳದ ಪ್ರಶ್ನೆ ಆಲಮಟ್ಟಿಯಲ್ಲಿ ಇದೆ, ಆದ್ದರಿಂದ ಆಲಮಟ್ಟಿಯಲ್ಲಿಯೇ ಅಣೆಕಟ್ಟನ್ನು ಕಟ್ಟಬೇಕೆಂದು ನಾನು ಹೇಳುತ್ತಾ ಇದ್ದೇನೆ. ನಾರಾಯಣಪುರದಲ್ಲಿ ಆಗಬೇಕೇ ಅಥವಾ ಆಲಮಟ್ಟಿಯಲ್ಲಿ ಆಗಬೇಕೇ ಎಂಬ ವಿಷಯ ವಿವಾದಕ್ಕೆ ಆಸ್ಪದವಾಗಿ ಕೊನೆಯಲ್ಲಿ ಎರಡಕ್ಕೂ ಕೂಡ ಕೇಂದ್ರ ಸರ್ಕಾರದವರು ಕ್ಲಿಯರೆನ್ಸ್ ಕೊಟ್ಟಿರುವುದು ಸಂತೋಷದ ಸಂಗತಿ. ಈಗ ಆಲಮಟ್ಟಿ ಮತ್ತು ನಾರಾಯಣಪುರ ಈ ಎರಡು ಯೋಜನೆಗಳನ್ನೂ ಕೈಕೊಳ್ಳುತ್ತಾರೋ ಇಲ್ಲವೋ ಎಂಬ ಸಂಶಯವಿದೆ. ಆ ಯೋಜನೆಗಳಿಂದ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಸುಮಾರು ಐದೂವರೆ ಲಕ್ಷ ಎಕರೆಗಳು ನೀರಾವರಿಗೆ ಬರುತ್ತವೆ. ಆದರೆ ಜನರಲ್ಲಿ ಶಂಕೆ ಇರುವುದರಿಂದ ಈ ವಿಚಾರದಲ್ಲಿ ನಿರ್ಧಾರವಾಗಿ ಹೇಳಬೇಕಾಗಿದೆ. ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

6-00 P.M.

ಬಿಜಾಪುರ ಜಿಲ್ಲೆಯಲ್ಲಿ ಡೋಣ್ ನದಿಯಿದೆ. ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುವಾಗ ಜನಸಂಖ್ಯೆ ಬೆಳೆಯುತ್ತಿರುವಾಗ ಡೋಣ್ ನದಿ ಆಶ್ರಯದಲ್ಲಿರುವ 21 ಸಾವಿರ ಎಕರೆಗಳ ಭೂಮಿ

ಉಪ್ಪಾಗಿ ಪ್ರತಿಯೊಂದು ಎಕರೆಯಲ್ಲೂ 2-3 ಚೀಲ ಮಾತ್ರ ಬೆಳೆಯುತ್ತಿದೆ. ಹೆಚ್ಚು ಬೆಳೆಯಾಗುವಂತೆ ಮಾಡಲು ಸಾಯಿಲ್ ಎಗ್ಸಾಮಿನರ್ ಅಭಿಪ್ರಾಯ ಪಡೆದಾಗ ಅವರು ಫ್ರೀ ಫ್ಲೋ ಆಫ್ ವಾಟರ್ ಇರಬೇಕೆಂದು ಹೇಳಿದ್ದಾರೆ. ಉಪ್ಪನ್ನು ತೆಗೆಯಲು ತಜ್ಞರ ಅಭಿಪ್ರಾಯ ಪಡೆದು ಉತ್ಪತ್ತಿ ಜಾಸ್ತಿಯಾಗುವಂತೆ ಮಾಡಬೇಕು. ಸೇತುವೆ ಕಟ್ಟುವುದು ಮುಂತಾದ ಕಾರ್ಯಗಳಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಸಮತೋಲನ ಧೋರಣೆ ಇರುವಂತೆ ಕಾಣುವುದಿಲ್ಲ, ಸರ್ಕಾರದ ಹಣ ಮಾತ್ರ ಖರ್ಚಾಗುತ್ತಿದೆ. ಇದರಿಂದ ಜನರಿಗೆ ತಪ್ಪು ಭಾವನೆ ಬರಲು ಅವಕಾಶವಾಗುತ್ತದೆ. ಬಡ್ಜೆಟ್ ಮತ್ತು ಸಪ್ಲಿಮೆಂಟರಿ ಬಡ್ಜೆಟ್ ನೋಡಿದರೂ ಇದೇ ಭಾವನೆ ಬರುತ್ತದೆ. ಈ ಧೋರಣೆ ಏನಿದೆ ಅದನ್ನು ಬದಲಾಯಿಸಿ ಎಲ್ಲಾ ಭಾಗಗಳಿಗೂ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು. ಸಂಶೋಧನಾ ಕೇಂದ್ರವನ್ನು ಕೂಡ ಸ್ಥಾಪಿಸಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ರೋಡ್ ಟ್ರಾನ್ಸ್‌ಪೋರ್ಟ್ ತೆಗೆದುಕೊಂಡರೆ ಬಿಜಾಪುರ ಡಿವಿಜನ್, ಗುಲ್ಬರ್ಗ ಡಿವಿಜನ್, ಬೆಳಗಾಂ ಡಿವಿಜನ್, ಹುಬ್ಬಳ್ಳಿ ಡಿವಿಜನ್ ಹೀಗೆ ಬೇರೆ ಬೇರೆ ಡಿವಿಜನ್ನುಗಳಿವೆ. ಬಿಜಾಪುರ ಡಿವಿಜನ್ನಿನಲ್ಲಿ 8 ತಿಂಗಳಿಗೆ 17 ಲಕ್ಷ ರೂಪಾಯಿಗಳ ಆದಾಯ ಬಂದಿದೆ, ಬೆಳಗಾಂ ಡಿವಿಜನ್ನಿನಲ್ಲಿ 14 ಲಕ್ಷ, ಗುಲ್ಬರ್ಗ ಡಿವಿಜನ್ನಿನಲ್ಲಿ 4 ಲಕ್ಷ, ಹೀಗೆ ಈ ನಾಲ್ಕು ಡಿವಿಜನ್ನುಗಳಲ್ಲೂ ಲಾಭ ಬಂದಿದೆ. ರಾಷ್ಟ್ರೀಕರಣ ನೀತಿ ಯಶಸ್ವಿಯಾಗುವುದಿಲ್ಲ, ಕೈಬಿಡಬೇಕು ಎಂದು ಕೆಲವರು ಹೇಳಿದರು. ರಾಷ್ಟ್ರೀಕರಣ ಧೋರಣೆ ಕೆಲವು ಡಿವಿಜನ್ನುಗಳಲ್ಲಿ ಯಶಸ್ವಿಯಾಗಿದೆ, ಮತ್ತೆ ಕೆಲವು ಕಡೆ ಯಶಸ್ವಿಯಾಗಿಲ್ಲ. ರೂಟ್ಸ್ ಪ್ರಕಾರ ಇಡೀ ಜಿಲ್ಲೆ ಒಂದು ಕಾರ್ಯಕ್ಷೇತ್ರ ಮಾಡಿ ಮುಂದುವರೆದರೆ ಒಳ್ಳೆಯದು. ಬೆಂಗಳೂರು ಒಂದು ಡಿವಿಜನ್ನಿನಲ್ಲಿ ಮಾತ್ರ ಸುಮಾರು 22 ಲಕ್ಷ ಹಾನಿಯಾಗಿದೆ. ಕಾರಣ ವಿಚಾರಮಾಡಿ ಯೋಗ್ಯ ಕ್ರಮ ಕೈಕೊಳ್ಳಬೇಕು. ಅದೇ ದೃಷ್ಟಿಯಿಂದ ಅನೇಕ ಅಕ್ರಮಗಳಿವೆಯೆಂದು ಹೇಳಿದ್ದಾರೆ, ಅದು ನಡೆಯದಂತೆ ಸರಿಯಾದ ಕ್ರಮ ಕೈಕೊಳ್ಳಬೇಕು. ಬಿಜಾಪುರ ಡಿವಿಜನ್ನಿನಲ್ಲಿ ಆದಾಯ ಬರುತ್ತಿರುವಂತೆ ಇಲ್ಲೂ ಬರುವಂತೆ ವ್ಯವಸ್ಥೆ ಮಾಡಬೇಕು. ಬಿಜಾಪುರ ಡಿವಿಜನ್ನಿನಲ್ಲಿ 180 ಬಸ್ಸುಗಳಿರುವಾಗ 150 ಮಾತ್ರ ರಸ್ತೆಯ ಮೇಲಿವೆ. ಆದಾಯ ಹೆಚ್ಚಾಗಿರುವ ಕಡೆ ಅದಕ್ಕನುಗುಣವಾಗಿ ಹೆಚ್ಚು ಬಸ್ಸುಗಳನ್ನು ಹಾಕಬೇಕು.

ಅನೇಕ ಸದಸ್ಯರು ಮಾತನಾಡುವಾಗ ಸಮಾಜವಾದದ ವಿಚಾರಸರಣಿ ಬಡ್ಜೆಟ್ಟಿನಲ್ಲಿ ಕಾಣುವುದಿಲ್ಲ, ಭಾವೈಕ್ಯ ಸಾಧನೆ ಕಂಡುಬರುವುದಿಲ್ಲ ಎಂದು ಹೇಳಿದರು. ಆದರೆ ಭಾವೈಕ್ಯ ಸಾಧನೆಯನ್ನು ಸಾಧಿಸಬೇಕಾದರೆ ಮೊದಲು ಈ ಸಭೆಯಲ್ಲಿ ಸಾಧಿಸಬೇಕಾಗಿದೆ. ಮಾತನಾಡಬೇಕಾದರೆ ಹಳೇ ಮೈಸೂರು, ಮುಂಬಯಿ ಕರ್ಣಾಟಕ, ಹೈದರಾಬಾದ್ ಕರ್ಣಾಟಕ ಎಂಬ ಭೇದಭಾವನೆ ಮಾಡದಿದ್ದರೆ ಭಾವೈಕ್ಯ ಹಾಗೆ ಮಾಡಿ ಮೊದಲು ಈ ಸಭೆಯಲ್ಲಿ ಸಾಧಿಸಿದರೆ ಒಂದು ಆದರ್ಶವಾಗುತ್ತದೆ. ಹಾಗೆ ಮಾಡಿ ಪರಿಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆ ರೀತಿ ಮಾಡಲು ಈ ಮಾನ್ಯ ಸಭೆಯ ಸದಸ್ಯರ ಸಮ್ಮೇಳನ ಒಂದು ಜರುಗಬೇಕು. ಹಾಗೆ ಮಾಡಿದರೆ ಆಮೇಲೆ ಉಳಿದುದನ್ನು ಸಾಧಿಸಬಹುದು. ಅದನ್ನು ಬಿಟ್ಟು ವೈಯಕ್ತಿಕವಾಗಿ ಅಂಕಿಸಂಖ್ಯೆಗಳಿಂದ ಟೀಕೆ ಮಾಡುವುದು ಸೂಕ್ತವಲ್ಲ, ಪ್ರಜಾಸತ್ತೆಯ ಧ್ಯೇಯ ಕಾಯ್ದುಕೊಳ್ಳಬೇಕಾದರೆ ಹಾಗೆ ಪ್ರತಿಯೊಬ್ಬರೂ ಮಾಡಲು ಶ್ರಮಿಸುವುದಾದರೆ ಆಗ ಭೇದಭಾವನೆ ಅಳಿಸಿಹೋಗಿ ಭಾವೈಕ್ಯತೆಯುಂಟಾಗಲು ಸಾಧ್ಯವಾಗಬಹುದು ಎಂದು ಹೇಳಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

Mr. SPEAKER.—The House will now adjourn and meet to-morrow at 8-30 A.M.

The House adjourned at Ten Minutes past Six of the Clock to meet again at Thirty Minutes past Eight of the Clock on Tuesday, the 10th March 1964.

WD 2488—GPB—900—19-5-64